BROWEN BOOK ONLY

**TEXT PROBLEM WITHIN THE BOOK ONLY**

UNIVERSAL LIBRARY
OU_200221
UNIVERSAL LIBRARY

# ಚಂಪಕಮಾಲಿನಿ

( ಕಾದಂಬರಿ )

3?

ಮದ್ರಾಸ್ ತಿರುವಲಿಕೇಣಿಯಲ್ಲಿರುವ ಲೇಡೀ ವಿಲ್ಲಿಂಗ್‌ಡನ್ ಕಾಲೇಜ್

ಸಂಸ್ಕೃತೋಪಾಧ್ಯಾಯಿನಿಯರೂ

**ಚಂದ್ರಮೌಳಿ** ಮೊದಲಾದ ಗೀರ್ವಾಣ ಗ್ರಂಥಗಳ

ಮತ್ತು

**ಭುವನಪ್ರಸಾದ** ಮೊದಲಾದ ತೆಲುಗು ಕನ್ನಡ ಗ್ರಂಥಗಳ ಕರ್ತ್ರಿಯರಾದ

**ಶ್ರೀಮತಿ ಆ. ರಾಜಮ್ಮನವರಿಂದ**

ರಚಿಸಲ್ಪಟ್ಟಿದೆ

(ಪ್ರಥಮ ಮುದ್ರಣ—೧೦೦೦ ಪ್ರತಿಗಳು)

೧೯೨೯

ಮುದ್ರಕರು ಮತ್ತು ಪ್ರಕಾಶಕರು :

**ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು ಸಿಟಿ**

[ಬೆಲೆ ರೂ. ೧—೦—೦

ಇದರ ಸರ್ವ ಹಕ್ಕುಗಳೂ ಗ್ರಂಥಕರ್ತ್ರಿಯಿಂದ ಕಾದಿಡಲಾಗಿವೆ.

ಬೆಂಗಳೂರು ಸಿಟಿ

ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ

ಮುದ್ರಿಸಲ್ಪಟ್ಟಿತು.

# ಉಪೋದ್ಘಾತ

ಆರ್ಯ ಸಹೋದರೀಮಣಿಗಳಿಗೆ ಅಂಕಿತವಾಗಿ ಅರ್ಪಿಸಿದ ಈ ಗ್ರಂಥರಚನೆಯಲ್ಲಿ ನನ್ನ ಉದ್ದೇಶಗಳು.—ಜನಗಳಿಗೊಂದು ವಿನೋದಕಥೆಯನ್ನು ಹೇಳುವುದಷ್ಟೇ ಅಲ್ಲದೆ, ತಿಳಿಯದೆ ಮೂಢ ನಂಬಿಕೆಯಿಂದ ಕಷ್ಟಪಡುವ ಸೋದರಿಗಳಿಗೆ ಕೆಲವು ಸಂಗತಿಗಳನ್ನು ತಿಳಿಸಬೇಕೆಂಬುದೊಂದು, ದೊಡ್ಡ ಕುಟುಂಬಗಳಲ್ಲಿ ಹುಟ್ಟಿದ ಸ್ತ್ರೀಯು ತನಗೆ ಸ್ವಾತಂತ್ರ್ಯವುಂಟಾದ ಸಮಯದಲ್ಲಿ ಹೇಗೆ ಸಾಮರ್ಥ್ಯದಿಂದ ವರ್ತಿಸುವಳೋ ಅದನ್ನು ತೋರಿಸುವುದು, ಸ್ತ್ರೀಯು ಯಾವ ಯಾವ ಸದ್ಗುಣಗಳನ್ನು ಸಂಪಾದಿಸಬೇಕೋ ಅವುಗಳನ್ನು ಸೂಚಿಸುವುದು, ಸ್ತ್ರೀಯರಿಗೆ ಯಾವ ದುರ್ಗುಣಗಳು ಸುಲಭವಾಗಿ ಅಳವಡುವುವೋ, ಸ್ತ್ರೀಯರು ಹೇಗೆ ತಾವು ತಮ್ಮ ಅಜ್ಞಾನದಿಂದ ತಂದಿಟ್ಟುಕೊಂಡ ನಿರ್ಬಂಧಗಳಿಂದ ಕಷ್ಟಪಡುವರೋ, ಮತ್ತು ದುಷ್ಟ ಸೇವಕರಲ್ಲಿ ನಂಬಿಕೆಯಿಟ್ಟು ಅವರ ಮಾತುಗಳು ಸತ್ಯವೆಂದೆಣಿಸಿ ವರ್ತಿಸುವುದರಿಂದ ಎಂತಹ ಅವಾಂತರಗಳು ಪ್ರಾಪ್ತವಾಗುವುವೋ ಅವನ್ನು ನಿದರ್ಶಿಸುವುದು—ಇವೆಲ್ಲ ಆಗಿವೆ.

ಆಧುನಿಕ ಕಾಲಕ್ಕೆ ತಕ್ಕಹಾಗೆ ಭಾಷೆಯನ್ನು ತಿದ್ದಿ ನನ್ನ ಗ್ರಂಥವನ್ನು ಸವರಿಸಿದ ನನ್ನ ಸತೀರ್ಥ್ಯರಾದ ಮಹಾರಾಜಶ್ರೀ ಮೊಳಕಾಲ್ಮೂರು ವೆಂಕಟರಾಯರಿಗೂ, ಈ ಗ್ರಂಥವು ಕೈಬರೆವಣಿಗೆಯಲ್ಲಿರುವಾಗ ಓದಿ ಆಮೋದಿಸಿದ ಮದ್ರಾಸು ಯೂನಿವರ್ಸಿಟಿಯ ಕನ್ನಡ ರೀಡರ್ ಮಹಾರಾಜಶ್ರೀ ಅಲೇಮಾನ ವೆಂಕಟರಾವ್, ಬಿ.ಎ., ಎಲ್.ಟಿ. ಅವರಿಗೂ, ಕೆಲವು ಉಪಯೋಗಕರಗಳಾದ ಸವರಣೆಗಳನ್ನು ಮಾಡಿದುದಕ್ಕಾಗಿ ಮದ್ರಾಸು ಗವರ್ನ್‌ಮೆಂಟ್ ಓರಿಯಂಟಲ್ ಲೈಬ್ರೇರಿಯ ಅ. ಲೈಬ್ರೇರಿಯನ್ ಬ್ರಹ್ಮಶ್ರೀ ವಿದ್ವಾನ್ ಸಾಹಿತ್ಯರತ್ನ ಪಾನ್ಯಂ ಸುಂದರ ಶಾಸ್ತ್ರಿಗಳವರಿಗೂ, ಈ ಪುಸ್ತಕವನ್ನು ಹೊರಗೆ ತರುವುದಕ್ಕೆ ಯತ್ನಿಸಿ ಪ್ರೂಫ್ ಸವರಣೆ ಮಾಡುವ ಶ್ರಮವು ಕೂಡಾ ನನಗೆ ಇಲ್ಲದ ಹಾಗೆ ಮಾಡಿದ ಮದ್ರಾಸು ಗವರ್ನ್‌ಮೆಂಟ್ ಚೀಫ್ ಟ್ರಾನ್ಸ್ಲೇಟರ್ ಮ|| ರಾ|| ಶ್ರೀ ಬಿ. ರಾಮರಾವ್ ಎಂ. ಎ., ಎಲ್ ಎಲ್. ಬಿ., ಅವರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸಿರುವೆನು ಮತ್ತು ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ ಪ್ರಕಟಿಸಿದುದಕ್ಕಾಗಿ ಬೆಂಗಳೂರು ನಗರದ ಬಿ.ಬಿ.ಡಿ. ಪವರ್ ಪ್ರೆಸ್ ಪ್ರೊಪ್ರೈಟರ್ ಮ|| ರಾ|| ಶ್ರೀ ಉ. ನರಸಿಂಹ ಮಲ್ಯರವರಿಗೂ ವಂದನೆಗಳನ್ನಾಚರಿಸುವೆನು.

ಜುಲೈ ೧೯೨೯.<br>ಮದ್ರಾಸು.

ಆ. ರಾಜಮ್ಮ.

# ಚಂಪಕಮಾಲಿನಿ

## ೧ನೆಯ ಅಧ್ಯಾಯವು

ಸಂಧ್ಯಾಸಮಯ. ಪಶ್ಚಿಮದಿಕ್ಕಾಂತೆಯ ತುರುಬಿನಲ್ಲಿ ಶೋಭಿಸುವ ಪದ್ಮದಂತೆಸೆವ ದಿವಾಕರನು ಅಸ್ತಮಿಸುತ್ತಿದ್ದನು. ಸಮುದ್ರಪ್ರಾಂತವಾದುದರಿಂದ ತಂಗಾಳಿಯು ಸುಖವಾಗಿ ಬೀಸುತ್ತಿದ್ದಿತು. ದಟ್ಟವಾದ ಅರಣ್ಯಪ್ರದೇಶದ ಸುತ್ತಲೂ ಪರ್ವತಗಳು. ತ್ರಿಮೂರ್ತಿಗಳಂತೆ ಪ್ರಕಾಶಿಸುತ್ತಿದ್ದ ಮೂವರು ರಾಜಪುತ್ರರು ಮಾತ್ರ ತಮ್ಮ ಸೇವಕರೊಡನೆ ಪ್ರಯಾಣಮಾಡುತ್ತಿದ್ದರು. ಆ ಸೀಮೆಗೆ ಅವರು ಹೊಸಬರು. ಅಂದಿನ ದಿನವೇ ಹಡಗನ್ನಿಳಿದು ವಾಸಯೋಗ್ಯವಾದ ಸ್ಥಳವನ್ನು ನಿರ್ಣಯಿಸಿಕೊಳ್ಳುವುದಕ್ಕಾಗಿ ಹುಡುಕುತ್ತಿದ್ದರು. ಅಲ್ಲಿನ ಶೈಲಮಾಲೆಗಳ ಸೊಬಗನ್ನು ವರ್ಣಿಸುತ್ತಲೂ, ಸಾಗರಮಧ್ಯದಲ್ಲಿ ಕಾಣುತ್ತಿದ್ದ ದ್ವೀಪವನ್ನೂ ಅದರಲ್ಲಿ ಸೊಂಪಾಗಿ ಬೆಳೆಯುತ್ತಿದ್ದ ವೃಕ್ಷವಾಟಿಕೆಗಳನ್ನೂ ಶ್ಲಾಘಿಸುತ್ತಲೂ, ಅಲ್ಲಿಯವರೆಗೂ ತಾವು ಬೆಳೆಸಿದ ಗಂಗಾಪ್ರಯಾಗಾದಿ ತೀರ್ಥಕ್ಷೇತ್ರಗಳ ಯಾತ್ರೆಯನ್ನು ನೆನಪಿಗೆ ತಂದುಕೊಳ್ಳುತ್ತಲೂ, ಆಯಾಯ ದೇಶಗಳಲ್ಲಿ ಕಂಡ ವಿಧವಿಧ ಮನುಷ್ಯರನ್ನೂ ಅವರ ವೇಷಭಾಷೆಗಳನ್ನೂ ವರ್ಣಿಸುತ್ತಲೂ ಅವರು ಪ್ರಯಾಣಮಾಡುತ್ತಿದ್ದರು.

ಈ ತ್ರಿಮೂರ್ತಿಗಳಲ್ಲೊಬ್ಬನು **ಲಲಿತಕುಮಾರನು**. ಇವನು ಮಾಳವದೇಶಾಧೀಶನು. ವಯಸ್ಸಿನಲ್ಲಿ ಇಪ್ಪತ್ತೆರಡು ವರುಷ. ಆಕರ್ಣಾಂತಲೋಚನಗಳು. ಇಂದ್ರಚಾಪದಂತೆ ಸೊಗಸಾಗಿ ಬಾಗಿರುವ ಹುಬ್ಬುಗಳು. ಸಂಪಿಗೆ ಪುಷ್ಪದಂತೆಸೆವ ನಾಸಿಕವು. ಯೌವನಾಂಕುರವನ್ನು ಸೂಚಿಸುವ ಮೀಸೆಗಳು. ಮಂದಹಾಸದಿಂದೊಪ್ಪುವ ಸುಂದರವದನವು. ಕೋಮಲಗಾತ್ರವು. ಗೌರವರ್ಣವುಳ್ಳ ದೇಹಕಾಂತಿಯು. ಇಂತಹ ಸರ್ವಾಂಗಸುಂದರನಾದ ಆ ರಾಜಕುಮಾರನು ತನ್ನ ಶರೀರ ಕೋಮಲತೆಯನ್ನು ಸಹ ಲಕ್ಷಿಸದೆ ಸಕಲ ಸುಖಗಳನ್ನೂ ತ್ಯಜಿಸಿ ದೇಶಾಟನೆಮಾಡುತ್ತಿದ್ದನು. ಏಕೆಂದರೆ, ಕೆಲವು ದಿನಗಳ ಹಿಂದೆ ಅವನ ಮಾತಾಪಿತೃಗಳು ಲೋಕಾಂತರವನ್ನೈದಿದರು. ರಾಜ್ಯಭಾರವನ್ನು ವಹಿಸಬೇಕಾಗಿದ್ದರೂ ತನ್ನ ಮಾತಾಪಿತೃಗಳ ವಿಯೋಗದುಃಖವನ್ನು ಸಹಿಸಲಾರದೆ ಸ್ವಲ್ಪಕಾಲ ದೇಶಾಟನೆಮಾಡಿಬರುವುದು ಉತ್ತಮವೆಂದು ಯೋಚಿಸಿ ಹಿರಿಯನಾದ ಉದಯಪುರೀಶನಿಗೆ ರಾಜ್ಯವನ್ನೊಪ್ಪಿಸಿ ಹೊರಟಿದ್ದನು.

ಎರಡನೆಯವನು ಸುದರ್ಶನನು. ಜೋಧುಪುರ್‌ರಾಜನ ಔರಸಪುತ್ರನು. ಮೂರನೆಯವನ ಹೆಸರು ಮಧುಮಂತನು. ಇವನು ಜಯಪುರಸಂಸ್ಥಾನದ ರಾಜಕುಮಾರನು. ಈ ಮೂರು ಜನ ರಾಜಕುಮಾರರು ಬಾಲ್ಯದಾರಭ್ಯ ಒಂದೇ ಸ್ಥಳದಲ್ಲಿ ಬೆಳೆದು, ವಿದ್ಯಾಭ್ಯಾಸಮಾಡುತ್ತಿದ್ದುದರಿಂದ ಏಕೋದರರಂತೆ ಪರಸ್ಪರ ಪ್ರೇಮದಿಂದ ವರ್ತಿಸುತ್ತಿದ್ದರು. ಕಾಶೀಯಾತ್ರೆಯನ್ನು ಮಾಡಿ, ಗಯೆಯಲ್ಲಿ ಪಿತೃಗಳಿಗೆ ಶ್ರಾದ್ಧವನ್ನಿಟ್ಟು ಕಾಳೀಘಟ್ಟವನ್ನು ಸೇರಿದರು. ಅಲ್ಲಿಂದ ದೇಶವನ್ನೆಲ್ಲಾ ನೋಡಿಕೊಂಡು ಹಡಗು ಪ್ರಯಾಣಮಾಡಬೇಕೆಂಬ ಕುತೂಹಲ ಉಂಟಾದುದರಿಂದ ತಮ್ಮ ವೈಭವಕ್ಕೆ ತಕ್ಕ ಒಂದು ಹಡಗನ್ನು ಗೊತ್ತುಮಾಡಿಕೊಂಡು ಹುಗ್ಲೀನದೀಮುಖವಾಗಿ ಹೋಗುತ್ತಿದ್ದರು. ಆ ನೌಕಾಯಾತ್ರೆಯಲ್ಲಿ ಅವರಿಗೆ ಕೆಲವು ವರ್ತಕರ ಹಡಗುಗಳು ಜತೆಯಾದುದರಿಂದ ಉಲ್ಲಾಸವಾಗಿ ಪ್ರಯಾಣಮಾಡುತ್ತಾ ಕೊನೆಗೆ ರತ್ನದ್ವೀಪದಲ್ಲಿ ಲಂಗರುಹಾಕಿದರು. ವರ್ತಕರ ಜತೆಯಲ್ಲಿಯೇ ಇಳಿದು, ತಮ್ಮ ಹಡಗುಗಳನ್ನು ಅಲ್ಲಿಯೇ ಇಟ್ಟುಕೊಂಡಿರಲು ಆಜ್ಞಾಪಿಸಿ ಆ ದ್ವೀಪವನ್ನು ನೋಡಿಕೊಂಡುಬರಲು ಪ್ರಯಾಣಮಾಡಿದರು. ಅದು ಬಹು ಸಾರವಾದ ಭೂಮಿ. ಪೈರುಪಚ್ಚೆಗಳು ಸೊಂಪಾಗಿ ಬೆಳೆದು ನೇತ್ರಾನಂದಕರಗಳಾಗಿದ್ದುವು. ಶೈಲಗಳ ನಡುವೆ ಸಂಚರಿಸುತ್ತಿರುವಾಗ "ತಸ್ಕರರ ಭಯವಿಲ್ಲದೆಯೇ ನಾವು ಇದುವರೆಗೂ ಪ್ರಯಾಣಬೆಳೆಸಿದೆವು. ಈ ಸ್ಥಳದಲ್ಲಿ ಪ್ರಯಾಣಿಕರಿಗೆ ವಿಪತ್ತಿರುವುದೆಂದು ಕೇಳಿದ್ದೆ. ಆದರೆ, ನಮಗೆ ಅಂತಹ ವಿಪತ್ತು ಸಂಭವಿಸದಿರುವದಕ್ಕಾಗಿ ಸ್ವಾಮಿಗೆ ಅಭಿವಂದಿಸುವೆನು" ಎಂದು ಸುದರ್ಶನನು ನುಡಿದನು.

**ಮಧುಮಂತನು—** ಈ ದ್ವೀಪದಲ್ಲಿನ ಬೆಟ್ಟಗಳಲ್ಲಿ ಸಮುದ್ರದ ಕಳ್ಳರು ಇರುವರೆಂದು ನಮ್ಮ ನಾವಿಕರು ಹೇಳುತ್ತಿದ್ದುದನ್ನು ಕೇಳಲಿಲ್ಲವೇ? ಈ ಪ್ರಾಂತದ ಭೂಮಿಯಲ್ಲಿ ಕೋಟೆಗಳನ್ನು ಕಟ್ಟಿಕೊಂಡು ಕಳ್ಳರಿಗೆ ಒಡೆಯನಾದ ಚಂಡಸೇನನು ವಾಸಿಸುತ್ತಿರುವನೆಂತಲೂ, ದಕ್ಷಿಣಸಮುದ್ರದಿಂದ ಹಿಂದೂದೇಶಕ್ಕೆ ಹೋಗುವ ಹಡಗುಗಳನ್ನು ದೋಚುತ್ತಾ ಪೀನಾಂಗ್ ಮೊದಲಾದ ಸ್ಥಳಗಳಲ್ಲಿ ಅಪರಿಮಿತ ದ್ರವ್ಯವನ್ನು ಶೇಖರಿಸಿಟ್ಟುಕೊಂಡಿರುವನೆಂತಲೂ, ಅವನನ್ನು ಹಿಡಿಯಬೇಕೆಂದು ಡಿಲ್ಲೀಶ್ವರನು ಎಷ್ಟು ಪ್ರಯತ್ನಮಾಡಿದರೂ ಸಾಧ್ಯವಾಗಲಿಲ್ಲವೆಂತಲೂ ಒಂದು ಪ್ರವಾದವಿರುವುದು. ಪ್ರಭುತ್ವದವರು ತಮ್ಮ ಉದ್ಯಮವನ್ನು ಇನ್ನೂ ಬಿಟ್ಟಿಲ್ಲವೆಂದು, ಹಡಗಿನಲ್ಲಿ ಕೆಲವರು ಮಾತನಾಡಿಕೊಳ್ಳುತ್ತಿದ್ದುದನ್ನು ಕೇಳಿರುವೆನು.

**ಲಲಿತಕುಮಾರನು—** ಹಾಗೆಯೇ! ಚಂಡಸೇನನಿರುವ ಸ್ಥಳವು ಈ

ಪ್ರಾಂತದಲ್ಲಿರುವುದೇ? ಅವನಿಂದ ನಮಗೆ ಹಾನಿಯುಂಟಾಗಲಾರದೆಂದು ಭಾವಿಸುತ್ತೇನೆ. ಒಂದು ವೇಳೆ ನಾವು ಹೋಗುತ್ತಿರುವ ಈ ದಾರಿಯಲ್ಲಿ ಭಯವಿದ್ದರೆ ಹಾದಿತೋರಿಸುವುದಕ್ಕಾಗಿ ನಾವು ಏರ್ಪಡಿಸಿಕೊಂಡಿರುವ ಕೂಲಿಗಾರರು ನಮಗೆ ಸೂಚನೆಕೊಡುತ್ತಿರಲಿಲ್ಲವೇ? ಅವರಿಗೆ ನಾವು ಯಥೇಷ್ಟವಾಗಿ ವೇತನವನ್ನು ಕೊಟ್ಟಿರುವೆವು. ಇದಕ್ಕಾಗಿ ಬಾಧ್ಯರಾಗಿರುವ ಈ ಆಳುಗಳು ಅಷ್ಟು ಮಾತ್ರ ನಮಗೆ ಸಹಾಯಮಾಡಲಾರರೇ?

**ಸುದರ್ಶನನು—** ನೋಡಿರರೇ! ಈ ಆಳುಗಳು ನಿಷ್ಕಪಟಿಗಳೆಂದು ನಾನು ನಂಬಲಾರೆ. ದಿಗ್ದೇಶಗಳನ್ನು ಪುನಃಪುನಃ ನೋಡುತ್ತಿರುವ ಇವರ ನೋಟವು ನನಗೆ ಸಂದೇಹವನ್ನುಂಟುಮಾಡುವುದು.

**ಲಲಿತಕುಮಾರನು—** (ಅವರನ್ನು ಹಿಂತಿರುಗಿ ನೋಡಿ) ಇವರು ಯಾರನ್ನೋ ಎದುರು ನೋಡುತ್ತಿರುವಂತಿದೆ. ಒಂದು ವೇಳೆ, ಕಳ್ಳರ ಜಾಡನ್ನು ಗುರ್ತಿಸಿ ನಮಗೆ ತಿಳಿಸಬೇಕೆಂದು ಹಾಗೆ ನೋಡುತ್ತಿರುವರೇನೊ ?

**ಮಧುಮಂತನು—** ನಮಗಿದು ಹೊಸದೇಶವಾದುದರಿಂದ ಈ ಆಳುಗಳನ್ನು ನಾವು ನಂಬಿಯೇ ತೀರಬೇಕು.

ಈ ವಿಧವಾಗಿ ಆ ಮಿತ್ರರು ಮಾತನಾಡಿಕೊಳ್ಳುತ್ತಾ ಉನ್ನತಸೀಮೆಯಿಂದಿಳಿದು ತಗ್ಗಿನಲ್ಲಿ ಪ್ರಯಾಣಮಾಡತೊಡಗಿದರು. ದಾರಿಯಲ್ಲಿ ಒಂದು ಕಾಲುವೆಯು ಅಡ್ಡವಾಗಿ ಹರಿಯುತ್ತಿದ್ದಿತು. ಅದರಲ್ಲಿ ಇಳಿಯುತ್ತಿರುವಾಗ ಸಮೀಪದಲ್ಲಿದ್ದ ದಟ್ಟವಾದ ಒಂದು ಪೊದೆಯಿಂದ ಸಿಳ್ಳುಹಾಕಿದ ಶಬ್ದವು ಕೇಳಿಸಿತು. ಚಕಿತರಾಗಿ ಇದೇನೆಂದು ತಿರುಗಿನೋಡುತ್ತಾ ಆಚೆಯ ದಡವನ್ನು ಸೇರುವುದರೊಳಗಾಗಿ ಚಡ್ಡಿಗಳನ್ನು ಧರಿಸಿ ರುಮಾಲುಗಳನ್ನು ನೆತ್ತಿಗಳಿಗೆ ಸುತ್ತಿಕೊಂಡಿದ್ದ ಕೆಲವರು ಬಂದು ಇವರ ಸುತ್ತಲೂ ಮುತ್ತಿಕೊಂಡರು. ಆಯುಧಪಾಣಿಗಳಾದ ಆ ಕಳ್ಳರು ಎಂತಹ ದಾರುಣಕೃತ್ಯಕ್ಕೂ ಹಿಂಜರಿಯುವವರಲ್ಲವೆಂದು ತೋರಿಬಂದಿತು. ತಸ್ಕರಪತಿಯಾದ ಚಂಡಸೇನನು ನಿರ್ಭಯವಾಗಿ ಮುಂದಕ್ಕೆ ಬಂದು "ನೀವು ಆಯುಧಗಳನ್ನುಪಯೋಗಿಸಿದರೆ ತಕ್ಷಣವೇ ನಿಮ್ಮನ್ನು ಯಮಪುರಿಗೆ ಕಳುಹಿಸುವೆನು. ನೀವು ಈಗ ನನ್ನ ಆಜ್ಞಾಧಾರಕರಾಗಿರಬೇಕು. ಇಲ್ಲವಾದರೆ ನಿಮ್ಮ ದೇಹಗಳು ಶವಗಳಾಗಿ ಬೀಳುವುದು ನಿಶ್ಚಯ" ಎಂದು ಗರ್ಜಿಸಿ ನುಡಿದನು. ಹೀಗೆ ಹೇಳುತ್ತಿರುವಾಗ ಧೀರನಾದ ಲಲಿತಕುಮಾರನು ತನ್ನ ಕತ್ತಿಯನ್ನು ಒರೆಯಿಂದ ಹೊರಕ್ಕೆ ಎಳೆಯಲು ಯತ್ನಿಸುತ್ತಿದ್ದನು. ಇದನ್ನು ಕಂಡು ಚಂಡಸೇನನ ಭೃತ್ಯರು ಗುಂಪುಗುಂಪಾಗಿ ನುಗ್ಗಿ ಬಂದು ಲಲಿತಕುಮಾರನನ್ನು ನಿರಾಯುಧನನ್ನಾಗಿ ಮಾಡಿದರು.

**ಲಲಿತಕುಮಾರನು**— ತನ್ನ ಇದುರಿಗೆ ನಿಂತಿರುವವನು ಚಂಡಸೇನನೆಂದು ಗುರುತಿಸಿ, ಹೀಗೆ ಮಾತನಾಡಿದನು:- "ತಸ್ಕರಾಧಿಪಾ! ನೀನು ನಮ್ಮನ್ನು ಏನುಕಾರಣ ಹಿಡಿದುಕೊಂಡೆ? ತಿಳಿದಮಟ್ಟಿಗೂ ನಾವು ನಿನಗೆ ಆವ ಅಪಕಾರವನ್ನೂ ಮಾಡಿಲ್ಲ. ಒಂದು ವೇಳೆ ದ್ರವ್ಯಲೋಭದಿಂದ ನಮ್ಮನ್ನು ಸೆರೆಹಿಡಿದಿರುವೆಯಾದರೆ ಇಗೋ ನಿನಗೆ ಬೇಕಾದಷ್ಟು ರತ್ನಾಭರಣಗಳನ್ನು ಕೊಡುವೆವು. ವೃಥಾ ದೌರ್ಜನ್ಯದಿಂದ ಉಪಯೋಗವಿಲ್ಲ."

**ಚಂಡಸೇನನು**— ರಾಜಕುಮಾರ! ಆಸೆಗೆ ಅಂತ್ಯವಿಲ್ಲ. ನಿನ್ನ ನೀತಿಸೂಚನೆಯು ನನಗೆ ಬೇಕಿಲ್ಲ. ನಿನ್ನ ಮಿತ್ರರಿಬ್ಬರನ್ನು ಈಗಲೇ ಬಿಟ್ಟುಬಿಡುವೆನು. ನಿನ್ನನ್ನು ಮಾತ್ರ ಬಿಡಲಾರೆನು. ನಿನ್ನನ್ನು ಬಿಟ್ಟರೆ ನನ್ನ ಪ್ರಾಣಕ್ಕೆ ಮುಪ್ಪು ಬರುವುದು ನಿಶ್ಚಯ. ದೀರ್ಘಾಲೋಚನೆಯಿಂದ ಈ ಕೆಲಸವನ್ನು ಮಾಡಬೇಕಾಗಿರುವುದು. ಹೀಗೆ ನುಡಿದು ಲಲಿತಕುಮಾರನ ಕಣ್ಣುಗಳನ್ನು ಕಟ್ಟಿಸಿ ಒಂದು ಮಾರ್ಗದಲ್ಲಿಯೂ, ಅವನ ಮಿತ್ರರನ್ನು ಅದರಂತೆ ಮತ್ತೊಂದು ಮಾರ್ಗದಲ್ಲಿಯೂ ಕಳುಹಿಸಿಕೊಟ್ಟನು. ಲಲಿತನ ಸೇವಕನಾದ ಶಂಬರನು ತನ್ನ ಸ್ವಾಮಿಗಾಗಿ ಹಂಬಲಿಸುತ್ತಿದ್ದುದರಿಂದ ಅವನನ್ನು ಸಹ ಕಣ್ಣು ಕಟ್ಟಿಸಿ ಲಲಿತನ ಮಾರ್ಗದಲ್ಲಿಯೇ ಕಳುಹಿಸಿದನು.

ಕಣ್ಣುಗಳನ್ನು ಬಿಚ್ಚಿದಾಗ ತಾನೊಂದು ಘೋರಾರಣ್ಯಮಧ್ಯದಲ್ಲಿ ಒಂದು ಸುರಂಗದಲ್ಲಿ ಒಯ್ಯಲ್ಪಡುವಂತೆ ಕಂಡನು. ತನ್ನ ಸೇವಕನು ತನ್ನನ್ನು ಹಿಂಬಾಲಿಸಿ ಬರುತ್ತಿರುವುದನ್ನು ನೋಡಿ ಸಂತಸಗೊಂಡನು. ಆ ಸ್ವಾಮಿ ಭೃತ್ಯರಿಬ್ಬರನ್ನೂ ಅಪರಿಚಯವಾದ ಆ ಅರಣ್ಯದಲ್ಲಿ ಬಹು ದೂರದವರೆಗೂ ಕರದೊಯ್ದು ಕೊನೆಗೆ ಒಂದು ಗುಹೆಯಲ್ಲಿ ಸೇರಿಸಿ ಅದರ ಬಾಗಿಲುಗಳನ್ನು ಮುಚ್ಚಿಕೊಂಡು ಚಂಡಸೇನನ ಭೃತ್ಯರು ಹೊರಟುಹೋದರು. ಆ ಬಾಗಿಲುಗಳು ಮರದಿಂದ ಮಾಡಲ್ಪಟ್ಟಿದ್ದುವು. ಅವುಗಳಲ್ಲಿದ್ದ ರಂಧ್ರಗಳ ಮೂಲಕ ವಿನಾ ಆ ಗುಹೆಯೊಳಕ್ಕೆ ಗಾಳಿಯು ಬರುತ್ತಲೇ ಇರಲಿಲ್ಲ. ಎರಡು ಕಂಬಳಿಗಳು ವಿನಾ ಮತ್ತಾವ ಸಾಮಾನೂ ಅದರಲ್ಲಿರಲಿಲ್ಲ. ಗುಹೆಯು ಮೇಲ್ಭಾಗದಿಂದ ನೀರು ತೊಟ್ಟಿಡುತ್ತಿದ್ದಿತು. ಸೂರ್ಯರಶ್ಮಿಗೆ ಅವಕಾಶವಿರದಿದ್ದುದರಿಂದ ಒಳಗೆ ಬಹಳ ಚಳಿಯಾಗುತ್ತಿದ್ದಿತು. ಸೇವಕನನ್ನು ಹೊರಗೆ ಮಲಗೆಂದು ಹೇಳಿ ಚಂಡಸೇನನ ಭೃತ್ಯನು ಲಲಿತಕುಮಾರನನ್ನು ಕುರಿತು "ನೀನು ಈ ಗುಹೆಯಲ್ಲಿಯೇ ಇರಬೇಕು. ಹಗಲಿನಲ್ಲಿ ಮಾತ್ರ ಹೊರಗೆ ಸಂಚರಿಸಬಹುದು" ಎಂದು ಬರ್ಮಾ ಭಾಷೆಯಲ್ಲಿ ನುಡಿದನು. ಲಲಿತಕುಮಾರನು ಅವನ ಈ ಮನೋಭಿಪ್ರಾಯವನ್ನು ತಿಳಿದುಕೊಂಡನು.

**ಲಲಿತಕುಮಾರನು**—ಅಯ್ಯೋ! ವಿಧಿಯೆ! ಹುಟ್ಟಿದಾರಭ್ಯಪರ್ಯಂತ ಸುಖವನ್ನನುಭವಿಸುತ್ತಿದ್ದ ನನಗೆ ಇಂತಹ ದುರ್ಗತಿಯು ಏತಕ್ಕೆ ಪ್ರಾಪ್ತವಾಗಬೇಕು? ಇದು ನನ್ನ ಪುರಾಕೃತಕರ್ಮಫಲವೇನೊ! ಯಾತ್ರೆಯನ್ನು ಮುಗಿಸಿಕೊಂಡು ಸ್ವಸ್ಥಾನಕ್ಕೆ ಹೋಗದೇ ನೌಕಾಯಾತ್ರೆಯಲ್ಲಿ ಏಕೆ ಭ್ರಾಂತಿಯುಂಟಾಗಬೇಕು? ಈ ಪ್ರಾಂತದಲ್ಲಿ ಇಂತಹ ವಿಪತ್ತು ಇರುವುದೆಂದು ಕೇಳಿದ್ದರೂ ಸಾಹಸಮಾಡಬೇಕೆಂಬ ಬುದ್ಧಿಯು ಏಕೆ ಉಂಟಾಗಬೇಕು? ಹಾ! ದೈವವೇ! ನಿರಪರಾಧಿಗಳಿಗೆ ಶಿಕ್ಷಾಸ್ಥಾನವಾದ ಈ ಭೂಭಾಗದ ಮೇಲೆ ನಿನ್ನ ಕರುಣಾರಸವು ಏಕೆ ವ್ಯಾಪಿಸಬಾರದು? ಕಾಲ ಒದಗದೆಯೇ ದೌರ್ಜನ್ಯಕ್ಕೆ ಕೂಡಾ ನಾಶ ಉಂಟಾಗಲಾರದೆಂದು ತೋರುತ್ತದೆ. ಹೀಗೆ ತನ್ನ ಸ್ಥಿತಿಯನ್ನು ನೆನನೆನದು ವಿಷಾದಿಸುತ್ತಿದ್ದ ಲಲಿತಕುಮಾರನನ್ನು ನೋಡಿ ಕಾವಲುಗಾರನು "ರಾಜಕುಮಾರಾ! ಎಂತಹ ಘನವಂತರಾದರೂ ನಮ್ಮ ಕೈಗೆ ಸಿಕ್ಕಿದ ನಂತರ ಯಮಕಿಂಕರರ ಕೈಗೆ ಸಿಕ್ಕಿದಂತೆಯೇ ಭಾವಿಸಿಕೊಳ್ಳಬೇಕು." ಎಂದು ನುಡಿದು ಹೊರಟುಹೋದನು.

# ೨ನೆಯ ಅಧ್ಯಾಯ

ಲಲಿತಕುಮಾರನು ಚಂಡಸೇನನ ಸೆರೆಮನೆಯಲ್ಲಿ ಸಿಕ್ಕಿ ಮೂರು ತಿಂಗಳಾಗುತ್ತ ಬಂದಿತು. ಕಳ್ಳರು ಕೊಡುತ್ತಿದ್ದ ಆಹಾರವು ರುಚಿಸದೆ ಅವನ ದೇಹವು ಬಡವಾಗುತ್ತ ಬಂದಿತು. ವ್ಯಾಧಿಯೂ ತೊಡಗಿತು. ಮೇಲಕ್ಕೇಳುವುದಕ್ಕೂ ಶಕ್ತಿಯಿಲ್ಲದಂತಾಯಿತು. ನೆಲದಲ್ಲಿ ನೀರಿನ ತೇವವಿದ್ದಿತು. ಅದರಲ್ಲಿಯೇ ಮಲಗಿಕೊಳ್ಳಬೇಕಾಗಿಬಂದುದರಿಂದ ಅವನ ಕೃಶವಾದ ಶರೀರವು ಬಿಗಿಯಲಾರಂಭಿಸಿತು. ತನಗಾಗಿ ಸೆರೆಯಲ್ಲಿದ್ದು, ತನಗೆ ಬಂದ ದುಃಸ್ಥಿತಿಗಾಗಿ ಪ್ರಲಾಪಿಸುತ್ತಿದ್ದ ಆಪ್ತಭೃತ್ಯನಾದ ಶಂಬರನನ್ನು ಮಾತನಾಡಿಸುವುದಕ್ಕೆ ಕೂಡ ಲಲಿತಕುಮಾರನಿಗೆ ತ್ರಾಣವಿಲ್ಲದಂತಾಯಿತು. ತನ್ನ ಸ್ವಾಮಿಗೆ ಜಾಗ್ರತೆಯಾಗಿ ಬಿಡುಗಡೆಯಾಗಬೇಕೆಂಬ ದೈವಪ್ರಾರ್ಥನೆ ವಿನಾ ಶಂಬರನಿಗೆ ಮತ್ತೊಂದು ಭಾವನೆ ಇರಲಿಲ್ಲ.

ಹೀಗಿರುವಲ್ಲಿ ಒಂದು ದಿನ ಪ್ರಾತಃಕಾಲ ಯಾರೋ ಬಾಗಿಲು ತೆರೆದು ಒಳಗೆ ಬಂದಂತೆ ತೋರಿತು. ತನ್ನ ಸೇವಕನಿರಬಹುದೆಂದು ಲಲಿತಕುಮಾರನು ಊಹಿಸಿದನು. ಆದರೆ ಚೆನ್ನಾಗಿ ದೃಷ್ಟಿಸಿ ನೋಡುವಲ್ಲಿ ಚಂಡಸೇನನಾಗಿದ್ದನು. ತನ್ನ ತಿರಸ್ಕಾರಭಾವವನ್ನು ತೋರಿಸುವುದಕ್ಕಾಗಿ ಲಲಿತಕುಮಾರನು ತಕ್ಷಣವೇ ತನ್ನ ಮುಖವನ್ನು ತಿರುಗಿಸಿಕೊಂಡನು.

**ಚಂಡಸೇನನು—** ಲಲಿತಕುಮಾರಾ! ನಿನಗೆ ಶುಭದಿನವಿರಲಿ! ನನ್ನ ಮೇಲೆ ನಿನಗೆ ಇಷ್ಟು ತಿರಸ್ಕಾರಭಾವವೇತಕ್ಕೆ?

**ಲಲಿತಕುಮಾರನು—** ನಿರಪರಾಧಿಗಳನ್ನು ಹಿಂಸೆಮಾಡುವ ನಿನ್ನಂತಹ ದುರ್ಜನರ ಮುಖವನ್ನು ನೋಡಿದವರಿಗೆ ಸುಪ್ರಭಾತವು ಹೇಗೆ ಉಂಟಾಗುವುದು? ನಿನಗೆ ನಾನು ಆವ ಅಪರಾಧವನ್ನೂ ಮಾಡಲಿಲ್ಲ. ನನ್ನ ದ್ರವ್ಯವನ್ನು ದೋಚಿಕೊಂಡೆ. ಇನ್ನೂ ಬೇಕಾದರೂ ಕೊಡಲು ಸಿದ್ಧವಾಗಿದ್ದೆ. ಅದು ಹಾಗಿರಲಿ! ನನ್ನ ಮಿತ್ರರ ಪಾಡೇನಾಯಿತೋ? ಎಷ್ಟು ಜನರಿಗೆ ನೀನು ಮೃತ್ಯುಪ್ರಾಯನಾಗಿರುವೆಯೋ ನಾನರಿಯೆ. ನಾನು ಸಾವಿಗೆ ಭಯಪಡಲಾರೆ. ಆದರೆ, ಇಂತಹ ನೀಚವಾದ ಮರಣವು ಕ್ಷತ್ರಿಯನಾದ ನನಗೆ ಪ್ರಾಪ್ತವಾಗುತ್ತಿರುವುದಲ್ಲಾ ಎಂದು ವ್ಯಥೆಪಡುವೆನು.

**ಚಂಡಸೇನನು—** ರಾಜಕುಮಾರಾ! ನನ್ನನ್ನು ದೂರಬೇಡ. ನೀನು ಶಕ್ತನೆಂದು ನಾನಿದುವರೆಗೆ ಕೇಳಿದ್ದೇನೆ. ನಿನ್ನ ಮಿತ್ರರಿಬ್ಬರು ನಿನ್ನಷ್ಟು ಸಮರ್ಥರಲ್ಲ. ನಾನಿರುವ ಸ್ಥಳವು ಹಿಂದೂದೇಶದಲ್ಲಿ ಯಾರಿಗೂ ತಿಳಿಯದು. ನೀನೂ, ನಿನ್ನ ಮಿತ್ರರೂ ಇಲ್ಲಿಗೆ ಬರುತ್ತಿರುವಾಗ "ಚಂಡಸೇನನ ವಾಸಸ್ಥಳವು ಇದು" ಎಂದು ನೀವು ಮಾತಾಡಿಕೊಳ್ಳಲಿಲ್ಲವೇ? ನಿನ್ನನ್ನು ಈಗಲೇ ಬಿಡಬಹುದು. ಆದರೆ, "ನನ್ನ ಸಂಗತಿ ಯಾರಿಗೂ ಹೇಳುವುದಿಲ್ಲ"ವೆಂದು ನೀನು ಪ್ರಮಾಣಮಾಡಿ ಕೊಡಬೇಕು.

**ಲಲಿತಕುಮಾರನು—** ದುರ್ಜನನಾದರೂ ನೀನು ಜೀವನು. ಈಶ್ವರಾಂಶಸಂಭೂತನು. ದೌರ್ಜನ್ಯಕ್ಕೂ ಒಂದು ಮಿತಿಯುಂಟು. ಮಿತಿಮೀರಿದಾಗ ಈಶ್ವರ ಸಂಕಲ್ಪಾನುಸಾರ ಶಿಕ್ಷೆಯೂ ಉಂಟು. ದುಷ್ಟನಿಗ್ರಹ ಶಿಷ್ಟಪರಿಪಾಲನೆಗಾಗಿ ಆಗಾಗ್ಗೆ ವಿಷ್ಣುಮೂರ್ತಿಯು ಅವತರಿಸುತ್ತಿರುವಂತೆ ನೀನು ಕೇಳಲಿಲ್ಲವೇ? ನನ್ನನ್ನು ಬಿಟ್ಟಮಾತ್ರದಿಂದ ನಾನು ಕೇಡನ್ನೆಣಿಸುವೆನೆಂದು ಭಾವಿಸುವುದು ಕೂಡ ನಿನ್ನ ಅವಜ್ಞತೆಯನ್ನು ಸೂಚಿಸುವುದು. ಸರ್ವ ನಿಯಂತೃವಾಗಿ ಭಗವಂತನಿರುವಲ್ಲಿ ನಾನೇಕೆ ನಿನಗೆ ಕೆಡಕುಮಾಡಬೇಕು? ಪರಂತು ನಿರಪರಾಧಿಗಳನ್ನು ಹಿಂಸಿಸುವುದನ್ನು ನೀನು ಬಿಡಬೇಕು. ಇಲ್ಲವಾದರೆ ಶಿಕ್ಷಿಸಬೇಕಾದ ಕರ್ತವ್ಯವು ನನಗೆ ಬರಬಹುದು.

**ಚಂಡಸೇನನು—**ವಯಸ್ಸಿನಲ್ಲಿ ನೀನು ಎಷ್ಟೋ ಚಿಕ್ಕವನಾಗಿರುವೆ. ಆದರೆ ಮಾತುಗಳು ಮಾತ್ರ ಬಹಳ ದೊಡ್ಡವಾಗಿವೆ. ನೀನಿರುವುದು ಚಂಡಸೇನನ ರಾಜ್ಯವೆಂದು ತಿಳಿ. ನನ್ನ ಇಷ್ಟದಂತೆಯೇ ಇಲ್ಲಿ ನೀನು ನಡೆದುಕೊಳ್ಳದಿದ್ದರೆ ಬರುವ ಜಾತ್ರೆಯಲ್ಲಿ ನಿನ್ನನ್ನು ನನ್ನ ಕುಲದೈವವಾದ ಭೈರವಮೂರ್ತಿಗೆ ಬಲಿಕೊಡು

ವೆನು. ಸಾವಧಾನವಾಗಿ ಆಲೋಚಿಸಿನೋಡು. ಈ ಕರ್ಕಶ ನುಡಿಗಳನ್ನು ನುಡಿದು ಚಂಡಸೇನನು ಹೊರಟುಹೋದನು. ಲಲಿತಕುಮಾರನಿಗೆ ಹೇಳಲವಲ್ಲದಷ್ಟು ಕ್ರೋಧಾವೇಶವು ಉಂಟಾಯಿತು. ಆದರೆ ಮಾಡುವುದೇನು ಸೆರೆಮಲ್ಲಿ ಅಶಕ್ತನಾಗಿ ಬಿದ್ದಿರುವನು. ಕ್ರೋಧವು ದುಃಖವಾಗಿಪರಿಣಮಿಸಿತು. "ಅನಾಥನಾಥಾ! ದೀನಬಂಧೋ! ಕರುಣಾಸಾಗರಾ! ವೀರಕ್ಷತ್ರಿಯವಂಶದಲ್ಲಿ ಜನಿಸಿ ಇಂತಹ ನೀಚನ ಕಾರಾಗೃಹದಲ್ಲಿ ಸಿಕ್ಕಿ ಸಾಯಬೇಕಾಗಿಬಂದಿರುವ ಈ ದೀನನ ಪ್ರಲಾಪಗಳು ನಿನಗೆ ಕೇಳಬರಲಿಲ್ಲವೇ? ಹಿಂದೆ ನಾನು ಎಂತಹ ಮಹಾಪಾತಕವನ್ನು ಮಾಡಿದ್ದೆನೋ ತಿಳಿಯದು! ಎಂದು ವಿಲಪಿಸಿದನು.

ಈ ಸಂಭವವು ನಡೆದಂದಿನಿಂದ ಲಲಿತಕುಮಾರನಿಗೆ ಸರಿಯಾದ ಭೋಜನವು ದೊರೆಯುತ್ತಿದ್ದಿತು. ಹೀಗೆ ಮೂರು ತಿಂಗಳು ಕಳೆದ ನಂತರ ಒಂದು ದಿನ ಪ್ರಾತಃಕಾಲ ಗುಹೆಯ ದ್ವಾರವು ತೆರೆಯಲ್ಪಟ್ಟಿತು. ಕೆಲವರು ಕಳ್ಳರು ಪ್ರವೇಶಿಸಿ ಲಲಿತಕುಮಾರನನ್ನು ಹೊತ್ತುಕೊಂಡು ಹೋದರು. ಒಂದೆಡೆಯಲ್ಲಿ ಅವನನ್ನಿಳಿಸಿ, ಸ್ನಾನಮಾಡಿಸಿ, ರಕ್ತವಸ್ತ್ರಗಳನ್ನುತೊಡಿಸಿ, ರುಚಿರುಚಿಯಾದ ಆಹಾರವಸ್ತುಗಳನ್ನು ಕೊಟ್ಟರು. ನಾನಾ ಬಗೆಯ ಕೆಂಪು ಹುವ್ವುಗಳನ್ನು ಮಾಲೆಯಾಗಿ ಕಟ್ಟಿ ಅವನ ಕತ್ತಿನಲ್ಲಿ ಹಾಕಿದರು. ಆರಾಜಕುಮಾರನಿಗೆ ಬಾಯಿಮಾತೇ ನಿಂತುಹೋಯಿತು. ಅವರೇನು ಮಾಡಿದರೂ ಕೀಲಿನ ಬೊಂಬೆಯಂತೆ ಮಾಡಿಸಿಕೊಳ್ಳುತ್ತಿದ್ದನು. ತನ್ನ ಆಯುರ್ದಾಯವು ಮುಗಿದಿದೆ ಎಂದುಕೊಂಡನು. ಭಗವದ್ಧ್ಯಾನದಲ್ಲಿಚಿತ್ತೈಕಾಗ್ರತೆಯುಳ್ಳವನಾಗಿಐಹಿಕಸುಖಗಳನ್ನುಮರೆತನು. ಚಂಡಸೇನನ ಪುರದಲ್ಲಿ ಆ ದಿನ ಭೈರವಮೂರ್ತಿಯ ಜಾತ್ರೆ. ದೇವಮಂದಿರವಿದ್ದ ಸ್ಥಳವು ಬಹಳ ವಿಶಾಲವಾಗಿದ್ದಿತು. ಅದರ ಸುತ್ತಲೂ ನಾನಾ ವಿಧವಾದ ತರುಗಳು ಸೊಂಪಾಗಿ ಬೆಳೆದಿದ್ದವು. ಉತ್ಸವಕ್ಕಾಗಿ ಮಾವಿನ ತೋರಣಗಳು ಅಲ್ಲಲ್ಲಿ ಕಟ್ಟಲ್ಪಟ್ಟಿದ್ದವು. ಭೈರವಮೂರ್ತಿಯನ್ನು ಅಮೂಲ್ಯವಾದ ವಸ್ತ್ರಾಭರಣಗಳಿಂದಲಂಕರಿಸಿದ್ದರು. ಹೋಮಕುಂಡದಲ್ಲಿನ ಹೊಗೆಯು ಗಗನದೇಶದವರೆಗೂ ವ್ಯಾಪಿಸಿದ್ದಿತು. ದುರ್ಗಾಧೀಶನಾದ ಚಂಡಸೇನನಿಗೆ ಸಕಲ ವೈಭವಗಳೂ ಒಪ್ಪಿದ್ದುವು. ಅವನ ಅನುಯಾಯಿಗಳು ವಿಧವಿಧಕೆಲಸಗಳಲ್ಲಿ ನಿಪುಣರಾಗಿದ್ದರು. ವಾದ್ಯಘೋಷವು ಪ್ರಾರಂಭವಾಯಿತು. ಅಂತಹವಿಪತ್ತಿನಲ್ಲಿಯೂ ಲಲಿತಕುಮಾರನ ಕಿವಿಗೆ ಇಂಪಾದ ಸ್ವರಗಳು ಕೇಳಬಂದುವು. "ಇದೇನಾಶ್ಚರ್ಯ! ಈ ಕ್ರೂರಾತ್ಮನ ರಾಜ್ಯದಲ್ಲಿ ಕ್ರೂರಕೃತ್ಯವು ನಡೆಯಲಾರಂಭವಾದಾಗ ಸಹಿತ ಇಂತಹ ಸುನಾದವು ನನ್ನ ಕಿವಿಗೆ ಬೀಳುತ್ತಿರುವುದು! ಲೋಕಕಂಟಕನಾದ ರಾವಣನು ಸಾಮಗಾನನಿಪುಣನಾಗಿದ್ದನೆಂದು ಕೇಳಿದ್ದೇನೆ. ಈಗ ಚಂಡಸೇನನು

ಸಹಿತ ಅಂತಹ ಗಾನಪ್ರಿಯನಾಗಿರುವಂತೆ ತೋರುತ್ತದೆ" ಎಂದು ರಾಜ ಕುಮಾರನು ಯೋಚಿಸಿದನು. ಆ ಪ್ರಾಂತ್ಯ ಕಾಳಿ, ಬರ್ಬರಭಾಷೆಗಳೇ ವಾಡಿ ಕೆಯಲ್ಲಿದ್ದುವು. ಸ್ವಲ್ಪ ಹೊತ್ತಿನ ಮೇಲೆ ಕಾಳೀಭಾಷೆಯಲ್ಲಿ ಮಂತ್ರೋಚ್ಚಾರ ಣೆಯು ಪ್ರಾರಂಭವಾಯಿತು. "ಓಹೋ! ಭೈರವಮೂರ್ತಿಯ ಪೂಜೆಗೆ ಆರಂಭ ವಾಯಿತು. ಆ ಸ್ವಾಮಿಗೆ ಲಲಿತಕುಮಾರನು ಈ ದಿನ ನಿವೇದಿತನಾಗುವನು. ಭೈರವಮೂರ್ತಿಯೇ! ಚಂಡಸೇನನ ಕೈಯಲ್ಲಿ ದುರ್ಮರಣವಾಗುವುದಕ್ಕಿಂತಲೂ ಈ ನನ್ನ ದೇಹವು ನಿನಗೆ ಬಲಿಯಾಗುವುದು ಶ್ರೇಯಸ್ಕರವು. ಶಕ್ತಿಸ್ವರೂಪ ನಾದ ನೀನು ನಿನ್ನಲ್ಲಿ ನನ್ನನ್ನು ಕ್ಷಿಪ್ರವಾಗಿ ಐಕ್ಯಮಾಡಿಕೊ" ಎಂದು ಪ್ರಾರ್ಥಿ ಸುತ್ತಾ ಲಲಿತಕುಮಾರನು ಮೈಮರೆತನು. ತಸ್ಕರ ಬೃಂದವು ವಾದ್ಯಗಳ ಸಮೇತ ಬಂದಿತು. ಪಾಶದಿಂದ ಮುಕ್ತರಾಗಿ ಮನಸ್ಸಿನ ಕೂಗಿಕೊಳ್ಳುತ್ತಾ ಲಲಿತ ಕುಮಾರನನ್ನು ಹೊತ್ತುಕೊಂಡು ಭೈರವಮೂರ್ತಿಯ ಇದುರಿನಲ್ಲಿ ನಿಲ್ಲಿಸಿದರು. ಲಲಿತಕುಮಾರನಿಗೆ ಸ್ಮರಣೆಬಂದಿತು. ದೇವಮೂರ್ತಿಯನ್ನು ಕಣ್ಣಾರೆ ನೋಡಿ ದನು. ಭಕ್ತಿಯು ಉಕ್ಕಿ ಬಂದಿತು. "ಕೃಪಾನಿಧೇ! ಪ್ರಾಣಿಗಳ ಪಾಪವನ್ನು ಮರ್ದಿಸಿ ಸದ್ಗುಣಗಳನ್ನು ವೃದ್ಧಿಗೊಳಿಸುವುದಕ್ಕಾಗಿ ನೆಲೆಗೊಂಡಿರುವ ನಿನ್ನಲ್ಲಿ ದುರಾತ್ಮರು ತಮ್ಮ ದುರ್ಗುಣಗಳನ್ನು ಆರೋಪಿಸಿ ನರಹಂತಕನೆಂದು ನಿನ್ನನ್ನು ಇಲ್ಲಿ ಪ್ರತಿಷ್ಠೆಮಾಡಿರುವರು. ಭಕ್ತವತ್ಸಲ! ನೀಚ ಮರಣಕ್ಕಿಂತಲೂ ನಿನಗೆ ಬಲಿ ಯಾಗುವುದು ನನ್ನ ಪುಣ್ಯವೆಂತಲೇ ಭಾವಿಸುತ್ತೇನೆ. ಅನಾಥನಾಥ! ಅಂತ್ಯ ಕಾಲದಲ್ಲಿ ನಿನ್ನ ದರ್ಶನವು ಸಹ ನನಗೆ ಲಭಿಸಿರುವುದರಿಂದ ನಾನು ಧನ್ಯನಾ ಗಿರುವೆನು." ಇಷ್ಟರಲ್ಲಿ, ಚಂಡಸೇನನು ತೀಕ್ಷ್ಣವಾದ ಕರವಾಲವನ್ನು ಕೈ ಯಲ್ಲಿ ಧರಿಸಿ ಸಪರಿವಾರನಾಗಿ ಅಲ್ಲಿಗೆ ಬಂದನು. ಅವನನ್ನು ಕಂಡ ಕೂಡಲೇ ಲಲಿತಕುಮಾರನು ತನ್ನ ಕಣ್ಣುಗಳನ್ನು ಮುಚ್ಚಿಕೊಂಡನು.

**ಚಂಡಸೇನನು—** ಎಲೈ! ಮೂರ್ಖಶಿಖಾಮಣಿಯೇ! ಇತಃಪರ ನೀನಿಹ ಲೋಕದಲ್ಲಿ ಜೀವಿಸಿರಲು ಅರ್ಹನಲ್ಲ. ನನ್ನ ಹಿತವಚನಗಳು ನಿನಗೆ ಕರ್ಣಕಠೋರ ಗಳಾಗಿರುವುವು. ನನ್ನ ದರ್ಶನವಾದರೆ ನಿನಗೆ ಮಹಾಪಾತಕದಂತಾಗುವುದು. ನಿನ್ನ ಅಂತ್ಯವನ್ನು ನೀನೇ ತ್ವರೆಪಡಿಸಿಕೊಂಡೆ. ಈಗಲೇ ನಿನ್ನನ್ನು ಯಮನ ಆಲ ಯಕ್ಕೆ ಅತಿಥಿಯಾಗಿ ಕಳುಹಿಸುವೆನು. ನಿನ್ನ ಇಷ್ಟದೈವವನ್ನು ಹೃದಯಮಂದಿ ರದಲ್ಲಿ ಸ್ಮರಿಸಿಕೊಳ್ಳುವವನಾಗು.

ಈ ಮಾತುಗಳು ಮುಗಿಯುವುದರೊಳಗಾಗಿ ಕಳ್ಳರೆಲ್ಲರೂ ಭೈರವಮೂ ರ್ತಿಗೆ ಧೂಪದೀಪಗಳನ್ನು ಕೊಟ್ಟು ಸುರಾಭಾಂಡಗಳನ್ನು ನಿವೇದಿಸಿ ಕರ್ಪೂರಾ ರತಿಗಳನ್ನು ಬೆಳಗಿ "ಜಯ ಭೈರವಾ!" ಎಂದು ಭಯಂಕರವಾಗಿ ಕೇಕೆಗಳನ್ನು

ಹಾಕಿದರು. ಅನಾಥಸ್ಥಿತಿಯಲ್ಲಿರುವ ಸಾಧುಗಳ ಮೊರೆಯನ್ನಾಲಿಸಿ ಕಾಪಾಡುವುದಕ್ಕಾಗಿ ಶಕ್ತಿಸ್ವರೂಪಳಾಗಿ ಬಂದಿರುವಳೋ ಎಂಬಂತೆ ಒಬ್ಬ ಬಾಲೆಯು ನಿರ್ಭಯಗಮನದಿಂದ ಮಂದಿರಕ್ಕೆ ಎಲ್ಲಿಂದಲೋ ಬಂದಳು. ವಯಸ್ಸಿನಲ್ಲಿ ಹದಿನೆಂಟು ವರ್ಷಕ್ಕಿಂತಲೂ ಹೆಚ್ಚಾಗಿರಲಿಲ್ಲ. ಅವಳ ಕೋಮಲಗಾತ್ರವು ಮಿಂಚಿನ ಬಳ್ಳಿಯಂತೆ ಥಳಥಳಿಸುತ್ತಿದ್ದಿತು. ಮುಖವು ಚಂದ್ರಬಿಂಬವನ್ನು ಹೋಲುತಿದ್ದಿತು. ಮುಂಗುರುಳುಗಳು ಸುತ್ತಿಕೊಂಡು ತಲೆಯಿಂದ ನೇತಾಡುತ್ತಿದ್ದುವು. ದಯಾರಸವನ್ನು ಸೂಸುತ್ತಿದ್ದ ಅವಳ ಕಣ್ಣುಗಳಲ್ಲಿ ಲಲಿತಕುಮಾರನನ್ನು ಸಲಹುವ ಭಾವವು ಹೊರಹೊರಡುತ್ತಿದ್ದಿತು. ತೊಂಡೆಯಹಣ್ಣನ್ನು ಧಿಕ್ಕರಿಸುವ ಕೆಂಪಾದ ಅಧರ. ಪೋಣಿಸಿದ ಮುತ್ತಿನಂತೆ ದಂತಪಜ್ತಿಗಳು. ಗಂಭೀರಾಕೃತಿಯಿಂದ ಸೌಂದರ್ಯ ದೇವತೆಯಂತೆ ಕಾಣುತ್ತಿದ್ದ ಆ ಬಾಲೆಯನ್ನು ನೋಡಿ ಅಲ್ಲಿ ನೆರೆದಿದ್ದ ಜನರೆಲ್ಲರೂ ಭಯಭ್ರಾಂತಿಗಳಿಂದ ಚಕಿತರಾದರು. ಬರ್ಮಾದೇಶದ ಉಡುಗೆತೊಡುಗೆಗಳನ್ನು ಧರಿಸಿಕೊಂಡು ಚಂಡಸೇನನೊಡನೆ ಸಂಭಾಷಿಸುತ್ತಿದ್ದರೂ ಅವಳು ಬರ್ಮಾದೇಶದ ಕನ್ಯೆಯಂತೆ ಕಾಣಲಿಲ್ಲ. ಚಂಡಸೇನನು ಅವಳನ್ನು ನೋಡಿ ಭಯ ಕಂಪಿತಗಾತ್ರನಾದನು. "ಅಮ್ಮಾ! ನೀನೇನು ಕಾರಣ ಇಲ್ಲಿಗೆ ಬರುವ ಪ್ರಯಾಸವನ್ನು ಕೈಕೊಂಡೆ?" ಎಂದು ಉಸುರಿದನು. ಆ ಮಂದಿರದಲ್ಲಿ ನಡೆಯುತ್ತಿದ್ದ ಘೋರಕೃತ್ಯಗಳನ್ನು ನೋಡಿ ಚಕಿತಳಾಗಿದ್ದರೂ ಆ ಬಾಲೆಯು ಚಂಡಸೇನನನ್ನು ನೋಡಿ "ನಾನು ಸಕಾಲಕ್ಕೆ ಬಂದಿರುವೆನು" ಎಂದು ಗಂಭೀರವಾಗಿ ಮಾತನಾಡಿದಳು.

**ಇಂದಿರೆ—** ನಿನ್ನ ದುರ್ಗಕ್ಕೆ ನಾನು ಯಾವಾಗಲೂ ಬರಲಿಲ್ಲವಾದರೂ ಚಿಕ್ಕಂದಿನಿಂದ ಈಪ್ರಾಂತ್ಯ ತಿರುಗುತ್ತಿದ್ದೆನಾದುದರಿಂದ ನಿನ್ನ ನಿಲಯವು ಇಲ್ಲಿಯೇ ಇರಬೇಕೆಂದು ಊಹಿಸಿದೆನು. ಮಾಳವದೇಶಾಧೀಶನನ್ನು ನೀನು ಸೆರೆಯಲ್ಲಿಟ್ಟಿರುವೆಯೆಂಬ ಪ್ರವಾದವು ಈ ದ್ವೀಪದಲ್ಲೆಲ್ಲ ಹಬ್ಬಿಕೊಂಡಿರುವುದು. ಈತನು ನಿನಗೆ ಯಾವಾಗ ಆಹುತಿಯಾಗುವನೋ ಎಂದು ಭಯಪಡುತ್ತಿದ್ದೆನು. ಈ ದಿನ ಭೈರವಮೂರ್ತಿಗೆ ಆ ಲಲಿತಕುಮಾರನನ್ನು ಬಲಿಕೊಡುವೆವೆಂದು ನಿಮ್ಮವರು ಮಾತನಾಡುತ್ತಿದ್ದುದು ನನ್ನ ಕಿವಿಗೆ ಬಿದ್ದಿತು.

**ಚಂಡಸೇನ—** ಆಮೇಲೆ?

**ಇಂದಿರೆ—** ನಿನಗಾಗಿ ಮಧ್ಯಾಹ್ನವೆಲ್ಲ ಹುಡುಕಿದೆನು. ನೀನು ದೊರೆಯಲಿಲ್ಲ. ತಿರುಗಿ ಮನೆಗೆ ಹೋಗುವುದಕ್ಕೂ ತೋರಲಿಲ್ಲ. ಒಂದು ಗುಂಪನ್ನು ನೋಡಿದೆನು. ಅವರ ದೃಷ್ಟಿಗೆ ಬೀಳದಂತೆ ನಾನು ಇಲ್ಲಿಗೆ ಬರಲೆತ್ನಿಸಿದೆನು. ಪಾನಮತ್ತರಾದ ನಿನ್ನ ಗುಂಪಿನವರು ದುರ್ಗದ್ವಾರವನ್ನು ತೆರೆದು ಬಿಟ್ಟಿದ್ದರು.

ಆ ಅವಕಾಶವನ್ನು ಉಪಯೋಗಮಾಡಿಕೊಂಡು ನಿನ್ನ ದುರ್ಗವನ್ನು ಪ್ರವೇಶಿಸಿದೆನು. ಕೋಲಾಹಲಶಬ್ದವು ಕೇಳಿಸಿತು. ರಾಜಕುಮಾರನ ವಧೆಗೆ ಆರಂಭವಾಗಿರಬಹುದೆಂದು ಊಹಿಸಿ ಓಡಿಬಂದೆನು.

**ಚಂಡಸೇನ—** ಸಿಂಹದ ಗುಹೆಯನ್ನು ತೂರಿಬಂದ ನಿನ್ನ ಸಾಹಸವು ಆಶ್ಚರ್ಯವನ್ನುಂಟುಮಾಡುವುದು. ಆಹಾ! ನಿನ್ನಧೈರ್ಯವೆಂತಹುದು? ಕೇವಲ ಗೋಪ್ಯವಾಗಿದ್ದ ನಮ್ಮ ದುರ್ಗವನ್ನು ನೀನು ತಿಳಿದುಕೊಂಡೆ. ನೀನೊಬ್ಬ ಗಂಡುಸಾಗಿದ್ದರೆ ಈಕ್ಷಣವೇ ನಿನ್ನನ್ನು ಸುಟ್ಟು ಭಸ್ಮಮಾಡುತ್ತಿದ್ದೆನು. ನಿನ್ನನ್ನು ಬಾಲ್ಯದಿಂದಲೂ ನಾನು ಅರಿತಿರುವೆನು. ನಿನ್ನ ತಂದೆಯಿಂದ ನಾನು ಅನೇಕ ಉಪಕಾರಗಳನ್ನು ಹೊಂದಿರುವೆನಾದುದರಿಂದ ಆ ಬಾಧ್ಯತೆಗಾಗಿ ನಿನ್ನನ್ನು ಕ್ಷಮಿಸಿರುವೆನು.

**ಇಂದಿರೆ—** ಚಂಡಸೇನಾ! ನಿನಗೆ ನಾನು ಯಾವ ವಿಧವಾದ ಕೇಡನ್ನೂ ಎಣಿಸುವವಳಲ್ಲವೆಂದು ಹೇಳಬೇಕಾದುದೇ ಇಲ್ಲ. ನನ್ನ ತಂದೆಯಿಂದ ಉಪಕೃತನಾಗಿರುವುದರಿಂದ ನೀನು ನನ್ನನ್ನು ಕೊಲ್ಲಲಾರೆಯೆಂದು ನನಗೆ ಗೊತ್ತಿದೆ. ನಿನ್ನನ್ನು ಹಿಡಿಯುವುದಕ್ಕಾಗಿ ಡಿಲ್ಲೀಶ್ವರನ ಭಟರು ಎಷ್ಟೋ ಸಲ ಬಂದಿದ್ದಾಗ ನನ್ನ ತಂದೆಯು ನಿನ್ನನ್ನೂ, ನಿನ್ನ ಅನುಚರರನ್ನೂ ತನ್ನ ಮನೆಯಲ್ಲಿಟ್ಟುಕೊಂಡು ಕಾಪಾಡಲಿಲ್ಲವೇ? ಉಪ್ಪುತಿಂದ ಮನೆಗೆ ದ್ರೋಹವನ್ನೆಣಿಸಬಾರದೆಂಬ ಧರ್ಮವು ತಸ್ಕರರಿಗೆ ಮುಖ್ಯವಾಗಿರುವುದು. ಎಂತಹ ಆಪತ್ತು ಬಂದರೂ ನೀನು ನನ್ನ ತಂದೆಯನ್ನೂ, ನನ್ನನ್ನೂ ನನ್ನ ಕುಟುಂಬದವರನ್ನೂ ಕಾಪಾಡುವೆಯೆಂಬ ಭರವಸೆಯು ನನಗಿದೆ. ಆದರಂತೆ ನೀನು ಧರ್ಮಿಷ್ಠನಾದ ನನ್ನ ತಂದೆಗೆ ಪ್ರಮಾಣ ಮಾಡಿಕೊಟ್ಟಿರುವೆ. ಆ ಪ್ರಮಾಣದಂತೆ ನಡೆದುಕೊಳ್ಳಬೇಕಾದ ಸಮಯವು ಈಗ ನಿನಗೆ ಒದಗಿ ಬಂದಿದೆ. ಈ ಮಾಳವಾಧೀಶನ ಪೂರ್ವಜರಿಗೂ ನನ್ನ ತಂದೆಯ ವಂಶದವರಿಗೂ ಪುರಾತನ ಬಾಂಧವ್ಯವಿರುವುದೆಂದು ನಾನು ಕೇಳಿದ್ದೆನು. ಈತನನ್ನು ನೀನು ಬಿಡಬೇಕೆಂದು ಕೇಳಿಕೊಳ್ಳಲು ನಾನು ಬಂದಿರುವೆನು. ಈ ಕೆಲಸವು ನನ್ನ ತಂದೆಗೂ ಇಷ್ಟವಾಗಿರುವುದರಿಂದ ನನ್ನ ವಚನದಂತೆ ಲಲಿತ ಕುಮಾರನನ್ನು ನೀನು ಬಿಟ್ಟಿರುವೆಯೆಂದು ಕೇಳಿದನಾದರೆ ಆತನು ತುಂಬ ಸಂತೋಷಿಸುವನು. ದಯೆಯಿಟ್ಟು ನೀನು ನನ್ನ ಪ್ರಾರ್ಥನೆಯನ್ನುನೆರವೇರಿಸಿ ಕೊಡು.

**ಚಂಡಸೇನ—** ಎಲಾ! ಬಾಲೆಯೇ! ನಿನ್ನತಂದೆಯಿಂದ ಅನೇಕ ವಿಧವಾಗಿ ನಾನುಪಕೃತನಾಗಿರುವುದು ನಿಶ್ಚಯವೇ. ಆತನನ್ನೂ ಆತನ ವಂಶಜರನ್ನೂ ನನ್ನಪಾಲಿನ ದೈವವೆಂದು ನಂಬಿರುವೆನು. ಆದರೆ ನನಗೆ ಪ್ರಾಣಾಪತ್ತನ್ನುಂಟು

ಮಾಡುವ ಇಂತಹ ಸಂಭವವು ಯಾವಾಗಲಾದರೂ ಬರುವುದೆಂದು ನಾನು ನಂಬಿರಲಿಲ್ಲ. ಲಲಿತಕುಮಾರನನ್ನು ಬಿಟ್ಟ ಒಡನೆಯೇ ನಾನು ಈ ದುರ್ಗದಿಂದ ಹೊರಟು ಮತ್ತೊಂದು ಗೋಪ್ಯಸ್ಥಾನದಲ್ಲಿ ವಾಸಮಾಡಲು ಹೋಗಬೇಕು. ಆಪತ್ತಿನಲ್ಲಿ ಸಲಹಿದವರಿಗೆ ಸಮಯಬಂದಾಗ ಸಹಾಯಮಾಡದಿರುವುದು ಮಹಾ ಪಾತಕವಾದುದರಿಂದ ನಿನ್ನ ಕೋರಿಕೆಯಂತೆ ಲಲಿತಕುಮಾರನನ್ನು ಬಿಟ್ಟುಬಿಡುವೆನು" ಎಂದು ಹೇಳಿ ಸೇವಕರನ್ನು ಕರೆದು ಲಲಿತಕುಮಾರನನ್ನೂ ಅವನ ಸೇವಕನನ್ನೂ ಕರೆದುಕೊಂಡು ಹೋಗಿ ದುರ್ಗದಿಂದಾಚೆಗೆ ಬಿಡಬೇಕೆಂದು ನಿಯಮಿಸಿದನು. ಅದರಂತೆಯೇ ಮಾಡಿದರು. ತಿರುಗಿ ನೋಡುವಷ್ಟರಲ್ಲಿ ಸಮೀಪದಲ್ಲಿದ್ದ ಬಾಲೆಯು ಅದೃಶ್ಯಳಾದಳು.

**ಚಂಡಸೇನ—** (ಏಕಾಂತವಾಗಿ) ನವಯೌವನಸಂಪನ್ನೆಯಾದ ಈ ಬಾಲೆಯು ಸಾಹಸವೆಂತಹದು! ಈ ದುರ್ಗವು ತನಗೆ ಸ್ವಂತವಾಗಿರುವಂತೆ ಮಾತನಾಡಿದಳಲ್ಲವೇ! ಇದೊಂದು ಶುಭಸೂಚನೆಯು. ರಾಜಕುಮಾರನು ಕೃಶನಾಗಿಯೂ, ರೋಗಪೀಡಿತನಾಗಿಯೂ ಇರುವನು. ಇವನು ಬದುಕುವುದು ಅಸಂಭವ. ಒಂದು ವೇಳೆ ಬೇಗನೆ ಮೃತಿಹೊಂದಿದರೆ ಈ ಬಾಲೆಯು ನನ್ನ ಸೊತ್ತಾಗುವಳು. ಇವಳನ್ನು ಮದುವೆಯಾಗಿ ನಾನು ಈ ದುರ್ಗದಲ್ಲಿಯೇ ಸುಖವಾಗಿರಬಹುದು. ಇವಳ ತಂದೆಯು ಗಳಿತವಯಸ್ಕನಾಗಿರುವುದರಿಂದ ವಿಧಿಯಿಲ್ಲದೆಯೇ ಸಮ್ಮತಿಸುವನು.

# ೩ನೆಯ ಅಧ್ಯಾಯ

ಬರ್ಮಾದೇಶಕ್ಕೆ ನೈಋತ್ಯದಿಕ್ಕಿನಲ್ಲಿ, ಇರಾವತೀಮುಖದ್ವಾರಕ್ಕೆ ಪಶ್ಚಿಮ ಭಾಗದಲ್ಲಿ ವಜ್ರದ್ವೀಪವಿರುವುದು. ಅದರಲ್ಲಿನ ಭೂಮಿಗಳು ಬಹಳ ಸಾರವಂತಗಳು. ಆ ದ್ವೀಪದಲ್ಲಿ ಉನ್ನತ ಪರ್ವತಗಳಿರುವುವು. ಆ ಶೈಲಗಳ ಮಧ್ಯೆ ಅಮೌಲ್ಯಗಳಾದ ರತ್ನದ ಗಣಿಗಳಿರುವುವು. ಆ ಪ್ರಾಂತ್ಯದಲ್ಲಿ ಹದ್ದು, ಹಾವುಗಳು ವಿಶೇಷ. ಎರಡುದಿಕ್ಕುಗಳಲ್ಲಿಯೂ ಶೈಲಮಾಲೆಗಳೂ, ಒಂದು ಕಡೆ ಸಮುದ್ರವೂ, ಆ ದ್ವೀಪಕ್ಕೆ ಎಲ್ಲೆಗಳಾಗಿದ್ದುವು. ಮತ್ತೊಂದು ದಿಕ್ಕಿನಲ್ಲಿ ದೂರದೂರದಲ್ಲಿರುವ ಗ್ರಾಮ, ನಗರ, ಪಲ್ಲಿಗಳಿಗೆ ಹೋಗುವ ಮಾರ್ಗವಿರುವುದು. ಸ್ವಲ್ಪ ದೂರದವರೆಗೂ ಅಲ್ಲಲ್ಲಿ ಕೆಲವು ಮನೆಗಳಿಂದ ಕೂಡಿದ ವಿಶಾಲವಾದ ಒಂದು ಪ್ರದೇಶವಿರುವುದು. ಆ ಪ್ರದೇಶವು ಇತರರು ವಾಸಿಸುವ ಸ್ಥಳಕ್ಕೆ ದೂರದಲ್ಲಿರುವುದು.

ಅದೊಂದು ಚಿಕ್ಕ ದ್ವೀಪವೆಂದು ಹೇಳಿದರೂ ಹೇಳಬಹುದು. ಸುತ್ತಲೂ ತೆಂಗಿನ ಗಿಡಗಳು. ಮಧ್ಯದಲ್ಲಿ ಕಾಡುಮರಗಳು. ಬಾಳೆ, ಮಾವು, ಹಲಸು, ಕಿತ್ತಳೆ, ದಾಳಿಂಬ ಮೊದಲಾದ ಗಿಡಗಳಿಂದಲೂ, ದ್ರಾಕ್ಷಿಯ ಬಳ್ಳಿಗಳಿಂದಲೂ, ಮಲ್ಲಿಗೆ, ಗುಲಾಬಿ, ಜಾಜಿ, ಸಂಪಿಗೆ ಮೊದಲಾದ ನಾನಾ ವಿಧವಾದ ಪರಿಮಳಗಳನ್ನೀವ ಪುಷ್ಪತರುಗಳಿಂದಲೂ ಸಾಂದ್ರವಾಗಿರುವುದು. ಈ ತೋಟಗಳ ನಡುವೆ ರಮಣೀಯವಾದ ಒಂದು ಮಂದಿರವು ಕಟ್ಟಲ್ಪಟ್ಟಿರುವುದು. ಇದಕ್ಕೆ ಸುಮಾರು ಅರ್ಧ ಮೈಲಿನಲ್ಲಿ ಕೆಲವು ವಾಸದ ಮನೆಗಳು ಒಂದು ತೆಂಗಿನ ತೋಪಿನಲ್ಲಿರುವುವು. ಅವುಗಳಲ್ಲಿ ತೋಟದ ಕೆಲಸಮಾಡುವ ಕೂಲಿಯವರು ವಾಸಿಸುತ್ತಿರುವರು. ಸಮೀಪದಲ್ಲಿ ಕೆಲವು ಸಾಗು ಭೂಮಿಗಳಿರುವುವು. ಪ್ರತ್ಯೇಕ ಭೂಖಂಡದಂತಿರುವ ಈ ಪ್ರದೇಶಕ್ಕೆ ಯಾರೋ ಒಬ್ಬ ವಿದೇಶಿಯು ಒಡೆಯನಾಗಿದ್ದನು. ಆ ಪ್ರಾಂತ್ಯದ ಜನರಂತೆ ಇವನೂ ಬರ್ಮಾ, ಚೀನಾ, ಪಾಲೀ ಭಾಷೆಗಳಲ್ಲಿ ಪರಿಚಯವುಳ್ಳವನಾಗಿದ್ದನು. ಸುಮಾರು ಹದಿನೈದು ವರ್ಷಗಳ ಕೆಳಗೆ ಏಳು ವರ್ಷ ತುಂಬಿಯೂ ತುಂಬದಂತಿರುವ ತನ್ನ ಏಕಮಾತ್ರ ಪುತ್ರಿಯೊಡನೆ ಅಲ್ಲಿಗೆ ಬಂದು ಸ್ಥಿರವಾಗಿ ನಿಂತಿದ್ದನು. ಆಗ ಅಲ್ಲಿ ಒಬ್ಬ ಬಡರೈತನ ಕುಟೀರವು ಮಾತ್ರವೇ ಇದ್ದಿತು. ಅವನಿಗೆ ದ್ರವ್ಯವನ್ನು ಕೊಟ್ಟು ಆ ಪ್ರದೇಶವನ್ನೆಲ್ಲಾ ಕೊಂಡು ಇಷ್ಟು ವೃದ್ಧಿಮಾಡಿದ್ದನು. ಅಲ್ಲಿ ಬೆಳೆದ ಹಣ್ಣುಕಾಯಿ ಗಡ್ಡೆಗಳು ಹಡಗುಗಳ ಮೂಲಕ ದೇಶದೇಶಗಳಿಗೆ ರಫ್ತಾಗುತ್ತಿದ್ದುವು. ಅಲ್ಲಿಗೆ ಬೇಕಾದ ವಸ್ತುಗಳನ್ನು ಸಹ ಆಮದುಮಾಡಿಸಿಕೊಳ್ಳುತ್ತಿದ್ದನು. ಈ ವಿಧವಾದ ಆಮದು ರಫ್ತು ವ್ಯಾಪಾರದಿಂದ ವಿದೇಶಿಯು ಸುಖಜೀವನವನ್ನು ನಡೆಯಿಸುತ್ತಿದ್ದನು. ಈತನು ಯಾವ ದೇಶದವನೆಂಬುದು ಅಲ್ಲಿನವರಾರಿಗೂ ಗೊತ್ತಿರಲಿಲ್ಲ. ಈತನ ದೃಷ್ಟಿಯು ಬಹು ಮನೋಹರವಾಗಿಯೂ, ಆಕಾರವು ಗಂಭೀರವಾಗಿಯೂ ಇದ್ದುವು. ಎತ್ತರದಲ್ಲಿ ಆರಡಿ, ವಯಸ್ಸಿನಲ್ಲಿ ಸುಮಾರು ನಲವತ್ತು ವರ್ಷಗಳು ಇರಬಹುದು. ಸುಂದರವಾದ ಅವನ ಮುಖದಲ್ಲಿ ಶಾಂತಿಸಂತೋಷಗಳು ಉಕ್ಕಿಬರುತ್ತಿದ್ದುವು. ತಲೆಕೂದಲನ್ನೆತ್ತಿ ಕಟ್ಟಿಕೊಂಡಿದ್ದನು. ಗಾಳಿಯಿಂದ ಜಾರಿದ ಅವನ ತಲೆಗೂದಲು ಫಾಲದೇಶದಲ್ಲಿ ಬಿದ್ದು ಗಂಭೀರವಾಗಿ ಚಲಿಸುತ್ತಿದ್ದಿತು. ದೇಹದ ಬಣ್ಣವು ಕಪ್ಪಾಗಿದ್ದರೂ ಹಾವಭಾವಗಳೂ, ವಿಶಾಲವಾದ ಫಾಲಭಾಗವೂ, ಅವನಲ್ಲಿ ಪ್ರಾಜ್ಞತೆಯನ್ನೂ ರಾಜಲಕ್ಷಣಗಳನ್ನೂ ತೋರಿಸುತ್ತಿದ್ದುವು. ಈ ಲಕ್ಷಣಗಳನ್ನು ಗುರುತಿಸಿ ಆತನ ನಿಜಸ್ಥಿತಿಯನ್ನು ಕಂಡುಕೊಳ್ಳಬೇಕೆಂಬ ಕುತೂಹಲವುಳ್ಳವರು ಆ ದ್ವೀಪದಲ್ಲಿ ಯಾರೂ ಇರಲಿಲ್ಲ. ಆ ದ್ವೀಪನಿವಾಸಿಗಳಿಗೆ ಹೊರಗಿನಿಂದ ಉತ್ತರ ಪ್ರತ್ಯುತ್ತರಗಳು ಬರು

ತ್ತಿದ್ದುವು. ಆದರೆ, ಈತನಿಗೆ ವರ್ತಕದ ವಿಷಯದ ಹೊರತು ಮತ್ತಾವ ವಿಧವಾದ ಕಾಗದಪತ್ರಗಳೂ ಬರುತ್ತಿರಲಿಲ್ಲ. ಈತನ ಭವನವು ವಿಶಾಲವಾಗಿದ್ದಿತು. ಶುಭ್ರವಾದ ಪಾಕಶಾಲೆ, ಅದಕ್ಕಿದಿರಾಗಿ ಉಗ್ರಾಣದ ಕೊಟ್ಟಡಿ. ಪಕ್ಕದಲ್ಲಿ ಪಾತ್ರೆಗಳ ಕೊಟ್ಟಡಿ. ವಿಸ್ತಾರವಾದ ಭೋಜನಶಾಲೆಯು ಒಂದು ಭಾಗದಲ್ಲಿದ್ದಿತು. ಈ ಹೊರಮನೆಗಳಿಗೂ ಮುಖ್ಯಭವನಕ್ಕೂ ಮಧ್ಯೆ ವಿಶಾಲವಾದ ಬಯಲು ಪ್ರದೇಶ. ಭವನದ ಒಂದು ಪಾರ್ಶ್ವದಲ್ಲಿ ಪುಸ್ತಕಾಲಯ. ಅದರಲ್ಲಿ ಹಲವು ವಿಧವಾದ ಗ್ರಂಥಗಳು. ಮತ್ತೊಂದು ಪಾರ್ಶ್ವದಲ್ಲಿ ಮಲಗುವ ಕೊಟ್ಟಡಿ. ಅದರಲ್ಲೆರಡು ಸಾಧಾರಣ ಮಂಚಗಳು. ಶುಭ್ರವಾದ ಹಾಸಿಗೆಗಳು. ಮಿತ್ರದೇವನೆಂದು ಪ್ರಸಿದ್ಧನಾದ ಆ ಯಜಮಾನನ ಮನೆಗೆ ಭೋಜನಕ್ಕೂ, ರೋಗ ಚಿಕಿತ್ಸೆಗೂ ಅನೇಕರು ಬರುತ್ತಿದ್ದರು. ಹೊರಗಿನಿಂದ ಕೆಲವು ಔಷಧಗಳನ್ನು ತರಿಸಿ ತನ್ನ ನೌಕರರಿಗೂ, ಹೊರಗಿನವರಿಗೂ, ಉಚಿತವಾಗಿ ಆತನು ಕೊಡುತ್ತಿದ್ದನು. ಈತನ ಬಳಿಯಲ್ಲಿ ಒಬ್ಬ ವೈದ್ಯನು ಕೂಡ ಇದ್ದನು. ಔಷಧಶಾಲೆಯನ್ನು ಅವನು ನೋಡಿಕೊಳ್ಳುತ್ತಿದ್ದನು. ಮಿತ್ರದೇವನು ಮಿತಭಾಷಿ. ಅಡಿಗೆ ಮುಂತಾದ ಕೆಲಸಗಳಿಗೆ ಬೇರೆ ಬೇರೆಯಾಗಿ ನೇಮಿಸಿದ್ದರೂ ಗೃಹಿಣಿಯಂತೆ ಸರ್ವವನ್ನೂ ತಾನೇ ನೋಡಿಕೊಳ್ಳುತ್ತಿದ್ದನು. ಕೆಲಸವಿಲ್ಲದಾಗ ಗ್ರಂಥವ್ಯಾಸಂಗದಿಂದ ಕಾಲಯಾಪನೆಮಾಡುತ್ತಿದ್ದನು. ಈತನು ಆಜಾನುಬಾಹುವಾದುದರಿಂದ ಪರಾಕ್ರಮಿಯಾದ ಯೋಧನಾಗಿದ್ದಿರಬೇಕು. ಈತನೊಡನೆ ಸಂಭಾಷಿಸುವವರು ವಿನಯ ವಿಧೇಯತೆಗಳನ್ನು ತೋರಿಸುತ್ತಿದ್ದರು. ಎಂತಹವರನ್ನಾದರೂ ಈತನು ಧಿಕ್ಕರಿಸಿ ಮಾತನಾಡುತ್ತಿರಲಿಲ್ಲ.

ಆ ದಿನ ಬಹಳ ಹೊತ್ತಾಯಿತು. ಬಿಸಿಲು ತಗ್ಗಿತ್ತು. ಸೂರ್ಯಕಿರಣಗಳು ಮರಗಳ ಸಂದುಗಳಿಂದ ಬೆಳದಿಂಗಳಂತೆ ಕಾಣುತ್ತಿದ್ದುವು. ಮಿತ್ರದೇವನು ಭವನದಜಗಾರೆಯಲ್ಲಿ ನಿಂತು "ಇದೇನಾಶ್ಚರ್ಯ! ಮಗುವು ಇನ್ನೂ ಮನೆಗೆ ಬರಲಿಲ್ಲವಲ್ಲ! ಏನಾದರೂ ವಿಪತ್ತು ಸಂಭವಿಸಿರಬಹುದೇ ?" ಎಂದು ಆಲೋಚಿಸುತ್ತ ಹುಡುಕಲು ಹೊರಟನು. ಸ್ವಲ್ಪದೂರ ನಡೆಯುವುದರೊಳಗಾಗಿ ಇಂದಿರೆಯು ಚಂಡಸೇನನ ಸೆರೆಯಲ್ಲಿ ಆಸನ್ನವಾಗಿದ್ದ ಮೃತ್ಯುಮುಖದಿಂದ ಲಲಿತಕುಮಾರನನ್ನು ತಪ್ಪಿಸಿ ತೀವ್ರಗಮನದಿಂದ ಬರುತ್ತಿದ್ದುದನ್ನು ಕಂಡನು.

**ಮಿತ್ರದೇವ—** ಮಗು! ನಮಗಿಷ್ಟರಲ್ಲಿಯೇ ಉಪಹಾರವು ಮುಗಿಯಬೇಕಾಗಿದ್ದಿತು. ನೀನೆಲ್ಲಿಗೋ ಹೋಗಿದ್ದೆ. ಮತ್ತೇನಾದರೂ ವಿಪತ್ತು ಸಂಭವಿಸಿತೋ ಎಂದು ಭಯಪಟ್ಟೆದ್ದೆ. ನೀನು ಏಕಾಕಿನಿಯಾಗಿ ಹೋಗುವುದು ಅಷ್ಟು ಒಳ್ಳೆಯದಲ್ಲ.

**ಇಂದಿರೆ—** ಅಪ್ಪಾ! ನೀವು ಹೇಳಿದಂತೆ ನನಗೆ ಫಲಾಹಾರದ ಹೊತ್ತು ಮೀರಿ ಹೋಯಿತು. ಶೀಘ್ರವಾಗಿ ಬರಲೆಣಿಸಿದ್ದೆ. ಆದರೆ ಸಾಧ್ಯವಾಗಲಿಲ್ಲ. ಇನ್ನು ಮೇಲೆ ಒಂಟಿಯಾಗಿ ಹೋಗುವುದಿಲ್ಲ.

ಅವರಿಬ್ಬರೂ ಸಿದ್ಧಪಡಿಸಿದ್ದ ಭಕ್ಷ್ಯಗಳನ್ನೂ, ಫಲಗಳನ್ನೂ ಭುಜಿಸಲುಪಕ್ರಮಿಸಿದರು. ಇಂದಿರೆಯು ಹಿಂದೀ ಮೊದಲಾದ ಭಾಷೆಗಳನ್ನು ಅರಿತಿದ್ದಳು. ಮತಗ್ರಂಥಗಳನ್ನು ಸ್ವಲ್ಪಮಟ್ಟಿಗೆ ವಿಚಾರಮಾಡಿದ್ದಳು. ಮಿತ್ರದೇವನು ಅವಳಿಗೆ ಗಾನವನ್ನು ಕಲಿಸಿದ್ದನು. ತನ್ನ ತಂದೆಯೊಡನೆ ಕಾಶೀಘಟ್ಟಕ್ಕೆ ಹೋಗಿದ್ದ ವೇಳೆಯಲ್ಲಿ ಇವಳು ವೀಣೆಯನ್ನೂ, ಕೆಲವು ಹಿಂದುಸ್ಥಾನೀ ಹಾಡುಗಳನ್ನೂ ಕಲಿತುಕೊಂಡಿದ್ದಳು. ಈಚೆಗೆ ಮತ್ತಷ್ಟು ಅಭ್ಯಾಸಮಾಡಿ ಗಾನನಿಪುಣಳಾಗಿದ್ದಳು. ವಿದ್ಯೆಯಲ್ಲಿಯೂ ಕುಶಲತೆಯನ್ನು ಹೊಂದಿದ್ದಳು. ರಾಜ್ಯತಂತ್ರಗಳಲ್ಲಿಯೂ, ಧನುರ್ವಿದ್ಯೆಯಲ್ಲಿಯೂ ಮಿತ್ರದೇವನು ಅವಳನ್ನು ಪಂಡಿತಳನ್ನಾಗಿ ಮಾಡಿದ್ದನು. ಇಂದಿರೆಯು ತನ್ನ ತಂದೆಯನ್ನನುಕರಿಸಿ ಪ್ರತಿದಿನವೂ ಉಷಃಕಾಲಕ್ಕೆದ್ದು ದೇಹವ್ಯಾಯಾಮಾದಿಗಳನ್ನು ತೀರಿಸಿಕೊಂಡು ಸ್ನಾನಮಾಡಿ ಭಗವಂತನನ್ನು ಧ್ಯಾನಿಸುತ್ತಿದ್ದಳು. ಹದಿನಾರು ವರ್ಷ ವಯಸ್ಸು ತುಂಬುವುದಕ್ಕೆ ಮುಂಚೆಯೇ ಮನೆಯ ಕೆಲಸಗಳನ್ನೆಲ್ಲಾ ಕಲಿತು ನೋಡಿಕೊಳ್ಳುತ್ತಿದ್ದಳು. ವ್ಯಾಪಾರಕಾರ್ಯದಲ್ಲಿ ಕೂಡ ತನ್ನ ತಂದೆಗೆ ಸಹಾಯ ಮಾಡುತ್ತಿದ್ದಳು. ಸ್ವಾಭಾವಿಕವಾಗಿ ಇಂದಿರೆಯು ಸದ್ಗುಣಸಂಪನ್ನಳು. ಅವಳ ಹೃದಯವು ದಯಾರಸಪೂರಿತವಾಗಿದ್ದಿತು. ತಂದೆಗೆ ಸರಿಯಾದ ಮಗಳೆಂದು ಹೇಳಬಹುದು. ಕಪ್ಪಾಗಿದ್ದರೂ ಸರ್ವಾಂಗ ಸುಂದರಿಯಾಗಿದ್ದಳು. ಉಪಹಾರ ಕಾಲದಲ್ಲಿ ದ್ರಾಕ್ಷೆಯ ಹಣ್ಣನ್ನು ಚೆನ್ನಾಗಿ ಬಿಡಿಸಿ ತನ್ನ ತಂದೆಗೆ ಕೊಡುತ್ತ ತಾನೂ ಭಕ್ಷಿಸುತ್ತಿದ್ದಳು.

**ಮಿತ್ರದೇವ—** ಮಗು! ನೀನು ಎಲ್ಲಿಗೆ ಹೋಗಿಬಂದರೂ ನಡೆದ ಸಂಗತಿಗಳನ್ನು ನನಗೆ ಹೇಳುತ್ತಿದ್ದೆ. ಈ ದಿನ ಏನು ಕಾರಣ ಹೇಳದೆ ಸುಮ್ಮನಿರುವೆ? ನಿನ್ನ ಮುಖವನ್ನು ನೋಡಿದರೆ ಆವುದೋ ಒಂದು ಸಾಹಸಕಾರ್ಯವನ್ನು ಮಾಡಿಕೊಂಡುಬಂದಿರುವಂತೆ ತೋರುವುದಲ್ಲವೆ?

**ಇಂದಿರೆ—** ಅಪ್ಪಾ! ನೀವು ಚೆನ್ನಾಗಿಯೇ ಊಹಿಸಿದಿರಿ. ಇಂದಿನ ದಿನ ನಾನೊಂದು ಮಹಾಕಾರ್ಯವನ್ನು ಸಾಧಿಸಿಕೊಂಡು ಬಂದಿರುವೆನು.

**ಮಿತ್ರದೇವ—** ಅದೇನು?

**ಇಂದಿರೆ—** ಕಳ್ಳರ ಒಡೆಯನಾದ ಚಂಡಸೇನನ ದುರ್ಗವು ಸಮೀಪದಲ್ಲಿಯೇ ಇರುವುದಷ್ಟೇ. ಈ ದಿನ ಅದರ ಬಾಗಿಲು ತೆರೆಯಲ್ಪಟ್ಟಿದ್ದಿತು. ನಾನು

ಅದರ ಒಳಕ್ಕೆ ಹೋಗಿ ಒಂದು ಸಾಹಸಕೃತ್ಯವನ್ನು ಮಾಡಿ ಬಂದಿರುವೆನು.

**ಮಿತ್ರದೇವ—** ಕ್ರೂರಕರ್ಮನಾದ ಚಂಡಸೇನನ ದುರ್ಗದೊಳಗೆ ಹೋಗುವುದೆಂದರೇನು? ಅಲ್ಲಿ ಸಾಹಸಕೃತ್ಯವನ್ನು ಮಾಡುವುದೆಂದರೇನು? ಇವೆರಡೂ ನನಗೆ ಭಯವಿಭ್ರಮಗಳನ್ನುಂಟುಮಾಡುತ್ತಿರುವುವು. ಆಮೇಲೆ?

**ಇಂದಿರೆ—** ನಮ್ಮ ಹೂವಿನ ಗಿಡಗಳಲ್ಲಿ ನಾನು ತಿರುಗುತ್ತಿರುವಾಗ "ಈ ದಿನ ಚಂಡಸೇನನ ದುರ್ಗದಲ್ಲೊಂದು ಘೋರಕೃತ್ಯವು ನಡೆಯುವುದು. ಕೆಲವು ಕಾಲದ ಹಿಂದೆ ಸೆರೆಯಲ್ಲಿಡಲ್ಪಟ್ಟ ಮಾಳವದೇಶಾಧೀಶನನ್ನು ಭೈರವಮೂರ್ತಿಗೆ ಬಲಿಕೊಡುವರಂತೆ" ಎಂದು ತೋಟದವರು ಹೇಳಿದರು. ಇದು ನನಗೆ ಕರ್ಣಕಠೋರವಾಗಿದ್ದಿತು. ಮನಸ್ಸಿನಲ್ಲಿ ಏನೇನೋ ವ್ಯಥೆಗಳುಂಟಾದುವು. ಹೇಗಾದರೂ ಮಾಡಿ ಈ ಕ್ರೂರಕೃತ್ಯವನ್ನು ನಿಲ್ಲಿಸಬೇಕೆಂದು ನನ್ನ ಅಂತರಾತ್ಮನು ಬಲವಾಗಿ ನುಡಿಯಲಾರಂಭಿಸಿದನು. ಚಂಡಸೇನನು 'ನಿಮ್ಮಿಂದ ಉಪಕಾರವನ್ನು ಹೊಂದಿರುವ ಕಾರಣ ಅವನಲ್ಲಿ ನಾನು ಹೋದರೆ ನನಗೆ ಪ್ರಾಣಾಪತ್ತೇನೂ ಉಂಟಾಗಲಾರದು. ಒಂದು ವೇಳೆ ಅಂತಹ ಸಮಯವು ಒದಗಿದರೆ ನನ್ನಲ್ಲಿ ರಹಸ್ಯವಾಗಿರುವ ಚಂದ್ರಾಯುಧದಿಂದ ಅವನನ್ನು ಭೂಗತಮಾಡುವೆನೆಂದು ತೀರ್ಮಾನಿಸಿಕೊಂಡು ದುರ್ಗದ ಸಮೀಪಕ್ಕೆ ಹೋದೆನು. ಬಾಗಲುಗಳೆರಡೂ ತೆರೆಯಲ್ಪಟ್ಟಿದ್ದುವು. ಆರಿಗೂ ಗೋಚರವಾಗದಂತೆ ಅದನ್ನು ಪ್ರವೇಶಿಸಿ ಕೋಲಾಹಲವಾಗುತ್ತಿದ್ದ ಭೈರವಮೂರ್ತಿಯ ಆಲಯಕ್ಕೆ ಹೋದೆನು. ಭೈರವಮೂರ್ತಿಗೆ ಸಾಂಗವಾಗಿ ಪೂಜಾವಿಧಾನಗಳೆಲ್ಲವೂ ನಡೆದಿದ್ದುವು. ಮಾಳವೇಶನು ರೋಗಪೀಡಿತನಾಗಿ ಕೈಕಾಲು ಆಡಿಸುವುದಕ್ಕೂ ಶಕ್ತಿಯಿಲ್ಲದೆ ಕಣ್ಣುಗಳನ್ನು ಮಾತ್ರ ತೆರೆದುಕೊಂಡಿದ್ದನಲ್ಲದೆ ದೇಹವನ್ನೇ ಮರೆತಿದ್ದನು. ಅವನನ್ನು ಬಲಿಕೊಟ್ಟು ನಿವೇದನೆಮಾಡಬೇಕಾದ ಸಮಯಕ್ಕೆ ಸರಿಯಾಗಿ ನಾನು ಹೋದೆನು. ಅಲ್ಲಿನವರೆಲ್ಲರೂ ಚಕಿತರಾದರು. ಚಂಡಸೇನನು ಆಶ್ಚರ್ಯಗೊಂಡು ನನ್ನನ್ನು ಗುರುತಿಸಿ ನಾನು ಬಂದ ಕಾರ್ಯವನ್ನು ಕೇಳಿದನು. ಲಲಿತಕುಮಾರನನ್ನು ಬಿಡಿಸುವುದಕ್ಕಾಗಿ ಏನೇನು ಹಿತವಚನಗಳನ್ನು ಹೇಳಬೇಕೋ ಅವೆಲ್ಲವನ್ನೂ ಹೇಳಿ ಬಿಡಿಸಿದೆನು. ಕಣ್ಣುಕಟ್ಟಿ ಅವನನ್ನೂ, ಅವನೊಡನೆ ಬಂದಿದ್ದ ಮತ್ತೊಬ್ಬನನ್ನೂ ದುರ್ಗದಾಚೆ ಬಿಡಬೇಕೆಂದು ಚಂಡಸೇನನು ಆಜ್ಞಾಪಿಸಿದ ಮೇರೆಗೆ ಚಾರರು ನಡೆಸಿದರು. ಚಂಡಸೇನನು ಏನೋ ದೀರ್ಘಾಲೋಚನೆ ಮಾಡುತ್ತ ನಿಂತಿದ್ದುದರಿಂದ ನಾನು ಆ ಅವಕಾಶವನ್ನು ಕೈಕೊಂಡು ಯಾರಿಗೂ ತಿಳಿಯದಂತೆ ಪುನಃ ದುರ್ಗವನ್ನು ದಾಟಿ ನಮ್ಮ ಮಂದಿರದ ಕಡೆ ನಡೆಯುತ್ತಿರುವಾಗ ನೀವು ನನಗಾಗಿ ದಾರಿಯಲ್ಲಿ ಬರುತ್ತಿರುವುದನ್ನು ಕಂಡೆನು. ನನಗೆ ದಾರಿಯಲ್ಲಾಗಲಿ ದುರ್ಗದಲ್ಲಾಗಲಿ ಯಾವ ಅಪಾಯವೂ ಸಂಭವಿಸಲಿಲ್ಲ.

**ಮಿತ್ರದೇವ**— ಮಗು! ಪ್ರಕೃತಕ್ಕೆ ನಿನಗೇನೂ ಅಪಾಯ ಸಂಭವಿಸ ದಿರುವುದು ನಮ್ಮ ಭಾಗ್ಯವೇ. ಚಂಡಸೇನನ ದೀರ್ಘಾಲೋಚನೆಯಲ್ಲಿ ಆವು ದೋ ಒಂದರ್ಥವಿರಬೇಕು. ಹೇಗೂ ಆಗಲಿ, ನಿನಗೆ ಪ್ರಾಣಾಪಾಯವಿದ್ದರೂ ಶಂಕಿಸದೆ ಧೈರ್ಯವಾಗಿ ಹೋಗಿ ಮಾಳವಾಧೀಶನನ್ನು ಮೃತ್ಯುಮುಖದಿಂದ ಬಿಡಿಸಿದುದಕ್ಕೆ ನಾನು ತುಂಬಾ ಸಂತೋಷಪಡುವೆನು.

**ಇಂದಿರೆ**— ತಂದೆಯೇ! ಭಾರತೀಯನನ್ನು ನಿರರ್ಥಕವಾಗಿ ಕೊಲ್ಲುವ ಸುದ್ದಿಯು ನನ್ನ ಕಿವಿಗೆ ಬಿದ್ದಕೂಡಲೆ ನನಗೆ ಆವೇಶ ಬಂದಹಾಗಾಯಿತು. ಆವ ಶಕ್ತಿಯಿಂದ ಈ ಅಘಟನಘಟನಾಕಾರ್ಯವನ್ನು ಮಾಡಿದೆನೋ ನನಗೇ ತಿಳಿಯದು.

**ಮಿತ್ರದೇವ**—ಕುಮಾರಿ! ನೀನು ಮಾಡಿದ ಕಾರ್ಯವು ಮಹೋಪಕಾರ ಕರವು. ನನಗೆ ತುಂಬಾ ಆನಂದವನ್ನುಂಟುಮಾಡಿರುವುದು. ಆದರೆ, ನಾವು ಈ ಪ್ರಾಂತ್ಯವನ್ನು ಬಿಟ್ಟು ಬೇರೆ ಕಡೆಗೆ ಹೋಗಬೇಕು. ಬಾಲ್ಯದಿಂದಲೂ ನಿನಗೆ ಯಾವ ವಿಧವಾದ ಕೇಡಕೂ ಉಂಟಾಗದಂತೆ ಬಹು ಜಾಗರೂಕತೆಯಿಂದ ನಿನ್ನನ್ನು ಕಾಪಾಡಿಕೊಂಡು ಬಂದೆನು. ಇನ್ನು ಮೇಲೆ ನಿನ್ನನ್ನು ಹೇಗೆ ಕಾಪಾ ಡಬೇಕೋ ತಿಳಿಯದು. ಸರ್ವರಕ್ಷಕನಾದ ಜಗದೀಶನಿರುವಲ್ಲಿ ನಾವು ಯೋಚಿ ಸಬೇಕಾದುದಿಲ್ಲ. ಆದರೆ, ನೀನು ಮಾತ್ರ ಇನ್ನು ಮೇಲೆ ಹೀಗೆ ಹೊರಗೆ ಹೋಗಬೇಡ.

**ಇಂದಿರೆ**— ಜನಕಾ! ಈ ನಿರ್ಜನಪ್ರದೇಶವು ನಮ್ಮ ಹಿರಿಯರ ಸೊತ್ತಲ್ಲ ವಷ್ಟೇ. ಅಷ್ಟು ಕಷ್ಟವಾಗಿದ್ದರೆ ನಾವು ಹಿಂದೂದೇಶಕ್ಕೆ ಏತಕ್ಕೆ ಹೋಗ ಬಾರದು?

**ಮಿತ್ರದೇವ**— ಮಗುವೇ! ಆ ಕೆಲಸವು ಸಾಧ್ಯವಿಲ್ಲ. ಹಿಂದೂದೇಶವು ನಮಗೆ ವಾಸಿಸಲು ಯೋಗ್ಯವಾಗಿಲ್ಲ. ಹದಿನೈದುವರ್ಷಗಳಿಂದಲೂ ಕಷ್ಟಪಟ್ಟು ಈ ಭೂಮಿಯನ್ನು ಸಾರವಂತವನ್ನಾಗಿ ಮಾಡಿದುದಾಯಿತು. ತರುಲತಾಗುಲ್ಮ ಗಳಿಂದ ಈ ಪ್ರದೇಶವೆಲ್ಲವೂ ಮನೋಹರವಾಗಿರುವುದು. ನಮಗೆ ಸುಖ ಜೀವನವು ನಡೆಯುತ್ತಿರುವುದು. ನಮಗೆ ಮತ್ತಾವ ಅಪಾಯವೂ ಉಂಟಾಗ ದಿದ್ದರೆ ಧನ್ಯರಾಗುವೆವು.

**ಇಂದಿರೆ**— ಅಪ್ಪಾ! ಚಂಡಸೇನನು ಏನು ಕಾರಣ ನಮಗೆ ಕೇಡನ್ನೆಣಿಸು ವನು? ಅವನು ನಿಮ್ಮಿಂದ ಎಷ್ಟೋ ಉಪಕಾರವನ್ನು ಹೊಂದಿರುವನಲ್ಲವೆ? ಒಂದು ವೇಳೆ ಹಾಗೆ ದೌರ್ಜನ್ಯವನ್ನು ಮಾಡಲೆತ್ನಿಸಿದರೆ ನೀವು ಸುದಾರಿಸಿ ಕೊಳ್ಳಲಾರಿರೇ? ಚಿಗರೆಯನ್ನು ನೋಡಿ ಸಿಂಹವು ಭಯಪಡುವುದುಂಟೇ?

**ಮಿತ್ರದೇವ—** ಕುಮಾರಿ! ನನ್ನ ಭುಜಬಲಪರಾಕ್ರಮಗಳನ್ನು ಈ ಹೀಡನ ಮೇಲೆ ಪ್ರಯೋಗಿಸುವುದೇ? ನನಗದು ಸಮ್ಮತವಲ್ಲ. ಹಾ! ದೈವವೇ! ಏಕಾಂಗಿ ಯಾಗಿ ಜನಗಳ ಕಣ್ಣಿಗೆ ಕಾಣಿಸದೆ ಜೀವಿಸಬೇಕೆಂಬ ವಿಧಿಯು ನನ್ನ ಭಾಗಕ್ಕೆ ಬಂದಿರಲು ನಾನೇನು ಮಾಡಬಲ್ಲೆನು! ಈ ದ್ವೀಪವನ್ನು ಬಿಟ್ಟ ಮೇಲೆ ಮತ್ತಾವ ಸ್ಥಳವು ನಮಗೆ ವಾಸಯೋಗ್ಯವಾಗಿರುವುದೋ ನನ್ನ ಮನಸ್ಸಿಗೇನೂ ಹೊಳೆ ಯಲಿಲ್ಲ.

**ಇಂದಿರೆ—** ತಂದೆಯೇ! ನೀವು ಇಷ್ಟು ಬಗೆಯಾಗಿ ಯೋಚಿಸುವುದನ್ನು ನೋಡಿದರೆ ನನ್ನ ಮನಸ್ಸಿನಲ್ಲಿ ಏನೇನೋ ಪ್ರಶ್ನೆಗಳು ಹುಟ್ಟುವುವು. ನೀವು ಕೊಟ್ಟಿರುವ ಸಲುಗೆಯನ್ನುಪಯೋಗಿಸಿ ಅವುಗಳನ್ನು ನಿಮ್ಮ ಸನ್ನಿಧಿಯಲ್ಲಿ ಉಸುರುವೆನು. ನಿಮ್ಮ ಮುಖಲಕ್ಷಣವನ್ನು ನೋಡಿದರೆ ದೊಡ್ಡವಂಶಜ ರೆಂತಲೂ, ಯುದ್ಧವೀರರೆಂತಲೂ, ಆವುದೋ ಒಂದು ವಿಪತ್ತಿಗೊಳಗಾಗಿರು ವಂತೆಯೂ ಗೋಚರವಾಗುವುದು. ನನ್ನ ತಾಯಿಯು ಲೋಕಾಂತರಗತಳಾದ ಕಾರಣ ಆ ದುಃಖವನ್ನು ಸಹಿಸಲಾರದೆ ಚಿಕ್ಕ ಮಗುವಾದ ನನ್ನನ್ನು ಕಾಪಾ ಡುವುದಕ್ಕಾಗಿ ಇಲ್ಲಿಗೆ ಬಂದು ನಿಂತಿರುವಂತೆ ತೋರುತ್ತಿದೆ. ಇಲ್ಲಿಯವರೆಗೂ ನಾನು ಚಿಕ್ಕವಳಾಗಿದ್ದುದರಿಂದ ಈ ಪ್ರಶ್ನೆಗಳು ನನಗೆ ತೋರಲೂ ಇಲ್ಲ; ನೀವೂ ನನಗೆ ಆವ ಸಂಗತಿಯನ್ನೂ ಹೇಳಲಿಲ್ಲ. ಈಗ ಯುಕ್ತವಯಸ್ಕಳಾಗಿರುವೆನಾ ದುದರಿಂದ ಈ ವಿಷಯಗಳನ್ನು ನನಗೇಕೆ ಹೇಳಬಾರದು?

**ಮಿತ್ರದೇವ—** "ಅಮ್ಮಾ, ಇಂದಿರೆ! ನನ್ನ ಜೀವಿತವು ರಹಸ್ಯವಾಗಿರು ವುದೇ ಲೇಸು. ವಿಷತುಲ್ಯವಾದ ನನ್ನ ದುಃಖವು ಕೋಮಲವಾದ ನಿನ್ನಹೃದ ಯವನ್ನುಹೊಕ್ಕರೆ ಅದನ್ನುದಹಿಸುವುದೆಂಬ ಭೀತಿಯು ನನಗುಂಟಾಗಿರುವುದು. ನನ್ನ ಮುದ್ದಿನ ಮಗುವೆ! ನಿನ್ನಿಂದಲಲ್ಲವೇ ಅನಾಥನಾದ ಈ ಮಿತ್ರದೇವನು ಬದುಕಿರುವನು?"

ಎಂದು ಕಣ್ಣೀರು ಸುರಿಸುತ್ತಾ ತನ್ನ ಮಗುವನ್ನು ಅಪ್ಪಿಕೊಂಡನು. ಅಷ್ಟರಲ್ಲಿ ಆರೋ ಒಬ್ಬರು ಬರುತ್ತಿರುವ ಶಬ್ದವು ಕೇಳಿಸಿತು. ಒಬ್ಬ ದಾಸಿಯು ಓಡಿ ಬಂದು "ಸ್ವಾಮಿ! ಚಂಡಸೇನನ ಕಾರಾಗೃಹದಲ್ಲಿದ್ದ ರಾಜನು ಮರಣಾ ವಸ್ಥೆಯಲ್ಲಿರುವುದರಿಂದ ಅವನನ್ನು ಹಡಗಿನಲ್ಲೇರಿಸಲು ಸಾಧ್ಯವಿಲ್ಲದೆ ನಮ್ಮ ತೋಟದವರ ಸಹಾಯದಿಂದ ಆತನ ಸೇವಕನು ಆತನನ್ನು ಇಲ್ಲಿಗೆ ತಂದಿರುವನು. ನಿಮ್ಮ ಆಜ್ಞೆಯನ್ನು ನಿರೀಕ್ಷಿಸಿಕೊಂಡು ದ್ವಾರದಲ್ಲಿರುವನು" ಎಂದು ವಿಜ್ಞಾ ಪಿಸಿದಳು.

**ಮಿತ್ರದೇವ—** "ಮಗಳೇ! ನೀನು ಆವ ವಿಷಯದಲ್ಲಿಯೂ ವ್ಯಥೆಪಡಬೇಡ.

ಇಷ್ಟು ಕಾಲದವರೆಗೂ ನಮ್ಮನ್ನು ಕಾಪಾಡಿಕೊಂಡು ಬಂದ ಸ್ವಾಮಿಯು ಈಗಲೂ ಕಾಪಾಡುವನು. ಬಾಗಿಲಲ್ಲಿ ಬಂದಿರುವ ರೋಗಿಗೆ ಚಿಕಿತ್ಸಾದ್ಯುಪಚಾರಗಳನ್ನು ಮಾಡುವುದು ನಮ್ಮ ಮುಖ್ಯ ಕರ್ತವ್ಯವು. ಎಂತಹ ಪ್ರಭುವಿಗೆ ಎಂತಹ ದೆಸೆಬಂದಿರುವುದೋ ನೋಡು! ಈಶ್ವರನು ಆತನನ್ನು ಈಗ ನನ್ನ ಸಂರಕ್ಷಣೆಯಲ್ಲಿ ತಂದು ಬಿಟ್ಟಿರುವನು. ಇದೆಲ್ಲವೂ ಆ ಮಹಾಮಹಿಮನ ವಿಲಾಸವಲ್ಲವೇ? ಹೇ ಕೃಪಾಸಿಧೆ! ನಾನು ನಿರಪರಾಧಿ. ಪುರಾಕೃತಕರ್ಮದಿಂದ ಇಂತಹ ಬಂಧನದಲ್ಲಿರುವೆನು.'' ಎಂದು ಹೇಳಿಕೊಳ್ಳುತ್ತ ಸೇವಕನನ್ನು ಕರೆದು ಹೊರಗಿರುವ ರೋಗಿಯನ್ನು ವಿಶ್ರಾಂತಿಮಂದಿರಕ್ಕೆ ಕರೆದುಕೊಂಡು ಬರಬೇಕೆಂದಾಜ್ಞಾಪಿಸಿದನು.

ತಂದೆಯ ಮಾತುಗಳನ್ನು ಕೇಳುತ್ತಿದ್ದ ಇಂದಿರೆಗೆ ಮಾಳವೇಶನನ್ನು ಉಪಚರಿಸುವ ಭಾಗ್ಯವು ಉಂಟಾದುದಕ್ಕೆ ತುಂಬ ಸಂತೋಷವಾಯಿತು. ಆದರೆ ತನ್ನ ತಂದೆಯು ರಹಸ್ಯವೇಸಿರಬಹುದೆಂಬ ಯೋಚನೆಯು ನಿಲ್ಲಲಿಲ್ಲ. ಗೃಹಕೃತ್ಯವನ್ನು ವಿಚಾರಿಸಿಕೊಳ್ಳಲು ಹೊರಟುಹೋದಳು.

# ೪ನೆಯ ಅಧ್ಯಾಯ

ಮಿತ್ರದೇವನ ಆಜ್ಞೆಯಂತೆ ಲಲಿತಕುಮಾರನನ್ನು ವಿಶ್ರಾಂತಿಮಂದಿರದಲ್ಲಿ ಮೆತ್ತನೆಯ ಹಾಸಿಗೆಯ ಮೇಲೆ ಮಲಗಿಸಿದರು. ಅವನಿಗೆ ಪ್ರಜ್ಞೆಯೇ ಇರಲಿಲ್ಲ. ಆಹಾರವಿಲ್ಲದೆ ಶೋಷಬಂದಿದ್ದಿತು. ತೀವ್ರವಾದ ಜ್ವರವಿದ್ದಿತು. ಐದು ನಿಮಿಷಗಳಲ್ಲಿ ಆಹಾರವು ಸಿದ್ಧವಾಯಿತು. ಮಿತ್ರದೇವನು ಪಕ್ಕದಲ್ಲಿಯೇ ನಿಂತು ಕೊಂಚಕೊಂಚವಾಗಿ ಹಾಲನ್ನು ಕುಡಿಸಿದನು. ಇಂದಿರೆಯು ಹಾಲನ್ನು ತನ್ನ ತಂದೆಗೆ ತಂದುಕೊಡುತ್ತಿದ್ದಳು. ಅವಶ್ಯವಿದ್ದಷ್ಟು ಹಾಲನ್ನು ಕುಡಿಸಿ ಚೆನ್ನಾಗಿ ಹೊದ್ದಿಕೆಯನ್ನು ಹೊದ್ದಿಸಿ ಕಾವಲಗಾರನನ್ನಿಟ್ಟು ಮಿತ್ರದೇವನು ಹೊರಟುಹೋದನು. ಇಂದಿರೆಯು ಆಗಾಗ ಔಷಧಪಥ್ಯಗಳನ್ನು ನೋಡಿಕೊಳ್ಳುತ್ತಾ ರೋಗಿಯನ್ನು ಉಪಚರಿಸುತ್ತಿದ್ದಳು.

ಹೀಗೆ ಕೆಲವು ದಿನಗಳು ಔಷಧಪಥ್ಯಗಳು ನಡೆದ ತರುವಾಯ ಲಲಿತಕುಮಾರನಿಗೆ ಜ್ವರವು ತಗ್ಗಿತು. ಮೇಲಕ್ಕೇಳಲು ಇನ್ನೂ ಶಕ್ತಿಬಂದಿರಲಿಲ್ಲ. ಕಣ್ಣುಗಳನ್ನು ಮಾತ್ರ ತೆರೆಯುತ್ತಿದ್ದನು. ಒಂದು ದಿನ ಪ್ರಾತಃಕಾಲ ನಾಲ್ಕು

ದಿಕ್ಕುಗಳನ್ನೂ ನೋಡಿ "ನಾವಿರುವ ಸ್ಥಳವಾವುದು?" ಎಂದು ಮೆಲ್ಲಗೆ ಉಸುರಿದನು. ಸರ್ವದಾ ತನ್ನ ಸ್ವಾಮಿಯ ಸಮೀಪದಲ್ಲಿಯೇ ಇದ್ದು ಸಮಯೋಚಿತೋಪಚಾರಗಳನ್ನು ಮಾಡುತ್ತಿದ್ದ ಶಂಬರನು ದೊಡ್ಡ ನಿಕ್ಷೇಪವನ್ನು ಕಂಡಂತೆ ಭಾವಿಸಿ "ಮಹಾಪ್ರಭೋ! ನಾವು ಈಗ ಸುರಕ್ಷಿತವಾದ ಒಂದು ವಿಶ್ರಾಂತಿಮಂದಿರದಲ್ಲಿದ್ದೇವೆ. ಕಾರಾಗೃಹವಾಸವು ಯಾವಾಗಲೋ ತಪ್ಪಿ ಹೋಯಿತು. ತಾವು ಸ್ವಲ್ಪ ಚೇತರಿಸಿಕೊಂಡ ತರುವಾಯ ಎಲ್ಲವನ್ನೂ ಹೇಳುವೆನು"— ಎಂದು ಪ್ರತ್ಯುತ್ತರಕೊಟ್ಟನು.

**ಲಲಿತಕುಮಾರನು**—'ಆಪ್ತಬಂಧೋ! ಕಾರಾಗೃಹದಲ್ಲಿ ಕೂಡ ನನ್ನನ್ನು ಎಡಬಿಡದೇ ಅನೇಕ ಕಷ್ಟಗಳನ್ನು ಸಹಿಸಿಕೊಂಡು ಕಾಪಾಡುತ್ತ ಬಂದಿರುವೆ. ನಿನ್ನ ಮಹೋಪಕಾರವನ್ನು ನಾನೆಂದಿಗೂ ಮರೆಯಲಾರೆನು'—ಎಂದನು. ಇಷ್ಟರಲ್ಲಿ ವೈದ್ಯನು ಬಂದು ಲಲಿತಕುಮಾರನ ನಾಡಿಯನ್ನು ಪರೀಕ್ಷಿಸಿ ಔಷಧಸೇವನೆ ಮಾಡಿಸಿ ಕೀಲುಕೀಲುಗಳಿಗೆ ತೈಲವನ್ನು ಹಚ್ಚುವಂತೆ ವಿಧಿಸಿದನು. "ರಾಜಪುತ್ರ! ನಿಮಗಿನ್ನು ಮೇಲೆ ಭಯವಿಲ್ಲ. ಕ್ಷಿಪ್ರದಲ್ಲಿಯೇ ಪೂರ್ಣಾರೋಗ್ಯವನ್ನು ಹೊಂದುವಿರಿ" ಎಂದು ಹೇಳಿ ವೈದ್ಯನು ಹೊರಟುಹೋದನು. ಸೇವಕರು ಲಲಿತಕುಮಾರನಿಗೆ ವೈದ್ಯನ ಅಪ್ಪಣೆಯಂತೆ ತೈಲವನ್ನು ಲೇಪನಮಾಡಿ ಉಷ್ಣೋದಕ ಸ್ನಾನವನ್ನು ಮಾಡಿಸಿ ಶುಭ್ರವಾದ ವಸ್ತ್ರಗಳನ್ನು ತೊಡಿಸಿದರು. ಲಲಿತಕುಮಾರನಿಗೆ ಸ್ವಲ್ಪ ಸ್ವಸ್ಥತೆಯುಂಟಾದುದರಿಂದ ಶುಭ್ರವಾದ ಹಾಸಿಗೆಯ ಮೇಲೆ ದಿಂಡಿಗೆ ಒರಗಿಕೊಂಡು ಕುಳಿತುಕೊಳ್ಳಲಾರಂಭಿಸಿದನು. ಪ್ರತಿದಿನವೂ ಕಾಲಕಾಲಕ್ಕೆ ಕೊಡುವ ಔಷಧಪಥ್ಯಗಳಿಂದಲೂ, ಉಪಚಾರಗಳಿಂದಲೂ ರಾಜಕುಮಾರನು ಆರೋಗ್ಯವಂತನಾದನು. ಒಂದು ದಿನ ಮಧ್ಯಾಹ್ನ ಸೇವಕನೊಬ್ಬನು ಲಲಿತಕುಮಾರನ ಬಳಿಗೆ ಬಂದು "ಮಹಾಪ್ರಭೋ! ನಮ್ಮ ಯಜಮಾನನು ತಮ್ಮನ್ನು ನೋಡಲಿಚ್ಛೈಸಿ ತಮ್ಮ ಪ್ರಸ್ತುತ ದೇಹಸ್ಥಿತಿಯನ್ನು ವಿಚಾರಿಸಿಕೊಂಡು ಬರುವಂತೆ ಆಜ್ಞಾಪಿಸಿರುವನು" ಎಂದು ವಿಜ್ಞಾಪಿಸಿದನು.

**ಲಲಿತಕುಮಾರನು**— ಅಯ್ಯಾ! ನನ್ನನ್ನು ನೋಡಬೇಕೆಂಬ ಕುತೂಹಲವು ನಿಮ್ಮ ಯಜಮಾನನಿಗೆ ಉಂಟಾಗಿರುವುದು ನನ್ನ ಭಾಗ್ಯವೆಂತಲೇ ಎಣಿಸುವೆನು. ನಿರ್ವ್ಯಾಜಕರುಣಾನಿಧಿಯಾದ ಆ ಮಹನೀಯನ ಅನುಗ್ರಹದಿಂದಲ್ಲವೇ ನನಗೆ ಪುನರ್ಜೀವವುಂಟಾಗಿರುವುದು! ಆ ಪುಣ್ಯಚರಿತನ ಕೃಪೆಯಿಂದ ಆವ ರೋಗವು ತಾನೇ ಗುಣವಾಗಲಾರದು? ನಾನು ಆರೋಗ್ಯವಾಗಿಯೇ ಇರುವೆನಲ್ಲದೆ ಆ ಮಹನೀಯನ ಪಾದದರ್ಶನಕ್ಕಾಗಿ ಕಾದಿರುವೆನೆಂದು ಬಿನ್ನವಿಸು'— ಎಂದನು.

**ಸೇವಕ—** ಅಪ್ಪಣೆಯಂತೆ ತಿಳಿಸುವೆನು. ನಮ್ಮ ಸ್ವಾಮಿಯು ಬಹಳ ಉಪಕಾರಿ. ತನ್ನ ಸ್ವಂತ ಕೆಲಸಗಳನ್ನೂ ಲಕ್ಷಿಸದೆ ಸರ್ವದಾ ಪರೋಪಕಾರ ದಲ್ಲಿಯೇ ದೃಷ್ಟಿಯುಳ್ಳವನು. ತಮಗೆ ಪ್ರಜ್ಞೆಬರುವವರೆಗೂ ಇಲ್ಲಿಯೇ ತಮ್ಮ ಪಾರ್ಶ್ವದಲ್ಲಿದ್ದು ನಾನಾ ಚಿಕಿತ್ಸೆಗಳನ್ನು ಮಾಡಿದನು,— ಎಂದು ಹೇಳಿ ಸೇವ ಕನು ಹೊರಟುಹೋದನು.

ಚಾರನಿಂದ ಲಲಿತಕುಮಾರನ ಸಂದೇಶವನ್ನು ಕೇಳಿದ ಮಿತ್ರದೇವನು ತತ್‌ಕ್ಷಣವೇ ವಿಶ್ರಾಂತಿಮಂದಿರಕ್ಕೆ ಬಂದನು. ದೂರದಿಂದ ಅವನನ್ನು ನೋಡು ತ್ತಿದ್ದ ರಾಜಪುತ್ರನಿಗೆ ಅವನ ದೀರ್ಘಕಾಯವೂ ಮುಖದ ತೇಜಸ್ಸೂ ಭಯಭಕ್ತಿ ಗಳನ್ನುಂಟುಮಾಡಿದುದು ಮಾತ್ರವಲ್ಲದೆ ಇಂತಹ ಮಹನೀಯನು ಕಳ್ಳಕಾಕ ರಿರುವ ಈ ವಿಜನಪ್ರದೇಶದಲ್ಲಿ ವಾಸಿಸಲು ಕಾರಣವೇನಿರಬಹುದೆಂದು ಶಂಕಿಸಿ ದನು. ಮತ್ತು ನಡೆನುಡಿಗಳನ್ನು ನೋಡಿದರೆ ರಾಜ್ಯಾಧಿಕಾರಿಯಂತೆ ಕಾಣು ವನು. ಈತನ ನಿರ್ಗಮನದಿಂದ ಆವ ದೇಶವು ದೌರ್ಭಾಗ್ಯದೆಸೆಗೆ ಬಂದಿರುವುದೋ ತಿಳಿದುಕೊಳ್ಳಬೇಕು— ಎಂದು ತನ್ನಲ್ಲಿ ತಾನು ಭಾವಿಸಿದನು.

ಮಿತ್ರದೇವನು ಲಲಿತಕುಮಾರನ ಬಳಿಗೆ ಬಂದೊಡನೆಯೇ ಅವನು ಆಸನ ದಿಂದೆದ್ದು, 'ಪ್ರಾಣದಾಯಕಾ! ನಿನಗೆ ನನ್ನ ಮನಃಪೂರ್ವಕವಾದ ವಂದನೆಗ ಳನ್ನರ್ಪಿಸುವೆನು'— ಎಂದುಸುರಿದನು.

**ಮಿತ್ರದೇವ—** "ಮಾಳವೇಶಾ! ನಿನಗೆ ಆರೋಗ್ಯಭಾಗ್ಯವು ಹೆಚ್ಚಲಿ! ದೇಶಾಧೀಶನಾದುದರಿಂದ ನಿನಗೆ ನಾನು ಅಭಿವಂದಿಸುವೆನು. ನಿನಗೆ ಯತ್ಕಿಂಚಿತ್ ಚಿಕಿತ್ಸೆಯನ್ನು ಮಾಡಲು ನನಗೆ ದೊರೆತ ಅವಕಾಶಕ್ಕಾಗಿ ತುಂಬಾ ಬಾಧ್ಯ ನಾಗಿರುವೆನು. ಪೂರ್ಣಾರೋಗ್ಯವುಂಟಾಗುವವರೆಗೂ ನೀನು ಈ ನನ್ನ ಆಶ್ರ ಮದಲ್ಲಿಯೇ ಇರಬಹುದು. ಕಾಲಯಾಪನೆಗಾಗಿ ಗ್ರಂಥಗಳನ್ನು ಕಳುಹಿಸು ವೆನು." ಎಂದು ಹೇಳಿ ಹೊರಟುಹೋದನು.

ಮಾರನೆಯ ದಿನ ತನ್ನ ಮಂಚವನ್ನು ಕಿಟಕಿಯ ಪಕ್ಕದಲ್ಲಿ ಹಾಕಿಸಿಕೊಂಡು ಗ್ರಂಥಾವಲೋಕನವನ್ನು ಮಾಡುತ್ತ ಕುಳಿತಿದ್ದನು. ಇದಿರಿನ ತೋಟ ದಲ್ಲಿ ಯಾರೋ ತಿರುಗುತ್ತಿದ್ದಂತೆ ಕಂಡನು. ದೃಷ್ಟಿಸಿ ನೋಡಿದನು. ವನ ದೇವತೆಯಂತೆ ಒಬ್ಬ ಬಾಲೆಯು ಗೋಚರಿಸಿದಳು. ಶಂಬರನನ್ನು ಕರೆದು ನವಯೌ ವನಸಂಪನ್ನೆಯಾದ ಈ ಬಾಲಾಮಣಿಯು ಯಾರಿರಬಹುದೆಂದು ಕೇಳಿದನು.

**ಶಂಬರ—** ದೇವಾ! ಚಂಡಸೇನನ ಕೋಟೆಯ ಭೈರವಾಲಯಕ್ಕೆ ಬಂದು ತಮ್ಮನ್ನು ಮೃತ್ಯುಮುಖದಿಂದ ತಪ್ಪಿಸಿದ ಮಹನೀಯಳೇ ಇವಳು.

**ಲಲಿತಕುಮಾರನು—** ಆಹಾ! ನಾನೆಷ್ಟು ಮಂದಮತಿಯಾದೆನು!

ನನಗೆ ಪ್ರಾಣದಾನವನ್ನು ಮಾಡಿದ ಅದೃಷ್ಟದೇವತೆಯನ್ನೇ ಮರೆತಿರುವೆನಲ್ಲಾ! ರಾಜರು ಮಂದಮತಿಗಳೆಂದು ಹೇಳುವ ಮಾತು ಸತ್ಯವಾಗಿರುವುದು. ಆದರೆ, ಆ ದಿನ ನನ್ನ ಪ್ರಾಣದಾಯಕಳನ್ನು ಚೆನ್ನಾಗಿ ದೃಷ್ಟಿಸಿ ನೋಡುವುದಕ್ಕೂ ಅವಕಾಶವಿಲ್ಲದಂತೆ ನನಗೆ ಪ್ರಜ್ಞೆತಪ್ಪಿಹೋಗಿದ್ದಿತು. ದೇಹಬಾಧೆಯೂ ಹೆಚ್ಚಾಗಿದ್ದಿತು. ಈ ಮನೆಯ ಯಜಮಾನನನ್ನೂ ಈ ಹುಡುಗಿಯನ್ನೂ ನೋಡಿದರೆ, ಇವಳು ಆತನ ತನುಜಾತೆಯಾಗಿರಬಹುದೆಂದು ತೋರುತ್ತದೆ. ಇವಳ ನೀಲ ಕುಂತಲಗಳು, ಪದ್ಮನೇತ್ರಗಳು, ತೀಡಿದಂತಿರುವ ನೇತ್ರಚಾಪಗಳು ಮಿತ್ರದೇವನನ್ನು ಹೋಲಿರುವುವು. ಇವಳ ದೇಹಕಾಂತಿಯು ಮಾತ್ರ ವ್ಯತ್ಯಾಸವಾಗಿರುವುದು. ಸರ್ವಾಂಗಸುಂದರಿಯಾದ ಈ ಬಾಲೆಯು ಸೌಭಾಗ್ಯಲಕ್ಷ್ಮಿಯಂತೆ ಈ ಪ್ರದೇಶದಲ್ಲಿರುವುದರಿಂದಲೇ ಇಲ್ಲಿನ ಭೂಮಿಯು ಇಷ್ಟು ತೃಣಜಲಸಮೃದ್ಧಿಯಾಗಿರುವುದು– ಎಂದು ಹೇಳುತ್ತಿರುವಲ್ಲಿಯೇ ಆ ಬಾಲೆಯು ಹೊರಟುಹೋದಳು. ಅವನಮ ನಸ್ಸಿನಲ್ಲಿ ಸಂಕಲ್ಪಪರಂಪರೆಗಳು ಅಲೆಗಳಂತೆ ಬರಲಾರಂಭಿಸಿದವು. ಒಬ್ಬ ದಾಸಿಯು ಅವನ ಸಮೀಪಕ್ಕೆ ಬಂದು ಪುಷ್ಪಮಂಜರಿಯನ್ನರ್ಪಿಸಿದಳು. ಆದರ ಪೂರ್ವಕವಾಗಿ ಸ್ವೀಕರಿಸಿದ ರಾಜಕುಮಾರನು "ಇದನ್ನು ಕಳುಹಿಸಿಕೊಟ್ಟ ದೇವಿಗೆ ನನ್ನ ಅಭಿವಂದನೆಗಳನ್ನರ್ಪಿಸು" ಎಂದು ಹೇಳಿದನು.

ನಿಶೀಥಸಮಯ. ಭೋಜನವನ್ನು ಮಾಡಿಕೊಂಡು ಲಲಿತಕುಮಾರನು ತನ್ನ ವಿಶ್ರಾಂತಿನಿಲಯಕ್ಕೆ ಬಂದನು. ಮಂಚದ ಪಕ್ಕದಲ್ಲಿದ್ದ ಮೇಜಿನ ಮೇಲೆ ಒಂದು ಬೆಳ್ಳಿಯ ಪಾತ್ರೆಯಲ್ಲಿ ನೀರೂ ಅದರಲ್ಲಿ ಗುಲಾಬಿಹೂವಿನ ಪುಷ್ಪಗುಚ್ಛವೂ ಇದ್ದುವು. ರಾಜನು ನೋಡಿ ಸಂತೋಷಿಸಿದನು. ಆ ಪುಷ್ಪಗುಚ್ಛದಿಂದ ಹೊರಡುತ್ತಿದ್ದ ಪರಿಮಳವು ಅವನಿಗೆ ಪರಮಾನಂದವನ್ನುಂಟುಮಾಡಿತು. ಇಷ್ಟರಲ್ಲಿಯೇ, ಹೊರಗೆ ಯಾರೋ ಹೆಂಗಸು ನಡೆಯುತ್ತಿರುವ ಶಬ್ದವು ಕೇಳಿಸಿತು. ಕಿಟಿಕಿಯ ಸಮೀಪದಲ್ಲಿ ನಿಂತು ನೋಡುತ್ತಿದ್ದನು. ಇಂದಿರೆಯು ಗೋಚರವಾದಳು.

**ಇಂದಿರೆ—** ಜನಕಾ! ಹೊರಕ್ಕೆ ಬನ್ನಿ. ಇಲ್ಲಿ ಗಾಳಿ ಬಹಳ ಸುಖವಾಗಿ ಬೀಸುತ್ತಿರುವುದು.

ಇಂದಿರೆಯ ಆಹ್ವಾನವನ್ನು ಪುರಸ್ಕರಿಸಿ ಮಿತ್ರದೇವನು ಹೊರಕ್ಕೆ ಬಂದನು. ಅವರಿಬ್ಬರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಂಡರು. ಸಂಭಾಷಣೆಗೆ ಆರಂಭವಾಯಿತು. ಕುತೂಹಲಾವಿಷ್ಟನಾದ ಲಲಿತಕುಮಾರನು ಅವರ ಸಂಭಾಷಣೆಯನ್ನು ಕೇಳಲಿಚ್ಛೈಸಿ ತದೇಕನಿಷ್ಠನಾದನು.

**ಇಂದಿರೆ—**ತಂದೆಯೇ! ನೀವು ಬಹಳ ಕೃಶಿಸಿರುವಂತೆ ತೋರುತ್ತದೆ. ಕಾರಣ

ವೇನೋ ತಿಳಿಯದು. ಮತ್ತೇನಾದರೂ ವ್ಯಥೆಯುಂಟಾಗಿರುವುದೇ? ಅಥವಾ ಚಂಡಸೇನನ ಚಿಂತೆಯಿಂದಲೇ ಹೀಗಾಗಿರುವಿರೋ?

**ಮಿತ್ರದೇವ—** ಅಮ್ಮಾ ಇಂದಿರೆ! ನನಗೆ ಹೊಸದಾಗಿ ಯಾವ ವ್ಯಥೆಯೂ ಉಂಟಾಗಿರುವುದಿಲ್ಲ. ನಮ್ಮ ಮನೆಗೆ ಬಂದಿರುವ ರಾಜಪುತ್ರನನ್ನು ನೋಡಿ ನನಗೆ ಒಂದು ಸಂಗತಿ ಜ್ಞಾಪಕಕ್ಕೆ ಬಂದಿತು. ಆ ವಿಷಯವನ್ನು ಮಾತ ನಾಡುವುದರಿಂದ ಉಪಯೋಗವಿಲ್ಲ. ಯಾರ ಕಣ್ಣಿಗೂ ಬೀಳದೆ ಈ ದ್ವೀಪದ ಲ್ಲಿಯೇ ಮರೆಯಾಗಿರುವುದು ನನಗೆ ಕ್ಷೇಮಕರವು. ವಿಧಾತನು ಹಾಗೆಯೇ ವಿಧಿಸಿರುವಂತೆ ಕಾಣುವುದು. ಆದರೆ, ನಿನ್ನ ಗತಿಯೇನು ?— ಎಂದು ನಿಟ್ಟು ಸಿರುಬಿಟ್ಟನು.

ಅರಸನನ್ನು ನೋಡಿ, ಒಂದು ಸಂಗತಿ ಜ್ಞಾಪಕಕ್ಕೆ ಬಂದಿತೆಂದು ತಂದೆಯು ನುಡಿದ ಮಾತು ಇಂದಿರೆಯ ಹೃದಯಕುಹರವನ್ನು ಹೊಕ್ಕಿತು. ನೀರಸಳಾದಳು. ಆ ಸಂಗತಿಯೇನಿರಬಹುದೆಂದು ಊಹಿಸುತ್ತಿರಲು ಅವಳ ಮನೋಗಮನವನ್ನು ತಿರುಗಿಸಬೇಕೆಂದು ಮಿತ್ರದೇವನು "ಮಗು! ಲಲಿತಕುಮಾರನಿಗೆ ಈ ದಿನ ದೇಹ ಸ್ಥಿತಿ ಹೇಗಿರುವುದೆಂಬುದನ್ನು ವಿಚಾರಮಾಡಿಕೊಂಡೆಯಾ?"—ಎಂದು ಕೇಳಿದನು.

**ಇಂದಿರೆ—** ಆಗಲೇ ವಿಚಾರಿಸಿದೆನು. ಆತನು ಸುಖವಾಗಿಯೇ ಇದ್ದಾನೆ. ಬಲಹೀನತೆ ಮಾತ್ರ ಇನ್ನೂ ಹೋಗಿಲ್ಲ. ಆರೋಗ್ಯವು ಹೆಚ್ಚುತ್ತಿ ರುವುದೆಂದು ವೈದ್ಯನು ಹೇಳಿದನು. ಅಭ್ಯಂಗ ಸ್ನಾನವಾಯಿತು. ಈಗ ಪ್ರತಿ ದಿನವೂ ಆತನೇ ಸ್ನಾನಮಾಡುತ್ತಿರುವನು. ಕಾಲಕಾಲಕ್ಕೂ ಔಷಧ ಪಥ್ಯಗಳು ಸರಿಯಾಗಿ ನಡೆಯುತ್ತಿವೆ. ಇನ್ನೂ ಹೊರಗೆ ಸಂಚರಿಸುವುದಿಲ್ಲ.

ಈ ಮಾತುಗಳನ್ನು ಕೇಳುತ್ತಿದ್ದ ಲಲಿತಕುಮಾರನು, "ಈ ಬಾಲೆಯು ಎಷ್ಟು ವಿನಯಸಂಪತ್ತುಳ್ಳವಳು! ಎಂತಹ ಗೌರವ! ಈಗ ನಿಜವಾಗಿ ನಾನೇ ಧನ್ಯನು. ಈ ದೇವಿಯು ನನ್ನನ್ನು ಎಷ್ಟು ಉಪಚರಿಸುತ್ತಾಳೆ! ಈಶ್ವರಾ! ಇದು ಕೂಡಾ ನಿನ್ನ ಅನುಗ್ರಹನೇ!" ಎಂದು ಹೇಳಿಕೊಳ್ಳುತ್ತಾ ಹಾಸಿಗೆಯಲ್ಲಿ ಮಲಗಿ ನಿದ್ರೆ ಮಾಡಿದನು.

ಲಲಿತಕುಮಾರನಿಗೆ ಪೂರ್ಣಾರೋಗ್ಯವುಂಟಾಗಿ ಎಲ್ಲರೊಡನೆ ಸೇರಿ ಭೋ ಜನ ಮಾಡಿದ ದಿನವು ಹಬ್ಬವಾಗಿದ್ದಿತು. ಮಿತ್ರದೇವನ ಮನೆಯಲ್ಲಿ ತಾನೊಬ್ಬ ಆತ್ಮಬಂಧುವಿನಂತಿದ್ದು ಸಕಲ ಸಮಾಚಾರಗಳನ್ನೂ ತಿಳಿದುಕೊಂಡನು. ಇಂದಿರೆ ಕಪಟವಿಲ್ಲದ ಹುಡುಗಿ. ತನ್ನ ಗೃಹಕಾರ್ಯಗಳನ್ನು ಜಾಣತನದಿಂದ ನಡೆಯಿಸು ತ್ತಿದ್ದಳು. ಲಲಿತಕುಮಾರನ ಸಂಗಡ ಒಂದುದಿನವಾದರೂ ಮಾತನಾಡಲಿಲ್ಲ ವಾದರೂ ಅವಳ ಉಪಚಾರದಿಂದಲೇ ಅವನ ರೋಗವು ಸ್ವಸ್ಥವಾಯಿತು.

# ನಾಲ್ಕನೆಯ ಅಧ್ಯಾಯ

ಒಂದು ದಿನ ಸಾಯಂಕಾಲ ಇಂದಿರೆಯು ಅಲಂಕರಿಸಿಕೊಂಡು ತೋಟದಲ್ಲಿ ತಿರುಗುತ್ತಿದ್ದಳು. ಸ್ವಚ್ಛವಾದ ಬಿಳಿಯ ಸೀರೆ. ನಾಗವೇಣಿಯಂತೆ ಶಿರಃಕೇಶಗಳು. ಲಲಾಟದಲ್ಲಿ ಅಷ್ಟಮಿಯ ಚಂದ್ರನನ್ನು ಹೋಲುವ ಕುಂಕುಮದ ರೇಖೆ. ಸಂಧ್ಯಾರಾಗದ ಪ್ರಭಾವದಿಂದ ಅತಿ ಚೆಲುವೆಯಾಗಿ ಕಾಣುತ್ತಿದ್ದಳು. ಹೆರಳಿನಲ್ಲಿ ಮುಡಿಸಿದ್ದ ಮಲ್ಲಿಗೆ ಹೂಗಳು ಘಮಘಮಿಸುತ್ತಿದ್ದುವು. ಅವಳೊಡನೆ ಮಲಯವತಿಯೂ ಇದ್ದಳು. ಪುಷ್ಪಗಳನ್ನಾರಿಸಿಕೊಂಡು ಒಂದು ಕಡೆ ಕುಳಿತು ಅವುಗಳನ್ನು ಗುಚ್ಛಗಳನ್ನಾಗಿ ಕಟ್ಟುತ್ತಾ "ಇದು ತನ್ನ ತಂದೆಗೆ, ಇದು ನಮ್ಮ ಮನೆಗೆ ಬಂದಿರುವ ಅರಸನಿಗೆ" ಎಂದು ಹೇಳುತ್ತಾ ಬೇರೆಬೇರೆಯಾಗಿ ಇಡುತ್ತಿದ್ದಳು. ಹಿಂಭಾಗದಲ್ಲಿ ಯಾರೋ ಒಬ್ಬ ಮನುಷ್ಯನು ಬರುತ್ತಿರುವ ಶಬ್ದವು ಕೇಳಿಸಿತು. ಚಕಿತಳಾಗಿ ಹಿಂತಿರುಗಿ ನೋಡಿದಳು. ಲಲಿತಕುಮಾರನು ಬರುತ್ತಿದ್ದನು. ಇಂದಿರೆಯು ಲಜ್ಜೆಯಿಂದ ತಲೆಬಾಗಿಸಿದಳು. ಲಲಿತಕುಮಾರನು ಸಮೀಪದಲ್ಲಿದ್ದ ಶಿಲಾವೇದಿಕೆಯಲ್ಲಿ ಕುಳಿತುಕೊಂಡನು. ಸಂಭಾಷಣೆಗೆ ಉಪಕ್ರಮಿಸಿದನು. "ದೇವೀ! ನಿನ್ನ ಕೃಪೆಯಿಂದ ನಾನು ಎಂದಿನಂತೆ ಆರೋಗ್ಯವಂತನಾದೆನು. ಪ್ರಥಮದಲ್ಲಿ ನನಗೆ ಪ್ರಾಣದಾನಮಾಡಿದೆ. ಆ ಮೇಲೆ ನನ್ನ ದೇಹರುಜೆಯನ್ನು ಹೋಗಲಾಡಿಸಲು ನಾನಾವಿಧವಾಗಿ ಉಪಚರಿಸಿದೆ. ಯಾವಾಗಲೂ ನನಗೆ ಉಪಚರಿಸಲು ಬೇಸರಗೊಳ್ಳಲಿಲ್ಲ. ನಿನಗೆ ನಾನು ಏನು ಪ್ರತ್ಯುಪಕಾರ ಮಾಡಬಹುದೋ ನಾನರಿಯೆ. ಈ ತನುವು ನಿನ್ನದು. ನನ್ನಿಂದ ಯಾವ ಸೇವೆಯನ್ನು ಮಾಡಿಸಿಕೊಳ್ಳಬೇಕೆಂದರೂ ನಾನು ಸದಾ ಸಿದ್ಧನಾಗಿರುವೆನು. ಮಹನೀಯನಾದ ನಿನ್ನ ಪಿತನ ಸದ್ಗುಣಸಂಪತ್ತಿಯನ್ನು ನಾನು ವರ್ಣಿಸಲಾರೆನು. ಅನುಜ್ಞೆಯಿತ್ತರೆ ನಾನು ನನ್ನ ರಾಜ್ಯಕ್ಕೆ ತೆರಳುವೆನು. ಯಾವಾಗ ಬೇಕಾಗಿದ್ದರೂ ಬರಲು ಸಿದ್ಧನಾಗಿರುತ್ತೇನೆ. ನನಗಾಗಿ ವಿಚಾರ ಪಡುತ್ತಿರುವ ನನ್ನ ಬಂಧುಗಳನ್ನು ಸಮಾಧಾನಪಡಿಸಬೇಕಾಗಿದೆ" ಎಂದು ನುಡಿದನು.

ಈ ಮಾತನ್ನು ಕೇಳಿ ಇಂದಿರೆಯು ಸ್ತಂಭೀಭೂತಳಾದಳು. ಕಣ್ಣರೆಪ್ಪೆಗಳನ್ನು ಕೂಡ ಅಲ್ಲಾಡಿಸದೆ ಅವನ ಮುಖವನ್ನೇ ನೋಡತೊಡಗಿದಳು. ಆಗ ಅವಳ ಕಣ್ಣುಗಳಲ್ಲಿ ಕೇವಲ ರಹಸ್ಯವಾದ ಪ್ರಣಯಭಾವವಿದ್ದಂತೆಯೂ ತನ್ನ ಗಮನ ಪ್ರಸ್ತಾವದಿಂದ ಅವಳ ಮನಸ್ಸು ನೊಂದಂತೆಯೂ ಗುರುತಿಸಿ ಲಲಿತಕುಮಾರನು ಪುನಃ ಮಾತನಾಡತೊಡಗಿದನು. "ಬಾಲೆಯೇ! ಕೋಪಗೊಳ್ಳಬೇಡ. ನನ್ನ ಅಭೀಷ್ಟವನ್ನು ತಿಳುಹಿಸಿದೆನು. ಇದರ ಮೇಲೆ ನಿನ್ನ ಚಿತ್ತ. ನೀನು ಕನ್ನೆಯೆಂಬುದನ್ನು ನಾನರಿತಿರುವೆನು. ಈ ನನ್ನ ಶರೀರವನ್ನು ಕಾಪಾಡಿದ ಬಾಧ್ಯತೆಯು ನಿನಗಿರುವುದು. ನಿನಗೆ ಸಮ್ಮತವಾದಲ್ಲಿ ನಿನ್ನನ್ನು ಪಾಣಿಗ್ರಹಣ

ಮಾಡಿಕೊಳ್ಳಲು ಸಿದ್ಧನಾಗಿದ್ದೇನೆ" ಎಂದು ಹೇಳಿ ಉತ್ಸಾಹಗೊಳಿಸಿದನು. ಇಂದಿರೆಯು ಪ್ರತ್ಯುತ್ತರವನ್ನೀಯದೆ ಸುಮ್ಮನಿದ್ದಳು.

**ಲಲಿತಕುಮಾರನು—** ಬಾಲೆ! ನನ್ನ ಮಾತು ನಿನಗೆ ಅಂಗೀಕಾರವಾಗಲಿಲ್ಲವೆ? ಏನು ಕಾರಣ ಪ್ರತ್ಯುತ್ತರವನ್ನು ಕೊಡದೆ ಸುಮ್ಮನಿರುವೆ? ನನ್ನ ಮನವನ್ನು ಕೂಡ ನಿನಗೆ ಅರ್ಪಿಸಿರುವ ನಾನು ನಿನ್ನ ಕೈಯನ್ನು ಹಿಡಿಯಲಾರದಷ್ಟು ಮಂದಭಾಗ್ಯನಾದರೆ ನನ್ನ ಜನ್ಮವೇ ನಿರರ್ಥಕವಾಗುವುದು.

ಈ ಮಾತನ್ನು ಕೇಳಿ ಇಂದಿರೆಯ ಹೃದಯವು ದಡದಡನೆ ಹೊಡೆದುಕೊಳ್ಳಲಾರಂಭಿಸಿತು. ಅವಳಿಗೆ ತಿಳಿಯದಂತೆಯೇ ನೇತ್ರಬಿಂದುಗಳು ಸುರಿಯುತ್ತಿದ್ದುವು. ಗದ್ಗದಕಂಠದಿಂದ "ರಾಜೇಂದ್ರಾ! ನನ್ನ ತಂದೆಗೆ ನಾನಲ್ಲದೆ ಮತ್ತೊಬ್ಬ ಬಂಧುವು ಈ ಲೋಕದಲ್ಲಿಲ್ಲ. ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ನನ್ನನ್ನು ಕಾಪಾಡಿಕೊಂಡು ಬಂದಿರುವನು. ಆತನ ಅನುಜ್ಞೆಯಿಲ್ಲದೆ ನಾನು ಯಾವ ಕೆಲಸವನ್ನೂ ಮಾಡಲಾರೆನು. ಈ ವಿಧವಾಗಿ ಅಸ್ವತಂತ್ರಳಾಗಿರುವ ನಾನು ನಿನಗೆ ಹೇಗೆ ಉತ್ತರವನ್ನು ಕೊಡಲಿ?"— ಎಂದಳು.

**ಲಲಿತಕುಮಾರನು—** ಹೃದಯೇಶ್ವರೀ! ನೀನು ಸತ್ಯವನ್ನು ನುಡಿದಿರುವೆ. ನಿನ್ನ ತಂದೆಯ ಅನುಜ್ಞೆಯು ಇಬ್ಬರಿಗೂ ಬೇಕು. ಪ್ರಸ್ತಾವಿಸಿ ತಿಳಿದುಕೊಳ್ಳುವುದಕ್ಕಾಗಿಯೇ ನಿನ್ನಲ್ಲಿ ಸೂಚಿಸಿರುವೆನು.

**ಇಂದಿರೆ**–ರಾಜೇಂದ್ರಾ! ನಾನೊಬ್ಬ ಸಾಮಾನ್ಯಗೃಹಸ್ಥನ ಮಗಳು. ತಾವು ದೇಶಾಧೀಶ್ವರರು. ನಮ್ಮಿಬ್ಬರಿಗೂ ಸಹಧರ್ಮಚಾರಿತ್ವವು ಸಾಧ್ಯವಾದೀತೇ?

**ಲಲಿತಕುಮಾರನು—** ಸುಂದರೀ! ನಾನಷ್ಟು ಮೂಢನೆಂದು ತಿಳಿಯಬೇಡ. ನಿನ್ನ ತಂದೆಯು ಒಬ್ಬ ದೊಡ್ಡವಂಶದವನೆಂದು ಆತನ ಮುಖಭಾವಗಳಿಂದಲೇ ತಿಳಿದುಕೊಂಡಿರುವೆನು. ವೇಷಭಾಷೆಗಳಿಂದ ಎಷ್ಟು ವ್ಯತ್ಯಾಸವಾಗಿ ಕಂಡರೂ ನೀನೊಬ್ಬ ಮಹಾರಾಣಿಯಾಗಿ ಇರತಕ್ಕವಳೇ ಹೊರತು ಸಾಮಾನ್ಯಳಲ್ಲ. ಒಂದು ವೇಳೆ ನೀನು ಸಾಮಾನ್ಯಳಾಗಿದ್ದರೂ ನನ್ನ ಪ್ರೀತಿಗೆ ಕುಂದುಂಟಾಗಲಾರದು. ಪ್ರೇಮವೆಂಬುದು ಕೇವಲ ಪವಿತ್ರತಮವಾದ ವಸ್ತುವು. ದಾಂಪತ್ಯದಲ್ಲಿ ಅದು ಪರಸ್ಪರ ಸುಗುಣಾವಲೋಕನೆಯಾಗಿ ಪರಿಣಮಿಸಿ ಗಂಡಹೆಂಡಿರನ್ನೂ ಎರಡು ದೇಹಗಳಲ್ಲಿರುವ ಏಕಚೈತನ್ಯವಾಗಿ ಮಾಡುವುದು. ಜಾತಿ, ಕುಲ, ಮತ ಭೇದಗಳು ಆಗಂತುಕಗಳೇ ವಿನಾ ಜೀವರುಗಳ ಪರಸ್ಪರಾನುರಾಗಕ್ಕೆ ಅಡ್ಡವಾಗಲಾರವು. ನಿನ್ನ ಮೇಲೆ ನನಗುಂಟಾಗಿರುವ ಪ್ರೇಮವು ನಿರುಪಾಧಿಕವಾದುದೆಂದು ತಿಳಿ. ನಿನ್ನ ಹೃದಯದಲ್ಲಿಯೂ ಅಂತಹ ಪ್ರೇಮವೇ ಹುಟ್ಟಿರುವುದೆಂದು ನಾನು ಭಾವಿಸುತ್ತೇನೆ. ಪ್ರೇಯಸೀ! ನಮ್ಮಿಬ್ಬ

ರಿಗೂ ಮಧ್ಯೆ ನಿಮ್ಮ ತಂದೆಯ ಅನುಜ್ಞೆಯ ಹೊರತು ಮತ್ತಾವ ಅಂತರಾಳವೂ ಇರುವುದಿಲ್ಲ. ನಾನು ಚಿಕ್ಕವನು. ನೀನು ಸಣ್ಣವಳು. ನಮ್ಮಿಬ್ಬರಿಗೂ ಈಗಾಗಲೇ ಬ್ರಹ್ಮಸಂಕಲ್ಪದಲ್ಲಿ ಪರಿಣಯವಾಗಿರುವುದು.

ಯಾವಾಗ ಚಂಡಸೇನನ ದುರ್ಗವನ್ನು ಪ್ರವೇಶಿಸಿ ಕಾಲಭೈರವಮೂರ್ತಿಗೆ ಬಲಿಯಾಗುತ್ತಿದ್ದ ಲಲಿತಕುಮಾರನನ್ನು ಸಖಿಯರಿಂದಿಗಳಿಂದ ಬಿಡಿಸಿದಳೋ ಆಗಲೇ ಇಂದಿರೆಯು ಆ ರಾಜಕುಮಾರನನ್ನು ತನ್ನ ಹೃದಯೇಶ್ವರನನ್ನಾಗಿ ವರಿಸಿದ್ದಳು. ಆದರೆ, ತನ್ನ ಮನೋಗತವನ್ನು ಪ್ರಕಾಶಪಡಿಸುವುದು ಸ್ತ್ರೀಯರಿಗೆ ಸ್ವಾಭಾವಿಕವಲ್ಲವಾದುದರಿಂದ ಲಲಿತಕುಮಾರನು ಆಡಿದ ಮಾತುಗಳಿಂದ ಉಬ್ಬಿದ ಇಂದಿರೆಯು ತನ್ನ ಭಾವವನ್ನು ಸಂವರಣಮಾಡಿಕೊಂಡಳು. ಅವನ ಮನಸ್ಸಿಗೆ ಕುಂದುಂಟಾಗುವುದೇನೋ ಎಂದು ಭಾವಿಸಿ "ರಾಜಕುಮಾರಾ! ನಿನ್ನ ದೃಢವಾದ ತೀರ್ಮಾನಕ್ಕೆ ನಾನು ತುಂಬಾ ಬಾಧ್ಯಳಾಗಿರುವೆನು. ಪರಮೇಶ್ವರನು ನಿನ್ನ ಈ ತೀರ್ಮಾನವನ್ನು ನೆರವೇರಿಸಬೇಕೆಂದು ಹಾರೈಸುವೆನು" ಎಂದು ನುಡಿದಳು.

**ಲಲಿತಕುಮಾರ—** ನನ್ನನ್ನು ಆವ ವ್ಯಾಜ್ಯದಿಂದಲೋ ಈ ದ್ವೀಪಕ್ಕೆ ಕರೆತಂದು ನಿನ್ನ ಸಹಾಯ ಸಂದರ್ಶನಗಳಿಗೆ ಅವಕಾಶವನ್ನುಂಟುಮಾಡಿದ ಪರಮೇಶ್ವರನಿಗೆ ನನ್ನ ಅನಂತಾನಂತ ನಮಸ್ಕಾರಗಳು. ದೇವೀ! ಆ ಮಹಾಮಹಿಮನೇ ನಮ್ಮನ್ನೇಕೆ ದಂಪತಿಗಳನ್ನಾಗಿ ಮಾಡಬಾರದು?

ಮಾರನೆಯ ದಿನ ರಾತ್ರಿ ಎಲ್ಲರೂ ಒಂದೆಡೆಯಲ್ಲಿಯೇ ಭೋಜನಮಾಡಿದರು.

**ಮಿತ್ರದೇವ—**ರಾಜೇಂದ್ರ! ನಿಮಗೆ ಆರೋಗ್ಯವಾದ ತರುವಾಯ ನಿಮ್ಮ ದೇಶದ ವೃತ್ತಾಂತವನ್ನು ವಿಚಾರಿಸಬೇಕೆಂದಿದ್ದೆನು. ಕೆಲಸಕಾರ್ಯಗಳ ಗಲಾಟೆಯಲ್ಲಿ ಅದನ್ನು ಮರತೇ ಹೋದೆನು. ನಿಮ್ಮ ಪ್ರಾಂತ್ಯದಲ್ಲಿ ಜನಗಳು ಸುಖವಾಗಿದ್ದಾರೆಯೇ? ಈಗ ಉದಯಪುರಿಗೆ ಅಧೀಶನಾರು? ಆತನಿಗೆ ಸಂತತಿಯುಂಟೇ? ಆತನ ಸ್ವಭಾವವೆಂತಹುದು? ನಿಮಗೆ ರಾಜ್ಯಾಭಿಷೇಕವಾಯಿತೇ? ನಿಮ್ಮ ಪಟ್ಟದ ರಾಣಿ ಯಾವ ರಾಜನ ಮಗಳು?

**ಲಲಿತಕುಮಾರ—** ಆರ್ಯನೇ? ಈಗ ಉದಯಪುರಿಯನ್ನು **ಮದನಪಾಲನು** ಆಳುತ್ತಿರುವನು. ನನ್ನ ತಂದೆತಾಯಿಗಳು ಅವಸಾನಕಾಲದಲ್ಲಿ ನನ್ನನ್ನೂ, ನನ್ನ ರಾಜ್ಯವನ್ನೂ ಆ ಮದನಪಾಲನ ವಶಮಾಡಿ ಸ್ವರ್ಗಸ್ಥರಾದರು. ಮದನಪಾಲನು ತುಂಬ ಗುಣಶಾಲಿ, ದಯಾವಂತನು. ಆದರೆ, ಮೇವಾರ್ ರಾಜ್ಯವನ್ನಾಳಿ ಕೀರ್ತಿಯನ್ನು ಸಂಪಾದಿಸುವಷ್ಟು ಶಕ್ತಿ ಆತನಿಗಿಲ್ಲವೆಂದು ನಾನು ಭಾವಿಸುವೆನು. ಒಂದು ವೇಳೆ ಈ ವಿಷಯದಲ್ಲಿ ನನಗಿರುವ

ಅನುಭವವು ಸಾಲದುದರಿಂದ ನನ್ನ ಅಭಿಪ್ರಾಯವು ತಪ್ಪಾಗಿದ್ದರೂ ಇರಬಹುದು. ಆತನ ಸಾಕುತಾಯಿಯೆಂದು ಕರೆಯಲ್ಪಡುವ ಆತನ ಅಕ್ಕ ಮುರಳಾದೇವಿಯು ಸ್ವರ್ಗಸ್ಥನಾದ ಪ್ರತಾಪಸಿಂಹ ಮಹಾರಾಜನ ಎರಡನೆಯ ರಾಣಿ. ಆತನನ್ನು ಮುಂದಿಟ್ಟುಕೊಂಡು ಆಕೆಯೇ ರಾಜ್ಯವನ್ನಾಳುತ್ತಿರುವಳು. ಆತನು ಹೆಸರಿಗೆ ಮಾತ್ರ ಅರಸನೆಂದು ಹೇಳಬಹುದು. ಮುರಳಾದೇವಿಯು ತುಂಬ ಸಮರ್ಥಳು. ಕ್ರೂರಳೆಂದು ಕೂಡ ಜನಗಳು ಹೇಳಿಕೊಳ್ಳುತ್ತಿರುವರು. ಕಪಟವಿದ್ಯೆಗಳಲ್ಲಿ ಆಕೆ ಬಹು ಚತುರಳು. ದೇಶಾಂತರದಲ್ಲಿ ಗತಿಸಿದ ತನ್ನ ಸವತಿಯ ಮಗನಾದ ವಿಕ್ರಮಸಿಂಹನ ಹೆಂಡತಿ ಹೇಮಪ್ರಭಾದೇವಿಯನ್ನು ಹೇಗಾದರೂ ತನ್ನ ದತ್ತುಮಗನಾದ ಮದನಪಾಲನಿಗೆ ಪುನರ್ವಿವಾಹ ಮಾಡಬೇಕೆಂದು ಯೋಚಿಸಿರುವಳು.

ಈ ಮಾತನ್ನು ಕೇಳಿ ಮಿತ್ರದೇವನು ಸಿಡಿಲು ಬಿದ್ದ ಮರದಂತೆ ಕುಂದಿದನು. ಸ್ಮೃತಿತಪ್ಪುವಂತೆ ತೋರಿತು. ತನ್ನ ಭಾವವು ಹೊರಪಡುವುದೆಂಬ ಭೀತಿಯಿಂದ ಅದನ್ನು ಸಂವರಣಮಾಡಿಕೊಂಡು:– "ಪುನರ್ವಿವಾಹಕ್ಕೆ ಆಕೆ ಒಪ್ಪುವಳೇ?" ಎಂದು ಲಲಿತಕುಮಾರನನ್ನು ಪ್ರಶ್ನಿಸಿದನು.

**ಲಲಿತಕುಮಾರ—** ಆರ್ಯನೆ! ಮುರಳಾದೇವಿ ಸಾಮಾನ್ಯಳಲ್ಲ. ದೊಡ್ಡ ದೊಡ್ಡ ಪಂಡಿತರನ್ನು ಕರೆಯಿಸಿ ಶಾಸ್ತ್ರಪರಿಶೋಧನೆಮಾಡಿಸುತ್ತಿರುವಳು. "ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ । ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ॥" ಎಂಬ ಪ್ರಮಾಣ ಶ್ಲೋಕವನ್ನು ಅನುಸರಿಸಿ ಪುನರ್ವಿವಾಹ ಮಾಡಿಕೊಳ್ಳುವುದು ದೋಷವಲ್ಲವೆಂದು ಹೇಳುತ್ತಿರುವಳು. ಹೇಮಪ್ರಭಾದೇವಿಯ ಪತಿಯು ದೇಶಾಂತರಕ್ಕೆ ಹೋಗಿ ಹದಿನಾಲ್ಕು ವರ್ಷಗಳಾದುವು. ಅವನನ್ನು ಹುಡುಕುವುದಕ್ಕಾಗಿ ಡಿಲ್ಲೀಶ್ವರನು ಚಾರರನ್ನು ಕಳುಹಿಸಿರುವನು. ಆದರೆ ಅದ್ಯಾಪಿ ಅವನ ವೃತ್ತಾಂತವೇ ತಿಳಿಯಲಿಲ್ಲ. ಅವನು ನಿರ್ಗಮಿಸಿದ ಕೆಲವು ಮಾಸಗಳ ತರುವಾಯ ಅವನ ಮಗುವನ್ನು ಒಂದು ವ್ಯಾಘ್ರವು ತಿಂದಿತೆಂದು ಗೊತ್ತಾಯಿತು. ಹೇಮಪ್ರಭಾದೇವಿಗೆ ಇನ್ನೂ ಯೌವನಾವಸ್ಥೆ. ರತಿಗೆ ಮಿಂಚಿದ ದೇಹಸೌಂದರ್ಯ. ಬೇಕಾದಷ್ಟು ಸಂಪತ್ತು. ಶಾಸ್ತ್ರಪ್ರಮಾಣವು ಅನುಕೂಲವಾಗಿರುವಾಗ ಏಕೆ ಪುನರ್ವಿವಾಹ ಮಾಡಿಕೊಳ್ಳಬಾರದು? ಅಲ್ಲದೆ ಆಕೆ ಗ್ವಾಲಿಯರ್ ಅರಸನಾದ ರೂಪಸಿಂಗನ ಮಗಳು. ಪ್ರೇಮಾತಿಶಯದಿಂದ ಆ ರಾಜನು ತನ್ನ ಮಗಳಿಗೆ ಕೆಲವು ಗ್ರಾಮಗಳನ್ನು ಸ್ತ್ರೀಧನವಾಗಿ ಕೊಟ್ಟಿರುವನು. ಇತ್ತೀಚೆಗೆ ಆಕೆಯ ಜ್ಯೇಷ್ಠ ಸೋದರನು ಸ್ವರ್ಗಸ್ಥನಾದನು. ಅವನ ಕುಮಾರನಾದ

ವಿಜಯಸಿಂಹನು ಇನ್ನೂ ಚಿಕ್ಕಹುಡುಗನು. ರಾಣಿ ಮಾಲತೀದೇವಿಯು ಮಂತ್ರಿಗಳ ಸಹಾಯದಿಂದ ರಾಜ್ಯಕಾರ್ಯಗಳನ್ನು ನಿರ್ವಹಿಸುತ್ತಿರುವಳು. ಆಕೆಯು ತನ್ನ ನಾದಿನಿಯಾದ ಹೇಮಪ್ರಭಾದೇವಿಯನ್ನು ಒಡಹುಟ್ಟಿದವಳಂತೆ ಪ್ರೇಮಿಸುತ್ತಿರುವಳಲ್ಲದೆ ಗ್ರಾಮಾಂತರಗಳಿಂದ ಬರುವ ಆದಾಯವನ್ನು ಆಕೆಗೆ ಕಳುಹಿಸುವಳು. ತನ್ನ ಏಕ ಪುತ್ರಿಯಾದ ವಿಮಲೆಯನ್ನು ಕೂಡ ಆಕೆಯ ಬಳಿಯಲ್ಲಿಯೇ ಬಿಟ್ಟಿರುವಳು. ಇಷ್ಟಾದರೂ, ಹೇಮಪ್ರಭಾದೇವಿಯು ತನ್ನ ಪುನರ್ವಿವಾಹಕ್ಕೆ ಒಪ್ಪಿರುವಳೋ ಇಲ್ಲವೋ ನಾನರಿಯೆನು. ಆದರೆ, ಮದನಪಾಲನು ಮಾತ್ರ ಪುನಃ ಪುನಃ ಆಕೆಯ ಅಂತಃಪುರಕ್ಕೆ ಹೋಗಿಬರುವುದುಂಟು. ಅವನಿಗೆ ಅಲ್ಲಿ ಭೋಜನಭಾಜನಾದಿಗಳು ಕೂಡ ನಡೆಯುತ್ತವೆ. ಹೇಮಪ್ರಭಾದೇವಿಯ ಕೋಟೆಯಲ್ಲಿ ಪರಾಕ್ರಮಿಗಳಾದ ಕೆಲವರು ರಾಜವಂಶದವರು ವಾಸವಾಗಿರುತ್ತಾರೆ. ಅವರು ಕೂಡ ಮದನಪಾಲನು ವಿಶೇಷವಾಗಿ ಹೋಗಿಬರುತ್ತಿರುವುದನ್ನು ಆಕ್ಷೇಪಿಸಿದಂತೆ ಕೇಳಲಿಲ್ಲ.

**ಮಿತ್ರದೇವ**—ಅಭಯಸಿಂಹನು ಸಹಿತ ಮೃತನಾದನೇ? ಅವನ ರಾಜ್ಯಕ್ಕೆ ಎಷ್ಟು ಕ್ಷೋಭೆಯುಂಟಾಯಿತು?

**ಲಲಿತಕುಮಾರನು**— ಪೂಜ್ಯರೇ! ನೀವು ಭರತಖಂಡವನ್ನು ನೋಡಿರುವಿರಾ? ಆ ಅರಸರೆಲ್ಲರೂ ನಿಮಗೆ ಹೇಗೆ ಪರಿಚಯ?

**ಮಿತ್ರದೇವ**— ಕುಮಾರಾ! ನಾನು ಈ ಭೂಮಂಡಲವನ್ನೆಲ್ಲಾ ಪ್ರದಕ್ಷಿಣೆ ಮಾಡಿ ಬಂದಿರುವೆನು.

**ಲಲಿತಕುಮಾರ**— ಹಾಗಿದ್ದರೆ ನೀವೇಕೆ ಆ ಪ್ರಾಂತ್ಯ ಬಾದಿರಕೂಡದು? ಈ ಪ್ರದೇಶದಲ್ಲಿ ಏಕಾಂಗಿಗಳಾಗಿ ಏಕೆ ಇರಬೇಕು?

**ಮಿತ್ರದೇವ**— ರಾಜಕುಮಾರಾ! ನನಗೆ ಈ ಪ್ರದೇಶವು ಸುಖವಾಗಿರುವುದು. ನಿಮಗೆ ನಿದ್ರೆಯ ಹೊತ್ತಾಯಿತು. ಇನ್ನು ಮಲಗಿಕೊಳ್ಳಿರಿ. ನಾನು ಹೋಗಿಬರುವೆನು,—ಎಂದು ಹೇಳಿ ಮಿತ್ರದೇವನು ಹೊರಟುಹೋದನು.

ಈ ಸಂಭಾಷಣೆಯನ್ನೆಲ್ಲಾ ಕೌತುಕದಿಂದ ಕೇಳುತ್ತಿದ್ದ ಇಂದಿರೆಯು ತನ್ನ ಅಪಾಂಗ ದೃಷ್ಟಿಯನ್ನು ಲಲಿತಕುಮಾರನ ಮೇಲೆ ಬೀರುತ್ತಾ ತಂದೆಯ ಸಂಗಡ ಹೊರಟುಹೋದಳು.

ಲಲಿತಕುಮಾರನ ಪ್ರಯಾಣವು ನಿಶ್ಚಯವಾಯಿತು. ದಾರಿಗೆ ಬೇಕಾದ ವಸ್ತುಗಳೆಲ್ಲವೂ ಸಿದ್ಧವಾದುವು. ಮಿತ್ರದೇವನು ಲಲಿತಕುಮಾರನನ್ನು ನೋಡಿ "ರಾಜಕುಮಾರಾ! ನಮ್ಮ ಹಡಗು ಈ ದಿನವೇ ರೇವಿಗೆ ಬಂದಿರುವುದು. ಈ ದಿನ ರಾತ್ರಿ ಪ್ರಯಾಣಕ್ಕೆ ಒಳ್ಳೆಯದಾಗಿರುವುದು." ಎಂದು ಹೇಳುತ್ತಿರು

ವಲ್ಲಿ ಒಬ್ಬ ದೂತನು ಉತ್ತರಗಳನ್ನು ತೆಗೆದುಕೊಂಡು ಬಂದು ಮಿತ್ರದೇವನಿಗೆ ಒಪ್ಪಿಸಿದನು. ಅವುಗಳಲ್ಲೊಂದು ಲಲಿತಕುಮಾರನದಾಗಿದ್ದಿತು. ಅದನ್ನು ತೆಗೆದುಕೊಂಡು ಲಲಿತಕುಮಾರನು ಸಾಂಗವಾಗಿ ಓದಿಕೊಂಡು "ಆರ್ಯನೇ! ಅನುಕೂಲಕಾಲವೊದಗಿದಾಗ ಕಾರ್ಯಗಳೆಲ್ಲವೂ ಸರಿಗೂಡುವುವು. ನನ್ನೊಡನೆಯೇ ದ್ವೀಪಕ್ಕೆಬಂದಿದ್ದರಾಜಕುಮಾರರಿಂದ ಈ ಕಾಗದವು ಬಂದಿರುವುದು. ಚಂಡಸೇನನು ಅವರನ್ನು ಬಿಟ್ಟ ಒಡನೆಯೇ ಅವರು ತಮ್ಮ ರಾಜ್ಯಕ್ಕೆ ಹೋಗಿ ರೋಗಗಳನ್ನು ಅನುಭವಿಸಿ ಈಗ ಆರೋಗ್ಯವಾಗಿರುವ ಕಾರಣ ನನ್ನನ್ನು ಹುಡುಕಿಕೊಂಡು ಬರುತ್ತಿರುವರು. ನಿಮ್ಮ ಕೃಪೆಯಿಂದ ನಾನು ಕೂಡ ಆರೋಗ್ಯವನ್ನು ಹೊಂದಿರುವೆನು. ಮಿತ್ರರು ದೊರೆತರು. ಆದರೆ, ನನ್ನ ಜೀವಿತ ಸುಖಕ್ಕೆ ಆಧಾರವಾಗಿರುವ ಮತ್ತೊಂದು ವಿಷಯವನ್ನು ನಿಮ್ಮಲ್ಲಿ ಪ್ರಸ್ತಾಪಿಸಬೇಕೆಂಬ ತೀವ್ರವಾದ ಅಭಿಲಾಷೆಯು ನನ್ನ ಹೃದಯವನ್ನು ಹೊಕ್ಕಿರುವುದು. ನೀವು ಪ್ರಾಣದಾತರಾದುದರಿಂದ ನನ್ನ ಮನೋಭೀಷ್ಟವನ್ನು ಕೇಳಿ ಪೂರ್ತಿಗೊಳಿಸುವಿರೆಂದು ನಂಬುತ್ತೇನೆ.

**ಮಿತ್ರದೇವ—** ರಾಜೇಂದ್ರಾ! ದೇಶಾಧೀಶನ ಮನೋಭೀಷ್ಟವನ್ನು ಪೂರ್ಣಗೊಳಿಸುವ ಶಕ್ತಿಯು ನನ್ನಂತಹ ಕೃಷಿಕನಿಗಿರುವುದೇ? ನಾನು ಸಮಸ್ತ ದೇಶಗಳನ್ನೂ ಸಂಚರಿಸಿದವನಾದ್ದರಿಂದ ನಿಮ್ಮ ಯಶೋವಿಖ್ಯಾತಿಗಳನ್ನು ಕೇಳಿ ಬಲ್ಲೆನು. ನಿಮ್ಮನ್ನು ಸತ್ಕರಿಸುವ ಭಾಗ್ಯವು ನನಗೆ ದೊರೆತುದಕ್ಕಾಗಿ ತುಂಬ ಕೃತಜ್ಞನಾಗಿರುವೆನು.

**ಲಲಿತಕುಮಾರ—** ಆರ್ಯನೇ! ನೀವು ಕೇವಲ ಕೃಷಿಕವೃತ್ತಿಯವರೆಂದು ನಾನು ನಂಬಲಾರೆನು. ನಿಮ್ಮ ಮುಖಸಂದರ್ಶನವಾದೊಡನೆಯೇ ನೀವು ಮಹದ್ವಂಶಜರೆಂದು ನನ್ನ ಅಂತರಾತ್ಮನು ನುಡಿದನು. ಅದು ಹಾಗಿರಲಿ! ನಿಮ್ಮ ಪ್ರೇಮಪುತ್ರಿಯ ಪಾಣಿಗ್ರಹಣ ಮಾಡುವ ಭಾಗ್ಯವು ನನಗೆ ದೊರೆತೀತೇ?

**ಮಿತ್ರದೇವ—** ರಾಜಕುಮಾರಾ! ಇಂತಹ ಆಲೋಚನೆ ನಿಮಗೆ ಹೇಗೆ ಉಂಟಾದುದು? ಕೃಷಿಕನ ಕನ್ಯೆಯನ್ನು ಮಹಾರಾಜರಾದ ನೀವು ಹೇಗೆ ಪಾಣಿಗ್ರಹಣಮಾಡಿಕೊಳ್ಳುವಿರಿ? ರಾಣಿಯಾಗುವ ಭಾಗ್ಯವು ನನ್ನ ಮಗಳಿಗೆ ಇರುವುದೇ?

**ಲಲಿತಕುಮಾರ—** "ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ||" ಎಂದು ದುಷ್ಯಂತನು ಹೇಳಿದಂತೆ ನನ್ನ ಅಂತಃಕರಣವು ಇಂದಿರಾದೇವಿಯ ಮೇಲೆ ಪಸರಿಸಿರುವುದು ಪ್ರಮಾದವೆಂದೆಣಿಸಲಾರೆನು. ಮಹಾರಾಣಿಯಾಗಲು ತಕ್ಕ ಪ್ರತಿಭೆಯು ಆಕೆಯಲ್ಲಿರುವುದು.

ನೀವೆಷ್ಟು ಸಂವರಣ ಮಾಡಿಕೊಂಡರೂ ನೀವು ರಾಜವಂಶಜರೆಂಬುದಕ್ಕೆ ಸಂಶಯವೇ ಇಲ್ಲ.

**ಮಿತ್ರದೇವ—** ಅರಸನೇ! ಅದು ಹೇಗಿದ್ದರೂ ನನ್ನ ಮಗಳ ವಿಷಯದಲ್ಲಿ ಒಂದು ಕಳಂಕವಿರುವುದು. ಅದು ಸರ್ವಥಾ ನಿವೃತ್ತಿಯಾಗತಕ್ಕುದಲ್ಲ. ಅತ ಏವ, ತಮಗೆ ರಾಣಿಯಾಗುವ ಭಾಗ್ಯವು ನನ್ನ ಇಂದಿರೆಗೆ ಉಂಟಾಗಲಾರದೆಂದು ಹೇಳಲು ಸಂಕೋಚಪಡುತ್ತೇನೆ.

**ಲಲಿತಕುಮಾರ—** ಮಹಾಶಯ! ನಮ್ಮಿಬ್ಬರ ಪ್ರೇಮಕ್ಕೆ ಕುಂದು ಕುಂದುಗಳೊಂದೂ ಅಡ್ಡವಾಗಲಾರವು. ಇಂದಿರಾದೇವಿಯನ್ನು ನನ್ನ ಹೃದಯೇಶ್ವರಿಯನ್ನಾಗಿ ಮಾಡಿಕೊಳ್ಳಲು ನಾನು ಯಾವಾಗಲೂ ಹಿಂಜರಿಯುವುದಿಲ್ಲ.

ಈ ಮಾತುಗಳನ್ನು ಕೇಳಿ ಮಿತ್ರದೇವನು ಸ್ತಂಭೀಭೂತನಾದನು. ಇಂದಿರೆಯು ಪ್ರಮೋದಾನಂದಗಳಿಂದ ವಿಸ್ಮೃತಿಯನ್ನು ಹೊಂದಿದಳು. ಭವನವೆಲ್ಲವೂ ಒಂದು ಮುಹೂರ್ತ ನಿಶ್ಶಬ್ದವಾಗಿದ್ದಿತು. ಅಡಿಗೆಯು ಸಿದ್ಧವಾಗಿರುವುದೆಂದು ಪರಿಚಾರಕರು ಬಂದು ವಿಜ್ಞಾಪಿಸಿದರು.

**ಮಿತ್ರದೇವ—** ರಾಜೇಂದ್ರಾ! ಭೋಜನಕ್ಕೆ ದಯಮಾಡಿಸಿರಿ. ವಿಧಾತನು ಹೇಗೆ ವಿಧಿಸಿರುವನೋ ತಿಳಿಯದು. ನೀವು ಮನಸ್ಸ್ಥೈರ್ಯವುಳ್ಳವರೆಂಬ ಸಂಗತಿ ನನಗೆ ಗೊತ್ತಿದೆ. ಇಂದಿರೆಯು ನಿಮ್ಮನ್ನು ಪ್ರೀತಿಸುತ್ತಿರುವಳೆಂಬ ಸುದ್ದಿಯೂ ನನ್ನ ಕಿವಿಗೆ ಬಿದ್ದಿತು. ಅವಳ ಅಂತಃಕರಣವು ಬಹಳ ಅಗಾಧವಾದುದು. ನನ್ನಂತೆಯೇ ಅವಳು ಧೈರ್ಯಸ್ಥೈರ್ಯಗಳುಳ್ಳವಳು. ನೀವು ಈಗ ಪ್ರಯಾಣಬೆಳಸುವವರಾಗಿರುವಿರಿ. ಕಾಲಚಕ್ರವು ಹೇಗೆ ತಿರುಗುವುದೋ ತಿಳಿಯದು. ನಮ್ಮಿಬ್ಬರಿಗೂ ಸ್ನೇಹಾನುಬಂಧವನ್ನುಂಟುಮಾಡಿದ ಪರಮಾತ್ಮನೇ ಮುಂದೆಯೂ ರಕ್ಷಿಸುವನೆಂದು ನಂಬುತ್ತೇನೆ.

ಇವೇ ಮೊದಲಾದ ಮಾತುಗಳನ್ನಾಡುತ್ತಾ ಅವರು ಭೋಜನವನ್ನು ಮುಗಿಸಿದರು. ತಾಂಬೂಲಾದ್ಯುಪಚಾರಗಳು ನಡೆದ ಬಳಿಕ ರಾಜಕುಮಾರನು ಪ್ರಯಾಣಕ್ಕೆ ಸಿದ್ಧನಾದನು. ತನ್ನ ಭಾವಿ ತೀರ್ಮಾನಕ್ಕೆ ನಿಂತ ಪರಿಣಯ ವಿಷಯದಲ್ಲಿ ತಾನು ಆಗ ಅಶಕ್ತನಾಗಿರುವುದಕ್ಕೆ ತುಂಬಾ ಪರಿತಪಿಸಿದನು. ಮಿತ್ರದೇವನು ಕೃಪಾದೃಷ್ಟಿಯಿಂದ ಅವನನ್ನು ನೋಡಿ "ಪರಮೇಶ್ವರನ ಕೃಪೆಯಿಂದ ಸರ್ವವೂ ಸುಮುಖವಾಗಲೆಂದು ಹಾರೈಸುವೆನು" ಎಂದು ಹೇಳುತ್ತಾ ಆ ರಾಜಕುಮಾರನನ್ನು ಆಲಿಂಗನೆ ಮಾಡಿಕೊಂಡನು. ಲಲಿತಕುಮಾರನು ಅಶ್ರುಜಲಪೂರಿತನಾಗಿ ಮಿತ್ರದೇವನಿಗೆ ಬಹು ಭಕ್ತಿಯಿಂದ ನಮಸ್ಕರಿಸಿದನು.

ವಲ್ಲಿ ಒಬ್ಬ ದೂತನು ಉತ್ತರಗಳನ್ನು ತೆಗೆದುಕೊಂಡು ಬಂದು ಮಿತ್ರದೇವನಿಗೆ ಒಪ್ಪಿಸಿದನು. ಅವುಗಳಲ್ಲೊಂದು ಲಲಿತಕುಮಾರನದಾಗಿದ್ದಿತು. ಅದನ್ನು ತೆಗೆದುಕೊಂಡು ಲಲಿತಕುಮಾರನು ಸಾಂಗವಾಗಿ ಓದಿಕೊಂಡು "ಆರ್ಯನೇ! ಅನುಕೂಲಕಾಲವೊದಗಿದಾಗ ಕಾರ್ಯಗಳೆಲ್ಲವೂ ಸರಿಗೂಡುವುವು. ನನ್ನೊಡನೆಯೇ ದ್ವೀಪಕ್ಕೆ ಬಂದಿದ್ದ ರಾಜಕುಮಾರರಿಂದ ಈ ಕಾಗದವು ಬಂದಿರುವುದು. ಚಂಡಸೇನನು ಅವರನ್ನು ಬಿಟ್ಟ ಒಡನೆಯೇ ಅವರು ತಮ್ಮ ರಾಜ್ಯಕ್ಕೆ ಹೋಗಿ ರೋಗಗಳನ್ನು ಅನುಭವಿಸಿ ಈಗ ಆರೋಗ್ಯವಾಗಿರುವ ಕಾರಣ ನನ್ನನ್ನು ಹುಡುಕಿಕೊಂಡು ಬರುತ್ತಿರುವರು. ನಿಮ್ಮ ಕೃಪೆಯಿಂದ ನಾನು ಕೂಡ ಆರೋಗ್ಯವನ್ನು ಹೊಂದಿರುವೆನು. ಮಿತ್ರರು ದೊರೆತರು. ಆದರೆ, ನನ್ನ ಜೀವಿತ ಸುಖಕ್ಕೆ ಆಧಾರವಾಗಿರುವ ಮತ್ತೊಂದು ವಿಷಯವನ್ನು ನಿಮ್ಮಲ್ಲಿ ಪ್ರಸ್ತಾವಿಸಬೇಕೆಂಬ ತೀವ್ರವಾದ ಅಭಿಲಾಷೆಯು ನನ್ನ ಹೃದಯವನ್ನು ಹೊಕ್ಕಿರುವುದು. ನೀವು ಪ್ರಾಣದಾತರಾದುದರಿಂದ ನನ್ನ ಮನೋಭೀಷ್ಟವನ್ನು ಕೇಳಿ ಪೂರ್ತಿಗೊಳಿಸುವಿರೆಂದು ನಂಬುತ್ತೇನೆ.

**ಮಿತ್ರದೇವ**— ರಾಜೇಂದ್ರಾ! ದೇಶಾಧೀಶನ ಮನೋಭೀಷ್ಟವನ್ನು ಪೂರ್ಣಗೊಳಿಸುವ ಶಕ್ತಿಯು ನನ್ನಂತಹ ಕೃಷಿಕನಿಗಿರುವುದೇ? ನಾನು ಸಮಸ್ತ ದೇಶಗಳನ್ನೂ ಸಂಚರಿಸಿದವನಾದಕಾರಣ ನಿಮ್ಮ ಯಶೋವಿಖ್ಯಾತಿಗಳನ್ನು ಕೇಳಿ ಒಲ್ಲೆನು. ನಿಮ್ಮನ್ನು ಸತ್ಕರಿಸುವ ಭಾಗ್ಯವು ನನಗೆ ದೊರೆತುದಕ್ಕಾಗಿ ತುಂಬ ಕೃತಜ್ಞನಾಗಿರುವೆನು.

**ಲಲಿತಕುಮಾರ**— ಆರ್ಯನೇ! ನೀವು ಕೇವಲ ಕೃಷಿಕವೃತ್ತಿಯವರೆಂದು ನಾನು ನಂಬಲಾರೆನು. ನಿಮ್ಮ ಮುಖಸಂದರ್ಶನವಾದೊಡನೆಯೇ ನೀವು ಮಹದ್ವಂಶಜರೆಂದು ನನ್ನ ಅಂತರಾತ್ಮನು ನುಡಿದನು. ಅದು ಹಾಗಿರಲಿ! ನಿಮ್ಮ ಪ್ರೇಮಪುತ್ರಿಯ ಪಾಣಿಗ್ರಹಣ ಮಾಡುವ ಭಾಗ್ಯವು ನನಗೆ ದೊರೆತೀತೇ?

**ಮಿತ್ರದೇವ**— ರಾಜಕುಮಾರಾ! ಇಂತಹ ಆಲೋಚನೆ ನಿಮಗೆ ಹೇಗೆ ಉಂಟಾದುದು? ಕೃಷಿಕನ ಕನ್ಯೆಯನ್ನು ಮಹಾರಾಜರಾದ ನೀವು ಹೇಗೆ ಪಾಣಿಗ್ರಹಣಮಾಡಿಕೊಳ್ಳುವಿರಿ? ರಾಣಿಯಾಗುವ ಭಾಗ್ಯವು ನನ್ನ ಮಗಳಿಗೆ ಇರುವುದೇ?

**ಲಲಿತಕುಮಾರ**— "ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ॥" ಎಂದು ದುಷ್ಯಂತನು ಹೇಳಿದಂತೆ ನನ್ನ ಅಂತಃಕರಣವು ಇಂದಿರಾದೇವಿಯ ಮೇಲೆ ಪಸರಿಸಿರುವುದು ಪ್ರಮಾದವೆಂದೆಣಿಸಲಾರೆನು. ಮಹಾರಾಣಿಯಾಗಲು ತಕ್ಕ ಪ್ರತಿಭೆಯು ಆಕೆಯಲ್ಲಿರುವುದು.

ನೀವೆಷ್ಟು ಸಂವರಣ ಮಾಡಿಕೊಂಡರೂ ನೀವು ರಾಜವಂಶಜರೆಂಬುದಕ್ಕೆ ಸಂಶಯವೇ ಇಲ್ಲ.

**ಮಿತ್ರದೇವ—** ಅರಸನೇ! ಅದು ಹೇಗಿದ್ದರೂ ನನ್ನ ಮಗಳ ವಿಷಯದಲ್ಲಿ ಒಂದು ಕಳಂಕವಿರುವುದು. ಅದು ಸರ್ವಥಾ ನಿವೃತ್ತಿಯಾಗತಕ್ಕುದಲ್ಲ. ಅತ ಏವ, ತಮಗೆ ರಾಣಿಯಾಗುವ ಭಾಗ್ಯವು ನನ್ನ ಇಂದಿರೆಗೆ ಉಂಟಾಗಲಾರದೆಂದು ಹೇಳಲು ಸಂಕೋಚಪಡುತ್ತೇನೆ.

**ಲಲಿತಕುಮಾರ—** ಮಹಾಶಯ! ನಮ್ಮಿಬ್ಬರ ಪ್ರೇಮಕ್ಕೆ ಕಂದುಕುಂದುಗಳೊಂದೂ ಅಡ್ಡವಾಗಲಾರವು. ಇಂದಿರಾದೇವಿಯನ್ನು ನನ್ನ ಹೃದಯೇಶ್ವರಿಯನ್ನಾಗಿ ಮಾಡಿಕೊಳ್ಳಲು ನಾನು ಯಾವಾಗಲೂ ಹಿಂಜರಿಯುವುದಿಲ್ಲ.

ಈ ಮಾತುಗಳನ್ನು ಕೇಳಿ ಮಿತ್ರದೇವನು ಸ್ತಂಭೀಭೂತನಾದನು. ಇಂದಿರೆಯು ಪ್ರಮೋದಾನಂದಗಳಿಂದ ವಿಸ್ಮೃತಿಯನ್ನು ಹೊಂದಿದಳು. ಭವನವೆಲ್ಲವೂ ಒಂದು ಮುಹೂರ್ತ ನಿಶ್ಶಬ್ದವಾಗಿದ್ದಿತು. ಅಡಿಗೆಯು ಸಿದ್ಧವಾಗಿರುವುದೆಂದು ಪರಿಚಾರಕರು ಬಂದು ವಿಜ್ಞಾಪಿಸಿದರು.

**ಮಿತ್ರದೇವ—** ರಾಜೇಂದ್ರಾ! ಭೋಜನಕ್ಕೆ ದಯಮಾಡಿಸಿರಿ. ವಿಧಾತನು ಹೇಗೆ ವಿಧಿಸಿರುವನೋ ತಿಳಿಯದು. ನೀವು ಮನಸ್ಸ್ಥೈರ್ಯವುಳ್ಳವರೆಂಬ ಸಂಗತಿ ನನಗೆ ಗೊತ್ತಿದೆ. ಇಂದಿರೆಯು ನಿಮ್ಮನ್ನು ಪ್ರೀತಿಸುತ್ತಿರುವಳೆಂಬ ಸುದ್ದಿಯೂ ನನ್ನ ಕಿವಿಗೆ ಬಿದ್ದಿತು. ಅವಳ ಅಂತಃಕರಣವು ಬಹಳ ಅಗಾಧವಾದುದು. ನನ್ನಂತೆಯೇ ಅವಳು ಧೈರ್ಯಸ್ಥೈರ್ಯಗಳುಳ್ಳವಳು. ನೀವು ಈಗ ಪ್ರಯಾಣಬೆಳಸುವವರಾಗಿರುವಿರಿ. ಕಾಲಚಕ್ರವು ಹೇಗೆ ತಿರುಗುವುದೋ ತಿಳಿಯದು. ನಮ್ಮಿಬ್ಬರಿಗೂ ಸ್ನೇಹಾನುಬಂಧವನ್ನುಂಟುಮಾಡಿದ ಪರಮಾತ್ಮನೇ ಮುಂದೆಯೂ ರಕ್ಷಿಸುವನೆಂದು ನಂಬುತ್ತೇನೆ.

ಇವೇ ಮೊದಲಾದ ಮಾತುಗಳನ್ನಾಡುತ್ತಾ ಅವರು ಭೋಜನವನ್ನು ಮುಗಿಸಿದರು. ತಾಂಬೂಲಾದ್ಯುಪಚಾರಗಳು ನಡೆದ ಬಳಿಕ ರಾಜಕುಮಾರನು ಪ್ರಯಾಣಕ್ಕೆ ಸಿದ್ಧನಾದನು. ತನ್ನ ಭಾವಿ ತೀರ್ಮಾನಕ್ಕೆ ನಿಂತ ಪರಿಣಯ ವಿಷಯದಲ್ಲಿ ತಾನು ಆಗ ಅಶಕ್ತನಾಗಿರುವುದಕ್ಕೆ ತುಂಬಾ ಪರಿತಪಿಸಿದನು. ಮಿತ್ರದೇವನು ಕೃಪಾದೃಷ್ಟಿಯಿಂದ ಅವನನ್ನು ನೋಡಿ "ಪರಮೇಶ್ವರನ ಕೃಪೆಯಿಂದ ಸರ್ವವೂ ಸುಮುಖವಾಗಲೆಂದು ಹಾರೈಸುವೆನು" ಎಂದು ಹೇಳುತ್ತ ಆ ರಾಜಕುಮಾರನನ್ನು ಆಲಿಂಗನೆ ಮಾಡಿಕೊಂಡನು. ಲಲಿತಕುಮಾರನು ಅಶ್ರುಜಲಪೂರಿತನಾಗಿ ಮಿತ್ರದೇವನಿಗೆ ಬಹು ಭಕ್ತಿಯಿಂದ ನಮಸ್ಕರಿಸಿದನು.

"ದೇವಿ! ಇಂದಿರೆ! ನಾನು ಹೋಗಿಬರುವೆನು. ಈ ದಾಸನನ್ನು ಮರೆಯಬೇಡ" ಎಂದು ಹೇಳಿ ಅವಳನ್ನು ಓರೆಗಣ್ಣಿನಿಂದ ನೋಡುತ್ತಾ ಗಾಡಿಯನ್ನೇರಿದನು.

ತನ್ನ ಮನೋವಲ್ಲಭನು ತೆರಳುತ್ತಿರುವುದನ್ನು ನೋಡಿ ಇಂದಿರೆಗೆ ಬಾಯಮಾತೇ ಹೊರಡಲಿಲ್ಲ. ದೇವತೆಯಂತೆ ನಿಮೇಷಶೂನ್ಯಳಾಗಿ ನಿಂತಳು. ಜಾಲಮಾರ್ಗದಿಂದ ಅವನನ್ನು ಪುನಃಪುನಃ ನೋಡುತ್ತಿದ್ದಳು. ಅವಳ ನೇತ್ರಗಳಲ್ಲಿ ಅಶ್ರುಬಿಂದುಗಳು ಧಾರೆಯಾಗಿ ಹರಿಯಲಾರಂಭಿಸಿದುವು. ಇಂದ್ರಿಯವ್ಯಾಪಾರವನ್ನು ನಿಲ್ಲಿಸಿ ಬಾಹ್ಯಪ್ರಪಂಚವನ್ನು ಮರೆತು, ಅಂತರಾತ್ಮನಲ್ಲಿ ಏಕಾಗ್ರವಾಗಿ ಮನಸ್ಸನ್ನಿಟ್ಟಿರುವ ಯೋಗಿಯಂತೆ ಅವಳು ಲಲಿತಕುಮಾರನನ್ನು ಮನಸಾ ಹೊಂದಿದಳು. ಮಿತ್ರದೇವನು ಕೂಡ ಭಾವನಾಪರಂಪರೆಯಲ್ಲಿ ಮಗ್ನನಾಗಿದ್ದನು.

ಹೀಗೆ ಕೆಲವು ಕಾಲ ಕಳೆದ ಬಳಿಕ ಇಂದಿರೆಯು ಧೈರ್ಯವನ್ನು ಹೊಂದಿದಳು. ಮನಸ್ಸನ್ನು ಸ್ಥಿರಪಡಿಸಿಕೊಂಡಳು. "ಹೃದಯವೇ! ಆಪತ್ತುಗಳು ಸಂಭವಿಸಿದಾಗ ಧೈರ್ಯಗೆಡಕೂಡದು. "ಕೀರ್ತಿಃ ಶ್ರೀರ್ವಾಕ್ಚ ನಾರೀಣಾಂ ಸತ್ಯಂಮೇಧಾ ಧೃತಿಃಕ್ಷಮಾ" ಎಂದು ಶ್ರೀಕೃಷ್ಣನು ಅಪ್ಪಣೆಕೊಡಿಸಿರುವಂತೆ ಸ್ತ್ರೀಜನ್ಮದ ಸುಗುಣಗಳನ್ನು ಅಭ್ಯಸಿಸಬೇಕು.. ನಾನು ಚಿಂತಾಮಗ್ನಳಾಗಿದ್ದರೆ ನನ್ನ ಜನಕನ ಗತಿಯೇನು? ಏನೋ ಒಂದು ಕುಂದಿರುವುದೆಂದು ನನ್ನ ತಂದೆಯು ನನ್ನ ಮನೋವಲ್ಲಭನಲ್ಲಿ ಹೇಳಿದನಷ್ಟೆ! ಅದೇನಿರಬಹುದು? ಆ ಕುಂದವನ್ನು ನಾನೂ ನನ್ನ ಪ್ರಿಯನೂ ಸೇರಿ ಏಕೆ ಹೋಗಲಾಡಿಸಬಾರದು?— ಎಂದು ನುಡಿಯುತ್ತಾ ಸ್ಥಿರಮನಸ್ಕಳಾದಳು.

# ೫ನೆಯ ಅಧ್ಯಾಯ

ಮರುದಿನ ಪ್ರಾತಃಕಾಲ ಬಾಲಾರ್ಕನು ಉದಯಿಸುತ್ತಿದ್ದನು. ಪುಷ್ಪಗಳು ಜಗತ್ಸಾಕ್ಷಿಯಾದ ಆ ಭಾಸ್ಕರನಿಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳುತ್ತಿರುವಂತೆ ಅರಳುತ್ತಿದ್ದುವು. ಭೃಂಗನಿನಾದವು ಸ್ತೋತ್ರಪಾಠಕರ ಗಾನದಂತೆ ನಡೆಯುತ್ತಿದ್ದಿತು. ಮಿತ್ರದೇವನ ಗೃಹಾರಾಮಗಳು ಬಹು ಮನೋಹರವಾಗಿ ಕಾಣುತ್ತಿದ್ದುವು. ಗುಲಾಬಿಯ ಹೂಗಳ ಮನೋಹರತೆಯೂ, ಮಲ್ಲಿಗೆಯ ಪರಿಮಳವೂ

ಫಲಭಾರದಿಂದ ಬಾಗಿರುವ ವೃಕ್ಷಪಙ್ತಿಗಳ ಸೊಬಗೂ ಪ್ರೇಕ್ಷಕರ ಮನಕ್ಕೆ ಆನಂದವನ್ನು ಉಂಟುಮಾಡುತ್ತಿದ್ದುವು. ಆಳುಗಳು ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿದ್ದರು. ಕೆಲವರು ತೆಂಗಿನ ಮರಗಳಿಂದ ಕಾಯಿ ಗಳನ್ನು ಇಳಿಸುತ್ತಿದ್ದರು. ಕೆಲವರು ಬಾಳೆಯಗೊಂಚಲುಗಳನ್ನು ಕೊಯ್ಯು ತ್ತಿದ್ದರು. ಕೆಲವರು ಹೂಗಳನ್ನು ಕೊಯ್ದು ಬಾಡದಂತೆ ಎಲೆಗಳಲ್ಲಿ ಕಟ್ಟು ತ್ತಿದ್ದರು. ಕೆಲವರು ಮಾರಲು ಹೋಗಬೇಕಾಗಿದ್ದ ಹಣ್ಣು, ಕಾಯಿ, ಹೂವು ಗಳನ್ನು ಗಾಡಿಗಳಿಗೆ ತುಂಬಿಸುತ್ತಿದ್ದರು. ಇಂದಿರೆಯು ಉಷಃಕಾಲದಲ್ಲಿಯೇ ಎದ್ದು ಸ್ನಾನ ದೇವತಾರ್ಚನೆಗಳನ್ನು ತೀರಿಸಿಕೊಂಡು ಗೃಹಕಾರ್ಯಗಳನ್ನು ನೆರವೇರಿಸಿ ಸ್ನಾನಕ್ಕಾಗಿ ತನ್ನ ತಂದೆಯನ್ನು ಕರೆಯಲು ಬಂದಳು. ಪಾರ್ಶ್ವದಲ್ಲಿ ಕುಳಿತಿದ್ದ ತನ್ನ ಮಗಳನ್ನು ಮಿತ್ರದೇವನು ನೋಡಿ ನಿನ್ನೆ ನಡೆದ ವಿಯೋಗ ದುಃಖದ ಚಿಹ್ನೆಗಳೇನೂ ಅವಳ ಮುಖದಲ್ಲಿ ಕಾಣಿಸದಿರಲು ಆಶ್ಚರ್ಯಗೊಂಡು ಇವಳೊಬ್ಬ ವೀರರಮಣಿಯೇ ಹೊರತು ಸಾಮಾನ್ಯ ಸ್ತ್ರೀಯಲ್ಲವೆಂದು ನಿರ್ಧರಿಸಿ ದನು. ತಾನು ದುಃಖವನ್ನು ಪ್ರದರ್ಶಿಸಿದರೆ ನನ್ನ ಮನಸ್ಸಿಗೆ ಕುಂದುಂಟಾ ದೀತೆಂಬ ಭಯದಿಂದ ತನ್ನ ವ್ಯಥೆಯನ್ನೆಲ್ಲಾ ಸಂವರಣ ಮಾಡಿಕೊಂಡು ಧೀರೆ ಯಂತಿರುವಳು. "ಜಗದೀಶಾ! ಇಂತಹ ಅಮೌಲ್ಯವಾದ ಮಗುವನ್ನು ಕೊಟ್ಟು ನನ್ನನ್ನು ಧನ್ಯತಮನನ್ನಾಗಿ ಮಾಡಿದುದಕ್ಕೆ ನಾನು ತುಂಬಾ ಬಾಧ್ಯನಾಗಿ ರುವೆನು" ಎಂದು ಹೇಳಿಕೊಳ್ಳುತ್ತ ಇಂದಿರೆಯನ್ನು ನೋಡಿ "ಏಕೆ ಇಷ್ಟು ಬೇಗನೆ ಎದ್ದುಬಂದೆ?" ಎಂದು ಕೇಳಿದನು.

**ಇಂದಿರೆ**— ಅಪ್ಪಾ! ಆಗಲೇ ಬೆಳಗಾಗಿದೆ. ಕೆಲಸಗಾರರು ತಮ್ಮತಮ್ಮ ಕೆಲಸಗಳನ್ನು ಮಾಡುತ್ತಿರುವರು. ನಿಮಗೆ ಸ್ನಾನಕ್ಕೆಲ್ಲವನ್ನೂ ಸಿದ್ಧಪಡಿಸಿ ಬಂದಿರುವೆನು.

ಮಿತ್ರದೇವನು ದೇಹಬಾಧೆಗಳನ್ನು ತೀರಿಸಿಕೊಂಡು ಸ್ನಾನ ಮಾಡಿ ಜಪ ತಪಗಳನ್ನು ಮುಗಿಸಿದನು. ತಂದೆಯೂ ಮಗಳೂ ಪ್ರಾತಃಕಾಲದ ಉಪಾ ಹಾರವನ್ನು ಮುಗಿಸಿದರು. ಮಿತ್ರದೇವನು ತನ್ನ ಕೆಲಸಗಳಿಗೆ ಹೊರಟುಹೋ ದನು. ಎಷ್ಟು ಕಾರ್ಯಾಸಕ್ತನಾಗಿದ್ದರೂ ಲಲಿತಕುಮಾರನು ನುಡಿದ ಮಾತು ಗಳೇ ಕರ್ಣಕುಹರದಲ್ಲಿ ನುಳಿದಾಡುತ್ತಿದ್ದುವು. ಅವನು ಹೊರಟುಹೋದುದ ರಿಂದ ಉಂಟಾದ ದುಃಖವು ಸಹಿಸಲಶಕ್ಯವಾಗಿದ್ದಿತು. ಮಧ್ಯಾಹ್ನ ಮನೆಗೆ ಬಂದು ನೋಡುವಲ್ಲಿ ಲಲಿತಕುಮಾರನು ಇಲ್ಲದ ಕಾರಣ ಅದೊಂದು ಶೂನ್ಯ ಪ್ರದೇಶವಾಗಿ ಕಂಡಿತು. ಹಾಗೆಯೇ ಸ್ತಂಭೀಭೂತನಾಗಿ ನಿಂತು "ವಿಯೋಗ ದುಃಖದಿಂದ ನನ್ನ ಹೃದಯವೇ ಇಷ್ಟು ತೀವ್ರವಾಗಿ ಹೊಡೆದುಕೊಳ್ಳುತ್ತಿರು

ವಲ್ಲಿ ತನ್ನ ಮನೋವಲ್ಲಭನೆಂದು ವರಿಸಿಕೊಂಡಿರುವ ನನ್ನ ಮಗು ಇಂದಿರೆಯ ಹೃದಯದ ಪಾಡು ಏನಾಗಿರಬಹುದು? ಆದರೂ ನನ್ನ ಪುತ್ರಿ ಅಸಮಾನ ಧೈರ್ಯವನ್ನು ತೋರಿಸುತ್ತಾ ನನಗೆ ಆದರ್ಶಳಾಗಿರುವಳು" ಎಂದೆಂದು ಕೊಳ್ಳುತ್ತಿರಲು, ಇಂದಿರೆಯು ಪ್ರಸನ್ನ ಮುಖವನ್ನು ತೋರಿಸುತ್ತಾ "ತಂದೆಯೇ! ನೀವು ಏನು ಕಾರಣ ಇಷ್ಟು ಆಲಸ್ಯವಾಗಿ ಬಂದಿರಿ? ಮುಖವೇಕೆ ಅಷ್ಟು ಬಾಡಿರುವುದು? ತುಂಬಾ ಬಿಸಿಲಿನಲ್ಲಿ ನಡೆದು ಬಂದಿರುವಿರಾ?"— ಎಂದು ಕೇಳಿದಳು.

ಇಂದಿರೆಯ ಪ್ರಶ್ನೆಗಳಿಗೆ ಸಮಾಧಾನೋಕ್ತಿಗಳನ್ನು ಹೇಳಿ ಮಿತ್ರದೇವನು ಜಾಗ್ರತೆಯಾಗಿ ಸ್ನಾನ ಭೋಜನಾದಿಗಳನ್ನು ತೀರಿಸಿಕೊಂಡು ಮಲಗಲು ತನ್ನ ಕೊಟ್ಟಡಿಗೆ ಹೊರಟುಹೋದನು. ಬಿಸಿಲಿನ ತಾಪದಿಂದ ಬಳಲಿ, ಮನೋವ್ಯಥೆಯಿಂದ ಪೀಡಿತನಾಗಿದ್ದುದರಿಂದ ಮಿತ್ರದೇವನು ತನ್ನ ಮಗಳು ಬರುವುದರೊಳಗಾಗಿ ನಿದ್ರೆಹೋದನು. ಇಂದಿರೆಯು ಬಂದು ಶಯನದಲ್ಲಿದ್ದ ತನ್ನ ತಂದೆಯ ಮುಖವನ್ನು ಹಾಗೆ ದೃಷ್ಟಿಸಿ ನೋಡಿ, "ದೈವಸ್ವರೂಪನಾದ ತಂದೆಯೆ! ನೀನು ನನಗಾಗಿ ವ್ಯಥೆಯಿಂದ ಕುಂದುತ್ತಿರುವೆ. ಲಲಿತಕುಮಾರನ ಇಷ್ಟಾರ್ಥವನ್ನು ನೆರವೇರಿಸದಿರುವುದಕ್ಕೆ ನಿನಗೆ ಇಷ್ಟವಿಲ್ಲ. ನಿನ್ನನ್ನು ಇಷ್ಟು ಚಿಂತೆಗೆ ಗುರಿಮಾಡಿರುವ ನನ್ನ ಕಳಂಕವಾವುದೋ ತಿಳಿಯಲಾರೆನು. ಹೇಗಾದರೂ ನಿನ್ನ ಹೃದಯದ ಮರ್ಮವನ್ನು ಭೇದಿಸಿ ಅದರಲ್ಲಿರುವ ನಿನ್ನ ಚಿಂತೆಯನ್ನು ನಾನೂ ಹಂಚಿಕೊಳ್ಳುವೆನು" ಎಂದು ತೀರ್ಮಾನಿಸಿ ತನ್ನ ಕೊಟ್ಟಡಿಯೊಳಗೆ ಹೋದಳು. ಅಲ್ಲಿ ಒಂದು ಪುಸ್ತಕವನ್ನು ಓದಲು ತೆಗೆದುಕೊಂಡಳು. ಆದರ ಹಾಳೆಗಳನ್ನು ಬೇಗ ಬೇಗನೇ ತಿರುಗಿಸುತ್ತಿದ್ದಳೇ ಹೊರತು ಅವಳ ಮನಸ್ಸು ಮಾತ್ರ ಬೇರೆ ವಿಧವಾಗಿದ್ದಿತು.

ಚಂಡಸೇನನು ಎಂದಿನಂತೆ ತನ್ನ ಸೇವಕರನ್ನು ಹೊರಗೆ ನಿಲ್ಲಿಸಿ ಮಿತ್ರದೇವನನ್ನು ನೋಡಲು ತಾನು ಮಾತ್ರ ಒಂಟಿಯಾಗಿ ಬಂದನು. ಅಲ್ಲಿನ ನೌಕರರೆಲ್ಲರೂ ಅವನಿಗೆ ಪರಿಚಿತರಾದ್ದರಿಂದ ಯಾವ ಆತಂಕವೂ ಇಲ್ಲದೆ ಮನೆಯನ್ನು ಹೊಕ್ಕನು. ಮಿತ್ರದೇವನು ನಿದ್ರಿಸುತ್ತಿರುವುದನ್ನು ಕೇಳಿ ಇಂದಿರೆಯೊಡನೆ ಮಾತನಾಡಲು ಅವಕಾಶ ದೊರೆಯಿತೆಂದು ಹಿಗ್ಗಿ ಅವಳ ಕೊಟ್ಟಡಿಗೆ ಹೋದನು. ಯಮನೋಪಾದಿಯಲ್ಲಿ ಇದಿರಿನಲ್ಲಿ ನಿಂತ ಆ ಚಂಡಸೇನನನ್ನು ನೋಡಿ ಚಕಿತಳಾದ ಇಂದಿರೆಯು ತನ್ನ ಅಂತರಂಗದ ಭಯವನ್ನು ಮರೆಮಾಡಿಕೊಂಡು ತಸ್ಕರಾಧಿಪನೊಡನೆ ಸವಿನುಡಿಗಳಾಡತೊಡಗಿದಳು.

"ಚಂಡಸೇನಾ! ಇಷ್ಟು ಅಪರೂಪವಾಗಿ ನಿನ್ನ ದರ್ಶನವಾದುದು ಆಶ್ಚರ್ಯ! ನಿನ್ನೆಯ ದಿನವೇ ನನ್ನ ತಂದೆಯವರು ನಿನ್ನನ್ನು ನೆನಸಿಕೊಂಡರು. ನಿನಗೂ ನಿನ್ನವರಿಗೂ ಕ್ಷೇಮವೇ?"

ಈ ಮಾತುಗಳನ್ನಾಡುತ್ತ ಇಂದಿರೆಯು ಕೊಟ್ಟಡಿಯಿಂದ ಹೊರಕ್ಕೆ ಬಂದು ಅವನಿಗಾಗಿ ಒಂದು ಮಣೆಯನ್ನು ಹಾಕಿದಳು. ಚಂಡಸೇನನು ಆಸನದಲ್ಲಿ ಕುಳಿತು "ಇಂದಿರೆ! ನನ್ನ ಸೆರೆಯಿಂದ ನೀನು ಬಿಡಿಸಿದ ರಾಜಪುತ್ರನು ನಿಮ್ಮ ಮನೆಯಲ್ಲಿದ್ದಾನೆಂದು ಕೇಳಿದೆನು. ಅವನು ಇನ್ನೂ ಇದ್ದಾನೆಯೋ ಅಥವಾ ಹೊರಟುಹೋದನೇ? ಎಲ್ಲಿಗೆ ಹೊರಟುಹೋದನು?"— ಎಂದು ಕೇಳಿದನು.

**ಇಂದಿರೆ—** ಅಸ್ವಸ್ಥತೆಯಿಂದ ಆತನು ನಮ್ಮ ಮನೆಯಲ್ಲಿದ್ದನು. ನಿನ್ನೆಯ ದಿನ ಹೊರಟುಹೋದನು.

ರಾಜಕುಮಾರನ ಪ್ರಸ್ತಾಪ ಮಾಡುವಾಗ ಇಂದಿರೆಯ ಮುಖದಲ್ಲಿ ಆವ ಭಾವವು ಪ್ರದರ್ಶನವಾಗುವುದೋ ನೋಡಬೇಕೆಂದು ಕೌತುಕದಿಂದಿದ್ದ ಚಂಡಸೇನನಿಗೆ ಆವ ವಿಕಾರವೂ ಗೋಚರವಾಗಲಿಲ್ಲ. ಲಲಿತಕುಮಾರನಿಗೆ ಈಕೆಯಲ್ಲಿ ಪ್ರೇಮವು ಉಂಟಾಗಲಿಲ್ಲವೆಂದು ಅವನು ತಿಳಿದನು. ಇಂದಿರೆಯ ಚತುರತೆಯೆಲ್ಲಿ! ತಸ್ಕರಾಧಿಪನ ಅರಸಿಕತ್ವವೆಲ್ಲಿ? ಅವಳ ಮನಸ್ಸನ್ನು ಗುರುತಿಸಿದೆನೆಂದು ಭ್ರಾಂತಿಗೊಂಡ ಚಂಡಸೇನನು "ಇಂದಿರೆ! ನಿನ್ನೊಡನೆ ಸಂಭಾಷಿಸಿ ಬಹು ದಿನಗಳಾದುವು. ನಾನೊಂದು ಕಾರ್ಯಾರ್ಥಿಯಾಗಿ ನಿನ್ನಲ್ಲಿಗೆ ಬಂದಿರುವೆನು. ನೀನು ರಾಜಕುಮಾರನನ್ನು ಬಿಡಿಸಲು ನನ್ನ ದುರ್ಗಕ್ಕೆ ಬಂದೆಯಷ್ಟೆ. ನಿನಗೆ ನಮ್ಮ ರಹಸ್ಯಗಳೆಲ್ಲವೂ ತಿಳಿದು ಬಂದಿರುವುವು. ಪರರಾರಾದರೂ ದುರ್ಗದ ರಹಸ್ಯಗಳನ್ನು ತಿಳಿದುಕೊಂಡರೆ ತತ್‍ಕ್ಷಣವೇ ಶಿರಶ್ಛೇದನ ಮಾಡಬೇಕೆಂದು ನಮ್ಮ ಕಟ್ಟಳೆಯಿರುವುದು. ಸುಕುಮಾರಿಯಾದ ನಿನ್ನನ್ನು ಆ ದಿನವೇ ಶಿರಶ್ಛೇದನಮಾಡಲು ನನಗೆ ಕೈ ಬರಲಿಲ್ಲ. ಈ ವಿಷಯದಲ್ಲಿ ನನ್ನ ಗುಂಪಿನವರು ನನ್ನನ್ನು ತುಂಬ ದೂರುತ್ತಿರುವರು. ಅವರ ನಿಷ್ಠುರವಾಕ್ಯಗಳನ್ನು ಇಲ್ಲಿಯವರೆಗೂ ಸಹಿಸಿಕೊಂಡೆನು. ಇನ್ನು ಮೇಲೆ ಸಾಧ್ಯವಿಲ್ಲ. ನೀನು ನನ್ನನ್ನು ಮದುವೆಯಾದರೆ ನಿನಗೆ ಇಂತಹ ವಿಪತ್ತು ಪರಿಹಾರವಾಗುವುದು. ನನಗೆ ಬೇಕಾದಷ್ಟು ಧನವಿರುವುದು. ನನ್ನ ಪರಿವಾರವೆಲ್ಲವೂ ನಿನ್ನ ಸೇವೆಯನ್ನು ಮಾಡುವರು. ನೀನು ಅನೇಕ ಸೌಖ್ಯಗಳನ್ನು ಅನುಭವಿಸಬಹುದು. ನಿನ್ನ ತಂದೆಯು ಇಲ್ಲಿಯೇ ಸುಸ್ಥಿರವಾಗಿ ನಿಲ್ಲಬಹುದು.

ಇಂದಿರೆಯ ಹೃದಯಕ್ಕೆ ಸಿಡಿಲು ಬಿದ್ದಂತಾಯಿತು. ತನ್ನ ಚಂದ್ರಾಯುಧದಿಂದ ತಸ್ಕರಪತಿಯನ್ನು ಆ ಕ್ಷಣವೇ ಸಂಹರಿಸಬೇಕೆಂಬಷ್ಟು ರೋಷವು ಹುಟ್ಟಿತು. ಅದನ್ನು ಸಂವರಣಮಾಡಿಕೊಂಡು "ಚಂಡಸೇನಾ! ನಿನ್ನ ಮನೋಗತವನ್ನು ತಿಳಿದುಕೊಂಡೆನು. ನಿನಗೂ ನನಗೂ ನಡುವೆ ದೊಡ್ಡ ಅಂತರಾಳವಿರುವುದು.

ನೀನು ದುರ್ಮಾರ್ಗಶಿಖಾಮಣಿ. ಜನ್ಮತಃ ತಸ್ಕರನು. ಪರರ ಸೊತ್ತನ್ನು ಅಪಹರಿಸಿ ಜೀವನನಮಾಡುತ್ತಿರುವೆ. ದುರ್ಗುಣಗಳ ರಾಶಿಯಾಗಿರುವೆ. ನಿರ್ದೋಷಿಗಳನ್ನು ಹಲವು ವಿಧಗಳಿಂದ ಹಿಂಸೆಮಾಡುತ್ತಿರುವೆ. ನಿನಗಿರುವ ಪರಿವಾರವೋ ಮಧುಮಾಂಸಗಳನ್ನು ಸೇವಿಸುತ್ತ ಆವ ದೌರ್ಜನ್ಯಕ್ಕೂ ಹಿಂಜರಿಯುವವರಲ್ಲ. ನಿನ್ನದುರ್ಗಕ್ಕೆಬಂದಮಾತ್ರದಿಂದಲೇ ನನ್ನನ್ನುಸಂಹರಿಸಬೇಕೆಂದು ಅನರುಮುಷ್ಕರಹಿಡಿದಿರುವಂತೆ ನೀನೇ ಹೇಳುತ್ತಿರುವೆ! ನಮ್ಮ ತಂದೆಯುಲ್ಲಿರುವ ಔದಾರ್ಯಾದಿ ಸದ್ಗುಣಗಳನ್ನುನೀನು ಬಲ್ಲೆ. ನಿನ್ನಂತಹ ಕ್ರೂರಕರ್ಮನಲ್ಲಿಯೂ ತನ್ನ ಉದಾರ ಸ್ವಭಾವವನ್ನೇ ತೋರಿಸುತ್ತಿರುವನು. ಅಂತಹನ ಉದರದಲ್ಲಿ ಜನಿಸಿದ ನನ್ನಸ್ಥಿತಿಯನ್ನು ಹೇಳಿಕೊಳ್ಳಬೇಕಾದುದೇ ಇಲ್ಲ. ಮದುವೆಯುಲ್ಲಿಯೇ ನನಗೆ ಅಪೇಕ್ಷೆಯಿಲ್ಲ. ಒಂದು ವೇಳೆ, ನಿನ್ನನ್ನುವರಿಸಬೇಕಾಗಿ ಬಂದರೆ ನಿನ್ನಲ್ಲಿರುವ ದುರ್ಗುಣಗಳೆಲ್ಲವೂ ಹೋಗಬೇಕು. ತಸ್ಕರವೃತ್ತಿಯೂ ನಿಲ್ಲಬೇಕು. ಪರಹಿಂಸಾ ನಿರ್ಘೃಣತ್ವಗಳು ನಾಶವಾಗಬೇಕು. ನೀನು ಸಾಧುವೃತ್ತಿಗೆ ಬಂದು ರಸಿಕನಾಗಬೇಕು. ಅಲ್ಲಿಯವರೆಗೂ ನಿನಗೂ ನನಗೂ ಹೇಗೆ ಮನಸ್ಸಿನ ಐಕ್ಯವುಂಟಾಗುವುದು? ನೀನೇ ಆಲೋಚಿಸು!"

ಚಂಡಸೇನನಿಗೆ ಮಾತೇ ಹೊರಡಲಿಲ್ಲ. ಇಂದಿರೆಗೂ ತನಗೂ ಎಷ್ಟು ದೂರವಿರುವುದೆಂದು ಚೆನ್ನಾಗಿ ತಿಳಿದುಕೊಂಡನು. ಆ ಸದ್ಗುಣರಾಶಿಯನ್ನು ತಾನು ಪರಿಣಯವಾಗಲು ಅಪೇಕ್ಷಿಸುವುದು ನ್ಯಾಯವೇ? ಎಂದು ಶಂಕಿಸಿದನು. ಆದರೆ ಅವಳ ಸ್ನೇಹ,ಸೌಂದರ್ಯ, ಹಾವಭಾವಗಳು ಬಲವಾಗಿ ಅವನ ಚಿತ್ತವನ್ನು ಆಕರ್ಷಿಸುತ್ತಿದ್ದುವು. ಅವಳಿಗಾಗಿ ತಾನೇಕೆ ದುರ್ಗುಣ, ದುಷ್ಟವೃತ್ತಿಗಳನ್ನು ಬಿಟ್ಟು ಸನ್ಮಾರ್ಗಕ್ಕೆ ಬರಬಾರದೆಂದು ಅಂದುಕೊಂಡನು. ಆದರೆ, ಇದು ಬಹಳ ಕಷ್ಟವಾದ ಕೆಲಸ. "ಇಂದಿರೆ! ನೀನು ನನಗೆ ಅತಿ ಕಷ್ಟವಾದ ಪರೀಕ್ಷೆಯನ್ನು ನಿಯಮಿಸಿರುವೆ. ನಿನ್ನಂತಹ ಸುಂದರಿಯನ್ನು ಹೊಂದುವುದಕ್ಕಾಗಿ ನಾನು ಯಾವ ಕಷ್ಟವನ್ನಾದರೂ ಪಡಲೇಬೇಕು. ಇಗೋ! ನಾನು ಈಕ್ಷಣ ನನ್ನ ದುರ್ಗಕ್ಕೆ ಹೋಗಿ ನನ್ನ ವ್ಯವಹಾರಗಳನ್ನು ಪರಿಷ್ಕರಿಸಿಕೊಂಡು ಸದ್ವೃತ್ತಿಯಲ್ಲಿ ನಿಂತು ನೀನು ನಿಯಮಿಸಿದ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ನಿನ್ನ ಪ್ರೀತಿಯನ್ನು ಸಂಪಾದಿಸುವೆನು. ನಿನ್ನ ತಂದೆಗೂ ಈ ವಿಷಯವನ್ನು ತಿಳಿಸು"— ಎಂದು ಹೇಳಿ ಚಂಡಸೇನನು ನಿರ್ಗಮಿಸಿದನು.

ಇಂದಿರೆಯು ತಂದೆಯ ಕೊಟ್ಟಡಿಗೆ ಬಂದು ಅವನನ್ನು ಎಚ್ಚರಿಸಿದಳು. ಎಚ್ಚೆತ್ತ ಮಿತ್ರದೇವನು "ಮಗು! ನೀನು ಇಲ್ಲಿಗೆ ಯಾವಾಗ ಬಂದೆ? ಗಾಢನಿದ್ರೆ ಬಂದುದರಿಂದ ನಿನ್ನನ್ನು ಕರೆಯಲು ಮರೆತುಹೋದೆನು. ಎಂದಿನಂತೆ ಕರೆಯ

ಲಿಲ್ಲವೆಂದು ಆಯಾಸಗೊಂಡೆಯಾ? ನಿನ್ನ ಮುಖದಲ್ಲಿ ಏನೋ ದೀರ್ಘಾಲೋಚನೆ ಮೂಡಿದಂತೆ ತೋರುತ್ತಿದೆಯಲ್ಲಾ!

**ಇಂದಿರೆ—** ಜನಕಾ! ನಮಗೆ ಸ್ಥಾನಭ್ರಂಶವಾಗುವ ಕಾಲವು ಸಮೀಪಿಸಿತು. ಉಗುರುಸುತ್ತಿನ ಮೇಲೆ ಒನಿಕೆಯು ಪೆಟ್ಟು ಬಿದ್ದಂತೆ ಲಲಿತಕುಮಾರನ ವಿಯೋಗದುಃಖದಿಂದುಂಟಾದ ದುಃಖದ ಮೇಲೆ ಮತ್ತೊಂದು ದುಃಖಕ್ಕೆ ಕಾರಣವು ಏರ್ಪಟ್ಟಿರುವುದು. ನೀನು ಮಲಗಿದ್ದಾಗ ಚಂಡಸೇನನು ಬಂದು ತನ್ನನ್ನು ಮದುವೆಯಾಗಬೇಕೆಂದು ಕೇಳಿದನು. ನಿನ್ನ ದುರ್ಗುಣ, ದುರ್ವೃತ್ತಿಗಳನ್ನು ಬಿಟ್ಟು ಸನ್ಮಾರ್ಗದಲ್ಲಿ ನಡೆಯುವವರೆಗೂ ಇದು ಸಾಧ್ಯವಾಗಲಾರದೆಂದು ಯುಕ್ತಿಯಾಗಿ ಸಮಾಧಾನಗೊಳಿಸಿದ್ದರ ಮೇಲೆ ಬದಲಾವಣೆಯಾಗಿ ಬಂದು ನನ್ನ ಪ್ರೀತಿಯನ್ನು ಸಂಪಾದಿಸುವೆನೆಂದು ಹೇಳಿ ತತ್‌ಕ್ಷಣವೇ ಹೋಗಿದ್ದಾನೆ. ಇದನ್ನು ಹೇಳಲು ಬಂದಿರುವೆನು.

**ಮಿತ್ರದೇವ—**ಮಗು! ನೀನು ಮಾಡಿದ ಯುಕ್ತಿ ಒಳ್ಳೆಯದೇ! ನಿನ್ನನ್ನು ರಕ್ಷಿಸುವುದಕ್ಕಾಗಿ ಈ ಜಗತ್ತನ್ನೇ ಬಿಡಬೇಕಾಗಿ ಬಂದರೂ ಸಿದ್ಧನಾಗಿರುವೆನು. ನಶ್ವರವಾದ ಈ ಗೃಹಾರಾಮಗಳಿಗಾಗಿ ನಾನು ಯೋಚಿಸುವೆನೆಂದು ತಿಳಿದಿರುವೆಯಾ? ನಿನ್ನ ದಾಸೀಜನಗಳಿರುವ ಭವನವು ಇದಕ್ಕಿಂತಲೂ ಸಾವಿರ ಪಾಲು ಅಧಿಕವಾಗಿರುವುದು. (ಆಕಾಶವನ್ನು ನೋಡಿ) ಹಾ! ದೈವವೇ! ನಿನ್ನ ವಿಲಾಸವನ್ನು ನಾನೆಂತು ವರ್ಣಿಸಲಿ! ಅಮ್ಮಾ! ಇಂದಿರೆ! "ದುರ್ಜನಃ ಪ್ರಿಯವಾದೀತಿ ನೈತದ್ವಿಶ್ವಾಸಕಾರಣಂ। ಮಧು ತಿಷ್ಠತಿ ಜಿಹ್ವಾಗ್ರೇ ಹೃದಿ ಹಾಲಾಹಲಂ ವಿಷಂ॥" ಎಂದು ಆರ್ಯೋಕ್ತಿಯಿರುವುದರಿಂದ ಚಂಡಸೇನನು ಈಗ ಒಳ್ಳೆಯವನಾಗಿ ಬರುತ್ತೇನೆಂದು ಹೋಗಿದ್ದರೂ ಅವನು ಪರಮ ವಿಶ್ವಾಸಘಾತುಕನೆಂದು ತಿಳಿ. ಏನು ಕಾರಣವೋ ನರಿಯಂತೆ ವಿನಯವನ್ನು ತೋರಿಸುತ್ತಿದ್ದಾನೆ. ಅಥವಾ ನಮ್ಮ ಪಾಲಿನ ದೈವವು ಅವನಿಗೆ ಇಂತಹ ಬುದ್ಧಿಯನ್ನು ಹುಟ್ಟಿಸಿ ನಮ್ಮ ಪ್ರಯಾಣವನ್ನು ತ್ವರೆಪಡಿಸುವಂತೆ ಮಾಡಿರಬಹುದು. ಹೇಗೂ ಆಗಲಿ, ಅವನು ತನ್ನ ಗುಂಪನ್ನು ಸೇರಿಸಿಕೊಂಡು ಪುನಃ ಬರುವುದರೊಳಗಾಗಿ ನಾವು ನಮ್ಮ ದಾರಿಯನ್ನು ಹಿಡಿದಿರಬೇಕು.

**ಇಂದಿರೆ—** ತಂದೆಯೇ! ಹಾಗಾದರೆ, ನಾವೆಲ್ಲಿಗೆ ಹೋಗಬೇಕು?

**ಮಿತ್ರದೇವ—** ಕಾಳಿಯಘಟ್ಟದಲ್ಲಿ ಈಶ್ವರದಾಸನೆಂಬ ನನ್ನ ಆಪ್ತಮಿತ್ರನಿರುವನು. ಅವನ ಹೆಂಡತಿಯು ನಿನ್ನನ್ನು ಎರಡು ವರುಷಗಳಿಂದ ಏಳು ವರುಷ ವಯಸ್ಸು ಬರುವವರೆಗೂ ಸಾಕಿರುವಳು. ಆ ಮನೆತನದವರೆಲ್ಲರೂ ಬಹಳ ಉತ್ತಮರು. ನಿನ್ನನ್ನು ತನ್ನ ಸ್ವಂತ ಮಕ್ಕಳಿಗಿಂತಲೂ ಅತಿ

ಶಯುವಾಗಿ ಈಶ್ವರದಾಸನ ಹೆಂಡತಿಯು ಸಾಕಿದಳು. ನಿನ್ನ ಏಳನೆಯ ವರುಷದಲ್ಲಿ ನಾನು ಇಲ್ಲಿಗೆ ಬಂದೆನು. ಆಗ ನಾನು ಪಟ್ಟ ಕಷ್ಟವನ್ನು ವರ್ಣಿಸಲಾರೆನು. ದೈವಕೃಪೆಯಿಂದ ಹೇಗೋ ಜೀವಿಸಿಕೊಂಡು ಇಲ್ಲಿಯವರೆಗೂ ಈ ನಿರ್ಜನಪ್ರದೇಶದಲ್ಲಿ ಕಾಲಕಳೆದೆವು. ಪ್ರಕೃತ, ನಾವು ಕೆಲವು ದಿನಗಳವರೆಗೂ ರಹಸ್ಯವಾಗಿದ್ದು ಮುಂದೆ ಆವುದಾದರೂ ಆಲೋಚಿಸಬೇಕು.

**ಇಂದಿರೆ**— ಹಾಗಾದರೆ, ನಾವು ವಿಾವಾರ ಪ್ರಾಂತ್ಯಕ್ಕೆ ಏಕೆ ಹೋಗಬಾರದು?

**ಮಿತ್ರದೇವ**— ಈ ಅಭಿಪ್ರಾಯವನ್ನು ಸ್ವಪ್ನದಲ್ಲಿಯಾದರೂ ನೆನಸಬೇಡ. ಆ ಪ್ರಾಂತ್ಯದಲ್ಲಿ ನನಗುಂಟಾಗುವ ಕಷ್ಟವನ್ನು ನೋಡಿ ನೀನು ಜೀವಿಸಲಾರೆ. ನಿನಗಂತಹ ವಿಪತ್ತು ಉಂಟಾಗಬಾರದೆಂದು ನಾನು ಇಲ್ಲಿ ರಹಸ್ಯವಾಗಿರುವೆನು. ಈಗ ನನ್ನ ಇಷ್ಟವಿಲ್ಲದಿದ್ದರೂ ವಿಧಿಯು ನನ್ನನ್ನೆಳೆದುಕೊಂಡು ಹೋಗುತ್ತಿರುವುದು. ಇದು ವಿಪತ್ತಿಗಾಗಿಯೋ ಅಥವಾ ಮಹಾತ್ಮ್ಯ ಕಾರಣಕ್ಕೋ ನಾನರಿಯೆನು. ಯಾವ ಕಷ್ಟವು ಬಂದರೂ ಶ್ರೇಯಸ್ಸಿಗಾಗಿಯೇ ಎಂದು ಆರ್ಯರು ಹೇಳುವರು. ಆಪತ್ತಿನಲ್ಲಿ ಧೈರ್ಯಗೆಡುವುದು ಕಾಪುರುಷರ ಲಕ್ಷಣವೇ ಅಲ್ಲದೆ ಧೀರರ ಮತವಲ್ಲ. ನಮಗೆ ಅತ್ಯಾವಶ್ಯಕವಾದ ವಸ್ತುಗಳನ್ನು ತೆಗೆದುಕೊಂಡು ಪ್ರಯಾಣಕ್ಕೆ ಸಿದ್ಧವಾಗಿರು. ನಮ್ಮ ಹಡಗು ಇಲ್ಲಿಯೇ ಇರುವುದರಿಂದ ನಾಳೆ ರಾತ್ರಿಯೇ ನಾವು ಪ್ರಯಾಣ ಬೆಳೆಸಲು ಅನುಕೂಲವಾಗಿರುವುದು. ಅಷ್ಟರೊಳಗಾಗಿ ನನ್ನ ಕಾರ್ಯಗಳನ್ನು ಸರಿಮಾಡಿಕೊಳ್ಳಬೇಕು. ಹಡಗಿನಲ್ಲಿ ನಮಗೆ ಬೇಕಾಗುವ ಆಹಾರವಸ್ತುಗಳನ್ನು ಸಹ ಸಿದ್ಧಪಡಿಸಿಕೊ"— ಎಂದು ಹೇಳಿ ಹೊರಟುಹೋದನು. ತನ್ನ ತಂದೆಯು ನುಡಿದ ಮಾತುಗಳನ್ನು ಅತ್ಯಾದರದಿಂದ ಕೇಳುತ್ತಿದ್ದ ಇಂದಿರೆಯು "ನಿನ್ನ ದಾಸೀಜನಗಳಿರುವ ಭವನವು ಇದಕ್ಕಿಂತಲೂ ಸಾವಿರಪಾಲು ಅಧಿಕವಾಗಿರುವುದು" ಎಂದು ಹೇಳಿದ ಅಭಿಪ್ರಾಯವು ಏನಿರಬಹುದು? ವಿಾವಾರಕ್ಕೆ ಹೋದರೆ ಕಷ್ಟಬರುವುದೆಂದು ಸಹ ಸೂಚಿಸಿರುವನು. ಏನು ಕಷ್ಟವು ಬಂದೀತು? ಇವು ನನಗೆ ಬೋಧೆಯಾಗುವಂತಿಲ್ಲ. ನನ್ನ ತಂದೆಯು ತುಂಬಾ ಧರ್ಮಿಷ್ಠನು. ಧರ್ಮಿಷ್ಠರಿಗೆ ನಾನಾ ಬಗೆಯ ಪರೀಕ್ಷೆಗಳು ಬರುವುದುಂಟು. ಬಂದದ್ದು ಬರಲಿ! ನಾನೇನೋ ನನ್ನ ಸ್ವಂತ ಚಿಂತೆಗಳನ್ನು ವಿಸರ್ಜಿಸಿ ನನ್ನ ತಂದೆಯನ್ನು ಕಾಪಾಡುವೆನು. ಆತನ ದುಃಖಗಳಿಗೆ ನಿಜವಾದ ಮೂಲವಾವುದೆಂಬುದನ್ನು ಹೇಗೂ ತಿಳಿದುಕೊಂಡು ಕೈಲಾದ ಮಟ್ಟಿಗೂ ತಗ್ಗಿಸುವಂತೆ ಮಾಡುವೆನು— ಎಂದು ನಿರ್ಧರಮಾಡಿಕೊಂಡು ಪ್ರಯಾಣಸನ್ನಾಹವನ್ನು ಮಾಡತೊಡಗಿದಳು.

ಮಿತ್ರದೇವನು ಆ ದ್ವೀಪಕ್ಕೆ ಬಂದು ಗೃಹಾರಾಮುಗಳನ್ನು ಕಟ್ಟಿಕೊಂಡ ಅಂದಿನಿಂದ ಸರ್ವ ವಿಧದಲ್ಲಿಯೂ ಸಹಾಯುಮಾಡುತ್ತಿದ್ದ ದಂಪತಿಗಳಿಬ್ಬರಿದ್ದರು. ಅವರಿಬ್ಬರೂ ಮಿತ್ರದೇವನಿಗೆ ಒಡಹುಟ್ಟಿದವರೇನೋ ಎಂಬಂತಿದ್ದರು. ಸುಂದರ ವೀರನಿಗೆ ಮಿತ್ರದೇವನಲ್ಲಿ ನಿವ್ಯಾ೯ಜಾಂತಃಕರಣವು. ಅವನು ಯಾವ ಕಾರ್ಯ ವನ್ನಾದರೂ ನಿರ್ವಹಿಸುವ ಶಕ್ತಿಯುಳ್ಳವನು. ತನ್ನ ವ್ಯಾಪಾರ ಕಾರ್ಯಗಳ ನ್ನೆಲ್ಲಾ ಮಿತ್ರದೇವನು ಅವನಿಗೆ ಒಪ್ಪಿಸಿದ್ದನು. ಸುಂದರವೀರನ ಧರ್ಮಪತ್ನಿ ಮಲಯುವತಿ. ಇವಳು ತನ್ನ ಪತಿಗೆ ನಿಜವಾದ ಸಹಚಾರಿಣಿಯಾಗಿದ್ದು ಸರ್ವ ಕಾರ್ಯಗಳನ್ನೂ ನಿರ್ವಹಿಸುತ್ತಿದ್ದಳು. ತಾನೂ ತನ್ನ ಮಗಳೂ ಯಾತ್ರೆ ಮಾಡಿ ಕೊಂಡು ಬರುವ ಉದ್ದೇಶವುಳ್ಳವರಾಗಿರುವುವೆಂದು ಹೇಳಿ ಸುಂದರವೀರನನ್ನು ಸಮಸ್ತ ಕಾರ್ಯಗಳನ್ನೂ ಎಂದಿನಂತೆ ನಿರ್ವಹಿಸಬೇಕೆಂದು ಮಿತ್ರದೇವನು ನಿಯ ಮಿಸಿದನು. ತಮ್ಮ ಯಾತ್ರೆಯ ಸಂಗತಿ ಗುಟ್ಟಾಗಿಟ್ಟುಕೊಳ್ಳ ಬೇಕೆಂದು ಪ್ರಾರ್ಥಿಸಿದನು.

ಮರು ದಿನ ಪ್ರಾತಃಕಾಲ ಹತ್ತು ಗಂಟೆಗೆ ಅನಿರೀಕ್ಷಿತವಾದ ಒಂದು ಆಶ್ಚರ್ಯದ ಸುದ್ದಿಯು ಮಿತ್ರದೇವನ ಕಿವಿಗೆ ಬಿದ್ದಿತು. ಒಂದು ನೌಕಾಸೈನ್ಯವು ದ್ವೀಪಾಭಿಮುಖವಾಗಿ ಬರುತ್ತಿರುವಂತೆಯೂ ಆ ಸೈನಿಕರು ಕೆಲವು ದಿನಗಳು ದ್ವೀಪದಲ್ಲಿ ನಿಂತು ಕಳ್ಳರನ್ನೆಲ್ಲಾ ನಿಪಾತಮಾಡಿ ಹೋಗುವಂತೆ ನಿಶ್ಚಯವಾಗಿ ರುವಂತೆಯೂ ತಿಳಿದುಬಂದಿತು. ಅಷ್ಟರಲ್ಲಿಯೇ ಒಬ್ಬ ಸೇವಕನು ಮುದ್ರೆ ಹಾಕಿದ ಒಂದು ಪತ್ರವನ್ನು ಮಿತ್ರದೇವನಿಗೆ ತಂದುಕೊಟ್ಟನು. ಅದನ್ನು ಬಿಚ್ಚಿ ನೋಡಲಾಗಿ ಲಲಿತಕುಮಾರನು ಬರೆದ ಕಾಗದವಾಗಿದ್ದಿತು. ಆ ಕಾಗದದಲ್ಲಿ ಹೀಗೆ ಬರೆಯಲ್ಪಟ್ಟಿದ್ದಿತು:—

"ಪೂಜ್ಯರಿಗೆ ನಮಸ್ಕಾರಗಳು. ತಮ್ಮ ಅಪ್ಪಣೆಯನ್ನು ಪಡೆದು ಹೋಗು ತ್ತಿದ್ದಾಗ ದಾರಿಯಲ್ಲಿ ಯುದ್ಧದ ಹಡಗೊಂದು ಕಾಣಿಸಿತು. ವಿಚಾರಿಸಲಾಗಿ, ಚಂಡಸೇನನು ನನ್ನನ್ನು ಕಾರಾಗೃಹದಲ್ಲಿ ಬಂದಿಯಾಗಿಟ್ಟಿರುವ ಸುದ್ದಿಯನ್ನು ಕೇಳಿ, ಡಿಲ್ಲೀಶ್ವರನು ಕೋಪಗೊಂಡು ನೌಕಾಸೈನ್ಯವನ್ನು ಕಳುಹಿಸಿರುವನೆಂದು ತಿಳಿದುಬಂದಿತು. ಅದರಲ್ಲಿ ಮಹಾಮಹಾ ವೀರರಿರುವರು. ಈ ಸಾರಿ ಆ ತಸ್ಕ ರಾಧಿಪನು ತನ್ನ ಪರಿವಾರದೊಡನೆ ಸಿಕ್ಕುವುದು ಯಥಾರ್ಥವು. ಈ ಯೋಧರು ಕೆಲವು ದಿನಗಳು ದ್ವೀಪದಲ್ಲಿಯೇ ವಾಸವಾಗಿರುವರು. ನಿಮ್ಮ ಕ್ಷೇಮವನ್ನೂ, ನಮ್ಮಿಬ್ಬರ ಪ್ರಾಣಪದಕವಾಗಿರುವ ಇಂದಿರಾದೇವಿಯ ಕ್ಷೇಮವನ್ನೂ ದಯೆ ಯಿಟ್ಟು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ನಾನು ಆರೋಗ್ಯವಾಗಿಯೇ ಇದ್ದೇನೆ. ಇಂತು ತಮ್ಮ ಪ್ರಿಯ ಜಾಮಾತ, ಲಲಿತಕುಮಾರ."

ಕಾಗದವನ್ನು ಓದಿಕೊಂಡ ತರುವಾಯ ಮಿತ್ರದೇವನು ಭೋಜನಶಾಲೆಗೆ ಹೋದನು. ಅಲ್ಲಿ ಇಂದಿರೆಯು ಸಿದ್ಧವಾಗಿದ್ದಳು. "ಮತ್ತೇನಾದರೂ ವಿಶೇಷ ವುಂಟೇ?" ಎಂದು ತಂದೆಯನ್ನು ಕೇಳಿದಳು.

**ಮಿತ್ರದೇವ—** "ಮಗು! ಪ್ರಯಾಣಸನ್ನಾಹವೆಲ್ಲವೂ ಸಿದ್ಧವಾಗಿದೆ. ಆದರೆ, ದೈವಘಟನೆಯು ಬೇರೊಂದು ವಿಧವಾಗಿದೆ. ರೇವಿಗೆ ಒಂದು ಸಂಗ್ರಾಮ ನಾವೆಯು ಬಂದಿರುವುದಂತೆ. ಅದರಲ್ಲಿರುವ ಯೋಧರು ಚಂಡಸೇನನನ್ನು ಹಿಡಿಯಲು ಬಂದಿದ್ದಾರೆ. ಲಲಿತಕುಮಾರನಿಗೆ ಚಂಡಸೇನನುಂಟುಮಾಡಿದ ಪಾಡನ್ನು ಕೇಳಿ ಡಿಲ್ಲೀಶ್ವರನು ಕೋಪಗೊಂಡು ಈ ನೌಕಾಸೇನೆಯನ್ನು ಕಳುಹಿಸಿರುವನು. ಅವನು ಪರಿವಾರದೊಡನೆ ದೊರೆಯುವವರೆಗೂ ಅವರು ದ್ವೀಪದಲ್ಲಿಯೇ ಇರುವರಂತೆ. ಈ ಸುದ್ದಿಯು ಚಂಡಸೇನನ ಕಿವಿಗೆ ಬಿದ್ದರೆ ಮಾರುವೇಷವನ್ನು ಹಾಕಿಕೊಂಡು ಓಡಿಹೋಗುವನು. ಒಂದು ವೇಳೆ ಅವನು ಹಠಾತ್ತಾಗಿ ನಮ್ಮನ್ನು ಮಾರ್ಗದಲ್ಲಿ ಕಂಡರೆ ನಮ್ಮ ಪ್ರಯಾಣಕ್ಕೆ ಭಂಗವಾಗುವುದು. ಆದುದರಿಂದ ಕೆಲವು ದಿನಗಳ ವರೆಗೂ ತನ್ನ ದುರ್ಗದಲ್ಲಿಯೇ ಗೋಪ್ಯವಾಗಿರಬೇಕೆಂದು ಅವನಿಗೆ ಬರೆಯಲು ಯೋಚಿಸಿರುತ್ತೇನೆ. ನಾವು ನಮ್ಮ ಗಮ್ಯಸ್ಥಾನವನ್ನು ಸುಖವಾಗಿ ಸೇರಿದ ತರುವಾಯ ಮುಂದಿನ ಸಂಗತಿಯನ್ನು ಆಲೋಚಿಸೋಣ. ಲಲಿತಕುಮಾರನು ಕಾಗದವನ್ನು ಬರೆದಿರುವನು. ಆರೋಗ್ಯವಾಗಿರುವನಂತೆ." ಇಂದಿರೆಗೆ ಲಲಿತಕುಮಾರನ ಕಾಗದವನ್ನು ನೋಡಬೇಕೆಂಬ ಆಸೆಯುಂಟಾಯಿತು. ಆದರೆ, ಕೇಳುವುದಕ್ಕೆ ಸಂಕೋಚಪಟ್ಟಳು. ಮಿತ್ರದೇವನು ಕೂಡ ಕಾಗದವನ್ನು ಕೊಡಲಿಲ್ಲ.

**ಮಿತ್ರದೇವ—** "ಅಮ್ಮಾ! ಇಂದಿರೆ! ನಿನ್ನ ಮನೋವ್ಯಥೆಯು ಇನ್ನೂ ಹೋಗಲಿಲ್ಲವೆಂದು ತೋರುತ್ತದೆ. ನಾನು ಸಜೀವಿಯಾಗಿರುವವರೆಗೂ ನಿನ್ನನ್ನು ಯಾವ ಕೊರತೆಯೂ ಇಲ್ಲದಂತೆ ಕಾಪಾಡುವೆನು. ನಮ್ಮ ಪ್ರಯಾಣವು ನಿರುಪ್ಲಾಧಿಕವಾಗಿ ನಡೆಯಲು ದೈವವು ಸಹಾಯ ಮಾಡಿರುವುದು".

**ಇಂದಿರೆ—** ಹಾಗಾದರೆ, ನಾವು ಎಲ್ಲಿ ಸ್ಥಿರವಾಗಿ ನಿಲ್ಲಬೇಕೆಂದು ನಿಶ್ಚಯಿಸಿರುವಿರಿ?

**ಮಿತ್ರದೇವ—** ನನಗೆ ಏನೂ ತೋರಲಿಲ್ಲ. ಪ್ರಕೃತಕ್ಕೆ ಕಾಳಿಘಟ್ಟವೇ ಸ್ಥಿರ. ಅದನ್ನು ಸೇರುವುದರೊಳಗಾಗಿ ಏನು ವಿಪತ್ತು ಸಂಭವಿಸುವುದೋ ನಾನರಿಯೆನು. ಹಡಗಿನಲ್ಲಿ ಆವುದಾದರೂ ವಿಪತ್ತುಂಟಾದರೆ ನಾವು ಒಬ್ಬರನ್ನೊಬ್ಬರು ಎಡೆಬಿಡದೆ ಗಂಗಾಮಾತೆಗೆ ನಮ್ಮ ದೇಹಗಳನ್ನರ್ಪಿಸೋಣ. ನೀರಿನಲ್ಲಿ ಕೊಳೆತು ಹೋದ ಶವಗಳು ಆರಿಗಾದರೂ ದೊರೆತರೂ ಗುರುತು ತಿಳಿಯದಿರಬೇಕೆಂಬುದೇ ನನ್ನಿಷ್ಟವು. ಈ ವಿಷಯದಲ್ಲಿ ನಿನ್ನ ಅಭಿಮತವೇನು?

## ಐದನೆಯ ಅಧ್ಯಾಯ

**ಇಂದಿರೆ**—ಪ್ರಿಯ ಜನಕಾ! ನಿಮ್ಮ ಕಷ್ಟನಿಷ್ಠುರಗಳನ್ನು ನಾನರಿಯೆನು. ನನ್ನನ್ನು ಹೇಗೆ ನಡೆಸುಕೊಳ್ಳಬೇಕೆಂದರೆ ಹಾಗೆಯೇ ನಡೆಸುಕೊಳ್ಳುವೆನು. ನಿಮ್ಮ ಮಾತೇ ನನಗೆ ವೇದವಾಕ್ಯವು.

ಸೇವಕರು ಪೆಟ್ಟಿಗೆಗಳನ್ನು ಹಡಗಿಗೆ ತೆಗೆದುಕೊಂಡು ಹೋದರು. ಯಜಮಾನನ ಆಜ್ಞೆಯಂತೆ ಕೆಲವು ಆಯುಧಗಳನ್ನು ಅದರಲ್ಲಿಟ್ಟರು. ತಂದೆಯೂ ಮಗಳೂ ಸ್ನಾನಪೂಜಾದಿ ಕಾರ್ಯಗಳನ್ನು ತೀರಿಸಿಕೊಂಡರು. ಪುರುಷವೇಷವನ್ನು ಧರಿಸೆಂದು ಇಂದಿರೆಗೆ ನಿಯಮಿಸಿದನು. ಆವಳು ಅವರಂತೆ ಮಾಡಿ ಭವನವನ್ನೆಲ್ಲಾ ಒಂದು ಸಲ ಸುತ್ತಿಬರಲು ಹೋದಳು. ರಮ್ಯವಾದ ಆ ಹರ್ಮ್ಯವನ್ನು ಬಿಟ್ಟು ಹೋಗಬೇಕಾಗಿ ಒಂದುಡಕ್ಕೆ ಪರಿತಪಿಸಿದಳು. ಗಟ್ಟಿಯಾಗಿ ಅಳುವುದಕ್ಕೆ ಸಮಯವಿರಲಿಲ್ಲ. ಹಾಗೆಯೇ ಕಣ್ಣೀರನ್ನು ಒರೆಸಿಕೊಂಡು ತನ್ನ ಹೃದಯೇಶ್ವರನಾದ ಲಲಿತಕುಮಾರನ ಸುಂದರ ವಿಗ್ರಹವನ್ನು ಮನಸಾ ಸ್ಮರಿಸಿದಳು. ಅಲ್ಲಿಂದ ಹೊರಗೆ ಬಂದು ಬಹು ಪ್ರೇಮದಿಂದ ಸಾಕುತ್ತಿದ್ದ ತರುಲತಾಗುಲ್ಮಗಳ ಅಪ್ಪಣೆಯನ್ನು ಅಪೇಕ್ಷಿಸಿದಳು. "ದೇವಗಣಗಳಿಂದ ಸುರಕ್ಷಿತಗಳಾಗಿರುವ ದ್ವಿಜನಸ್ಯವರ್ಣಗಳ ಸೋದರರೇ! ನಾನು ಹೋಗಿಬರುವೆನು. ನಿಮ್ಮಿಂದ ಹೊಂದುತಲಿದ್ದ ಮಹೋಪಕಾರಗಳನ್ನು ನಾನೆಂದಿಗೂ ಮರೆಯಲಾರೆನು. ನಾನೊಂದು ವೇಳೆ ಪುನಃ ಇಲ್ಲಿಗೆ ಬರುವ ಸಂಭವವುಂಟಾದರೆ ನಿಮ್ಮಗಳ ಸೇವೆಯನ್ನು ಎಂದಿನಂತೆ ಮಾಡಲು ಸಿದ್ಧಳಾಗಿರುತ್ತೇನೆ. ನಿಮಗೆಲ್ಲರಿಗೂ ಮಂಗಳವಾಗಲಿ!" ಎಂದು ಅತಿ ಪ್ರೇಮದಿಂದ ಮಾನಸಿಕವಾಗಿ ನುಡಿದಳು. ಇಂದಿರೆಯ ಪ್ರೇಮಭಾವವನ್ನು ಗುರುತಿಸಿ ಪ್ರತ್ಯುತ್ತರವನ್ನೀವವೋ ಎಂಬಂತೆ ಕೋಗಿಲೆಗಳು ಮಧುರಧ್ವನಿಯನ್ನು ಮಾಡತೊಡಗಿದವು. ಇದು ಶುಭಸೂಚಕವೆಂದು ತಿಳಿದು ಇಂದಿರೆಯು ಸಂತಸಗೊಂಡಳು. ಹಿಂದಿರುಗಿ ನೋಡಿದಳು. ತಾನು ಮಾಡುತ್ತಿದ್ದ ಕಾರ್ಯಗಳನ್ನೆಲ್ಲಾ ನೋಡುತ್ತಾ ತನ್ನ ತಂದೆಯು ನಿಂತಿದ್ದನು. ಅವಳ ಅಗಾಧ ಪ್ರೇಮವನ್ನು ನೋಡಿ ಮಿತ್ರದೇವನು ಮನಸಾರ ತನ್ನ ಕುಮಾರಿಯನ್ನು ಆಲಿಂಗನೆ ಮಾಡಿಕೊಂಡನು. "ನಿನ್ನಂತಹ ದಯಾಶೀಲಗಳುಳ್ಳ ಕನ್ಯೆಯರಿಗೆ ಯಾವಾಗಲೂ ಕೇಡುಂಟಾಗಲಾರದು. ಮಗೂ! ಧೈರ್ಯವಾಗಿರು" ಎಂದು ಹೇಳುತ್ತ ಮನೆಯಿಂದ ಹೊರಟನು.

ಆಕಾಶವೆಲ್ಲವೂ ಮೇಘಾವೃತವಾಗಿದ್ದಿತು. ಮಿಣುಕು ಹುಳಗಳಂತೆ ಅಲ್ಲಲ್ಲಿ ತಾರೆಗಳು ಹೊಳೆಯುತ್ತಿದ್ದುವು. "ಈ ದಿನ ಹನ್ನೆರಡು ಗಂಟೆಗಳಿಗೆ ಚಂದ್ರೋದಯವಾಗುವುದು. ಅಷ್ಟರೊಳಗಾಗಿ ನಾವು ಹಡಗನ್ನು ಸೇರಬೇಕು." ಎಂದು ಮಿತ್ರದೇವನು ಇಂದಿರೆಯ ಕಿವಿಯಲ್ಲಿ ಉಸುರಿದನು. ಆಗ ತೋಟ

ವೆಲ್ಲವೂ ನಿಶ್ಶಬ್ದವಾಗಿದ್ದಿತು. ಸ್ವಲ್ಪ ದೂರ ನಡೆಯುವುದರೊಳಗಾಗಿ ಏನೋ ಒಂದು ಶಬ್ದವು ಕೇಳಿಸಿತು. ಇಂದಿರೆಯನ್ನು ತತ್‌ಕ್ಷಣ ತನ್ನ ಪಾರ್ಶ್ವದಲ್ಲಿಟ್ಟು ಕೊಂಡು ಶಬ್ದವು ಬರುತ್ತಿದ್ದ ದಿಕ್ಕನ್ನು ಪರೀಕ್ಷಿಸಿ ನೋಡಿದನು. ಗಾಳಿಯ ಶಬ್ದವೆಂದು ನಿರ್ಧರಿಸಿಕೊಂಡು ಜಾಗ್ರತೆಯಾಗಿ ತೋಟವನ್ನು ದಾಟಿದರು. ಎಷ್ಟು ನಿರ್ಘೃಣರಾಗಿ ಕರ್ಮಾಧಿದೇವತೆಗಳು ತಮ್ಮನ್ನು ಮನೆಯಿಂದ ಹೊರಡಿಸಿದರೆಂದು ಮಿತ್ರದೇವನ ಮನಸ್ಸಿಗೆ ಹೊಳೆಯಿತು. ಹಾಗೆ ತಿಳಿಯುವುದು ತಪ್ಪೆಂದು ತತ್‌ಕ್ಷಣವೇ ಅಂತರಾತ್ಮನ ಸೂಚನೆಯು ಬಂದಿತು. ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಈಶ್ವರನನ್ನು ಬೇಡಿಕೊಂಡನು. ತನಗಾಗಿ ತನ್ನ ಪ್ರಿಯನು ಪುನಃ ಬಂದರೆ ತಾನಲ್ಲಿ ಇಲ್ಲದಿರುವುದನ್ನು ಕಂಡು ವ್ಯಥೆಗೊಳ್ಳುವನೇನೋ ಎಂದು ಇಂದಿರೆಯು ಚಿಂತಿಸಿದಳು. ಬಾಲ್ಯದಿಂದಲೂ ತನಗೆ ಆಶ್ರಯವಾಗಿದ್ದ ಆ ಸ್ಥಳವನ್ನು ಬಿಡಬೇಕಾಗಿ ಬಂದುದಕ್ಕೆ ಮತ್ತಷ್ಟು ಪರಿತಪಿಸಿದಳು. ಅಲ್ಲಿಯವರೆಗೂ ತಮ್ಮ ಸಂಗಡ ಬರುತ್ತಿದ್ದ ಮಲಯಪತೀ ಸುಂದರವೀರರ ಕಿವಿಯಲ್ಲಿ ಮಿತ್ರದೇವನು ಏನೋ ಒಂದು ಮಾತನ್ನು ಹೇಳಿದನು. ಅವರು ಪರಮಾಶ್ಚರ್ಯಭರಿತರಾದರು. ಮಿತ್ರದೇವನಿಗೆ ನಮಸ್ಕರಿಸಿ ಇಂದಿರೆಯನ್ನು ಮುದ್ದಿಟ್ಟುಕೊಂಡು ಆ ದಂಪತಿಗಳಿಬ್ಬರೂ ಹಿಂತಿರುಗಿ ಹೋದರು.

**ಇಂದಿರೆ**— ಅಪ್ಪಾ! ನೋಡಿದಿರಾ! ನಮಗೆ ಎಂತಹ ದುರ್ದಶೆಯುಂಟಾಯಿತು ?

**ಮಿತ್ರದೇವ**–"ಅಮ್ಮಾ! ಇಲ್ಲಿ ಮಾತನಾಡಕೂಡದು" ಎಂದು ಹೇಳುತ್ತ ಗಿಡಗಳ ಸಾಲಿನಲ್ಲಿ ಹೊಕ್ಕು ಹೋಗತೊಡಗಿದರು. ಏನೋ ಸಂದೇಹಾಸ್ಪದವಾದ ಸಂಭವವು ಮಿತ್ರದೇವನ ಮನಸ್ಸಿಗೆ ಸ್ಫುರಿಸಿತು. ಗಾಬರಿಯಿಂದ ಪಾರ್ಶ್ವದಲ್ಲಿದ್ದ ಒಂದು ಮರದ ಪೊಟ್ಟರೆಯನ್ನು ಕೋಲಿನಿಂದ ಪರೀಕ್ಷಿಸಿ ನೋಡಿ ಅದರಲ್ಲಿ ಇಂದಿರೆಯನ್ನು ಕುಳ್ಳಿರಿಸಿ ತಾನು ಅದಕ್ಕೆ ಅಡ್ಡವಾಗಿ ನಿಂತುಕೊಂಡನು. ಏನೆಂಬುದು ತಿಳಿಯದೆ ಇಂದಿರೆಯು ಭಯಭ್ರಾಂತಿಗಳಿಂದ ಆ ಪೊಟ್ಟರೆಯಲ್ಲಿ ಸ್ಥಾಣುವಿನೋಪಾದಿಯಲ್ಲಿ ನಿಂತಳು. ಇವರಿದ್ದ ಮರಕ್ಕೆ ಹತ್ತು ಗಜ ದೂರದಲ್ಲಿ ಯಾರೋ ಮನುಷ್ಯರು ಬಂದು ಕುಳಿತುಕೊಂಡಂತೆ ತಿಳಿಯ ಬಂದಿತು. ಚೆನ್ನಾಗಿ ನೋಡಲಾಗಿ ಚಂಡಸೇನನು ಪರಿವಾರಸಮೇತನಾಗಿ ಅಲ್ಲಿಗೆ ಬಂದಿರುವಂತೆ ಗೋಚರಿಸಿತು. ಅವರು ಈ ರೀತಿ ಸಂಭಾಷಣೆ ಮಾಡತೊಡಗಿದರು.

**ಚಂಡಸೇನ**—ಮಿತ್ರರೇ! ಮಿತ್ರದೇವನು ನನಗೆ ಬರೆದ ಪತ್ರದಲ್ಲಿ ನಾನು ನನ್ನ ದುರ್ಗದಲ್ಲಿಯೇ ಇರುವುದು ಶ್ರೇಯಸ್ಕರನೆಂದು ಸೂಚಿಸಿದ್ದನು. ನಾವು ಆ ಮಾತನ್ನು ಲಕ್ಷಿಸದೆ ಇಲ್ಲಿಗೆ ಬಂದೆವು. ವಿಚಾರಿಸಿದ್ದರಲ್ಲಿ ಆತನು ತಿಳಿಸಿದ ವಿಷಯವು ಯಥಾರ್ಥವೆಂದು ಹೊರಪಟ್ಟಿರುವುದು.

**ಒಬ್ಬ ತಸ್ಕರ**—ಯುದ್ಧದ ಹಡಗು ನಾಳೆ ಬರುವುದಷ್ಟೆ? ಅಷ್ಟರೊಳಗಾಗಿ ನಾವು ನಮ್ಮ ದುರ್ಗಕ್ಕೆ ಹೋಗಬಹುದು. ಸೈನಿಕರು ಈ ದ್ವೀಪದಲ್ಲಿರುವವರೆಗೂ ನಾವು ಹೊರಗೆ ಬರಬೇಕಾದುದಿಲ್ಲ. ಅವರು ಹೊರಟುಹೋದ ತರುವಾಯ ನಮ್ಮ ಕಾರ್ಯಗಳನ್ನಾರಂಭಿಸಬಹುದು.

**ಚಂಡಸೇನ**— ನಾವು ಈಗ ಮಿತ್ರದೇವನ ಮನೆಗೆ ಹೋಗಿ ಸಂಗತಿಗಳನ್ನೆಲ್ಲಾ ಏಕೆ ವಿಸ್ತಾರವಾಗಿ ತಿಳಿದುಕೊಳ್ಳಬಾರದು?

**ಮತ್ತೊಬ್ಬ ತಸ್ಕರ**— ಮಹಾಪ್ರಭೋ! ಈಗ ನಾವು ಅಲ್ಲಿಗೆ ಹೋಗಕೂಡದು. ಮಿತ್ರದೇವನ ಗೃಹವು ಒಂದು ದೊಡ್ಡ ಸತ್ರದಂತಿರುವುದಲ್ಲವೇ? ಆರಾರೋ ಬಂದು ಅತಿಥಿಸತ್ಕಾರಗಳನ್ನು ಅನುಭವಿಸುತ್ತಿರುವರು. ಡಿಲ್ಲೀಶ್ವರನ ಚಾರರು ಆರಾದರೂ ಅಲ್ಲಿಗೆ ಈಗ ಬಂದಿದ್ದರೆ ನಮ್ಮ ಪಾಡೇನಾಗುವುದೋ ಆಲೋಚಿಸು!

ಈ ಮಾತನ್ನು ಕೇಳಿ ಚಂಡಸೇನನು ಭಯಗೊಂಡನು. ಹಾಗಾದರೆ, ನಾವೆಲ್ಲರೂ ನಮ್ಮ ದುರ್ಗಕ್ಕೆ ಹೋಗೋಣವೆಂದು ನಿಶ್ಚಯಿಸಿ, ತೆರಳಿದನು. ಮೌನಮುದ್ರೆಯನ್ನು ವಹಿಸಿ ಮೆಲ್ಲನೆ ಮಿತ್ರದೇವನೂ ಇಂದಿರೆಯೂ ಇದ್ದ ವೃಕ್ಷದ ಪಾರ್ಶ್ವದಿಂದಲೇ ಹೊರಟುಹೋದರು. ಅವರು ದೂರ ಹೋಗುವವರೆಗೂ ಸುಮ್ಮನಿದ್ದು ತರುವಾಯ ಇಂದಿರೆಯನ್ನು ಕರೆದು "ಮಗು! ನೋಡಿದೆಯಾ? ನಮ್ಮ ಪಾಲಿಸ ದೈವವು ಈಗ ನಮ್ಮನ್ನು ಹೇಗೆ ಕಾಪಾಡಿತು? ಧೈರ್ಯಬೇಕು. ಇನ್ನು ಮೇಲೆ ನಮಗೆ ಭಯವಿಲ್ಲ"ವೆಂದು ಹೇಳುತ್ತಾ ದಾರಿ ನಡೆಯಲಾರಂಭಿಸಿದರು. ಸ್ವಲ್ಪ ಕಾಲದಲ್ಲಿಯೇ ಹಡಗನ್ನು ಸುರಕ್ಷಿತವಾಗಿ ಸೇರಿದರು. ಹಡಗು ಸಿದ್ಧವಾಗಿದ್ದಿತು. ತಮಗಾಗಿ ಏರ್ಪಡಿಸಿದ್ದ ಮೂರು ಕೊಟ್ಟಡಿಗಳನ್ನು ನೋಡಿದರು. ಒಂದರಲ್ಲಿ ಸಾಮಾನುಗಳು ಇಡಲ್ಪಟ್ಟಿದ್ದುವು. ಮತ್ತೊಂದರಲ್ಲಿ ಸ್ನಾನಪಾನಾದಿಗಳಿಗೆ ಅನುಕೂಲವಾಗಿದ್ದಿತು. ಮೂರನೆಯ ಕೊಟ್ಟಡಿಯು ಮಲಗುವ ಕೊಟ್ಟಡಿಯಾಗಿದ್ದಿತು. ಅದರಲ್ಲಿ ಮುಖ್ಯಮುಖ್ಯವಾದ ಬೆಲೆಯುಳ್ಳ ಸಾಮಾನುಗಳು ಇಡಲ್ಪಟ್ಟಿದ್ದುವಲ್ಲದೆ ತಂದೆಯೂ ಮಗಳೂ ಮಲಗುವುದಕ್ಕೆ ಅನುಕೂಲವಾದ ಸ್ಥಳವಿದ್ದಿತು. ಇಂದಿರೆಯು ಸಾಮಾನುಗಳನ್ನೆಲ್ಲಾ ಲೆಕ್ಕ ಮಾಡಿಕೊಂಡಳು. ತರುವಾಯ ಉಭಯರೂ ತಮ್ಮ ತಮ್ಮ ಹಾಸಿಗೆಗಳ ಮೇಲೆ ಮಲಗಿಕೊಂಡರು.

**ಮಿತ್ರದೇವ**— ಅಮ್ಮಾ! ಇಂದಿರೆ! ನಿನಗೆ ಭಯವಾಗುವುದೇ?

**ಇಂದಿರೆ**— ಭಯವೇನೂ ಇಲ್ಲ. ನಿಮ್ಮ ಸಮೀಪದಲ್ಲಿ ಮಲಗಿಕೊಳ್ಳಬೇಕೆಂದು ಅಪೇಕ್ಷೆಯುಂಟಾಗಿರುವುದು.

**ಮಿತ್ರದೇವ**—ಮಕ್ಕಳು ಎಷ್ಟು ದೊಡ್ಡವರಾದರೂ ತಮ್ಮ ತಂದೆತಾಯಿ ಗಳ ಸಮೀಪದಲ್ಲಿ ಮಲಗಬೇಕೆಂದು ಕೋರುವರು. ನೀನು ಚಿಕ್ಕಂದಿನಿಂದಲೂ ತಾಯಿಯ ಪ್ರೇಮವನ್ನರಿಯೆ. ಆ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ನಾನೇ ನಿನಗೆ ತಾಯಿಯ ಪ್ರೇಮವನ್ನೂ, ತಂದೆಯ ಪ್ರೇಮವನ್ನೂ ತೋರಿ ಸುತ್ತಾ ಬಂದೆನು. ನಿನಗೆ ಅಣುಮಾತ್ರ ಕಷ್ಟಬಂದರೂ ನಾನು ಸಹಿಸಲಾರೆನು. "ಹಾ! ದೈವವೇ! ನನ್ನ ಪ್ರಾಣಪದಕವಾದ ಈ ಮಗುವಿಗೆ ಇನ್ನು ಮೇಲಾ ದರೂ ದಯೆತೋರಿಸಬಾರದೇ" ಎಂದು ನುಡಿಯುತ್ತ ಮಗಳನ್ನು ತೊಡೆಯ ಮೇಲೆ ಮಲಗಿಸಿಕೊಂಡು ಬಿಕ್ಕಿಬಿಕ್ಕಿ ಅಳಲಾರಂಭಿಸಿದನು.

ಇಂದಿರೆಯು ಮೆಲ್ಲಗೆ ಎದ್ದು ತಂದೆಯ ಕಣ್ಣೀರನ್ನು ಒರೆಸುತ್ತಾ "ತಾತ! ನೀವು ಹೀಗೆ ದುಃಖಿಸಬಾರದು. ಚಂಡಮಾರುತದಿಂದ ಪರ್ವತಗಳು ಚಲಿಸುವು ದುಂಟೇ? "ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ। ಲೋಕೋತ್ತ ರಾಣಾಂ ಚೇತಾಂಸಿ ಕೋಹಿ ವಿಜ್ಞಾತು ಮರ್ಹತಿ ॥"—ಎಂಬ ಶ್ಲೋಕವನ್ನು ತಾವು ಎಷ್ಟೋ ಸಾರಿ ನನಗೆ ಹೇಳಿರುವಿರಿ. ತಾವೇ ಹೀಗೆ ಧೈರ್ಯಗೆಟ್ಟು ವಿಲಪಿಸಲಾರಂಭಿಸಿದರೆ ಸಮಾಧಾನಗೊಳಿಸುವರಾರು? ಆವ ಕಷ್ಟವು ಬಂದರೂ ತಮ್ಮೊಡನೆ ಅನುಭವಿಸಲು ಸಿದ್ಧಳಾಗಿದ್ದೇನೆ. ಕಷ್ಟಗಳೆಲ್ಲವೂ ಜೀವನದಲ್ಲಿರುವ ಶಕ್ತಿಗಳನ್ನು ಪ್ರಕಾಶಪಡಿಸುವುವೆಂದು ತಾವು ಆಗಾಗ್ಗೆ ಅಪ್ಪಣೆಕೊಡಿಸುತ್ತಿ ದ್ದಿರಿ. ಆ ಸ್ಥಿತಿಯಿಂದ ಕಷ್ಟಗಳು ನಮಗೆ ಲಾಭಕರಗಳೇ ಹೊರತು ನಷ್ಟಕರ ಗಳಲ್ಲ" ಎಂದು ಹೇಳಿ ಸಮಾಧಾನಗೊಳಿಸಿದಳು. ಮಿತ್ರದೇವನು ಮನಶ್ಶಾಂತಿ ಯನ್ನು ಪಡೆದ ತರುವಾಯ, "ತಂದೆಯೇ! ನನ್ನ ವಿಷಯವಾಗಿ ಲಲಿತಕುಮಾರ ನಲ್ಲಿ ಮಾತನಾಡುತ್ತಿದ್ದಾಗ ನನ್ನಲ್ಲಿ ಏನೋ ಒಂದು ಕಳಂಕವಿದ್ದಂತೆ ಅಪ್ಪಣೆ ಕೊಡಿಸಿದಿರಿ. ಅಂದಿನಿಂದಲೂ ಅದು ಆವುದೆಂಬುದನ್ನು ತಿಳಿದುಕೊಳ್ಳಲು ಕುತೂ ಹಲವುಳ್ಳವಳಾಗಿದ್ದೇನೆ. ನನಗಿಂತಲೂ ಪ್ರೀತಿಪಾತ್ರರು ಮತ್ತಾರೂ ತಮ ಗಿಲ್ಲವಾದುದರಿಂದ ಈ ರಹಸ್ಯವನ್ನು ನನಗೇಕೆ ತಿಳಿಸಬಾರದು? ಅಲ್ಲದೆ, ನಾನು ಇದು ವರೆಗೆ ಏನೂ ತಿಳಿಯದ ಕೂಸಾಗಿದ್ದೆನು. ಈಗ ದೊಡ್ಡವಳಾಗಿರುವೆನಷ್ಟೇ ಅಲ್ಲದೆ ನಿಮ್ಮ ಹೃದಯಬಿಲದಲ್ಲಿರುವ ರಹಸ್ಯಗಳನ್ನು ತಿಳಿದು ನಿಮ್ಮೊಡನೆ ಸಾನು ಭೂತಿಯನ್ನು ಹೊಂದಲು ಯೋಗ್ಯಳಾಗಿರುವೆನು. ನನ್ನ ತಾಯಿಯ ಸಮಾ ಚಾರವನ್ನು ಒಂದು ದಿನವಾದರೂ ನೀವು ನನಗೆ ಹೇಳಲಿಲ್ಲ. ಆಕೆಯಲ್ಲೇ ನಾದರೂ ಕುಂದಿದ್ದಿತೇ? ಆ ಕುಂದಿನಿಂದ ನನಗೂ ಕಳಂಕವುಂಟಾಗಿರುವುದೇ? ಒಂದು ವೇಳೆ ಆಕೆಯ ದೋಷವನ್ನು ಕಂಡು ಪರಿತ್ಯಜಿಸಿ ನನ್ನ ಮೇಲಿನ ವಾತ್ಸಲ್ಯ ದಿಂದ ನನ್ನನ್ನು ನಿಮ್ಮಲ್ಲಿಯೇ ಇಟ್ಟುಕೊಂಡು ಸಾಕುತ್ತಿರುವಿರಾ? ನೀವು

ರಹಸ್ಯವಾಗಿ ಜೀವಿಸಿ ರಹಸ್ಯವಾಗಿಯೇ ದೇಹತ್ಯಾಗ ಮಾಡಬೇಕೆಂದು ಆಗಾಗ್ಗೆ ಹೇಳುತ್ತಿರುವಿರಿ. ಇದಕ್ಕೆ ಕಾರಣವೇನು ? ಈ ರಹಸ್ಯಗಳೆಲ್ಲವನ್ನೂ ನನಗೆ ಒಡೆದು ಹೇಳಿದರೆ ನನ್ನ ಮನಸ್ಸಿಗುಂಟಾಗಿರುವ ಖೇದವು ಹೋಗುವುದಲ್ಲದೆ ನಿಮ್ಮ ದುಃಖವನ್ನು ಪರಿಹರಿಸಲು ಹೇಗೆ ಸಾಧ್ಯವಾಗುವುದೋ ಆಲೋಚಿಸಿ ನೋಡುವೆನು'' ಎಂದು ನುಡಿದಳು.

ಈ ಮಾತುಗಳನ್ನು ಬಹು ದೀರ್ಘಾಲೋಚನೆಯಿಂದ ಕೇಳುತ್ತಿದ್ದ ಮಿತ್ರದೇವನು ''ಈ ನನ್ನ ಮುದ್ದು ಮಗುವು ನುಡಿದ ಮಾತುಗಳು ಯಥಾರ್ಥವಾಗಿವೆ. ನನಗೆ ಇವಳಲ್ಲದೆ ಮತ್ತಾವ ಆಪ್ತರು ಈ ಲೋಕದಲ್ಲಿರುವರು? ನನ್ನ ರಹಸ್ಯಗಳನ್ನು ತಿಳಿಯಲು ಈಗ ಅರ್ಹಳಾಗಿರುವುದು ನಿಶ್ಚಯವೇ. ನನ್ನ ದುಃಖಗಳನ್ನು ಪರಿಹರಿಸಿ ಹೇಗಾದರೂ ಸಂತೋಷಚಿತ್ತನನ್ನಾಗಿ ಮಾಡಬೇಕೆಂದು ಹಂಬಲಿಸುತ್ತಿರುವಳು. ನಾನು ಯಾವ ಪಾಪವನ್ನೂ ಮಾಡಿದವನಲ್ಲ. ''ಯತೋಧರ್ಮಸ್ತತೋಜಯಃ'' ಎಂಬ ನ್ಯಾಯಾನುಸಾರ ಈ ಬಾಲಿಕೆಯ ಮೂಲಕ ನನ್ನ ಧರ್ಮಬುದ್ಧಿಯನ್ನು ಹೊರಪಡಿಸಲು ನನ್ನ ಭಾಗದ ದೈವವೇ ಯತ್ನಿಸುತ್ತಿರುವಂತೆ ತೋರುತ್ತಿದೆ. ಧರ್ಮವಿದ್ದೆಡೆಯಲ್ಲಿ ಜಯವು ತಪ್ಪದು. ಆದರೆ, ಸಿಂಹದ ಮರಿಯೆಂದೆಣಿಸದೆ ಇವಳ ಇದಿರಿನಲ್ಲಿಯೇ ಇವಳಿಗೊಂದು ಕಳಂಕವಿದೆಯೆಂದು ನಾನು ಲಲಿತಕುಮಾರನಲ್ಲಿ ಉಸುರಿದುದು ತಪ್ಪು. ಕ್ಷತ್ರಿಯವಂಶಜಳಾದ ವೀರರಮಣಿಯಾದುದರಿಂದ ಕಳಂಕದ ಮಾತನ್ನು ಹೇಗೆ ತಾನೇ ಸಹಿಸುವಳು ? ಇತಃಪರ ನನ್ನ ಸಂಗತಿಯನ್ನು ಇವಳಿಗೆ ಹೇಳದಿರುವುದು ಧರ್ಮವಲ್ಲ. ನನ್ನಂತೆ ವೀರಳು. ಕುಶಾಗ್ರಬುದ್ಧಿಯುಳ್ಳವಳು. ಸಮಯೋಚಿತಗಳನ್ನರಿತು ನಡೆಯುವವಳು. ಇವಳಲ್ಲಿ ಕಳಂಕವಿದೆಯೆಂದು ನಾನು ಪರರಲ್ಲಿ ಹೇಳಬಾರದಾಗಿದ್ದಿತು'' ಎಂದು ಬಗೆಬಗೆಯಾಗಿ ಪೇಚಾಡುತ್ತಾ ''ಮಗಳೇ! ನಿನ್ನಂತಹ ಸುಪುತ್ರಿಯನ್ನು ಹೆತ್ತ ತಾಯಿ ಹೇಗೆ ಕಳಂಕಯುಕ್ತಳಾಗಿದ್ದಾಳು? ಅವಳು ಮಹಾವಂಶಸಂಭೂತಳು. ಸದ್ಗುಣಗಳಿಗೆ ನಿಧಿಯಾಗಿದ್ದಳು. ನನ್ನ ಅರ್ಧಾಂಗಿನಿಯಾಗಿದ್ದ ನಿನ್ನ ತಾಯಿಯನ್ನು ನೀನು ಅನ್ಯಥಾ ತಿಳಿಯಬಾರದು.'' ಎಂದು ಗದ್ಗದಕಂಠದಿಂದ ಉಸುರಿದನು.

ಈಂದಿರೆಯು ಚಕಿತಳಾಗಿ ತಾನು ತನ್ನ ತಾಯಿಯ ವಿಷಯವಾಗಿ ಶಂಕಿಸಿದ ಕಳಂಕಕ್ಕಾಗಿ ಕ್ಷಮಿಸಬೇಕೆಂದು ಕೇಳಿಕೊಂಡಳು.

**ಮಿತ್ರದೇವ—** ಕುಮಾರೀ! ನಿನಗೆ ಆವ ಸಂಗತಿಯೂ ತಿಳಿಯದಾದ ಕಾರಣ ಆ ರೀತಿ ಶಂಕಿಸಲು ಅವಕಾಶವಾಯಿತು. ಪ್ರಮಾದವೇನೂ ಇಲ್ಲ ನನ್ನ ವೃತ್ತಾಂತವು ಬಹು ವಿಚಿತ್ರವಾಗಿರುವುದು. ನಿನಗೆ ನಾನು ಬಹಳ ಅಪ

ಸಾಧನವನ್ನು ಮಾಡಿರುವೆನು. ಕಳೆದುಹೋದ ಸಂಗತಿಗಾಗಿ ಚಿಂತಿಸಿ ಪ್ರಯೋಜನವೇನು? ಹಡಗಿನ ಕದಗಳನ್ನು ಭದ್ರವಾಗಿ ಮುಚ್ಚಿಕೊಂಡು ಬಾ. ನನ್ನ ಹೃದಯವೇದನೆಯನ್ನೆಲ್ಲಾ ನಿನಗೆ ಹೇಳಿ ಭಾರವನ್ನು ತಗ್ಗಿಸುವೆನು.

# ೬ನೆಯ ಅಧ್ಯಾಯ

ತಂದೆಯ ಅನುಜ್ಞೆಯಂತೆ ಇಂದಿರೆಯು ಹಡಗಿನ ಕದಗಳನ್ನು ಮುಚ್ಚಿಕೊಂಡು ಅವನ ಸಮೀಪದಲ್ಲಿ ಬಂದು ಕುಳಿತುಕೊಂಡಳು. ಮಿತ್ರದೇವನು ಹಡಗು ನಡೆಯುತ್ತಿದ್ದ ಮಾರ್ಗವನ್ನು ವಾತಾಯನಗಳ ಮೂಲಕ ದೃಷ್ಟಿಸಿ ನೋಡಿದನು. ಕೆಳಗೆ ಅಂಬುರಾಶಿ, ಮೇಲೆ ಆಕಾಶವು, ಅದರಲ್ಲಿಯ ನಕ್ಷತ್ರಗಳು ಸ್ವಚ್ಛವಾಗಿ ಕಾಣುತ್ತಿದ್ದುವು. ನಿಶಾಕಾಂತನು ಆಗಲೇ ಉದಯವಾಗಲಾರಂಭಿಸಿದ್ದನು. ಶೀತಲವಾದ ಅವನ ಕಿರಣಗಳು ಅಂಬುರಾಶಿಯ ಮೇಲೆ ಬೀಳಲು ಬೆಳ್ಳಿಯ ನೀರು ಹೊಯ್ದಂತೆ ಥಳಥಳಿಸುತ್ತಿದ್ದಿತು. ಮಿತ್ರದೇವನು ಸ್ವಲ್ಪ ಹೊತ್ತು ಈ ಪ್ರಕೃತಿ ಸೌಂದರ್ಯವನ್ನು ನೋಡುತ್ತಿದ್ದು ಪುನಃ ಮಗಳ ಕಡೆ ತಿರುಗಿ ಪ್ರೇಮದಿಂದ ಅವಳ ತಲೆಯ ಕೂದಲುಗಳನ್ನು ಸವರುತ್ತಾ ಮಾತನಾಡತೊಡಗಿದನು.

ಮೀವಾರ ಅಥವಾ ಉದಯಪುರವೆಂದು ಪ್ರಸಿದ್ಧಿಹೊಂದಿದ್ದ ಸಂಸ್ಥಾನದ ವಿಷಯವನ್ನು ನಾನು ನಿನಗೆ ಹಿಂದೆ ಹೇಳಿದ್ದೆನಷ್ಟೆ. ಆ ಸಂಸ್ಥಾನಾಧೀಶ್ವರರಿಗೆ **ಚಿತ್ತೂರು** ಬಹು ಕಾಲದಿಂದಲೂ ರಾಜಧಾನಿಯಾಗಿದ್ದಿತು. ತರುವಾಯ ಕಾರಣಾಂತರಗಳಿಂದ ಉದಯಪುರಿಯು ರಾಜಧಾನಿಯಾಯಿತು. ಇಲ್ಲಿಗೆ ಹದಿನಾರು ವರ್ಷಗಳ ಹಿಂದೆ ಪ್ರತಾಪಸಿಂಹನೆಂಬ ರಾಜನು ಅದನ್ನು ಪರಿಪಾಲಿಸುತ್ತಿದ್ದನು. ಆತನು ಸರ್ವ ಸದ್ಗುಣಸಂಪನ್ನನಾಗಿದ್ದುದರಿಂದ ಪ್ರಜೆಗಳೆಲ್ಲರೂ ಆತನನ್ನು ಪ್ರತಾಪಸಿಂಹದೇವನೆಂದು ಕರೆಯುತ್ತಿದ್ದರು. ರತ್ನಾದೇವಿಯು ಆತನ ಪಟ್ಟಮಹಿಷಿ. ಸದ್ಗುಣಗಳಲ್ಲಿ ಆಕೆಯು ಅನುಪಮಾನಳೆಂದು ಹೇಳುವುದು ಅತಿಶಯೋಕ್ತಿಯಲ್ಲ. ಪ್ರತಾಪಸಿಂಹದೇವನು ತನಗೆ ಐವತ್ತು ವರ್ಷಗಳಾಗುವವರೆಗೂ ಆ ದೇವಿಯೊಡನೆ ಸಮಸ್ತ ಸುಖಗಳನ್ನನುಭವಿಸಿದನು. ಮಕ್ಕಳಿಲ್ಲದುದರಿಂದ ಆ ರಾಜದಂಪತಿಗಳು ಪುತ್ರಾರ್ಥಿಗಳಾಗಿ ಬಹು ವಿಧ ಜಪತಪ ಹೋಮಗಳನ್ನು ಮಾಡಿದರು. ಕೊನೆಗೆ ಒಬ್ಬ ಮಗನು ಹುಟ್ಟಿದನು.

ಅವನಿಗೆ ವಿಕ್ರಮಸಿಂಹದೇವನೆಂದು ನಾಮಕರಣ ಮಾಡಿದರು. ಅವನನ್ನು ಬಹು ಪ್ರೇಮಾತಿಶಯದಿಂದ ಸಾಕಿದರು. ಹತ್ತನೆಯ ವರ್ಷದಲ್ಲಿ ಆ ರಾಜಕುಮಾರನು ನಿಧಿನಿಕ್ಷೇಪವನ್ನು ಕಳೆದುಕೊಳ್ಳುವ ಭಾಗ್ಯಹೀನನಂತೆ ತನ್ನ ತಾಯಿಯನ್ನು ಕಳೆದುಕೊಂಡನು. ತಾಯಿಯಿಲ್ಲದ ಕೊರತೆಯನ್ನು ತಿಳಿಯದಂತೆ ಅವನ ತಂದೆಯು ಅವನನ್ನು ಬಹು ಪ್ರೇಮದಿಂದ ಬೆಳೆಸಿದನು. ಪ್ರತಾಪಸಿಂಹನು ಪುನಃ ವಿವಾಹ ಮಾಡಿಕೊಳ್ಳಬೇಕೆಂದು ಆಪ್ತರು ಹೇಳುತ್ತಿದ್ದರು. ಡಿಲ್ಲೀಶ್ವರನಾದ ಅನಂಗಪಾಲನಿಗೂ ಪ್ರತಾಪಸಿಂಹನಿಗೂ ಪರಮ ಸ್ನೇಹವಿದ್ದಿತು. ಏಕೋದರರಂತೆ ಅವರು ವರ್ತಿಸುತ್ತಿದ್ದರು. ಅನಂಗಪಾಲನು ಒಂದು ಸಲ ಪ್ರತಾಪಸಿಂಹನನ್ನು ತನ್ನ ರಾಜಧಾನಿಗೆ ಕರೆಯಿಸಿ ಮುರಳಾದೇವಿಯೊಂದಿಗೆ ವಿವಾಹ ಮಾಡಿಸಿದನು. ಈ ಮುರಳಾದೇವಿಯು ಆಳ್ವಾರು ದೇಶದ ರಾಜನ ಮಗಳು. ವಿವಾಹವಾದ ತರುವಾಯ ದಂಪತಿಗಳಿಬ್ಬರನ್ನೂ ತುಂಬ ಸತ್ಕರಿಸಿ ಅನಂಗಪಾಲನು ಅವರ ರಾಜ್ಯಕ್ಕೆ ಕಳುಹಿಸಿಕೊಟ್ಟನು. ಈ ವಿವಾಹದಿಂದ ಪ್ರತಾಪಸಿಂಹನಿಗೆ ತನ್ನ ಮೊದಲಿನ ರಾಣಿಯ ಪುತ್ರನಾದ ವಿಕ್ರಮಸಿಂಹದೇವನ ಮೇಲೆ ಮತ್ತಷ್ಟು ಪ್ರೇಮವು ಹೆಚ್ಚಲು ಕಾರಣವಾಯಿತು. ಮುರಳಾದೇವಿಯೂ ತನ್ನ ಸವತಿಯ ಮಗನನ್ನು ಪ್ರೇಮದಿಂದ ಕಾಪಾಡುತ್ತಿದ್ದಳು. ಆ ಕುಮಾರನು ದಿನ ದಿನಕ್ಕೆ ವೃದ್ಧಿಹೊಂದುತ್ತಾ ಸಮಸ್ತ ಭಾಷೆಗಳಲ್ಲಿಯೂ, ಧನುರ್ವಿದ್ಯೆಯಲ್ಲಿಯೂ ಪ್ರವೀಣನಾದನು. ನಯವಿನಯಗಳಿಂದ ಕೂಡಿದ ಆ ರಾಜಕುಮಾರನನ್ನು ಪ್ರಜೆಗಳು ರಾಜನನ್ನು ಪ್ರೀತಿಸುವುದಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದರು. ತನ್ನ ಪತಿಯ ಮನೆಗೆ ಬರುವಾಗ ಮುರಳಾದೇವಿಯು ಮಾತೃಹೀನನಾದ ತನ್ನ ತಮ್ಮನನ್ನು ತನ್ನೊಡನೆ ಕರೆದುಕೊಂಡು ಬಂದಳು. ಆ ಹುಡುಗನ ವಯಸ್ಸೂ ವಿಕ್ರಮಸಿಂಹನ ವಯಸ್ಸೂ ಒಂದೇ ಆಗಿದ್ದಿತು. ಅವನ ಹೆಸರು ಮದನಪಾಲ. ವಿಕ್ರಮಸಿಂಹ ಮದನಪಾಲರು ಒಂದೆಡೆಯಲ್ಲಿಯೇ ಸಾಹಿತ್ಯ, ಧನುರ್ವಿದ್ಯೆ, ಅಶ್ವಾರೋಹಣ, ಗಜಾರೋಹಣ ಮುಂತಾದ ವಿದ್ಯೆಗಳನ್ನು ಅಭ್ಯಸಿಸಿದರು. ಇವರಿಬ್ಬರಲ್ಲಿ ವಿಕ್ರಮಸಿಂಹನು ಬುದ್ಧಿಶಾಲಿಯೆಂದು ಪ್ರಸಿದ್ಧಿಹೊಂದಿದನು. ಮದನಪಾಲನ ಮೇಲೆ ಯುವರಾಜನಿಗೆ ಅಸೂಯೆ ಇರುವುದೆಂದು ಅಂತಃಪುರದಲ್ಲಿ ಒಂದು ಪ್ರವಾದವುಂಟಾಯಿತು. ಮಲತಾಯಿಯಾದ ಮುರಳಾದೇವಿಯು ಇದಕ್ಕಾಗಿ ಯುವರಾಜನನ್ನು ದಂಡಿಸಿದಳು. ಈ ಸಂಗತಿಯನ್ನು ವಿಕ್ರಮಸಿಂಹನು ತನ್ನ ತಂದೆಗೆ ಹೇಳಲಿಲ್ಲ. ಆದರೆ, ಅವನಿಗೆ ಮನೋವ್ಯಥೆ ಮಾತ್ರವುಂಟಾಯಿತು. ಹಾಗಾದರೂ ತಂದೆತಾಯಿಗಳ ವಿಷಯದಲ್ಲಿ ಬಹು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದನು. ಇಷ್ಟರಲ್ಲಿ

ಗ್ವಾಲಿಯರದ ರಾಜನ ಮಗಳಾದ ಹೇಮಪ್ರಭಾದೇವಿಯನ್ನು ವಿಕ್ರಮಸಿಂಹನಿಗೆ ಕೊಟ್ಟು ಮದುವೆ ಮಾಡಿದರು. ರೂಪಲಾವಣ್ಯಗಳಲ್ಲಿಯೂ, ಸದ್ಗುಣ ಸಂಪತ್ತಿನಲ್ಲಿಯೂ ಹೇಮಪ್ರಭಾದೇವಿಗೆ ಸಮಾನರಾರೂ ಇರಲಿಲ್ಲ. ಪ್ರತಾಪಸಿಂಹನು ತನ್ನ ಮಗನಿಗೆ ಯುವರಾಜ ಪಟ್ಟಾಭಿಷೇಕವನ್ನು ಮಾಡಿ ರಾಜ್ಯಕಾರ್ಯಗಳನ್ನೆಲ್ಲಾ ಅವನಿಗೆ ಒಪ್ಪಿಸಿ ತಾನು ನಿಸ್ಸಂಗನಾಗಿದ್ದನು. ಮುರಳಾದೇವಿಗೆ ಇದು ಸರಿಬೀಳಲಿಲ್ಲ. ಹೇಮಪ್ರಭಾದೇವಿಯು ತನ್ನ ಅತ್ತೆಮಾವಂದಿರಲ್ಲಿ ನಯವಿನಯಗಳನ್ನು ತೋರಿಸುತ್ತಾ ಭಕ್ತಿಯಿಂದಿದ್ದಳು. ಮುರಳಾದೇವಿಯು ಸೊಸೆಗೆ ಆವುದೋ ಒಂದು ಬಾಧೆಯನ್ನುಂಟುಮಾಡುತ್ತಿದ್ದಳು. ಯುವರಾಜನು ತನ್ನರಾಣಿಯ ಮನೋವ್ಯಥೆಯನ್ನು ಆಗಾಗ್ಗೆ ಅವಳ ಮುಖಭಾವದಿಂದ ಗುರುತಿಸುತ್ತಿದ್ದನು. ಅದಕ್ಕೆ ಕಾರಣವನ್ನು ವಿಚಾರಿಸದೆಯೇ ಆ ವ್ಯಥೆಯನ್ನು ಹೋಗಲಾಡಿಸುವ ಉಪಾಯವನ್ನು ಮಾತ್ರ ಮಾಡುತ್ತಿದ್ದನು. ಒಂದು ವೇಳೆ ವ್ಯಥೆಗೆ ಕಾರಣವನ್ನು ಕೇಳಿದರೂ ಆ ಮಾನವತಿಯು ದೇಹದಲ್ಲೇನೋ ಅಸ್ವಸ್ಥತೆಯಿದೆ ಎಂದು ಉತ್ತರ ಕೊಡುತ್ತಾ ತನ್ನ ಪತಿಗೆ ಮನೋವ್ಯಥೆಯನ್ನು ಹೋಗಲಾಡಿಸಿ ಆಹ್ಲಾದವನ್ನುಂಟುಮಾಡುತ್ತಿದ್ದಳು. ಇಂತಹ ಸುಗುಣಸಂಪನ್ನಳಾದ ತನ್ನ ರಾಣಿಯೊಂದಿಗೆ ವಿಕ್ರಮಸಿಂಹನು ಸಕಲ ಸುಖಗಳನ್ನನುಭವಿಸುತ್ತಿದ್ದನು. ಕಾಲಕ್ರಮದಲ್ಲಿ ಅವರಿಗೆ ಒಂದು ಹೆಣ್ಣು ಮಗುವು ಹುಟ್ಟಿತು. ಜನ್ಮೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ಒಂದು ಶುಭಮುಹೂರ್ತದಲ್ಲಿ ಮಗುವಿಗೆ ಚಂಪಕಮಾಲಿನಿ ಎಂದು ನಾಮಕರಣ ಮಾಡಿದರು. ರತ್ನಾದೇವಿಯ ರೂಪವನ್ನು ಹೋಲುತ್ತಿದ್ದ ಆ ಕುಮಾರಿಯು ತನ್ನ ತಾತನಾದ ಪ್ರತಾಪಸಿಂಹನಿಗೆ ಅತಿ ಪ್ರಿಯಳಾದಳು. ಆತನು ಸರ್ವದಾ ಆ ಮಗುವನ್ನು ಎತ್ತಿಕೊಂಡಿರುತ್ತಿದ್ದನು. ರಾಜಾಸ್ಥಾನದಲ್ಲಿ ಕೂಡ ಆ ಮಗುವನ್ನು ಬಿಟ್ಟಿರುತ್ತಿರಲಿಲ್ಲ. ದಾದಿಗಳು ಸರ್ವದಾ ಕಾದುಕೊಂಡಿರಬೇಕಾಗಿದ್ದಿತು.

"ಪ್ರಿಯೇ! ನನ್ನ ಭಾಗದ ಲಕ್ಷ್ಮಿಯಂತಿರುವ ಈ ಕೂಸಿನ ಕೂದಲು, ಕಣ್ಣುಗಳು ಯುವರಾಜನನ್ನು ಹೋಲಿ ಇವೆ. ದೇಹಕಾಂತಿಯು ಮಾತ್ರ ರತ್ನಾದೇವಿಯ ದೇಹಕಾಂತಿಯಂತಿರುವುದು. ಈ ಶಿಶುವು ಪುನಃ ಪುನಃ ಗತಿಸಿದ ನನ್ನ ಪಟ್ಟಮಹಿಷಿಯ ಜ್ಞಾಪಕವನ್ನು ಕೊಡುತ್ತಿರುವುದು. ಯೌವನವತಿಯಾದಾಗ ಈ ಬಾಲೆಯು ತಂದೆತಾಯಿಗಳ ರೂಪವನ್ನು ಸಹ ಮೀರುವಳು. ನನ್ನ ಮಗುವ ಮೇಲಿನ ವಾತ್ಸಲ್ಯದ ಫಲವಾಗಿ ಅವನಿಗೆ ಮುಂದೆ ಗಂಡು ಮಗುವುಂಟಾದರೂ ಜೀವಿಸಿರುವವರೆಗೂ ಚಂಪಕಮಾಲಿನಿಯೇ ಸಿಂಹಾಸನಕ್ಕೆ ಅಧಿಕಾರಿಣಿ

ಯಾಗಿರಬೇಕೆಂದು ಪ್ರಕಟಿಸುವೆನು. ಹಾಗೆ ಮಾಡುವುದರಿಂದ ಸ್ವರ್ಗಸ್ಥಳಾದ ನನ್ನ ದೇವಿಗೆ ತೃಪ್ತಿಯಾಗುವುದು" ಎಂದು ಮುರಳಾದೇವಿಯೊಡನೆ ಪ್ರತಾಪ ಸಿಂಹನು ಪ್ರಸ್ತಾಪಿಸಿದನು.

**ಮುರಳಾದೇವಿ**—ನಾಥಾ! ನಿಮ್ಮ ಅಭಿಪ್ರಾಯವು ನನಗೆ ಸಮ್ಮತವೇ. ಆದರೆ, ನಿಮ್ಮ ಪೌತ್ರಿಯನ್ನು ನನ್ನ ತಮ್ಮ ಮದನಪಾಲನಿಗೆ ಕೊಡುವುದಾಗಿ ವಾಗ್ದಾನ ಮಾಡಬೇಕು.

ಈ ಮಾತನ್ನು ಕೇಳಿದ ಪ್ರತಾಪಸಿಂಹನು ಘಾಸಿಪಟ್ಟ ಸರ್ಪದಂತೆ ಬುಸು ಗುಟ್ಟುತ್ತಾ "ಏನು? ನೀನು ಎಂತಹ ವಾಗ್ದಾನವನ್ನು ಅಪೇಕ್ಷಿಸಿದೆ! ನನ್ನ ಪ್ರೀತಿಯ ಪುತ್ರನನ್ನು ಅಡವಿಯ ಪಾಲುಮಾಡಿ, ಲೋಕೋತ್ತರ ಸುಂದರಿ ಯಾಗಿರುವ ನನ್ನ ಪೌತ್ರಿಯನ್ನು ಧೂರ್ತಶಿಖಾಮಣಿಯಾದ ನಿನ್ನ ತಮ್ಮನಿಗೆ ವಿವಾಹಮಾಡಿಕೊಳ್ಳಬೇಕೆಂದಲ್ಲವೇ ನಿನ್ನ ಮನೋಗತವು? ನಿನಗೆ ಈಯೆರಡು ಇಷ್ಟಾರ್ಥಗಳನ್ನು ಕೊಡಲು ನಾನು ದಶರಥನಲ್ಲ. ನಾನು ಪುನಃ ಮದುವೆ ಮಾಡಿಕೊಳ್ಳಲು ಇಷ್ಟವಿಲ್ಲದವನಾಗಿದ್ದೆನು. ಡಿಲ್ಲೀಶ್ವರನು ನಿನ್ನನ್ನು ವಿವಾಹ ವಾಗುವಂತೆ ಮಾಡಿ ನನಗೆ ಈ ಪಾಡನ್ನು ತಂದನು. ಪ್ರತಾಪಸಿಂಹನು ಧರ್ಮಮಾರ್ಗವನ್ನು ಬಿಟ್ಟು ಸ್ವಲ್ಪವೂ ನಡೆಯತಕ್ಕವನಲ್ಲವೆಂದು ತಿಳಿ" ಎಂದು ನಿಷ್ಠುರವಾಗಿ ಮಾತನಾಡಿದನು. ರಾಜನ ಆಗ್ರಹರೂಪವನ್ನು ನೋಡಿ ಭಯ ಚಕಿತಳಾದ ಮುರಳಾದೇವಿಯು ಸಮಾಧಾನೋಕ್ತಿಗಳಿಂದ ಪುನಃ ಆತನ ಪ್ರೀತಿಯನ್ನು ಸಂಪಾದಿಸಿದಳು. ನಿಷ್ಕಪಟನಾದ ರಾಜನು ತನ್ನ ರಾಣಿಯು ಅಜ್ಞಾನದಿಂದ ಅಂತಹ ಪ್ರಸ್ತಾಪವನ್ನು ಮಾಡಿದಳೆಂದು ತಿಳಿದನು. ಆದರೆ, ಈ ಸಂಘಟನವೇ ಆತನ ಕುಟುಂಬವನ್ನು ಬಲು ಬಗೆಯ ಕಷ್ಟಗಳಿಗೆ ಪಾಲುಮಾ ಡಲು ಬೀಜಪ್ರಾಯವಾಗಿ ಪರಿಣಮಿಸಿತು.

ಉದಾರಚರಿತನಾದ ಪ್ರತಾಪಸಿಂಹನ ಅರಮನೆಯಲ್ಲಿ ಸಾಮಂತಜನೋ ಪಯುಕ್ತಗಳಾದ ಉತ್ಸವಗಳು ಆಗಾಗ್ಗೆ ನಡೆಯುತ್ತಿದ್ದುವು. ಆ ಕಾಲಗಳಲ್ಲಿ ರಾಜನು ಅವರೊಡನೆ ವಿನೋದವಾಗಿರುತ್ತಾ ಅವರಿಗೆ ಚಿತ್ತರಂಜನೆಯನ್ನುಂಟು ಮಾಡುತ್ತಿದ್ದನು. ತಂದೆ ಮಕ್ಕಳಿಬ್ಬರೂ ಬಹಳ ಸುಂದರರು. ಪ್ರಜೆಗಳಿಗೆ ಮನೋಹರರು. ಆ ಉಭಯರ ಸಂದರ್ಶನದಿಂದ ಪ್ರಜೆಗಳಿಗೆ ಪ್ರೀತ್ಯುತ್ಸಾಹ ಗಳು ತಾವಾಗಿಯೇ ಹುಟ್ಟುತ್ತಿದ್ದುವು. ಒಂದು ದಿನ ಮಹಾರಾಜನು ಸಾಮಂತರೊಡನೆ ವಿನೋದವಾಗಿ ಸಂಭಾಷಿಸುತ್ತಿರುವಾಗ ವಿಕ್ರಮಸಿಂಹನು ಬಂದನು. ತತ್ಕ್ಷಣವೇ ಬಹು ಪ್ರೀತಿಯಿಂದ ಅವನನ್ನು ಮುದ್ದಿಟ್ಟುಕೊಂಡು ಮಹಾರಾಜನು ಸಮೀಪದಲ್ಲಿ ಕುಳ್ಳಿರಿಸಿಕೊಂಡನು. ಅದೇ ಸಮಯದಲ್ಲಿ

ಮದನಪಾಲನೂ ಬಂದನು. ಮಹಾರಾಜನು ಅವನನ್ನು ಲಕ್ಷಿಸಲಿಲ್ಲ. ಅಂತಃಪುರಕ್ಕೆ ಬರುತ್ತಿದ್ದ ರಾಜಸ್ತ್ರೀಯರುಗಳಲ್ಲಿ ಸಹಿತ ಮುರಳಾದೇವಿಗಿಂತಲೂ ಯುವರಾಣಿಗೆ ಹೆಚ್ಚು ಗೌರವವು ನಡೆಯುತ್ತಿದ್ದಿತು. ಇವುಗಳೆಲ್ಲವೂ ಮುರಳಾದೇವಿಯ ಹೃದಯದಲ್ಲಿ ಶೂಲಪ್ರಾಯವಾಗಿ ನಿಂತು ಹಗೆಯನ್ನು ತೀರಿಸಿಕೊಳ್ಳಬೇಕೆಂಬ ಚಿತ್ತವೃತ್ತಿಯುಂಟಾಯಿತು. ಯುವರಾಜನನ್ನೂ ಯುವರಾಣಿಯನ್ನೂ ನೋಡಿದಾಗಲೆಲ್ಲ ಅವಳ ಮುಖವು ಕುಂದುತ್ತಿದ್ದಿತು. ಆದರೆ, ಆಂತರಿಕಭಾವವನ್ನು ಸಂವರಣಮಾಡಿಕೊಂಡು ಹೊರಗೆ ಪ್ರೀತಿವಿನಯಗಳನ್ನು ಅಭಿನಯಿಸುತ್ತಿದ್ದಳು.

ಕೆಲವು ದಿನಗಳಾದ ತರುವಾಯ ಒಂದು ದಿನ ಮಹಾರಾಜನಿಗೆ ಸ್ವಲ್ಪ ಜ್ವರ ಬಂದಿರುವುದೆಂದು ತಿಳಿಯಬಂದಿತು. ಆ ಸುದ್ದಿಯನ್ನು ಕೇಳಿದ ತತ್‌ಕ್ಷಣವೇ ಯುವರಾಜನು ತಂದೆಯ ಅಂತಃಪುರಕ್ಕೆ ಹೋಗಿ ಪಿತೃಶುಶ್ರೂಷೆಗಳನ್ನು ಮಾಡುತ್ತಿದ್ದನು. ರಾತ್ರಿ ಒಂದು ಜಾವ ಕಳೆದ ಮೇಲೆ ಜ್ವರವು ತಗ್ಗಿತು. ವೈದ್ಯರು ಔಷಧಗಳನ್ನು ಕಾಲಕಾಲಕ್ಕೆ ಕೊಡುತ್ತಿದ್ದರು. ಸುಮಾರು ರಾತ್ರಿ ಎರಡು ಘಂಟೆಯ ಸಮಯದಲ್ಲಿ ಎಚ್ಚರಗೊಂಡ ಮಹಾರಾಜನು ತನಗೆ ಉಪಚರಿಸುತ್ತಾ ಪಕ್ಕದಲ್ಲಿಯೇ ಕುಳಿತಿದ್ದ ಮುದ್ದು ಮಗನನ್ನು ನೋಡಿ "ಪುತ್ರಕಾ! ನನಗೆ ಜ್ವರ ಬಿಟ್ಟಿದೆ. ಭಯಪಡಬೇಡ. ನೀನು ನಿನ್ನ ಅಂತಃಪುರಕ್ಕೆ ಹೋಗಿ ಮಲಗುವವನಾಗು. ಅವಶ್ಯವಿದ್ದರೆ ನಿನ್ನನ್ನು ಕರೆಯಿಸುವೆನು" ಎಂದು ಹೇಳಿದನು.

ತಂದೆಯ ಇಷ್ಟದಂತೆ ಯುವರಾಜನು ತನ್ನ ಅಂತಃಪುರಕ್ಕೆ ಹೋಗಿ ಹಾಸಿಗೆಯ ಮೇಲೆ ಮಲಗಿಕೊಂಡನೇ ವಿನಾ ನಿದ್ರೆಬರಲಿಲ್ಲ. ಪುನಃ ನಾಲ್ಕು ಘಂಟೆಗೆ ಎದ್ದು ರಾಜಾಂತಃಪುರಕ್ಕೆ ಹೋಗಿ ವಿಚಾರಿಸಿದನು. ಮಹಾರಾಜನು ಸುಖವಾಗಿ ನಿದ್ರಿಸುತ್ತಿರುವನೆಂತಲೂ, ಮುರಳಾದೇವಿಯು ಅವನ ಬಳಿಯಲ್ಲಿರುವಳೆಂತಲೂ ಚಾರರು ಹೇಳಿದುದರಿಂದ ಯುವರಾಜನು ಹಿಂದಿರುಗಿಹೋದನು. ರಾತ್ರಿ ನಿದ್ರೆ ಇಲ್ಲದುದರಿಂದ ಮರುದಿನ ಬೆಳಿಗ್ಗೆ ಏಳು ಘಂಟೆಯ ವರೆಗೂ ವಿಶ್ರಮಿಸಿ ಹನು ಎಚ್ಚರಗೊಳ್ಳಲಿಲ್ಲ. ಹಠಾತ್ತಾಗಿ ರಾಜಾಂತಃಪುರದಲ್ಲಿ ರೋದನಶಬ್ದವುಂಟಾದುದು. ಆದರಿಂದ ಚಕಿತನಾಗಿ ಎದ್ದ ಯುವರಾಜನು ಸಂಗತಿಯೇನೆಂದು ವಿಚಾರಿಸುವಲ್ಲಿ ಮಹಾರಾಜನನ್ನು ಯಾರೋ ಕೊಂದರೆಂಬ ವಾರ್ತೆಯು ಅವನ ಕಿವಿಗೆ ಬಿದ್ದಿತು. ಸಿಡಿಲು ಬಡಿದವನಂತೆ ಮೂರ್ಛಿತನಾದನು. ಚೇತರಿಸಿಕೊಂಡು ಏಳುವುದರೊಳಗಾಗಿ ಯಾರೋ ಅವನ ಹಸ್ತಗಳಿಗೆ ಬೇಡಿಗಳನ್ನು ತೊಡಿಸಿದ್ದರು. ಚೆನ್ನಾಗಿ ಎಚ್ಚೆತ್ತು ಸುತ್ತಲೂ ನೋಡುತ್ತಿರಲು ಯಾರೋ ಬಂದು ಅವನನ್ನು ಕಾರಾಗೃಹಕ್ಕೆ ಕರೆದುಕೊಂಡು ಹೋಗಿ ಅದರಲ್ಲಿ ಪ್ರವೇಶಗೊಳಿಸಿದರು.

ಇಂದಿರೇ! ನೋಡಿದೆಯಾ ಪ್ರಪಂಚದ ಚಿತ್ರವನ್ನು! ಇನ್ನೂ ಅತಿಶಯವಾದ ಸಂಗತಿಗಳನ್ನು ಮುಂದೆ ಕೇಳುವೆ.

**ಇಂದಿರೆ**— ಜನಕಾ! ಇವೆಲ್ಲವೂ ಕರ್ಮಾಯತ್ತವಲ್ಲವೇ! "ಅವಶ್ಯ ಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ!" ಎಂದು ಆರ್ಯರು ಹೇಳಿ ರುವುದರಿಂದ ಪುರಾಕೃತಕರ್ಮದಿಂದ ಇಂತಹ ಸಂಭವಗಳುಂಟಾಗುವುವು. ಅವುಗಳನ್ನು ಅನುಭವಿಸಬೇಕಲ್ಲವೇ?

**ಮಿತ್ರದೇವ**—ಪುತ್ರೀ! ತದನಂತರ ನಡೆದ ಸಂಗತಿಗಳು ಯುವರಾಜನಿಗೆ ತಿಳಿಯಲಿಲ್ಲ. ಉದಯಪುರದಲ್ಲಿ ಡಿಲ್ಲೀಶ್ವರನ ಪ್ರತಿನಿಧಿಯೊಬ್ಬನಿದ್ದನು. ಸಂಸ್ಥಾನಾಧೀಶ್ವರನ ಮೇಲೆ ಅವನ ಅಧಿಕಾರವು ನಡೆಯುತ್ತಿದ್ದಿತು. ಮಹಾರಾಜನು ಬೆಳಗಿನಜಾಮ ಐದು ಗಂಟೆಗೆ ಸ್ವರ್ಗಸ್ಥನಾದನೆಂತಲೂ, ಅವನನ್ನು ಯುವ ರಾಜನೇ ಕೊಂದನೆಂತಲೂ, ತನ್ನ ವಿವಾಹವಾದವೊದಲು ಯುವರಾಜನಿಗೆ ತನ್ನಲ್ಲಿ ಅಸೂಯೆಯುಂಟಾಗಿ ಕೊನೆಗೆ ಈ ಘೋರಕೃತ್ಯವಾಗಿ ಪರಿಣಮಿಸಿ ತೆಂತಲೂ ಬರೆದು ಮುರಳಾದೇವಿಯು ಆ ಅಧಿಕಾರಿಗೆ ತ್ವರೆಯಾಗಿ ಪತ್ರವನ್ನು ಕಳುಹಿಸಿದಳು. ತರುವಾಯ ಕ್ರಮವಾಗಿ ವಿಚಾರಣೆಯು ನಡೆಯಿತು. ಒಂದು ಕತ್ತಿಯನ್ನು ತಂದು ತೋರಿಸಿದರು. ಅದು ತನ್ನದೆಂನು ಯುವರಾಜನು ಒಪ್ಪಿಕೊಂಡನು. ಅದು ರಕ್ತಮಯವಾಗಿದ್ದಿತಂತೆ. ಯುವರಾಜನಿಗೆ ಆ ಸಂಗತಿ ಗೊತ್ತಿಲ್ಲ. ಒಂದು ಕೈವಸ್ತ್ರವು ರಕ್ತಮಯವಾಗಿದ್ದಿತು. ಅದು ಕೂಡ ಯುವರಾಜನದೆಂದು ಸಿದ್ಧರವಾಯಿತು. ಮಗುವೇ! ಹೇಳತಕ್ಕುದು ಮತ್ತೇ ನಿದೆ? ಯುವರಾಜನೇ ಪಿತೃಹಂತಕನೆಂದು ತೀರ್ಮಾನವಾಯಿತು. ಅವನ ಶಿರಶ್ಛೇದನಗಾಗಿ ಡಿಲ್ಲೀಶ್ವರನ ಆಜ್ಞೆಯನ್ನು ಇದಿರು ನೋಡುತ್ತಿದ್ದರು. ಆರು ತಿಂಗಳು ಕಳೆದ ತರುವಾಯ ಒಂದು ದಿನ ಯುವರಾಜನ ಶಿರಶ್ಛೇದನೆಗಾಗಿ ಡಿಲ್ಲೀ ಶ್ವರನ ಆಜ್ಞೆಯು ಬಂದಿರುವುದೆಂತಲೂ, ಮರುದಿನ ಆ ಕಾರ್ಯವು ನಡೆಯುವು ದೆಂತಲೂ, ಪ್ರವಾದವು ಹೊರಟಿತು. ಈ ವಾರ್ತೆಯನ್ನು ಕೇಳಿದ ರಾಜಧಾನಿ ಯೆಲ್ಲವೂ ಅಕಟಕಟಾ! ಎಂದು ಪರಿತಪಿಸಿತು. ಆರು ತಿಂಗಳವರೆಗೂ ಕಾರಾಗೃಹ ದಲ್ಲಿ ಯುವರಾಜನು ಅನುಭವಿಸಿದ ನರಕಯಾತನೆಯನ್ನು ಯಾರು ತಾನೇ ವರ್ಣಿ ಸಬಲ್ಲರು? ಒಂದು ದಿನ ರಾತ್ರಿ ಹನ್ನೆರಡು ಘಂಟೆಯ ಸಮಯದಲ್ಲಿ ಯುವರಾ ಜನು ಬಂದಿಖಾನೆಯಲ್ಲಿ ನೆಲದಮೇಲೆ ಮಲಗಿರಲು ಯಾರೋ ಬಂದು ತಟ್ಟಿ ಎಬ್ಬಿಸಿದಂತಾಯಿತು. ಮರಣಕ್ಕೆ ಸಿದ್ಧನಾಗಿದ್ದ ಆ ಯುವರಾಜನು ಯಾರೆಂದು ಕೂಡ ಕೇಳದೆ ಸುಮ್ಮನಿದ್ದನು. "ಮಗನೇ! ನಿನಗಾಗಿ ನಾನು ಬಂದಿರುವೆನು" ಎಂದು ಹೇಳುತ್ತಾ ಆ ವ್ಯಕ್ತಿಯು ಕೈಕೋಳಗಳನ್ನು ಕತ್ತರಿಸಿ ವಸ್ತ್ರಗಳನ್ನೂ

ಸ್ವಲ್ಪ ದ್ರವ್ಯವನ್ನೂ ಕೊಟ್ಟು ಕಾರಾಗೃಹದಿಂದ ಹೊರಕ್ಕೆ ತಂದು ಬಿಟ್ಟು "ಎಲ್ಲಿಯಾದರೂ ಹೋಗಿ ಸುಖವಾಗಿ ಜೀವಿಸು" ಎಂದು ಹೇಳಿ ಹೊರಟು ಹೋದನು. ಆ ವ್ಯಕ್ತಿ ಯಾರೋ ಯುವರಾಜನಿಗೆ ತಿಳಿಯಲಿಲ್ಲ. ಅವನ ಧ್ವನಿ ಮಾತ್ರ ಪರಿಚಯದ ಧ್ವನಿಯಾಗಿದ್ದಿತು. ಕುಮಾರನು ಹಾಗೆಯೇ ಸ್ತಂಭೀ ಭೂತನಾಗಿ ನಿಂತನು. ನನಗೆ ಮರಣವೇ ಕ್ಷೇಮಕರವೆಂದು ತೋರುತ್ತದೆ. ತಿರುಗಿ ನಾನು ಕಾರಾಗೃಹಕ್ಕೇ ಏತಕ್ಕೆ ಹೋಗಬಾರದೆಂದು ಎಣಿಸಿದನು. ಕೂಡಲೇ "ಬೇಡ, ಬೇಡ, ಪುತ್ರಕಾ! ನೀನು ಭೂಗೃಹವನ್ನು ಸೇರು" ಎಂದು ಯಾರೋ ಅವನ ಕಿವಿಯಲ್ಲಿ ಹೇಳಿದಂತಾಯಿತು. ಚಕಿತನಾಗಿ ತತ್‍ಕ್ಷಣವೇ ಭೂಗೃಹವನ್ನು ಸೇರಿದನು. ಕೆಲವು ದಿನಗಳಾದ ಬಳಿಕ ಅವನಿಗೆ ಆ ಭೂಗೃಹ ದಲ್ಲಿ ಆಲೋಚಿಸುವ ಶಕ್ತಿಯುಂಟಾದುದು. ಅಂದಿನಿಂದ ಬೇಕಾದ ವಸ್ತುಗ ಳನ್ನು ರಾತ್ರಿಯ ವೇಳೆಗಳಲ್ಲಿ ಹೊರಗೆ ಬಂದು ಕೊಂಡುಕೊಳ್ಳುತ್ತಿದ್ದನು. ಒಕ್ಕ ಲಿಗರ ವೇಷವನ್ನು ಧರಿಸಿ ಬಡಜನರೊಡನೆ ಬೆರೆತು ಅವರ ಸುಖದುಃಖಗಳನ್ನು ವಿಚಾರಿಸುತ್ತಾ ಕೈಲಾದ ಸಹಾಯವನ್ನು ಮಾಡುತ್ತಿದ್ದನು. ಬಡ ಜನರು ಕೂಡ ಇವನಲ್ಲಿ ವಿಶ್ವಾಸವುಳ್ಳವರಾಗಿ ಬೇಕಾದ ಸಹಾಯ ಮಾಡುತ್ತಿದ್ದರು.

ಮುರಳಾದೇವಿಯು ಮದನಪಾಲನನ್ನು ದತ್ತಪುತ್ರನನ್ನಾಗಿ ಸ್ವೀಕರಿಸಿ ಅವನಿಗೆ ರಾಜ್ಯಾಭಿಷೇಕವನ್ನು ಮಾಡಿಸಿದಳು. ತನಗೆ ರಾಜ್ಯ ಹೋದ ಚಿಂತೆಯು ಯುವರಾಜನಿಗೆ ಎಳ್ಳಷ್ಟಾದರೂ ಇರಲಿಲ್ಲ. ಆದರೆ, ತನ್ನ ಧರ್ಮಪತ್ನಿಯ ಮೇಲೂ, ಮುದ್ದು ಮಗಳ ಮೇಲೂ ಇರುವ ಅನುರಾಗವು ಆಗಾಗ್ಗೆ ಬಾಧಿ ಸುತ್ತಿದ್ದಿತು. ಮಗಳನ್ನು ನೆನಸಿಕೊಂಡು ದುಃಖಪಡುತ್ತಿದ್ದನು. ಎಲ್ಲಿ ಹೋಗು ವುದಕ್ಕೂ ಕಾಲೇ ಆಡಲಿಲ್ಲ. ಹೀಗೆ ಕೆಲವು ದಿನಗಳು ಕಳೆಯಲು ಯುವರಾಣಿಯು ತನ್ನ ಪುತ್ರಿಯೊಡನೆ ಬಾಣನದೀತೀರದಲ್ಲಿರುವ ತನ್ನ ಸ್ವಂತ ಅರಮನೆಯಲ್ಲಿ ವಾಸಿಸುತ್ತಿರುವಳೆಂತಲೂ, ಮದನಪಾಲನು ಪ್ರತಿ ದಿನವೂ ಅಲ್ಲಿಗೆ ಹೋಗಿಬರು ತ್ತಿರುವನೆಂತಲೂ ಒಬ್ಬ ಸ್ನೇಹಿತನಿಂದ ಕೇಳಿದನು. ಅಂತರಂಗದಲ್ಲಿ ಸಂತಾಪ. ಮತ್ತೇನು ಮಾಡುವುದಕ್ಕೂ ಸಾಧ್ಯವಿಲ್ಲದಿರುವುದು. ಈ ವಿಧವಾಗಿ ಕಾಲ ವನ್ನು ಇದಿರು ನೋಡುತ್ತಿದ್ದನು. ಒಂದು ದಿನ ರಾತ್ರಿ ಬೆಳದಿಂಗಳಲ್ಲಿ ಆಡುತ್ತಿದ್ದ ಆ ಮಗುವು ಮರಳಲ್ಲಿ ತನ್ನ ಹೆಜ್ಜೆಗಳನ್ನು ಇಡುತ್ತಾ ಸ್ವಲ್ಪ ದೂರ ನಡೆಯಿತು. ಯಾರೋ ಒಬ್ಬರು ತಟ್ಟನೆ ಆ ಮಗುವನ್ನು ಎತ್ತಿ ಕೊಂಡು ಹೋದರು. ತಿರುಗಿ ನೋಡುವದರೊಳಗಾಗಿ ಮಗುವು ಕಾಣಿ ಸದೆ ಹೋದುದರಿಂದ ಕೋಲಾಹಲವುಂಟಾಯಿತು. ಬೆಳಗಾದ ಮೇಲೆ ಆ ನದಿಯ ದಡದಲ್ಲಿ ಆ ಮಗುವಿನ ಆಭರಣಗಳೆಲ್ಲವೂ ಬಿದ್ದಿದ್ದುವು. ಆ ಸ್ಥಳದಲ್ಲಿ

ರಕ್ತವೂ, ಎಲುಬುಗಳೂ ಬಿದ್ದಿದ್ದುವು. ಸಮೀಪದಲ್ಲಿರುವ ಅರಣ್ಯದಿಂದ ಒಂದು ಹುಲಿಯು ಬಂದು ಆ ಮಗುವನ್ನು ತಿಂದು ಹೋಯಿತೆಂದು ನಿರ್ಧಾರವಾಯಿತು. ಆದರೆ, ಅದು ಹಾಗೆ ನಡೆಯಲಿಲ್ಲ. ತನ್ನ ಮಗಳ ಮೇಲಿನ ಪ್ರೇಮಾತಿಶಯದಿಂದ ಯುವರಾಜನು ದಾಸಿಗಳ ವಶದಲ್ಲಿ ಆಡುತ್ತಿರುವಾಗ ಆ ಮಗುವನ್ನು ಎತ್ತಿಕೊಂಡು ಹೊರಟುಹೋದನು. ಹುಲಿಯು ತಿಂದು ಹೋಗಿರಬೇಕೆಂಬ ಪ್ರವಾದವು ಹುಟ್ಟುವುದಕ್ಕಾಗಿ ಆಭರಣಗಳೂ, ಎಲುಬುಗಳೂ ದಡದಲ್ಲಿ ಹಾಕಲ್ಪಟ್ಟಿದ್ದುವು. ಇಂದಿರೇ! ತಾಯಿಯ ಐಶ್ವರ್ಯಕ್ಕೆ ಭಾಗಿನಿಯಾಗಬಹುದಾಗಿದ್ದ ಆ ಚಿಕ್ಕ ಮಗುವನ್ನು ಯುವರಾಜನು ಹಾಗೆ ಹೊತ್ತುಕೊಂಡು ಹೋದುದು ವಿವೇಕಿಯ ಕೆಲಸವಲ್ಲ. ಆದರೆ, ಆ ಸಮಯದಲ್ಲಿ ಅವನಿಗೆ ಮತ್ತೇನೂ ತೋರಲಿಲ್ಲ. ಮದನಪಾಲನು ತನ್ನ ರಾಣಿಯ ಅಂತಃಪುರಕ್ಕೆ ಹೋಗಿಬರುತ್ತಿರುವನೆಂಬ ಸುದ್ದಿಯನ್ನು ಕೇಳಿದ ಮೊದಲು ತನ್ನ ಮಗಳನ್ನು ಅಂತಹ ಸ್ಥಳದಲ್ಲಿ ಬಿಟ್ಟಿರಬಾರದೆಂಬ ರೋಷವು ಯುವರಾಜನಿಗೆ ಉಂಟಾಯಿತು. ತಂದೆಯನ್ನು ನೋಡಿದಾರಭ್ಯ ಆ ಮಗುವು ಕೂಡ ತನ್ನ ತಾಯಿಯನ್ನು ನೆನಸಲಿಲ್ಲ. ಆ ಮಗುವನ್ನು ತನ್ನ ಗುಹೆಯಲ್ಲಿಯೇ ಇಟ್ಟುಕೊಂಡಿದ್ದನು. ಆ ಗುಹೆಯ ಸಮೀಪದಲ್ಲಿನ ಪರ್ವತಪ್ರಾಂತ್ಯದಲ್ಲಿ ಮತ್ತೊಂದು ಗುಹೆಯಲ್ಲಿ ಒಬ್ಬ ಕೋಯ ಜಾತಿಯವನಿದ್ದನು. ಅವನಿಗೆ ಒಂದು ವಿಪತ್ತು ಸಂಭವಿಸಿತು. ತನ್ನ ಮಿತ್ರನ ಮೂಲಕ ಅದನ್ನು ತಿಳಿದುಕೊಂಡ ಯುವರಾಜನು ಅವನಿಗೆ ದ್ರವ್ಯಸಹಾಯ ಮಾಡಿ ವಿಪತ್ತನ್ನು ಪರಿಹರಿಸಿದನು. ಇದರಿಂದ ಕೃತಜ್ಞನಾದ ಆ ಕೋಯಿಯು ಯುವರಾಜನಿಗೆ ಎರಡು ಮೂಲಿಕೆಗಳನ್ನು ಕೊಟ್ಟನು. ಅದರಲ್ಲೊಂದನ್ನು ತೇಯ್ದು ಗಂಧವನ್ನು ದೇಹಕ್ಕೆ ಲೇಪನಮಾಡಿಕೊಂಡರೆ, ದೇಹದ ವರ್ಣವನ್ನೇ ಬದಲಾವಣೆ ಮಾಡುತ್ತಿದ್ದಿತು. ಮತ್ತೊಂದು ಪೂರ್ವದ ಬಣ್ಣವನ್ನೇ ಉಂಟುಮಾಡುತ್ತಿದ್ದಿತು. ವರ್ಣಭೇದವನ್ನುಂಟುಮಾಡುವ ಮೂಲಿಕೆಯ ಗಂಧವನ್ನು ಆ ದಿನವೇ ತಾನು ಹಚ್ಚಿಕೊಂಡು ಸ್ನಾನ ಮಾಡಿದನು. ತನ್ನ ಮಗುವಿಗೂ ಹಾಗೆಯೇ ಮಾಡಿಸಿದನು. ಆ ಮಗುವಿಗೆ ತನ್ನ ದೇಹದ ಬಣ್ಣವೇ ಗುರುತಿರಲಿಲ್ಲ. ಯುವರಾಜನು ತನ್ನ ಹೆಸರನ್ನು ಮಾರ್ಪಡಿಸಿಕೊಂಡು ಕಾಳೀಘಟ್ಟವನ್ನು ಸೇರಿ ಅಲ್ಲಿ ಒಬ್ಬ ಕಾಯಸ್ಥನ ಗೃಹದಲ್ಲಿ ತಂಗಿದನು.

ಆ ಕಾಯಸ್ಥನ ಕುಟುಂಬವು ಪೂರ್ವದಲ್ಲಿ ಮಹದೈಶ್ವರ್ಯವನ್ನನುಭವಿಸುತ್ತಿದ್ದು ವ್ಯಾಪಾರದಲ್ಲಿ ನಷ್ಟಬಂದುದರಿಂದ ಒಡತನಕ್ಕೆ ಬಂದಿದ್ದಿತು. ಆ ಕುಟುಂಬದ ಯಜಮಾನನ ಹೆಸರು ಈಶ್ವರದಾಸ. ಅವನ ಹೆಂಡತಿಯು

ಹೆಸರು ಮುಕ್ತಾವತಿ. ಆ ದಂಪತಿಗಳಿಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಯುವರಾಜನು ಅವರ ಕುಟುಂಬದಲ್ಲಿ ಸೇರಿದ ಕೆಲವು ದಿನಗಳೊಳಗಾಗಿ ಅವರಿಗೆ ತುಂಬಾ ವಿಶ್ವಾಸಪಾತ್ರನಾದನು. ಈಶ್ವರದಾಸನು ಅವನನ್ನು ಒಡಹುಟ್ಟಿದವ ನಂತೆಯೇ ಭಾವಿಸುತ್ತಿದ್ದನು. ಯುವರಾಜನ ಮಗುವನ್ನು ಬಹು ಪ್ರೀತಿ ಯಿಂದ ಕಾಪಾಡುತ್ತಿದ್ದನು. ತನಗೆ ಮೂರು ಜನ ಮಕ್ಕಳೆಂದು ಆ ಗೃಹಿಣಿಯು ಹೇಳಿಕೊಳ್ಳುತ್ತಿದ್ದಳು. ಆ ಕುಟುಂಬಕ್ಕೆ ಸುಖಜೀವನ ನಡೆಯುವಂತೆ ಯುವ ರಾಜನು ದ್ರವ್ಯಸಹಾಯ ಮಾಡುತ್ತಿದ್ದನು. ತನ್ನ ಮಗಳಿಗೆ ಕ್ರಮವಾಗಿ ವಿದ್ಯಾ ಭ್ಯಾಸ ಮಾಡಿಸಿದನು. ಐದು ವರ್ಷಗಳ ವಯಸ್ಸಿನಲ್ಲಿಯೇ ಆ ಮಗುವು ಬುದ್ಧಿಕುಶಲತೆಯನ್ನು ಪ್ರಕಾಶಿಸುತ್ತಿದ್ದಳು. ಏಳನೆಯ ವಯಸ್ಸಿನಲ್ಲಿ ಪಾಠ ಶಾಲೆಯ ವಿದ್ಯೆಯನ್ನೆಲ್ಲಾ ಸಾಂಗವಾಗಿ ಮುಗಿಸಿದಳು. ಇಂದಿರೆ! ಅಖಂಡೈಶ್ವ ರ್ಯವನ್ನು ಅನುಭವಿಸಲು ಯೋಗ್ಯಳಾಗಿದ್ದ ತನ್ನ ಪುತ್ರಿಯನ್ನು ಅರಣ್ಯ ವಾಸಕ್ಕೆ ಕರೆದೊಯ್ದು ಜನಗಳ ಮುಖವನ್ನೂ ಕೂಡ ನೋಡುವುದಕ್ಕೆ ಅವಕಾಶವಿಲ್ಲದಂತೆ ಮಾಡಿದ ತಂದೆಯನ್ನು ಕ್ರೂರಾತ್ಮನೆಂದು ಏಕೆ ಹೇಳ ಬಾರದು? ಒಂದು ವೇಳೆ ಅವನು ಸತ್ತಿದ್ದರೆ ಆ ಹುಡುಗಿಯ ಗತಿಯೇನಾಗು ತ್ತಿದ್ದಿತು?

**ಇಂದಿರೆ**— ಜನಕಾ! ತನ್ನ ಪತಿಗೆ ಉಂಟಾದ ವಿಪತ್ತನ್ನು ವಿಚಾರಿಸದೆ ಶತ್ರುವಾದ ಮದನಪಾಲನನ್ನು ತನ್ನ ಅಂತಃಪುರಕ್ಕೆ ಬರಲು ಅವಕಾಶ ಕೊಟ್ಟ ಯುವರಾಣಿಯು ವಿಶ್ವಾಸಘಾತಕಿಯೆಂದು ಎಣಿಸುವೆನು. ತನ್ನ ಧರ್ಮ ಪತ್ನಿಯು ತನ್ನ ನಿಜ ಧರ್ಮವನ್ನು ಬಿಟ್ಟು ನಡೆಯಲಾಗಿ ರೋಷವುಂಟಾಗಿ ತನ್ನ ಮಗಳನ್ನು ಅಂತಹ ನೀಚಳಲ್ಲಿ ಬಿಟ್ಟಿರಕೂಡದೆಂದು ತೀರ್ಮಾನಿಸಿ ಕರೆದು ಕೊಂಡು ಹೋದ ಯುವರಾಜನ ಚರ್ಯೆಯು ಬಹು ಶ್ಲಾಘ್ಯವಾಗಿರುವುದು. ಕಳಂಕಯುಕ್ತಳಾದ ತಾಯಿಯ ಸಮೀಪದಲ್ಲಿರುವುದಕ್ಕಿಂತಲೂ ಧರ್ಮಸ್ವರೂಪ ನಾದ ತಂದೆಯ ಬಳಿಯಲ್ಲಿರುವುದು ಮಗಳಿಗೆ ತುಂಬಾ ಶ್ರೇಯಸ್ಕರವೂ ಗೌರ ವವೂ ಆಗಿರುವುದು. ಪತ್ನಿಯ ವಿಶ್ವಾಸಘಾತಕ್ಕೆ ರೋಷವುಂಟಾದರೂ ಆಕೆಗೆ ಮತ್ತಾವ ವಿಧದಲ್ಲಿಯೂ ಕೆಡುಕನ್ನುಂಟುಮಾಡದೆ ಹೊರಟುಹೋದ ಯುವ ರಾಜನ ಉದಾರಗುಣಕ್ಕೆ ತುಂಬಾ ಸಂತೋಷಿಸುವೆನು.

ಮಿತ್ರದೇವನು ತನ್ನ ಮಗಳ ವೀರವಾಕ್ಯಗಳನ್ನು ಕೇಳಿ ಸಂತೋಷಿ ಸಿದನು. ಆದರೆ ತನ್ನ ಪುರಾಕೃತ ಕರ್ಮದಿಂದುಂಟಾದ ಸಂಘಟನೆಗಳಿಗಾಗಿ ಪರಿತ ಪಿಸಿದನು. "ಇಂದಿರೆ! ಇದುವರೆಗೆ ಹೇಳಿದ ಕಥಾವ್ಯಕ್ತಿಗಳು ಆರಿರಬಹು ದೆಂಬುದನ್ನು ಊಹಿಸಿದೆಯಾ?" ಎಂದು ಕೇಳಿದನು.

**ಇಂದಿರೆ**–ತಂದೆಯೆ! ನೀವು ಹೇಳುತ್ತಿರುವಾಗಲೇ ನನಗೆ ಅರ್ಥವಾಯಿತು–ಆ ಯುವರಾಜನೇ ನೀವೆಂತಲೂ, ಆತನು ಕರೆದುಕೊಂಡು ಬಂದ ಮಗು ನಾನೆಂತಲೂ ಸ್ಪಷ್ಟವಾಯಿತು. ಈ ಮಾತುಗಳನ್ನು ಕೇಳುತ್ತಿರುವಾಗ ದುಃಖವು ಹಿಡಿಯದಂತೆ ಬರಲು ನಿಶ್ಶಬ್ದವಾಗಿ ಕಣ್ಣೀರು ಸುರಿಸುತ್ತಿದ್ದ ತಂದೆಯ ಕಣ್ಣೀರೊರೆಸುತ್ತಾ "ಎಲ್ಲವನ್ನೂ ತಿಳಿದ ನೀವೇ ಈ ಪ್ರಕಾರ ದುಃಖ ಪಟ್ಟರೆ, ಪಾಮರ ಜನರ ಪಾಡೇನು? ಕರ್ಮವಿಧಿಯನ್ನು ತಪ್ಪಿಸುವುದು ಯಾರಿಗೆ ಸಾಧ್ಯ? ಮನುಷ್ಯರಿಗೆ ಆವ ಕಾಲದಲ್ಲಿ ಏನು ನಡೆದರೂ ಅವರ ಶ್ರೇಯಸ್ಸಿಗಾಗಿಯೇ ಎಂದು ನೀವೇ ನನಗೆ ಹೇಳಿರುವಿರಿ. ಮಾಲವೇಶನು ಗ್ರಹಚಾರವಶಾತ್ ತಸ್ಕರಾಧಿಪನ ಸೆರೆಗೆ ಸಿಕ್ಕಿದನು. ದೈವವು ಅನುಕೂಲಿಸಿ ಬಂದುದರಿಂದ ನಮ್ಮ ಸಹಾಯಕ್ಕೆ ಪಾತ್ರನಾದನು. ಪರೋಪಕಾರನಿರತರಾದುದರಿಂದ ನೀವು ಆತನಿಗೆ ಉಪಕಾರ ಮಾಡಿ ಖ್ಯಾತಿಯನ್ನು ಪಡೆದಿರಿ. ರಾವಣನು ತಾನು ಮಾಡಿದ ದುಷ್ಕೃತ್ಯಗಳಿಗಾಗಿ ಎಷ್ಟು ಕಾಲ ಕಳೆದ ಬಳಿಕ ಅವುಗಳ ಫಲವನ್ನು ಅನುಭವಿಸಬೇಕಾಗಿ ಬಂದಿತು? ಹಾಗೆಯೇ ಮುರಳಾದೇವಿಗೆ ತಾನು ಮಾಡಿದ ಘೋರಕೃತ್ಯದ ಫಲವನ್ನು ಸಕಾಲದಲ್ಲಿ ಅನುಭವಿಸಬೇಕಾಗಿ ಬರುವುದು. ಲಲಿತಕುಮಾರನನ್ನು ನೋಡಿದ ತರುವಾಯ ನಿಮಗೆ ದುಃಖವು ಹೆಚ್ಚಾದುದಕ್ಕೆ ಕಾರಣವು ಈಗ ನನಗೆ ಗೊತ್ತಾಯಿತು. ನಾನು ಇದುವರೆಗೂ ಚಿಕ್ಕವಳಾಗಿದ್ದುದರಿಂದ ಆಗಾಗ್ಗೆ ನೀವು ದುಃಖಪಡುತ್ತಿದ್ದರೂ ಅರ್ಥವಾಗುತ್ತಿರಲಿಲ್ಲ. ಈಗ ಸರ್ವವೂ ಅರ್ಥವಾಯಿತು. ಚಂಡಸೇನನಿಂದ ನೂತನ ವಿಪತ್ತು ಬಾರದಿದ್ದರೆ ನೀವು ವಜ್ರದ್ವೀಪವನ್ನು ಬಿಡುತ್ತಿರಲಿಲ್ಲ. ಆ ಸ್ಥಳವನ್ನು ಬಿಟ್ಟುದುದಕ್ಕಾಗಿ ನಾನು ತುಂಬಾ ಸಂತಪಿಸಿದೆನು. ಆದರೆ, ನಿಮ್ಮ ವೃತ್ತಾಂತವನ್ನು ಕೇಳಿದ ತರುವಾಯ ನಾವು ಮಾಡಿದ ಕೆಲಸವು ಬಹಳ ಒಳ್ಳೆಯದೆಂದು ಅರ್ಥವಾಯಿತು. ಶ್ರೀರಾಮನು ಜನಸ್ಥಾನದಲ್ಲಿಲ್ಲದಿದ್ದರೆ ರಾವಣನು ಸೀತೆಯನ್ನು ಹೇಗೆ ಅಪಹರಿಸುತ್ತಿದ್ದನು? ಸೀತಾಪಹರಣವಾಗದೆ ರಾವಣನ ವಧೆಯು ಹೇಗೆ ಆಗುತ್ತಿದ್ದಿತು? ಸೀತಾಪಹರಣವೂ, ರಾವಣನ ವಧೆಯೂ ದೈವನಿಯಮಕ್ಕನುಗುಣವಾಗಿ ನಡೆದ ಕಾರ್ಯಗಳೆಂದು ತಿಳಿಯುವೆನು. ಆ ಸಮಯದಲ್ಲಿ ಪತ್ನೀವಿಯೋಗವು ರಾಮನಿಗೆ ಕಷ್ಟವಾಗಿ ತೋರಿದರೂ ಆಕೆಯನ್ನು ಪುನಃ ಹೊಂದುವ ವ್ಯಾಜದಿಂದ ರಾವಣಾದಿ ರಾಕ್ಷಸರ ವಂಶಗಳೆಲ್ಲವನ್ನೂ ನಿರ್ಮೂಲಮಾಡಿ ತಾನು ಅವತರಿಸಿದ ಕಾರ್ಯವನ್ನು ನೆರವೇರಿಸಿ ಲೋಕವನ್ನು ಕಾಪಾಡಿದನು. ತಂದೆಯೇ! ನೀವು ಸಾಮಾನ್ಯಮನುಷ್ಯರಾಗಿದ್ದರೂ ವೀರಕ್ಷತ್ರಿಯ ವಂಶದಲ್ಲಿ ಹುಟ್ಟಿರುವಿರಿ. ಕಾಲಕರ್ಮಗಳು ಒದಗಿದಾಗ ದುಷ್ಟಾತ್ಮರನ್ನು ಸಂಹರಿಸುವುದು ನಿಮ್ಮ ಧರ್ಮವಲ್ಲವೇ?

**ಮಿತ್ರದೇವ—** ಮಗೂ! ನಿನ್ನ ಧೀರತ್ವಕ್ಕೆ ತುಂಬ ಸಂತೋಷಿಸುವೆನು. ನನ್ನನ್ನು ಉದ್ಧರಿಸುವುದಕ್ಕಾಗಿಯೇ ನೀನು ಹುಟ್ಟಿ ನನ್ನಲ್ಲಿ ಬೆಳೆದಿರುವೆಯೆಂದು ಭಾವಿಸುವೆನು. ನೀನು ಹೇಳಿದಂತೆ ನಡೆಯಲು ಸಿದ್ಧನಾಗಿರುವೆನು.

**ಇಂದಿರೆ—** ಜನಕಾ! ನೀವು ಮಾಡಬೇಕಾದ ಕಾರ್ಯವೇನೂ ಇಲ್ಲ. ದೋಷಿಗಳು ತಮ್ಮ ದೋಷದ ಫಲಗಳನ್ನು ಅನುಭವಿಸಬೇಕಾದ ಕಾಲವು ಬಂದಿದೆ. ನೀವು ಗುಪ್ತವಾಗಿಯೇ ಇದ್ದು ಕಾರ್ಯಾಲೋಚನೆಯನ್ನು ಹೇಳುತ್ತಿರಬೇಕು. ಕಾರ್ಯಭಾಗವನ್ನೆಲ್ಲಾ ನಾನೇ ವಹಿಸುವೆನು. ತತ್‌ಕ್ಷಣವೇ ಉದಯಪುರಿಗೆ ಹೋಗುವೆನು. ನಿಮ್ಮ ಅನುಜ್ಞೆಯಾಗಬೇಕು.

**ಮಿತ್ರದೇವ—** ಉದಯಪುರಿಗೆ ಹೋಗಿ ಏನು ಮಾಡಬೇಕೆಂದಿರುವೆ?

**ಇಂದಿರೆ—** ಮಹಾರಾಜನ ಹತ್ಯೆಯು ಪುನರ್ವಿಚಾರಣೆಗೆ ಬರುವಂತೆ ಮಾಡಿ, ನಿಜವಾದ ಅಪರಾಧಿಯನ್ನು ಹೊರಪಡಿಸಿ ರಾಜಾಸ್ಥಾನದಲ್ಲಿ ನಿಮ್ಮ ನಿರಪರಾಧಿತ್ವವನ್ನು ಸ್ಥಾಪಿಸಿ ಪುನಃ ನಿಮ್ಮನ್ನು ರಾಜ್ಯಾಭಿಷಿಕ್ತರನ್ನಾಗಿಮಾಡುವುದು ನನ್ನ ಮುಖ್ಯ ಕರ್ತವ್ಯವಾಗಿದೆ. ಈ ಕೆಲಸದಲ್ಲಿ ಧರ್ಮದೇವತೆಯು ನನಗೆ ಸಹಾಯ ಮಾಡುವಳೆಂದು ಪೂರ್ಣವಾದ ನಂಬುಗೆ ಇರುವುದು. ವೀರ ಕ್ಷತ್ರಿಯನ ಮಗಳಾದ ಕಾರಣ ನನ್ನ ತೀರ್ಮಾನವು ನೆರನೇರುವವರೆಗೂ ಕಾರ್ಯನಿರತಳಾಗಿರುವೆನು.

**ಮಿತ್ರದೇವ—** ಪುತ್ರೀ! ಮದನಪಾಲನು ರಾಜನನ್ನು ಕೊಂದವನೆಂದು ಎಣಿಸಿರುವೆಯಾ? ಆಹಾ! ಅವನಂತಹವನಲ್ಲ. ಕೃತ್ಯವು ನಡೆದು ಹದಿನಾರು ವರ್ಷಗಳು ಕಳೆದುವು. ಈಗ ನೀನು ಅದನ್ನು ಪುನಃ ಕೆರಳಿಸಲು ಸಾಧ್ಯವೇ? ನಿನಗೆ ಬೇಕಾದ ಗುರುತುಗಳು ರಾಜಮಂದಿರದಲ್ಲಿ ಏನು ದೊರೆಯುವುವು? ನೀನು ಆ ಕಾರ್ಯವನ್ನು ಸಾಧಿಸಲು ಹೊರಟಾಗ ಅಪಾಯವೇನಾದರೂ ಬಂದರೆ ನಿನ್ನನ್ನು ರಕ್ಷಿಸುವವರಾರು? ನಿನ್ನೊಡನೆ ನಾನು ಬರುವುದು ಹೇಗೆ? ನಿನ್ನ ಶಪಥವು ನಮ್ಮ ಉಭಯರಿಗೂ ಪ್ರಾಣಾಪತ್ತಾಗಿರುವುದಲ್ಲಾ!

**ಇಂದಿರೆ—** ತಂದೆಯೇ! ಹೀಗೆ ಕಳ್ಳತನದಿಂದ ಜೀವಿಸುವುದಕ್ಕಿಂತಲೂ ನಾವಿಬ್ಬರೂ ಸತ್ತುಹೋಗುವುದು ಒಳ್ಳೆಯದಲ್ಲವೇ? ನನ್ನನ್ನು ಅನ್ಯರು ರಕ್ಷಿಸಬೇಕಾದ ಆಗತ್ಯವಿಲ್ಲ. ಧರ್ಮದೇವತೆಯೇ ಕಾಪಾಡುವಳು. ಯುದ್ಧಕಾಲದಲ್ಲಿ ರಾಜಕುಟುಂಬದವರು ಮರೆಯಾಗಿರುವುದಕ್ಕಾಗಿ ಒಂದು ನೆಲಮಾಳಿಗೆಯು ಉದಯಪುರದಲ್ಲಿರುವುದಾಗಿ ನೀವು ಹಿಂದೆ ಅಪ್ಪಣೆಕೊಡಿಸಿದ್ದಿರಷ್ಟೆ. ಈ ಕಾರ್ಯಗಳೆಲ್ಲವೂ ಕೈಗೂಡುವವರೆಗೂ ನೀವು ಅಲ್ಲಿ ಏಕೆ ವಾಸವಾಗಿರಕೂಡದು? ನೀವು ಅಲ್ಲಿ ವಾಸವಾಗಿದ್ದರೆ ನನಗೆ ಆಗಾಗ್ಗೆ ಆಲೋಚನೆಗಳನ್ನು ಕೊಡುತ್ತಿರ

ಬಹುದು. ಒಂದು ವೇಳೆ ನಾನು ಸಿಕ್ಕಿಬೀಳುವಂತಿದ್ದರೆ ಮಾಳವೇಶನು ನನ್ನನ್ನು ಕಾಪಾಡಲಾರನೇ? ಧರ್ಮವನ್ನೇ ಆಧಾರವಾಗಿಟ್ಟುಕೊಂಡು ನಾವು ಪ್ರಯತ್ನ ಮಾಡೋಣ. ನನಗಾಗಿ ನೀವು ಭಯಪಡಕೂಡದು. ನಾವು ಅಲ್ಲಿಗೆ ಹೋಗುವುದಕ್ಕೆ ಮುಂಚೆಯೇ ನಾನು ನಿಮ್ಮಿಂದ ಕೆಲವು ಸಂಗತಿಗಳನ್ನು ತಿಳಿದುಕೊಳ್ಳಬೇಕಾಗಿರುವುದು. ಮುರಳಾದೇವಿಗೂ ಮದನಪಾಲನಿಗೂ ಆಪ್ತರಾರು? ಅವರ ನಡತೆಗಳೆಂತಹವು?

ತನ್ನ ಸುಕುಮಾರಿಯು ಹೇಳಿದ ಆಲೋಚನೆಯು ಒಳ್ಳೆಯದೆಂದು ಮಿತ್ರದೇವನಿಗೆ ಸ್ಫುರಿಸಿತು. ಏಕಾಂತ ಸ್ಥಳದಲ್ಲಿರಬೇಕಾದರೆ ಚಂಡಸೇನನು ವಿರೋಧಿಯಾದನು. ನಿರ್ಭಯವಾಗಿ ತಿರುಗಬೇಕೆಂದರೆ ಇನ್ನು ಸಾಧ್ಯವಿಲ್ಲದಿರುವುದು. ಈ ಉಭಯ ಸಂಕಟಗಳ ನಡುವೆ ತನ್ನ ಪುತ್ರಿಯು ಹೇಳಿದಂತೆ ಧರ್ಮಕ್ಕಾಗಿ ಹೊಡೆದಾಡುವುದು ನ್ಯಾಯವೆಂದು ತೋರಿತು. ತನ್ನ ಮಗಳು ಧೈರ್ಯಸ್ಥೈರ್ಯಗಾಂಭೀರ್ಯಭರಿತೆಯಾಗಿ ಕಾರ್ಯಸಾಧನೆಯನ್ನು ಮಾಡುವಳೆಂಬ ನಂಬುಗೆಯುಂಟಾಯಿತು. "ಇಂದಿರೆ! ಮುರಳಾದೇವಿಯು ಗಂಡನ ಮನೆಗೆ ಬರುವಾಗ ಆ ದೇಶದಿಂದ ಕೆಲವರು ದಾಸದಾಸೀಜನರನ್ನು ಕರೆದುಕೊಂಡು ಬಂದಳು. ಅವರಲ್ಲಿ ಫಲ್ಗುನನೆಂಬುವನು ಮದನಪಾಲನಿಗೆ ಆಪ್ತ ಸೇವಕನು. ರಾಜ್ಯಪಟ್ಟವು ಒಂದ ತರುವಾಯ ಆ ಫಲ್ಗುನನಿಗೆ ದೊಡ್ಡ ಪದವಿಯನ್ನು ಮದನಪಾಲನು ಕೊಟ್ಟಿರುವುದಾಗಿ ಲಲಿತಕುಮಾರನಿಂದ ಕೇಳಿದೆನು. ಮುರಳಾದೇವಿಗೆ ಒಬ್ಬ ದಾಸಿಯು ಆಪ್ತಳಾಗಿದ್ದಳು. ಅವಳ ಹೆಸರು ನನಗೆ ತಿಳಿಯದು. ನಾನು ಮತ್ತಾರನ್ನೂ ಅರಿಯೆ" ಎಂದು ಮಗಳ ಪ್ರಶ್ನೆಗಳಿಗೆ ಉತ್ತರ ಕೊಟ್ಟನು.

**ಇಂದಿರೆ**—ತಂದೆಯೇ! ನಾನು ಮತ್ತೊಂದು ಸಂಗತಿಯನ್ನು ಕೇಳುವೆನು. ನಿಜಸ್ಥಿತಿಯು ದೇವರಿಗೇ ತಿಳಿಯಬೇಕು. ಆದರೂ ವ್ಯವಹಾರಕ್ಕಾಗಿ ಕೂಡಿದವರೆಗೂ ಎಲ್ಲಾ ಸಂಗತಿಗಳನ್ನೂ ತಿಳಿದುಕೊಂಡಿರಬೇಕಲ್ಲವೇ? ಹೇಮಪ್ರಭಾದೇವಿಯು ತನ್ನ ಗಂಡನಿಗೆ ಅಷ್ಟು ಕಷ್ಟ ಸಂಭವಿಸಿರುವಾಗ ತನ್ನ ತಂದೆಯ ಮನೆಯಲ್ಲಿರದೆ ಕ್ರೂರಳಾದ ಅತ್ತೆಯೊಡನೆ ಇರಲು ಕಾರಣವೇನು? ಒಂದು ವೇಳೆ ಹಾಗಿದ್ದರೂ ಮದನಪಾಲನು ತನ್ನ ಮನೆಗೆ ಬರುವುದಕ್ಕೆ ಹೇಗೆ ಸಮ್ಮತಿಸಿದಳು?

**ಮಿತ್ರದೇವ**— ಕುಮಾರಿ! ನಾನು ಹೇಗೆ ಹೇಳಬಲ್ಲೆನು? ಈ ಸಂಗತಿಗಳನ್ನು ಲಲಿತಕುಮಾರನು ನನ್ನಲ್ಲಿ ಉಸುರಿದನು. ಸ್ವಸ್ಥಚಿತ್ತದಿಂದಾಲೋಚಿಸಿ ನೋಡಿದರೆ ಮದನಪಾಲನು ಈಗ ರಾಜ್ಯಾಧಿಕಾರಿಯಾಗಿರುವುದರಿಂದ

ಅನಾಥಳಾದ ಸ್ತ್ರೀಗೆ ರಾಜವಿರೋಧವು ಒಳ್ಳೆಯದಲ್ಲವೆಂದು ಭಾವಿಸಿ ಸುಮ್ಮನೆ ಬಂದು ಹೋಗಲು ಅವಕಾಶಕೊಟ್ಟಿರಬಹುದು. ಹೇಮಪ್ರಭಾದೇವಿಗೆ ತಂದೆ ತಾಯಿಗಳಿಲ್ಲ. ಅವಳ ತಂದೆಯು ಅವಳಿಗಾಗಿ ವಿಹಾರಾರದಲ್ಲಿಯೇ ಒಂದು ಚಿಕ್ಕ ರಾಜಮಂದಿರವನ್ನು ಕಟ್ಟಿಸಿ ಕೊಟ್ಟಿರುವನು. ಆ ಮಂದಿರದ ಸುತ್ತಲೂ ಕೆಲವು ರಾಜಕುಟುಂಬದವರು ತಮ್ಮ ತಮ್ಮ ಮನೆಗಳಲ್ಲಿ ವಾಸಿಸುತ್ತಿರುವರು. ಅದರ ಸುತ್ತಲೂ ರಮಣೀಯವಾದ ಒಂದು ದುರ್ಗವಿರುವುದು. ಆ ದೇವಿಗೆ ಬಹಳ ದ್ರವ್ಯವಿದೆ. ಇಷ್ಟು ಅನುಕೂಲ್ಯಗಳನ್ನು ಬಿಟ್ಟು ಅವಳು ಮತ್ತೆಲ್ಲಿಗೆ ಹೋದಾಳು? ಅಲ್ಲಿರುವವರು ಏನೋ ಯುಕ್ತಿಯನ್ನು ಆಲೋಚಿಸಿಕೊಂಡು ಮದನಪಾಲನನ್ನು ದುರ್ಗದಲ್ಲಿ ಪ್ರವೇಶಗೊಳಿಸುತ್ತಿರುವರೆಂದು ನನಗೆ ತೋರು ವುದು. ಮುರಳಾದೇವಿಯು ಪುನರ್ವಿವಾಹ ಪ್ರಸ್ತಾವವನ್ನು ಪುನಃ ಪುನಃ ಮಾಡುತ್ತಿರಬಹುದು. ಹೇಮಪ್ರಭಾದೇವಿಯು ಅದಕ್ಕೆ ಒಪ್ಪಿರುವಳೋ ಇಲ್ಲ ವೋ ತಿಳಿಯದು. ಒಪ್ಪಿದ್ದರೆ, ಹದಿನಾರು ವರ್ಷಗಳ ಹಿಂದೆಯೇ ಆಗಬೇಕಾ ಗಿದ್ದಿತು. ನನ್ನನ್ನು ಕಾರಾಗೃಹದಿಂದ ಬಿಡಿಸಿದುದು ಆಕೆಯೇ ಆಗಿರಬಹುದು. ರಾತ್ರಿ ಕತ್ತಲಲ್ಲಿ ನನ್ನನ್ನೆಬ್ಬಿಸಿ ಹೊರಗೆ ಹೋಗೆಂದು ಹೇಳಿದ ಧ್ವನಿಯು ನನಗೆ ತುಂಬಾ ಪರಿಚಿತವಾದುದಾಗಿದ್ದಿತು. ಆವುದನ್ನೂ ಈಗ ನಿರ್ಧಾರವಾಗಿ ಹೇಳ ಲಾರೆನು. ತನ್ನ ಸವತಿಯ ಮಗನನ್ನು ಹಾಳುಮಾಡಿದುದಲ್ಲದೆ ಅವನ ಹೆಂಡತಿಗೆ ವ್ರತಭಂಗವನ್ನುಂಟುಮಾಡಬೇಕೆಂದು ಮುರಳಾದೇವಿಯು ಬದ್ಧಕಂಕಣಳಾಗಿ ರಬಹುದು. ತನ್ನ ತಂತ್ರವು ಫಲಿಸಿದರೂ, ಫಲಿಸದಿದ್ದರೂ ಯುವರಾಜ್ಞಿಯ ಮೇಲೆ ಅಪವಾದ ಬಂದರೆ ಅದನ್ನು ಕೇಳಿದ ಯುವರಾಜನು ಒಂದು ವೇಳೆ ಜೀವಿಸಿದ್ದರೆ ಆತ್ಮಹತ್ಯೆ ಮಾಡಿಕೊಂಡು ಸಾಯಲೆಂದು ಮುರಳಾದೇವಿಯು ಆಲೋಚಿಸಿರಬಹುದು. ಆವುದನ್ನೂ ತಿಳಿಯದೆ ನಾನು ನನ್ನ ದೇವಿಯ ಮೇಲೆ ದೋಷಾರೋಪಣೆ ಮಾಡಲಾರೆನು.

**ಇಂದಿರೆ—** ಜನಕಾ! ಮನ್ನಿಸಬೇಕು. ಶೀಘ್ರವಾಗಿ ನನ್ನ ಪ್ರಯಾಣಸನ್ನ ಹವು ನಡೆಯಲಿ. ನನ್ನ ತಾಯಿ ವೀರರಮಣಿ, ಪತಿವ್ರತಾ ಶಿರೋಮಣಿಯೆಂದು ಸ್ಥಾಪಿಸುವವರೆಗೂ ನನಗೆ ನಿದ್ರೆ ಬರುವುದಿಲ್ಲ. ಒಂದು ವೇಳೆ ಹಾಗಿಲ್ಲದಿದ್ದರೆ ಕರ್ಮಕ್ಕೆ ತಕ್ಕಫಲವನ್ನು ಅನುಭವಿಸಬೇಕು.

ಮಿತ್ರದೇವನಿಗೆ ಏನು ಮಾಡುವುದಕ್ಕೂ ತೋರಲಿಲ್ಲ. ಕೊನೆಗೆ ಇಂದಿರೆ ಯನ್ನು ಕಳುಹಿಸಬೇಕಾದುದು ಆವಶ್ಯಕವೆಂದು ಒಪ್ಪಿಸಿಕೊಂಡನು. "ಅಮ್ಮಾ! ನೀನು ಪರರನ್ನು ನಂಬಬೇಡ! ಯಾವಾಗಲೂ ಸ್ವಬುದ್ಧಿಯನ್ನು ಉಪಯೋಗಿಸು. ನಿನ್ನ ಕಾರ್ಯವು ಸಫಲವಾಗುವವರೆಗೂ ನನ್ನ ಧ್ಯಾಸವನ್ನು ಬಿಡು. ನಾನು

ಅಲ್ಲಿಯೇ ಅಪಾಯವಿಲ್ಲದ ಸ್ಥಳದಲ್ಲಿ ಗೋಪ್ಯವಾಗಿದ್ದು ಉತ್ತರಪ್ರತ್ಯುತ್ತರಗಳನ್ನು ನಡೆಯಿಸುತ್ತಾ ನಿನಗೆ ಸಹಾಯ ಮಾಡುವೆನು. ಭಗವಂತನು ನಿನ್ನನ್ನು ರಕ್ಷಿಸಲಿ! ನನ್ನ ಮನಃಪೂರ್ವಕವಾದ ಆಶೀರ್ವಾದವು ನಿನ್ನನ್ನು ಕಾಪಾಡಲಿ! ಈ ಕಾಲಕ್ಕೆ ಇದೇ ಯುಕ್ತವಾದ ಮಾರ್ಗವು. ನಾವು ಈ ರಾತ್ರಿಯೇ ಕಾಳೀಘಟ್ಟವನ್ನು ಸೇರಬಹುದು. ಅಲ್ಲಿ ನನ್ನ ಮಿತ್ರನೊಂದಿಗೆ ಆಲೋಚಿಸಿ ನಿನ್ನನ್ನು ಕಳುಹಿಸುವೆನು.''

# ೮ನೆಯ ಅಧ್ಯಾಯ

ರಾತ್ರಿ ಸುಮಾರು ಏಳುಗಂಟೆ. ಮನೆಯ ಬಾಗಿಲಲ್ಲಿ ಒಂದು ಗಾಡಿಯು ನಿಂತಿತು. ಗಾಡಿಯವನು ಸಾಮಾನುಗಳನ್ನು ಗಾಡಿಯಿಂದಿಳಿಸಿ ಮನೆಯೊಳಕ್ಕೆ ತಂದಿಡುತ್ತಿದ್ದನು. ಕೂಡಲೇ ಇಂದಿರೆಯೂ, ಮಿತ್ರದೇವನೂ ಪ್ರವೇಶಿಸಿದರು. ಈಶ್ವರದಾಸನು ದಿಗ್ಭ್ರಮೆಯಿಂದೆದ್ದು ''ಇದೇನಣ್ಣಾ! ಇಷ್ಟು ಅಪರೂಪವಾಗಿ ದರ್ಶನಕೊಟ್ಟಿರಿ?'' ಎಂದು ಹೇಳುತ್ತಾ ಮಿತ್ರದೇವನನ್ನು ಆಲಿಂಗನೆಮಾಡಿ ಕೊಂಡನು. ಈ ಮಿತ್ರರ ಪರಸ್ಪರ ಕುಶಲಪ್ರಶ್ನೆಗಳಿಂದ ಮುಗ್ಧೆಯಾದ ಮುಕ್ತಾಬಾಯಿಯು ಪಡಸಾಲೆಗೆ ಬಂದು ಅಲ್ಲಿ ನಿಂತಿದ್ದ ಇಂದಿರೆಯನ್ನು ನೋಡಿ ಗುರುತಿಸಿ ''ಪುತ್ರೀ! ಬಹುಕಾಲಕ್ಕೆ ಬಂದಿರುವೆ! ಒಳಕ್ಕೆ ಬಾ'' ಎಂದು ಪರಮಪ್ರೀತಿಯಿಂದ ಮುದ್ದಿಟ್ಟುಕೊಂಡು ಕರೆದುಕೊಂಡು ಹೋದಳು. ಇಂದಿರೆಯು ಕೂಡ ಅವರನ್ನು ಗುರುತಿಸಿ ಕುಶಲಪ್ರಶ್ನೆಗಳಿಂದ ಸಂತೋಷಪಡಿಸಿದಳು. ಆ ರಾತ್ರಿ ಅವರೆಲ್ಲರೂ ಸೇರಿ ಆನಂದದಿಂದ ಭುಜಿಸಿದರು. ಹೀಗೆ ನಾಲ್ಕೈದು ದಿನಗಳು ಕಳೆದುವು. ಒಂದು ದಿನ ಈಶ್ವರದಾಸನು ಮಿತ್ರದೇವನನ್ನು ಕುರಿತು ''ಮಿತ್ರನೇ! ಈ ಲೋಕದಲ್ಲಿ ನಿನಗೆ ಏರಿದ ಆಪ್ತಬಂಧುಗಳು ಮತ್ತಾರೂ ಇಲ್ಲ. ನಿನ್ನನ್ನು ನಾನು ಗುರುಸ್ವರೂಪನೆಂದು ಭಾವಿಸಿರುವೆನು. ಇನ್ನು ಮೇಲಾದರೂ ನಮ್ಮನ್ನು ಎಡೆಬಿಡದೆ ಇರಬೇಕೆಂದು ಕೋರುವೆನು. ಇಂದಿರೆಗೆ ಯುಕ್ತ ವಯಸ್ಸು ಬಂದಿರುವುದು. ಅವಳಿಗೆ ಸರಿಯಾದ ವರನನ್ನು ವಿಚಾರಿಸಬೇಡವೇ?'' ಎಂದು ಪ್ರಸ್ತಾಪಿಸಿದನು.

**ಮಿತ್ರದೇವ**— ''ಮಿತ್ರನೇ! ನೀನು ಹೇಳಿದುದೂ ನಿಶ್ಚಯವೇ. ನನಗೂ ಈ ಭೂಮಂಡಲದಲ್ಲಿ ನಿನ್ನ ವಿನಾ ಬೇರೆ ಸ್ನೇಹಿತರಿಲ್ಲ. ನಿನ್ನನ್ನು ಬಿಟ್ಟಿರಕೂಡ

ದೆಂಬುದೇ ನನ್ನ ಮನೋಗತವು. ಆದರೆ, ಈಗ ನಾನು ಒಂದು ಘನವಾದ ಕಾರ್ಯವನ್ನು ಸಾಧಿಸಲು ತೀರ್ಮಾನಿಸಿಕೊಂಡಿರುವೆನು. ಅದು ಕೈಗೂಡಿದರೆ ಅನೇಕರಿಗೆ ಕ್ಷೇಮವಾಗುವುದು. ಈ ವಿಷಯದಲ್ಲಿ ಇಂದಿರೆಯು ಕೂಡ ಬಹು ದೃಢಮನಸ್ಕಳಾಗಿರುವಳು. ಅವಳ ಇಚ್ಛೆಯಂತೆ ಕಾರ್ಯಸಾಧನೆ ಮಾಡಲು ಸ್ವತಂತ್ರತೆ ಕೊಟ್ಟಿರುತ್ತೇನೆ. ಅವಳು ಪುರುಷವೇಷದಿಂದ ಆ ಕಾರ್ಯಸಾಧನೆಗೆ ಹೊರಡುವ ಏರ್ಪಾಡು ಮಾಡಿರುತ್ತೇನೆ.''

**ಈಶ್ವರದಾಸ**— ಮಿತ್ರನೇ! ನೀನು ಮಹಾನುಭಾವನು. ಕಿಂಚಿಜ್ಞ ನಾದ ನಾನು ನಿನಗೆ ಯಾವ ಆಲೋಚನೆಯನ್ನು ಹೇಳಬಲ್ಲೆನು? ಆದರೂ ನೀನು ನನ್ನಲ್ಲಿ ಪೂರ್ಣ ವಿಶ್ವಾಸವನ್ನಿಟ್ಟುಕೊಂಡಿರುವುದು ನನ್ನ ಭಾಗ್ಯವು. ಮಗು ಈಗ ಎಲ್ಲಿಗೆ ಹೋಗುವಳು?

**ಮಿತ್ರದೇವ**— ಅವಳು ಮಿಾವಾರಕ್ಕೆ ಹೋಗುವಳು.

**ಈಶ್ವರದಾಸ**— ಬಹಳ ದೂರ ಪ್ರಯಾಣವಾಯಿತಲ್ಲ! ವಯಸ್ಸಿನಲ್ಲಿ ಇನ್ನೂ ಚಿಕ್ಕವಳು. ರೂಪದಲ್ಲಿ ಪರಮ ಸುಂದರಿ. ಈ ಮಾತು ಕೇಳಿ ನನ್ನ ಮನಸ್ಸು ಏಕೋ ತಲ್ಲಣಪಡುತ್ತಿರುವುದು.

**ಮಿತ್ರದೇವ**— ಇಷ್ಟಕ್ಕೇ ಭಯಪಟ್ಟರೆ ಮುಂದೆ ಘನವಾದ ಕಾರ್ಯಗಳನ್ನು ಸಾಧಿಸುವುದು ಹೇಗೆ?

**ಈಶ್ವರದಾಸ**— ಅಣ್ಣಾ! ಹೆಣ್ಣು ಹುಡುಗಿಯಮಾತು. ಸ್ತ್ರೀಯರಿಗೆ ಮಾನಸಂರಕ್ಷಣೆಯು ವಿಹಿತವಾದುದು. ಅದಕ್ಕಾಗಿ ಭಯಪಡುವೆನು.

**ಮಿತ್ರದೇವ**— ಆ ಸಂಗತಿ ನನಗೂ ಗೊತ್ತಿದೆ. ಇಂದಿರೆಯನ್ನು ಸಾಮಾನ್ಯಸ್ತ್ರೀಯಂತೆ ತಿಳಿಯಬೇಡ. ಅವಳ ಶಕ್ತಿ ಸಾಹಸಗಳು ನಿನಗೆ ಮುಂದೆ ಗೊತ್ತಾಗುವುವು.

ಎಂದು ಮಾತನಾಡುತ್ತಾ ಇಬ್ಬರೂ ಒಂದು ಕೊಟ್ಟಡಿಯನ್ನು ಪ್ರವೇಶಿಸಿ ಕದವನ್ನು ಮುಚ್ಚಿಕೊಂಡು ಬಹಳ ಹೊತ್ತು ಮಾತನಾಡಿಕೊಂಡರು.

ಕಾಳೀಘಟ್ಟದಲ್ಲಿ ಮಾಲವಾ, ಉದಯಪುರ ಮುಂತಾದ ಸಂಸ್ಥಾನಗಳಲ್ಲಿ ರತ್ನ ವ್ಯಾಪಾರವನ್ನು ಮಾಡುತ್ತಿದ್ದ ಒಬ್ಬ ದೊಡ್ಡ ಮಾರ್ವಾಡಿ ಸಾಹುಕಾರ ನಿದ್ದನು. ಅವನ ಹೆಸರು ಹುಕೂಂಚಂದ. ಎರಡನೆಯ ಕುಬೇರನಂತಿದ್ದ ಆ ಅಂಶಪುರುಷನಿಗೆ ಲೆಕ್ಕವಿಲ್ಲದ ದಾಸ ದಾಸೀ ಜನಗಳಿದ್ದರು. ಅವರಲ್ಲಿ ಪೂರ್ವ ವಯಸ್ಸಿನ ಒಬ್ಬ ನೂತನ ಸೇವಕನಿದ್ದನು. ಅವನು ಯಜಮಾನನಲ್ಲಿ ವಿನಯ ವಿಧೇಯತೆಗಳಿಂದ ವರ್ತಿಸುತ್ತಿದ್ದುದಲ್ಲದೆ ಕಣ್ಣೆತ್ತಿ ನೋಡಿದ ಮಾತ್ರದಿಂದಲೇ ಯಜಮಾನನ ಇಂಗಿತವನ್ನು ತಿಳಿಯುವಷ್ಟು ಸಮರ್ಥನಾಗಿದ್ದನು. ಮನೆಯ

ಯಜಮಾನಿಯೂ ಕೂಡ ಅವನಲ್ಲಿ ತುಂಬ ವಿಶ್ವಾಸವುಳ್ಳವಳಾಗಿದ್ದಳು. ತನ್ನ ಕಾರ್ಯಗಳನ್ನು ಮಾತ್ರ ಮಾಡುತ್ತ ಸುಖವಾಗಿರಬೇಕೆಂದು ಯಜಮಾನನು ಆ ಸೇವಕನಿಗೆ ಆಜ್ಞಾಪಿಸಿದ್ದನು. ವರ್ತಕನು ಉದಯಪುರಪ್ರಾಂತ್ಯಕ್ಕೆ ಹೋಗ ಬೇಕಾಗಿ ಬಂದಿತು. ಆಗ ಈ ನೂತನ ಸೇವಕನನ್ನು ತನ್ನ ಹಿಂದೆಯೇ ಕರೆದು ಕೊಂಡು ಹೋದನು. ಉದಯಪುರವನ್ನು ಸೇರಿದ ತರುವಾಯ, ಸಮೀಪ ಗ್ರಾಮದಲ್ಲಿ ತನಗೊಬ್ಬ ತಂಗಿ ಇರುವಳೆಂತಲೂ, ಅವಳಿಗೆ ದೇಹವು ಅಸ್ವಸ್ಥ ವಾಗಿರುವುದರಿಂದ ತಾನು ಹೋಗಿಬರುವೆನೆಂತಲೂ ಹೇಳಿ ಯಜಮಾನನಿಂದ ಅಪ್ಪಣೆಯನ್ನು ಪಡೆದು ಆ ನೂತನ ಸೇವಕನು ಹೊರಟುಹೋದನು. ಆ ನಗರ ದಲ್ಲಿ ವಿಚಾರಿಸುತ್ತಾ ಒಂದು ಮನೆಯನ್ನು ಹೊಕ್ಕನು. ಅದರಲ್ಲಿ ಒಬ್ಬ ವೃದ್ಧಳು ಮಾತ್ರ ಇದ್ದಳು. ಅವಳಿಗೆ ಆರು ವರ್ಷಗಳ ವಯಸ್ಸಿನ ಒಬ್ಬ ಮೊಮ್ಮಗನು ವಿನಾ ಮತ್ತಾರೂ ಇಲ್ಲವೆಂದು ತಿಳಿದು ಬಂದಿತು. ಆ ಮುದುಕಿ ಯನ್ನು ನೋಡಿ "ಅಮ್ಮಾ! ನಾನು ದಿಕ್ಕಿಲ್ಲದ ಒಬ್ಬ ಬಡ ಹುಡುಗಿ. ಮಾನ ಸಂರಕ್ಷಣೆಮಾಡಿ ಕೊಳ್ಳುವುದಕ್ಕಾಗಿ ಹೀಗೆ ಗಂಡುವೇಷವನ್ನು ಹಾಕಿರು ವೆನು"ಎಂದು ಸೇವಕನ ವೇಷದಿಂದ ಇಂದಿರೆಯು ನುಡಿದಳು.

**ವೃದ್ಧಳು**– ಹಾಗೆಯೇ? ಸ್ತ್ರೀಯರಿಗೆ ಮಾನಸಂರಕ್ಷಣೆಗಿಂತಲೂ ಪರಮ ಧರ್ಮವು ಮತ್ತಾವುದಿರುವುದು? ನನಗೆ ಮಾತ್ರ ಯಾರಿದ್ದಾರೆ? ಈ ಚಿಕ್ಕ ಹುಡುಗನನ್ನು ಕಾಪಾಡಿಕೊಂಡು ನಾನು ಈ ಲೋಕದಲ್ಲಿ ಬಾಳುತ್ತಿರುವೆನು. ಅಮ್ಮಾ! ನೀನು ತುಂಬ ಬಳಲಿರುವಂತೆ ತೋರುತ್ತದೆ. ಎದ್ದು ಸ್ನಾನವನ್ನು ಮಾಡಿ ಭೋಜನಕ್ಕೆ ಬಾ. ನಾವು ಯಾವ ಜಾತಿಯವರೋ ಎಂದು ಸಂಶಯ ಪಡಬೇಡ. ವೀರಕ್ಷತ್ರಿಯ ವಂಶದಲ್ಲಿ ನಾನು ಹುಟ್ಟಿರುವೆನು.

**ಇಂದಿರೆ**— "ತಾಯೇ! ನಿನ್ನನ್ನೂ ನಿನ್ನ ಮನೆಯನ್ನೂ ನೋಡಿದಾಗಲೇ ನೀನು ಉತ್ತಮ ವರ್ಣದವಳೆಂದು ನನಗೆ ಸ್ಫುರಿಸಿತು. ನಿನ್ನ ಗೃಹವನ್ನು ಪ್ರವೇಶಿಸಿದುದು ನನ್ನಭಾಗ್ಯ. 'ಇಷ್ಟು ಉಪಚರಿಸಿದುದಕ್ಕಾಗಿ ನಿನಗೆ ತುಂಬಾ ಕೃತಜ್ಞಳಾಗಿರುವೆನು" ಎಂದು ಹೇಳಿ ಸ್ನಾನಭೋಜನಾದಿಗಳನ್ನು ತೀರಿಸಿ ಕೊಂಡು ಬಳಲಿಕೆಯಿಂದ ಮೈಮರೆತು ನಿದ್ರೆಗೈದಳು.

ನಡೆನುಡಿಗಳಿಂದಲೂ, ಸ್ವಂತ ಮನೆಯಂತೆ ಗೃಹಕಾರ್ಯಗಳನ್ನು ಮಾಡು ವುದರಿಂದಲೂ, ಆಗಾಗ್ಗೆ ದ್ರವ್ಯಸಹಾಯ ಮಾಡುವುದರಿಂದಲೂ ಇಂದಿರೆಯು ಆ ವೃದ್ಧಳ ಪರಮ ವಿಶ್ವಾಸಕ್ಕೆ ಪಾತ್ರಳಾದಳು. ತನ್ನ ಸ್ವಂತ ಮೊಮ್ಮಗಳಂತೆ ಇಂದಿರೆಯನ್ನು ಆ ಮುದುಕಿಯು ಪ್ರೇಮಿಸತೊಡಗಿದಳು. ಒಂದು ದಿನ ಇಂದಿರೆಯು ಮುದುಕಿಯ ಬಳಿಯಲ್ಲಿ ಕುಳಿತುಕೊಂಡು "ಅಜ್ಜೀ! ನಿನ್ನ

ಮೊಮ್ಮಗನ ವೃತ್ತಾಂತವೇನು?''ಎಂದು ಕೇಳಿದಳು. ವೃದ್ಧಳು ಕಣ್ಣೀರು ಸುರಿಸುತ್ತ ''ಮಗುವೆ! ನನ್ನ ದುಃಖವನ್ನು ಏನೆಂದು ಹೇಳಲಿ? ನನಗೆ ಒಬ್ಬ ಮಗಳಿದ್ದಳು. ಅವಳು ಚಿಕ್ಕ ಅರಮನೆಯಲ್ಲಿನ ದಾಸಿಗಳಿಗೆ ಅಧಿಕಾರಿಣಿಯೂ ಗಿದ್ದಳು. ಗುಣವತಿಯಾಗಿಯೂ, ರೂಪವತಿಯಾಗಿಯೂ ಇದ್ದ ಆ ಹುಡುಗಿ ನನ್ನಂತಹ ನಿರ್ಭಾಗ್ಯಳಿಗೆ ದಕ್ಕುವವಳೇ? ಅವಳು ಈ ಹುಡುಗನನ್ನು ಹೆತ್ತು ಸತ್ತುಹೋದಳು. ಇವನ ತಂದೆಯು ಸಹ ಕೆಲವು ದಿನಗಳ ಹಿಂದೆ ಸ್ವರ್ಗಸ್ಥನಾದನು. ಅಂದಿನಿಂದ ಕಣ್ಣೀರನ್ನು ಕಾಲಿನೆಯಾಗಿ ಹರಿಯಿಸುತ್ತ ಈ ಹುಡುಗನನ್ನು ಕಾಪಾಡಿಕೊಂಡಿದ್ದೇನೆ. ನನ್ನ ಮಗಳ ಮೇಲೆ ಹೇಮಪ್ರಭಾದೇವಿಗೆ ತುಂಬ ವಿಶ್ವಾಸ. ಈಗಲೂ ಆ ದೇವಿ ನಮಗೆ ಸುಖವಾಗಿ ಜೀವನಕ್ಕೆ ನಡೆಸುತ್ತಿರುವಳು.

**ಇಂದಿರೆ—** ಆಹಾ! ನಿಮ್ಮ ದೇವಿಯು ಎಷ್ಟು ಉದಾರಚರಿತಳು! ತನ್ನ ದಾಸಿಯು ಸತ್ತುಹೋದರೂ ಅವಳ ತಾಯಿ ಮಕ್ಕಳನ್ನು ಪೋಷಿಸುವುದು ಉತ್ತಮ ಧರ್ಮವು. ಅಮ್ಮಾ! ನಿಮ್ಮ ರಾಣಿಗೆ ವಯಸ್ಸೆಷ್ಟು?

**ವೃದ್ಧಳು—** ಹೇಮಪ್ರಭಾದೇವಿಗೆ ಮೂವತ್ತೆರಡು ವರ್ಷ ವಯಸ್ಸು. ದೇವತೆಗಳು, ನಾಗಕನ್ಯೆಯರು ಅತಿ ಸುಂದರಿಯರೆಂದು ಕೇಳಿದ್ದೇವೆ. ಆದರೆ, ನಮ್ಮ ರಾಣಿಯ ಸೌಂದರ್ಯವು ಪ್ರತ್ಯಕ್ಷವಾಗಿ ಕಾಣುತ್ತದೆ. ಹದಿನಾರನೆಯ ವಯಸ್ಸಿನಲ್ಲಿ ಅವಳನ್ನು ನಮ್ಮ ಯುವರಾಜನಿಗೆ ಕೊಟ್ಟು ಅತಿ ವೈಭವದಿಂದ ಮದುವೆ ಮಾಡಿದರು. ಮಗುವೇ! ಆಗಿನ ಉತ್ಸವಗಳೂ, ದಾನಧರ್ಮಗಳೂ ಈಗ ಸ್ವಪ್ನಪ್ರಾಯವಾಗಿವೆ. ಆ ಯುವರಾಣಿಯು ಮತ್ತೊಂದು ವರ್ಷಕ್ಕೆ ಒಂದು ಹೆಣ್ಣು ಮಗುವನ್ನು ಹೆತ್ತಳು. ಆ ಮಗುವಿಗೆ ಎರಡು ವರ್ಷಗಳು ತುಂಬಿದುವೋ ಇಲ್ಲವೋ ರಾಜವಂಶಕ್ಕೆ ಒಂದು ದೊಡ್ಡ ವಿಪತ್ತು ಸಂಭವಿಸಿತು. ನಮ್ಮ ಯುವರಾಣಿಯು ಗಂಡನನ್ನೂ ಮಗುವನ್ನೂ ಕಳೆದುಕೊಂಡು ಯಾವಾಗಲೂ ವ್ಯಸನಪಡುತ್ತಾ ಕೃಶಳಾಗಿರುವಳು. ಎಷ್ಟು ಸುಂದರವತಿಯಾದರೂ ದುಃಖಾಗ್ನಿಗೆ ದೇಹವನ್ನರ್ಪಿಸಿದಳೆಂದರೆ ಏನಾಗುವುದೋ ಆಲೋಚಿಸು. ಆಕೆಯ ವಿಧಿಯನ್ನು ಏನೆಂದು ಹೇಳೋಣ!

ಈ ಮಾತನ್ನು ಕೇಳಿ ಇಂದಿರೆಯ ಹೃದಯವು ತಲ್ಲಣಿಸಿತು. ಮಾತಾಡುವುದಕ್ಕೆ ಬಾಯಾಡಲಿಲ್ಲ. ಉಕ್ಕಿ ಉಕ್ಕಿ ಬರುತ್ತಿದ್ದ ಅಳುವನ್ನು ಅತಿಕಷ್ಟದಿಂದ ಅಣಗಿಸಿಕೊಂಡು ''ಅಮ್ಮಾ! ಇಲ್ಲಿ ಗಾಳಿಯೇ ಇಲ್ಲ. ಹಿತ್ತಿಲಲ್ಲಿ ಕುಳಿತುಕೊಂಡು ಮಾತಾಡೋಣವೇ?''ಎಂದು ಹೇಳಿ ತಾನು ಮುಂಚಿತವಾಗಿಯೇ ಹೋಗಿ ಮನಸ್ಸನ್ನು ಸಮಾಧಾನ ಪಡಿಸಿಕೊಂಡಳು. ಹಿತ್ತಿಲು ಒಂದು ತೋಟವಾಗಿದ್ದಿತು.

ಆದರ ಸುತ್ತಲೂ ಗೋಡೆಯಿದ್ದಿತು. ಮಲ್ಲಿಗೆಯ ಮೊಗ್ಗುಗಳಿಂದಲೂ, ಅರಳಿದ ಗುಲಾಬಿಯ ಹೂವುಗಳಿಂದಲೂ ರಮಣೀಯವಾಗಿದ್ದುದು ಆ ಪ್ರದೇಶವು ಇಂದಿರೆಯ ಮನಸ್ಸಿಗೆ ಆಹ್ಲಾದವನ್ನುಂಟುಮಾಡಿತು. ವಜ್ರದ್ವೀಪದಲ್ಲಿನ ತನ್ನ ಗೃಹಾರಾಮಗಳು ಅವಳ ಸ್ಮೃತಿಪಥಕ್ಕೆ ಬಂದುವು. ಅವುಗಳನ್ನು ಬಿಡಬೇಕಾಗಿ ಬಂದ ವ್ಯಾಜಗಳೂ, ತಂದೆಯನ್ನು ಅಗಲಿ ಬಂದ ವ್ಯಸನವೂ, ಮುಂದೆ ಮಾಡಬೇಕಾದ ಕಾರ್ಯಭಾಗಗಳ ಆಲೋಚನೆಯೂ, ಇಂದಿರೆಯ ಮನಸ್ಸಿಗೆ ಸಾಕಾದಷ್ಟು ಭಾರಗಳಾಗಿದ್ದರೂ ಧೈರ್ಯಶಾಲಿಯಾದುದರಿಂದ ಅವುಗಳೆಲ್ಲವನ್ನೂ ಅಡಗಿಸಿಕೊಂಡು "ಅಮ್ಮಾ! ಈ ಪುಷ್ಪಗಳನ್ನು ಏನು ಮಾಡುತ್ತೀ?" ಎಂದು ಕೇಳಿದಳು.

**ವೃದ್ಧಳು**— ಪ್ರತಿದಿನವೂ ಮಾಲೆಗಳನ್ನು ಕಟ್ಟಿ ನಮ್ಮ ರಾಣಿಯವರಿಗೆ ತೆಗೆದುಕೊಂಡು ಹೋಗಿ ಅರ್ಪಿಸುವೆನು.

**ಇಂದಿರೆ**— ಅಮ್ಮಾ! ಮನೆಯ ಕಾರ್ಯಗಳೆಲ್ಲವೂ ತೀರಿದುವಲ್ಲವೇ? ಈ ದಿನ ನಾನು ಪುಷ್ಪಮಾಲಿಕೆಗಳನ್ನು ಕಟ್ಟಿಕೊಡುವೆನು.

**ವೃದ್ಧಳು**—ಇಂದಿರೆ! ಬಹಳ ಅಂದವಾಗಿ ಕಟ್ಟಬೇಕು. ಎಷ್ಟು ಚೆನ್ನಾಗಿ ಕಟ್ಟಿದರೂ ನನ್ನ ಯಜಮಾನಿ ಒಪ್ಪುವವಳಲ್ಲ. ಲಕ್ಷಣವಾಗಿಲ್ಲದಿದ್ದರೆ ಕೋಪಗೊಳ್ಳುವಳು.

**ಇಂದಿರೆ**—ನಿಮ್ಮ ರಾಣಿಯು ಗಂಡನನ್ನೂ ಮಗುವನ್ನೂ ಕಳೆದುಕೊಂಡು ದುಃಖಪಡುತ್ತಿರುವಳೆಂದು ಹೇಳಿದೆಯಲ್ಲಾ! ಅಂತಹವಳಿಗೆ ಹೂವಿನ ಅಂದವೇಕೆ ಬೇಕು?

**ವೃದ್ಧಳು**— ಹುಚ್ಚಳೇ! ಎಷ್ಟು ದಿನ ದುಃಖಿಸುವಳು? ಇಗ ಇನ್ನೂ ಯೌವನದಲ್ಲಿದ್ದಾಳೆ. ಬೇಕಾದಷ್ಟು ಐಶ್ವರ್ಯವಿದೆ. ಆಕೆಗೆ ಪುನರ್ವಿವಾಹ ಮಾಡಬೇಕೆಂದು ಮುರಳಾದೇವಿಯು ಹರಪ್ರಯತ್ನ ಮಾಡುತ್ತಿದ್ದಾಳೆ. ಶಾಸ್ತ್ರ ಪಂಡಿತರುಗಳು ಸಹ ಅನುಕೂಲವಾಗಿರುವುದಾಗಿ ಹೇಳುತ್ತಾರೆ. ಈಗ ರಾಜ್ಯವಾಳುವ ಮದನಪಾಲನೂ ಯೌವನಪುರುಷನೇ. ಹೇಮಪ್ರಭಾದೇವಿಯು ಅವನಿಗೆ ಒಳಗಾಗಬೇಕೆಂಬುದು ಮುರಳಾದೇವಿಯ ಅಭಿಪ್ರಾಯವು. ನಮ್ಮ ಈ ದೇಶವನ್ನು ಬಿಟ್ಟು ಹೋಗುವುದೂ ಇಷ್ಟವಿಲ್ಲ. ರಾಜನು ಬಲವಂತನು. ಅವನೊಡನೆ ವಿರೋಧಮಾಡಿಕೊಳ್ಳುವುದೂ ಶ್ರೇಯಸ್ಕರವಲ್ಲ. ಮದನಪಾಲನು ಆಗಾಗ್ಗೆ ಹೇಮಪ್ರಭಾದೇವಿಯ ಅಂತಃಪುರಕ್ಕೆ ಬರುತ್ತಿರುವನು. ಆಕೆಯು ಅದಕ್ಕೆ ಸಮ್ಮತಿಸಿರುವಂತೆ ಕಾಣುತ್ತದೆ. ಆಕೆಯ ಅಣ್ಣನ ಮಗಳಾದ ವಿಮಲಾದೇವಿಯನ್ನು ಚಿಕ್ಕಂದಿನಿಂದ ತನ್ನಲ್ಲಿಯೇ ಇಟ್ಟುಕೊಂಡು ಬೆಳೆಸುತ್ತಿದ್ದಾಳೆ. ಆ ಹುಡುಗಿಯನ್ನು ಮದನಪಾಲನಿಗೆ ಕೊಟ್ಟು ಮದುವೆ

ಮಾಡಬೇಕೆಂದು ಆಕೆಯ ಅಭಿಪ್ರಾಯ. ಅರಸನು ಅಭ್ಯಂತರವಿಲ್ಲದೆ ಆಕೆಯ ಅಂತಃಪುರಕ್ಕೆ ಬರುತ್ತಿರುವನೆಂದು ಕೆಲವರು ಹೇಳುವರು. ಎಷ್ಟು ದಿನಗಳಾದರೂ ಹೇಮಪ್ರಭಾದೇವಿಯನ್ನೇ ಮದುವೆಯಾಗಬೇಕೆಂದು ಮದನಪಾಲನು ನಿಶ್ಚಯಿಸಿದ್ದಾನೆ. ಈ ರಹಸ್ಯವು ರಾಣಿಗೂ ತಿಳಿಯುವುದಂತೆ. ಹಾಗಿದ್ದರೆ ತನ್ನ ಪುನರ್ವಿವಾಹಕ್ಕೆ ರಾಣಿಯು ಸಮ್ಮತಿಸಿರುವಳೆಂದೇ ಹೇಳಬೇಕಾಗುವುದು. ಹೇಗಾದರೂ, ನಮ್ಮ ರಾಣಿಯು ಪೂರ್ವಕ್ಕಿಂತಲೂ ಈಗ ಹೆಚ್ಚು ಅಲಂಕಾರ ಮಾಡಿಕೊಳ್ಳುವಳು. ಪುಷ್ಪಗಳನ್ನೂ ಮುಡಿದುಕೊಳ್ಳುವುದುಂಟು.

ಇದೆಲ್ಲವನ್ನೂ ಕೇಳಿ ಇಂದಿರೆಯು ಸ್ತಂಭೀಭೂತಳಾದಳು. 'ಆಹಾ! ಕಾಲವು ಹೇಗೆ ವ್ಯತ್ಯಾಸವಾಗುವುದು? ದೈವಮಹಿಮೆಯನ್ನು ಹೇಗೆ ವರ್ಣಿಸುವುದು? ಧೀರನೂ, ಸತ್ಯಸಂಧನೂ, ಧರ್ಮಿಷ್ಠನೂ ಆದ ವಿಕ್ರಮಸಿಂಹ ರಾಜನಿಗೆ ಎಂತಹ ಕಷ್ಟಗಳು! ಈ ವೃದ್ಧಳು ಹೇಳುವ ಮಾತುಗಳಲ್ಲಿ ಯಾವುದು ನಿಜವೋ, ಯಾವುದು ಸುಳ್ಳೋ, ಹೇಗೆ ತಿಳಿದುಕೊಳ್ಳಬಹುದು? ದೈವವೇ! ನಿಜವನ್ನು ತಿಳಿದುಕೊಳ್ಳುವ ಬುದ್ಧಿಶಕ್ತಿಗಳನ್ನು ನನಗೆ ದಯಪಾಲಿಸು' ಎಂದು ಬೇಡಿಕೊಂಡಳು.

ಅರಮನೆಯು ಉದಯಪುರಿಯ ಒಳಭಾಗದಲ್ಲಿರುವುದು. ಅದರ ಸುತ್ತಲೂ ಶತ್ರುಗಳಿಗೆ ಅಭೇದ್ಯವಾದ ಒಂದು ದುರ್ಗವಿರುವುದು. ಆ ದುರ್ಗಕ್ಕೆ ಸುಮಾರು ನಾಲ್ಕೈದು ಮೈಲಿಗಳ ದೂರದಲ್ಲಿ ಬಾಣ ನದಿಯು ಹರಿಯುತ್ತಿರುವುದು. ಹೇಮಪ್ರಭಾದೇವಿಯ ಅರಮನೆಯು ಅದರ ದಡದಲ್ಲಿರುವುದು. ಒಂದು ಗುಡ್ಡದ ಮೇಲೆ ಕಟ್ಟಲ್ಪಟ್ಟಿರುವುದು. ನದಿಯು ಉಬ್ಬಿದಾಗ ಅದರ ಜಲವು ಆ ಅರಮನೆಯ ಕೋಟೆಯ ಗೋಡೆಗೆ ಹತ್ತಿ ಪ್ರವಹಿಸುವುದುಂಟು. ಆ ಭಾಗದಲ್ಲಿ ಪಾಚಿ ಕಟ್ಟಿರುವುದಲ್ಲದೆ ಮನುಷ್ಯಸಂಚಾರಕ್ಕೆ ಅವಕಾಶವಿಲ್ಲ. ಮತ್ತೊಂದು ಪಾರ್ಶ್ವದಲ್ಲಿ ಚಿಕ್ಕಚಿಕ್ಕ ಸೋಪಾನಗಳನ್ನು ಬಂಡೆಯಲ್ಲಿಯೇ ಕೆತ್ತಿಸಿ ಅಂತಃಪುರದ ಸ್ತ್ರೀಯರು ವಿಹರಿಸುವುದಕ್ಕೆ ರಮ್ಯವಾಗಿರುವುದು. ಅದಕ್ಕೆ ಸ್ವಲ್ಪ ದೂರದಲ್ಲಿ ಬೆಸ್ತರು ಯಾವಾಗಲೂ ಮೀನು ಹಿಡಿಯುತ್ತಿರುವರು. ನದಿಗೆ ಸೋಪಾನಗಳನ್ನು ಕಟ್ಟಿರುವ ಪ್ರದೇಶದಲ್ಲಿ ನೆಲಮಾಳಿಗೆ ಇರುವುದೆಂತಲೂ, ಅಲ್ಲಿಂದ ಮದನಪಾಲನಿರುವ ರಾಜಮಂದಿರಕ್ಕೆ ಒಂದು ಸುರಂಗ ಮಾರ್ಗವಿರುವುದೆಂತಲೂ, ಯುದ್ಧಕಾಲದಲ್ಲಿ ಅಂತಃಪುರದ ಸ್ತ್ರೀಯರು ಅಲ್ಲಿ ಗೋಪ್ಯವಾಗಿರುವರೆಂತಲೂ ಪ್ರಜೆಗಳು ಹೇಳಿಕೊಳ್ಳುತ್ತಿದ್ದರು. ಆದರೆ, ಅದು ಎಲ್ಲಿರುವುದೆಂದು ಒಬ್ಬರಿಗೂ ತಿಳಿಯದು.

ಇಂದಿರೆಯು, ಮುದುಕಿಯ ಮನೆಯ ಹತ್ತಿರದಲ್ಲಿರುವ ಒಂದು ದಿನ್ನೆ

ಯನ್ನೇರಿ ಕೋಟೆಯನ್ನೆಲ್ಲಾ ಒಂದು ಸಲ ದೃಷ್ಟಿಸಿ ನೋಡಿದಳು. ತನಗೂ ತಿಳಿಯದೆ ತನ್ನ ಕಣ್ಣಲ್ಲಿ ನೀರು ಬರುತ್ತಿದ್ದುವು. ಸ್ವಂತವಾಗಿದ್ದರೂ ಆ ದಿವ್ಯ ಭವನವನ್ನು ಅನುಭವಿಸುವ ಅದೃಷ್ಟವು ತನಗಿಲ್ಲದಿರುವುದನ್ನೂ, ತನ್ನ ತಾಯಿಯು ಪರವಶೆಯಾಗಿ ಸಂದೇಹಾಸ್ಪದವಾಗಿ ಜೀವಿಸುತ್ತಿರುವುದನ್ನೂ, ರಾಜಮಾರ್ತಾಂಡನಾದ ತನ್ನ ತಂದೆಗೆ ಬಂದಿರುವ ದುರ್ದಶೆಯನ್ನೂ ನೆನೆನೆನೆದು ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು. ಈ ವಿಲಾಪದಿಂದ ಪ್ರಯೋಜನವೇನೆಂದು ತರ್ಕಿಸಿ ಸಂವರಣಮಾಡಿಕೊಂಡು ಮುದುಕಿಯು ಪುಷ್ಪಗಳನ್ನು ತಂದಿಟ್ಟಿದ್ದ ಸ್ಥಳಕ್ಕೆ ಹೋಗಿ ಕುಳಿತುಕೊಂಡು "ಮೋಹರೂಪನಾದ ಗಂಡನು ಕಡು ಕಷ್ಟಗಳನ್ನು ಪಡುತ್ತಿರುವಾಗ ಈ ರಾಣಿಗೆ ಈ ಪುಷ್ಪಗಳೇಕೆ? ಒಂದು ವೇಳೆ ಆತನು ಸತ್ತುಹೋದನೆಂದು ತಿಳಿದಿದ್ದರೆ ವಿಧವೆಗೇಕೆ ಈ ಅಲಂಕಾರ? ಈ ವೃದ್ಧಳು ಹೇಳಿದ ಸಂಗತಿಗಳಲ್ಲಿ ಏನೋ ಒಂದು ರಹಸ್ಯವಿರಬೇಕು. ಆ ರಹಸ್ಯವನ್ನು ಒಳಹೊಕ್ಕು ಭೇದಿಸಿ ಕಂಡುಕೊಳ್ಳುವವರೆಗೂ ನನಗೆ ತೃಪ್ತಿಯಿಲ್ಲ"ವೆಂದು ಆಲೋಚಿಸುತ್ತ ಮಾಲೆಗಳನ್ನು ಬಹು ಅಂದವಾಗಿ ಕಟ್ಟಿರಿಸಿದಳು. ಮನೆಯ ಕೆಲಸಗಳನ್ನೆಲ್ಲಾ ತೀರಿಸಿಕೊಂಡು ಅರಮನೆಗೆ ಹೋಗಲು ವೃದ್ಧಳು ಸಿದ್ಧಳಾಗಿ ಇಂದಿರೆಯು ಕಟ್ಟಿರಿಸಿದ್ದ ಹೂಮಾಲೆಗಳನ್ನು ನೋಡಿ ಆಶ್ಚರ್ಯಭರಿತಳಾಗಿ "ಇಂದಿರೆ! ನೀನು ಶೀಘ್ರವಾಗಿಯೇ ನಮ್ಮ ರಾಣಿಗೆ ಪ್ರಿಯಸಖಿಯಾಗುವೆ. ನಿನ್ನನ್ನು ನೋಡಿದ ಮೊದಲು ನಮ್ಮ ರಾಣಿಯ ಸಮೀಪಕ್ಕೆ ನಿನ್ನನ್ನು ಕರೆದುಕೊಂಡು ಹೋಗಬೇಕೆಂದು ಕುತೂಹಲಪಡುತ್ತಿರುವೆನು. ನಮ್ಮ ರಾಣಿಯು ತುಂಬಾ ಚದುರೆ" ಎಂದು ಹೇಳಿ ಅರಮನೆಗೆ ಹೊರಟುಹೋದಳು.

[illegible] ಅರಸನು ಹೇಗೆ ಜೀವಿಸಬಹುದೋ ಅಷ್ಟು ಗೌರವವಾಗಿ ಜೀವಿಸಲು ಸೌಕರ್ಯವಿದ್ದಿತು. ಆವಳ ಭೂವ್ಯವಹಾರಗಳನ್ನು ಮದನಪಾಲನು ನಡೆಯಿಸುತ್ತ ಅದರಿಂದ [illegible] ಆದಾಯವನ್ನು ಆಗಾಗ್ಗೆ ತಂದೊಪ್ಪಿಸುತ್ತಿದ್ದನು. ಅವಳ ಅಣ್ಣನ ಹೆಂಡತಿಯೂ ಕೆಲವು ಭೂಮಿಗಳ ಹಣವನ್ನು ವಸೂಲು ಮಾಡಿಸಿ ಅವಳಿಗೆ ಕಳುಹಿಸುತ್ತಿದ್ದಳು. ಮದನಪಾಲನು ಸ್ವಾಭಾವಿಕವಾಗಿ ಉತ್ತಮನೆಂದು ಹೇಮಪ್ರಭಾದೇವಿಗೆ ತಿಳಿದಿದ್ದಿತು. ಆದರೆ, ಅವನು ಮುರಳಾದೇವಿಯ ಆಟದ ಬೊಂಬೆಯಾಗಿದ್ದನು. ಯಾವ ಕಾಲಕ್ಕೆ ಏನು ಬುದ್ಧಿ ಅವನಿಗುಂಟಾಗುವುದೋ ಎಂದು ಭಯಪಡುತ್ತಿದ್ದಳು. ಹಾಗಾದರೂ, ಅವಳು ಧೈರ್ಯಶಾಲಿಯೇ. ತನ್ನ ಕಾರ್ಯಗಳನ್ನು ತಾನೇ ನಿರ್ವಹಿಸಿಕೊಳ್ಳಲು ಶಕ್ತಳು. ದೂರಾಲೋಚನಾಪರಳು. ಗತಿಸಿದ ಕಾರ್ಯಕ್ಕಾಗಿ ಮದನಪಾಲನ ಮೇಲೆ ಮಾತ್ಸರ್ಯವನ್ನು ಸಾಧಿಸಲು ಅವಳಿಗೆ ಇಷ್ಟವಿರಲಿಲ್ಲ. ತನ್ನ ಮನಸ್ಸಿನಲ್ಲಿರುವ ಸಂಶಯವನ್ನು ಹೊರಗೆ

ಪ್ರಕಾಶ ಪಡಿಸುವವಳಲ್ಲ. ಮದನಪಾಲನಾದರೋ ತನ್ನ ಪಾಲಿಗೆ ಅವಳೊಬ್ಬ ದೇವತೆಯೆಂದು ಭಾವಿಸಿದ್ದನು. ಆವ ಕೆಲಸವನ್ನಾದರೂ ಮಾಡಿ ಅವಳ ದಯೆಯನ್ನು ಸಂಪಾದಿಸಬೇಕೆಂಬುದೇ ಅವನ ಮನೋಗತವು. ಅವಳಾಗಿ ಇಷ್ಟಪಟ್ಟು ತನ್ನನ್ನು ಮದುವೆಯಾದರೆ ಅದಕ್ಕಿಂತಲೂ ಮಹಾಭಾಗ್ಯವು ಮತ್ತೊಂದಿಲ್ಲವೆಂದೆಣಿಸಿದ್ದನು. ಪ್ರತಿ ನಿಮಿಷವನ್ನೂ ಆ ಆಲೋಚನೆಯಲ್ಲಿಯೇ ಕಳೆಯುತ್ತಿದ್ದನು. ಅವಳ ಗಂಡನಿದ್ದಾಗ ಅವಳನ್ನು ಅತ್ತಿಗೆಯೆಂದು ಪೂಜಿಸುತ್ತಿದ್ದನು. ಈಗ ಅಂತಹವಳ ಸಮೀಪಕ್ಕೆ ಹೋಗಿ ತನ್ನನ್ನು ವಿವಾಹ ಮಾಡಿಕೊಳ್ಳೆಂದು ಕೇಳುವುದಕ್ಕೆ ಹಿಂಜರಿಯುತ್ತಿದ್ದನು. ಹೇಮಪ್ರಭಾದೇವಿಯು ಸ್ವಲ್ಪ ನಗುಮೊಗದಿಂದ ಮಾತನಾಡಿದರೆ ಸ್ವರ್ಗ ಸುಖವನ್ನೇ ಅನುಭವಿಸಿದಂತೆ ಭಾವಿಸುವನು. ಮುರಳಾದೇವಿಯು, 'ಮಗು! ಹೇಮಪ್ರಭಾದೇವಿಯ ಸಂಗತಿಯೇನಾಯಿತು?' ಎಂದು ಕೇಳಿದಾಗ "ಅಮ್ಮಾ! ನಾನು ಆ ಪ್ರಯತ್ನದಲ್ಲಿಯೇ ಇದ್ದೇನೆ. ಪ್ರತಿದಿನವೂ ಅಲ್ಲಿಗೆ ಹೋಗಿ ಬರುತ್ತಿದ್ದೇನೆ. ಆಕೆಯು ಅಷ್ಟು ಸುಲಭವಾಗಿ ವಶವಾಗತಕ್ಕವಳಲ್ಲ. ನಮ್ಮನ್ನು ಬಿಟ್ಟು ಎಲ್ಲಿಗೆ ತಾನೆ ಹೋಗುವಳು? ಸಮಾಧಾನದಿಂದಲೇ ಕಾರ್ಯಸಾಧನೆಯಾಗಬೇಕೆಂದು ನನ್ನ ಅಭಿಮತವು" ಎಂದು ಸಮಾಧಾನೋಕ್ತಿಗಳನ್ನು ಹೇಳುತ್ತಿದ್ದನು. ಹೇಮಪ್ರಭಾದೇವಿಯನ್ನು ಕಂಡಾಗ ಅವಳ ಮನಸ್ಸನ್ನು ಅನುಸರಿಸಿ ಮಾತನಾಡಿ ಹೋಗುತ್ತಿದ್ದನು. ಆದರೆ, ಅವಳ ಪ್ರಿಯಸಖಿಯ ಮೂಲಕ ತನ್ನ ಮನೋಭೀಷ್ಟವನ್ನು ಅವಳಿಗೆ ತಿಳಿಯಪಡಿಸುತ್ತಿದ್ದನು. ಹೇಮಪ್ರಭಾದೇವಿಗೆ ಈ ಸಂಗತಿಗಳೆಲ್ಲವೂ ತಿಳಿದಿದ್ದರೂ ತಿಳಿಯದ ಹಾಗೆ ನಟಿಸುತ್ತಿದ್ದಳು. ಆಗಾಗ್ಗೆ ಮದನಪಾಲನೊಂದಿಗೆ "ನೀನು ನನ್ನ ಸೋದರ ಸೊಸೆಯನ್ನು ಮದುವೆಮಾಡಿಕೊಂಡರೆ, ನನಗೆ ಇನ್ನೂ ಸಮೀಪದ ಬಳಗವಾಗುವೆ. ಆಗ ನಾನು ನನ್ನ ಮನೋಗತ ಕಾರ್ಯವನ್ನು ನಿನ್ನ ದ್ವಾರಾ ಸಾಧಿಸಿಕೊಳ್ಳುವೆನು. ಆ ಹುಡುಗಿಯನ್ನು ಇದಕ್ಕಾಗಿಯೇ ನಾನು ಸಾಕುತ್ತಿದ್ದೇನೆ" ಎಂದು ಹೇಳುತ್ತಿದ್ದಳು. ಆ ಮಾತಿಗೆ ಮದನಪಾಲನು ಅರ್ಧಾಂಗೀಕಾರವನ್ನು ತೋರಿಸುತ್ತಿದ್ದರೂ ಉತ್ತರ ಕೊಡುತ್ತಿರಲಿಲ್ಲ.

ಕೆಲವು ದಿನಗಳಿಂದ ಹೇಮಪ್ರಭಾದೇವಿಯು ಅಲಂಕಾರ ಮಾಡಿಕೊಳ್ಳುತ್ತಿದ್ದಳು. ಆ ವಿಷಯದಲ್ಲಿ ಜನಗಳು ನಾನಾ ವಿಧವಾಗಿ ಅಭಿಪ್ರಾಯ ಪಡುತ್ತಿದ್ದರು. ತಾನು ಇನ್ನೂ ಸುವಾಸಿನಿಯೆಂತಲೇ ತಿಳಿದಿರುವ ಕಾರಣ ಪೀತಾಂಬರಗಳನ್ನು ಉಡುತ್ತಿದ್ದಳು. ಆದರೆ, ತನಗೆ ಪತಿವಿಯೋಗವುಂಟಾದಂದಿನಿಂದ ಅಲಂಕಾರವನ್ನು ಮಾತ್ರ ಮಾಡಿಕೊಳ್ಳುತ್ತಿರಲಿಲ್ಲ. ಕತ್ತಿನಲ್ಲಿ ಮಂಗಳಸೂತ್ರವಲ್ಲದೆ ಮತ್ತಾವ ಆಭರಣಗಳನ್ನೂ ಇಟ್ಟುಕೊಳ್ಳುತ್ತಿರಲಿಲ್ಲ. ಬಂಗಾರದ

ಉಂಗುರವನ್ನು ಇಟ್ಟುಕೊಂಡಿದ್ದಳೇ ವಿನಾ ರತ್ನಖಚಿತವಾದ ಉಂಗುರಗಳನ್ನು ಉಪಯೋಗಿಸುತ್ತಿರಲಿಲ್ಲ. ಪ್ರತಿ ದಿನವೂ ಸ್ನಾನಮಾಡಿ ಸಾಧಾರಣ ವಸ್ತ್ರಗಳನ್ನು ಧರಿಸಿ ಹೊರಗೆ ಬಂದರೂ ಸರ್ವಾಲಂಕಾರಭೂಷಿತಳಾಗಿ ಕಾಣುತ್ತಿದ್ದಳು. "ಇಯಮಧಿಕ ಮನೋಜ್ಞಾ ವಲ್ಕಲೇನಾಪಿ ತನ್ವೀ" ಇವಳು ನಾರುಸೀರೆಯನ್ನು ಧರಿಸಿದ್ದರೂ ಅಧಿಕಮನೋಹರಳಾಗಿರುವಳೆಂದು ದುಷ್ಯಂತನು ಹೇಳಿದಂತೆ ಮದನಪಾಲನ ದೃಷ್ಟಿಗೆ ಹೇಮಪ್ರಭಾ ದೇವಿಯ ಸಾಮಾನ್ಯವಾದ ಅಲಂಕಾರವೂ ಮನೋಹರವಾಗಿ ಕಾಣುತ್ತಿದ್ದಿತು.

ಒಂದು ದಿನ ರೋಚಾಬಣ್ಣದ ಸೀರೆಯನ್ನುಟ್ಟುಕೊಂಡು ಎಂದಿನಂತೆ ಸಾಮಾನ್ಯಾಲಂಕಾರವಲ್ಲಿ ಒಂದು ದಿಂಬಿಗೆ ಒರಗಿಕೊಂಡು ಏನೇನೋ ಆಲೋಚಿಸುತ್ತಾ ಇರುವ ಕಾಲದಲ್ಲಿ ಮದನಪಾಲನು ತಟ್ಟನೆ ಬಂದನು. ಹೇಮಪ್ರಭಾ ದೇವಿಯು ಅವನನ್ನು ನೋಡಿ 'ಮದನಪಾಲ' ಎಂದು ಕರೆಯುವುದಕ್ಕೆ ಬದಲಾಗಿ 'ಮಹಾರಾಜಾ' ದಯಮಾಡಿಸು ಎಂದು ಸಂಬೋಧಿಸಿ ಆಸನವನ್ನು ತೋರಿದಳು.

**ಮದನಪಾಲ—** ದೇವೀ! ನೀನು ಇದುವರೆಗೆ ಕರೆಯುತ್ತಿದ್ದ 'ಮದನಪಾಲ' ಎಂಬ ಮಾತೇ ನನಗೆ ಸಾಕು. ಆ ಹೆಸರು ನಿನ್ನ ದಯೆಯನ್ನು ಆಕರ್ಷಿಸಿದರೆ 'ಮಹಾರಾಜ' ಶಬ್ದಕ್ಕೆ ಅದರಷ್ಟು ಬೆಲೆಯುಂಟಾಗಲಾರದು.

**ಹೇಮಪ್ರಭಾ —** ರಾಜೇಂದ್ರ! ಹಾಗೆ ಹೇಳಬಹುದೆ? ಈಶ್ವರನು ಈಗ ನನ್ನ ವಿಷಯದಲ್ಲಿ ದಯೆಯುಳ್ಳವನಾಗಿದ್ದಾನೆ. ನಾನು ನಿನ್ನ ಪ್ರಜಾಕೋಟಿಗೆ ಸೇರಿದ ಒಬ್ಬಳಾಗಿದ್ದೇನೆ. ಆತ್ಮಹತ್ಯೆಯನ್ನು ಮಾಡಿಕೊಳ್ಳುವುದು ದೋಷವೆಂದು ಹಿರಿಯರು ಹೇಳಿರುತ್ತಾರೆ. ಇಷ್ಟು ಅಪವಾದವನ್ನೂ ಕಷ್ಟವನ್ನೂ ಅನುಭವಿಸುತ್ತಿದ್ದರೂ ಜೀವಿಸಲೇಬೇಕಾಗಿದೆ.

**ಮದನಪಾಲ—** ದೇವೀ! ನೀನು ಹಾಗೆ ಚಿಂತಿಸಬಾರದು. ನೀನು ಇಷ್ಟಪಟ್ಟರೆ ಪುನಃ ರಾಣಿಯ ಪಟ್ಟವು ನಿನಗೆ ದೊರೆಯಲಾರದೇ? ಶಾಸ್ತ್ರಸಮ್ಮತವಾಗಿದ್ದರೂ ನಿನ್ನ ಸಮ್ಮತಕ್ಕೆ ಇದಿರು ನೋಡುತ್ತಿರುವೆನು," ಎಂದು ತಲೆಬಾಗಿಸಿಕೊಂಡು ದೀನಕಂಠದಿಂದ ಹೇಳಿದನು.

ಹೇಮಪ್ರಭಾದೇವಿಯು ಉತ್ತರಕೊಡಲಿಲ್ಲ. ತನಗೆ ದೇಹಸ್ಥಿತಿಯು ಸರಿಯಾಗಿಲ್ಲವಾದುದರಿಂದ ವಿಶ್ರಾಂತಿ ತೆಗೆದುಕೊಳ್ಳಲು ಅಪ್ಪಣೆಕೊಡಬೇಕೆಂದು ಹೇಳಿ ಒಳಮನೆಗೆ ಹೊರಟುಹೋದಳು. ಮದನಪಾಲನು ಭಯಪಟ್ಟು ಮೆಲ್ಲನೆ ಹಜ್ಜೆಗಳನ್ನು ಹಾಕುತ್ತ ಹೊರಗೆ ಹೊರಟನು. "ಆಹಾ! ಇವಳ ಮನೋಗತವನ್ನು ತಿಳಿಯಲು ಇಷ್ಟು ಕಾಲವಾಯಿತು. ಈಗ ನಾನು ಮಾಡುವು

ದೇನು? ನನ್ನ ತಾಯಿಯ ಪ್ರತಿಜ್ಞೆಯು ನೆರವೇರುವ ಬಗೆ ಹೇಗೆ? ಆಕೆಯ ಪ್ರೋತ್ಸಾಹ ಮಾತ್ರವಲ್ಲದೆ ನನಗೆ ಕೂಡ ಹೇಮಪ್ರಭಾ ದೇವಿಯಲ್ಲಿ ಅಂತಹ ಸಂಕಲ್ಪವಿರುವುದು. ನಾನು ಅವಳನ್ನು ಮದುವೆಯಾಗಬೇಕೆಂದು ಕೋರುವುದು ಅಧರ್ಮವೆಂದು ಎಣಿಸಲಾರೆನು. ಏಕೆಂದರೆ, ವಿಕ್ರಮಸಿಂಹ ರಾಜನು ತಂದೆಯನ್ನು ಕೊಂದು ಆ ಅಪವಾದದ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ದೇಶಭ್ರಷ್ಟನಾಗಿರುವನು. ಅವನಿಗೂ ನನ್ನ ತಾಯಿಗೂ ಯಾವ ವಿಧವಾದ ಮನಸ್ತಾಪಗಳಿದ್ದುವೋ ನಾನರಿಯೆನು. ವಿಕ್ರಮಸಿಂಹನು ಮೃತನಾದನೆಂಬ ಪ್ರವಾದವೂ ಕೂಡ ಬಂದಿರುವುದು. ಅದು ಹೇಗೇ ಇರಲಿ, ಅವನು ಪುನಃ ಈ ಪ್ರಾಂತ್ಯಕ್ಕೆ ಬರುವ ಸಂಭವವು ಸ್ವಪ್ನೇಪಿ ಉಂಟಾಗಲಾರದು. ಹೇಮಪ್ರಭಾ ದೇವಿಗೆ ಈಗ ನಾನು ಮೈದುನನು. ಅವಳ ಪಾಣಿಗ್ರಹಣ ಮಾಡುವುದು ನನಗೆ ನ್ಯಾಯವೆಂತಲೇ ತೋರುವುದು. ಅಲ್ಲದೆ, ನಾನು ಈಗ ದೇಶಾಧೀಶನಾಗಿದ್ದೇನೆ. ಅವಳು ನನಗಿಂತಲೂ ವಯಸ್ಸಿನಲ್ಲಿ ಚಿಕ್ಕವಳು. ಇಂತಹ ಸಮಯವನ್ನು ನಾನು ಬಿಡಲಾಗದು. ಎಷ್ಟು ದಿನಗಳಾದರೂ ಕಾದಿದ್ದು ಅವಳ ಮನಸ್ಸನ್ನು ನೋಯಿಸದಂತೆ ಮದುವೆಯಾಗುವೆನು. ಅವಳ ವಿಷಯದಲ್ಲಿ ನನ್ನ ತಾಯಿಗೆ ತುಂಬಾ ಮಾತ್ಸರ್ಯವಿರುವುದು. ನನಗೆ ಬೇರೆ ವಿವಾಹಮಾಡಿ ಹೇಮಪ್ರಭಾ ದೇವಿಯನ್ನು ಒಬ್ಬ ಸೂಳೆಯೋಪಾದಿಯಲ್ಲಿ ನನ್ನ ವಶ ಮಾಡಬೇಕೆಂದು ನನ್ನ ತಾಯಿಯು ಆಲೋಚಿಸಿರುವಳು. ನಾನು ಅಂತಹ ದುಷ್ಕೃತ್ಯಕ್ಕೆ ಒಳಗಾಗಲಾರೆನು. ನನ್ನ ತಾಯಿಯು ನನ್ನ ಪುರೋವೃದ್ಧಿಯನ್ನು ಕೋರುತ್ತಿರುವುದು ನಿಶ್ಚಯವಾದರೂ ಹೇಮಪ್ರಭಾ ದೇವಿಗೆ ಮನೋವ್ಯಥೆಯನ್ನುಂಟುಮಾಡುವುದು ಸರಿಯಲ್ಲ. ನನ್ನ ತಾಯಿಯು ಸವತಿಯ ಮಗನನ್ನು ವಿರೋಧಮಾಡಿಕೊಂಡು ಗಂಡನನ್ನು ಹೋಗಲಾಡಿಸಿಕೊಂಡಳು. ನಾನು ಆಕೆಯನ್ನೂ ನೋಯಿಸಬಾರದು. ಆದುದರಿಂದ ಇಬ್ಬರಿಗೂ ಮನೋವ್ಯಥೆಯುಂಟಾಗದಂತೆ ಜಾಗರೂಕನಾಗಿ ವರ್ತಿಸುವೆನು," ಎಂದು ಆಲೋಚಿಸಿದನು.

# ೮ನೆಯ ಅಧ್ಯಾಯ

ಹೇಮಪ್ರಭಾ ದೇವಿಯು ಆಲೋಚನಾಶೂನ್ಯಳಾಗಿ ಗೊಂಬೆಯೋಪಾದಿಯಲ್ಲಿ ತನ್ನ ಅಂತಃಪುರದಲ್ಲಿ ಕುಳಿತಿದ್ದಳು. ಆ ಸಮಯಕ್ಕೆ ಸರಿಯಾಗಿ ಹೂವಿನ ಮುದುಕಿಯು ಮಾಲೆಗಳ ಸಮೇತ ಪ್ರವೇಶಿಸಿದಳು. ಅವಳನ್ನು ನೋಡಿದ ಕೂಡಲೆ 'ಅಂಬುಜಾಕ್ಷಿ! ಪೂಮಾಲೆಗಳನ್ನು ತಂದಿರುವೆಯಾ? ಕೊಡು. ನೋಡೋಣ'' ಎಂದಳು. ವೃದ್ಧಳು ಭಯಭಕ್ತಿಗಳಿಂದ ರಾಣಿಯ ಸಮೀಪಕ್ಕೆ ಹೋಗಿ ಪುಷ್ಪಮಾಲಿಕೆಗಳನ್ನು ಕೊಟ್ಟಳು.

ಹೇಮಪ್ರಭಾ ದೇವಿಯು ಹೂವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಳು. ಬಹಳ ಅಂದವಾಗಿ ಕಟ್ಟಲ್ಪಟ್ಟಿದ್ದುವು. 'ಅಂಬುಜಾಕ್ಷಿ! ಈ ದಿನ ಈ ಪೂಮಾಲೆಗಳನ್ನು ಕಟ್ಟಿದವರಾರು ?'' ಎಂದು ಕೇಳಿದಳು.

**ವೃದ್ಧಳು—** ಅಮ್ಮಣ್ಣಿಯವರೇ ! ಸುಮಾರು ಹತ್ತು ಹದಿನೈದು ದಿನಗಳ ಹಿಂದೆ ಹದಿನಾರು ವರ್ಷ ವಯಸ್ಸಿನ ಒಬ್ಬ ಅನಾಥ ಹುಡುಗಿಯು ನನ್ನ ಮನೆಗೆ ಬಂದಿರುವಳು. ಅವಳ ನಡೆನುಡಿಗಳನ್ನು ನೋಡಿದರೆ ದೊಡ್ಡವಂಶಕ್ಕೆ ಸೇರಿದವಳೆಂದು ತೋರುತ್ತದೆ. ಸಮಸ್ತ ವಿದ್ಯೆಗಳನ್ನೂ ಬಲ್ಲವಳು. ಅವಳು ತಮ್ಮಂತಹ ಮಹಾರಾಣಿಯವರ ಸನ್ನಿಧಿಯಲ್ಲಿರತಕ್ಕವಳೆಂದು ತೋರುತ್ತಿದೆ. ಅವಳೇ ಈ ಮಾಲಿಕೆಗಳನ್ನು ಕಟ್ಟಿದವಳು.

**ಹೇಮಪ್ರಭಾದೇವಿ—** ಹಾಗಾದರೆ, ಆ ಹುಡುಗಿಯನ್ನು ನಾನು ನೋಡಬೇಕು. ನಾಳೆ ಬರುವಾಗ ಕರೆದುಕೊಂಡು ಬಾ.

ಇಂದಿರೆಯು ವೃದ್ಧಳಿಗಾಗಿ ಇದಿರು ನೋಡುತ್ತಾ ಆತುರಳಾಗಿದ್ದಳು. ಹೆಜ್ಜೆಯ ಶಬ್ದವನ್ನು ಕೇಳಿದ ಕೂಡಲೇ ಕದವನ್ನು ತೆಗೆದಳು. ಮುದುಕಿಯು ಮನೆಯನ್ನು ಪ್ರವೇಶಿಸಿ ಯಥಾ ಸಾವಕಾಶವಾಗಿ ಕುಳಿತುಕೊಂಡು 'ಅಮ್ಮಾ! ಇಂದಿರೆ! ನಮ್ಮ ರಾಣಿಯು ನಿನ್ನನ್ನು ನೋಡಬೇಕೆಂದು ಅಪೇಕ್ಷಿಸಿರುವಳು. ನೀನು ಕಟ್ಟಿದ್ದ ಪೂಮಾಲೆಗಳು ಬಹಳ ಅಂದವಾಗಿದ್ದುವೆಂದು ಸಂತೋಷಿಸಿದಳು ಮಗುವೇ! ನೀನು ಮಹದಾಶ್ರಯವನ್ನು ಹೊಂದಿ ಸುಖದಿಂದಿರುವಾಗ ನನ್ನನ್ನು ಮರೆಯಬೇಡ'' ಎಂದು ಹೇಳಿದಳು.

**ಇಂದಿರೆ—** ತಾಯೇ! ನಾನು ಉಪಕಾರ ಮಾಡಿದವರನ್ನು ಎಂದಿಗೂ ಮರೆಯತಕ್ಕವಳಲ್ಲ. ಈ ದಿನ ನೀನು ಅಲ್ಲಿ ಅರಸನನ್ನು ನೋಡಿದೆಯಾ?

**ವೃದ್ಧಳು—**ನೋಡಿದೆನು. ನಮ್ಮ ರಾಣಿಯು ದೇವತೆಯಂತೆ ಅಲಂಕರಿಸಿಕೊಂಡು ಅರಸನೊಂದಿಗೆ ಮಾತನಾಡುತ್ತಿದ್ದಳು. ನಾನು ಅಲ್ಲಿಗೆ ಹೋಗು

ವುದಕ್ಕೂ, ಮಹಾರಾಜರು ಹೊರಟುಹೋಗುವುದಕ್ಕೂ ಸರಿಯಾಗಿದ್ದಿತು.

ಈ ಮಾತನ್ನು ಕೇಳಿ ಇಂದಿರೆಯ ದೇಹಾದ್ಯಂತವೂ ಕುದಿಯಿತು. ಮುದುಕಿಯು ಬಲಾತ್ಕಾರದಿಂದ ಊಟಮಾಡಿ ಮಲಗಿದಳು. ನಿದ್ರೆಯನ್ನು ಚಿಂತೆಯು ದೂರಮಾಡಿತು. ಬೆಳಗಿನ ಜಾವ ನಾಲ್ಕು ಘಂಟೆಗೆ ರಾಜಗೃಹದಲ್ಲಿ ನಗಾರಿ, ನೌಬತ್ತುಗಳು ಮೊಳಗಲಾರಂಭಿಸಿದುವು. ಈ ಧ್ವನಿಯಿಂದ ಎಚ್ಚೆತ್ತ ಇಂದಿರೆಯು "ಇದೇನಮ್ಮ?" ಎಂದು ಕೇಳಿದಳು.

**ವೃದ್ಧಳು—** ರಾಜಗೃಹದಲ್ಲಿ ನಗಾರಿ ನೌಬತ್ತುಗಳನ್ನು ಬಾರಿಸುವ ವಾಡಿಕೆಯು ಪೂರ್ವದಿಂದಲೂ ಬಂದಿರುವುದು. ಇದು ಬೆಳಗಿನ ಜಾವ ನಾಲ್ಕು ಘಂಟೆಯಲ್ಲಿ ನಡೆಯುವುದು. ನಿಶ್ಶಬ್ದವಾಗಿರುವುದರಿಂದ ಇದನ್ನು ಚೆನ್ನಾಗಿ ಕೇಳಲು ಅವಕಾಶವಾಗಿದೆ.

**ಇಂದಿರೆ—**ಅಮ್ಮಾ ! ಈಗ ರಾಜಗೃಹದಲ್ಲಿ ಆರಾರಿರುವರು?

**ವೃದ್ಧಳು—** ಮಹಾರಾಜರು, ಅವರ ತಾಯಿ ಮತ್ತು ಅವರ ಬಂಧುವರ್ಗಕ್ಕೆ ಸೇರಿದ ಇತರರು.

**ಇಂದಿರೆ—** ನಿಮ್ಮ ರಾಣಿಯು ಅರಮನೆಗೆ ಹೋಗಿ ತನ್ನ ಅತ್ತೆಯನ್ನು ನೋಡುವುದುಂಟೇ?

**ವೃದ್ಧಳು—** ಆ ಸಂಭವವೇ ಇಲ್ಲ. ಅದಕ್ಕಾಗಿಯೇ ನಮ್ಮ ರಾಣಿಯ ಮೇಲೆ ಮುರಳಾದೇವಿಗೆ ತುಂಬ ಮಾತ್ಸರ್ಯ. ತನ್ನ ಸವತಿಯು ಮಗನಂತೆ ಈಕೆಯೂ ಹುಟ್ಟಿಲ್ಲದೆ ಹೋಗಬೇಕೆಂಬುದೇ ಆಕೆಯ ಮನೋಗತವು. ಆದರೆ, ತನ್ನ ದತ್ತ ಪುತ್ರನಿಗೆ ನಮ್ಮ ರಾಣಿಯ ಮೇಲೆ ತುಂಬ ಪ್ರೀತಿಯಾದುದರಿಂದ ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಹೇಗಾದರೂ, ನಮ್ಮ ರಾಣಿಗೆ ವ್ರತ ಭಂಗ ಮಾಡಿಸಿ ಸವತಿಯ ಮಗನಿಗೆ ಅವಮಾನವಾಗುವಂತೆ ಮಾಡಲು ಯತ್ನಿಸುತ್ತಿರುವಳು. ಮುಂದೆ ಹೇಗಾಗುವುದೋ ನೋಡಬೇಕು.

**ಇಂದಿರೆ—**ಅಮ್ಮಾ ! ಮತ್ತೊಂದು ಸಂಗತಿಯನ್ನು ಕೇಳಬೇಕೆಂದಿದ್ದೇನೆ. ಆಗಿನ ಸೇವಕರು ಈಗಲೂ ಅರಮನೆಯಲ್ಲಿ ಇದ್ದಾರೆಯೇ?

**ವೃದ್ಧಳು—** ಅನೇಕರಿರುವರು. ಮುರಳಾದೇವಿಯೊಂದಿಗೆ ಬಂದ ಸೇವಕರಲ್ಲಿ ಫಲ್ಗುನನೆಂಬುವನು ಈಗಲೂ ಇದ್ದಾನೆ. ಅವನು ಚಿಕ್ಕಂದಿನಿಂದಲೂ ಮದನಪಾಲನ ಅಂಗರಕ್ಷಕನು. ಅವನು ಈಗ ಅರಸನ ಸಮಾನವಾಗಿ ಸುಖಪಡುತ್ತಿದ್ದಾನೆ. ಹೆಸರಿಗೆ ಸೇವಕನೇ ವಿನಾ ರಾಜಮಂದಿರದಲ್ಲೆಲ್ಲಾ ಅವನದೇ ಅಧಿಕಾರ. ಮುರಳಾದೇವಿಗೆ ಅವನು ಕೇವಲ ರಹಸ್ಯ ಸೇವಕನು. ತನ್ನ ಮಗನಿಗೆ ಹೇಳದೆ ಇರುವ ಸಂಗತಿಗಳನ್ನೆಲ್ಲಾ ಅವನಿಗೆ ಹೇಳುವಳು. ಮತ್ತೊಬ್ಬ ದಾಸಿಯಿರುವಳು. ಅವಳು ಕೂಡ ಮುರಳಾದೇವಿಯ ರಹಸ್ಯಕೂಟಕ್ಕೆ

ಸೇರಿದವಳೇ. ಸತ್ತು ಹೋದ ಅರಸನ ಕಾಲದಲ್ಲಿದ್ದವರೆಲ್ಲರೂ ಈಗಲೂ ಇದ್ದಾರೆ. ಆತನಿಗೆ ಮಾತ್ರ ಸ್ಥಳವಿಲ್ಲದೆ ಹೋಯಿತು. ಯುವರಾಜನಿಗಂತೂ ರಾಜ್ಯಭೋಗವನ್ನು ಅನುಭವಿಸುವ ಪ್ರಾಪ್ತಿಯೇ ಇಲ್ಲದಂತಾಯಿತು.

**ಇಂದಿರೆ—** ಅಮ್ಮಾ! ಮಗನೇ ತನ್ನ ತಂದೆಯನ್ನು ಕೊಂದನೆಂಬ ಕಾರಣ ದಿಂದ ಯುವರಾಜನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿದರೆಂಬ ಸುದ್ದಿಯು ಜನ ಜನಿತವಾಗಿರುವುದು. ಇದು ನಿಜವೇ? ಅಂತಃಪುರದಲ್ಲಿ ನಿಜವಾದ ಸಂಗತಿ ಯನ್ನು ತಿಳಿದವರು ಯಾರಾದರೂ ಇದ್ದಾರೆಯೇ?

**ವೃದ್ಧಳು—** ಮಗಳೆ! ಗಟ್ಟಿಯಾಗಿ ಮಾತನಾಡಬೇಡ. ಇದು ಬಹಳ ರಹಸ್ಯ. ನಮ್ಮ ಯುವರಾಜನನ್ನು ತಂದೆಗಿಂತಲೂ ಹೆಚ್ಚಾಗಿ ಪ್ರಜೆಗಳು ಪ್ರೇಮಿಸುತ್ತಿದ್ದರು. ಮಗನಿಗೆ ತಂದೆಯ ಮೇಲೆ ಪರಮ ಪ್ರೀತಿ. ಅಯ್ಯೋ! ನಮ್ಮ ಯುವರಾಜನು ಶ್ರೀರಾಮಮೂರ್ತಿಯಂತೆ ತನ್ನ ತಂದೆಯ ಆಜ್ಞೆ ಯನ್ನು ಮೀರತಕ್ಕವನಲ್ಲ. ತಂದೆ ಮಕ್ಕಳ ಪ್ರೀತಿಯನ್ನು ಸಹಿಸಲಾರದೆ ಮುರಳಾದೇವಿಯು ಒಳಗೆಯೇ ಕುದಿಯುತ್ತಿದ್ದಳು. ಫಲ್ಗುನನೆಂಬುವನು ಬಹು ಕಪಟಿ. ಬಹಳ ತಂತ್ರಗಾರ. ಇವನ ಸಹಾಯದಿಂದ ಮದನಪಾಲನು ಇಂತಹ ಅಕೃತ್ಯವನ್ನು ನಡೆಯಿಸಿದನೆಂದು ಜನಗಳು ಆಡಿಕೊಳ್ಳುವರು. ಆ ಮಾತನ್ನು ಹೊರಗೆ ಹೇಳಲು ಯಾರಿಗೂ ಧೈರ್ಯವಿಲ್ಲ. ಮುರಳಾದೇವಿ ಯನ್ನು ಸತ್ತು ಹೋದ ರಾಜನಿಗೆ ವಿವಾಹಮಾಡಿದುದು ಡಿಲ್ಲೀಶ್ವರನಲ್ಲವೆ? ಈ ರಾಜಕುಟುಂಬದ ಮೇಲೆ ಆತನಿಗೆ ತುಂಬ ಅಭಿಮಾನ. ಆ ಸಾರ್ವಭೌಮನ ಅಭಿಮಾನದಿಂದಲೇ ಮುರಳಾದೇವಿಯು ತನ್ನ ಸವತಿಯ ಮಗನಿಗೆ ಇಷ್ಟು ಕಷ್ಟ ಗಳನ್ನು ತಂದಿಡಲು ಅವಕಾಶವಾಯಿತು.

**ಇಂದಿರೆ—** ಈ ವೃತ್ತಾಂತವು ಬಹು ವಿಚಿತ್ರವಾಗಿರುವುದು. ಮುರಳಾ ದೇವಿಯು ತನ್ನ ಗಂಡನನ್ನು ಕೊಲ್ಲಿಸುವಷ್ಟು ಪಾಪಚರಿತಳೇ?

**ವೃದ್ಧಳು—** ಹಾಗಲ್ಲ! ಮುರಳಾದೇವಿಗೆ ತನ್ನ ಸವತಿಯ ಮಗನ ಮೇಲೆ ಮತ್ಸರವಿದ್ದುದೇ ಹೊರತು ತನ್ನ ಗಂಡನಿಗೆ ಇಂತಹ ವಿಪತ್ತು ಪ್ರಾಪ್ತ ವಾಗುವುದೆಂದು ತಿಳಿದಿರಲಿಲ್ಲವಂತೆ. ಅವಳಿಗೆ ತಮ್ಮನ ಮಾತೇ ವೇದವಾಕ್ಯವು. ಅವನು ಹೇಗೆ ಹೇಳಿದರೆ ಹಾಗೆ ನಡೆದುಕೊಳ್ಳುವಳು. ಹೇಗಿದ್ದರೂ, ಎಲ್ಲರೂ ಸೇರಿ ಯುವರಾಜನ ಮೇಲೆ ಅಪವಾದವನ್ನು ಹೊರಿಸಿ ಅವನನ್ನು ಕೆಡಿಸಿದರು. ಯುವರಾಜನು ಇನ್ನೂ ಜೀವಿಸಿರುವನೆಂದು ಕೆಲವರೂ, ಸತ್ತುಹೋದನೆಂದು ಕೆಲವರೂ ಹೇಳುತ್ತಿರುವರು. ನಮ್ಮ ರಾಣಿಯ ಮಗುವನ್ನು ಹುಲಿ ತಿಂದು ಹೋಯಿತು. ದಿಕ್ಕಿಲ್ಲದ ನಮ್ಮ ರಾಣಿಯು ಏನು ಮಾಡಬಹುದು? ಮದನ

ಪಾಲನಿಗೆ ಈಗ ದೈವಬಲವಿರುವುದು. ಮಗುವೆ! ಈ ಸಂಗತಿಯನ್ನು ಯಾರಲ್ಲಿಯೂ ಉಸುರಬೇಡ. ಫಲ್ಗುನನು ಪರಮದ್ರೋಹಿ. ಭದ್ರವಾಗಿರಬೇಕು."

ಎಂದು ಹೇಳಿ ಮುದುಕಿಯು ಎದ್ದು ಹೋದಳು. ಇಂದಿರೆಯು ಎದ್ದು ಕಾಲಕೃತ್ಯಗಳನ್ನು ತೀರಿಸಿಕೊಂಡು ಮುದುಕಿಗೆ ಸಹಾಯವಾಗಿ ಮನೆಯ ಕೆಲಸಗಳನ್ನು ಮಾಡತೊಡಗಿದಳು. ಇದ್ದಕ್ಕಿದ್ದ ಹಾಗೆ ಒಂದು ತುತ್ತೂರಿಯ ಧ್ವನಿಯು ಕೇಳಿಸಿತು. ಇದೇನೆಂದು ಮುದುಕಿಯನ್ನು ವಿಚಾರಿಸಿದಳು.

**ವೃದ್ಧೆಳು**– ಇದು ಮಾಳವೇಶನು ಬರುವನೆಂದು ಸೂಚಿಸುವ ತುತ್ತೂರಿಯ ಶಬ್ದವು. ನಮ್ಮ ದೇಶದ ಅರಸನು ಬಂದರೆ, ಅಥವಾ ಎಲ್ಲಿಗಾದರೂ ಹೋದರೆ ಈ ವಿಧವಾಗಿ ತುತ್ತೂರಿಯ ಶಬ್ದವಾಗುವುದು. ಈ ಮಾತನ್ನು ಕೇಳಿ ಇಂದಿರೆಯು ಕುತೂಹಲಾವಿಷ್ಟಳಾಗಿ ಹಿತ್ತಿಲಲ್ಲಿದ್ದ ಗೋಡೆಯ ಬಳಿ ಒಂದು ದಿನ್ನೆಯನ್ನೇರಿ ನೋಡುತ್ತಿದ್ದಳು. ಸ್ವಲ್ಪ ಹೊತ್ತಿನ ಮೇಲೆ ಕುದುರೆಗಳು ಬರುವ ಶಬ್ದವು ಕೇಳಿಸಿತು. ಅವುಗಳ ಹಿಂದೆ ಒಂದು ಸುಂದರವಾದ ರಥದಲ್ಲಿ ಶುಭ್ರವಾದ ವಸ್ತ್ರಗಳನ್ನು ಧರಿಸಿ ಸುಂದರಾಕಾರನಾದ ಲಲಿತಕುಮಾರನು ಕುಳಿತುಕೊಂಡು ಬರುತ್ತಿದ್ದನು. ಇಂದಿರೆಯ ಗಾತ್ರವೆಲ್ಲವೂ ಅವನನ್ನು ನೋಡಿ ನೀರಾಯಿತು. ತಡೆಯಲಶಕ್ಯವಾದ ದುಃಖವು ಪ್ರಾಪ್ತವಾಯಿತು. "ಹಾ! ದೈವವೇ! ನಾನೆಷ್ಟು ನಿರ್ಭಾಗ್ಯಳು? ಮನಃಪೂರ್ತಿಯಾಗಿ ಪ್ರೇಮಿಸಿದ ನನ್ನ ಪತಿಯು ಇಷ್ಟು ವೈಭವದಿಂದ ಇಲ್ಲಿ ಹೋಗುತ್ತಿರಲು ಮಾತನಾಡಿಸಲೂ ಯೋಗ್ಯತೆಯಿಲ್ಲದ ಇಂತಹ ಅನಾಥಸ್ಥಿತಿಯಲ್ಲಿ ನಾನು ಇದ್ದೇನೆ! ನಮ್ಮಿಬ್ಬರ ಮಧ್ಯೆ ಒಂದು ದೊಡ್ಡ ಅಂತರಾಯವು ಇರುವ ಹಾಗೆ ತೋರುತ್ತಿದೆ. ಹೃದಯವೇ! ನೀನೇಕೆ ಬಾರಿಬಾರಿಗೂ ದುಃಖಪಡುವೆ? "ಧೈರ್ಯಂ ಸರ್ವತ್ರ ಸಾಧನಂ" ಎಂಬ ಆರ್ಯೋಕ್ತಿಯನ್ನು ಮರೆಯಬಾರದು" ಎಂದು ಆಲೋಚಿಸಿಕೊಂಡು ಆ ರಾಜಕುಮಾರನು ತನ್ನ ದೃಷ್ಟಿಪಥವನ್ನು ದಾಟಿ ಹೋಗುವವರೆಗೂ ನೋಡುತ್ತಿದ್ದು ಹಿಂದಿರುಗಿ ಗೃಹವನ್ನು ಪ್ರವೇಶಿಸಿದಳು.

ಮರುದಿನ ಹೇಮಪ್ರಭಾ ದೇವಿಯು ಭೋಜನವನ್ನು ತೀರಿಸಿಕೊಂಡು ವಿಶ್ರಾಂತಿಮಂದಿರದಲ್ಲಿ ಕುಳಿತಿದ್ದಳು. ಉಭಯಪಾರ್ಶ್ವಗಳಲ್ಲಿಯೂ ಇಬ್ಬರು ಸಖಿಯರು ನಿಂತು ಗಾಳಿ ಹಾಕುತ್ತಿದ್ದರು. ಸ್ವಲ್ಪ ಹೊತ್ತಿನ ಮೇಲೆ ರಾಣಿಯು ನಿದ್ರೆಗೈದಳು. ಸಖಿಯರು ಹೊರಗೆ ಹೋದರು. ಅವಳು ಎಷ್ಟು ಕಾಲ ನಿದ್ರಿಸಿದಳೋ ತಿಳಿಯದು. ಚಕಿತಳಾಗಿ ಎಚ್ಚತ್ತು "ಇದೇನು ಕನಸು! ಯಾರೋ ನನ್ನ ಸಮೀಪದಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದರು. ಅವರಾರೆಂಬುದು ನನಗೆ ಗೊತ್ತಿಲ್ಲ. ಆದರೆ, ಅವರ ಸಾನ್ನಿಧ್ಯವು ನನಗೆ ತುಂಬ

ಆಹ್ಲಾದವನ್ನುಂಟುಮಾಡುತ್ತಿದ್ದಿತು. ಇದೇನು! ನನ್ನ ವಾಮನೇತ್ರವು ಹಾರುತ್ತಿರುವುದು! ಸ್ತ್ರೀಯರಿಗೆ ಇದು ಒಂದು ಶುಭವನ್ನು ಸೂಚಿಸುವುದೆಂದು ಹೇಳುವರು. ನನ್ನ ಶುಭವೆಲ್ಲವೂ ಅಡವಿಯಪಾಲಾಗಿ ಈಗ ಹದಿನಾರು ವರ್ಷಗಳಾದುವು. ಹಾ! ದೈವವೇ! ನಾನು ಜನಿಸಿರುವುದರಿಂದ ಸಂತೋಷಪಡುವವರಾರೂ ಇಲ್ಲ. ಸತ್ತರೆ ದುಃಖಪಡುವವರೂ ಇಲ್ಲ. ಆತ್ಮಹತ್ಯೆಯು ದೋಷವಾದಕಾರಣ ನಾನು ಆ ಕೆಲಸ ಮಾಡಲು ಹಿಂಜರಿಯುತ್ತಿರುವೆನು. ನನ್ನಂತಹ ಪಾಪಾತ್ಮಳಿಗೆ ಶುಭವು ಕೂಡ ಪ್ರಾಪ್ತವಾಗುವುದುಂಟೇ? ಎಂದು ತನ್ನವೃತ್ತಾಂತವನ್ನೆಲ್ಲಾ ನೆನೆನೆನೆದು ಚಿಂತಾಕ್ರಾಂತಳಾದಳು. ಆ ಸಮಯದಲ್ಲಿ ಒಬ್ಬ ದಾಸಿಯು ಬಂದು "ದೇವಿ! ಅಂಬುಜಾಕ್ಷಿಯು ಯಾರೋ ಒಬ್ಬ ಹುಡುಗಿಯನ್ನು ಕರೆದುಕೊಂಡು ತಮ್ಮ ದರ್ಶನಕ್ಕಾಗಿ ಬಂದಿರುವಳು" ಎಂದು ವಿಜ್ಞಾಪಿಸಿದಳು.

**ಹೇಮಪ್ರಭಾದೇವಿ—** ಸರೋಜಿನೀ! ಅವರನ್ನು ಒಳಹೇಳು.

ಇಂದಿರೆಯು ಇದುವರೆಗೆ ರಾಜಾಂತಃಪುರವನ್ನು ನೋಡಿದವಳಲ್ಲ. ಆದರೂ ಆ ರಾಜಮಂದಿರದ ದ್ವಾರವನ್ನು ಪ್ರವೇಶಿಸಿದ ಕೂಡಲೇ ಅಲ್ಲಿನ ಸ್ಥಳವು ತನಗೆ ಪರಿಚಿತವಾಗಿದ್ದಂತೆ ಅವಳಿಗೆ ಸ್ಫುರಿಸಿತು. ವಿಶ್ರಾಂತಿಸಿಲಯಕ್ಕೆ ಹೋಗುವಾಗ ಅವಳ ದೇಹವು ಕಂಪಿಸಲಾರಂಭಿಸಿತು. ಮನಸ್ಸನ್ನು ಸ್ಥಿರಪಡಿಸಿಕೊಂಡು ಮುದುಕಿಯ ಕೈಯನ್ನು ಹಿಡಿದುಕೊಂಡು ನಡೆದಳು. ಒಳಗೆ ಪ್ರವೇಶಿಸಿ ಅಲ್ಲಿ ಕುಳಿತಿದ್ದ ಹೇಮಪ್ರಭಾ ದೇವಿಯನ್ನು ನೋಡಿ ಸ್ತಬ್ಧಳಾದಳು. ನಿಮಿಷದಲ್ಲಿ ತನ್ನ ಸ್ಥಿತಿಯನ್ನು ನೆನೆಸಿಕೊಂಡು ತಬ್ಬಿಬ್ಬಾಗಿ ಹಜ್ಜೆಗಳನ್ನು ಹಾಕುತ್ತ ಆ ದೇವಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದಳು. ಹೇಮಪ್ರಭಾ ದೇವಿಯು ಆ ಬಾಲೆಯನ್ನು ನೋಡುತ್ತ ಬಹಿರ್ವ್ಯಾಪಾರವನ್ನೇ ಮರೆತು ನಿಂತಳು. ತನ್ನನ್ನು ಗುರುತಿಸುವಳೇನೋ ಎಂದು ಇಂದಿರೆಯು ಭಯಪಟ್ಟಳು. "ಆಹಾ! ಈ ಹುಡುಗಿ ಎಂತಹ ಚಲುವೆ. ಆವುದೋ ಒಂದು ದೊಡ್ಡ ವಂಶದಲ್ಲಿ ಹುಟ್ಟಿರಬೇಕು. ಇಲ್ಲದಿದ್ದರೆ ಇಂತಹ ಅಸಮಾನವಾದ ಸೌಂದರ್ಯವು ಹೇಗೆ ಬರುವುದು?" ಎಂದಾಲೋಚಿಸುತ್ತಿರಲು ವಿಲೋಚನೆಯೆಂಬ ಒಬ್ಬ ದಾಸಿಯು ಒಂದು ಕಾಗದವನ್ನು ಬೆಳ್ಳಿಯ ತಟ್ಟೆಯಲ್ಲಿಟ್ಟುಕೊಂಡು ಬಂದು ಹೇಮಪ್ರಭಾ ದೇವಿಗೆ ಅರ್ಪಿಸಿದಳು. ಆ ಕಾಗದವನ್ನು ಆ ದೇವಿಯು ಓದುತ್ತಿದ್ದಳು.

"ಈ ದೇವಿಯು ಎಷ್ಟು ಸುಂದರಳು! ನೇತ್ರಗಳ ಪ್ರಕಾಶ! ಮೂಗಿನ ಅಂದ! "ಕಮಲಮುಕುಳ ವಿಪ್ರಫುಲ್ಲ ರಾಜೀವನೇತ್ರೀ" ಎಂದು ತನ್ನ ತಂದೆಯು ಓದುತ್ತಿದ್ದ ಗ್ರಂಥದಲ್ಲಿ ವರ್ಣಿಸಿರುವ ಪದ್ಮಿನೀ ಜಾತಿಯ ಸ್ತ್ರೀಯರ ಲಕ್ಷಣ

ಗಳೆಲ್ಲವೂ ಈ ದೇವಿಯಲ್ಲಿ ಕಾಣುತ್ತಿವೆ. ಇಂತಹ ಸುಲಕ್ಷಣಗಳಿಂದೊಡಗೂಡಿದ ಈ ದೇವಿಯು ಗುಣಗಳಲ್ಲಿ ಕಳಂಕವಿರುವುದುಂಟೇ? ನಾನು ನಂಬಲಾರೆನು. ಈಕೆಯು ತುಂಬ ಕೃಶಳಾಗಿದ್ದಾಳೆ. ಮನಸ್ಸಿನಲ್ಲಿ ಒಂದು ದೊಡ್ಡ ವ್ಯಸನವನ್ನು ಇಟ್ಟುಕೊಂಡಿರುವಂತೆ ಮುಖದಲ್ಲಿ ಸ್ಪಷ್ಟವಾಗುತ್ತಿದೆ. ಇಂತಹ ಅರ್ಧಾಂಗಿಯನ್ನು ಬಿಟ್ಟು ನನ್ನ ತಂದೆಯು ಹೇಗೆ ಜೀವಿಸಿರುವನೋ? ಅಂತಹ ಸುಂದರ ವಿಗ್ರಹವನ್ನುಬಿಟ್ಟು ಈ ದೇವಿಯು ಹೇಗೆ ಇರುವಳೋ? ನನಗೆ ಆಶ್ಚರ್ಯವಾಗುವುದು. ಈ ದಂಪತಿಗಳಿಬ್ಬರನ್ನೂ ಒಂದಾಗಿ ಸೇರಿಸಿ ಅವರ ಅಂಕಶಾಯಿನಿಯಾಗಿ ನಾನು ಯಾವಾಗ ಇರುವೆನೋ ಆಗ ನನ್ನ ಜನ್ಮವು ಸಾರ್ಥಕವಾಗುವುದು. ಆದರೆ,ಅವ ಹುತ್ತದಲ್ಲಿ ಅವ ಹಾವಿರುವುದೋ ಯಾರಿಗೆ ತಿಳಿಯುವುದು? ಒಂದು ವೇಳೆ ಜನಗಳಾಡುವ ಮಾತು ನಿಜವಾಗಿದ್ದು ಈ ದೇವಿಯು ದೋಷದಲ್ಲಿದ್ದರೆ ನನ್ನ ತಂದೆಗೂ ನನಗೂ ಅಧಃಪತನವೇ ಉಂಟಾಗುವುದು. ಛೀ! ಪಾಪಾತ್ಮರಿಗೇ ಅಧಃಪತನವಲ್ಲದೆ ನಮಗಲ್ಲ. ಪರೀಕ್ಷಿಸಿ ನೋಡದೆ ಹೆತ್ತ ತಾಯಿಯನ್ನು ನಿಂದಿಸುವುದು ತಪ್ಪು'' ಎಂದು ಇಂದಿರೆಯು ತನ್ನಲ್ಲಿ ತಾನೇ ಎಂದುಕೊಂಡಳು.

ರಾಣಿಯು ಪತ್ರಕ್ಕೆ ಉತ್ತರವನ್ನು ಬರೆದುಕೊಟ್ಟು ಈ ಹುಡುಗಿಯ ಕಡೆ ತಿರಿಗಿ ''ಅಮ್ಮಾ! ನೀನು ಯಾರು? ಯಾವ ದೇಶದಿಂದ ಬಂದಿರುವೆ?'' ಎಂದು ಕೇಳಿದಳು.

**ಇಂದಿರೆ—** ಅಮ್ಮಣ್ಣಿಯವರೆ! ನಾನು ಒಬ್ಬ ಕೃಷಿಕನ ಮಗಳು. ನನ್ನ ನಿವಾಸಸ್ಥಳವು ರತ್ನದ್ವೀಪವು.

**ಹೇಮಪ್ರಭಾದೇವಿ—** ರತ್ನದ್ವೀಪವು ಸಮುದ್ರದ ಕಳ್ಳರಿರುವ ಪ್ರದೇಶವೆಂದು ಕೇಳಿದ್ದೇನೆ. ಅಂತಹ ಸ್ಥಳದಲ್ಲಿ ನೀವು ಹೇಗೆ ಜೀವಿಸುವಿರಿ? ಅಲ್ಲಿ ಬರ್ಮಾದೇಶದವರು ವಾಸವಾಗಿದ್ದರೆಂದು ಕೇಳಿದ್ದೇನೆ. ನೀನು ನಮ್ಮ ಹಿಂದೂ ಸ್ತ್ರೀಯಂತೆಯೇ ಕಾಣುವೆಯಾದ ಕಾರಣ ನಿನ್ನ ಸಂಗತಿಯನ್ನು ಕೇಳಬಹುದೇ? ನಿನ್ನ ಬಂಧುಗಳಾರಾದರೂ ಇಲ್ಲಿ ಇದ್ದಾರೆಯೆ?

**ಇಂದಿರೆ—**ದೇವಿ! ಹಿರಿಯರು ಅದನ್ನು ನಿವಾಸಸ್ಥಾನವಾಗಿ ಏಕೆ ಮಾಡಿಕೊಂಡರೋ ನನಗೆ ತಿಳಿಯದು. ಆದರೆ, ಅಲ್ಲಿ ನಮಗೆ ದ್ರಾಕ್ಷಿ, ತೆಂಗು, ಹೂವು ಮುಂತಾದ ತೋಟಗಳಿರುವುವು. ನನ್ನ ತಂದೆಯು ಆ ಫಲಗಳನ್ನು ಇತರ ದೇಶಗಳಿಗೆ ರಫ್ತುಮಾಡುವನು. ಇದೇ ನಮ್ಮ ವೃತ್ತಿ.

**ಹೇಮಪ್ರಭಾದೇವಿ—** ಅಷ್ಟು ದೂರದೇಶದಿಂದ ಯೌವನವತಿಯಾದ ನೀನು ಹೇಗೆ ಪ್ರಯಾಣಮಾಡಿಕೊಂಡು ಬಂದೆ?

**ಇಂದಿರೆ—** ದೇವಿ! ಕೆಲವು ದಿನಗಳ ಹಿಂದೆ ನನ್ನ ತಂದೆಯು ತೀರ್ಥಯಾತ್ರೆಮಾಡಲು ಹೊರಟು ಕಾಳೀಘಟ್ಟಕ್ಕೆ ಬಂದನು. ಅಲ್ಲಿ ನನ್ನ ತಂದೆಗೆ

ಆಪ್ತ ಮಿತ್ರರಿದ್ದಾರೆ. ಅವರ ಸಹಾಯದಿಂದ ನಾನು ಇಲ್ಲಿಗೆ ಬಂದಿರುವೆನು. ದೈವಪ್ರೇರಣೆಯಿಂದ ಈ ಅಜ್ಜಿಯ ಆಶ್ರಯವು ನನಗೆ ದೊರೆಯಿತು. ತಮ್ಮ ಗುಣಾತಿಶಯವನ್ನು ಈಕೆಯಿಂದ ಕೇಳಿ ದರ್ಶನಕ್ಕಾಗಿ ಬಂದೆನು. ನನ್ನ ತಂದೆಯು ದೇಶಾಟನೆ ಮಾಡಿ ಬರುವವರೆಗೂ ತಮ್ಮ ಸನ್ನಿಧಿಯಲ್ಲಿಯೇ ಇರಬೇಕೆಂದು ನನ್ನ ಕೋರಿಕೆ.

**ಹೇಮಪ್ರಭಾದೇವಿ—** ಒಳ್ಳೆಯದು. ನೀನು ನನ್ನಲ್ಲಿರುವುದು ನನಗೂ ಸಮ್ಮತವೇ. ನಿನ್ನ ತಾಯಿತಂದೆಗಳೊಂದಿಗೆ ನೀನೇಕೆ ತೀರ್ಥಯಾತ್ರೆಗೆ ಹೋಗಲಿಲ್ಲ?

**ಇಂದಿರೆ—** ದೇವಿ! ನನಗೆ ತಾಯಿಯಿಲ್ಲ. ನನ್ನ ತಂದೆಯೊಬ್ಬನೇ ತೀರ್ಥಯಾತ್ರೆಗೆ ಹೋಗಿದ್ದಾನೆ.

**ಹೇಮಪ್ರಭಾದೇವಿ—** ಅಯ್ಯೋ! ನೀನು ತಾಯಿಯಿಲ್ಲದ ಮಗುವೇ? ನಿನ್ನ ತಾಯಿ ಪುಣ್ಯಾತ್ಮಳು. ತನ್ನ ಗಂಡನ ಕೈಯಿಂದ ಪೋಷಿತಳಾಗಿ ತನ್ನ ಮಗಳ ಕಣ್ಣೆದುರಿಗೆ ಸತ್ತಳು. ಮಗುವನ್ನೂ ಗಂಡನನ್ನೂ ಹೋಗಲಾಡಿಸಿಕೊಂಡು ಜೀವಿಸಿರುವ ಹೆಂಗಸು ಜೀವಚ್ಛವವಲ್ಲವೆ? ಮಗೂ! ನಿನ್ನ ಹೆಸರೇನು?

**ಇಂದಿರೆ—** ದೇವಿ! ನನ್ನ ಹೆಸರು ಇಂದಿರೆ.

**ಹೇಮಪ್ರಭಾದೇವಿ—** ನಿಜವಾಗಿಯೂ ನೀನು ಇಂದಿರೆಯಂತೆಯೇ ಇರುವೆ. ಅದು ನಿನಗೆ ಸಾರ್ಥಕವಾದ ಹೆಸರು. ನಿನಗೆ ಓದುವುದಕ್ಕೆ ಬರುವುದೊ?

**ಇಂದಿರೆ—** ಅಮ್ಮಾ! ಬರ್ಮಿ, ಪಾಲೀ, ಹಿಂದೀ ಮುಂತಾದ ಇನ್ನೂ ಅನೇಕ ಭಾಷೆಗಳ ಪರಿಚಯವಿರುತ್ತದೆ. ವೀಣೆಯನ್ನು ಬಾರಿಸುವೆನು. ಸ್ವಲ್ಪ ಹಾಡುವುದಕ್ಕೂ ತಿಳಿಯುವುದು.

**ಹೇಮಪ್ರಭಾದೇವಿ—** ಇಂದಿರೆ! ಬಹಳ ಸಂತೋಷವಾಯಿತು. ನಿನ್ನಂತಹ ವಿದ್ಯಾವತಿಯಾದ ಹುಡುಗಿಯು ನನ್ನ ಬಳಿಯಲ್ಲಿರಬೇಕಾದುದೇ. ನನ್ನ ಅಣ್ಣನ ಮಗಳೂ ನನ್ನಲ್ಲಿಯೇ ಇದ್ದಾಳೆ. ಅವಳೊಂದಿಗೆ ನೀನೂ ಸುಖವಾಗಿ ಇರು.

**ಇಂದಿರೆ—** ಅಪ್ಪಣೆ.

# ೯ನೆಯ ಅಧ್ಯಾಯ

ಮರುದಿನವೇ ಇಂದಿರೆಯು ರಾಣಿಯ ಅಂತಃಪುರವನ್ನು ಸೇರಿದಳು. ಹೇಮಪ್ರಭಾ ದೇವಿಯು ಇಂದಿರೆಯನ್ನು ತುಂಬ ಪ್ರೀತಿಸುತ್ತಿದ್ದಳು. ಇನ್ನು ಮೇಲೆ ತನಗೆ ಬರೆಯಬೇಕಾದ ಕಾಗದಗಳನ್ನು ಹೇಮಪ್ರಭಾ ದೇವಿಯ ಅಂತಃಪುರಕ್ಕೆ ಬರೆಯಬೇಕೆಂತಲೂ, ತನಗೂ ಆ ರಾಣಿಗೂ ನಡೆದ ಸಂಭಾಷಣೆಗಳನ್ನು ಸವಿಸ್ತಾರವಾಗಿ ವರ್ಣಿಸುತ್ತಲೂ ಇಂದಿರೆಯು ತನ್ನ ತಂದೆಗೆ ಒಂದು ಪತ್ರವನ್ನು ಬರೆದಳು.

ರಾಣಿಯು ಇಂದಿರೆಯನ್ನು ಪುನಃಪುನಃ ದೃಷ್ಟಿಸಿ ನೋಡುತ್ತ "ಇವಳ ಮುಂಗುರುಳಿನ ಕಾಂತಿಯೂ, ಅಂದವಾದ ಮಂದಹಾಸದಿಂದೊಪ್ಪುವ ಮುಖವೂ ಎಷ್ಟು ಮನೋಹರವಾಗಿರುವುವು! ಇವಳ ಕಣ್ಣುಗಳು ನನ್ನ ಮನೋನಾಯಕನ ಕಣ್ಣುಗಳಂತಿರುವುವು. ಬ್ರಹ್ಮನ ಸೃಷ್ಟಿವೈಚಿತ್ರ್ಯವನ್ನು ಏನೆಂದು ವರ್ಣಿಸಬಹುದು? ಇವಳಿಗೆ ನನ್ನಲ್ಲಿ ಎಷ್ಟು ಭಕ್ತಿ! ಎಷ್ಟು ವಿನಯ! ನನಗೆ ಏನು ಕೆಲಸ ಮಾಡಿದರೂ ತನ್ನ ಸ್ವಂತದವಳೆಂದು ಭಾವಿಸಿ ಮಾಡುತ್ತಾಳೆ. ಹಾ! ನನಗೆ ಪ್ರಾಣಾಧಾರವಾಗಿದ್ದ ಚಂಪಕಮಾಲಿನಿ! ನಿನ್ನನ್ನು ಬಿಟ್ಟು ನಾನು ಇನ್ನೂ ಜೀವಿಸಿರುವೆನು. ನನ್ನ ಅಪರಾಧವನ್ನು ಮನ್ನಿಸು. ನೀನು ಸ್ವರ್ಗಸ್ಥಳಾದರೂ, ನಾನು ಈ ಜನ್ಮದಲ್ಲಿ ನಿನಗೆ ಹೆತ್ತ ತಾಯಿಯಲ್ಲವೆ? ನನ್ನನ್ನು ಹೀಗೆ ಅನಾಥಳನ್ನಾಗಿ ಮಾಡಿ ಹೋದೆಯಾ? ನಾನು ಈ ವಿಧವಾಗಿ ಇನ್ನೂ ಎಷ್ಟು ಕಾಲ ಜೀವಿಸಿರಬೇಕೊ ತಿಳಿಯದು. ನನ್ನ ಮುದ್ದಿನ ಮಗಳು ಜೀವಿಸಿದ್ದರೆ ಈ ಇಂದಿರೆಯ ವಯಸ್ಸೇ ಆಗುತ್ತಿದ್ದಿತು. ಇಂದಿರೆಯ ರೂಪವೆಲ್ಲವೂ ಅವಳ ರೂಪವೇ. ದೇಹಕಾಂತಿಯು ಮಾತ್ರ ಬೇರೆ. ಇವಳು ಕಪ್ಪು. ಆದರೇನು, ನನ್ನ ಪ್ರೀತಿಯನ್ನು ಸೂರೆಗೊಂಡಿರುವಳು. ಇವಳು ಕೂಡ ನನ್ನನ್ನು ಹಾಗೆಯೇ ಪ್ರೇಮಿಸುತ್ತಿರುವಳು. ಇದಕ್ಕೇನೂ ಸಂಶಯವಿಲ್ಲ" ಎಂದು ಬಹು ವಿಧವಾಗಿ ಆಲೋಚಿಸಿದಳು.

ಇಂದಿರೆಯು, ಬಾಚಣಿಗೆ ಎಣ್ಣೆಗಳನ್ನು ಹೇಮಪ್ರಭಾದೇವಿಯ ಸಮೀಪದಲ್ಲಿಟ್ಟು ಅಮ್ಮಾ! ಎಂದು ಕರೆದಳು. ಹೇಮಪ್ರಭಾದೇವಿಯು ತಿರುಗಿನೋಡಿ "ಇಂದಿರೆ! ಇದೇನು?" ಎಂದಳು.

**ಇಂದಿರೆ—** ದೇವಿ! ವನಭೋಜನಕ್ಕೆ ಹೋಗುವುದಾಗಿ ತಾವು ಹೇಳಿದಿರಂತೆ. ಹೊತ್ತಾಗುವುದಾದ ಕಾರಣ ತಮಗೆ ತಲೆ ಬಾಚಲು ಬಂದಿದ್ದೇನೆ.

**ಹೇಮಪ್ರಭಾದೇವಿ—** ಇಂದಿರೆ! ನಾನು, ಎಣ್ಣೆ ಹಚ್ಚಿ ತಲೆ ಬಾಚಿ

ಕೊಳ್ಳುವ ಪದ್ಧತಿಯಿಲ್ಲ. ನನ್ನ ಸಂಗಡ ನೀನೂ ಬರಬೇಕು. ಇಲ್ಲಿ ಬಾ! ನಾನು ನಿನಗೆ ತಲೆ ಬಾಚುವೆನು.

**ಇಂದಿರೆ—** ಅಮ್ಮಾ! ಎಂತಹ ಮಾತನಾಡಿದಿರಿ! ನಾನು ನಿಮ್ಮ ಸೇವಕಳಲ್ಲವೆ? ಮಹಾರಾಣಿಯಾಗಿದ್ದು ತಾವು ಹೀಗೆ ಅಪ್ಪಣೆ ಕೊಡಿಸಬಹುದೇ?

**ಹೇಮಪ್ರಭಾದೇವಿ—** ಬಾಲೆ! ಚಿಕ್ಕವರು, ದೊಡ್ಡವರು ಎಂಬ ಪದಗಳನ್ನು ಮಾಯಾಪ್ರಪಂಚದಲ್ಲಿ ಕಲ್ಪಿಸಿ ಅಂತಸ್ತುಗಳನ್ನು ಅನುಸರಿಸಿ ಉಪಯೋಗಿಸುವರೇ ಹೊರತು ಅವು ನಿಜವಾದುವುಗಳಲ್ಲ. ಮನಶ್ಶಾಂತಿಯೊಂದಿದ್ದರೆ ನಾನು ಸೇವಕಳಾಗಿಯೇ ಸುಖವಾಗಿ ಜೀವಿಸುವೆನು. ಅದು ಹಾಗಿರಲಿ! ನಿನ್ನನ್ನು ಆಲಿಂಗನೆ ಮಾಡಿಕೊಳ್ಳಬೇಕೆಂದು ನನ್ನ ಮನಸ್ಸು ಕಳವಳ ಪಡುತ್ತಿರುವುದು. ದೇಹಕಾಂತಿಯ ಹೊರತು ನೀನು ಎಲ್ಲಾ ವಿಷಯಗಳಲ್ಲಿಯೂ ನನ್ನ ಮಗಳು ಚಂಪಕಮಾಲಿನಿಯಂತೆಯೇ ಇರುವೆ. ಅಯ್ಯೋ! ನಾನೇನು ಮಾಡಲಿ!" ಎಂದು ಕಣ್ಣೀರು ಸುರಿಸುತ್ತ ಆ ಬಾಲೆಯನ್ನು ಗಾಢಾಲಿಂಗನೆ ಮಾಡಿಕೊಂಡು ಮುತ್ತಿಟ್ಟಳು.

**ಇಂದಿರೆ—** ಅಮ್ಮಾ! ನೀವು ಏಕೆ ಹೀಗೆ ದುಃಖಪಡುವಿರಿ? ಕರ್ಮವನ್ನು ಯಾರು ತಾನೇ ದಾಟಬಲ್ಲರು? ದುಃಖಿತರಾದವರಿಗೆ ಸುಖವು ಬಂದೇ ಬರುವುದು. ತಾಯೇ! ಎಲ್ಲಾ ಸಂಗತಿಗಳನ್ನೂ ತಿಳಿದ ತಮಗೆ ಬಾಲೆಯಾದ ನಾನು ಏನು ಹೇಳಬಲ್ಲೆನು? ಧೈರ್ಯವನ್ನು ತಾಳಿರಿ.

**ಹೇಮಪ್ರಭಾದೇವಿ—** 'ಇಂದಿರೆ! ನಾನು ಧೈರ್ಯವನ್ನು ವಹಿಸದಿದ್ದರೆ ಯಾವಾಗಲೋ ಮರಣವನ್ನುಹೊಂದುತ್ತಿದ್ದೆನು. ದೈವವೇ ನನಗೆ ಗತಿ'—ಎಂದು ಹೇಳುತ್ತಾ ಕೂದಲನ್ನು ಬಿಚ್ಚಿಕೊಂಡಳು. ಇಂದಿರೆಯು ಸಮೀಪಕ್ಕೆ ಹೋಗಿ ಅವಳ ಕೂದಲನ್ನು ಬಹು ಜಾಣತನದಿಂದ ಸಿಕ್ಕು ಬಿಡಿಸಿದಳು! "ಇಂದಿರೆ! ನೀನು ಏನು ಕೆಲಸ ಮಾಡಿದರೂ ಎಷ್ಟು ನಯವಾಗಿ ಮಾಡುವೆ! ಇನ್ನು ಸಾಕು" ಎಂದು ತಲೆಗೂದಲನ್ನು ಮುಡಿಹಾಕಿ ಕೊಂಡಳು. "ಯಥಾಪ್ರಸಿದ್ಧೈರ್ಮಧುರಂ ಶಿರೋರುಹೈಃ। ಜಟಾಭಿರಪ್ಯೇವ ಮಭೂತ್ತದಾನನಂ॥" ಎಂದು ಕಾಳಿದಾಸನು ವರ್ಣಿಸಿರುವ ಮೇರೆಗೆ ರಾಣಿಯು ಆ ವಿಧವಾಗಿ ಕೂದಲನ್ನು ಕಟ್ಟಿಕೊಂಡುದುದೂ ಆ ಮುಖಕ್ಕೆ ನೂತನ ಸೌಂದರ್ಯವನ್ನು ಉಂಟುಮಾಡಿತು. ಇಂದಿರೆಯು ಕೂಡ ತಲೆ ಬಾಚಿ ಕೊಂಡು ಮುಡಿ ಹಾಕಿಕೊಂಡಳು. ಮುಖದಲ್ಲಿ ಕುಂಕುಮದ ಬೊಟ್ಟನ್ನು ಇಟ್ಟುಕೊಂಡು ರಾಣಿಯ ಇದಿರಿಗೆ ನಿಂತಳು. ಇಂದಿರೆಯನ್ನು ನೋಡಿ ರಾಣಿಯು "ನೀನು ಉಟ್ಟಿರುವ ಸೀರೆಯು ನಿನ್ನ ಅಂದಕ್ಕೆ ತಕ್ಕುದಲ್ಲ. ಲೆಕ್ಕ

ವಿಲ್ಲದಷ್ಟು ಸೀರೆಗಳು ಮನೆಯಲ್ಲಿರುವುವು. ಅವುಗಳಲ್ಲಿ ಒಂದನ್ನು ಆರಿಸಿಕೊಂಡು ಉಟ್ಟುಕೊಂಡು ಬಾ. ನಾನು ನೋಡಬೇಕೆಂದು ಅಪೇಕ್ಷಿಸುವೆನು" ಎಂದಳು.

**ಇಂದಿರೆ**— ದೇವಿ! ಹೆತ್ತ ತಾಯಿಯ ಹಾಗೆ ನನ್ನನ್ನು ಕಾಪಾಡುತ್ತಿರುವಿರಿ. ನಿಮ್ಮ ಮಾತಿಗೆ ಪ್ರತ್ಯುತ್ತರ ಕೊಡಲಾರೆನು. ಆದರೆ, ನನ್ನ ತಂದೆಯು ದೇಶಾಂತರದಿಂದ ಬರುವವರೆಗೂ ಬೆಲೆಯುಳ್ಳ ಸೀರೆಗಳನ್ನು ಉಟ್ಟುಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವೆನು. ದಯೆಮಾಡಿ ಕ್ಷಮಿಸಬೇಕು.

**ಹೇಮಪ್ರಭಾದೇವಿ**— ಬಾಲೆ! ಇಷ್ಟು ಪಿತೃಭಕ್ತಿಯುಳ್ಳ ಮಗಳನ್ನು ಹೆತ್ತ ತಂದೆಯು ಎಷ್ಟು ಧನ್ಯನು! ನಿನ್ನ ಇಷ್ಟದಂತೆ ಮಾಡು.

ಹೇಮಪ್ರಭಾದೇವಿಯು ಮುಖಪ್ರಕ್ಷಾಳನಾದಿಗಳನ್ನು ಮಾಡಿಕೊಂಡು ಹೊರಟುಹೋದಳು. ಇಂದಿರೆಯ ಸಮೀಪದಲ್ಲಿ ವಿಲೋಚನೆಯು ನಿಂತಿದ್ದಳು.

**ಇಂದಿರೆ**— ವಿಲೋಚನೆ! ಈ ದಿನ ವನಭೋಜನವು ಎಲ್ಲಿ ನಡೆಯುವುದು? ಅದನ್ನು ಏರ್ಪಡಿಸಿದವರಾರು? ವಿಮಲಾದೇವಿಯೂ ಹೋಗುವಳೇ?

**ವಿಲೋಚನೆ**— ಇಂದಿರೆ! ನೀನೆಷ್ಟು ಮುಗ್ಧಳು. ಮಹಾರಾಜನಾದ ಮದನಪಾಲನು ಇದನ್ನು ಏರ್ಪಡಿಸಿರುವನು. ಅಲ್ಲಿಗೆ ಸಾಮಂತರಾಜರೂ, ರಾಜಪತ್ನಿಯರೂ, ರಾಜಬಂಧುಗಳೂ ಇನ್ನೂ ಎಷ್ಟೋ ಜನರು ಬರುತ್ತಾರೆ. ಹೇಮಪ್ರಭಾದೇವಿಯವರು ಹೋಗದಿದ್ದರೆ ಆ ಸಂಭ್ರಮವೆಲ್ಲವೂ ವ್ಯರ್ಥವಾಗುವುದು. ಈಕೆಯು ವಿಮಲಾದೇವಿಯನ್ನು ಮುಂದಿಟ್ಟುಕೊಂಡು ತಾನು ಮಾತ್ರ ಹೋಗುತ್ತಾಳೆ. ಈ ವಿಧವಾಗಿ ಮಹಾರಾಜನಿಗೂ, ನಮ್ಮ ರಾಣಿಗೂ ಸ್ನೇಹವು ವೃದ್ಧಿಯಾಗುತ್ತಿದೆ. ರಾಜನು ವಿಮಲಾದೇವಿಯನ್ನೇ ಮದುವೆಯಾಗುವನೋ ಅಥವಾ ನಮ್ಮ ರಾಣಿಯನ್ನೇ ಪುನರ್ವಿವಾಹ ಮಾಡಿಕೊಳ್ಳುವನೋ ಯಾರು ಬಲ್ಲರು? ನನಗೇನೋ ದೇವಿಯನ್ನೇ ಮಾಡಿಕೊಳ್ಳುವನೆಂದು ತೋರುತ್ತಿದೆ. ಹೇಗಾಗುವುದೋ ನೋಡಬೇಕು.

ಇಂದಿರೆಯ ಕಣ್ಣುಗಳು ಕೆಂಪೇರಿದುವು. ಏನು ಮಾಡುವುದಕ್ಕೂ ತೋರಲಿಲ್ಲ. 'ವಿಲೋಚನೆ ಹೇಳುವುದು ನಿಜವಲ್ಲವೆ? ಏತಕ್ಕಾಗಿ ಈಗ ವನಭೋಜನಕ್ಕೆ ಹೋಗಬೇಕು? ಹೀಗೆ ಮಾಡುವುದರಿಂದಲ್ಲವೇ ಅರಸನಿಗೆ ಅವಕಾಶ ದೊರೆಯುವುದು? ಆಗಲಿ! ಅವಸರ ಪಡುವುದೇಕೆ? ಯಥಾರ್ಥವು ತಾನಾಗಿಯೇ ಹೊರಪಡುವುದು'– ಎಂದು ಮನಸ್ಸಿನಲ್ಲಿ ಹೇಳಿಕೊಂಡಳು.

ಬಾಣನದೀತೀರದಲ್ಲಿ ಸಾಲಾಗಿ ಬಾವುಟಗಳು ಕಟ್ಟಲ್ಪಟ್ಟಿದ್ದುವು. ಮಂದಮಾರುತದಿಂದ ಚಲಿಸುತ್ತಾ ಬರುವವರಿಗೆ ಸ್ವಾಗತವನ್ನು ಕೊಡುತ್ತಿದ್ದುವು.

ಒಂದು ಸ್ಥಳದಲ್ಲಿ ರಾಜಸ್ತ್ರೀಯರು ವಿಹರಿಸುವುದಕ್ಕೆ ತಕ್ಕ ವ್ಯವಸ್ಥೆಗಳಿದ್ದುವು. ಮತ್ತೊಂದು ಸ್ಥಳದಲ್ಲಿ ಚತುರಂಗವನ್ನಾಡುವ ಸಾಮಾನುಗಳಿದ್ದುವು. ಇನ್ನೊಂದು ಸ್ಥಳದಲ್ಲಿ ಅರಸರಿಗೆ ಉಚಿತವಾದ ಆಸನಗಳು ಹಾಕಲ್ಪಟ್ಟಿದ್ದುವು. ಮತ್ತೊಂದು ಕಡೆ ಅಡಿಗೆಯು ಸಿದ್ಧವಾಗುತ್ತಿದ್ದಿತು. ಲೆಕ್ಕವಿಲ್ಲದ ದಾಸೀಜನರು ಏನು ಮಾಡುವುದಕ್ಕೂ ಕೆಲಸವಿಲ್ಲದೆ ಅಲಂಕೃತರಾಗಿ ಸುಮ್ಮನೆ ಅತ್ತಿತ್ತ ತಿರುಗುತ್ತಿದ್ದರು. ಸೇವಕರು ತಮ್ಮ ತಮ್ಮ ತರಗತಿಯಂತೆ ನಡುವಿನಲ್ಲಿ ಒರೆಗಳ ಸಮೇತವಾಗಿರುವ ಕತ್ತಿಗಳನ್ನು ಕಟ್ಟಿಕೊಂಡು ಸಂಭ್ರಮದಿಂದ ಓಡಾಡುತ್ತಿದ್ದರು. ಸ್ವಲ್ಪ ಹೊತ್ತಿಗೆಲ್ಲ, ಮೇನೆಗಳೂ, ರಥಗಳೂ ಬರಲು ಉಪಕ್ರಮಿಸಿದುವು. ಒಂದು ಗಂಟೆಯೊಳಗಾಗಿ ಆ ವನರಾಜಿಯೆಲ್ಲವೂ ಸ್ವರ್ಣಕಲಶಗಳಿಂದ ಅಲಂಕೃತಗಳಾದ ರಥಗಳಿಂದಲೂ, ಪಲ್ಲಕ್ಕಿಗಳಿಂದಲೂ ತುಂಬಿ ಪ್ರಕಾಶಿಸುತ್ತಿದ್ದಿತು. ಮಹಾರಾಜನು ಮುಂಚೆಯೇ ಬಂದು ಅಲ್ಲಿ ನಿಂತು, ಬರುವ ಅತಿಥಿಗಳಿಗೆ ಸ್ವಾಗತವನ್ನೀಯುತ್ತಿದ್ದನು. ಅವನು ಪ್ರದರ್ಶಿಸುತ್ತಿದ್ದ ನಿರಹಂಕಾರ ವಿನಯದಿಂದಲೂ, ಪ್ರಜೆಗಳ ಮೇಲೆ ತೋರಿಸುತ್ತಿದ್ದ ಪ್ರೀತಿಯಿಂದಲೂ ಅತಿಥಿಗಳೆಲ್ಲರೂ ಆನಂದಭರಿತರಾಗಿದ್ದರು. ಅರಸನು ಇದ್ದ ಸ್ಥಳದಲ್ಲಿಯೇ ಯಾರೋ ಒಬ್ಬರನ್ನು ಇದಿರು ನೋಡುತ್ತಿದ್ದನು. ಅರಸನ ಆಜ್ಞೆಯಂತೆ ಫಲ್ಗುನನು ಬೆಲೆಯುಳ್ಳ ವಸ್ತ್ರಗಳನ್ನು ಧರಿಸಿ ಬಾಗಿಲ ಹೊರಗೆ ನಿಂತಿದ್ದನು. ಅವನು ರಾಜನಿಗೆ ತುಂಬ ಅಂತರಂಗದ ಸೇವಕನೆಂದು ಆ ರಾಜ್ಯದವರಿಗೆಲ್ಲ ತಿಳಿಯುವುದು. ಯಾವ ಸಮಯದಲ್ಲಿ ತಮ್ಮ ಮೇಲೆ ಏನು ದೂರು ಹೇಳುವನೋ ಎಂದು ಸಾಮಂತ ರಾಜರೆಲ್ಲರೂ ಅವನನ್ನು ಕಂಡು ಭಯಪಡುತ್ತಿದ್ದರು. ಇಷ್ಟರಲ್ಲಿಯೇ ಇಬ್ಬರು ಕುದುರೆ ಸವಾರರು ಬಂದು ನಿಂತು ರಾಜನಿಗೆ ಅಭಿವಂದಿಸಿದರು. ಅವರು ಧರಿಸಿದ್ದ ವಸ್ತ್ರಗಳನ್ನೂ, ಬಿರುದುಗಳನ್ನೂ, ಚಿಹ್ನೆಗಳನ್ನೂ ನೋಡಿದರೆ ಗ್ವಾಲಿಯಾರ ದೇಶದ ಯೋಧರಾಗಿದ್ದರು. ಹೇಮಪ್ರಭಾದೇವಿಯು ಅವಳ ಅತ್ತೆಯ ಮನೆಗೆ ಬಂದಾಗ ಇವಳ ತಂದೆಯು ಅಂಗಸಂರಕ್ಷಣಾರ್ಥವಾಗಿಕೊಟ್ಟ ಸಿಬ್ಬಂದಿಯಾಗಿದ್ದಿತು. ಅವಳು ಹೊರಗೆ ಹೊರಟಾಗ ಈ ಅಂಗರಕ್ಷಕರು ಮುಂದೆ ಹೋಗುವ ಪದ್ಧತಿಯಿದ್ದಿತು. ಆ ಕುದುರೆಗಳನ್ನು ನೋಡುತ್ತಲೇ ಹೇಮಪ್ರಭಾದೇವಿಯು ಬರುತ್ತಿರುವಳೆಂದು ಎಲ್ಲರೂ ತಿಳಿದುಕೊಂಡರು. ಕೂಡಲೇ ಸ್ವರ್ಣಕಲಶಗಳಿಂದ ಅಲಂಕೃತವಾಗಿ ಎರಡು ಅರಬ್ಬಿಯ ಕುದುರೆಗಳನ್ನು ಕಟ್ಟಿದ್ದ ಒಂದು ಬಂಡಿಯು ಬಂದಿತು. ಅದು ನಿಂತ ಕೂಡಲೇ ಅರಸನು ಅದರ ಸಮೀಪಕ್ಕೆ ಹೋಗಿ ಬಾಗಿಲು ತೆರೆದನು. ವಿಮಲೆಯು ಮೊದಲು ಇಳಿದಳು. ಮದನಪಾಲನು ಇದುವರೆಗೆ ವಿಮಲೆಯನ್ನು ನೋಡಿರಲಿಲ್ಲ. ಈಗ ನೋಡಿದ

ಕೂಡಲೆ,ಆಹಾ! ಇವಳು ಎಂತಹ ಸುಂದರಿ!ಸೋದರತ್ತೆಯನ್ನೇ ಹೋಲಿರುವಳು. ದರ್ಶನಮಾತ್ರದಿಂದ ಮನವನ್ನಾಕರ್ಷಿಸಿಕೊಳ್ಳುವಳು.'' ಎಂದೆಂದುಕೊಂಡನು. ಅರಸನು ಹೀಗೆ ಆಲೋಚಿಸುವುದರೊಳಗಾಗಿ ಇಂದಿರೆಯು ಇಳಿದಳು. ''ಇದೇ ನಾಶ್ಚರ್ಯ! ಕಪ್ಪಿನಲ್ಲಿಯೂ ಇಂತಹ ಸೌಂದರ್ಯವೇ? ಇವಳು ರಾಜ ಗೃಹದಲ್ಲಿ ಹುಟ್ಟತಕ್ಕವಳಾಗಿರುವಳು. ಸಾಮಾನ್ಯ ಸ್ತ್ರೀಯಲ್ಲ. ಹೇಮಪ್ರಭಾ ದೇವಿಯ ಅಂತಃಪುರಕ್ಕೆ ಒಬ್ಬ ದಾಸಿಯು ಹೊಸದಾಗಿ ಬಂದಿರುವಳೆಂದು ಕೇಳಿ ದೆನು. ಇವಳೇ ಅವಳಾಗಿರಬಹುದು'' ಎಂದು ಮದನಪಾಲನು ಆಲೋಚಿಸುತ್ತಿ ರುವಲ್ಲಿ ಇಂದಿರೆಯು ಕೈಚಾಚಲು ಅದನ್ನು ಹಿಡಿದುಕೊಂಡು ರಾಣಿಯು ಗಾಡಿ ಯಿಂದ ಇಳಿದಳು. ಅರಸನು ಸಂಭ್ರಮದಿಂದ ''ದೇವೀ! ನನ್ನನ್ನು ವಿಮುಖ ನನ್ನಾಗಿ ಮಾಡದೆ ಬಂದುದಕ್ಕೆ ತುಂಬ ಖುಷಿಯಾಗಿರುವೆನು.'' ಎಂದು ಹೇಳಿ ವಿಮಲೆಯ ಕಡೆ ತಿರುಗಿದನು. ಅವಳು ನಾಚಿಕೆಯಿಂದ ತಲೆಯನ್ನು ಬಗ್ಗಿಸಿ ದಳು. ''ವಿಮಲೆ! ನಿನಗೆ ಸ್ವಾಗತವಾಗಲಿ. ನೀನು ಇಲ್ಲಿಗೆ ಬಂದುದು ಬಹಳ ಸಂತೋಷ'' ಎಂದನು. ವಿಮಲೆಯು ಮುಗ್ಧಳು. ಶಾಂತಸ್ವಭಾವದವಳು. ನಾಚಿಕೆಯಿಂದ ಏನೊಂದೂ ಉತ್ತರವನ್ನು ಕೊಡದೆ ಮುಂದಕ್ಕೆ ನಡೆದಳು. ತರುವಾಯ ಅರಸನ ದೃಷ್ಟಿಯು ಇಂದಿರೆಯ ಕಡೆ ತಿರುಗಿತು. ಹೇಮಪ್ರಭಾ ದೇವಿಯು ಅದನ್ನು ಗ್ರಹಿಸಿ, ''ರಾಜೇಂದ್ರಾ! ಈ ಹುಡುಗಿಯು ನನ್ನ ಸಖಿ. ಇವಳು ಬರ್ವಾಪ್ರಾಂತ್ಯದಿಂದ ಬಂದಿರುವಳು. ಇವಳ ತಂದೆತಾಯಿಗಳು ತೀರ್ಥಯಾತ್ರೆ ಮಾಡಲು ಹೋಗಿರುವರಂತೆ. ತಾವು ಬರುವವರೆಗೂ ನನ್ನ ಹೂವಿನ ಮುದುಕಿಯ ಮನೆಯಲ್ಲಿ ಬಿಟ್ಟು ಹೋದರಂತೆ. ಅದುವರೆಗೆ ಈ ಹುಡುಗಿಯನ್ನು ನನ್ನ ಆಶ್ರಯದಲ್ಲಿ ಇಟ್ಟುಕೊಂಡಿರುತ್ತೇನೆ'' ಎಂದಳು.

ಮದನಪಾಲನು ಆ ಮಾತನ್ನು ನಂಬಿದನು. 'ದೇವಿ! ಅಂತಃಪುರದ ಸ್ತ್ರೀಯರಿಗೆ ಮಾತ್ರವೇ ಹೆಚ್ಚಿನ ಸೌಂದರ್ಯವಿರುವುದೆಂದು ಹೇಳುವ ಮಾತು ಭ್ರಾಂತಿಯಲ್ಲವೆ?' ಎಂದು ನುಡಿಯುತ್ತ ರಾಜಸ್ತ್ರೀಯರು ಇರುವ ಸ್ಥಳಕ್ಕೆ ಅವರನ್ನು ಕಳುಹಿಸಿ ತಾನು ತನ್ನ ಸ್ಥಳಕ್ಕೆ ಹೋದನು. ಅಲ್ಲಿನ ರಾಜಸ್ತ್ರೀಯರೆ ಲ್ಲರೂ ಹೇಮಪ್ರಭಾದೇವಿಯನ್ನು ವಿಶೇಷವಾಗಿ ಗೌರವಿಸಿದರು. ಆ ಉದ್ಯಾನ ವನದಲ್ಲಿ ಅನೇಕ ವಿಧವಾದ ವಿನೋದಗಳು ನಡೆಯುತ್ತಿದ್ದುವು. ಆ ಸಮಯದಲ್ಲಿ ಇಂದಿರೆಯು ವೀಣೆಯನ್ನು ಬಾರಿಸುತ್ತಲೂ, ಹಾಡುತ್ತಲೂ ಅಲ್ಲಿ ನೆರೆದಿದ್ದ ಸ್ತ್ರೀ ಪುರುಷರ ಮನಸ್ಸುಗಳನ್ನು ಆನಂದಾಬ್ಧಿಯಲ್ಲಿ ಮುಳುಗಿಸಿದಳು. ಫಲ್ಗುಣನ ದೃಷ್ಟಿಯು ಮಾತ್ರ ಅವನು ಎಷ್ಟು ಕೆಲಸಗಳನ್ನು ಮಾಡುತ್ತಿದ್ದರೂ ಇಂದಿರೆಯ ಮೇಲೆಯೇ ಇದ್ದಿತು. ಒಳ್ಳೆಯ ಸಂದರ್ಭ ಸಿಕ್ಕಿದುದರಿಂದ ಇಂದಿರೆ

ಯು ಅರಸನ ಮುಖಲಕ್ಷಣಗಳನ್ನೂ, ಫಲ್ಗುನನ ಮುಖಲಕ್ಷಣಗಳನ್ನೂ ಜಾಗರೂಕತೆಯಿಂದ ಗಮನಿಸುತ್ತಿದ್ದಳು. ತನ್ನ ತಾಯಿಗೆ ಅಲ್ಲಿ ನಡೆದ ಮರ್ಯಾದೆಯನ್ನೂ ನೋಡಿದಳು. ಒಂದೂ ತಿಳಿಯದವಳಂತೆ ನಟಿಸುತ್ತಿದ್ದಳು. ಅಲ್ಲಿ ಕೆಲವರು ರಾಜಸ್ತ್ರೀಯರು "ಹೇಮಪ್ರಭಾದೇವಿಯ ನಡತೆಯು ಸರಿಯಾಗಿಲ್ಲ"ವೆಂದು ಹೇಳಿಕೊಂಡರು. ಆತ್ಮಹತ್ಯೆಗಿಂತಲೂ ಆಕೆಗೆ ಮತ್ತಾವ ಉಪಾಯವೂ ಇಲ್ಲ. ಆದರೆ, ಆತ್ಮಹತ್ಯೆಯು ಭಗವನ್ನಿಯಮಕ್ಕೆ ವಿರೋಧವಾದ ಕೆಲಸ. ಆಕೆಗೆ ಅಷ್ಟೈಶ್ವರ್ಯವಿರುತ್ತದೆ. ಯೌವನವತಿ. ರೂಪವತಿ. ಶಾಸ್ತ್ರಸಮ್ಮತವಾಗಿರುವಲ್ಲಿ ಏಕೆ ಪುನರ್ವಿವಾಹ ಮಾಡಿಕೊಳ್ಳಬಾರದು?" ಎಂದು ಕೆಲವರು ದೂರಿದರು. "ನೀವು ಎಷ್ಟು ಹುಚ್ಚರು! ಆಕೆಯನ್ನು ನೋಡಿದ ಕೂಡಲೇ ಮಹಾ ಪತಿವ್ರತೆಯೆಂದು ಸ್ಫುರಿಸುವುದಿಲ್ಲವೆ? ನೀವು ಹೇಳುವಂತೆ ಆಕೆಯು ಎಂದಿಗೂ ಪುನರ್ವಿವಾಹ ಮಾಡಿಕೊಳ್ಳಲಾರಳು. ಮುಂದೆ ಏನು ನಡೆಯುವುದೋ ನೋಡೋಣ. ತಿಳಿಯದ ಮಾತನ್ನು ಆಡುವುದು ತಪ್ಪಲ್ಲವೇ?" ಎಂದು ಕೆಲವರು ನಿಂದಕರನ್ನು ಹೀಯಾಳಿಸಿದರು. ಇವೆಲ್ಲವನ್ನೂ ಇಂದಿರೆಯು ಕೇಳುತ್ತಿದ್ದಳು. ಭೋಜನಾದಿಗಳು ಮುಗಿದ ಬಳಿಕ ಅತಿಥಿಗಳು ತಮ್ಮ ತಮ್ಮ ನಿವೇಶಗಳಿಗೆ ಹೊರಟುಹೋದರು. ಹೇಮಪ್ರಭಾದೇವಿಯು ಹೊರಡಲು ರಾಜನ ಅಪ್ಪಣೆಯನ್ನು ಬೇಡಿದಳು.

**ಮದನಪಾಲ** – ದೇವಿ! ಈ ದಿನ ಮನ್ನಿಸು. ಸ್ವಲ್ಪ ಹೊತ್ತು ನನ್ನಲ್ಲಿಯೇ ಇದ್ದು ನೀನು ಹೋಗಬೇಕೆಂದು ನನ್ನ ಕೋರಿಕೆ. ಹದಿನಾರು ವರ್ಷಗಳಿಂದಲೂ ನನ್ನ ಹೃದಯ ಗುಹೆಯಲ್ಲಿ ಅಡಗಿರುವ ಕೋರಿಕೆಯನ್ನು ನಿನಗೆ ಈಗ ತಿಳಿಸಲು ನಿಶ್ಚಯಿಸಿದ್ದೇನೆ.

ಈ ಮಾತು ಕೇಳಿದ ಕೂಡಲೇ ಹೇಮಪ್ರಭಾದೇವಿಯ ಹೃದಯವು ಹೊಡೆದುಕೊಳ್ಳಲಾರಂಭಿಸಿತು. ಅವನ ಮನಸ್ಸು ರಾಣಿಗೆ ತಿಳಿದಿದ್ದಿತು. ದೈವವು ಒಂದು ಹೊರತು ಮತ್ತಾರೂ ತನಗೆ ಆಧಾರವಿಲ್ಲವೆಂದು ತಿಳಿದುಕೊಂಡಿರುವಳು. ಸ್ವಭಾವತಃ ಮದನಪಾಲನು ಸಾಧುವು. ಕ್ಷಮೆಯುಳ್ಳವನು. ಈ ಗುಣಗಳನ್ನು ಆಶ್ರಯಿಸಿ ಹೇಮಪ್ರಭಾದೇವಿಯು ಅಲ್ಲಿಯವರೆಗೂ ಕ್ಷತ್ರಿಯಕುಲೋಚಿತವಾದ ಸಾಮ, ದಾನ, ಭೇದೋಪಾಯಗಳನ್ನು ಪ್ರಯೋಗಿಸುತ್ತಾ ಕಾಲವನ್ನು ಕಳೆಯುತ್ತಿದ್ದಳು. ಈಗ ಮುರಳಾದೇವಿಯ ಮತ್ತು ಫಲ್ಗುನನ ಪ್ರೋತ್ಸಾಹದಿಂದ ಈ ಕಾರ್ಯವನ್ನು ಸಾಧಿಸಬೇಕೆಂದು ಅವನು ಮುಷ್ಕರ ಹಿಡಿದಿರುವನು. ಆವನಿಗೆ ಹೇಮಪ್ರಭಾದೇವಿಯನ್ನು ಮದುವೆಯಾಗುವುದು ಹೊರತು ಮತ್ತಾವುದೂ ಹತ್ತುವುದಿಲ್ಲ. ಹೇಗಾದರೂ ಮಾಡಿ ಅದನ್ನು ಸಾಧಿಸ

ಬೇಕೆಂದಿರುವನು. ಆದರೆ, ಹೇಮಪ್ರಭಾದೇವಿಯನ್ನು ಬಲಾತ್ಕರಿಸಲು ಹಿಂಜರಿಯುತ್ತಿದ್ದನು. ಇದಕ್ಕೆ ಪ್ರಬಲತರವಾದ ಕಾರಣವಿದ್ದಿತು. ಅದೇನೆಂದರೆ, ಹೇಮಪ್ರಭಾ ದೇವಿಯ ದುರ್ಗದಲ್ಲಿ ಮಹಾಮಹಾ ಯುದ್ಧವೀರರಿದ್ದರು. ಅವರು ವಿರೋಧಿಗಳಾದರೆ ಮದನಪಾಲನಿಗೂ ಮುರಳಾದೇವಿಗೂ ಕಷ್ಟ. ಆದ ಕಾರಣ ಹೇಮಪ್ರಭಾ ದೇವಿಯನ್ನು ಬಲಾತ್ಕರಿಸಲು ಅವರಿಬ್ಬರಿಗೂ ಇಷ್ಟವಿಲ್ಲ. ಆ ಯೋಧ್ದರನ್ನು ನೋಡಿದ ಕೂಡಲೇ ರಾಜನು ಭಯಕಂಪಿತಗಾತ್ರನಾಗುತ್ತಿದ್ದನು. ಆದರೆ, "ಆಲಸ್ಯಮಮೃತಂ ವಿಷಂ" ಎನ್ನುವಂತೆ ಆಲಸ್ಯಮಾಡಿದ ಹಾಗೆಲ್ಲ ತನ್ನ ಇಷ್ಟಾರ್ಥಕ್ಕೆ ಭಂಗಬರುವುದೇನೊ ಎಂದು ಮದನಪಾಲನು ಶಂಕಿಸಿ ಬೇಗನೆ ಸಮ್ಮತಿಯನ್ನು ಪಡೆಯಬೇಕೆಂದು ಆ ದಿನ ಪ್ರಯತ್ನಿಸಿದನು.

ರಾಜನು ಈ ವಿಷಯದಲ್ಲಿ ತನ್ನನ್ನು ಇದಿರಾಗಿ ಕೇಳುವುದು ಸರಿಯಾಗಿಲ್ಲವೆಂತಲೂ, ತನಗೆ ಪರೀಕ್ಷೆಯ ಕಾಲವು ಬಂದಿರುವುದೆಂತಲೂ, ಈ ಸಮಯದಲ್ಲಿ ಯಾವ ಯುಕ್ತಿಯಿಂದ ವಿಪತ್ತನ್ನು ಪರಿಹರಿಸಿಕೊಳ್ಳಬೇಕೆಂದು ಆಲೋಚಿಸುತ್ತಿದ್ದಳು. ಇಂದಿರೆ ಸುಲೋಚನೆಯರು ಸ್ವಲ್ಪ ದೂರವಾಗಿ ನಿಂತು ಮಾತನಾಡಿಕೊಳ್ಳುತ್ತಿದ್ದರು. ಆದರೆ ಇಂದಿರೆಯ ಮನಸ್ಸೆಲ್ಲವೂ ರಾಣಿಯ ಮೇಲೆಯೇ ಇದ್ದಿತು.

**ಮದನಪಾಲ—** ದೇವಿ! ಹದಿನಾರು ವರ್ಷಗಳಿಂದಲೂ ನೀನು ಏಕಾಕಿನಿಯಾಗಿ ಹೀಗೆ ವ್ಯಥೆಗಳಿಂದ ಕುಂದುವುದೇತಕ್ಕೆ? ಮನೋಹರವಾದ ನಿನ್ನ ಯೌವನವನ್ನು ಕಾಡಿನಲ್ಲಿ ಕಾಯ್ದ ಬೆಳದಿಂಗಳಂತೆ ವ್ಯರ್ಥಮಾಡುತ್ತಿರುವೆ. ಪುನರ್ವಿವಾಹವು ಶಾಸ್ತ್ರಸಮ್ಮತವೆಂದು ನೀನೂ ಒಲ್ಲೆ. ನೀನೇಕೆ ಈ ದಾಸನನ್ನು ವರಿಸಬಾರದು? ಈ ವಿಷಯದಲ್ಲಿ ನಿನ್ನ ಮನೋಗತವನ್ನು ತಿಳಿಯಲು ಅಪೇಕ್ಷಿಸುವೆನು.

**ಹೇಮಪ್ರಭಾದೇವಿ—** ರಾಜೇಂದ್ರ! ಜೀವಚ್ಛವದಂತಿರುವ ನನಗೆ ಯಾವುದರಲ್ಲಿಯೂ ಇಷ್ಟವಿಲ್ಲ. ನಾನು ನಿನ್ನ ಅಕ್ಕನಿಗೆ ವಿರೋಧಿನಿ. ಮುಂದೆ ನನಗೆ ಏನು ವಿಪತ್ತು ಬರುವುದೋ ಎಂದು ಮೊದಲಿನಿಂದಲೂ ಭಯಪಡುತ್ತಿದ್ದೇನೆ. ನೀನು ನಿರ್ಮಲಹೃದಯನಾದುದರಿಂದ ಆಗಾಗ್ಗೆ ಯೋಗಕ್ಷೇಮವನ್ನು ವಿಚಾರಿಸುತ್ತ, ನನ್ನ ಜಮೀನುಗಳ ವ್ಯವಹಾರಗಳನ್ನೂ ನೋಡಿಕೊಳ್ಳುತ್ತ ಸಹಾಯ ಮಾಡುತ್ತಿರುವೆ. ಈ ಸಹಾಯಕ್ಕಾಗಿ ನಾನು ತುಂಬ ಕೃತಜ್ಞಳಾಗಿರುವೆನು. ಈ ಉಪಕಾರಕ್ಕಾಗಿ ನನ್ನ ಅಣ್ಣನ ಮಗಳಾದ ವಿಮಲೆಯನ್ನು ನಿನಗೆ ಅರ್ಪಿಸಿ ನೀವು ಸುಖವಾಗಿರುವುದನ್ನು ನೋಡಿ ಸಂತೋಷಿಸಬೇಕೆಂದು ಬಯಸುವೆನು.

ಮದನಪಾಲನಿಗೆ ಮಾತೇ ಹೊರಡಲಿಲ್ಲ. ಈ ದೇವಿಯು ಎಷ್ಟು ಪವಿತ್ರವಾದ ಹೃದಯವುಳ್ಳವಳು. ಅವಳ ಉದಾರಗುಣಕ್ಕೆ ತಕ್ಕಂತೆಯೇ ಆಲೋಚಿಸಿರುವಳು. ನನ್ನ ತಾಯಿಗೆ ಈ ಮಾತು ಸಮ್ಮತವಾಗುವುದಿಲ್ಲ. ನಾನಾದರೋ ಅಸ್ವತಂತ್ರನು. ಒಳ್ಳೆಯದಾಗಲಿ, ಕೆಟ್ಟದ್ದಾಗಲಿ, ನನ್ನ ತಾಯಿಯ ಇಷ್ಟದಂತೆಯೇ ನಡೆಯಬೇಕಾಗಿರುವುದು— ಎಂದಾಲೋಚಿಸುತ್ತ "ದೇವಿ! ನಿನ್ನ ವಿಚಾರವು ನನ್ನ ತಾಯಿಗೆ ಸಮ್ಮತವಾದುದಲ್ಲ. ಮಹಾರಾಜರು ಸತ್ತುಹೋದುದು ಮೊದಲು ನಿನ್ನನ್ನು ತನ್ನ ರಾಜ್ಯದಲ್ಲಿರಿಸುವುದು ಆಕೆಗೆ ಇಷ್ಟವೇ ಇಲ್ಲ. ನಿನ್ನ ಮೇಲೆ ನನಗೆ ಪ್ರೀತಿ ಇರುವುದನ್ನು ಕೇಳಿದ ತರುವಾಯ ಹೇಗಾದರೂ ಪುನರ್ವಿವಾಹ ಮಾಡಿಸಬೇಕೆಂದು ನಿಶ್ಚಯಿಸಿರುವಳು. ದೇವಿ! ಈ ಕಾರ್ಯದಿಂದ ನಿನಗೇನು ನಷ್ಟ?"

**ಹೇಮಪ್ರಭಾದೇವಿ—** ನನ್ನ ಮನೋವಲ್ಲಭನಾದ ವಿಕ್ರಮಸಿಂಹರಾಜನನ್ನು ನೀನರಿಯದವನಲ್ಲ. ಧರ್ಮಸ್ವರೂಪನಾದ ಆ ಮಹಾನುಭಾವನು ಪಿತೃಹತ್ಯೆಯನ್ನು ಸ್ವಪ್ನದಲ್ಲಾದರೂ ಮಾಡುವನೇ? ತಂದೆತಾಯಿಗಳಲ್ಲಿ ಆತನಿಗಿದ್ದ ಭಕ್ತಿಯು ಲೋಕಕ್ಕೇ ವಿದಿತವಾಗಿರುವುದು. ಬಾಲ್ಯದಿಂದಲೂ ರಾಜ್ಯಸುಖವನ್ನು ತುಚ್ಛವೆಂದೆಣಿಸಿ ಎಲ್ಲರನ್ನೂ ಪ್ರೇಮಿಸುತ್ತ ಗಿಡದಿಂದ ಒಂದು ಪುಷ್ಪವನ್ನು ಬಿಡಿಸಿದರೆ ಅದಕ್ಕೆ ಏನು ನೋವಾಗುವುದೋ ಎಂದು ಹಿಂಜರಿಯುತ್ತಿದ್ದ ಆ ದಯಾಮೂರ್ತಿಯ ಮೇಲೆ ಅಪವಾದವನ್ನು ಹಾಕಿ ಅಡವಿಯ ಪಾಲು ಮಾಡಿದಿರಿ. ಅಂತಹ ಗುಣರಾಶಿಗೆ ದ್ರೋಹಮಾಡಿ ನಾನು ಪುನಃ ಮದುವೆಯಾಗುವುದು ವೀರರಮಣಿಯ ಲಕ್ಷಣವಲ್ಲ. ಮಹಾರಾಜನನ್ನು ಕೊಂದ ದ್ರೋಹಿಯನ್ನು ಕಂಡು ಶಿಕ್ಷೆಗೆ ಗುರಿಪಡಿಸುವ ಭಾರವು ನಿನ್ನಮೇಲಿರಲಿಲ್ಲವೇ? ರಾಜೇಂದ್ರಾ, ಕ್ಷಮಿಸು.

**ಮದನಪಾಲ—** ನಾನು ಈಗ ನಿನ್ನ ಹೃದಯವನ್ನು ಚೆನ್ನಾಗಿ ತಿಳಿದುಕೊಂಡೆನು. ಪ್ರಪಂಚವು ಹೇಗಿರುವುದೆಂಬುದು ನಿನಗೆ ತಿಳಿದಂತೆ ತೋರುವುದಿಲ್ಲ. ತಂದೆಯು ಪುನರ್ವಿವಾಹ ಮಾಡಿಕೊಂಡರೆ ತಾಯಿಯಿಲ್ಲದ ಮಗನಿಗೆ ಮಲತಾಯಿಯ ಮೇಲೆ ಮಾತ್ಸರ್ಯವುಂಟಾಗುವುದು ಸಹಜವಂತೆ. ಹಾಗೆಯೇ ಮುರಳಾದೇವಿಯನ್ನು ಮದುವೆಯಾದ ಬಳಿಕ ವಿಕ್ರಮಸಿಂಹನಿಗೆ ಮಾತ್ಸರ್ಯವಿದ್ದಿತಂತೆ. ಅಲ್ಲದೆ, ನಾನು ನನ್ನ ಅಕ್ಕನ ಬಳಿಯಲ್ಲಿ ಇರುವುದು ಮತ್ತಷ್ಟು ದ್ವೇಷಕ್ಕೆ ಅವಕಾಶವಾಯಿತು. ಆತನು ನಮ್ಮ ಅಕ್ಕನನ್ನು ಕೊಲ್ಲಿಸಲು ಅನೇಕ ಸಲ ಪ್ರಯತ್ನಿಸಿದನಂತೆ. ಈ ಸಂಗತಿಗಳನ್ನೆಲ್ಲಾ ತಿಳಿದವರು ತಂದೆಯನ್ನು ಕೊಲ್ಲಿಸುವುದಕ್ಕೆ ಯುವರಾಜನು ಹಿಂಜರಿಯಲಾರನೆಂದು

ಸಾಕ್ಷಿಕೊಟ್ಟರು. ಆತನು ತಂದೆಯನ್ನು ಕೊಲ್ಲುವುದಕ್ಕೆ ಹೋಗುತ್ತಿದ್ದಾಗ ನಮ್ಮ ಅಕ್ಕನೇ ಕಣ್ಣಾರೆ ಕಂಡಳಂತೆ. ಆತನು ತಂದೆಯನ್ನು ಕೊಂದು ಹೋದ ಮೇಲೆ ನಮ್ಮ ಅಕ್ಕನು ಕೊಟ್ಟಡಿಯ ಒಳಕ್ಕೆ ಹೋಗಿ ನೋಡಲು ಆತನ ಕೈಯಲ್ಲಿದ್ದ ಕತ್ತಿ ರಕ್ತಮಯವಾಗಿ ಹಾಸಿಗೆಯ ಮೇಲೆ ಬಿದ್ದಿದ್ದಿತಂತೆ. ಇದಕ್ಕಿಂತಲೂ ಅತಿಶಯವಾದ ನಿದರ್ಶನವೇನು ಬೇಕು? ನೀನು ಪುಣ್ಯವತಿಯಾದುದರಿಂದಲೇ ಆ ಕ್ರೂರಾತ್ಮನ ಕೋಟಲೆಯಿಂದ ತಪ್ಪಿಸಿಕೊಂಡೆ. ಅವನು ಈಗ ಭೂಲೋಕದಲ್ಲಿಯೇ ಇಲ್ಲ. ಕಾರಾಗೃಹದಿಂದ ತಪ್ಪಿಸಿಕೊಂಡು ಹೋಗಿ ಯಾವುದೋ ಒಂದು ದ್ವೀಪದಲ್ಲಿ ಕೆಲಸಮಾಡುತ್ತಿದ್ದನಂತೆ. ಇಲ್ಲಿಂದ ರಾಜಭಟರನ್ನು ಅವನ ಸಂಹಾರಕ್ಕಾಗಿ ಕಳುಹಿಸಿರಲು ಸತ್ತು ಹೋದನೆಂದು ಅಲ್ಲಿನವರು ತಿಳಿಸಿದರಂತೆ. ನೀನು ನನ್ನನ್ನು ಮದುವೆಯಾದರೆ ನಿನಗೆ ಯಾವ ದೋಷವೂ ಬರುವುದಿಲ್ಲ. ಚೆನ್ನಾಗಿ ಆಲೋಚಿಸಿ ನೋಡು.

ಹೇಮಪ್ರಭಾ ದೇವಿಯು ಇದಕ್ಕೆ ಉತ್ತರವನ್ನೇ ಕೊಡಲಿಲ್ಲ. ಮುರಳಾದೇವಿಯ ಉಪದೇಶವು ತಲೆಗೇರಿದ ಬಳಿಕ ಮಾತನಾಡಿ ತಾನೇ ಏನು ಪ್ರಯೋಜನ? ಉಕ್ಕಿ ಬರುತ್ತಿದ್ದ ದುಃಖವನ್ನೆಲ್ಲಾ ಅಡಗಿಸಿಕೊಂಡು "ರಾಜೇಂದ್ರಾ! ಈಗ ನನ್ನ ಮನಸ್ಸಿನ ಸ್ಥಿತಿ ಚೆನ್ನಾಗಿಲ್ಲ. ಏನೇನೋ ಚಿತ್ರವಿಚಿತ್ರವಾದ ಸಂಗತಿಗಳನ್ನು ಕೇಳಿದೆನು. ನಾನು ಸಾವಧಾನವಾಗಿ ಎಲ್ಲಾ ಸಂಗತಿಗಳನ್ನೂ ಆಲೋಚಿಸುತ್ತೇನೆ. ರಾಜಶಾಸನಕ್ಕೆ ಒಳಪಟ್ಟಿರುವ ನಾವೆಲ್ಲರೂ ಸ್ವರ್ಗಕ್ಕೆ ಹೋಗುವುದು ಹೊರತು ಮತ್ತಾವ ವಿಧದಿಂದಲೂ ಶಾಸನವನ್ನು ಲ್ಲಂಘಿಸಲಾರೆವು.

**ಮದನಪಾಲ—** "ದೇವಿ! ನಿನಗೆ ಅನೇಕ ವಂದನೆಗಳು. ಕಠಿಣವಾದ ಮಾತುಗಳಿಂದ ನಿನ್ನ ಮನಸ್ಸನ್ನು ನೋಯಿಸಿದುದಕ್ಕೆ ಕ್ಷಮಿಸು. ವಿವಾಹಕ್ಕೆ ಈಗಲೇ ಅವಸರವಿಲ್ಲ. ಇನ್ನೂ ಒಂದು ವರ್ಷವಾಗಲಿ. ಮನಸ್ಥಿತಿಯನ್ನು ನೆಮ್ಮದಿ ಪಡಿಸಿಕೋ" ಎಂದು ಹೇಳಿ ರಾಜನು ನಿರ್ಗಮಿಸಿದನು. ಹೇಮಪ್ರಭಾ ದೇವಿಯು ಇಂದಿರೆಯ ಕೈ ಹಿಡಿದುಕೊಂಡು ರಥವನ್ನೇರಿ ಹೊರಟುಹೋದಳು.

# ೧೦ನೆಯ ಅಧ್ಯಾಯ

ಮಲಗುವ ಮನೆಯಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಿರುವ ಶಬ್ದವು ಕೇಳಿಸಿತು. ಇಂದಿರೆಯು ಭ್ರಾಂತಳಾಗಿ ಹಾಸಿಗೆಯಿಂದೆದ್ದು ಕುಳಿತುಕೊಂಡು ನಾಲ್ಕು

ದಿಕ್ಕುಗಳಲ್ಲಿಯೂ ಪರೀಕ್ಷಿಸಿ ನೋಡಿದಳು. ಅಂತಃಪುರದಲ್ಲಿ ಎಲ್ಲರೂ ಆಲಿದು-ನಿದ್ರಿಸುತ್ತಿದ್ದರು. ಇಂದಿರೆಯು ಮುಂದಿನ ಮಹಲಿನಲ್ಲಿ ಪ್ರವೇಶಿಸಿದಳು. ಆ ರೋದನವು ಸಮೀಪದಲ್ಲಿಯೇ ನಡೆಯುತ್ತಿರುವಂತೆ ಕೇಳಿಸಿತು. ಪಿಲೋಚನೆ ಮೊದಲಾದ ದಾಸೀ ಜನಗಳು ದೇಹಸ್ಮೃತಿಯಿಲ್ಲದೆ ನಿದ್ರಿಸುತ್ತಿದ್ದರು. ಇವರೆಲ್ಲರನ್ನೂ ದಾಟಿ ರಾಣಿಯು ನಿದ್ರಿಸುತ್ತಿದ್ದ ಕೊಟ್ಟಡಿಗೆ ಬಂದಳು. ಅಳುವ ಶಬ್ದವು ಒಳಗಿನಿಂದ ಬರುತ್ತಿದ್ದಿತು. ಅಗಳಿಯನ್ನು ಹಾಕಿರಲಿಲ್ಲವಾದ ಕಾರಣ ಶಬ್ದವಾಗದಂತೆ ಕದವನ್ನು ತೆಗೆದು ಪುನಃ ಮುಚ್ಚಿಕೊಂಡು ಹೇಮಪ್ರಭಾ ದೇವಿಯ ಬಳಿ ನಿಂತಳು. ಆಕೆಯು ಅಪರಿಮಿತವಾಗಿ ಅಳುತ್ತಿರುವುದನ್ನು ಗ್ರಹಿಸಿ ಆಕೆಯ ಬೆನ್ನಿನ ಮೇಲೆ ತನ್ನ ಕೈಯನ್ನಿಟ್ಟು "ತಾಯೇ! ಏತಕ್ಕಾಗಿ ಇಷ್ಟು ದುಃಖಿಸುವಿರಿ? ದುಃಖಬಂದಾಗ ಸಜ್ಜನರು ಧೈರ್ಯವಹಿಸಬೇಕಲ್ಲವೆ? ಅಮ್ಮಾ! ನನ್ನೊಡನೆ ಮಾತನಾಡಿರಿ" ಎಂದು ನುಡಿಯುತ್ತ ತನ್ನ ದುಃಖವನ್ನು ನಿಗ್ರಹಿಸಿಕೊಂಡು ಸಮಾಧಾನಗೊಳಿಸಲು ಯತ್ನಿಸಿದಳು.

**ಹೇಮಪ್ರಭಾ ದೇವಿ**— ಅಮ್ಮಾ! ಇಂದಿರೆ! ಅನಾಥಳಾಗಿ ಈ ರೀತಿ ದುಃಖಿಸುವ ನನ್ನನ್ನು ಸಮಾಧಾನ ಪಡಿಸಲು ನಿಶಿಯಲ್ಲಿ ಎದ್ದು ಬಂದೆಯಾ? ಇಷ್ಟು ದೊಡ್ಡ ಪರಿವಾರವಿದ್ದರೂ ಯಾರೂ ಹೀಗೆ ಬರಲಿಲ್ಲ. ಇಂದಿರೆ! ಕಣ್ಣು ರೆಪ್ಪೆ ಹಾಕದೆ ಈ ವಿಧವಾಗಿ ನಾನು ಎಷ್ಟೋ ರಾತ್ರಿಗಳನ್ನು ಕಳೆದಿರುವೆನು. ಈ ಹದಿನಾರು ವರ್ಷಗಳಿಂದಲೂ ನನಗೆ ಸರಿಯಾದ ನಿದ್ರೆಯೇ ಇಲ್ಲ. ಅಧಿಕ ದುಃಖದಿಂದ ದೇಹವನ್ನು ಮರೆತು ನಿದ್ರಿಸಿದ ದಿನಗಳಲ್ಲಿ ನನ್ನ ಅತ್ತೆಯವರು ಕನಸಿನಲ್ಲಿ ಬಂದು ಸಮಾಧಾನ ಪಡಿಸುವರು. ಮರುದಿನ ನನ್ನ ಮನಸ್ಸು ನೆಮ್ಮದಿಯಾಗಿರುವುದು. ಈ ವಿಧವಾಗಿ ನಾನು ದಿನಗಳನ್ನು ಕಳೆಯುತ್ತಿದ್ದೇನೆ. ಇಷ್ಟು ವರ್ಷಗಳಿಗೆ ನನ್ನ ದುಃಖವನ್ನು ಪಾಲುಗೊಳ್ಳಲು ನನ್ನ ದೈವವು ನಿನ್ನನ್ನು ತೋರಿಸಿರುವುದು.

**ಇಂದಿರೆ**— ದೇವಿ! ಇಂತಹ ಸುಕುಮಾರ ಶರೀರವನ್ನು ಹಾಸಿಗೆಯ ಮೇಲೆ ಮಲಗಿಸದೆ ಏಕೆ ನೆಲದ ಮೇಲೆ ಮಲಗಿಸಿರುವಿರಿ?

**ಹೇಮಪ್ರಭಾದೇವಿ**— ಇಂದಿರೆ! ನನ್ನ ಮಲಗುವ ಮನೆಗೆ ಯಾರೊಬ್ಬರನ್ನೂ ಬರಗೊಡಿಸುವುದಿಲ್ಲ. ನಾನು ಎಲ್ಲಿ ಮಲಗುವುದೋ ಯಾರಿಗೂ ತಿಳಿಯದು. ನನ್ನ ಜೀವಿತೇಶ್ವರನು ಕಷ್ಟಗಳಿಗೆ ಪಾಲಾಗಿ ಎಲ್ಲಿದ್ದಾನೆಯೋ ನನಗೆ ತಿಳಿಯದು. ಆತನು ಇಲ್ಲದೆ ಈ ಹಾಸಿಗೆ, ಗೃಹಗಳು ನನಗೇಕೆ? ಆಪತ್ತಿಗೆ ಗುರಿಯಾಗಿರುವ ನನ್ನ ನಾಥನಿಗೆ ಸಹಾಯವಾಗುವುದೇನೋ ಎಂದು ಪಿಶಾಚದಂತೆ ಈ ಧನವನ್ನು ಕಾಪಾಡುತ್ತ ಆತನು ಯಾವಾಗ ಬರುವನೋ ಎಂದು

ನಿರೀಕ್ಷಿಸುತ್ತಾ ಕಾಲವನ್ನು ಕಳೆಯುತ್ತಿದ್ದೇನೆ. ಈ ದಿನ ನಡೆದ ಸಂಭಾಷಣೆಯನ್ನು ನೀನು ಕೂಡ ಕೇಳಿದೆಯಲ್ಲವೆ? ರಾಕ್ಷಸಿಯಾದ ಮುರಳಾದೇವಿಯೂ, ದುರ್ಜನನಾದ ಅವಳ ದತ್ತಪುತ್ರನೂ, ಮತ್ತೊಬ್ಬ ಆಪ್ತಸೇವಕನೂ ಸೇರಿ ಇಷ್ಟು ಕುತಂತ್ರವನ್ನು ಮಾಡಿ ನನ್ನ ನಾಥನಿಗೆ ಸರಿಯಾದ ನ್ಯಾಯವು ದೊರೆಯದಂತೆ ಮಾಡಿರುವುದರಿಂದ ದೇಶಭ್ರಷ್ಟನಾಗಬೇಕಾಗಿ ಬಂದಿತು. ನನ್ನನ್ನು ಇಷ್ಟು ಕಷ್ಟಕ್ಕೆ ಗುರಿಮಾಡಿದುದು ಸಾಲದೆ ನನ್ನ ಪಾತಿವ್ರತ್ಯಕ್ಕೂ ಭಂಗವನ್ನುಂಟುಮಾಡಲು ಆ ಮುರಳಾ ದೇವಿಯು ಯತ್ನಿಸಿರುವಳು. ಅವಳ ಪ್ರೋತ್ಸಾಹದಿಂದ ಆ ದುಷ್ಟಾತ್ಮನು ತನ್ನ ಪಂತವನ್ನು ಸಾಧಿಸಿಕೊಳ್ಳಬೇಕೆಂದಿರುವನು. ಅಯ್ಯೋ! ನನ್ನ ಕಾಂತನು ಭೂಲೋಕದಲ್ಲಿಯೇ ಇಲ್ಲವೆಂದು ಸುದ್ದಿ ಹುಟ್ಟಿಸಿರುವರು. ಒಂದು ವೇಳೆ ಅದು ನಿಜವಾಗಿದ್ದರೆ ನನಗೆ ಈ ಜನ್ಮವು ಮತ್ತೇತಕ್ಕೆ? ಈ ದ್ರವ್ಯವು ಎಲ್ಲಿ ಹೋದರೇನು? ನಾನು ಇನ್ನು ಒಂದು ವರ್ಷದೊಳಗಾಗಿ ಮದನಪಾಲನ ವಶವಾಗಬೇಕಂತೆ. ಇಲ್ಲವಾದರೆ, ಆತ್ಮಹತ್ಯೆ ಮಾಡಿಕೊಳ್ಳುವುದು ಲೇಸು. ಅದರಿಂದ ಸ್ವರ್ಗದಲ್ಲಿರುವ ನನ್ನ ಸ್ವಾಮಿಯನ್ನೂ ನನ್ನ ಮಗಳನ್ನೂ ಸೇರಿ ಸುಖವಾಗಿರಬಹುದು. ಆದರೆ, ಆತ್ಮಹತ್ಯೆಯು ದೋಷವೆಂದು ಶಾಸ್ತ್ರಗಳು ಸಾರುತ್ತಿರುವುವು. ವೀರ ರಮಣಿಯರಿಗೆ ಅದು ಕೇವಲ ಹೀನವಾದ ಕಾರ್ಯವಾಗುವುದಲ್ಲಾ! ಎಂದು ಪರಿತಪಿಸುತ್ತಿರುವೆನು" ಎಂದು ಹೇಳುತ್ತಾ ಬಿಕ್ಕಿ ಬಿಕ್ಕಿ ಅಳಲಾರಂಭಿಸಿ ಇಂದಿರೆಯ ಮೇಲೆ ಬಿದ್ದು ಮೂರ್ಛೆ ಹೋದಳು.

ತನ್ನ ತಾಯಿಯ ಸ್ಥಿತಿಯನ್ನು ನೋಡಿ ಇಂದಿರೆಗೂ ದುಃಖವು ಉಕ್ಕಿ ಬರುತ್ತಿದ್ದಿತು. ಅದನ್ನು ಹಾಗೆಯೇ ನುಂಗಿಕೊಂಡು ಬೀಸಣಿಗೆಯಿಂದ ಬೀಸುತ್ತಾ ಆಕೆಯ ಕೂದಲುಗಳನ್ನು ಹಿಂದಕ್ಕೆ ಕಟ್ಟಿ ಕಣ್ಣೀರನ್ನು ಒರೆಸಿ ಮುಖವನ್ನು ತೊಳೆದು ನೀರನ್ನು ಕುಡಿಸಿ ಆಕೆಯ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ತಾಯಿಯ ದೇಹಸ್ಪರ್ಶದಿಂದುಂಟಾದ ಸುಖವನ್ನು ಅನುಭವಿಸುತ್ತಿದ್ದಳು. "ತಾನೇ ಮಗಳೆಂದು ಹೇಳಿಬಿಟ್ಟರೆ ಅಪಾರವಾದ ಪ್ರೀತಿಯಿಂದ ತಾಯಿಯು ತನ್ನನ್ನು ಹೊರಗೆ ಹೋಗಗೊಡಿಸಲಾರಳೆಂತಲೂ, ಇದರಿಂದ ಮುಂದೆ ತಾನು ಸಾಧಿಸ ಬೇಕಾಗಿರುವ ಕಾರ್ಯಕ್ಕೆ ವಿಘ್ನವುಂಟಾಗುವುದೆಂತಲೂ, ದುರ್ಮಾರ್ಗರು ಎಚ್ಚರಗೊಂಡು ತಮ್ಮಿಬ್ಬರನ್ನೂ ಕೊಂದು ಹಾಕಿದರೂ ಹಾಕಬಹುದೆಂತಲೂ, ತನ್ನನ್ನೇ ನಂಬಿಕೊಂಡಿರುವ ತನ್ನ ತಂದೆಗೆ ಏನು ಗತಿಯಾಗುವುದೋ ಎಂತಲೂ ಆಲೋಚಿಸುತ್ತ ತಾಯಿಗೆ ಎಚ್ಚರವಾಗುವ ವರೆಗೂ ಬೀಸುತ್ತಿದ್ದಳು. ತಾಯಿಯು ಗಾಢನಿದ್ರೆಯಲ್ಲಿದ್ದಾಗ ಆಕೆಯ

ಕಿವಿಯಲ್ಲಿ ಮೆಲ್ಲಗೆ "ನಿನ್ನ ಗಂಡನೂ, ಮಗಳೂ ಜೀವಿಸಿದ್ದಾರೆ. ಬೇಗನೆ ಅವರನ್ನು ನೀನು ಹೊಂದಿ ಸುಖ ಪಡುವೆ" ಎಂದು ಉಸುರಿದಳು.

ತಾಯಿಯು ಎಚ್ಚರಗೊಂಡ ಬಳಿಕ "ಅಮ್ಮಾ! ನಿಮ್ಮ ಪತಿಯು ಜೀವದಿಂದಿರುವರು. ನನ್ನ ಮಾತಿನಲ್ಲಿ ವಿಶ್ವಾಸವಿಡಿ" ಎಂದು ಇಂದಿರೆಯು ಹೇಳಿದಳು.

**ಹೇಮಪ್ರಭಾದೇವಿ—** ನನ್ನ ಮಗಳೋ !

**ಇಂದಿರೆ—** ಅವಳೂ ಜೀವಿಸಿರುವಳು.

**ಹೇಮಪ್ರಭಾದೇವಿ—** "ಇಂದಿರೆ! ನಿನ್ನನ್ನು ನೋಡಿದರೆ ನನಗೆ ಮಗಳ ಮೇಲಿನ ವಾತ್ಸಲ್ಯವುಂಟಾಗುತ್ತಿರುವುದು. ನನ್ನ ಮುದ್ದಿನ ಅರಗಿಣಿಯೆ! ಒಂದು ಸಲ ನಿನ್ನನ್ನು ಆಲಿಂಗನೆಮಾಡಿಕೊಳ್ಳುವೆನು" ಎಂದು ಹೇಳಿ ಆ ದೇವಿಯು ಮನಸಾರೆ ಅವಳನ್ನು ಅಪ್ಪಿಕೊಂಡು ಮುತ್ತಿಟ್ಟಳು.

**ಇಂದಿರೆ—** ಅಮ್ಮಾ! ನೀವು ಈಗ ಇಷ್ಟು ಕಳವಳ ಪಡಬಾರದು. ತುಂಬ ಧೈರ್ಯವನ್ನೂ ಸಹನೆಯನ್ನೂ ತಂದುಕೊಳ್ಳಬೇಕು.

**ಹೇಮಪ್ರಭಾದೇವಿ—** ಇಂದಿರೆ! ಈಗ ನಾನು ಎಷ್ಟು ಆನಂದವನ್ನು ಅನುಭವಿಸುತ್ತಿರುವೆನೋ ಹೇಳಲಾರೆ. ನಿನ್ನ ತೊಡೆಯ ಮೇಲೆ ನನ್ನ ತಲೆಯನ್ನಿಟ್ಟುಕೊಂಡು ನಿದ್ರೆಗೈದೆನಷ್ಟೆ. ನನ್ನ ಅತ್ತೆಯವರು ಸ್ವಪ್ನದಲ್ಲಿ ಬಂದು ನನ್ನನ್ನು ಆಶೀರ್ವದಿಸಿ "ಮಗು! ದುಃಖಿಸಬೇಡ. ನನ್ನ ಮಗನು ಸುಖವಾಗಿ ಜೀವಿಸಿರುವನು. ನೀನು ಸಂತೋಷ ಪಡುವ ಕಾಲವು ಸಮೀಪಿಸಿರುವುದು" ಎಂದು ಹೇಳಿದರು. ಕೂಡಲೆ ಮತ್ತಾರೋ ನನ್ನ ಕಿವಿಯಲ್ಲಿ "ಅಮ್ಮಾ! ನಿಮ್ಮ ಗಂಡನು ಜೀವಿಸಿರುವನು" ಎಂದರು. ನನ್ನ ಮಗುವು ಏನಾಯಿತೆಂದು ನೆನಸುವಷ್ಟರೊಳಗೆ "ನಿಮ್ಮ ಮಗಳೂ ಕೂಡ ಜೀವಿಸಿರುವಳು" ಎಂದು ಹೇಳಿದರು. ಗಾಢನಿದ್ರೆಯಾದ ಕಾರಣ ನನಗೆ ಒಂದೂ ತಿಳಿಯಲಿಲ್ಲ.

**ಇಂದಿರೆ—** ಅಮ್ಮಾ! ಗೋಡೆಗಳಿಗೆ ಕೂಡ ಕಿವಿಗಳಿರುವುವು. ಗಟ್ಟಿಯಾಗಿ ಮಾತನಾಡ ಬೇಡಿರಿ. ನಿಮ್ಮಂತಹವರ ದುಃಖವನ್ನು ಪರಿಹರಿಸುವುದಕ್ಕಾಗಿಯೇ ಭೂಲೋಕದಲ್ಲಿ ಮಹಾತ್ಮರು ಅದೃಶ್ಯರಾಗಿಯೇ ಸಹಾಯ ಮಾಡುತ್ತಿರುವರು. ಮನುಷ್ಯರು ಗಾಢನಿದ್ರೆಯಲ್ಲಿರುವಾಗ ಸಮಯ ದೊರೆಯುವುದಾದುದರಿಂದ ಅವರಿಗೆ ನಿಜವಾದ ಸಂಗತಿಯನ್ನು ಹೇಳುವರು. ಅಂತಹ ಮಹನೀಯರು ಯಾರೋ ನಿಮಗೆ ಹೇಳಿರಬಹುದು. ಇದು ಸತ್ಯವಾದ ಮಾತು. ನಿಮಗೆ ಇಷ್ಟು ಅಪಕಾರವನ್ನು ಮಾಡಿದ ದ್ರೋಹಿಯನ್ನು ಕಂಡು ಹಿಡಿದು ಹೊರಪಡಿಸುವುದಕ್ಕಾಗಿ ತಕ್ಕ ಪ್ರಯತ್ನವೇನೋ ನಡೆಯುತ್ತಿರುವುದೆಂದು

ನಾನು ಹೇಳಬಲ್ಲೆನು. ಈಗ ಈ ಅರಸನು ಕೊಟ್ಟಿರುವ ಒಂದು ವರ್ಷ ಕಾಲದೊಳಗಾಗಿ ಕಾರ್ಯವು ಜಯವಾಗುವುದು. ಹಾಗಾಗದಿದ್ದರೆ, ನಿಮಗೆ ಮರಣವೇ ಗತಿ. ಏಕೆಂದರೆ, "ಪ್ರಾಣಾನಪಿ ಪರಿತ್ಯಜ್ಯ ಮಾನಮೇವಾಭಿರಕ್ಷತು" ಎಂದು ಆರ್ಯೋಕ್ತಿಯಿರುವುದು. ಬಹು ಭಾಗ ನಿಮಗೆ ಸುಖಪ್ರಾಪ್ತಿಯಾಗುವುದೇ ಹೊರತು ಪ್ರಾಣತ್ಯಾಗ ಮಾಡಬೇಕಾದ ಸಂಭವವುಂಟಾಗುವುದಿಲ್ಲ. ಅಲ್ಲಿಯವರೆಗೂ ಹೇಗಾದರೂ ಧೈರ್ಯವನ್ನು ತಾಳಿರಿ.

**ಹೇಮಪ್ರಭಾದೇವಿ**— ಇಂದಿರೆ! ಸೀತಾದೇವಿಗೆ ಅಂಜನಾಪುತ್ರನು ಹೇಳಿದಂತೆ ನೀನು ನನಗೆ ಕ್ಷೇಮವಾಗುವುದೆಂದು ಹೇಳುತ್ತೀಯೆ. ನನಗೆ ಸ್ವಪ್ನದಲ್ಲಿಯೂ ಹಾಗೆಯೇ ಗೋಚರಿಸಿರುವುದು. ಇನ್ನು ಮೇಲೆ ನೀನು ಹೇಳಿದಂತೆ ನಡೆದುಕೊಳ್ಳುವೆನು. ನನ್ನ ದುಃಖವನ್ನು ಎಳ್ಳಷ್ಟನ್ನಾದರೂ ಹೊರಗೆ ತೋರಿಸದೆ ಸಂತೋಷವನ್ನು ಅಭಿನಯಿಸುವೆನು.

ಉದಯಪುರಿಯ ರಾಜಮಂದಿರ. ಮಧ್ಯಾಹ್ನ ಸಮಯ. ಶ್ವೇತಗೃಹ. ಮನೋಹರವಾದ ಒಂದು ಹಾಸಿಗೆಯ ಮೇಲೆ ಮುರಳಾದೇವಿಯು ಮಲಗಿದ್ದಳು. ಅವಳ ಹಾಸಿಗೆಯ ಪಕ್ಕದಲ್ಲಿ ಮತ್ತೊಂದು ಹಾಸಿಗೆಯಿದ್ದಿತು. ಅದಕ್ಕೆ ಆತುಕೊಂಡು ಅವಳ ದತ್ತಪುತ್ರನಾದ ಮದನಪಾಲನು ತಾಯಿಯೊಡನೆ ಮಾತನಾಡುತ್ತಿದ್ದನು. ಫಲ್ಗುನನು ಪಾರ್ಶ್ವದಲ್ಲಿ ನಿಂತಿದ್ದನು. ಮುರಳಾದೇವಿಗೆ ಗಾಳಿ ಬೀಸುತ್ತಿದ್ದನು.

**ಮುರಳಾದೇವಿ**— ಫಲ್ಗುನಾ! ಆ ಹುಡುಗಿಯು ಯಾರಾಗಿರಬಹುದು?

**ಫಲ್ಗುನ**— ಮಹಾರಾಜ್ಞಿ! ಆ ಹುಡುಗಿಯನ್ನು ನೋಡಿ ಭ್ರಾಂತಿಗೊಂಡು ಗೊಂಬೆಯ ಹಾಗೆ ನಿಂತು ಹೋದೆನು. ಅವಳ ಸೌಂದರ್ಯವನ್ನು ವರ್ಣಿಸಲಳವಲ್ಲ. ಶರೀರದ ಬಣ್ಣವು ಬೇರೆಯಾಗಿರುವುದೇ ಹೊರತು ರೂಪವೆಲ್ಲವೂ ಚಂಪಕಮಾಲಿನಿಯ ದೇಹವನ್ನೇ ಹೋಲಿರುವುದು.

**ಮುರಳಾದೇವಿ**— ಕುಮಾರಾ! ನೀನು ಆಗಾಗ್ಗೆ ಅವಳನ್ನು ನೋಡುತ್ತಿರುವೆಯಾ? ನೀನು ಗುರುತಿಸಲಿಲ್ಲವೆ? ಋಣಶೇಷ, ಶತ್ರುಶೇಷ, ರೋಗಶೇಷಗಳನ್ನು ಇರಿಸಬಾರದೆಂದು ದೊಡ್ಡವರು ಹೇಳುವರು. ನೀನು ಅರಸನಾಗಿರುವುದಕ್ಕೆ ಯೋಗ್ಯನಲ್ಲವೆಂದು ತೋರುತ್ತದೆ. ವೃದ್ಧಳಾದ ನನಗೆ ಏನು ಬೇಕು? ನಿನಗಾಗಿಯೇ ಇಷ್ಟು ಶ್ರಮಪಡುತ್ತಿರುವೆನೆಂದು ನಿನಗೆ ತೋರಲಿಲ್ಲವೆ?

**ಮದನಪಾಲ**— ಅಮ್ಮಾ! ಇವನ ಮಾತನ್ನು ನೀವು ನಂಬುವಿರಾ! ಇವನು ಬುದ್ಧಿಹೀನನು. ಆ ಹುಡುಗಿಯು ಇವನು ಹೇಳಿದಷ್ಟು ಸುಂದರಳಲ್ಲ. ಆದರೆ, ತಕ್ಕ ಮಟ್ಟಿಗೆ ಚಲುವೆ. ಸಂಶಯಾತ್ಮನಿಗೆ ಎಲ್ಲಿ ನೋಡಿದರೂ ಸಂದೇ

ಹವೇ ತೋರಿಬರುವುದು. ಅದಕ್ಕೆ ನಾನೇನು ಮಾಡಬಲ್ಲೆನು?

**ಮುರಳಾದೇವಿ—** ಫಲ್ಗುನಾ! ಹೇಮಪ್ರಭಾ ದೇವಿಯೂ ಆ ಹುಡುಗಿಯ ವಿಷಯವಾಗಿ ಹೇಗೆ ನಡೆದುಕೊಳ್ಳುವಳೋ ಚೆನ್ನಾಗಿ ವಿಚಾರಿಸಿಕೊಂಡೆಯಾ?

**ಫಲ್ಗುನ—** ತಾಯೆ! ಅಷ್ಟು ವಿವರವಾಗಿ ಇನ್ನೂ ವಿಚಾರಿಸಿಕೊಂಡಿಲ್ಲ. ದೇಹಚ್ಛಾಯೆಯಿಂದ ಹೇಮಪ್ರಭಾ ದೇವಿಯವರು ಗುರುತಿಸದೆ ಇರಬಹುದು. ಆ ಹುಡುಗಿಯೂ ತನ್ನ ಸಂಗತಿಯನ್ನು ಹೇಳಿಕೊಳ್ಳಲಿಲ್ಲವೆಂದು ತೋರುತ್ತದೆ.

**ಮುರಳಾದೇವಿ—** ಫಲ್ಗುನ! ಚಿಕ್ಕಂದಿನಿಂದಲೂ ಸಾಕಿದ ಅಭಿಮಾನದಿಂದ ನಿಮ್ಮ ಅರಸನ ಕ್ಷೇಮಕ್ಕಾಗಿ ನಾನು ಇಷ್ಟು ಕಷ್ಟ ಪಡಬೇಕಾಗಿದೆ. ಈತನಿಗೆ ದೂರಾಲೋಚನೆಯೇ ಇಲ್ಲ. ತನ್ನ ಕಾರ್ಯಗಳನ್ನು ಎಷ್ಟು ಬೇಗನೆ ಸಾಧಿಸಬೇಕೆಂಬುದು ಈತನಿಗೆ ಇನ್ನೂ ತಿಳಿಯಲಿಲ್ಲ. ನೀನೊಬ್ಬನು ನನಗೆ ವಿಶ್ವಾಸಪಾತ್ರನಾದುದರಿಂದ ಇಂತಹ ಕಾರ್ಯಗಳನ್ನು ನಿನ್ನಿಂದ ಸಾಧಿಸಬೇಕಾಗಿದೆ. ಆ ಹುಡುಗಿಯನ್ನು ಈ ಅಂತಃಪುರದಲ್ಲಿ ಇಟ್ಟುಕೊಂಡು ಪರೀಕ್ಷಿಸಿದ ಹೊರತು ಅವಳು ಯಾರಾಗಿರಬಹುದೆಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲ." ಹೀಗೆ ಹೇಳುತ್ತಿರುವಷ್ಟರಲ್ಲಿಯೇ ಘಂಟೆಯ ಶಬ್ದವು ಕೇಳಿಸಿತು. ಫಲ್ಗುನನು ಓಡಿಹೋಗಿ ಒಂದು ಪತ್ರವನ್ನು ಬಂಗಾರದ ತಟ್ಟೆಯಲ್ಲಿಟ್ಟುಕೊಂಡು ಬಂದು ಅರಸನಿಗೆ ಅರ್ಪಿಸಿದನು. ಅರಸನು ಆ ಪತ್ರವನ್ನು ಬಿಚ್ಚಿ ಪ್ರೈಮರೆತು "ಅಮ್ಮ! ಹೇಮ ಇದನ್ನು ಬರೆದಿರುವಳು" ಎಂದು ಸಂಭ್ರಮದಿಂದ ನುಡಿದನು.

**ಮುರಳಾದೇವಿ—** ಏನೆಂದು ಬರೆದಿರುವಳು?

**ಮದನಪಾಲ—** ನಮ್ಮ ಅಂತಃಪುರದಲ್ಲಿ ನಡೆಯುವ ದೇವೀ ನವರಾತ್ರಿಗಳಲ್ಲಿ ಒಂದು ದಿನ ದೊಡ್ಡ ಔತಣವು ನಡೆಯುವುದು. ಅದಕ್ಕೆ ನೀನು ಬರಬೇಕೆಂದು ಪತ್ರ ಬರೆದಿದ್ದೆನು. "ನಿನ್ನ ಇಷ್ಟಪ್ರಕಾರ ಬರುವೆನು" ಎಂದು ಬರೆದಿದ್ದಾಳೆ.

**ಮುರಳಾದೇವಿ—** ಕುಮಾರಾ! ನೀನು ಬೆಳ್ಳಗಿರುವುದೆಲ್ಲ ಹಾಲೆಂದು ನಂಬುವೆ. ಹೇಮ ಸಾಮಾನ್ಯದ ಹೆಂಗಸಲ್ಲ. ನೀನು ಎಣಿಸಿರುವಷ್ಟು ಶೀಘ್ರದಲ್ಲಿ ಅವಳು ನಿನ್ನ ವಶವಾಗುವಳೆಂದು ತಿಳಿಯಬೇಡ. ಅವಳೊಂದಿಗೆ ನೀನು ಬಹಳ ಜಾಗರೂಕತೆಯಿಂದ ನಡೆದುಕೊಳ್ಳಬೇಕು. ಎಷ್ಟು ಶೀಘ್ರವಾಗಿ ವಿವಾಹ ಮಾಡಿಕೊಂಡರೆ ಅಷ್ಟು ಒಳ್ಳೆಯದೆಂದು ತಿಳಿ. ಈಗ ಹೊಸದಾಗಿ ಸೇರಿರುವ ಹುಡುಗಿಯನ್ನು ನೋಡಬೇಕಾಗಿದೆ.

ಹೇಮಪ್ರಭಾ ದೇವಿಯ ಅಂತಃಪುರ. ಎಲ್ಲಿ ನೋಡಿದರೂ ಹಚ್ಚನೆಯ

ತೋರಣಗಳು. ಸುವಾಸನೆಯುಳ್ಳ ಪುಷ್ಪಗುಚ್ಛಗಳು. ಪೂಜಾಗೃಹದಲ್ಲಿ ಬ್ರಾಹ್ಮಣರು ಶ್ರೀಸೂಕ್ತ ಮುಂತಾದ ವಿಧಾನಗಳಿಂದ ಶ್ರೀಚಕ್ರವನ್ನು ಪೂಜಿಸುತ್ತಿದ್ದರು. ಕೆಲವರು ಆಜ್ಯಾದಿ ಹೋಮದ್ರವ್ಯಗಳಿಂದ ಹವನ ಮಾಡುತ್ತಿದ್ದರು. ಸರ್ವಾಲಂಕೃತವಾಗಿದ್ದ ಒಂದು ಮಂಟಪದಲ್ಲಿ ಸ್ವರ್ಣಸಿಂಹಾಸನದ ಮೇಲೆ ಬಂಗಾರದ ತ್ರಿಪುರಸುಂದರಿಯ ವಿಗ್ರಹವು ಪ್ರತಿಷ್ಠಿತವಾಗಿದ್ದಿತು. ಅದು ಜೀವಕಳೆಯಿಂದ ಪೂರಿತವಾಗಿ ಹತ್ತು ವರ್ಷದ ಹುಡುಗಿಯಂತೆ ಪ್ರಕಾಶಿಸುತ್ತಿದ್ದಿತು. ನವರತ್ನಖಚಿತವಾದ ಆಭರಣಗಳಿಂದ ಅದು ಅಲಂಕರಿಸಲ್ಪಟ್ಟಿದ್ದಿತು. ಪೂಜೆಗೆ ಬಂದ ರಾಜಸ್ತ್ರೀಯರನ್ನು ವಿಮಲೆಯು ಸನ್ಮಾನಿಸುತ್ತಿದ್ದಳು. ಹೇಮಪ್ರಭಾದೇವಿಯು ವಸ್ತ್ರಾಲಂಕಾರಗಳಿಂದ ದಂಪತಿಗಳನ್ನು ಪೂಜಿಸುತ್ತಿದ್ದಳು. ಇಂದಿರೆಯು ದೇವಿಗೆ ತಾಂಬೂಲಾದಿಗಳನ್ನು ಅಳವಡಿಸುತ್ತಿದ್ದಳು. ರಾಜಬಂಧುಗಳಿಗೆ ಪ್ರತ್ಯೇಕವಾದ ಸ್ಥಳದಲ್ಲಿ ಭೋಜನಕ್ಕೆ ಸಿದ್ಧಪಡಿಸುತ್ತಿದ್ದರು. ಸಾಲುಸಾಲಾಗಿ ಮಣೆಗಳನ್ನು ಹಾಕಿದ್ದರು. ಮಧ್ಯಭಾಗದಲ್ಲಿ ಒಂದು ಬಂಗಾರದ ಮಣೆ ಇಟ್ಟಿದ್ದರು. ನೀರು ಕುಡಿಯುವುದಕ್ಕೆ ಬಂಗಾರದ ಗಿಂಡಿಗಳನ್ನು ಇಟ್ಟಿದ್ದರು. ಇದು ರಾಜನಾದ ಮದನಪಾಲನಿಗೆಂದು ನಿಶ್ಚಯವಾಗಿದ್ದಿತು. ಇಷ್ಟರಲ್ಲಿ ಅತಿಥಿಗಳೆಲ್ಲರೂ ಒಬ್ಬೊಬ್ಬರಾಗಿ ಬಂದರು. ರಾಜನು ಭೋಜನ ಕಾಲಕ್ಕೆ ಉಚಿತವಾದ ವಸ್ತ್ರಗಳನ್ನು ಧರಿಸಿ ಅಮೌಲ್ಯವಾದ ಮುತ್ತಿನಹಾರವನ್ನು ಕಂಠದಲ್ಲಿ ಅಲಂಕರಿಸಿಕೊಂಡು ಫಲ್ಗುನನು ಮುಂದೆ ಹಾದಿ ತೋರಿಸುತ್ತಿರಲು ಭೋಜನಮಂದಿರವನ್ನು ಪ್ರವೇಶಿಸಿದನು. ಎರಡನೆಯ ದ್ವಾರವನ್ನು ಪ್ರವೇಶಿಸುತ್ತಿರುವಾಗ ವಿಮಲೆಯು ನಿಂತಿದ್ದಳು. ಅವಳನ್ನು ನೋಡುತ್ತಲೇ ರಾಜನ ಮನಸ್ಸು ಹಿಗ್ಗಿತು. ಆ ಬಾಲೆಯು ನಾಚಿಕೆಯಿಂದ ಹೊರಟುಹೋದಳು. ಮೂರನೆಯ ದ್ವಾರವನ್ನು ಪ್ರವೇಶಿಸುತ್ತಲೇ ಇಂದಿರೆಯನ್ನು ನೋಡಿ ರಾಜನು ಭ್ರಾಂತನಾದನು. ಸಾಮಾನ್ಯವಾದ ಸೀರೆಯನ್ನುಟ್ಟು, ತಲೆಯನ್ನು ಬಾಚಿಕೊಳ್ಳದೆ ವಿಕಾರವಾಗಿ ಕೂದಲನ್ನು ಮೇಲಕ್ಕೆ ಕಟ್ಟಿಕೊಂಡಿದ್ದರೂ ಅವಳ ಮೇಲೆ ಪಸರಿಸಿದ ದೃಷ್ಟಿಯನ್ನು ಹಿಂತಿರುಗಿಸಲು ರಾಜನಿಗೆ ಸಾಧ್ಯವಾಗಲಿಲ್ಲ. "ಎಲೆ ಬಾಲೆ! ನೀನು ಯಾರು ?" ಎಂಬ ಮಾತು ಅವನಿಗೆ ತಿಳಿಯದೆಯೇ ಅವನ ಮುಖದಿಂದ ಹೊರಟಿತು.

**ಇಂದಿರೆ—** ಪ್ರಭುವೆ! ಅಂದಿನ ದಿನ ದೇವಿಯವರ ಹಿಂದೆ ವನಭೋಜನಕ್ಕಾಗಿ ಬಂದ ಸಖಿಯರೊಳಗೆ ನಾನೊಬ್ಬಳು.

**ಮದನಪಾಲ—** "ಹಾಗೆಯೇ" ಎಂದು ಮುಂದಕ್ಕೆ ನಡೆದನು. ಅಲ್ಲಿದ್ದ ರಾಜ ಬಂಧುಗಳೆಲ್ಲರೂ ಅರಸನನ್ನು ಸತ್ಕರಿಸಿದರು. ರಾಜನು ಬಂಧುಗ

ಳೊಡನೆ ಸಂತೋಷವಾಗಿ ಮಾತನಾಡುತ್ತ ಭೋಜನಮಾಡಿ ಸ್ವಲ್ಪ ಹೊತ್ತು ಅಲ್ಲಿದ್ದು ಹೇಮಪ್ರಭಾ ದೇವಿಯ ಅಪ್ಪಣೆಯನ್ನು ಹೊಂದಿ ಹೊರಟುಹೋದನು.

ದಶಮಿಯ ದಿನ ಇಂದಿರೆಯ ಸಮೇತಳಾಗಿ ಹೇಮಪ್ರಭಾ ದೇವಿಯು ರಾಜಮಂದಿರಕ್ಕೆ ಹೊರಟಳು. ದಾರಿಯಲ್ಲಿ ಆ ದೇವಿಗೆ ಸಂತತ ಧಾರೆಯಾಗಿ ಕಣ್ಣೀರು ಸುರಿಯಲಾರಂಭಿಸಿತು. "ಹಾ! ದೈವವೇ! ಯಾವ ರಾಜಾಂತಃ ಪುರಕ್ಕೆ ಅಧಿಕಾರಿಣಿಯಾಗಿ, ವಿಕ್ರಮಸಿಂಹನ ಪಟ್ಟಮಹಿಷಿಯೆನಿಸಿಕೊಂಡಿ ದ್ದೆನೋ ಆ ಉದಯಪುರಿಯ ಅರಮನೆಗೆ ಇಂದಿನ ದಿನ ಮದನಪಾಲನ ಸೂಳೆ ಯೆಂದು ಜನಗಳು ನಿಂದಿಸುತ್ತಿರಲು ಈ ವಿಧವಾಗಿ ಹೋಗಬೇಕಾಗಿ ಬಂದಿತಲ್ಲ! ನನ್ನ ಸರ್ವಸುಖಕ್ಕೂ ನಾಶಕರಳಾಗಿರುವ ಮುರಳಿಯನ್ನು ನೋಡುವು ದಕ್ಕೂ, ಇದಿರಿನಲ್ಲಿ ನಮ್ರವಾಗಿ ನಿಂತುಕೊಳ್ಳುವುದಕ್ಕೂ ವಿಧಾತನು ನನ್ನ ಹಣೆಯಲ್ಲಿ ಏಕೆ ಬರೆದನೋ ತಿಳಿಯದಲ್ಲಾ! ನನ್ನ ಜೀವಿತವು ಎಷ್ಟು ಅಲ್ಪವಾ ಯಿತು!" ಎಂದು ಬಹು ವಿಧವಾಗಿ ವಿಲಪಿಸಿದಳು.

**ಇಂದಿರೆ**— ಜನನೀ! ಈಗ ದುಃಖಕ್ಕೆ ಸಮಯವಲ್ಲ. ನೀವು ಪ್ರಸನ್ನ ಮುಖವನ್ನು ತೋರಿಸಬೇಕು.

ಗಾಡಿಯು ಸಿದ್ಧವಾಗಿ ಬಂದು ಸೇರಿತು. ಬಂದಿದ್ದ ಬಂಧುವರ್ಗದವರೆಲ್ಲರೂ ಭೋಜನ ತೀರಿಸಿ ತಮ್ಮ ತಮ್ಮ ಮನೆಗಳಿಗೆ ಹೋಗಿದ್ದರು. ಹೇಮಪ್ರಭಾ ದೇವಿಯೊಡನೆ ಭೋಜನ ಮಾಡಲು ಇಷ್ಟವಿಲ್ಲದೆ ರಾಜಮಾತೆಯು ತನ್ನ ಅಂತಃ ಪುರದಲ್ಲಿಯೇ ಉಂಡು ವಿಶ್ರಮಿಸಿದ್ದಳು. ಅರಸನು ಮಾತ್ರ ಮಧ್ಯಾಹ್ನ ಭೋಜನಕ್ಕೆ ದೇವಿಯು ಬಾರದೆ ಇರುವುದಕ್ಕೆ ಕಳವಳಗೊಂಡು ಕಾರಣವೇನಿರ ಬಹುದೆಂದು ಪುನಃ ಪುನಃ ಫಲ್ಗುನನನ್ನು ವಿಚಾರಿಸುತ್ತ ಮಹಡಿಯಲ್ಲಿ ಅತ್ತಿತ್ತ ಸುತ್ತುತ್ತಿದ್ದನು. ಗಾಡಿಯು ಬಂದು ನಿಂತ ಒಡನೆಯೇ ಓಡಿ ಬಂದು ಬಾಗಿಲು ತೆಗೆದು ಹೇಮಪ್ರಭಾ ದೇವಿಯನ್ನು ಇಳಿಸುವುದಕ್ಕೆ ಕೈ ಚಾಚಿದನು. ಹೇಮ ಪ್ರಭಾದೇವಿಯು ಅವನ ಕೈಯನ್ನೇ ಸ್ಪರ್ಶಿಸದೆ ಇಂದಿರೆಯ ಕೈಯನ್ನು ಹಿಡಿದುಕೊಂಡು ಮಹಲನ್ನು ಪ್ರವೇಶಿಸಿದಳು. ಫಲ್ಗುನನು ಇಂದಿರೆಯನ್ನು ಹಿಂಬಾಲಿಸಿಯೇ ಹೋಗುತ್ತಿದ್ದನು. "ಅತ್ತೆಯವರು ಎಲ್ಲಿದ್ದಾರೆ?" ಎಂದು ಅರಸನನ್ನು ಹೇಮಪ್ರಭಾ ದೇವಿಯು ಕೇಳಿದಳು.

**ಮದನಪಾಲ**— ದೇವಿ! ಬಹಳ ತಲೆನೋವಿನಿಂದ ಈ ದಿನ ಬಾಧೆ ಪಡುತ್ತಿದ್ದುದರಿಂದ ಹೊರಗೆ ಬಾರದೆ ತನ್ನ ಅಂತಃಪುರದಲ್ಲಿಯೇ ಭೋಜನ ಮಾಡಿದಳು.

**ಹೇಮಪ್ರಭಾದೇವಿ**— "ಹಾಗಾದರೆ, ನಾನೇ ಹೋಗಿ ಆಕೆಯ ದರ್ಶನ

ಮಾಡಿಕೊಂಡು ಆ ಮೇಲೆ ಭೋಜನಕ್ಕೆ ಬರುವೆನು" ಎಂದು ಹೇಳಿ ಇಂದಿರೆಯ ಸಮೇತ ನಡೆದಳು.

ರಾಜಮಾತೆಯು ಶಯ್ಯಾಗೃಹಕ್ಕೆ ಬರುತ್ತಲೇ ಹೇಮಪ್ರಭಾ ದೇವಿಗೆ ಕ್ರೋಧ ದುಃಖಗಳು ದೊಡ್ಡ ದೊಡ್ಡ ಅಲೆಗಳಂತೆ ಮನಸ್ಸಿನಲ್ಲಿ ಹೊರಹೊರಡಲಾರಂಭಿಸಿದುವು. ಒಳಗೆ ಹೋಗುವುದಕ್ಕೆ ಸಾಧ್ಯವಿಲ್ಲದೆ ಬಾಗಿಲಲ್ಲಿಯೇ ನಿಂತಳು. ಆಕೆಯನ್ನು ನೋಡಲು ಸಂಶಯಪಡುತ್ತಿರುವಳೆಂದು ತಿಳಿದ ಮದನಪಾಲನು ಒಳಕ್ಕೆ ಹೋಗಿ 'ಅಮ್ಮಾ' ಎಂದು ಕೂಗಿದನು.

**ಮುರಳಾದೇವಿ—** ಕುಮಾರಾ! ಹೇಮ, ಬಂದಿರುವಳೇ?

**ಮದನಪಾಲ—** ಇಕೋ, ಇಲ್ಲಿ ಬಂದು ನಿಂತಿರುವಳು.

**ಮುರಳಾದೇವಿ—** ಅಮ್ಮಾ! ಹೇಮಾ! ಒಳಗೆ ಬಾ.

ಹೇಮಪ್ರಭಾ ದೇವಿಯು ತನ್ನ ಕೋಪತಾಪಗಳನ್ನೆಲ್ಲ ಸಂವರಣಮಾಡಿಕೊಂಡು ಅತ್ತೆಗೆ ನಮಸ್ಕರಿಸಿದಳು. ಚತುರಳಾದ ಮುರಳಾ ದೇವಿಯು ಕಣ್ಣೀರಿನಿಂದಲೂ ಗದ್ಗದ ಕಂಠದಿಂದಲೂ ತನ್ನ ದುಃಖವನ್ನು ಹೊರಪಡಿಸುತ್ತ ಹೇಮಪ್ರಭಾ ದೇವಿಯನ್ನು ತಾನೇ ಮೇಲಕ್ಕೆತ್ತಿ ತನ್ನ ಹಾಸಿಗೆಯ ಮೇಲೆ ಕುಳಿತುಕೊಳ್ಳಲು ನಿಯಮಿಸಿ "ಅಮ್ಮಾ! ಹೇಮಪ್ರಭೆ! ನಿನ್ನ ಗಂಡನು ಜನ್ಮಾಂತ್ಯದ ವರೆಗೂ ಮರೆಯಲಾರದ ಈ ದುಃಸ್ಥಿತಿಯನ್ನು ನನಗೆ ತಂದು ಇಟ್ಟನು. ಅಲ್ಲದೆ, ಪೀವಾರ ವಂಶಕ್ಕೆ ಕಳಂಕವನ್ನುಂಟುಮಾಡಿದನು. ಈಗ ನೀನು ನನ್ನ ದುಃಖವನ್ನು ಹೋಗಲಾಡಿಸಲು ಯತ್ನಿಸಿ ನನ್ನ ದತ್ತಪುತ್ರನಾದ ಮದನಪಾಲನನ್ನು ವಿವಾಹಮಾಡಿಕೊಂಡರೆ ನನಗೆ ತೃಪ್ತಿಯಾಗುವುದು. ನಾನು ಎಂದಿಗೂ ನಿರರ್ಥಕವಾದ ಮಾತುಗಳನ್ನು ಆಡತಕ್ಕವಳಲ್ಲ. ಈ ಕಾರ್ಯವು ಶಾಸ್ತ್ರಸಮ್ಮತವು. ನನ್ನನ್ನು ತೃಪ್ತಿಪಡಿಸಿದರೆ ನಿನಗೆ ಸಕಲೈಶ್ವರ್ಯಗಳೂ ಕೈಗೂಡುವುವು.

ಹೇಮಪ್ರಭಾ ದೇವಿಯು ಈ ಮಾತುಗಳನ್ನೆಲ್ಲ ಆಲೈಸಿ "ನಿಮ್ಮ ಹಿತೋಪದೇಶವನ್ನು ಗ್ರಹಿಸಿರುವೆನು. ತಕ್ಕಂತೆ ನಡೆದುಕೊಳ್ಳುವೆನು" ಎಂದು ಹೇಳಿ ನಮಸ್ಕಾರಮಾಡಿ ಹೊರಟುಹೋದಳು. ಹಜ್ಜೆ ಇಡುವಷ್ಟರಲ್ಲಿಯೇ ರಾಜಮಾತೆಯು "ಹೇಮಾ! ನಿನ್ನಲ್ಲಿ ಒಬ್ಬ ನೂತನ ಸಖಿ ಬಂದಿರುವಳೆಂದು ಕೇಳಿದೆನು. ಅವಳು ನಿನ್ನೊಡನೆ ಈಗ ಇಲ್ಲಿಗೆ ಬಂದಿದ್ದಾಳೆಯೇ?" ಎಂದು ಕೇಳಿದಳು.

**ಹೇಮಪ್ರಭಾ ದೇವಿ—** ಇಂದಿರೆ! ಇಲ್ಲಿ ಬಾ. ರಾಜಮಾತೆಗೆ ನಮಸ್ಕರಿಸು.

ಇಂದಿರೆಯು ನಮಸ್ಕರಿಸಿ ನಮ್ರತೆಯಿಂದ ನಿಂತಳು. ಅವಳನ್ನು ನೋಡಿದ ಕೂಡಲೆ ಮುರಳಾದೇವಿಗೆ ದೇಹವೆಲ್ಲವೂ ಕಂಪಿಸಿತು. ಇದೇನಾಶ್ಚರ್ಯ.

ಇವಳೊಬ್ಬ ದಾಸಿಯೇ? ಹಾಗಿರಲಾರದು. ಇವಳು ಹೇಮಪ್ರಭೆಯ ಮಗಳಂತಲೇ ತೋರುವುದು. ಆದರೆ, ದೇಹದ ಬಣ್ಣ ಮಾತ್ರ ಬೇರೆಯಾಗಿರುವುದು. ಆ ಹುಡುಗಿಯೇ ಆಗಿದ್ದ ಪಕ್ಷದಲ್ಲಿ ತನ್ನ ತಾಯಿಗೆ ತನ್ನ ಸಮಾಚಾರವನ್ನು ಹೇಳದಿರುವಳೆ? ಹೇಗಾದರೂ ಇವಳನ್ನು ನನ್ನ ಹತ್ತಿರವೇ ಇಟ್ಟುಕೊಂಡು ಪರೀಕ್ಷಿಸಿ ಶತ್ರುಶೇಷವಾಗಿದ್ದರೆ ನಿರ್ಮೂಲವಮಾಡಲು ಯತ್ನಿಸುವೆನು. ಫಲ್ಗುನನು ಇರುವವರೆಗೂ ನನಗೆ ಅಸಾಧ್ಯವಾದ ಕೆಲಸವು ಏನಿರುವುದು?– ಎಂದಾಲೋಚಿಸಿ "ಬಾಲೆ! ನಿನಗೆ ತಂದೆತಾಯಿಗಳಿದ್ದಾರೆಯೆ?" ಎಂದು ಕೇಳಿದಳು.

**ಇಂದಿರೆ**— ಮಹಾರಾಜ್ಞಿ! ನನಗೆ ತಾಯಿ ಇಲ್ಲ. ತಂದೆ ಇದ್ದಾರೆ.

**ಮುರಳಾದೇವಿ**— ಮಗುವೆ! ನೀನು ತುಂಬ ಬುದ್ಧಿಶಾಲಿಯೆಂದು ತೋರುತ್ತದೆ. ನಿನ್ನನ್ನು ನೋಡಿ ನಾನು ತುಂಬ ತೃಪ್ತಳಾಗಿರುವೆನು. ರಾಜಸ್ತ್ರೀಯರಲ್ಲಿ ಮಾತ್ರವಲ್ಲದೆ ಇತರ ಸ್ತ್ರೀಯರಲ್ಲಿಯೂ ಸೌಂದರ್ಯ ಗಾಂಭೀರ್ಯಗಳಿರುವುವೆಂದು ನಿನ್ನಿಂದ ತಿಳಿದುಕೊಂಡೆ. ನೀನು ಮತ್ತೊಂದು ಸಲ ನನ್ನ ಸೊಸೆಯ ಸಂಗಡ ಇಲ್ಲಿಗೆ ಬಂದಾಗ ನಿನ್ನ ಸಂಗೀತವನ್ನು ಕೇಳಬೇಕೆಂದು ಆಶಿಸುತ್ತೇನೆ.

**ಇಂದಿರೆ**—ಆಜ್ಞೆಯಪ್ರಕಾರ ನಡೆದುಕೊಳ್ಳುವೆನು– ಎಂದು ಹೇಳಿ ಹೊರಗೆ ಬಂದಳು. ಎಲ್ಲರೂ ಭೋಜನವನ್ನು ತೀರಿಸಿಕೊಂಡು ವಿಶ್ರಾಂತಿ ಮಂದಿರದಲ್ಲಿ ಕುಳಿತುಕೊಂಡರು.

**ಮದನಪಾಲ**— ದೇವೀ! ನಿನ್ನ ನೂತನ ಸಖಿಯು ಮಂಚಿನವಳಿಗಿಂತಲೂ ಸುಂದರಿಯು. ಆದರೆ, ಬಣ್ಣ ಮಾತ್ರ ಚೆನ್ನಾಗಿಲ್ಲ. ಹತ್ತಿರ ಬಂದು ನೋಡಿದ ಹೊರತು ಅವಳ ಸೌಂದರ್ಯವು ಗೋಚರಿಸುವುದಿಲ್ಲ. ಆದುದರಿಂದ ಇವಳೊಬ್ಬ ಸಾಮಾನ್ಯ ಸ್ತ್ರೀಯೆಂದು ಹೇಳಬೇಕಾಗುವುದು. ಈ ಹುಡುಗಿಯು ಹೇಗೆ ನಿನ್ನಲ್ಲಿ ಬಂದು ಸೇರಿದಳು?

**ಹೇಮಪ್ರಭಾದೇವಿ**— ಇವಳು ನಮ್ಮ ವರ್ತಕರ ಸಂಗಡ ಇಲ್ಲಿಗೆ ಬಂದಳಂತೆ. ಒಬ್ಬ ಕಾಯಸ್ಥ ಕುಟುಂಬದಲ್ಲಿ ಬೆಳೆದವಳಂತೆ. ಇಲ್ಲಿಗೆ ಬಂದ ಮೇಲೆ ರಾಜಗೃಹದಲ್ಲಿರಬೇಕೆಂಬ ಆಸೆಯಿಂದ ನಮ್ಮ ಹೂವಿನ ಮುದುಕಿಯ ಮೂಲಕ ನನ್ನಲ್ಲಿಗೆ ಬಂದಳು. ಅವಳ ಚಾತುರ್ಯವನ್ನು ನೋಡಿ ನನ್ನಲ್ಲಿ ಇಟ್ಟುಕೊಂಡೆನು. ತೀರ್ಥಯಾತ್ರೆಗೆ ಹೋದ ಅವಳ ತಂದೆಯು ಬಂದ ಕೂಡಲೇ ಅವಳು ಹೊರಟುಹೋಗುವಳು.

**ಮದನಪಾಲ**— ದೇವಿ! ನಿನಗೆ ಅನಿಷ್ಟವಾದ ಮಾತನಾಡಿದೆನೆಂದು ಎಣಿಸಬೇಡ. ನಿನಗೆ ಯಾರು ಮಿತ್ರರೋ ಅವರು ನನಗೂ ಮಿತ್ರರೇ ಸರಿ. ನಿನಗೆ

ಹಿತವಾದುದೇ ನನಗೂ ಅಂಗೀಕಾರವು. ಆ ಹುಡುಗಿಯು ಪರದೇಶಸ್ಥಳು. ನೀನು ಈ ಅಂತಃಪುರದಲ್ಲಿದ್ದರೆ ಯಾವ ದೇಶದವರು ಬಂದು ನಿನ್ನ ಸಮೀಪದಲ್ಲಿದ್ದರೂ ಭಯವಿಲ್ಲ. ನೀನು ನಿನ್ನ ಅಂತಃಪುರದಲ್ಲಿ ಏಕಾಂಗಿಯಾಗಿರುವಾಗ ಆರಾದರೂ ಶತ್ರುಗಳು ಬಂದು ನಿನಗೆ ಕೇಡುಕನ್ನುಂಟುಮಾಡುವರೇನೋ ಎಂದು ಹೀಗೆ ಕೇಳಿದೆನಲ್ಲದೆ ಬೇರೊಂದಲ್ಲ.

**ಹೇಮಪ್ರಭಾದೇವಿ—** ರಾಜೇಂದ್ರಾ! ನನಗೆ ಈ ಲೋಕದಲ್ಲಿ ಶತ್ರುಗಳು ಇರುವುದೂ ಇಲ್ಲದ್ದೂ ತಿಳಿದೇ ಇದೆ. ನಾನು ಯಾರಿಗೆ ಏನು ಅಪರಾಧವನ್ನು ಮಾಡಿರುವೆನು? "ನಿಮ್ಮಿಂದ ನಿರಂತರ ದುಃಖವನ್ನು ಅನುಭವಿಸುತ್ತಿದ್ದೇನೆ" ಎಂದು ನಿನ್ನ ತಾಯಿಯು ಹೇಳಿದ ಮಾತು ನನ್ನ ಹೃದಯವನ್ನು ದಹಿಸುತ್ತಿದೆ. ಏಕೆಂದರೆ, ವಿವಾಹವಾಗಿ ನಮ್ಮ ಮನೆಗೆ ಬಂದ ದಿನದಿಂದಲೂ ನಿನ್ನ ತಾಯಿಯನ್ನು ನನ್ನ ತಾಯಿಯಂತೆ ಭಾವಿಸಿ ಸೇವೆಮಾಡುತ್ತಿದ್ದೆನು. ನನ್ನ ಗಂಡನು ಆಕೆಯ ಹಿರಿಯಮಗನು. ಪರಮ ಧಾರ್ಮಿಕನೆಂದು ಆಕೆಗೆ ಚೆನ್ನಾಗಿ ತಿಳಿದಿದ್ದರೂ ನನ್ನ ಕರ್ಮಫಲದಿಂದಲೋ ಅಥವಾ ಆ ಮಹಾನುಭಾವನ ಸಂಚಿತದಿಂದಲೋ ರಾಜವಧೆಯ ದ್ರೋಹವನ್ನು ಆತನ ಮೇಲೆ ಆರೋಪಿಸಿ ಆತನನ್ನು ಅಡವಿಪಾಲು ಮಾಡಿದಳು. ಅರಗಿಣಿಯಂತಿದ್ದ ಮಗುವು ಕೂಡ ನನಗೆ ದಕ್ಕದಂತಾಯಿತು. ಹೀಗೆ ಅನಾಥ ಸ್ಥಿತಿಯಲ್ಲಿರುವುದರಿಂದ ಯಾರು ಏನು ಮಾತನಾಡಿದರೂ ಸುಮ್ಮನೆ ಇರಬೇಕಾದ ವಿಧಿಯು ನನಗೆ ಪ್ರಾಪ್ತವಾಗಿರುವುದು.

**ಮದನಪಾಲ—** ದೇವಿ! ಮನ್ನಿಸು. ಕೋಮಲವಾದ ನಿನ್ನ ಹೃದಯವನ್ನು ನೋಯಿಸಬೇಕೆಂಬುದು ನನ್ನ ಮನೋಗತವಲ್ಲ. ನಾನು ಹೇಳಿದ ಆಲೋಚನೆಯಿಂದ ನಿನಗೆ ಸಕಲ ಸುಖಗಳೂ ಕೈಗೂಡುವುವು. ಈ ಗತಗೋಷ್ಠಿಯಿಂದ ಉಪಯೋಗವೇನು? ನಿನ್ನಂತಹ ವೀರ ರಮಣಿಯರು ಅದರಿಂದ ಚಲಿತರಾಗಕೂಡದು.

ದೇವಿಗೆ ಪ್ರತ್ಯುತ್ತರ ಕೊಡಲು ಇಷ್ಟ ಬರಲಿಲ್ಲ. ತಾನು ಇಷ್ಟು ದೂರ ಮಾತನಾಡಿದುದು ಸಹ ತಪ್ಪೆಂದು ತಿಳಿದಳು. "ಅರಸನೇ! ಮನ್ನಿಸು. ವಿಧಿಯಂತೆ ಸರ್ವವೂ ನಡೆಯುವುದು. ಇಂತಹ ಕಷ್ಟದಲ್ಲಿ ನನ್ನ ಪಕ್ಷವನ್ನು ಇಷ್ಟಾದರೂ ನೀನು ಅಭಿಮಾನಿಸುತ್ತಿರುವುದು ನನ್ನ ಪುಣ್ಯವೇ ಸರಿ. ಮನೆಗೆ ಹೋಗಿಬರುವೆನು" ಎಂದು ಹೇಳಿ ಹೇಮಪ್ರಭಾ ದೇವಿಯು ತನ್ನ ಅಂತಃಪುರಕ್ಕೆ ತೆರಳಿದಳು.

ಮದನಪಾಲನು ತನ್ನ ಹಾಸಿಗೆಯಲ್ಲಿ ಕುಳಿತುಕೊಂಡು "ಅಯ್ಯೋ! ನನ್ನ ತಾಯಿ ಎಷ್ಟು ನಿಷ್ಠುರವಾಗಿ ಮಾತನಾಡಿದಳು! ಹೇಮಪ್ರಭಾ ದೇವಿಯ

ಮನಸ್ಸಿಗೆ ಎಷ್ಟು ಬಾಧೆಯುಂಟಾಗಿರಬೇಕು! ಪಾಪ! ಅಬಲೆ! ಏನು ಮಾಡು ವಳು! "ನೀನೊಬ್ಬನು ನನ್ನ ಪಕ್ಷದಲ್ಲಿ ನಿಂತು ಅಭಿಮಾನಿಸಿರುವೆ" ಎಂದು ಹೇಳಿದಳಲ್ಲ! ಅದೇ ತನ್ನ ಪ್ರೀತಿಯನ್ನು ತೋರಿಸುವ ವಿಧವು. ಹೇಮಪ್ರಭಾ ದೇವಿಯು ಈಚೀಚೆಗೆ ನನ್ನನ್ನು ಪ್ರೇಮಿಸಲಾರಂಭಿಸಿದ್ದಾಳೆ. ಈಗ ಬಂದಿರುವ ಹೊಸ ಹುಡುಗಿಯು ನನಗೆ ಏನಾದರೂ ಕೆಡುಕು ಉಂಟುಮಾಡುವಳೆಂದು ನನ್ನ ತಾಯಿಯೂ ಫಲ್ಗುನನೂ ಸಂಶಯ ಪಟ್ಟಿದ್ದಾರೆ. ಅದು ಕೂಡ ಆಲೋ ಚಿಸತಕ್ಕದ್ದೇ ಸರಿ—ಎಂದೆಂದು ಕೊಂಡು ನಿದ್ರೆ ಹೋದನು.

# ೧೧ನೆಯ ಅಧ್ಯಾಯ

**ಹೇಮಪ್ರಭಾದೇವಿ**— ಅಮ್ಮಾ! ಇಂದಿರೇ! ಅಲ್ಲಿರುವ ಪತ್ರವನ್ನು ಓದು. ಅದು ಬಹುಶಃ ಮಾಲವೇಶ್ವರನಾದ ಲಲಿತಕುಮಾರನು ಬರೆದಿರಬಹುದು.

ಲಲಿತಕುಮಾರನ ಮಾತು ಕಿವಿಗೆ ಬಿದ್ದ ಕೂಡಲೇ ಇಂದಿರೆಯು ಪುಳಕಿತ ಗಾತ್ರಳಾದಳು. ಆ ಸಮಯದಲ್ಲಿ ತನ್ನ ಮನಃಸ್ಥಿತಿಯನ್ನು ಅಡಗಿಸಿಕೊಂಡು ಆ ಪತ್ರವನ್ನು ಓದಲಾರಂಭಿಸಿದಳು.

ಸೌಭಾಗ್ಯಶಾಲಿನಿಯಾದ ಶ್ರೀ ಮಹಾರಾಜ್ಞೀಯವರ ಚರಣ ಸನ್ನಿಧಾ ನಂಗಳಿಗೆ ಸಾಷ್ಟಾಂಗ ನಮಸ್ಕಾರಗಳು.

ದೇವಿಯವರ ಚರಣಸಂದರ್ಶನಕ್ಕಾಗಿ ಬರಬೇಕೆಂದಿದ್ದೇನೆ. ಕೆಲಸಗಳ ತೊಂದರೆಯಿಂದ ತಮಗೆ ಇದುವರೆಗೂ ಬರೆಯದಿದ್ದ ಅಪರಾಧವನ್ನು ಮನ್ನಿಸ ಬೇಕು. ನಾಳೆಯ ದಿನ ತಮ್ಮ ಸನ್ನಿಧಾನವನ್ನು ಸೇರುವೆನು.

ಇತಿ ತಮ್ಮ ಸೇವಕ,
ಲಲಿತಕುಮಾರ.

**ಹೇಮಪ್ರಭಾದೇವಿ**—ಇಂದಿರೆ! ಈ ರಾಜಕುಮಾರನು ನನ್ನನ್ನು ತಾಯಿ ಗಿಂತಲೂ ಅತಿಶಯವಾಗಿ ಪ್ರೀತಿಸುವನು. ಇವನ ತಂದೆತಾಯಿಗಳು ಸತ್ತು ಹೋದ ಬಳಿಕ ಇವನನ್ನು ನಾನೇ ಸಾಕಿದೆನು. ಇವನನ್ನು ನೋಡಿದರೆ ನನ್ನ ಗಂಡನಿಗೆ ಬಹು ಪ್ರೀತಿ. ನಾನು ಪ್ರಸವಿಸಿದ ದಿನವೇ ನನ್ನ ಪ್ರಿಯನು ಸೂತಿಕಾಗೃಹಕ್ಕೆ ಬಂದು ದೇವತೆಯೋಪಾದಿಯಲ್ಲಿ ಪ್ರಕಾಶಿಸುತ್ತಿದ್ದ ತನ್ನ ಮಗುವನ್ನು ನೋಡಿ "ಪ್ರಿಯೆ! ಲಲಿತಕುಮಾರನು ನಮ್ಮ ಅಳಿಯನು"

ಎಂದು ಹೇಳಿದನು. ಈಗ ಆ ಕಥೆಯನ್ನು ನೆನೆಸಿಕೊಂಡರೆ ಉಪಯೋಗವೇನು? ಮದನಪಾಲನನ್ನು ಕೂಡ ಈಗ ಭೋಜನಕ್ಕೆ ಕರೆಯುವೆನು. ಇಲ್ಲದಿದ್ದರೆ ಆತನು ಬೇರೆ ವಿಧವಾಗಿ ತಿಳಿದುಕೊಳ್ಳಬಹುದು.

**ಇಂದಿರೆ—** ದೇವೀ! ನಿಮ್ಮ ಇಷ್ಟಾನುಸಾರ ನಡೆಯಿಸಬಹುದು.

ಹೇಮಪ್ರಭಾದೇವಿಯ ಆಜ್ಞಾನುಸಾರ ಅಂತಃಪುರದ ಅಲಂಕಾರವೆಲ್ಲವೂ ಮುಗಿಯಿತು. ಇಂದಿರೆಯ ಹೃದಯದಲ್ಲಿ ಭಯಸಂತೋಷಗಳಿಂದ ಕೂಡಿದ ನಾನಾ ವಿಧದ ಆಲೋಚನೆಗಳು ಬಾಧಿಸುತ್ತಿದ್ದರೂ ಅಡಿಗೆ ಮುಂತಾದ ಕಾರ್ಯ ಗಳನ್ನು ಬಲು ಅಕ್ಕರೆಯಿಂದ ಮಾಡಿಸುತ್ತಿದ್ದಳು. "ನನ್ನ ಪ್ರಾಣನಾಥನ ದರ್ಶನವನ್ನು ಮನಸದಣಿಯ ಮಾಡಬೇಕೆಂದರೆ ನನ್ನ ವಂಶನಾಶಕನಾದ ಮದನ ಪಾಲನ ದರ್ಶನವನ್ನು ಸಹ ಮಾಡಬೇಕಾಗಿ ಬಂದಿದೆ. ಆಗಲಿ. ಶತ್ರುಮಿತ್ರರಲ್ಲಿ ಸಮವಾಗಿರಬೇಕೆಂದು ಹಿರಿಯರು ಹೇಳಲಿಲ್ಲವೆ? ಅಷ್ಟು ಶಾಂತಚಿತ್ತತೆಯು ಇಷ್ಟು ಚಿಕ್ಕ ವಯಸ್ಸಿನಲ್ಲಿ ನನಗೆ ಹೇಗೆ ಬರುವುದು? ನಿರ್ಬಂಧ ಸಂದರ್ಭ ಗಳಿಂದ ಅದು ಬರಲೇ ಬರುವುದು. ಎಲ್ಲವನ್ನೂ ಸಹಿಸಿಕೊಂಡು ನನ್ನ ಪ್ರಿಯ ನನ್ನು ದರ್ಶಿಸುವೆನು.

ಸಾರ್ವಾಟುಗಳ ಶಬ್ದವು ಕೇಳುತ್ತಲೇ ಹೇಮಪ್ರಭಾ ದೇವಿಯು ಹೊರ ಬಾಗಲಿಗೆ ಬರುತ್ತಿದ್ದಳು. ಅಷ್ಟರಲ್ಲಿಯೇ ಮದನಪಾಲನೂ, ಲಲಿತಕುಮಾರನೂ ಒಳಕ್ಕೆ ಬಂದರು. ಹೇಮಪ್ರಭಾ ದೇವಿಯು ಅವರಿಬ್ಬರಿಗೂ ಸ್ವಾಗತವನ್ನು ಕೊಟ್ಟಳು. ರಾಜನು ಹೇಮಪ್ರಭಾ ದೇವಿಗೆ ಅಭಿವಂದಿಸಿ ವಿಶ್ರಾಂತಿ ಮಂದಿ ರಕ್ಕೆ ಹೋದನು. ಆ ದಿನ ಕೇವಲ ಆಪ್ತರಾದ ರಾಜಬಂಧುಗಳು ಮಾತ್ರ ಬಂದಿದ್ದರು. ಎಲ್ಲರೂ ಸಂಭಾಷಣೆ ಮಾಡಿಕೊಂಡಿರುವಾಗ ಲಲಿತಕುಮಾರನು ಹೇಮಪ್ರಭಾ ದೇವಿಗೆ ನಮಸ್ಕಾರ ಮಾಡಿದನು. ಆತನನ್ನು ಆಶೀರ್ವದಿಸಿ ಮೇಲಕ್ಕೆತ್ತಿ "ಕುಮಾರಾ! ಈ ದಿನ ನಿನ್ನನ್ನು ನೋಡಿ ನನ್ನ ಮನಸ್ಸಿಗೆ ತುಂಬ ಸಂತೋಷವಾಯಿತು. ನೀನು ಕಳ್ಳರ ಕೈಗೆ ಸಿಕ್ಕಿ ಹೇಗೆ ತಪ್ಪಿಸಿಕೊಂಡು ಬಂದೆ?" ಎಲ್ಲವನ್ನೂ ವಿಸ್ತಾರವಾಗಿ ತಿಳಿಸು.

**ಲಲಿತಕುಮಾರ—** ಜನನಿ! ನಿಮ್ಮ ಆಶೀರ್ವಾದ ಬಲದಿಂದ ನಾನು ಅಂತಹ ವಿಪತ್ತಿನಿಂದ ಪಾರಾದೆನು.

ಆಗ ಹೇಮಪ್ರಭಾ ದೇವಿಯ ದುರ್ಗದೊಳಗಿನ ರಾಜಸ್ತ್ರೀಯರೆಲ್ಲರೂ ಲಲಿತಕುಮಾರನನ್ನು ನೋಡಲು ಬಂದರು. ಅವರನ್ನೆಲ್ಲಾ ಆದರದಿಂದ ಸತ್ಕರಿಸಿ ಅವರೊಡನೆ ಮಾತನಾಡುತ್ತಿರಲು ಇಂದಿರೆಯನ್ನು ಹೇಮಪ್ರಭಾ ದೇವಿಯು ಕರೆದುಕೊಂಡು ಹೋಗಿ "ಕುಮಾರ! ನನ್ನ ಹೊಸ ಸಖಿಯನ್ನು ನೋಡಿ

ದೆಯಾ? ಈಕೆ ಬರ್ಮಾದೇಶದಿಂದ ಬಂದಿರುವಳು. ಹಿಂದೂ ಸ್ತ್ರೀಯಂತೆಯೇ ಇರುವಳಲ್ಲದೆ ಬಹಳ ವಿದ್ಯಾವತಿಯೂ ಆಗಿರುವಳು" ಎಂದು ತೋರಿಸಿದಳು. ಆ ಮಾತನ್ನು ಕೇಳುತ್ತಲೇ ಲಲಿತಕುಮಾರನು ತನ್ನನ್ನು ತಾನೇ ಮರೆತನು. ಇಂದಿರೆಯ ಮುಖವು ಬಿಳುಪೇರಿತು. ನಾನು ಇಲ್ಲಿರುವುದನ್ನು ನೋಡಿ ನನ್ನ ಪ್ರಿಯನು ಏನೆಂದುಕೊಳ್ಳುವನೋ– ಎಂದು ಚಿಂತಿಸಿದಳು.

**ಹೇಮಪ್ರಭಾದೇವಿ**—ಕುಮಾರಾ! ಕಳ್ಳರ ವಶದಲ್ಲಿ ಸಿಕ್ಕಿದ್ದಾಗ ನೀನು ಎಲ್ಲಿದ್ದೆ? ಈ ಹುಡುಗಿಯನ್ನು ನೀನು ಯಾವಾಗಲಾದರೂ ನೋಡಿದ್ದ ಜ್ಞಾಪಕವಿದೆಯೇ?

**ಲಲಿತಕುಮಾರ**— ಜನನಿ! ಬರ್ಮಾದೇಶವಲ್ಲ. ಆದರೆ, ಅದರ ಕೆಳಗಣ ಭಾಗಗಳಲ್ಲಿ ಚಿಕ್ಕ ಚಿಕ್ಕ ದ್ವೀಪಗಳು ಅನೇಕವಿರುವುವು. ಅವುಗಳಲ್ಲಿ ರತ್ನದ್ವೀಪವೆಂಬುದೊಂದು. ಅಲ್ಲಿಯೇ ಸಮುದ್ರದ ಕಳ್ಳರಿರುವುದು. ಅಲ್ಲಿ ಶೈಲಮಾಲೆಗಳಿವೆ. ಆ ಪರ್ವತಗಳಿಗೆ ಎರಡು ಮೂರು ಮೈಲಿಗಳ ದೂರದಲ್ಲಿ ಈ ಹುಡುಗಿಯ ತಂದೆಯ ಗೃಹವಿರುವುದು. ಈಗ ನೀವು 'ಇಂದಿರೆ' ಎಂದು ಕೂಗಿದಾಗಲೇ ಇವಳೆಂದು ನಾನು ನಿಶ್ಚಯಿಸಿದೆನು.

**ಹೇಮಪ್ರಭಾದೇವಿ**— ಇಂದಿರೇ! ಇಲ್ಲಿ ಬಾ– ಎಂದ ಕೂಡಲೇ ಇಂದಿರೆಯು ಬಂದಳು. 'ಅಮ್ಮಾ! ಇಂದಿರೆ! ಈ ಅರಸನನ್ನು ನೀನು ನೋಡಿರುವೆಯಾ?'

**ಇಂದಿರೆ**— ದೇವಿ! ಇವರು ಚಂಡಸೇನನ ಕಾರಾಗೃಹದಲ್ಲಿದ್ದು ಬಹಳ ರೋಗಗ್ರಸ್ತರಾದರು. ಬಿಡುಗಡೆಯಾದ ಒಡನೆಯೇ ಇವರ ಆಪ್ತ ಸೇವಕನು ಇವರನ್ನು ನಮ್ಮ ಮನೆಗೆ ಎತ್ತಿಕೊಂಡು ಬಂದನು. ಆರೋಗ್ಯವಾಗುವವರೆಗೂ ನಮ್ಮ ಮನೆಯಲ್ಲಿ ಇದ್ದರು. ಇವರು ಹೊರಟುಹೋದ ಮೇಲೆ ನನ್ನ ತಂದೆಯು ತೀರ್ಥಯಾತ್ರೆಗೆ ಹೋದರು.

ಇದೆಲ್ಲವನ್ನೂ ಶ್ರದ್ಧೆಯಿಂದ ಕೇಳುತ್ತಿದ್ದ ಲಲಿತಕುಮಾರನು ಇದೇನಾಗಿರಬಹುದೆಂದು ಆಲೋಚಿಸಲು ಉಪಕ್ರಮಿಸಿದನು. ಆದರೆ, ಅವನಿಗೆ ಏನೂ ತೋರಲಿಲ್ಲ.

ಮದನಪಾಲನು ಇದೆಲ್ಲವನ್ನೂ ಕೇಳುತ್ತಿದ್ದು "ಈ ಹುಡುಗಿಯು ಮೋಸಗಾರಳಲ್ಲ. ಸಾಮಾನ್ಯ ಸ್ತ್ರೀ. ನನ್ನ ತಾಯಿಯು ವ್ಯರ್ಥವಾಗಿ ಇಲ್ಲದ ಆಲೋಚನೆಗಳನ್ನೆಲ್ಲಾ ಮಾಡಿ ಈ ಹುಡುಗಿಯ ಮೇಲೆ ಅನುಮಾನವನ್ನು ಉಂಟಾಗಿದ್ದಾಳೆ. ಸಾಯುವವನ ಕಣ್ಣಿಗೆ ಕಂಡವರೆಲ್ಲರೂ ಯಮದೂತರೆಂದು ಹೇಳುವ ಗಾದೆಗೆ ಸರಿಯಾಗಿದೆ. ನನ್ನ ತಾಯಿಯು ಯಾವಾಗಲೂ ನನ್ನ ಕ್ಷೇಮವನ್ನೇ ಕೋರುತ್ತಿರುವವಳಾದ ಕಾರಣ ಆಕೆಯು ಏನು ಹೇಳಿದರೂ ನಾನು ಕೇಳಲೇಬೇಕಾಗಿದೆ" ಎಂದೆಂದುಕೊಂಡನು.

**ಹೇಮಪ್ರಭಾದೇವಿ—** ಇಂದಿರೆ! ಈ ವಿಷಯವನ್ನು ಕುರಿತು ನೀನು ನನ್ನಲ್ಲಿ ಹೇಳಲಿಲ್ಲವೇತಕ್ಕೆ?

**ಇಂದಿರೆ—** ರಾಜ್ಞೀ! ಇದರ ಪ್ರಸ್ತಾವಕ್ಕೆ ಸಂದರ್ಭವೇನೂ ಉಂಟಾಗಲಿಲ್ಲ. ಅದೂ ಅಲ್ಲದೆ, ನಮ್ಮ ಮನೆಗೆ ಎಷ್ಟೋ ಜನರು ಬರುವರು. ಅವರೊಳಗೆ ಇವರೊಬ್ಬರು. ಅವರ ಸಂಗತಿಯೆಲ್ಲಾ ನನ್ನ ತಂದೆಗೆ ತಿಳಿಯುವುದೇ ಹೊರತು ನನಗೇನು ಗೊತ್ತು? ಆದರೆ, ಮಾತು ಮಾತಿಗೂ ಇವರ ಹೆಸರನ್ನು ನಮ್ಮ ಆಳುಗಳು ಹೇಳುತ್ತಿದ್ದುದನ್ನು ನಾನು ಕೇಳಿರುವೆನು.

ಈ ಮಾತನ್ನು ಕೇಳುತ್ತಿದ್ದ ಲಲಿತಕುಮಾರನು "ಆಹಾ! ಇವಳು ಎಷ್ಟು ಚತುರಳು! 'ನನಗೆ ಒಂದು ಕಳಂಕವಿರುವುದು' ಎಂದು ಇವಳ ತಂದೆಯು ನನ್ನಲ್ಲಿ ಪ್ರಸ್ತಾವಿಸಿದ್ದನು. ಆ ಕಳಂಕವನ್ನು ಹೋಗಲಾಡಿಸುವುದಕ್ಕೆ ಇದು ಸರಿಯಾದ ಸ್ಥಳವಾಗಿರಬಹುದು. ಇತರ ಕಾರ್ಯಾಸಕ್ತನಾಗಿದ್ದು ನಾನು ಈ ಕಾರ್ಯವನ್ನು ಮರೆತೆನು. ಆದರೆ, ನನ್ನ ಪ್ರಾಣೇಶ್ವರಿಯು ಮಾತ್ರ ವೇಷವನ್ನು ಮಾರ್ಪಡಿಸಿಕೊಂಡು ಇಲ್ಲಿಗೆ ಬಂದಿದ್ದಾಳೆ. ಈ ಸಂಗತಿಯನ್ನು ತಿಳಿದುಕೊಳ್ಳುವುದಕ್ಕಾಗಿ ಈಶ್ವರನು ನನ್ನನ್ನು ಇಲ್ಲಿಗೆ ಕರತಂದಿರುವನೆಂದು ತೋರುತ್ತದೆ. ಇನ್ನು ಮೇಲೆ ಇವಳನ್ನು ನಾನು ಜಾಗ್ರತೆಯಾಗಿ ಕಾಪಾಡಬೇಕು" ಎಂದು ತೀರ್ಮಾನಿಸಿಕೊಂಡನು. ಅಷ್ಟರಲ್ಲಿ ಅಡಿಗೆಯು ಸಿದ್ಧವಾಗಿರುವುದೆಂದು ಪರಿಚಾರಕಳು ಬಂದು ವಿಜ್ಞಾಪಿಸಿದಳು. ಎಲ್ಲರೂ ಭೋಜನಶಾಲೆಗೆ ನಿರ್ಗಮಿಸಿದರು. ಆಗ ಹೇಮಪ್ರಭಾ ದೇವಿಯು ಮದನಪಾಲನನ್ನು ನೋಡಿ "ರಾಜೇಂದ್ರಾ! ಈ ದಿನ ನನ್ನ ಪ್ರಿಯಸಖಿಯಾದ ಇಂದಿರೆಯನ್ನು ನಮ್ಮ ಪಙ್ಕ್ತಿಯಲ್ಲಿಯೇ ಭೋಜನಕ್ಕೆ ಕೂಡಿಸಬೇಕೆಂದು ಇದ್ದೇನೆ. ನಿನಗೇನಾದರೂ ಅಭ್ಯಂತರವುಂಟೋ? ಲಲಿತಕುಮಾರಾ! ನಿನ್ನ ಅಭಿಪ್ರಾಯವೇನು? ನಿಮ್ಮಿಬ್ಬರ ಅಭಿಮತವನ್ನು ತಿಳಿಸಿದರೆ ಸಾಕೆಂದು ನಾನು ಕೇಳುತ್ತಿದ್ದೇನೆ. ಇಲ್ಲಿ ನೆರದಿರುವ ಇತರರು ನನ್ನನ್ನು ಚಿಕ್ಕಂದಿನಿಂದಲೂ ತಂದೆಗಳೋಪಾದಿಯಲ್ಲಿ ಬೆಳೆಯಿಸಿ ನನ್ನ ತಪ್ಪುಗಳನ್ನು ಮನ್ನಿಸಿ ನನ್ನ ಇಷ್ಟವನ್ನು ಅನುಸರಿಸುವರು" ಎಂದು ನುಡಿದಳು. ಈ ಮಾತುಗಳನ್ನು ಕೇಳಿದ ರಾಜಬಂಧುಗಳ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಮದನಪಾಲನಾದರೋ ಈ ಪ್ರಪಂಚವನ್ನೇ ಮರೆತು ಹೋದನು. ಹೇಮಪ್ರಭಾ ದೇವಿಯು ಇಂತಹ ಸಂಭಾಷಣೆಯನ್ನು ಯಾವಾಗಲೂ ನಡೆಯಿಸಲಿಲ್ಲ. "ದೇವಿ! ಈ ವಿಷಯವನ್ನು ಇಷ್ಟು ದೂರ ಪ್ರಸ್ತಾವಿಸಬೇಕೆ? ನೀನು ನನ್ನನ್ನು ಒಬ್ಬ ನೀಚನ ಸಮೀಪದಲ್ಲಿ ಕುಳಿತುಕೊಳ್ಳಬೇಕೆಂದು ಆಜ್ಞಾಪಿಸಿದರೂ ನಾನು ಸಿದ್ಧನಾಗಿದ್ದೇನೆ. ಹಾಗಿರುವಾಗ

ಇಂದಿರೆಯು ವಿದ್ಯಾವತಿ. "ವಿದ್ವಾನ್ ಸರ್ವತ್ರ ಪೂಜ್ಯತೇ" ಎಂಬ ನ್ಯಾಯದಂತೆ ಚೆನ್ನಾಗಿ ಸಲ್ಲುವುದು. ನಿನ್ನ ಅಭೀಷ್ಟದಂತೆ ನಡೆಯಿಸುವುದಕ್ಕೆ ನನ್ನ ಅಭ್ಯಂತರ ವೇನೂ ಇಲ್ಲ" ಎಂದು ಮದನಪಾಲನು ಹೇಳಿದನು. ಲಲಿತಕುಮಾರನಿಗೆ ಮೊದ ಲೇ ಆಕ್ಷೇಪಣೆಯಿಲ್ಲ. ಹೇಮಪ್ರಭಾ ದೇವಿಯ ಇಷ್ಟಾನುಸಾರ ಇಂದಿರೆಯು ಅವರೊಡನೆ ಸೇರಿ ಭೋಜನಮಾಡಿದಳು. ಭೋಜನ ಕಾಲದಲ್ಲಿ ವಿವಿಧ ಸಂಭಾ ಷಣೆಗಳು ನಡೆಯುತ್ತಿದ್ದುವು. ಭೋಜನವಾದ ಬಳಿಕ ವಿಶ್ರಮಿಸಿಕೊಳ್ಳಲು ಅವರೆಲ್ಲರೂ ವಿಶ್ರಾಂತಿ ಮಂದಿರಕ್ಕೆ ಹೊರಟುಹೋದರು.

ಇಂದಿರೆಯು ಏಕಾಕಿನಿಯಾಗಿದ್ದ ಸಂದರ್ಭವನ್ನು ನೋಡಿಕೊಂಡು ಲಲಿತ ಕುಮಾರನು ಅವಳಲ್ಲಿಗೆ ಬಂದು "ಪ್ರಿಯೇ! ಇದೇನಾಶ್ಚರ್ಯ! ಪೂಜ್ಯನಾದ ನಿನ್ನ ತಂದೆಗೆ ಕ್ಷೇಮವೇ? ನೀನು ಇಲ್ಲಿ ಬರುವ ಸಂಗತಿಯನ್ನು ಮುಂಚಿತ ವಾಗಿ ನನಗೆ ತಿಳಿಸಬಾರದಾಗಿದ್ದಿತೇ? ನಿನ್ನ ವಿಷಯವು ಒಂದೂ ನನಗೆ ತಿಳಿ ಯದೆಯೇ ಇರುತ್ತದೆ. ಈ ದಿನವಾದರೂ ದಯೆಮಾಡಿ ವಿಸ್ತಾರವಾಗಿ ನನಗೆ ತಿಳಿಸು" ಎಂದನು.

**ಇಂದಿರೆ—** (ಸುತ್ತಲೂ ಪರೀಕ್ಷಿಸಿ ನೋಡಿ) ಜೀವಿತೇಶಾ! ಶಾಂತಚಿತ್ತ ನಾಗು. ನಿನ್ನ ವಿಯೋಗ ದುಃಖವು ನನ್ನನ್ನೂ ನನ್ನ ತಂದೆಯನ್ನೂ ಸಹ ತುಂಬ ಬಾಧಿಸಿತು. ನನ್ನ ತಂದೆಯ ದುಃಖಕ್ಕೆ ಪಾರವೇ ಇರಲಿಲ್ಲ. ಅಂತಹ ಸಮಯದಲ್ಲಿ ದುಷ್ಟನಾದ ಚಂಡಸೇನನು ಬಲಾತ್ಕಾರವಾಗಿ ನನ್ನನ್ನು ಅಪ ಹರಿಸಬೇಕೆಂದು ಯತ್ನಿಸಿದನು. ಆ ಸಂದರ್ಭವನ್ನು ತಪ್ಪಿಸಿಕೊಂಡು ನಾವು ಕಾಳೀಘಟ್ಟಕ್ಕೆ ಬಂದು ಸೇರಿದೆವು. ನನ್ನನ್ನು ಜೀವಿತದ ಅಂತ್ಯದವರೆಗೂ ಏಕಾಕಿ ನಿಯಾಗಿರುವಂತೆ ಮಾಡಿರುವ ಕಳಂಕವನ್ನು ತಿಳಿದುಕೊಂಡೆನು. ಅದನ್ನು ಹೋಗ ಲಾಡಿಸಲು ಪ್ರಯತ್ನಮಾಡಬೇಡವೇ? ಅದಕ್ಕೆ ತಕ್ಕ ವೇಷಭಾಷೆಗಳೂ ಬೇಡವೇ? 'ನಾನು ಸಾಧಿಸುವೆನು' ಎಂದು ನೀನು ನನ್ನ ತಂದೆಯಬಳಿ ಪ್ರತಿಜ್ಞೆಮಾಡಿ ಬಂದಿ ರುತ್ತೀ. ಇದುವರೆಗೆ ಏನಾದರೂ ಸಾಧ್ಯವಾಯಿತೇ? ನಮಗೆ ಆಗಲೇ ಶತ್ರು ಗಳು ಏರ್ಪಟ್ಟಿರುವರು. ನಾವು ಕಾಲಹರಣ ಮಾಡಲು ಸಮಯವಿಲ್ಲ. ಜಾಗ್ರತೆ ಯಿಂದ ನಡೆದು ಕೊಳ್ಳಬೇಕು. ಇಲ್ಲದಿದ್ದರೆ ನಮಗೆ ಪ್ರಾಣಹಾನಿಯು ತಪ್ಪದು.

ಇದೆಲ್ಲವನ್ನೂ ಕೇಳಿದ ಲಲಿತಕುಮಾರನು ಚಿಂತಾಮಗ್ನನಾದನು. ಇಂತಹ ಅಪಾಯಕರವಾದ ಸ್ಥಳವೆಂದು ತಿಳಿದಿದ್ದರೂ ಈ ಅಬಲೆಯು ತನ್ನ ಕಾರ್ಯ ಸಾಧನೆಗಾಗಿ ಇಲ್ಲಿಗೆ ಬಂದಿದ್ದಾಳೆ. ಇವಳು ತನ್ನ ಮೇಲೆ ಇಟ್ಟಿರುವ ಪ್ರೀತಿಗೆ ತನ್ನ ಪ್ರೀತಿಯು ಸಮಾನವಾಗಿಲ್ಲವಲ್ಲಾ! ಎಂದು ಪರಿತಪಿಸಿದನು. ತಾನು ಇದು ವರೆಗೂ ಸುಮ್ಮನಿದ್ದುದು ಮಹಾಪರಾಧವೆಂದು ತಿಳಿದು "ಪ್ರಾಣೇಶ್ವರೀ!

ಏನು ಮಾಡಬೇಕೆಂಬುದೇ ತೋರದೆ ನಾನು ಇದುವರೆಗೂ ಸುಮ್ಮನಿದ್ದೇನೆಯೇ ಹೊರತು ನಿನ್ನನ್ನು ನಾನು ಮರೆತಿಲ್ಲ.'' ಇಷ್ಟರಲ್ಲಿ ರಾಜನು ಲಲಿತಕುಮಾರನನ್ನು ಕರೆದನು. ಮದನಪಾಲನೂ ಲಲಿತಕುಮಾರನೂ ಇಬ್ಬರೂ ಸೇರಿ ಹೊರಡಬೇಕೆಂದಿರುವಾಗ ಯಾವಳೋ ಒಬ್ಬ ದಾಸಿಯು ಬಂದು ರಾಜನಿಗೆ ಅಭಿವಂದಿಸಿದಳು.

**ಮದನಪಾಲ—** ಲೀಲಾ! ಏತಕ್ಕೆ ಬಂದೆ? ಅಮ್ಮನವರು ಏನಾದರೂ ಹೇಳಿ ಕಳುಹಿಸಿದ್ದಾರೆಯೇ?

**ಲೀಲಾ—** ಪ್ರಭುವೇ! ಇಂದಿರಮ್ಮನನ್ನು ಕೆಲವು ದಿನಗಳು ಸನ್ನಿಧಾನದಲ್ಲಿರಿಸಿಕೊಳ್ಳಬೇಕೆಂದು ರಾಜಮಾತೆಯವರು ಕೋರಿದ್ದಾರೆ. ಆಕೆಯು ತಿರುಗಿ ಇಲ್ಲಿಗೆ ಬರುವವರೆಗೂ ನಾನು ಹೇಮಪ್ರಭಾ ದೇವಿಯವರ ಸೇವೆ ಮಾಡಿಕೊಂಡಿರಬೇಕೆಂದು ಅಪ್ಪಣೆಯಾಗಿದೆ. ಅದಕ್ಕಾಗಿ ಇಲ್ಲಿಗೆ ಬಂದಿದ್ದೇನೆ.

**ಮದನಪಾಲ** — ದೇವೀ! ಇದಕ್ಕೆ ನಿನ್ನ ಇಷ್ಟವೇನು? ಇಂದಿರೆಯನ್ನು ನೋಡಿದಾರಭ್ಯ ನನ್ನ ತಾಯಿಯವರಿಗೆ ಅವಳಲ್ಲಿ ತುಂಬ ವಿಶ್ವಾಸವುಂಟಾಗಿರುವುದು. ಆಕೆಯ ಕೋರಿಕೆಯನ್ನು ನೆರವೇರಿಸುವುದು ನಮಗೆ ವಿಧಾಯಕವಲ್ಲವೇ?

ಹೇಮಪ್ರಭಾ ದೇವಿಯು ಸ್ವಲ್ಪ ಹೊತ್ತು ಮೌನವಾಗಿದ್ದಳು. ಬಳಿಕ ''ಹುಡುಗಿಯನ್ನು ವಿಚಾರಿಸಿ ಹೇಳುವೆನು. ನನ್ನ ಸ್ವಾಧೀನದಲ್ಲಿರುವಳೆಂದು ಅವಳಿಗೆ ಅಸಮ್ಮತವಾದ ಕಾರ್ಯವನ್ನು ಹೇಳಿ ಅವಳ ಮನಸ್ಸನ್ನು ನೋಯಿಸುವುದು ನನಗೆ ಸಮ್ಮತವಲ್ಲ. ಈ ದಾಸಿಯು ನನ್ನ ಸಮೀಪದಲ್ಲಿಯೇ ಇರಲಿ. ಆ ಹುಡುಗಿಗೆ ವಿಶದವಾಗಿ ಸಂಗತಿಗಳನ್ನು ತಿಳಿಯ ಹೇಳಿ ಕಳುಹಿಸುವೆನು'' ಎಂದು ಪ್ರತ್ಯುತ್ತರ ಕೊಟ್ಟಳು.

ಲಲಿತಕುಮಾರನು ಸಮಯವನ್ನು ನಿರೀಕ್ಷಿಸುತ್ತಿದ್ದು ಅವಕಾಶ ದೊರೆತ ಒಡನೆಯೇ ಇಂದಿರೆಯ ಸಮೀಪಕ್ಕೆ ಹೋಗಿ ''ಇಂದಿರೇ! ನಿನ್ನ ಕಾರ್ಯವೆಂತಹುದೋ ನಾನು ಊಹಿಸಲಾರದಿರುವೆನು. ಅದನ್ನು ಸ್ಪಷ್ಟವಾಗಿ ತಿಳಿಸು. ಅಯ್ಯೋ! ನಿನ್ನ ದೇಹದ ಬಣ್ಣವನ್ನು ಏಕೆ ಕೆಡಿಸಿಕೊಂಡೆ? ಇದರಿಂದ ನನಗೆ ಎಷ್ಟು ವ್ಯಥೆಯಾಗುತ್ತಿರುವುದೋ ಹೇಳಲಾರೆ'' ಎಂದನು.

**ಇಂದಿರೆ—** ನಾಥಾ! ನೀವು ನೋಡಿದ ಬಣ್ಣವು ನಿಜವಾದ ನನ್ನ ದೇಹದ ಬಣ್ಣವೆಂದು ತಿಳಿದುಕೊಂಡರೆ, ನನಗೆ ನನ್ನ ಶರೀರದ ಕಾಂತಿಯೇ ತಿಳಿಯದು. ಇಲ್ಲಿಗೆ ಬರುವಾಗ ಜನಗಳಿಗೆ ಅನುಮಾನಹುಟ್ಟದಿರುವಂತೆ ನಾನೂ, ನನ್ನ ತಂದೆಯೂ ದೇಹಕ್ಕೆಲ್ಲಾ ಈ ಬಣ್ಣವನ್ನು ಹಾಕಿಕೊಂಡೆವು. ಇದನ್ನು ಹೋಗಲಾಡಿಸುವುದಕ್ಕೂ ಉಪಾಯವಿದೆ. ನಿಮಗೆ ತಿಳಿಯದ ರಹಸ್ಯವು ನನಗೆ

ಉಂಟುಂಟೆ? ನಾನು ಈಗ ಮದನಪಾಲನ ಅಂತಃಪುರಕ್ಕೆ ಹೋಗಬೇಕಾಗಿದೆ. ಎಂದು ನುಡಿಯುತ್ತಾ ಆ ಲಲಿತಕುಮಾರನ ಕಿವಿಯಲ್ಲಿ ಏನೋ ರಹಸ್ಯವಾಗಿ ಹೇಳಿದಳು. "ಇನ್ನು ಮೇಲೆ ನಾನು ಇಲ್ಲಿಂದ ಹೊರಡುವುದಕ್ಕೆ ಆಜ್ಞೆಯನ್ನು ಕೊಡಿ" ಎಂದಳು.

ಲಲಿತಕುಮಾರನು ಏನೂ ಹೇಳಲಾರದಿದ್ದನು. "ಸುಂದರೀ! ನಾನು ಎಷ್ಟು ಬುದ್ಧಿಹೀನನು! ನೆನಸಿಕೊಂಡರೆ ಭಯವಾಗುತ್ತಿದೆ. ಪ್ರಿಯೇ! ಹೊರಡು. ನೀನು ಚಿಕ್ಕ ಸಂಯುಕ್ತಾದೇವಿಯೇ ಆಗುವೆ. ನಿನಗೆ ಶುಭವಾಗಲಿ! ಇನ್ನು ಮೇಲೆ ನಿನ್ನನ್ನು ಎಡೆಬಿಡದೆ ಅತಿ ಜಾಗ್ರತೆಯಾಗಿ ಪ್ರವರ್ತಿಸುವೆನು."

"ಆಹಾ! ಇವಳು ಸಾಮಾನ್ಯ ಸ್ತ್ರೀಯಲ್ಲ! ನಾನು ಎಷ್ಟು ಮೋಸ ಹೋದೆನು! ಚಿಕ್ಕ ವಯಸ್ಸಿನಲ್ಲಿ ನೋಡಿದ್ದೆನು. ಈಗ ದೊಡ್ಡವಳಾಗಿರುವುದರಿಂದ ಗುರುತಿಸುವುದು ಕಷ್ಟ. ಈಶ್ವರಾ! ನೀನೇ ದಿಕ್ಕು"– ಎಂದು ಏನೇನೋ ಆಲೋಚಿಸುತ್ತ ಲಲಿತಕುಮಾರನು ಹೇಮಪ್ರಭಾದೇವಿಯ ಸಮೀಪಕ್ಕೆ ಹೋದನು.

**ಲೀಲಾ**— ಆಹಾ! ಏನಿವಳ ಗರ್ವ! ಲಲಿತಕುಮಾರನೆಂತಹವನು! ತಾನೆಂತಹವಳು! ಅಂತಸ್ತು ತಿಳಿಯದೆ ಎಷ್ಟು ನಿರ್ಭಯವಾಗಿ ಆತನೊಂದಿಗೆ ಮಾತನಾಡಿದಳು? ಅಲ್ಲದೆ, ಈ ರಾಣಿಯ ಬಳಿಯಲ್ಲಿ ಸಲಿಗೆಯಿಂದಿದ್ದು ಈ ಹುಡುಗಿಯ ತಲೆಗೆ ಪಿತ್ತವೇರಿದೆ. ಆಗಲಿ, ಇವಳು ಹೇಳಿಕೊಳ್ಳುವಷ್ಟು ಸಾಮಾನ್ಯ ಹುಡುಗಿಯಲ್ಲ. ಹೇಗಾದರೂ ಕಂಡು ಹಿಡಿದು ಈ ಸಂಗತಿಯನ್ನು ಹೇಮಪ್ರಭಾ ದೇವಿಗೆ ಹೇಳಿ ಆಕೆಯ ದಯೆಯನ್ನು ಸಂಪಾದಿಸುವೆನು.

ಮದನಪಾಲನು ಹೊರಡುವಾಗ ಲೀಲೆಯನ್ನು ಕರೆದು ಹೇಮಪ್ರಭಾ ದೇವಿಗೆ ಬಹಳ ವಿನಯ ವಿಧೇಯತೆಗಳಿಂದ ಸೇವೆ ಮಾಡೆಂದು ಹೇಳಿ ಹೋದನು. ಲೀಲೆಯೂ ಕೂಡ ತನ್ನ ಕೆಲಸಗಳಲ್ಲಿ ಅಪ್ರಮತ್ತಳಾಗಿ ಪ್ರವರ್ತಿಸುತ್ತಿದ್ದಳು. ಇಂದಿರೆಯು ತನ್ನ ಕೊಟ್ಟಡಿಯಲ್ಲಿ ಪ್ರವೇಶಿಸಿ ಅಲ್ಲಿ ಮೇಜಿನ ಮೇಲಿದ್ದ ಪತ್ರಗಳನ್ನು ನೋಡಿದಳು. ಅವುಗಳೆಲ್ಲವೂ ಹೇಮಪ್ರಭಾ ದೇವಿಯವರಿಗೆ ಬಂದುವುಗಳು. ಅವುಗಳಲ್ಲಿ ತನಗೊಂದು ಪತ್ರವು ತನ್ನ ತಂದೆಯಿಂದ ಬಂದಿದ್ದಿತು. ಬಿಚ್ಚಿ ಓದಿಕೊಂಡಳು. ಇಲ್ಲಿ ನಡೆದ ಸಂಗತಿಗಳನ್ನೂ, ತಾನು ಮಾಡಬೇಕಾದ ಕಾರ್ಯವು ಇನ್ನೂ ನಡೆದಿರುವುದಿಲ್ಲವೆಂಬುದನ್ನೂ ದೊಡ್ಡ ಅಂತಃಪುರಕ್ಕೆ ತಾನು ಹೋಗುವ ಅವಕಾಶವುಂಟಾಗಿರುವುದನ್ನೂ ಅಲ್ಲಿಯೇ ತನ್ನ ಕಾರ್ಯವು ಸಾಧನೆಯಾಗುವ ನಂಬುಗೆ ಇರುವುದನ್ನೂ ಒಂದು ಪ್ರತ್ಯುತ್ತರದಲ್ಲಿ ಬರೆದು ಎಲ್ಲಾ ಪತ್ರಗಳನ್ನೂ ಹೇಮಪ್ರಭಾ ದೇವಿಯ ಬಳಿ ತೆಗೆದುಕೊಂಡು ಹೋದಳು.

**ಹೇಮಪ್ರಭಾದೇವಿ**—ಲೀಲಾ! ರಾಜಮಾತೆಯು ನಿನ್ನೊಡನೆ ಏನು ಹೇಳಿದಳು? ಏತಕ್ಕಾಗಿ ಇಂದಿರೆಯನ್ನು ತನ್ನಲ್ಲಿಗೆ ಕಳುಹಿಸಬೇಕಂತೆ? ನಾನು ಯಾವ ವಿಧದಲ್ಲಾದರೂ ನೆಮ್ಮದಿಯಾಗಿರುವುದು ಆಕೆಗೆ ಇಷ್ಟವಿಲ್ಲ. ಯಾವ ಪಾಪವೂ ಅರಿಯದ ಈ ಬಾಲೆಯು ಆಕೆಗೆ ಏನು ಅಪರಾಧ ಮಾಡಿರುವಳು? ದುರ್ಜನರಿಗೆ ಯಾವಾಗಲೂ ಸಾಧುಗಳನ್ನು ಹಿಂಸಿಸುವುದೇ ಒಂದು ಕೆಲಸ. ನನ್ನನ್ನು ನಂಬಿರುವ ಈ ಹುಡುಗಿಯನ್ನು ಆ ಹುಲಿಯ ಬಾಯಿಗೆ ಹೇಗೆ ಕಳುಹಿಸಲಿ? ಆಕೆಯ ತಂತ್ರಕ್ಕೆ ರಾಜಾಧಿರಾಜರುಗಳೇ ನಿಲ್ಲಲಾರದಿರಲು ಈ ಬಡ ಹುಡುಗಿಯಿಂದೇನಾಗುವುದು?

**ಲೀಲ**— ಜನನೀ! ರಾಜಮಾತೆಯವರ ಆಲೋಚನೆ ನನಗೇನು ತಿಳಿಯುವುದು? ಅವರು ಇಂದಿರಮ್ಮನನ್ನು ಕುರಿತು ವಿರೋಧವಾಗಿ ಒಂದೂ ಹೇಳಲಿಲ್ಲ. "ಲೀಲಾ! ನನ್ನ ಸೊಸೆಯ ಅಂತಃಪುರದಲ್ಲಿ ನೀನು ಕೆಲವು ದಿನಗಳು ಇರು. ಅಲ್ಲಿರುವ ಇಂದಿರೆಯು ಅದುವರೆಗೂ ನನ್ನಲ್ಲಿ ಇರಲಿ" ಎಂದು ಅಪ್ಪಣೆ ಕೊಟ್ಟರು.

ಹೇಮಪ್ರಭಾ ದೇವಿಯು ಏನೇನೋ ಆಲೋಚಿಸುತ್ತಿದ್ದಳು. ಇಂದಿರೆಯು ಪತ್ರಗಳ ಕಟ್ಟನ್ನು ಆಕೆಯ ಕೈಗೆ ಕೊಟ್ಟಳು. ಅವುಗಳನ್ನೆಲ್ಲಾ ನೋಡಿ ಹೇಮಪ್ರಭಾ ದೇವಿಯು "ಇಂದಿರೆ! ಈ ಪತ್ರಗಳನ್ನೆಲ್ಲಾ ಚೆನ್ನಾಗಿ ಓದಿಕೊಂಡು ತಕ್ಕ ಪ್ರತ್ಯುತ್ತರವನ್ನು ಬರೆ. ನಾನು ಅವುಗಳನ್ನೆಲ್ಲಾ ನೋಡಿ ಸಹಿ ಮಾಡುವೆನು." "ಲೀಲಾ! ನಿನ್ನ ಕೆಲಸಕ್ಕೆ ನೀನು ಹೋಗು" ಎಂದು ಅಪ್ಪಣೆ ಮಾಡಿದಳು.

**ಹೇಮಪ್ರಭಾದೇವಿ**— ಇಂದಿರೆ! ಮಹಾ ಪಾಪಿನಿಯಾದ ನನ್ನನ್ನಾಶ್ರಯಿಸಿದ ನಿನಗೂ ಕಷ್ಟಗಳು ಪ್ರಾರಂಭವಾಗಿವೆ. ದುಶ್ಶಾಸನನ ತಂಗಿಯಂತಿರುವ ಆ ಮುರಳಾದೇವಿಗೆ ನಿನ್ನಲ್ಲಿ ಅನುಮಾನವುಂಟಾಗಿದೆಯೆಂದು ತೋರುತ್ತಿದೆ. ನಿನ್ನನ್ನು ತನ್ನ ಅಂತಃಪುರದಲ್ಲಿರುವುದಕ್ಕೆ ಏರ್ಪಾಡು ಮಾಡಿದ್ದಾಳೆ. ನಿನ್ನನ್ನು ಏನು ಮಾಡುವಳೋ ತಿಳಿಯದು. ಮದನಪಾಲನ ಮಾತನ್ನು ಕೇಳುತ್ತಲೇ ನನಗೆ ಭಯವುಂಟಾಯಿತು. ನನ್ನ ಮನೋಭಾವವನ್ನು ಅವನಿಗೆ ತಿಳಿಯಪಡಿಸದಂತೆ ಬೇರೆ ಮಾತುಗಳಿಂದ ಮರೆಯಿಸಿದೆನು. ಈಗ ನಾನೇನು ಮಾಡಲಿ?

**ಇಂದಿರೆ**— ಜನನೀ! ಚಿಂತಿಸಬೇಡಿರಿ. ನಾನು ಅಲ್ಲಿಗೆ ಹೋಗದ ಹೊರತು ನಿಮಗೆ ಸಹಾಯ ಮಾಡಲಾರೆನು. ಇದೆಲ್ಲವೂ ಶುಭಕ್ಕಾಗಿ ಬಂದಿರುವುದೆಂತಲೇ ನನಗೆ ತೋರುತ್ತಿದೆ. ಅಮ್ಮಾ! ಧೈರ್ಯವನ್ನು ವಹಿಸಿ ನನಗೆ ಅನುಜ್ಞೆಯನ್ನು ಕೊಡಿರಿ. |ಈಶ್ವರನನ್ನು ನಂಬಿದವರಿಗೆ ಅಪಜಯವುಂಟಾಗುವುದಿಲ್ಲ.|

ಇಂದಿರೆಯು ಮರುದಿನ ರಾಜಾಂತಃಪುರಕ್ಕೆ ಹೊರಡಲು ಸಿದ್ಧಳಾದಳು. ತನ್ನ ಕೊಟ್ಟಡಿಯಲ್ಲಿ ಹಾಸಿಗೆಯ ಮೇಲೆ ಮಲಗಿಕೊಂಡು "ಉದಯಪುರಿಗೆ ಹೋಗುವುದೂ, ಹುಲಿಯ ಬಾಯನ್ನು ಹೊಗುವುದೂ ಒಂದೇ. ಮಹಾ ವೀರನೂ, ಧಾರ್ಮಿಕನೂ ಆದ ನನ್ನ ತಂದೆಯನ್ನು ನಿಲ್ಲುವುದಕ್ಕೆ ಕೂಡ ಸ್ಥಳ ವಿಲ್ಲದಂತೆ ಅಡವಿಪಾಲು ಮಾಡಿ ನಾನಾ ಕಷ್ಟಗಳಿಗೆ ಗುರಿಪಡಿಸಿದ ಮುರಳಾ ದೇವಿಯು ನನ್ನನ್ನು ಮಾತ್ರ ಸುಮ್ಮನೇ ಬಿಡುವಳೇ? ಹೇಗೇ ಆಗಲಿ, ಹಿಡಿದ ಕಾರ್ಯವನ್ನು ಸಾಧಿಸಬೇಕು" ಎಂದು ನಿಶ್ಚಯಿಸಿಕೊಂಡು ದೇವರ ಧ್ಯಾನ ವನ್ನು ಮಾಡಿ ಮಲಗಿದಳು. ಇನ್ನೂ ನಿದ್ರೆ ಹತ್ತಿರಲಿಲ್ಲ. ಯಾರೋ ಬಾಗಿಲು ತಟ್ಟಿದ ಶಬ್ದವು ಕೇಳಿಸಿತು. ಕೂಡಲೇ ಎದ್ದು ಕದವನ್ನು ತೆಗೆದಳು. ಹೇಮ ಪ್ರಭಾ ದೇವಿಯು ನಿಂತಿದ್ದಳು. "ದೇವಿ! ಏನಾಜ್ಞೆ?" ಎಂದಳು. ಹೇಮಪ್ರಭಾ ದೇವಿಯು ಕೊಟ್ಟಡಿಯನ್ನು ಪ್ರವೇಶಿಸಿ ಕದವನ್ನು ಮುಚ್ಚಿ ಇಂದಿರೆಯ ಹಾಸಿಗೆಯ ಮೇಲೆ ಕುಳಿತುಕೊಂಡಳು.

**ಹೇಮಪ್ರಭಾದೇವಿ—** ಇಂದಿರೆ! ನನ್ನ ವಿಳಾಸಕ್ಕೆ ನಿನಗೆ ಒಂದು ಪತ್ರವು ಬಂದಿದೆಯಲ್ಲವೇ? ಅದೆಲ್ಲ ನಿನ್ನ ತಂದೆಯ ಅಕ್ಷರಗಳೇನೋ?

**ಇಂದಿರೆ—** ಅಹುದು.

**ಹೇಮಪ್ರಭಾದೇವಿ—** ಇಂದಿರೆ! ನಿನ್ನ ತಂದೆಯು ನಿನ್ನಂತೆಯೇ ಇರು ವರೇ? ಆತನು ಕಾಳೀಘಟ್ಟಕ್ಕೆ ಬಂದಿದ್ದರೆ ಇಲ್ಲಿಗೆ ಏಕೆ ಬರಕೂಡದು? ನಿನ್ನ ದೇಹದ ಬಣ್ಣವು ನಿಜವಾದ ಬಣ್ಣವೇ? ನಿನ್ನ ತಂದೆಯ ಲಿಖಿತವು ನನ್ನ ಪತಿಯ ಲಿಖಿತದಂತಿರುವುದು. ನನ್ನ ಪತಿಯು ಕ್ಷತ್ರಿಯನು. ವಿಕ್ರಮಸಿಂಹನೆಂಬು ದಾಗಿ ಹೆಸರು. ಆತನು ಲೋಕಮಿತ್ರನಾಗಿದ್ದನು. ನನ್ನ ಪ್ರಾಣನಾಥನು ಈತನಾಗಿಯೇ ಇರಬಹುದೇ? ಮೇಲಿನ ವಿಳಾಸವನ್ನು ನೋಡಿದಾರಭ್ಯ ನನ್ನ ಮನಸ್ಸು ಏಕೆ ಇಷ್ಟು ತಲ್ಲಣಪಡುತ್ತಿರುವುದು? ಆತನೇ ನನ್ನ ಗಂಡನಾದರೆ ನೀನು ಯಾರು? ನಿನ್ನ ರೂಪವೆಲ್ಲವೂ ನನ್ನ ಮಗಳ ರೂಪವನ್ನು ಹೋಲುತ್ತಿ ರುವುದು. ಮಗಳೇ! ನಾವಿಬ್ಬರೂ ಈಗಲೇ ಹೊರಟುಹೋಗಿ ಏಕೆ ಆತನಲ್ಲಿ ಸೇರಿಕೊಳ್ಳ ಬಾರದು?

**ಇಂದಿರೆ—** ತಾಯೇ! ಅಜ್ಞಾನಕ್ಕೆ ಒಳಗಾಗಿ ಏಕೆ ಹೀಗೆ ದುಃಖಿಸುವಿರಿ? ಒಂದು ವೇಳೆ ನಿಮ್ಮ ಮಾತು ನಿಜವಾಗಿದ್ದರೂ ನಿಮ್ಮ ಗಂಡನು ಒಂದು ಅಪರಾ ಧಕ್ಕೆ ಗುರಿಯಾಗಲಿಲ್ಲವೇ? ಆ ಅಪರಾಧವು ಸುಳ್ಳೆಂದು ಸ್ಥಾಪಿತವಾಗುವವರೆಗೂ ನೀವು ಆತನನ್ನು ಸೇರಿದರೆ ಕಳ್ಳತನದಿಂದ ಇರಬೇಕಾಗುವುದಲ್ಲವೇ? ಇದು ಸರ್ವಥಾ ಯೋಗ್ಯವಾದ ಕೆಲಸವಲ್ಲ. ಚತುರೋಪಾಯಗಳಲ್ಲಿ ಭೇದೋಪಾಯ

ವನ್ನು ಪ್ರಯೋಗಿಸಿ ನಿಜಸ್ಥಿತಿಯನ್ನು ಹೊರಪಡಿಸಿ ನಿರಪರಾಧಿತ್ವವನ್ನು ಸಾಧಿಸಬೇಕಾದ ಭಾರವು ನನ್ನ ಮೇಲೆ ಇರುವುದು. ರಾಜ್ಞೀ! ಹೇಗಾದರೂ ನನ್ನನ್ನು ರಾಜಾಂತಃಪುರಕ್ಕೆ ಕಳುಹಿಸಿರಿ. ಸಾವಿತ್ರೀದೇವಿಯು ಸತ್ತುಹೋದ ತನ್ನ ಗಂಡನನ್ನು ಪುನಃ ಜೀವಿಸುವ ಹಾಗೆ ಮಾಡಿ ತಂದುಕೊಂಡಳೆಂದು ಶಾಸ್ತ್ರಗಳಿರುವಲ್ಲಿ ಬದುಕಿರುವ ನಿಮ್ಮ ಗಂಡನನ್ನು ಏಕೆ ಸಂಪಾದಿಸಬಾರದು ? ನೀವು ವೀರಪತ್ನಿಯೂ ಅಹುದು. ಇಂತಹ ಸಮಯದಲ್ಲಿ ಧೈರ್ಯವನ್ನವಲಂಬಿಸಿ ನನ್ನನ್ನು ಬೇಗನೆ ರಾಜಾಂತಃಪುರಕ್ಕೆ ಕಳುಹಿಸಿಕೊಡಿರಿ.

**ಹೇಮಪ್ರಭಾದೇವಿ**— ಇಂದಿರೆ! ಎಲ್ಲಿಯೋ ರತ್ನದ್ವೀಪದಲ್ಲಿ ಹುಟ್ಟಿದ ಹುಡುಗಿಯ ಮೇಲೆ ನನಗೆ ಇಷ್ಟು ಪ್ರೇಮವುಂಟಾದೀತೇ? ನಿನ್ನ ವಿಯೋಗವನ್ನು ಸಹಿಸಲಾರದೆ ನಾನು ಇಷ್ಟು ಕಳವಳ ಪಡುತ್ತಿರುವೆನು. ಆಗಲಿ, ನೀನು ಹೇಳಿದಂತೆ ಮುಂದೇನು ನಡೆಯುವುದೋ ನೋಡುವೆನು. ಈ ದಿನ ನಿನ್ನಲ್ಲಿಯೇ ಮಲಗುವೆನು.

**ಇಂದಿರೆ**— ಅಮ್ಮಾ! ನಮ್ಮ ರಹಸ್ಯಗಳನ್ನು ಕಂಡು ಹಿಡಿಯುವುದಕ್ಕಾಗಿ ರಾಜಮಾತೆಯು ಲೀಲಾ ಎಂಬ ದಾಸಿಯನ್ನು ಕಳುಹಿಸಿರುವಳೆಂದು ನೀವು ಅರಿಯಲಿಲ್ಲವೇ ? ನೀವು ಇಲ್ಲಿ ಮಲಗಿದರೆ ಅವಳಿಗೆ ಅನುಮಾನವುಂಟಾಗುವುದು ನಿಶ್ಚಯ.

**ಹೇಮಪ್ರಭಾ ದೇವಿ**— "ಅಹುದಹುದು. ನಿನ್ನನ್ನು ಬಿಟ್ಟಿರಲಾರದೆ ಇಷ್ಟು ಪರಿತಪಿಸುತ್ತಿದ್ದೇನೆ. ನೀನು ಹೇಳಿದುದೆಲ್ಲ ನನಗೆ ಅರ್ಥವಾಗಿದೆ. ಆದರೂ, ಹೀಗೆ ಪರಿತಪಿಸುವುದು ನನ್ನ ವಿಧಿಯಾಗಿದೆ. ನಾನೇನು ಮಾಡಲಿ? ನಾನು ಹೋಗುವೆನು. ನೀನು ಸುಖವಾಗಿ ನಿದ್ರೆಮಾಡು" ಎಂದು ನುಡಿಯುತ್ತ ಇಂದಿರೆಯನ್ನು ಮನಸಾರ ಆಲಿಂಗನೆಮಾಡಿಕೊಂಡು ಮುತ್ತಿಟ್ಟು ಹೊರಟುಹೋದಳು.

ಇಂದಿರೆಯು ಬಾಗಿಲು ಮುಚ್ಚಿಕೊಂಡು ಹಾಸಿಗೆಯ ಮೇಲೆ ಕುಳಿತು ತನ್ನ ತಾಯಿಯ ಪ್ರೇಮಾತಿಶಯವನ್ನು ನೆನೆನೆನೆದು ನಿದ್ರೆಹೋದಳು.

ಮಾರನೆಯ ದಿನ ಹೇಮಪ್ರಭಾ ದೇವಿಯು ತನ್ನ ನಿತ್ಯಕೃತ್ಯಗಳನ್ನು ತೀರಿಸಿಕೊಂಡು ಹೊರಕ್ಕೆ ಬರುತ್ತಲೇ ಇಂದಿರೆಯು ಪ್ರಯಾಣಕ್ಕೆ ಸಿದ್ಧಳಾಗಿದ್ದಳು. ಆಗಲೇ ಬಂದಿರುವ ಒಂದು ಪತ್ರವನ್ನು ಹೇಮಪ್ರಭಾ ದೇವಿಗೆ ಕೊಟ್ಟಳು. ಹೇಮಪ್ರಭಾ ದೇವಿಯು ಅದನ್ನು ಓದಿಕೊಂಡು "ಇಂದಿ[illegible] ನಿನ್ನನ್ನು ಏಕಾಕಿನಿಯಾಗಿ ಕಳುಹಿಸಬೇಕೆಂದು ನಾನು ತುಂಬ ಚಿಂತಿಸುತ್ತಿದ್ದೆನು. ಈ ದಿನ ಮದನಪಾಲನ ಗುರುವಿನ ವರ್ಧಂತಿಯಂತೆ. ಬಂಧುಗಳ ಸಮೇತ

ಭೋಜನಕ್ಕೆ ಬರಬೇಕೆಂದು ಪತ್ರವನ್ನು ಬರೆದಿರುವನು. ಅವನು ಆವುದೋ ಒಂದು ನೆಪವನ್ನು ಂಟುಮಾಡಿಕೊಂಡು ನನ್ನನ್ನು ಆ ಅರಮನೆಗೆ ಕರೆಯುತ್ತಿರುವನು. ಆಗಲಿ! ಅದಕ್ಕಿಂತಲೂ ಹೆಚ್ಚು ಮತ್ತೇನು ಮಾಡಬಲ್ಲನು? ನಾನು ಕೂಡ ಬಂದು ಅಲ್ಲಿನ ಸ್ಥಿತಿಗತಿಗಳನ್ನು ನೋಡಿ ನಿನ್ನನ್ನು ಬಿಟ್ಟು ಬರುವೆನು. ನಾನು ಪೂರ್ವದಲ್ಲಿ ನನ್ನ ಪತಿಯೊಡನೆ ಶಯನಿಸುತ್ತಿದ್ದ ಅಂತಃಪುರವನ್ನು ಆ ಮುರಳಾದೇವಿಗೆ ತಿಳಿಯದಂತೆ ನನಗೆ ತೋರಿಸುವೆನೆಂದು ಮದನಪಾಲನು ವಾಗ್ದಾನ ಮಾಡಿರುವನು. ಈ ದಿನ ಅವುಗಳನ್ನೆಲ್ಲಾ ನೋಡಿ ಬರಬೇಕೆಂಬ ಕುತೂಹಲವುಂಟಾಗಿದೆ.

**ಇಂದಿರೆ—** ದೇವಿ! ನಿಮ್ಮ ಇಷ್ಟದಂತೆ ನಡೆಯಬಹುದು. ನೀವು ಅಲ್ಲಿ ಎರಡು ದಿನಗಳು ಇರುವ ಹಾಗಿದ್ದರೆ ತಕ್ಕ ವಸ್ತುಗಳನ್ನು ಸಿದ್ಧಮಾಡುವೆನು.

**ಹೇಮಪ್ರಭಾದೇವಿ—** ಹಾಗಾಗಲಾರದು. ಅದು ನನಗೆ ಪರಗೃಹವಲ್ಲವೇ? ಒಂದು ರಾತ್ರಿಯಾದರೂ ಅಲ್ಲಿ ನಾನು ನಿಲ್ಲುವುದಿಲ್ಲ.

ಅಷ್ಟರಲ್ಲಿ ಸಾರೋಟುಗಳು ಸಿದ್ಧವಾಗಿ ಬಂದುದರಿಂದ ಪ್ರಯಾಣವನ್ನು ಬೆಳೆಸಿದರು.

# ೧೩ನೆಯ ಅಧ್ಯಾಯ

"ಪಿಚೋಲೆ" ಯೆಂಬ ತಟಾಕವನ್ನಾಶ್ರಯಿಸಿ ಉದಯಪುರಿಯು ಕಟ್ಟಲ್ಪಟ್ಟಿರುವುದು. ಆ ನಗರದಲ್ಲಿನ ರಾಜಭವನವು ಈಗಲೂ ಜಗದ್ವಿಖ್ಯಾತವಾಗಿರುವುದು. ಇಂದಿನ ದಿನ ಆ ಭವನವು ಬಹು ವಿಚಿತ್ರವಾಗಿ ಅಲಂಕರಿಸಲ್ಪಟ್ಟಿದ್ದಿತು. ತತ್ರಾಪಿ, ರಾಜಮಾತೆಯಾದ ಮುರಳಾದೇವಿಯ ಪ್ರಾಸಾದವು ಅತಿ ಸುಂದರವಾಗಿದ್ದಿತ್ತು. ಅಲ್ಲಿ ಸಕಲೈಶ್ವರ್ಯಗಳೂ ನೆಲೆಗೊಂಡಿದ್ದವು. ಮದನಪಾಲನು ನೆಪ ಮಾತ್ರಕ್ಕೆ ರಾಜನೇ ಹೊರತು ಸಮಸ್ತ ಅಧಿಕಾರವೂ ಮುರಳಾದೇವಿಯ ವಶದಲ್ಲಿದ್ದಿತು. ಸಾಮಂತರಾಜರು, ರಾಜಸ್ತ್ರೀಯರು, ವಂದಿಮಾಗಧರು ಮುರಳಾದೇವಿಯನ್ನೇ ಸೇವಿಸುತ್ತಿದ್ದರು. ಇವಳ ಆಜ್ಞೆಯು ಸುಗ್ರೀವಾಜ್ಞೆ. ಅವಳು ಸುಂದರಿಯಾಗಿದ್ದರೂ ಅವಳನ್ನು ನೋಡುವುದಕ್ಕೆ ಎಲ್ಲರೂ ಭಯಪಡುತ್ತಿದ್ದರು. ಅವಳ ಕಣ್ಣುಗಳಲ್ಲಿ ಅಧಿಕಾರದ ದರ್ಪವು ಗೋಚರಿಸುತ್ತಿದ್ದಿತು. ಪತಿವಿಹೀನಳಾಗಿದ್ದರೂ ಯಾವಾಗಲೂ ಸರ್ವಾಭರಣಭೂಷಿತೆಯಾಗಿರುತ್ತಿದ್ದಳು. ವೈರಾಗ್ಯದ ಮಾತುಗಳಿಗೆ ಅವಳಲ್ಲಿ ಯಾವಾಗಲೂ ಕೊರತೆಯಿರಲಿಲ್ಲ. ಅವಳ

ಮನಸ್ಸಿನ ಆಳವು ಯಾರಿಗೂ ಸಿಲುಕುತ್ತಿರಲಿಲ್ಲ. ಯಾವ ಕಾಲದಲ್ಲಿ ಯಾವ ಆಲೋಚನೆ ಮಾಡುವಳೋ ಯಾರಿಗೂ ತಿಳಿಯದು. ಅವಳಿಗೆ ಫಲ್ಗುನನು ಆಪ್ತ ಸಚಿವನು. ಅವನು ಹೇಳಿದ ಮಾತು ಅವಳಿಗೆ ವೇದವಾಕ್ಯವು. ಮದನಪಾಲನಿಗೂ ಇದರಂತೆಯೇ ಇದ್ದಿತು. ರಾಜಾಧಿರಾಜರುಗಳು ಆಳಿದ ಉದಯಪುರಿಗೆ ಒಬ್ಬ ಸೇವಕನ ಆಳ್ವಿಕೆಯುಂಟಾದುದೆಂದು ಜನಗಳು ಹೇಳಿಕೊಳ್ಳುತ್ತಿದ್ದರು.

ಸರ್ವವಿಧಾಲಂಕಾರಗಳಿಂದ ಅಲಂಕರಿಸಲ್ಪಟ್ಟಿದ್ದ ಅರಮನೆಯ ವಿಶ್ರಾಂತಿ ಮಂದಿರದಲ್ಲಿ ರಾಜನು ಏಕಾಂಗಿಯಾಗಿ ನಿಂತಿದ್ದನು. ಎಷ್ಟು ಅಂದವಾಗಿ ಕಾಣಿಸಬೇಕೆಂದುಕೊಂಡಿದ್ದನೋ ಅಷ್ಟು ಅಲಂಕಾರವನ್ನು ಮಾಡಿಕೊಂಡಿದ್ದನು. ಬಂಧುಗಳೆಲ್ಲರೂ ರಾಜಮಾತೆಯ ಸೇವೆಯಲ್ಲಿರುವಾಗ ಇವನು ಮಾತ್ರ ಏಕಾಂಗಿಯಾಗಿರುವುದಕ್ಕೆ ಕಾರಣವೇನೆಂಬುದನ್ನು ವಾಚಕರೇ ಊಹಿಸಬಲ್ಲರು. ಸಿಲುಕದ ಹಣ್ಣಿಗೆ ಕೈ ಚಾಚುವಂತೆ ಹೇಮಪ್ರಭಾ ದೇವಿಯ ಪ್ರೇಮವನ್ನು ಸಂಪಾದಿಸಲೋಸುಗ ತನ್ನ ಐಶ್ವರ್ಯಾಧಿಕಾರಗಳನ್ನು ಪ್ರದರ್ಶಿಸಲು ಗುರುಗಳ ವರ್ಧಂತಿಯನ್ನು ನೆಪವಾಗಿಟ್ಟುಕೊಂಡಿದ್ದನು. ರಾಣಿಯು ಬರುವುದಕ್ಕೆ ಆಲಸ್ಯವಾಯಿತೆಂದು ಪರಿತಪಿಸುತ್ತಾ ನಿಮಿಷ ನಿಮಿಷವೂ "ದೇವಿಯು ಬಂದಳೇ?" ಎಂದು ಕೇಳುತ್ತಿದ್ದನು. ಹೀಗಿರುವಲ್ಲಿ ಮುರಳಾದೇವಿಯು ತನ್ನ ಸಖಿಯರೊಡನೆ ಅಲ್ಲಿಗೆ ಬಂದಳು. "ಅಮ್ಮಾ! ಏನಪ್ಪಣೆ" ಎಂದು ಕೇಳುತ್ತಾ ಉಚಿತಾಸನವನ್ನು ತೋರಿಸಿದನು. ಆ ದಿನ ತನ್ನ ಮಗನು ಮಾಡಿಕೊಂಡಿದ್ದ ಅಲಂಕಾರವನ್ನು ನೋಡಿ ಆ ಮುರಳಾದೇವಿಯು ಹಿಗ್ಗಿದಳು. "ಮದನಾ! ನಿನ್ನ ಪ್ರಿಯಳು ಇನ್ನೂ ಬರಲಿಲ್ಲವೇ?" ಎಂದು ಕೇಳಿದಳು.

**ಮದನಪಾಲ**— ಜನನೀ! ಬರುವ ಸಮಯವೇ.

ಇಷ್ಟರಲ್ಲೇ ಫಲ್ಗುನನು ಓಡಿ ಬಂದು, ಸ್ವಾಮೀ! ದೇವಿಯವರು ಬರುತ್ತಿದ್ದಾರೆ ಎಂದು ಹೇಳಿದನು. ರಾಜನು ತನ್ನನ್ನು ಇದಿರುಗೊಂಡು ಬರುವುದರೊಳಗಾಗಿ ಹೇಮಪ್ರಭಾ ದೇವಿಯು ಅರಮನೆಯನ್ನು ಪ್ರವೇಶಿಸಿದಳು. ಹಾಗಾದರೂ ರಾಜನು ಬಂದು "ಈ ಮೆಟ್ಟಿಲುಗಳನ್ನು ಏರಿ ಹೋಗಬೇಕು. ನನ್ನ ಕೈ ಹಿಡಿದುಕೊಂಡರೆ ಲಘುವಾಗಿರುವುದು" ಎಂದನು.

**ಹೇಮಪ್ರಭಾದೇವಿ**—"ರಾಜನೇ! ನಾನು ಬಲಹೀನಳಲ್ಲ. ನಿಮಗೇಕೆ ಶ್ರಮ?" ಎಂದು ಹೇಳಿ ತಾನೇ ಮೆಟ್ಟಿಲುಗಳನ್ನೇರಿ ಪ್ರಾಸಾದವನ್ನು ಪ್ರವೇಶಿಸಿದಳು. ಅಲ್ಲಿ ಹೇಮಪ್ರಭಾದೇವಿಗೆ ಮುರಳಾದೇವಿಯ ದರ್ಶನವಾಯಿತು. "ಇದೇನು ಅನಿಷ್ಟದರ್ಶನ!" ಎಂದೆಂದುಕೊಂಡು ಆಕೆಗೆ ನಮಸ್ಕರಿಸಿದಳು.

ರಾಜಮಾತೆಯು ಹೇಮಪ್ರಭಾದೇವಿಯನ್ನು ಸನ್ಮಾನಿಸಿ ತನ್ನ ಸಮೀಪದಲ್ಲಿರುವ ಆಸನದಲ್ಲಿ ಕುಳಿತುಕೊಳ್ಳಲು ನಿಯಮಿಸಿದಳು. ರಾಣಿಯು ಹಾಗೆ ಮಾಡದೆ ಕೆಳಗೆ ಹಾಸಿರುವ ರತ್ನಕಂಬಳಿಯ ಮೇಲೆ ಕುಳಿತುಕೊಂಡಳು. ಸಖಿಯರೆಲ್ಲರೂ ಉಭಯಪಾರ್ಶ್ವಗಳಲ್ಲಿ ಓರಸೆಯಾಗಿ ನಿಂತುಕೊಂಡರು. ಅವರ ಮಧ್ಯದಲ್ಲಿ ಇಂದಿರೆಯು ನಕ್ಷತ್ರದೀಪಾದಿಯಲ್ಲಿ ಬೆಳಗುತ್ತಿದ್ದಳು. ಹೇಮಪ್ರಭಾದೇವಿಯು ಮಗುವಾಗಿರುವಾಗ ಹೇಗಿದ್ದಳೋ ಮುರಳಾದೇವಿಗೆ ಗೊತ್ತಿದ್ದಿತು. ವಿಕ್ರಮಸಿಂಹನು ಚಿಕ್ಕತನದಲ್ಲಿ ಹೇಗಿದ್ದನೋ ಮುರಳಾದೇವಿಗೆ ತಿಳಿದಿದ್ದಿತು. ಅವರಿಬ್ಬರ ಹೋಲಿಕೆಯೂ ಚೆನ್ನಾಗಿ ಗೋಚರವಾಗುತ್ತಿದ್ದಿತು. ರೆಪ್ಪೆಹಾಕದೆ ಇಂದಿರೆಯನ್ನೇ ನೋಡುತ್ತಿದ್ದು "ಇಂದಿರೆ! ನೀನು ನನ್ನಲ್ಲಿರುವುದಕ್ಕೆ ಬಂದಿರುವೆಯಾ ಅಥವಾ ಪುನಃ ನಿಮ್ಮ ಅಮ್ಮನವರ ಸಂಗಡ ಹೋಗಲೆಣಿಸಿರುವೆಯಾ?" ಎಂದು ರಾಜಮಾತೆಯು ಪ್ರಶ್ನಿಸಿದಳು.

ಇಂದಿರೆಯು ರಾಜಮಾತೆಯ ಮುಖಲಕ್ಷಣಗಳನ್ನು ಗಮನಿಸದೆ ಇರಲಿಲ್ಲ. ಆವಳ ಮನಸ್ಸಿನಲ್ಲಿ ಹುಟ್ಟಿದ ಆಲೋಚನೆಗಳು ಮುಖದಲ್ಲಿ ಪ್ರದರ್ಶಿಸುತ್ತಿರುವುದನ್ನು ಇಂದಿರೆಯು ಕಣ್ಣಾರ ಕಂಡಳು. ತಾನೀಗ ಅನರ್ಥಪರಂಪರೆಗಳ ಮಧ್ಯೆ ಇರಬೇಕಾಗಿದೆ ಎಂಬುದನ್ನು ಚೆನ್ನಾಗಿ ತಿಳಿದುಕೊಂಡಿದ್ದರೂ ಇಂದಿರೆಯು ಏನು ಮಾಡುವುದಕ್ಕೂ ಸಾಧ್ಯವಿರಲಿಲ್ಲ. ಇದಕ್ಕಿಂತಲೂ ದೊಡ್ಡಕಷ್ಟವನ್ನು ಅನುಭವಿಸಿದ ಹೊರತು ತಾನು ಹಿಡಿದ ಕಾರ್ಯವು ಹೇಗೆ ಸಾಧ್ಯವಾದೀತು? ಹದಿನಾರುವರ್ಷಗಳಿಂದಲೂ ಶತ್ರುಗಳು ಪೂರ್ಣಾಧಿಕಾರವನ್ನು ಹೊಂದಿ ಯಥೇಷ್ಟವಾಗಿ ರಾಜ್ಯವನ್ನಾಳುತ್ತಿರಲು ಅಬಲೆಯಾದ ಇಂದಿರೆಯು ಅವರನ್ನು ಪ್ರತಿಭಟಿಸಿ ಜಯಿಸಬಲ್ಲಳೇ? ಇಂದಿರೆಯು ಧರ್ಮದ ಮೇಲೆ ಭಾರವನ್ನು ಹಾಕಿ, ಸದ್ಗುಣಶಾಲಿಯಾದ ತನ್ನ ತಂದೆಯ ಕಷ್ಟವನ್ನು ಪರಿಹರಿಸಲು ಬದ್ಧಕಂಕಣಳಾಗಿ ಇಂತಹ ಅಪಾಯಗಳಿಗೆ ಒಳಪಟ್ಟಿರುವಳು. ಇಂತಹ ಸಮಯದಲ್ಲಿ ರಾಜಮಾತೆಯ ಮುಖಲಕ್ಷಣಗಳನ್ನು ಗುರುತಿಸಿದರೂ ಭಯಪಡಲಿಲ್ಲ. ಉಭಯಹಸ್ತಗಳನ್ನು ಜೋಡಿಸಿಕೊಂಡು ಮುಂದಕ್ಕೆ ಬಂದು ನಿಂತು "ಮಹಾರಾಜ್ಞೀ! ಲೀಲೆಯನ್ನು ತಾವು ಆ ಅಂತಃಪುರಕ್ಕೆ ಕಳುಹಿಸಿದಾಗಲೇ ನಮ್ಮ ದೇವಿಯವರು ತಮ್ಮ ಸನ್ನಿಧಾನಕ್ಕೆ ಹೋಗಬೇಕೆಂದು ಅಪ್ಪಣೆ ಕೊಡಿಸಿದರು. ನಾನು ಈ ಪ್ರದೇಶಗಳಿಗೆ ಹೊಸಬಳಾದಕಾರಣ ಈ ದಿನ ಅವರೇ ನನ್ನನ್ನು ಕರೆದುಕೊಂಡು ಬಂದರು" ಎಂದು ವಿಜ್ಞಾಪಿಸಿದಳು.

**ಮುರಳಾದೇವಿ**— ಇಂದಿರೇ! ನಿನ್ನ ವಿನಯ ವಿಧೇಯತೆಗಳಿಗೆ ತುಂಬಾ ಸಂತೋಷವಾಗಿದೆ. ನಿನ್ನಂತಹ ವಿದ್ಯಾವತಿಯನ್ನು ಕೆಲವು ದಿನ ನನ್ನಲ್ಲಿಟ್ಟು

ಕೊಳ್ಳಬೇಕೆಂದು ಅಪೇಕ್ಷಿಸಿರುವೆನು. ಆದುದರಿಂದಲೇ ನನ್ನ ಸೊಸೆಗೆ ಹೇಳಿ ಕಳುಹಿಸಿದೆನು. ಹೇಮಾ! ಈ ಹುಡುಗಿಯ ತಂದೆಯು ಯಾವಾಗ ಬರುವನಂತೆ?

**ಹೇಮಪ್ರಭಾದೇವಿ**— ಅಮ್ಮಾ! ನನಗೆ ಹೇಗೆ ತಿಳಿಯುವುದು?

**ಇಂದಿರೆ**— ರಾಜ್ಞೀ! ನನ್ನ ತಂದೆಯು ಬರುವುದೂ, ಇಲ್ಲದ್ದೂ ನಮ್ಮ ರಾಣಿಯವರಿಗೆ ಹೇಗೆ ತಿಳಿಯುವುದು? ತಾನೇ ಬಂದು ನನ್ನನ್ನು ಕರೆದುಕೊಂಡು ಹೋಗುವುದಾಗಿ ನಮ್ಮ ತಂದೆಯು ಪತ್ರವನ್ನು ಬರೆದಿದ್ದಾರೆ.

**ಮುರಳಾದೇವಿ**— ಹಾಗೆಯೋ? ಇಂದಿರೆ! ನಿನ್ನ ತಂದೆಯು ನಿನ್ನನ್ನು ಯಾತ್ರೆಗೆ ಏಕೆ ಕರೆದುಕೊಂಡು ಹೋಗಲಿಲ್ಲ?

**ಇಂದಿರೆ**— ಮಹಾರಾಜ್ಞೀ! ನಾವು ಅಷ್ಟು ಭಾಗ್ಯವಂತರಲ್ಲ. ಇದಲ್ಲದೆ, ನನಗೆ ಆಗ ದೇಹವು ಅನಾರೋಗ್ಯವಾಗಿದ್ದಿತು. ಇಲ್ಲಿಗೆ ಬಂದ ವರ್ತಕರೂ ತುಂಬಾ ಸಜ್ಜನರು. ನನ್ನ ತಂದೆಗೆ ಸ್ನೇಹಿತರು. ಅವರ ಮನೆಯ ಹೆಂಗಸರೂ ಕೂಡ ನನ್ನನ್ನು ಪ್ರೇಮಿಸುತ್ತಿದ್ದರು. ನನಗೆ ಈ ದೇಶವು ಆರೋಗ್ಯವನ್ನುಂಟುಮಾಡಬಹುದೆಂದು ಹೇಳಿ ನನ್ನ ತಂದೆಯ ಒಪ್ಪಿಗೆಯನ್ನು ಪಡೆದು ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದರು. ಮೊದಲು ಈ ಊರಿನ ಹೂವಿನ ಮುದುಕಿಯ ಮನೆಯಲ್ಲಿ ಇಳಿದೆವು. ಈ ದೇವಿಯವರಿಗೆ ಓದುವುದಕ್ಕೂ ಬರೆಯುವುದಕ್ಕೂ ಬರುವ ಒಬ್ಬ ಸಖಿ ಬೇಕೆಂದು ಆ ಮುದುಕಿಯ ಮೂಲಕ ತಿಳಿದು ನಾನು ಇವರಲ್ಲಿ ಬಂದು ಸೇರಿದೆನು. ನನ್ನ ತಂದೆಯವರು ಬಂದು ಕರೆದುಕೊಂಡು ಹೋಗುವವರೆಗೂ ದೇವಿಯವರಲ್ಲಿ ಇರುವೆನೆಂದು ವಿಜ್ಞಾಪಿಸಿಕೊಂಡೆನು. ಹತ್ತು ದಿನಗಳಾದ ಬಳಿಕ ಇವರು ನನ್ನನ್ನು ಕರೆಯಿಸಿಕೊಂಡರು.

ಈ ಮಾತುಗಳನ್ನು ಕೇಳಿ ರಾಜಮಾತೆಯು ನಿಜವೆಂದು ನಂಬಿದಳು. ಆದರೂ, ಇವಳನ್ನು ಸಮೀಪದಲ್ಲಿಟ್ಟುಕೊಂಡು ಪರೀಕ್ಷಿಸಿ ನೋಡಬೇಕೆಂದುಕೊಂಡಳು. ರಾಜಮಾತೆಯ ಮನೋಗತವನ್ನು ತತ್‌ಕ್ಷಣವೇ ಗ್ರಹಿಸಿದ ಇಂದಿರೆಯು "ಇವಳನ್ನು ಕೂಡ ಮೋಸಗೊಳಿಸಿ ಕಾರ್ಯಸಾಧನೆ ಮಾಡುವಷ್ಟು ಧೈರ್ಯ ಸಾಹಸಗಳನ್ನು ತನಗೆ ಜಗದೀಶ್ವರನು ಕರುಣಿಸಲಿ" ಎಂದು ಪ್ರಾರ್ಥಿಸಿದಳು.

ಭೋಜನಾದಿಗಳು ತೀರಿದುವು. ಹೇಮಪ್ರಭಾದೇವಿಯು ತನ್ನ ಪೂರ್ವದ ಅಂತಃಪುರವನ್ನು ನೋಡಲು ಹೊರಟಳು. ಆಗ ಮದನಪಾಲನು ಹೇಮಪ್ರಭಾ ದೇವಿಯ ಸಮೀಪಕ್ಕೆ ಬಂದು "ದೇವಿ! ನನ್ನ ಮೇಲೆ ದಯೆಯಿಟ್ಟು ಈ ದಿನ ಇಲ್ಲಿಗೆ ಬಂದುದಕ್ಕಾಗಿ ತುಂಬ ಕೃತಜ್ಞನಾಗಿರುವೆನು. ಪೂರ್ವದಲ್ಲಿ ನೀನು ಅಧಿಕಾರಿಣಿಯಾಗಿದ್ದ ಅಂತಃಪುರವು ನಿನ್ನದೇ. ಅಷ್ಟೇಕೆ? ಈ ರಾಜ್ಯವೂ

ನಿನ್ನದೇ! ನೀನು ಅಲ್ಲಿಗೆ ಹೋಗಿ ಯಥೇಷ್ಟವಾಗಿ ನೋಡಿಕೊಂಡು ಬರಬಹುದು" ಎಂದು ನುಡಿದನು.

**ಹೇಮಪ್ರಭಾದೇವಿ—** ರಾಜನೇ! ಬರುತ್ತೇನೆಂದು ಹೇಳಿದ ಮೇಲೆ ಬಂದೇ ತೀರಬೇಕು. ನಿನ್ನ ಅಧಿಕಾರದಲ್ಲಿರುವ ಈ ಅಂತಃಪುರವು ನನಗೆ ಹೇಗೆ ಸ್ವಂತವಾದೀತು? ನನ್ನ ಮೇಲಿನ ದಯೆಯಿಂದ ನೀನು ನನ್ನನ್ನು ಇಲ್ಲಿಗೆ ಕರೆಯಿಸಿದೆ. ಈಗಲೂ ಇಷ್ಟು ಸಲಿಗೆಯಾಗಿ ನಾನು ಇಲ್ಲಿಗೆ ಬಂದುದಕ್ಕೆ ನಿನ್ನ ತಾಯಿಯು ಏನೆನ್ನುವಳೋ ತಿಳಿಯದು.

**ಮದನಪಾಲ—**ದೇವಿ! ನೀನು ಹಾಗೆ ಎಣಿಸಬೇಡ. ನನ್ನ ತಾಯಿಯು ನನ್ನ ಸುಖಕ್ಕೆ ಎಂದಿಗೂ ಅಡ್ಡವಾಗಲಾರಳು. ನನಗೆ ಯಾರು ಸ್ನೇಹಿತರೋ ಅವರು ಆಕೆಗೂ ಸ್ನೇಹಿತರೇ. ನಾನು ಇದುವರೆಗೆ ವಿಜ್ಞಾಪಿಸಿದಂತೆ ನೀನು ನಡೆದುಕೊಂಡರೆ ನಮಗೆ ಇಬ್ಬರಿಗೂ ಸುಖವುಂಟು. ಅದಲ್ಲದೆ ನಿನ್ನ ಸುಖಕ್ಕೆ ಮತ್ತೊಂದು ಉಪಾಯವಿಲ್ಲ. ದೀರ್ಘಾಲೋಚನೆಯನ್ನು ಮಾಡಿ ನಾನು ಕೊಟ್ಟಿರುವ ಒಂದು ವರ್ಷದ ಅವಧಿಯೊಳಗಾಗಿ ನಿಶ್ಚಯ ಮಾಡಿಕೊ. ನಾವಿಬ್ಬರೂ ಐಕಮತ್ಯವಾಗಿದ್ದರೆ ನನ್ನ ತಾಯಿಯು ನಿನ್ನನ್ನು ಏನು ಮಾಡುವಳು?

ದೇವಿಯು ಪ್ರತ್ಯುತ್ತರವನ್ನು ಕೊಡದೆ ಭೂಮಿಯನ್ನು ನೋಡುತ್ತಿದ್ದಳು. ಮತ್ತೇನಾದರೂ ಅನಿಷ್ಟದ ಮಾತನ್ನಾಡುವಳೋ ಎಂದು ಭಯಪಟ್ಟಿದ್ದ ಮದನಪಾಲನು "ನನ್ನ ಕೈಗೆ ಸಿಕ್ಕಿದವಳು ಎಲ್ಲಿಗೆ ಹೋಗುವಳು? ಸಾವಕಾಶವಾಗಿ ಕೈಗೂಡುವುದು" ಎಂದಂದುಕೊಂಡು "ದೇವಿ! ನಿನ್ನ ಶಯ್ಯಾಮಂದಿರಕ್ಕೆ ಹೋಗಿ ಬಾ. ಕಳೆದುಹೋದುದಕ್ಕೆ ವ್ಯಸನ ಪಡದಿರು. ಇಂದಿರೆಯನ್ನು ಕೂಡ ಕರೆದುಕೊಂಡು ಹೋಗು" ಎಂದು ಹೇಳಿ ಹೊರಟು ಹೋದನು.

**ಹೇಮಪ್ರಭಾದೇವಿ—** (ತನ್ನಲ್ಲಿ ತಾನು)ಆಗಲಿ. ಎರಡು ತಿಂಗಳೊಳಗಾಗಿ ರಾಮನು ರಾವಣನನ್ನು ಕೊಂದು ಸೆರೆಯಿಂದ ಬಿಡಿಸಿ ಕೊಳ್ಳದೆ ಹೋದರೆ ಅಗ್ನಿ ಪ್ರವೇಶಮಾಡುವೆನೆಂದು ಪ್ರತಿಜ್ಞೆಮಾಡಿದ ಪತಿವ್ರತಾಶಿರೋಮಣಿಯಾದ ಸೀತಾದೇವಿಗೆ ಪಾತಿವ್ರತ್ಯ ಪ್ರಭಾವದಿಂದ ಅನುಕೂಲ ಕಾಲವು ಬರಲಿಲ್ಲವೇ? ನನಗೇಕೆ ಬರಬಾರದು? ಒಂದು ವೇಳೆ ಕೊನೆಯವರೆಗೂ ಪ್ರತಿಕೂಲವೇ ಸಂಭವಿಸಿದರೆ ನನ್ನ ಗುಪ್ತ ಖಡ್ಗಕ್ಕೆ ನನ್ನ ದೇಹವನ್ನು ಬಲಿಕೊಡುವುದು. ಇದಕ್ಕಾಗಿ ಏತಕ್ಕೆ ವ್ಯಸನಪಡಬೇಕು?" ಎಂದು ಧೈರ್ಯವನ್ನು ಅವಲಂಬಿಸಿದಳು. ಇಂದಿರೆಯ ಕೈಯನ್ನು ಹಿಡಿದುಕೊಂಡೆದ್ದು "ಅಮ್ಮ! ಇಂದಿರೆ!

ನಿನ್ನ ಹಸ್ತಸ್ಪರ್ಶದಿಂದ ನನಗೆ ಹೇಳಲಾರದ ಆನಂದವುಂಟಾಗುತ್ತಿರುವುದು. ಈ ಮದನಪಾಲನು ಸ್ವಕಾರ್ಯಧುರಂಧರನಾಗಿ ನನಗೆ ಸಹಾಯ ಮಾಡುತ್ತಿದ್ದಾನೆಂದು ತಿಳಿದಿದ್ದರೂ ನನ್ನ ಶಯ್ಯಾಗೃಹವನ್ನು ನೋಡಲು ಅವಕಾಶ ಕೊಟ್ಟಿದ್ದರ ಮೇಲೆ ದುಃಖವನ್ನೆಲ್ಲಾ ಸೈರಿಸಿಕೊಂಡು ಇಲ್ಲಿಗೆ ಬಂದೆನು. ಆ ಗೃಹದಲ್ಲಿ ನನ್ನ ಮಗುವಿನ ಜ್ಞಾಪಕವನ್ನುಂಟುಮಾಡುವ ಅನೇಕ ವಸ್ತುಗಳಿರುವುವು. ಅವುಗಳಿಗಿಂತಲೂ ಅತಿಶಯವಾಗಿ ನಾನು ಸೇವಿಸತಕ್ಕ ಮತ್ತೊಬ್ಬರ ಪೂಜ್ಯವಾದ ವಸ್ತು ಸಮುದಾಯವು ಅಲ್ಲಿರುವುದು. ಇಂದಿರೆ! ನಾನು ಒಳಗೆ ಹೋಗಿರುವಾಗ ಮತ್ತೊಬ್ಬರನ್ನು ಬಿಡದಂತೆ ಹೊರಗೆ ಬಾಗಿಲಲ್ಲಿ ಕಾದುಕೊಂಡಿರು. ನನ್ನ ಮನದಾಸೆಯು ತೀರುವವರೆಗೂ ಆ ವಸ್ತುಗಳನ್ನು ನೋಡಿ ಪೂಜಿಸಿ ಬರುವೆನು. ನಾನು ಜಯಿಸಿದರೆ, ಇದೇ ಶುಭದರ್ಶನವಾಗುವುದು. ಇಲ್ಲದಿದ್ದರೆ ಕಡೆಯ ದರ್ಶನವಾಗುವುದು. ನನ್ನನ್ನು ಪರೀಕ್ಷಿಸುವ ದಿನಗಳು ಸಮೀಪಿಸಿರುವುವು. ಸಮಯ ಬಂದಾಗ ಅವುಗಳನ್ನು ನಾನು ನೋಡದೆ ಇರಲಾರೆನು'' ಎಂದು ಮಾತನಾಡುತ್ತ ಚಂದ್ರಕಾಂತಶಿಲಾನಿರ್ಮಿತವಾದ ಮೆಟ್ಟಿಲುಗಳನ್ನೇರಿ ಆ ಮಂದಿರದ ಬಾಗಿಲನ್ನು ತೆರೆದಳು. ''ಇಂದಿರೆ! ಮೊದಲು ನೀನು ಒಳಗೆ ಹೋಗಿ ಅಲ್ಲಿರುವ ಪಟಗಳಾರವು? ಎಂಬುದನ್ನು ಕಂಡು ನನಗೆ ಹೇಳು. ಅಲ್ಲಿಯವರೆಗೂ ನಾನು ಬಾಗಿಲಲ್ಲಿರುವೆನು'' ಎಂದಳು. ಇಂದಿರೆಯು ಒಳಗೆ ಹೋಗಿ ಅಲ್ಲಿನ ವೈಭವವನ್ನು ನೋಡಿ ಭ್ರಾಂತಳಾದಳು. ಅಲ್ಲಿ ಚಿತ್ರವಿಚಿತ್ರಗಳಾದ ಪುಷ್ಪಗಳೂ, ಬಳ್ಳಿಗಳೂ, ಹಂಸಗಳೂ ಮೊದಲಾದುವುಗಳನ್ನು ಜರತಾರಿಯಿಂದಲೇ ಹೊಲಿದು ಅಲಂಕರಿಸಲ್ಪಟ್ಟಿದ್ದ ಪರದೆಗಳು ನೇತಾಡುತ್ತಿದ್ದುವು. ಎರಡು ಚಿತ್ರಪಟಗಳಿದ್ದುವು. ಅವುಗಳಲ್ಲಿ ಒಂದು ದೊಡ್ಡದು. ಮತ್ತೊಂದು ಚಿಕ್ಕದು. ಮೊದಲು ಚಿಕ್ಕಪಟವನ್ನು ತೆಗೆದು ನೋಡಿದಳು. ಅದರಲ್ಲಿರುವ ರೂಪಕ್ಕೂ ತಾನು ಈಗಿರುವ ರೂಪಕ್ಕೂ ಬಹಳ ಭೇದವಿದ್ದಿತು. ಆ ಪಟವನ್ನು ಹಾಗೆಯೇ ಮುಚ್ಚಿಟ್ಟಳು. ದೊಡ್ಡ ಪಟವನ್ನು ನೋಡಿ– ಹಾ! ಜನಕಾ! ಎಂದು ಕೂಗಿಕೊಂಡಳು. ಹೊರಗೆ ಹೇಮಪ್ರಭಾದೇವಿಯು ಕೇಳುವಳೇನೋ ಎಂಬ ಭಯದಿಂದ ಧ್ವನಿಯನ್ನು ತಗ್ಗಿಸಿಕೊಂಡು ''ಅಯ್ಯೋ! ದೈವವೇ! ಇದು ಎಂತಹ ರೂಪವು! ಎಷ್ಟು ಗಾಂಭೀರ್ಯವು! ಇಂತಹ ರೂಪಕ್ಕೆ ಈಗ ಎಷ್ಟು ವ್ಯತ್ಯಾಸವುಂಟಾಗಿದೆ! ಈ ಮಹಾನುಭಾವನ ಕಷ್ಟವು ಪಾಂಡವರ ಕಷ್ಟಕ್ಕಿಂತಲೂ ಅಧಿಕವಾಗಿರುವುದು. ಯುಧಿಷ್ಠಿರನು ಜೂಜಿನಲ್ಲಿ ಸೋತು ಕಷ್ಟಗಳಿಗೆ ಈಡಾದನು. ಕಷ್ಟಗಳಲ್ಲಿಯೂ ತನ್ನ ಮಿತ್ರಕಳತ್ರ ಬಂಧುಗಳೊಡನೆ ಇದ್ದನು. ಈತನಾದರೋ ಪರರು ಮಾಡಿದ ದ್ರೋಹಕ್ಕೆ ತಾನು ಗುರಿಯಾಗಿ

ರಹಸ್ಯವಾಗಿ ಜೀವಿಸಬೇಕಾದ ದೌರ್ಭಾಗ್ಯವನ್ನು ಅನುಭವಿಸುತ್ತಿರುವನು" ಎಂದು ಕುಂದುತ್ತಾ ಹೊರಗೆ ಬಂದು "ಜನನಿ! ಈಗ ನೀವು ಹೋಗಬಹುದು" ಎಂದು ಹೇಳಿದಳು. ಹೇಮಪ್ರಭಾ ದೇವಿಯು ಹೋದಳು. ಇಂದಿರೆಗೆ ತಡೆಯಲಶಕ್ಯವಾದ ದುಃಖವು ಬಂದಿತು. "ಆಹಾ! ಈ ನನ್ನ ಜನನಿಯು ಗಂಧರ್ವಾಕಾರನಾದ ನನ್ನ ತಂದೆಯನ್ನು ಬಿಟ್ಟು ಹೇಗೆ ಜೀವಿಸಿರುವಳೋ ತಿಳಿಯದು. ಈಕೆಯು ಮಾತ್ರ ಸಾಮಾನ್ಯಳೇ! ಇಂತಹ ಅಸಾಧಾರಣ ದಾಂಪತ್ಯವನ್ನು ಅಗಲಿಸಿದ ವಿಧಿಯನ್ನು ಏನೆಂದು ಹೇಳಬೇಕು? ದೇವಾ! ಈ ವಿಧವಾಗಿ ಅಗಲಿರುವ ನಮ್ಮನ್ನು ಈಗಲಾದರೂ ಅನುಗ್ರಹಿಸು" ಎಂದು ಆರ್ದ್ರಹೃದಯಳಾಗಿ ಪ್ರಾರ್ಥಿಸುತ್ತಿರುವಲ್ಲಿ ಹಿಂಭಾಗದಿಂದ ಯಾರೋ ನಡೆದು ಬರುವ ಶಬ್ದವು ಕೇಳಿಸಿತು. ಇಂದಿರೆಯು ಹಿಂತಿರುಗಿ ನೋಡಿದಳು. ಅಲ್ಲಿಗೆ ಫಲ್ಗುನನು ಬಂದಿದ್ದನು.

**ಫಲ್ಗುನ—** ಅಮ್ಮನವರೇ! ರಾಜಬಂಧುಗಳೆಲ್ಲರೂ ಕೆಳಗೆ ಕುಳಿತಿರುವಲ್ಲಿ ನೀವು ಮಾತ್ರ ಒಂಟಿಯಾಗಿ ಇಲ್ಲಿ ನಿಂತಿರಲು ಕಾರಣವೇನು? ನಿಮಗೆ ಏನಾದರೂ ಬೇಕಾಗಿದೆಯೇ?

**ಇಂದಿರೆ—** ಹೇಮಪ್ರಭಾ ದೇವಿಯವರು ಈ ಮಂದಿರದ ಒಳಗೆ ಹೋಗಿರುವರು. ನನ್ನನ್ನು ಇಲ್ಲಿಯೇ ಇದ್ದು ಯಾರನ್ನೂ ಒಳಗೆ ಬಿಡಕೂಡದೆಂದು ಆಜ್ಞಾಪಿಸಿರುವ ಪ್ರಯುಕ್ತ ಇಲ್ಲಿ ನಾನು ನಿಂತಿರುವೆನು. ನನಗೆ ಬೇಕಾದುದೇನೂ ಇಲ್ಲ. ರಾಜ ಬಂಧುಗಳೆಲ್ಲಿದ್ದರೆ ನನಗೇನು?

**ಫಲ್ಗುನ—** ಅಮ್ಮಾ! ಕ್ಷಮಿಸಬೇಕು. ನಿಮ್ಮ ಸಂಗತಿ ನನಗೆ ತಿಳಿಯದು. ಎಂದು ಹೇಳುತ್ತಾ ಹೊರಟುಹೋಗಿ ಪುನಃ ಹಿಂತಿರುಗಿ ಬಂದು "ಅಮ್ಮಾ! ನೀವು ಕಾಳೀಘಟ್ಟದಲ್ಲಿ ಬಾನರ್ಜೀ ಮನೆಯವರೇ" ಎಂದು ಬಹು ನಮ್ರತೆಯಿಂದ ಕೇಳಿದನು.

**ಇಂದಿರೆ—** ಅಲ್ಲ.

**ಫಲ್ಗುನ—** ಅಮ್ಮಣ್ಣೀ! ಮನ್ನಿಸಬೇಕು. ತಮ್ಮ ಹೆಸರನ್ನು ಕೇಳಬಹುದೇ?

**ಇಂದಿರೆ—** ನನ್ನ ಹೆಸರು ಇಂದಿರೆ.

**ಫಲ್ಗುನ—** ಅಮ್ಮಾ! ಈ ರಾಜಗೃಹದಲ್ಲಿನ ಚಿತ್ರ ಶಾಲೆಯಲ್ಲಿರುವ ಪಟಗಳಲ್ಲಿ ಒಬ್ಬರ ಜಾಡೆ ನಿಮ್ಮಲ್ಲಿರುವಂತೆ ಕಾಣುತ್ತದೆ. ಹೀಗಿರಲು ಕಾರಣವೇನು?

**ಇಂದಿರೆ—** ಪ್ರಪಂಚದಲ್ಲಿ ಒಬ್ಬರಂತೆ ಮತ್ತೊಬ್ಬರಿರುವುದು ಸಹಜವು. ಹಾಗಿರುವುದು ದೋಷವೇ? ನಿನಗೇಕೆ ಈ ವಿಷಯದಲ್ಲಿ ಆಶ್ಚರ್ಯವುಂಟಾಗಬೇಕು?

ಈ ಮಾತನ್ನು ಕೇಳಿ ಫಲ್ಗುನನು ನಿರ್ಗಮಿಸಿದನು. ದೇವಿಯು ಆ ಅಂತಃಪುರ ದಲ್ಲಿ ಸುಮಾರು ಅರ್ಧ ಘಂಟೆ ಇದ್ದಳು. ಹೊರಗೆ ಬಂದಾಗ ಆಕೆಯ ಮುಖವು ರಕ್ತಶೂನ್ಯವಾಗಿ ಬಿಳುಪೇರಿದ್ದಿತು. ಕಣ್ಣುಗಳು ಕೆಂಪೇರಿದ್ದುವು. ತನ್ನ ಮನೋ ವೇದನೆಯನ್ನೆಲ್ಲಾ ಅಡಗಿಸಿಕೊಂಡಿದ್ದಳು. ಆಗಲೇ, 'ಮಂಜುವಾಣಿ' 'ಮಾಧವಿ' ಎಂಬ ಇಬ್ಬರು ಸಖಿಯರು ಬಂದು ಹೇಮಪ್ರಭಾ ದೇವಿಗೆ ನಮಸ್ಕರಿಸಿದರು. "ಅಮ್ಮನವರು ಜಾಗ್ರತೆ ಇಲ್ಲಿಗೆ ದಯಮಾಡಿಸುವಿರೆಂದು ನಂಬುತ್ತೇವೆ"– ಎಂದರು.

**ಹೇಮಪ್ರಭಾದೇವಿ**—"ಸಖಿಯರೇ ! ನನ್ನ ಭಾಗ್ಯವು ಫಲಿಸಿದರೆ ಇಲ್ಲಿಗೆ ಬರಲು ಎಷ್ಟೋ ಸಂತೋಷ. ಆದರೆ ವಿಧಾತನು ಹೇಗೆ ಬರೆದಿರುವನೋ ಯಾರು ತಾನೇ ಹೇಳಬಲ್ಲರು?" ಎಂದು ನುಡಿಯುತ್ತ ಅವರಿಗೆ ಬಹುಮಾನವನ್ನು ಕೊಟ್ಟು ಕಳುಹಿಸಿಬಿಟ್ಟಳು.

ತಾನು ಪ್ರಾಸಾದವನ್ನು ಇಳಿದು ಬರುತ್ತಿರುವಾಗ ದಾರಿಯಲ್ಲಿ ವಾಸಂತಿಕೆ ಯೆಂಬ ಮತ್ತೊಬ್ಬ ಸಖಿಯನ್ನು ನೋಡಿದಳು. ಆದರೆ ಅವಳನ್ನು ಗುರುತಿಸದೆ ಮುಂದೆ ನಡೆಯುತ್ತಿರುವಲ್ಲಿ ಅವಳು ಹೇಮಪ್ರಭಾದೇವಿಗೆ ನಮಸ್ಕರಿಸಿ ಅಳ ಲಾರಂಭಿಸಿದಳು.

**ಹೇಮಪ್ರಭಾದೇವಿ**— ವಾಸಂತಿಕೆ ! ನಾನು ನಿನ್ನನ್ನು ಮರೆತರೂ ನೀನು ನನ್ನನ್ನು ಮರೆಯಲಿಲ್ಲ. ನನ್ನ ದುರದೃಷ್ಟಕ್ಕೆ ದುಃಖಿಸುವವರನ್ನು ಇಲ್ಲಿ ಒಬ್ಬರನ್ನಾದರೂ ನಾನು ಕಾಣಲಿಲ್ಲ. ನೀನು ಮಾತ್ರ ಹೀಗೆ ದುಃಖಿಸು ತ್ತಿರುವೆ.

**ವಾಸಂತಿಕೆ**— "ತಾಯೇ ! ಬಾಯಿ ಬಿಟ್ಟು ಮಾತನಾಡಲು ಭಯವಾ ಗುತ್ತದೆ. ಈ ರಾಜಮಾತೆಯಿಂದಲ್ಲವೇ ಇಷ್ಟು ಅನರ್ಥವು ನಡೆದುಹೋ ಯಿತು? ಈಕೆಯ ಪ್ರಭಾವದಿಂದ ಫಲ್ಗುನನು ಇಷ್ಟು ಪ್ರಬಲನಾದನು. ಧರ್ಮವೇ ಜಯಿಸುವುದೆಂಬ ಹಿರಿಯರ ವಾಕ್ಯವು ಕಾಡನ್ನು ಸೇರಿತು."–ಎಂದು ಇನ್ನು ಏನೇನೋ ಹೇಳಬೇಕೆಂದು ಯತ್ನಿಸಿರುವಾಗ ಯಾರೋ ಬರುತ್ತಿರುವ ಶಬ್ದವು ಕೇಳಿಸಿದುದರಿಂದ ಭಯಪಟ್ಟು ಹೊರಟುಹೋದಳು. ಹೇಮಪ್ರಭಾ ದೇವಿಯು ಕೆಳಗೆ ಇಳಿದು ರಾಜನಿಗೆ ಹೇಳಿ ಹೋಗುತ್ತಿರುವಾಗ "ಹೇಮಾ ! ನಿನ್ನ ಸಖಿಯನ್ನು ಇಲ್ಲಿಯೇ ಬಿಟ್ಟು ಹೋಗುವೆಯಾ" ಎಂದು ರಾಜಮಾತೆಯು ಕೇಳಿದಳು.

**ಹೇಮಪ್ರಭಾದೇವಿ**— "ಅಮ್ಮಾ! ಈ ದಿನ ನನಗೆ ಬಹಳ ತಲೆ ನೋವು ವುಂಟಾಗಿದೆ. ದೇಹವೆಲ್ಲವೂ ಬಳಲಿರುವುದು. ಇನ್ನೊಂದು ವಾರ ನನ್ನ ಬಳಿ

ಯಲ್ಲಿ ಇಟ್ಟುಕೊಂಡಿದ್ದು ಕಳುಹಿಸುವೆನು" ಎಂದು ವಿಜ್ಞಾಪಿಸಿ ಆಕೆಯ ಸಮ್ಮತಿಯನ್ನು ಪಡೆದು ಹೊರಟುಹೋದಳು.

ಮೇವಾರ ದುರ್ಗದಲ್ಲಿರುವ ಉದ್ಯಾನವನವು ಬಹು ಮನೋಹರವಾದುದು. ಅಲ್ಲಿನ ಶೃಂಗಾರವನ್ನು ನೋಡುವುದಕ್ಕಾಗಿ ತಿಂಗಳಿಗೆ ಒಂದಾವರ್ತಿ ರಾಜನೂ, ರಾಜಮಾತೆಯೂ ಬಂದು ಹೋಗುತ್ತಿದ್ದರು. ವಾಡಿಕೆಯಂತೆ ಒಂದು ದಿನ ಅವರಿಬ್ಬರೂ ತಮ್ಮ ತಮ್ಮ ಪರಿವಾರ ಸಮೇತರಾಗಿ ಬಂಧುವರ್ಗದೊಡನೆ ಆ ಉದ್ಯಾನವನಕ್ಕೆ ಹೋಗಿ ಅಲ್ಲಿನ ವಿನೋದಗಳನ್ನು ನೋಡುತ್ತಾ ಒಂದು ಸ್ಥಳದಲ್ಲಿ ನಿಂತರು. ಆ ವನದ ಮಧ್ಯಭಾಗದಲ್ಲಿ ಎತ್ತರವಾದ ಒಂದು ಚಪರ ಮಂಟಪವು ಕಟ್ಟಲ್ಪಟ್ಟಿದ್ದಿತು. ಅದರ ನಾಲ್ಕು ದಿಕ್ಕುಗಳಲ್ಲಿಯೂ ಚಂದ್ರಕಾಂತಶಿಲೆಯ ಸೋಪಾನಗಳು ಕಟ್ಟಲ್ಪಟ್ಟಿದ್ದುವು. ಎಲ್ಲಿ ನೋಡಿದರೂ ಹೂವಿನ ತೋಟಗಳು. ದೇಶವಿದೇಶಗಳಿಂದ ತರಿಸಿ ಬೆಳೆಸಿದ ನಾನಾ ವಿಧ ತರುಲತಾಗುಲ್ಮಾದಿಗಳು ಬಹಳ ಸೊಂಪಾಗಿ ವೃದ್ಧಿಹೊಂದಿ ಮನಸ್ಸಿಗೆ ಆನಂದವನ್ನುಂಟುಮಾಡುತ್ತಿದ್ದುವು. ನಮ್ಮ ಕಥೆಯು ನಡೆಯುತ್ತಿದ್ದ ಕಾಲದಲ್ಲಿ ಸಹ ಮೇವಾರದ ಉದ್ಯಾನವನವು ನಂದನವನಕ್ಕೆ ಸಮಾನವಾಗಿದೆಯೆಂದು ಖ್ಯಾತಿಗೊಂಡಿದ್ದಿತು. ಆ ವನದ ಮನೋಹರತ್ವವನ್ನು ನೋಡಿ ಹೇಮಪ್ರಭಾ ದೇವಿಯು ಅಲ್ಲಿ ಇಲ್ಲವಲ್ಲಾ! ಎಂದು ಮದನಪಾಲನು ಚಿಂತಿಸುತ್ತಿದ್ದನು. ಅವನ ಮುಖಭಾವವನ್ನು ಗುರುತಿಸಿದ ರಾಜಮಾತೆಯು "ಕುಮಾರಾ! ಇದನ್ನು ನೋಡುವುದಕ್ಕೆ ಹೇಮಪ್ರಭೆಯನ್ನು ಏತಕ್ಕೆ ಕರೆಯಿಸಲಿಲ್ಲ?" ಎಂದು ಕೇಳಿದಳು.

**ಮದನಪಾಲ**— ಅಮ್ಮಾ! ಅವಳಿಗೆ ದೇಹಸ್ಥಿತಿಯು ಸರಿಯಾಗಿಲ್ಲವಂತೆ. ಮೊನ್ನೆ ಇಲ್ಲಿಂದ ಹೋಗುವಾಗಲೇ ತುಂಬಾ ಬಳಲಿದ್ದಳು. ಈಗಲೂ ಹಾಗೆಯೇ ಬಳಲಿದ್ದಾಳಂತೆ. ಇಲ್ಲದಿದ್ದರೆ ತಪ್ಪದೆ ಇಲ್ಲಿಗೆ ಬರುತ್ತಿದ್ದಳು" ಎಂದನು.

ಹೇಮಪ್ರಭಾ ದೇವಿಯ ಅಂತಃಪುರದಲ್ಲಿದ್ದ ವಸ್ತುಗಳನ್ನೆಲ್ಲಾ ನಾಶಮಾಡಬೇಕೆಂದು ರಾಜಮಾತೆಯ ಆಜ್ಞೆಯಾಗಿದ್ದಿತು. ಆದರೆ ಹೇಮಪ್ರಭಾ ದೇವಿಯನ್ನು ಮೆಚ್ಚಿಸಿ ತನ್ನ ವಶಮಾಡಿಕೊಳ್ಳುವುದಕ್ಕಾಗಿ ತನ್ನ ತಾಯಿಯ ಆಜ್ಞೆಯನ್ನುಲ್ಲಂಘಿಸಿ ಮದನಪಾಲನು ಅಲ್ಲಿನ ವಸ್ತುಗಳನ್ನು ಯಥಾಸ್ಥಿತಿಯಲ್ಲಿರಿಸಿ ಹೇಮಪ್ರಭಾ ದೇವಿಯು ಹೋಗಿ ನೋಡುವುದಕ್ಕೆ ಅವಕಾಶ ಕೊಟ್ಟಿದ್ದನು. ಹೇಮಪ್ರಭಾ ದೇವಿಯು ಅಲ್ಲಿಗೆ ಹೋಗಿ ತನ್ನ ಪತಿಯ ಮತ್ತು ಮಗುವಿನ ಚಿತ್ರಪಟಗಳನ್ನು ನೋಡಿದುದರಿಂದ ವ್ಯಸನಾಕ್ರಾಂತಳಾಗಿರುವಳೆಂಬ ಸಂಗತಿಯನ್ನು ರಾಜಮಾತೆಗೆ ತಿಳಿಸಲು ಭಯಪಟ್ಟನು. ಒಂದು ವೇಳೆ ಅವನಿಗೂ ಈ ಕಾರಣವು ಗೊತ್ತಿರಲಾರದಿದ್ದಿತು.

ರಾಜಮಾತೆಯು ವನವೆಲ್ಲಾ ಸುತ್ತಿ ಲತಾಗೃಹಕ್ಕೆ ಬಂದಳು. ಅದರ ಮೆಟ್ಟಿಲುಗಳನ್ನು ಹತ್ತಿ ಕೊನೆಯ ಮೆಟ್ಟಿಲಿನ ಮೇಲೆ ನಿಂತು ಅರಸನು ಬರುತ್ತಿರುವನೋ ಇಲ್ಲವೋ ಎಂದು ನೋಡಲು ಹಿಂತಿರುಗುವುದರೊಳಗಾಗಿ ಕಾಲು ಜಾರಿ ಕೆಳಕ್ಕೆ ಬಿದ್ದಳು. ಸಖಿಯರೆಲ್ಲರೂ ಓಡಿ ಹೋಗಿ ಹಿಡಿದುಕೊಳ್ಳುವಷ್ಟರಲ್ಲಿಯೇ ಮೂರ್ಛಿತಳಾದಳು. ಮೊಳಕಾಲು ಮುರಿದಂತೆ ಅಲ್ಲಾಡುತ್ತಿದ್ದಿತು. ತಲೆಯಲ್ಲಿಯೂ, ಮೊಳಕಾಲಿನಲ್ಲಿಯೂ ರಕ್ತವು ಸುರಿಯುತ್ತಿದ್ದಿತು. ಮದನಪಾಲನು ದಿಕ್ಕು ತೋರದ ಬಾಲಕನಂತೆ 'ಅಮ್ಮ' ಎಂದು ಅಳಲಾರಂಭಿಸಿದನು. ಆಕ್ಷಣವೇ ಮೇನೆಯಲ್ಲಿ ಆಕೆಯನ್ನು ಅಂತಃಪುರಕ್ಕೆ ಕಳುಹಿಸಿದನು. ರಾಜವೈದ್ಯರು ಬಂದು ಗಾಯವಾದ ಸ್ಥಳಗಳಲ್ಲಿ ಪಟ್ಟಿಗಳನ್ನು ಕಟ್ಟಿದರು. ರಾಜ್ಞಿಯನ್ನು ಮೃದುವಾದ ಹಾಸಿಗೆಯಲ್ಲಿ ಮಲಗಿಸಿದರು. ದಾಸಿಯರು ಪನ್ನೀರಿನಲ್ಲಿ ನನೆಸಿದ ಬೀಸಣಿಗೆಗಳಿಂದ ಬೀಸಲಾರಂಭಿಸಿದರು. ಅರಸನು ತನ್ನ ತಾಯಿಯ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ದುಃಖಿಸುತ್ತಿದ್ದನು. "ಪ್ರಿಯ ಕುಮಾರಾ! ದುಃಖಿಸಬೇಡ. ದೈವಕೃಪೆಯಿಂದ ಬದುಕಿದೆನು. ಅಯ್ಯೋ! ನಾನೇನು ಹೇಳಲಿ! ಮೇಲಿಂದ ನನ್ನನ್ನು ಯಾರೋ ಎಳೆದಂತಾಯಿತು. ನನಗೆ ಸ್ಮರಣೆಯಿಲ್ಲದೆ ಕೆಳಗೆ ಬಿದ್ದೆನು. ಶರೀರವೆಲ್ಲವೂ ಬಹಳ ನೋವಾಗಿದೆ. ನನ್ನ ಕಾಲು ಮುರಿದುಹೋದಂತೆ.ತೋರುತ್ತಿದೆ. ಇತರ ಗಾಯಗಳು ಅಷ್ಟು ಪ್ರಮಾದಕರಗಳಲ್ಲ. ರಾಜಕಾರ್ಯಗಳನ್ನು ಅತಿ ಜಾಗ್ರತೆಯಾಗಿ ನೋಡಿಕೋ. ಇಂತಹ ಸಮಯದಲ್ಲಿ ಇಂದಿರೆಯು ನನ್ನ ಪಕ್ಕದಲ್ಲಿದ್ದಿದ್ದರೆ ನನ್ನ ಮನಸ್ಸಿಗೆ ನೆಮ್ಮದಿಯಾಗುತ್ತಿದ್ದಿತು" ಎಂದು ರಾಜಮಾತೆಯು ಹೇಳಿದಳು.

**ಮದನಪಾಲ**—"ಅಮ್ಮಾ! ನೀನು ಯಾವುದಕ್ಕೂ ವ್ಯಸನಪಡಬೇಡ. ನಿನ್ನ ಆಜ್ಞೆಯಂತೆ ನಡೆಯಿಸುವೆನು" ಎಂದು ಹೊರಗೆ ಬಂದು ಫಲ್ಗುನನನ್ನು ಕರೆದು "ಫಲ್ಗುನಾ! ನಾನು ತುಂಬ ಭಯಪಟ್ಟಿದ್ದೆನು. ಅಮ್ಮನವರು ಮೂರ್ಛೆಯಿಂದ ತೀರಿರುವರು. ಈಗ ಸ್ವಲ್ಪ ಮಾತನಾಡುತ್ತಿದ್ದಾರೆ. ಅಲ್ಲಿ ಹೇಮಪ್ರಭಾ ದೇವಿಯು ಸಹಿತ ಇಲ್ಲಿಂದ ಹೋದ ಮೊದಲ್ಗೊಂಡು ಅನಾರೋಗ್ಯದಲ್ಲಿದ್ದಾಳೆ. ಇಂತಹ ಸಮಯದಲ್ಲಿ ಅವಳ ಮನಸ್ಸನ್ನರಿತು ಸೇವೆಮಾಡಬಲ್ಲವಳು ಇಂದಿರೆಯೊಬ್ಬಳೇ. ಆ ಹುಡುಗಿಯನ್ನು ತನ್ನ ಸೇವೆಗೆ ಇಟ್ಟುಕೊಳ್ಳಬೇಕೆಂಬುದು ಅಮ್ಮನವರ ಅಭಿಪ್ರಾಯ. ಆ ಹುಡುಗಿಯ ಮೇಲೆ ಅಮ್ಮನವರಿಗೆ ಏನೋ ಸಂಶಯವಿದ್ದಂತೆ ತೋರುತ್ತಿದೆ. ಕೆಲಸಕ್ಕೆ ಬಾರದ ಹುಡುಗಿಯು ಏನು ಮಾಡಬಲ್ಲಳು?"– ಎಂದನು.

**ಫಲ್ಗುನ—** ರಾಜೇಂದ್ರಾ! ಈ ಮಾತು ತಮ್ಮ ಬಲತಾಯಿಯನ್ನು ಅಪಹಾಸ್ಯಮಾಡಿದಂತಿದೆ. ಅಮ್ಮನವರಿಗೆ ತಿಳಿಯದುದೂ ಒಂದು ಉಂಟೇ? ನನಗೂ ಆ ಹುಡುಗಿಯ ಮೇಲೆ ಸಂಶಯವಿದೆ. ನಾವು ಈಗ ಉದಾಸೀನವಾಗಿದ್ದರೆ ಪ್ರಮಾದ ಸಂಭವಿಸಿದಾಗ ನಿಗ್ರಹಿಸಲು ಸಾಧ್ಯವಾದೀತೇ? ಆದಕಾರಣ, ತಡಮಾಡದೆ ಆ ಹುಡುಗಿಯನ್ನು ಕರೆಯಿಸಿ ಅಮ್ಮನವರ ವಶಮಾಡುವುದು ನಿಮಗೆ ಶ್ರೇಯಸ್ಕರವು. ನಾವು ಸಂದೇಹಪಟ್ಟ ಮೇರೆಗೆ ಇಲ್ಲದಿದ್ದರೆ ಆ ಹುಡುಗಿಯು ನಮ್ಮಿಂದ ಸುಖವನ್ನು ಹೊಂದುವಳು. ಇಲ್ಲದಿದ್ದರೆ, ಅವಳ ಗ್ರಹಚಾರಕ್ಕೆ ತಕ್ಕಂತೆ ಅನುಭವಿಸುವಳು. ಅದರಿಂದ ನಮಗುಂಟಾಗುವ ನಷ್ಟವೇನು? ಯಾವಾಗಲೋ ಮದುವೆಯಾಗುವ ರಾಣಿಗೋಸ್ಕರ ನಿಮ್ಮಲ್ಲಿ ಪ್ರಾಣವಿಟ್ಟುಕೊಂಡು, ನಿಮಗಾಗಿ ಜೀವಿಸಿರುವ ತಾಯಿಯನ್ನು ತಿರಸ್ಕರಿಸುವುದು ಧರ್ಮವೇ?

ಮದನಪಾಲನು ಹೇಳಿದ ಮಾತುಗಳನ್ನು ಕೇಳುವುದರಲ್ಲಿ ನಿಸ್ಸೀಮನು. ತಾನೇ ಹೋಗಿ ಹೇಮಪ್ರಭಾದೇವಿಯ ದೇಹಸ್ಥಿತಿಯನ್ನು ವಿಚಾರಿಸಿಕೊಂಡು ಇಂದಿರೆಯನ್ನು ಕರೆದುಕೊಂಡು ಬರುವೆನೆಂದು ಹೊರಟನು.

# ೧೩ನೆಯ ಅಧ್ಯಾಯ

ಉದಯಪುರಿಯ ಅರಮನೆಗೆ ಹೋಗಿ ಬಂದಾರಭ್ಯ ಹೇಮಪ್ರಭಾದೇವಿಗೆ ದೇಹಸ್ವಸ್ಥತೆ ತಪ್ಪಿಹೋಗಿದ್ದಿತು. ಇಂದಿರೆಯ ಹಿತಬೋಧನೆಯಿಂದಲೂ, ಉಪಚಾರಗಳಿಂದಲೂ ಸ್ವಲ್ಪ ಮಟ್ಟಿಗೆ ನೆಮ್ಮದಿ ಬಂದಿದ್ದಿತು. ಒಂದು ದಿನ ತನ್ನ ನಿತ್ಯಕೃತ್ಯಗಳನ್ನು ತೀರಿಸಿಕೊಂಡು ಹೇಮಪ್ರಭಾದೇವಿಯು ತೋಟದಲ್ಲಿರುವ ಸ್ಫಟಿಕ ವೇದಿಕೆಯ ಮೇಲೆ ಕುಳಿತುಕೊಂಡಿದ್ದಳು. ಅಲ್ಲಿನ ವನಸೌಂದರ್ಯವನ್ನೇನಾದರೂ ನೋಡುತ್ತಿದ್ದಳೇ? ಇಲ್ಲ. ಏನೋ ಆಲೋಚನೆ ಮಾಡುತ್ತಿದ್ದಳು. ಮುತ್ತಿನ ಮಾಲೆಯಿಂದ ಜಾರಿಬೀಳುವ ಮುತ್ತುಗಳಂತೆ ಅವಳ ನೇತ್ರಗಳಿಂದ ಅಶ್ರುಬಿಂದುಗಳು ಒಂದೊಂದಾಗಿ ಬೀಳುತ್ತಿದ್ದುವು. ಅಂತಹ ಸಮಯದಲ್ಲಿ ಹಠಾತ್ತಾಗಿ ಮದನಪಾಲನು ಆಕೆಯ ಇದಿರಿನಲ್ಲಿ ಬಂದು ನಿಂತನು. ಹೇಮಪ್ರಭಾದೇವಿಯು ಅವನನ್ನು ಗಮನಿಸಲಿಲ್ಲ. "ದೇವೀ! ನಿನಗೆ ಇನ್ನೂ ದೇಹಸ್ವಸ್ಥತೆಯಿಲ್ಲವೆಂದು ಭಯಪಟ್ಟಿದ್ದೆನು. ಆದರೆ, ಆರೋಗ್ಯಚಿಹ್ನೆಗಳನ್ನು ನೋಡಿ ಮನಸ್ಸಿಗೆ ಈಗ ನೆಮ್ಮದಿಯಾಯಿತು" ಎಂದು ಮದನಪಾಲನು ನುಡಿದನು

**ಹೇಮಪ್ರಭಾದೇವಿ**—(ಸಂಭ್ರಮದಿಂದೆದ್ದು) “ರಾಜನೇ ! ದಯ ಮಾಡಿಸು. ನಾನು ಏನೇನೋ ಆಲೋಚನೆ ಮಾಡುತ್ತಿದ್ದುದರಿಂದ ನೀನು ಹೇಳಿದ ಮಾತು ನನ್ನ ಕಿವಿಗೆ ಬೀಳಲಿಲ್ಲ. ಏನಪ್ಪಣೆಯಾಯಿತು ?” ಎಂದಳು.

**ಮದನಪಾಲ**— ನಮ್ಮ ಭವನದಿಂದ ಬಂದ ಮೊದಲ್ಗೊಂಡು ನೀನು ಅನಾರೋಗ್ಯವಾಗಿರುವೆಯೆಂದು ಎಣಿಸಿದ್ದೆನು. ಆದರೆ, ನೋಡಿದ ತರುವಾಯ ಆ ಸಂಶಯವು ನಿವೃತ್ತಿಯಾಯಿತು.

**ಹೇಮಪ್ರಭಾದೇವಿ**— ನನ್ನ ಆರೋಗ್ಯಕ್ಕೇನು ಬಂದಿದೆ? ನಿಮ್ಮ ತಾಯಿಯವರು ಕೆಳಗೆ ಬಿದ್ದು ತುಂಬ ಅಪಾಯಸ್ಥಿತಿಯಲ್ಲಿರುವುದಾಗಿ ಕೇಳಿದೆನು. ಅವರಿಗೆ ಈಗ ಹೇಗಿದೆ? ಮುದಿನವರಿಗೆ ಇಂತಹ ಕಷ್ಟಗಳು ಬರುವುದು ಸಹಜವೇ. ಆದರೆ, ಪರಮೇಶ್ವರನು ಶೀಘ್ರವಾಗಿ ಅವರಿಗೆ ಆರೋಗ್ಯಭಾಗ್ಯವನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

**ಮದನಪಾಲ**— ದೇವೀ ! ನನ್ನ ತಾಯಿಯವರು ಅಪಾಯಸ್ಥಿತಿಯನ್ನು ದಾಟಿದರು. ಆದರೆ, ತನ್ನನ್ನು ಉಪಚರಿಸುವುದಕ್ಕಾಗಿ ಇಂದಿರೆಯ ಸಹಾಯವನ್ನು ಅಪೇಕ್ಷಿಸುವುದರಿಂದ ನಾನು ಬಂದಿರುವೆನು. ಅಮ್ಮನವರಿಗೆ ಸಂಭವಿಸಿದ ಆಕಸ್ಮಿಕವು ನನಗೆ ತುಂಬ ವ್ಯಸನವನ್ನುಂಟುಮಾಡಿತು. ಪರಂತು ನಿನ್ನ ಸ್ಮರಣೆಯಿಂದ ಆ ವ್ಯಸನವು ಹಾರಿ ಹೋಯಿತು. ಯಾವಾಗ ನೀನು ನನ್ನನ್ನು ಅನುಗ್ರಹಿಸುವೆಯೋ ಅಂದಿನಿಂದ ನನಗೆ ನಿಜವಾದ ಸುಖವು ಪ್ರಾಪ್ತವಾಗುವುದೆಂದು ನಾನು ಎಣಿಸಿದ್ದೇನೆ.

**ಹೇಮಪ್ರಭಾದೇವಿ**— ಇಂದಿರೆಯನ್ನು ಅವಶ್ಯ ಕಳುಹಿಸುವೆನು. ಆದರೆ ಒಂದು ಸಂಗತಿ ಮಾತ್ರ ನಿನಗೆ ಹೇಳಬೇಕಾಗಿದೆ. ನೀನು ತುಂಬ ಸದ್ಗುಣಶಾಲಿ. ಸಹನಶೀಲನು. ವಿಷದಿಂದ ಕ್ಷೀರವು ಕೆಡುವಂತೆ ದುರ್ಜನರ ಸಹವಾಸದಿಂದ ಸಜ್ಜನರು ಕೆಡುವರು. ನೀನು ವೀರಕ್ಷತ್ರಿಯ ವಂಶದಲ್ಲಿ ಹುಟ್ಟಿದವನು. ಅದೃಷ್ಟವಶದಿಂದ ರಾಜ್ಯವು ಸಹ ಸಂಪ್ರಾಪ್ತವಾಗಿದೆ. ನೀನು ಏನೋ ಒಂದು ಸಂಶಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಆಯಾಸಪಡುತ್ತಿರುವೆ. ನಾನು ಆಶ್ರಯಹೀನಳು. ನನ್ನ ಅಣ್ಣನ ಮಗಳನ್ನು ಬೆಳೆಯಿಸಿ ಅವಳ ಆಟಪಾಟಗಳನ್ನು ನೋಡುತ್ತ ಕಾಲಯಾಪನೆ ಮಾಡುತ್ತಿದ್ದೆನು. ಆ ಹುಡುಗಿಯು ಬಹಳ ಸುಂದರಿಯೆಂಬುದು ನಿನಗೆ ಹೇಳಬೇಕಾದುದೇ ಇಲ್ಲ. ನೀನು ಸಜ್ಜನನೆಂದು ನನಗೆ ತೋರಿದಂದಿನಿಂದ ಅವಳನ್ನು ನಿನಗೆ ವಿವಾಹ ಮಾಡಿಕೊಡಬೇಕೆಂದೆಣಿಸಿದ್ದೆನು. ನಿನಗದು ಸಮ್ಮತವಾಗಲಿಲ್ಲವೆಂದು ಕೆಲವು ದಿನಗಳ ಹಿಂದೆ ತಿಳಿದು ಕೊಂಡೆನು. ನಿನ್ನ ಮನೋಗತವು ಪರಪ್ರೇರಿತ

ವಾಗಿರುವುದಲ್ಲದೆ ವೀರ ರಮಣಿಯಾದ ನನಗೆ ಎಷ್ಟು ಆಲೋಚನೀಯ ವಾಗಿರುವುದೋ ನೀನು ಊಹಿಸಲಾರೆ. ಪುನಃ ಪುನಃ ಅಂತಹ ಪ್ರಸ್ತಾವ ವನ್ನು ನನ್ನಲ್ಲಿ ಮಾಡುವುದರಿಂದ ಉಪಯೋಗವೇನು ? ಒಂದು ವರ್ಷದ ಅವಧಿ ಯನ್ನು ಏರ್ಪಡಿಸಿರುವೆಯಲ್ಲವೇ ? ಅಲ್ಲಿಯ ವರೆಗೂ ಸಹನದಿಂದಿರು. ಕಾಲ ಪುರುಷನು ಸರ್ವವನ್ನೂ ಸರಿಪಡಿಸುವನು. ಇಷ್ಟಾದರೂ ವಿಮಲೆಯು ನಿನ್ನನ್ನು ಪ್ರೀತಿಸುವಳೋ ಇಲ್ಲವೋ ನಾನರಿಯೆ. ಅವಳು ಅಸ್ವಸ್ಥವಾಗಿರು ವುದರಿಂದ ಅವಳನ್ನು ಅವಳ ತಾಯಿಯ ಬಳಿಗೆ ಕಳುಹಿಸಿರುವೆನು.

**ಮದನಪಾಲ** — ದೇವಿ ! ನೀನು ನನ್ನನ್ನು ಗುಣವಂತನೆಂದು ಗ್ರಹಿಸಿ ರುವುದು ನನ್ನ ಭಾಗ್ಯವೇ ಸರಿ. ನಿಶ್ಚಯಿಸಿದ ಅವಧಿಗೆ ಮುಂಚೆ ಪುನಃ ಪುನಃ ಪ್ರಸ್ತಾವಿಸುವುದು ಸರಿಯಲ್ಲ. ಆದರೆ, ನೀನು ನಮ್ಮ ಅಂತಃಪುರಕ್ಕೆ ಆಗಾಗಬರು ತ್ತಿರುವುದನ್ನು ಕಂಡು ನನ್ನ ಬಂಧುಗಳೂ, ಮಿತ್ರರೂ ವಿವಾಹವು ನಿಶ್ಚಯವಾಯಿ ತೇ? ಎಂದು ಪದೇ ಪದೇ ಕೇಳುತ್ತಿರುವರು. ಆದುದರಿಂದ ಪುನಃ ಜ್ಞಾಪಿಸಿದೆನು. ಕ್ಷಮಿಸಬೇಕು. ನಿನಗೆ ಆಯಾಸವನ್ನುಂಟುಮಾಡಬೇಕೆಂದು ನಾನು ಸ್ವಪ್ನ ದಲ್ಲಿಯೂ ನೆನಸಿಲ್ಲವೆಂದು ನೀನೇ ಅರಿತಿರುವೆ. ಅದು ಹಾಗಿರಲಿ ! ವೀರ ಕ್ಷತ್ರಿಯನಾದ ನಿನ್ನ ಪತಿಯು ಇಂತಹ ನಿಂದಾಸ್ಪದವಾದ ಕಾರ್ಯವನ್ನು ಮಾಡಬಹುದೇ ? ಇದೆಲ್ಲವನ್ನೂ ಆಲೋಚಿಸಿಯೇ ನಾನು ನಿನ್ನ ಪುನರ್ವಿವಾಹ ಕ್ಕಾಗಿ ಸಮ್ಮತಿಸಿ ಶಾಸ್ತ್ರಪ್ರಮಾಣಗಳನ್ನು ಸಹ ಸಂಪಾದಿಸಿರುವೆನು. ಈ ವಿಷ ಯದಲ್ಲಿ ನನ್ನ ಅಪರಾಧವೇನು?

ಈ ಮಾತುಗಳನ್ನು ಕೇಳಿ ಹೇಮಪ್ರಭಾ ದೇವಿಗೆ ದೇಹಾದ್ಯಂತವೂ ಸುಡ ಲಾರಂಭಿಸಿತು. ಶಿರೋಭ್ರಮಣೆಯುಂಟಾಯಿತು. ತನ್ನ ಖಡ್ಗದಿಂದ ಮದನ ಪಾಲನ ಶಿರಸ್ಸನ್ನು ಆಕ್ಷಣವೇ ಛೇದಿಸಬೇಕೆಂಬ ರೋಷವುಂಟಾಯಿತು. ತನ್ನ ಕಟಿ ಪ್ರದೇಶದಲ್ಲಿದ್ದ ಖಡ್ಗದ ಮೇಲೆ ಕೈಹಾಕಿದಳು. ಆದರೆ, 'ಸಹನೆ, ಸಹನೆ' ಎಂಬ ಶಬ್ದವು ಎಲ್ಲಿಂದಲೋ ಕೇಳಿಸಿತು. ಕ್ಷಣಮಾತ್ರದಲ್ಲಿ ತನ್ನ ರೋಷವನ್ನು ಸಂವರಣಮಾಡಿಕೊಂಡು ಹೇಮಪ್ರಭಾದೇವಿಯು ಪ್ರಸನ್ನವದನಳಾಗಿ ಹೀಗೆ ಮಾತನಾಡಿದಳು. " ನನ್ನ ವಿಷಯದಲ್ಲಿ ನೀನು ದಯಾವಂತನಾಗಿರುವುದು ನನ್ನ ಪುಣ್ಯವೇ. ಆದರೆ, ಆ ರಾಜಚಂದ್ರನ ಸದ್ಗುಣಗಳನ್ನು ನೀನರಿಯೆ. ಆಗ ನೀನು ಹುಡುಗನಾಗಿದ್ದೆ. ನಾನು ಕೂಡ ಚಿಕ್ಕವಳಾಗಿದ್ದರೂ ಆ ರಾಜ ಋಷಿಯ ಸನ್ನಿಧಿಯಲ್ಲಿರುವ ಭಾಗ್ಯವು ಲಭಿಸಿದುದರಿಂದ ಆತನ ಸದ್ಗುಣಗಳನ್ನು ಗುರುತಿಸಲು ಸಾಧ್ಯವಾಯಿತು. ಒಂದೊಂದು ದಿನ ನಿನ್ನ ತಾಯಿಯು ಆತನ ಮೇಲೆ ಪ್ರಯೋಗಿಸಿದ ಕುಯುಕ್ತಿಗಳನ್ನು ಆತನು ತಿಳಿದುಕೊಂಡಿದ್ದರೂ

ತಂದೆಯು ಬಳಿಗೆ ಹೋಗಿ ಯಾರೋ ದ್ರೋಹಿಗಳು ಕಪಟವರ್ತನೆ ಮಾಡಿ ತನ್ನ ತಾಯಿಯ ಮೇಲೆ ಆರೋಪಿಸಿರುವರೆಂದು ಹೇಳುತ್ತಿದ್ದನೇ ಹೊರತು ಯಾವಾಗಲೂ ಆಕೆಗೆ ದ್ರೋಹವನ್ನೆಣಿಸಲಿಲ್ಲ. ಅಂತಹ ತಾಪಸೋತ್ತಮನ ಮೇಲೆ ಇಂತಹ ಅಪಖ್ಯಾತಿಯನ್ನು ಹೊರಿಸುವುದು ನ್ಯಾಯವೇ? ಆತನು ನಿರಪರಾಧಿಯೆಂದು ನಾನು ಆಗಲೇ ಸ್ಥಾಪಿಸ ಬೇಕಾಗಿದ್ದಿತು. ಆದರೆ, ವ್ಯಸನಾಕ್ರಾಂತಳಾಗಿಯೂ, ಅಸ್ವಸ್ಥಳಾಗಿಯೂ ಇದ್ದುದರಿಂದ ಏನು ಮಾಡಲೂ ತೋರದೆ ಸುಮ್ಮನಾದೆನು. ಅಲ್ಲದೆ, ಆತನು ಜೀವಂತನಾಗಿರುವನೋ ಇಲ್ಲವೋ ಎಂಬ ಸಂಶಯವು ಕೂಡ ತಲೆದೋರಿತು. ನನ್ನ ಮಗಳನ್ನೂ ಸಹಿತ ಕಳೆದುಕೊಂಡೆನು. ನಾವಿಕನ ಸಹಾಯವಿಲ್ಲದೆಯೇ ಗಾಳಿಯಿಂದ ಹೊಡೆದುಕೊಂಡು ಹೋಗುವ ಹಡಗಿನೋಪಾದಿಯಲ್ಲಿ ನನ್ನ ಜೀವಿತದ ನಾವೆಯು ನಡೆಯುತ್ತಿರುವುದು. ನಾನು ಎಷ್ಟು ವಿಲಪಿಸಿದರೂ ನಿನ್ನಲ್ಲಿ ಮಾತ್ರ ವಿಲಪಿಸ ಬಹುದು. ನೀನಾದರೂ ಆ ಮಹಾನುಭಾವನು ನಿರಪರಾಧಿಯೆಂದು ನಿರೂಪಿಸಲು ಯತ್ನಿಸು. ಅದರಿಂದ ಆತನ ಆತ್ಮಕ್ಕೆ ಸಂತುಷ್ಟಿಯಾಗಲಿ. ಆ ಪ್ರಯತ್ನಕ್ಕಾಗಿ ನನ್ನ ದ್ರವ್ಯವನ್ನೆಲ್ಲಾ ನಿನಗೆ ಅರ್ಪಿಸುವೆನು."

ಹೇಮಪ್ರಭಾ ದೇವಿಯು ಹೇಳಿದ ಪ್ರತಿಯೊಂದು ಮಾತನ್ನೂ ಮದನಪಾಲನು ಬಹಳ ಅಕ್ಕರೆಯಿಂದ ಕೇಳಿದನು. ಮನಸ್ಸಿನಲ್ಲಿ ಕಳವಳವುಂಟಾಯಿತು. "ದೇವಿಯ ಮಾತು ಅನೃತವಾಗಿರಲಾರದು. ಹಾಗಾದರೆ, ಮಹಾರಾಜನನ್ನು ಕೊಂದವರಾರು? ನನ್ನ ತಾಯಿಯ ತಂತ್ರವಿರಬಹುದೇ? ಆಹಾ! ಹಾಗಿರಲಾರದು. ತನ್ನ ಪತಿಯನ್ನು ಕೊಲ್ಲಿಸುವಳೇ? ಒಂದು ವೇಳೆ ಫಲ್ಗುನನು ಈ ಹತ್ಯೆಯನ್ನು ಮಾಡಿರಬಹುದೇ? ಅವನು ಬಾಲ್ಯದಿಂದಲೂ ನನ್ನನ್ನು ಎತ್ತಿಕೊಂಡು ಸೇವೆಮಾಡಿರುವನು. ಅಂತಹವನನ್ನು ರಕ್ಷಿಸಬೇಡವೇ? ಗತಿಸಿದ ಕಾರ್ಯವು ಗತಿಸಿ ಹೋಯಿತು. ನನಗೇನೋ ಅನಿರೀಕ್ಷಿತವಾದ ರಾಜ್ಯಭೋಗವು ಪ್ರಾಪ್ತವಾಯಿತು. ನಯದಿಂದಲೋ, ಭಯದಿಂದಲೋ ಈ ರಾಣಿಯನ್ನು ವಶಮಾಡಿಕೊಳ್ಳುವುದು ಈಗ ಮುಖ್ಯವಾಗಿದೆ. ನಾನೊಂದು ಅವಧಿಯನ್ನು ನಿಶ್ಚಯಿಸಿರುವಾಗ ಬಾರಿಬಾರಿಗೂ ಅವಳನ್ನು ಕೇಳುವುದು ನ್ಯಾಯವಲ್ಲ" ಎಂದು ಮುಂತಾದ ಆಲೋಚನೆಗಳು ಅವನ ಮನಸ್ಸಿನಲ್ಲಿ ಹೊಳೆದುವು.

**ಮದನಪಾಲ**— "ದೇವೀ! ಕ್ಷಮಿಸು. ಗತಿಸಿ ಹೋದ ಕಾರ್ಯಕ್ಕಾಗಿ ವ್ಯಸನ ಪಡುವುದು ನಿರರ್ಥಕವಲ್ಲವೆ? ವಿವಾಹವಾದ ಮೇಲೆ ನಿನ್ನ ಅಭೀಷ್ಟದಂತೆ ನಿಜವಾದ ಅಪರಾಧಿಯನ್ನು ಪತ್ತೆಮಾಡಿ ಹೊರಪಡಿಸೋಣ. ವ್ಯರ್ಥವಾದ ಆಲೋಚನೆಗಳಿಂದ ದೇಹವನ್ನು ಕೃಶಮಾಡಿಕೊಳ್ಳ ಬೇಡ. ನಾನು

ಹೋಗಿ ಬರುವೆನು. ಇಂದಿರೆಯನ್ನು ಜಾಗ್ರುತೆ ಕಳುಹಿಸಿಕೊಡು" ಎಂದು ಹೇಳಿ ನಿರ್ಗಮಿಸಿದನು.

ಹೇಮಪ್ರಭಾ ದೇವಿಯು ಅಂತಃಪುರದಲ್ಲಿ ಇಂದಿರೆಗೆ ಬದಲಾಗಿ ಬಂದಿದ್ದ ಲೀಲೆಯು ಅವಕಾಶ ದೊರೆತ ಹಾಗೆಲ್ಲ ಇಂದಿರೆಯ ಮೇಲೆ ಕ್ಷುದ್ರುಗಳನ್ನು ಹೇಳುತ್ತಿದ್ದಳು. ಇಂದಿರೆಯಲ್ಲಿ ಯಾವ ಅಪರಾಧವೂ ಕಾಣುತ್ತಿರಲಿಲ್ಲ. ಆ ದಿನ ಇಂದಿರೆಯು ಏನೋ ಆಲೋಚಿಸುತ್ತಿರುವಂತೆ ಕಂಡಿತು. ಹೇಮಪ್ರಭಾ ದೇವಿಯು ಇಂದಿರೆಯನ್ನು ಕರೆದು "ಇಂದಿರೆ! ನೀನು ಇಷ್ಟು ಚಿಂತಾಕ್ರಾಂತ ಳಾಗಿರುವುದನ್ನು ನಾನು ಇದುವರೆಗೂ ನೋಡಲಿಲ್ಲ. ಏತಕ್ಕಾಗಿ ದುಃಖ ಪಡುವೆ? ದುಃಖದ ಕಾರಣವನ್ನು ತಿಳಿಸಿದರೆ ನಾನು ಅದನ್ನು ಪರಿಹರಿ ಸುವೆನು" ಎಂದಳು.

**ಇಂದಿರೆ**— ಜನನೀ! ನೀವು ನನ್ನ ವಿಷಯದಲ್ಲಿ ವಹಿಸಿರುವ ಕರುಣದ ಮಹಿಮೆಯನ್ನು ನಾನು ತಿಳಿದುಕೊಂಡಿರುವೆನು. ಅದಕ್ಕಾಗಿ ನನ್ನ ದೇಹ ವನ್ನೇ ನಿಮಗೆ ಅರ್ಪಿಸಿದರೂ ಸಾಲದು. ನೀವು ರಾಜನೊಡನೆ ಹೇಳಿದ ಸಂಗತಿ ಯನ್ನು ಕೇಳಿ ಕಾರ್ಯಸಾಧನೆಗಾಗಿ ಏನು ಮಾಡಿದರೆ ಒಳ್ಳೆಯದೆಂದು ಆಲೋ ಚಿಸುತ್ತಿದ್ದೆನು. ಆ ಅಂತಃಪುರದಲ್ಲಿ ಅದಕ್ಕೆ ಬೇಕಾದ ಸಾಧನ ಸಾಮಗ್ರಿಗಳು ಒದಗುವುವೆಂದು ನನ್ನ ಅಂತರಾತ್ಮನು ಹೇಳುತ್ತಿರುವನು. ನೀವು ಧೈರ್ಯ ವನ್ನವಲಂಬಿಸಿ ನನ್ನನ್ನು ಅಲ್ಲಿಗೆ ಕಳುಹಿಸಬೇಕು.

**ಹೇಮಪ್ರಭಾದೇವಿ**— ಇಂದಿರೆ! ಈ ವಿಷಯದಲ್ಲಿ ನೀನು ಅಲ್ಲಿ ಅತಿ ಜಾಗರೂಕಳಾಗಿರ ಬೇಕು. ಇಲ್ಲವಾದರೆ, ನಿನ್ನ ಪ್ರಾಣಕ್ಕೆ ಹಾನಿ ಬರುವುದು. ಕ್ರೂರಾತ್ಮಳಾದ ಆ ಮುರಳಾದೇವಿಯು ಒಬ್ಬಳೇ ಸಾಕು. ಎಷ್ಟು ಜನ ಲೋಕಕಂಟಕರು ಅವಳ ಆಜ್ಞಾನುವರ್ತಿಗಳಿರುವರೋ, ಅವಳ ಪಕ್ಷಕ್ಕೆ ಸೇರಿದವರು ನನ್ನಲ್ಲಿಯೂ ಎಷ್ಟು ಜನರಿದ್ದಾರೆಯೋ ನಾನರಿಯೆ! ಮುದ್ದು ಕಂದ! ನಾನು ನಿನ್ನನ್ನು ಅಲ್ಲಿಗೆ ಕಳುಹಿಸಬೇಕಾಗಿ ಬಂದಿದೆ. ಏನು ಮಾಡಲಿ? ಅದು ಹಾಗಿರಲಿ, ಲಲಿತಕುಮಾರನು ರತ್ನದ್ವೀಪದಲ್ಲಿ ನಿಮ್ಮ ಮನೆಯಲ್ಲಿ ವಾಸ ಮಾಡುತ್ತಿದ್ದಾಗ ಆತನು ನಿನ್ನ ವಿಷಯದಲ್ಲಿ ಹೇಗೆ ಪ್ರವರ್ತಿಸಿದನು?

**ಇಂದಿರೆ**— ನೀವೇ ಸಾಕ್ಷಾತ್ ಹೆತ್ತ ತಾಯಿಯೆಂದು ಭಾವಿಸಿರುವ ನನಗೆ ನಿಮ್ಮಲ್ಲಿ ಹೇಳದಿರುವ ರಹಸ್ಯವು ಯಾವುದೂ ಇಲ್ಲ. ಲಲಿತಕುಮಾರ ನನ್ನು ನಾನು ಆತ್ಮಸಾಕ್ಷಿಯಾಗಿ ಪ್ರೇಮಿಸಿರುವೆನು. ಆತನು ಕೂಡ ಹಾಗೆ ಯೇ ನನ್ನನ್ನು ಪ್ರೇಮಿಸಿರುವನು. ಆದರೆ, ನಮ್ಮಿಬ್ಬರ ಪರಿಣಯಕ್ಕೆ ಒಂದು ಮಹಾಕಾರ್ಯವು ಅಡ್ಡವಾಗಿರುವುದು. ಅದು ಸಿದ್ಧಿಯಾದರೆ ನಮ್ಮಿಬ್ಬರಿಗೂ

ವಿವಾಹವೂ ನಿಶ್ಚಯವೇ ಸರಿ. ಇಲ್ಲದಿದ್ದರೆ, ಮದುವೆಯೂ ನಿಂತುಹೋಗುವುದು. ಆತನು ಇಲ್ಲಿಗೆ ಬಂದಾಗ ನನ್ನೊಡನೆ ಮಾತನಾಡಿದನು. ನನಗೆ ಬೇಕಾದ ಸಹಾಯವನ್ನು ಮಾಡುವೆನೆಂದು ಒಪ್ಪಿಕೊಂಡಿರುವನು. ಅವಶ್ಯ ಬಿದ್ದಾಗ ತಿಳಿಸುವೆನೆಂದು ಹೇಳಿರುವೆನು. ಆ ಕಾರ್ಯವು ಯಾವುದೆಂಬುದು ಆತನಿಗೆ ಇನ್ನೂ ಗೊತ್ತಿಲ್ಲ.

**ಹೇಮಪ್ರಭಾದೇವಿ—** ಇಂದಿರೇ! ರತ್ನದ್ವೀಪವಾಸಿಯಾದ ನಿನಗೆ ಇಲ್ಲಿ ಸಾಧಿಸಬೇಕಾದ ಕಾರ್ಯವೆಂತಹುದು? ಆ ಅಂತಃಪುರಕ್ಕೆ ಹೋಗಿ ಕಾರ್ಯ ಸಾಧನೆಯನ್ನು ಮಾಡುವೆನೆಂಬುದಾಗಿ ಈಗಲೇ ಹೇಳಿದೆಯಷ್ಟೆ? ಅದು ಸಫಲ ವಾದರೆ ನನಗೆ ಕೂಡ ಮೇಲುಂಟಾಗುವುದೇ? ಅಥವಾ, ಆ ಕಾರ್ಯವು ಬೇರೆಯೇ? ಮುಚ್ಚುಮರೆಯಿಲ್ಲದೆ ನನಗೆ ಏಕೆ ಹೇಳಬಾರದು?

**ಇಂದಿರೆ—** ಈಷನ್ಮಾತ್ರವಾದರೂ ಆ ಕಾರ್ಯವನ್ನು ಕುರಿತು ಮಾತ ನಾಡ ಬಾರದೆಂದು ನನ್ನ ಗುರುವಿನ ಆಜ್ಞೆಯಿರುವುದು. ಆದುದರಿಂದಲೇ ನಾನು ಯಾವ ಸಂಗತಿಯನ್ನೂ ಹೇಳಲಾರದೆ ಭೀತಳಾಗಿರುವೆನು.

**ಹೇಮಪ್ರಭಾದೇವಿ—** ನಿನ್ನ ಗುರು ಯಾರು?

**ಇಂದಿರೆ—** ಅಮ್ಮಾ! ನನ್ನ ತಂದೆಯೇ.

**ಹೇಮಪ್ರಭಾದೇವಿ—** "ನಿನ್ನಂತಹ ಸುಪುತ್ರಿಯನ್ನು ಹೆತ್ತ ತಂದೆಗೆ ಸುಖವು ಹೇಗೆ ಉಂಟಾಗಲಾರದು? ನನ್ನ ಕಾರ್ಯವು ನಿನ್ನ ತಂದೆಗೆ ಸಂಬಂಧಿಸಿ ರುವುದೆಂದು ಭಾವಿಸುತ್ತೇನೆ. ಕೆಲವು ದಿನಗಳೊಳಗಾಗಿ ನಿನ್ನ ಕಾರ್ಯವನ್ನು ನಾನು ಕಂಡುಕೊಳ್ಳದಿರಲಾರೆನು. ನೀನೇ ನನ್ನ ಮಗಳೆಂದು ಹೇಳದೆ ಇರ ಲಾರೆನು. ಕಾರ್ಯವು ಕೈಗೂಡುವ ವರೆಗೂ ಸಹನೆಯಿಂದಿರುವೆನು." ಎಂದು ಹೇಳುತ್ತಾ ಇಂದಿರೆಯನ್ನು ಗಾಢಾಲಿಂಗನೆಮಾಡಿಕೊಂಡು ಮುತ್ತಿಟ್ಟು ಹೊರ ಗೆಹೋದಳು. "ತನ್ನನ್ನು ತನ್ನ ಜನನಿಯು ಗುರುತಿಸಿದಳು. ದೇಹದ ಬಣ್ಣ ದಿಂದ ಇನ್ನೂ ಸ್ವಲ್ಪ ಅನುಮಾನವಿದ್ದಂತೆ ತೋರುವುದು. ಹಾಗೆಯೇ ಕೆಲವು ದಿನಗಳು ಇರಲಿ," ಎಂದುಕೊಳ್ಳುತ್ತಾ ತಾಯಿಯ ಸುಖ ಸ್ಪರ್ಶ ದಿಂದುಂಟಾದ ಆನಂದವನ್ನನುಭವಿಸಿ ಮೆಲ್ಲನೆ ಇಂದಿರೆಯು ಹೊರಗೆ ಬಂದಳು.

ಅಷ್ಟರಲ್ಲಿ ರಾಜಸ್ತ್ರೀಯರು ಬಂದು ರಾಣಿಯೊಡನೆ ಹೊರಗೆ ಸಂಭಾಷಿಸು ತ್ತಿದ್ದರು. ಇಂದಿರೆಯು ಅವರ ಇದಿರಿನಲ್ಲಿರುವ ಮಹಲನ್ನು ಪ್ರವೇಶಿಸಿ ಒಂದು ಉನ್ನತಾಸನದಲ್ಲಿ ಕುಳಿತು ಅವರ ಸಂಭಾಷಣೆಯನ್ನು ಒಂದು ಜಾಲ ಮಾರ್ಗದಿಂದ ಕೇಳುತ್ತಿದ್ದಳು. ಇಂದಿರೆಯಲ್ಲಿ ರಂಧ್ರಾನ್ವೇಷಣೆ ಮಾಡುವುದೇ ಲೀಲೆಗೆ ಒಂದು ದೊಡ್ಡ ಉದ್ಯೋಗವಾದುದರಿಂದ ಇಂದಿರೆಯನ್ನು ಹುಡುಕಿ

ಕೊಂಡು ಅವಳು ಏಕಾಕಿನಿಯಾಗಿದ್ದ ಆ ಮಹಲಿಗೆ ಬಂದಳು. ಇಂದಿರೇ! ನೀನು ಇಲ್ಲಿ ಒಂಟಿಯಾಗಿ ಏನು ಮಾಡುತ್ತಿರುವೆ? ಅವರೆಲ್ಲರನ್ನೂ ನೋಡುತ್ತಾ ನೀನು ಅಲ್ಲಿಯೇ ಇರಬಾರದೇ?

**ಇಂದಿರೆ—**ಇಲ್ಲಿ ಕುಳಿತುಕೊಂಡು ನೋಡುವುದೇ ನನಗೆ ಇಷ್ಟ. ದೊಡ್ಡವರು ಸೇರಿ ಮಾತನಾಡುತ್ತಿರುವಾಗ ನಾವು ಅವರ ಇದಿರಿನಲ್ಲಿ ನಿಂತು ಕೊಳ್ಳಬಹುದೇ?

**ಲೀಲಾ**–ಸರಿಯಂತೆ ಕುಳಿತು ಹೊಂಚುಹಾಕುವುದು ಮಾತ್ರ ನ್ಯಾಯವೆ?

**ಇಂದಿರೆ—** ಲೀಲಾ! ಎಷ್ಟು ಉನ್ಮತ್ತಳೇ ನೀನು! ಅವರ ಸ್ಥಿತಿಯೆಲ್ಲಿ, ನಮ್ಮ ಸ್ಥಿತಿಯೆಲ್ಲಿ? ಅವರ ತಪ್ಪನ್ನು ಕಂಡುಹಿಡಿಯುವುದಕ್ಕೆ ನಾನು ಎಷ್ಟರವಳು? ಅಥವಾ ಅವರಲ್ಲಿ ಏನು ತಪ್ಪು ಕಂಡು ಹಿಡಿಯಬಹುದು? ಒಂದು ವೇಳೆ ನೀನು ಹೇಳಿದಂತೆ ಅವರ ಚರ್ಯೆಗಳನ್ನು ಕಂಡು ಹಿಡಿದರೆ ಅದರಿಂದ ಅವರಿಗೇನಾಗುವುದು? ನಮಗೆ ತಾನೇ ಏನುಫಲ? ಯಾವುದೂ ತಿಳಿಯದೆ ಪರನಿಂದೆ ಮಾಡುವುದು ದೋಷವಲ್ಲವೇ? ಏಕೆ ಹೀಗೆ ಅಸ್ವಸ್ಥವನ್ನಾಡುವೆ?

**ಲೀಲಾ—**ನೀನು ಪಾಪವೆಂಬುದನ್ನೇ ಅರಿಯದೆ ಸ್ವರ್ಗದಿಂದ ಬಂದ ದೇವಕನ್ನಿಕೆಯೇನೋ! ಇಷ್ಟು ಬಾಲ್ಯದಲ್ಲಿ ತಂದೆಯನ್ನು ಬಿಟ್ಟು ರತ್ನದ್ವೀಪದಿಂದ ಬಂದಿರುವ ನೀನು ಎಷ್ಟು ಸಹಸಗಾತಿಯಾಗಿರಬೇಕು! ಇಲ್ಲಿ ನನಗೆ ಸ್ವಂತ ಜನರಾರೂ ಇಲ್ಲನೆಂದು ಹೇಳಿದೆಯಲ್ಲ? ಅದು ಸುಳ್ಳಲ್ಲವೋ?

**ಇಂದಿರೆ—** ನಾನು ಈ ದಿನ ರಾಜಮಾತೆಯ ಸನ್ನಿಧಿಗೆ ಹೋಗುವೆನು. ಅಲ್ಲಿ ನಾನೇನಾದರೂ ದ್ರೋಹ ಮಾಡಿದರೆ ನೀನು ಇಲ್ಲಿಂದ ಆಕೆಯನ್ನು ಹೇಗೆ ಕಾಪಾಡಬಲ್ಲೆ? ಈ ಎರಡು ಅಂತಃಪುರಗಳನ್ನೂ ಕಾಪಾಡುವ ಭಾರವು ನಿನ್ನ ಮೇಲಿರುವುದೇ?

**ಲೀಲಾ—** ನಿನ್ನ ಚಾತುರ್ಯವು ರಾಜಮಾತೆಯ ಬಳಿಯಲ್ಲಿ ನಡೆಯಲಾರದು. ಎಚ್ಚರಿಕೆಯಿಂದ ಪ್ರವರ್ತಿಸು. ನಿನ್ನಲ್ಲಿ ಈಷನ್ಮಾತ್ರವಾದರೂ ದ್ರೋಹ ಬುದ್ಧಿಯಿದೆಯೆಂದು ಆಕೆಯು ಗುರುತಿಸಿದರೆ ನೀನು ಈಪ್ರಪಂಚದಲ್ಲಿ ಜೀವಿಸಿರಲಾರೆ. ಚಿತ್ರವಧೆಗೆ ಪಾಲಾಗುವೆ.

**ಇಂದಿರೆ—** "ನಾನು ಅಂತಹ ದ್ರೋಹವನ್ನು ಮಾಡಿದರಲ್ಲವೇ ರಾಜಮಾತೆಯು ಶಿಕ್ಷಿಸುವಳು? ಲೀಲಾ! ಸದ್ಯಕ್ಕೆ ನಿಲ್ಲಿಸು. ನಾನು ಹೋಗುವೆನು" ಎಂದು ಹೇಳಿ ಅಲ್ಲಿರುವ ಪರ್ವತದ ತಪ್ಪಲಿನಲ್ಲಿ ಕುಳಿತು ನದಿಯಲ್ಲಿ ಬರುತ್ತಿದ್ದ ಅಲೆಗಳನ್ನು ನೋಡುತ್ತ ಉಕ್ಕಿ ಬರುತ್ತಿದ್ದ ದುಃಖವನ್ನು ಸಂವರಣ ಮಾಡಿಕೊಂಡು ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದಳು. ಆಗ ಸೂರ್ಯನು

ಪಶ್ಚಿಮಾದ್ರಿಯನ್ನು ಪ್ರವೇಶಿಸುತ್ತಿದ್ದನು. ಸ್ವಲ್ಪ ಹೊತ್ತಿನ ಮೇಲೆ ಯಾರೋ ಸಮೀಪದಲ್ಲಿಯೇ ಮಾತನಾಡುತ್ತಿದ್ದಂತೆ ಕೇಳಿಸಿತು. ಕತ್ತಲೆಯಾದುದರಿಂದ ಇಂದಿರೆಯನ್ನು ಅವರು ನೋಡಲಿಲ್ಲ.

**ಫಲ್ಗುನ—** ನೀಲವೇಣಿ! ನಮ್ಮ ವಿವಾಹದ ವಿಷಯವಾಗಿ ನೀನು ಹೇಗೆ ನಿರ್ಧರಿಸಿಕೊಂಡಿರುವೆ?

**ನೀಲ—** ನಾನು ಇನ್ನೂ ಆಲೋಚಿಸಲಿಲ್ಲ. ಅದಕ್ಕಾಗಿ ನೀನು ಕೋಪಗೊಳ್ಳಬೇಡ. ನೀನು ಕ್ರೂರಚಿತ್ತನೆಂದು ನನ್ನ ಅಭಿಪ್ರಾಯ. ಅಂತಃಪುರದಲ್ಲಿರುವ ಸೇವಕರ ಮೇಲೆ ನೀನು ತೋರಿಸುತ್ತಿರುವ ಅಧಿಕಾರದ ದರ್ಪವು ತುಂಬ ಕಠಿನವಾಗಿದೆ. ಅವರಂತೆಯೇ ನೀನೂ ಒಬ್ಬ ಸೇವಕನಲ್ಲವೇ? ನಿನಗೆ ಮಾತ್ರ ಅಷ್ಟು ಅಹಂಕಾರವೇತಕ್ಕೆ? ನೀನು ಅಷ್ಟ ದರಿದ್ರನು. ನಿನ್ನನ್ನು ಮದುವೆಯಾದರೆ ನನಗೇನು ಸುಖ? ಈಗ ಪರಮಸಾಧ್ವಿಯಾದ ಹೇಮಪ್ರಭಾದೇವಿಯನ್ನು ಆಶ್ರಯಿಸಿ ಸುಖವಾಗಿದ್ದೇನೆ. ನಿನ್ನನ್ನು ಕಟ್ಟಿಕೊಂಡರೆ "ದಾರಿಯಲ್ಲಿ ಹೋಗುವ ಶನೀಶ್ವರನೇ, ನನ್ನ ಮನೆಗೆ ಬಾ" ಎಂದು ಕರೆತಂದಂತಾಗುವುದು. ಇಲ್ಲದ ಪೀಡೆಯನ್ನು ಏಕೆ ಕಟ್ಟಿಕೊಳ್ಳಬೇಕೆಂದು ಸುಮ್ಮನಿದ್ದೇನೆ.

**ಫಲ್ಗುನ—** ಎಲೌ! ಹುಚ್ಚೀ! ಇಷ್ಟೇನೇ ನಿನ್ನ ಬುದ್ಧಿ? ನಾನು ಅರಸನ ಬಳಿಯಲ್ಲಿ ಯಃಕಶ್ಚಿತ್ ಸೇವಕನಾಗಿರುವೆನೆಂದು ಎಣಿಸಿರುವೆಯಾ? ಸ್ವಲ್ಪ ಕಡಮೆ ಅರಸನಿಗೆ ಸಮಾನವಾಗಿದ್ದೇನೆಂದು ತಿಳಿ. ಹಾಗಿಲ್ಲದಿದ್ದರೆ, ಸಾಮಂತರಾಜರು ನನ್ನನ್ನು ನೋಡಿ ಭಯಪಡುವರೇ? ನಾನು ಅಂತಹ ಉನ್ನತಪದವಿಗೆ ಬಂದಿರುವುದು ಒಂದು ರಹಸ್ಯ. ಮದುವೆಯಾದ ಮೇಲೆ ನನ್ನ ಆ ಸಂಗತಿಯನ್ನು ನಿನಗೆ ತಿಳಿಸುವೆನು. ನನಗೆ ಅಪರಿಮಿತ ದ್ರವ್ಯವಿದೆ. ಅರಸನು ಹೇಮಪ್ರಭಾದೇವಿಯನ್ನು ಮದುವೆಯಾದ ಕ್ಷಣವೇ ನಿನ್ನ ಸಮೇತ ನಾನು ಗುಜರಾತ ದೇಶಕ್ಕೆ ಹೋಗಿ ಒಂದು ದಿವ್ಯ ಭವನವನ್ನು ಕೊಂಡುಕೊಂಡು ಒಬ್ಬ ದೊಡ್ಡ ಜಮೀನುದಾರನಂತಿರುವೆನು. ನಿನಗೆ ಜಮೀನುದಾರನ ರಾಣಿಯಾಗಲು ಇಷ್ಟವಿಲ್ಲವೇ?

**ನೀಲ—**ಫಲ್ಗುನ! ಎಲ್ಲಿಂದಲಾದರೂ ಕಳುವು ಮಾಡದೆ ನಿನ್ನಂತಹವರಿಗೆ ಅಷ್ಟು ದ್ರವ್ಯ ದೊರೆಯುವುದೆಂದರೇನು? ಕಳ್ಳಸ್ವತ್ತನ್ನು ಅನುಭವಿಸುತ್ತ ದೊಡ್ಡಸ್ತಿಕೆಯನ್ನು ನಟಿಸುವುದೂ ಒಂದು ಗೌರವ ಜೀವನವೇ? ಒಂದು ವೇಳೆ ನಿನ್ನಲ್ಲಿ ಅಷ್ಟು ಧನವಿರುವುದು ನಿಶ್ಚಯವಾದರೆ ಅದು ನಿನಗೆ ದಕ್ಕಿದ ಕಾಲಕ್ಕೆ ನೋಡೋಣ. ಹೇಮಪ್ರಭೆಯು ಅರಸನನ್ನು ವಿವಾಹವಾಗುವಳೆಂದು ನೀನು ನಂಬಿರುವೆಯಾ? ದ್ವಿತೀಯ ವಿವಾಹವು ಸ್ತ್ರೀಯರಿಗೆ ಹೇಗೆ ಧರ್ಮವಾದೀತು?

**ಫಲ್ಗುನ**— ಧರ್ಮವೋ, ಅಧರ್ಮವೋ! ನೀನು ನಿಮ್ಮ ರಾಣಿಯನ್ನು ಸಮಕ್ಷಮ ಕೇಳಬಲ್ಲೆಯಾ?

**ನೀಲ**—ನಮ್ಮ ರಾಣಿಯ ಸನ್ನಿಧಿಯಲ್ಲಿ ಇಂತಹ ಪ್ರಸ್ತಾವವನ್ನು ಮಾಡಲಾದೀತೇ? ಆಕೆ ಸರ್ವದಾ ಶಾಸ್ತ್ರವಿಚಾರ ಮಾಡುತ್ತ ಇರುವಾಗ ವಿಲೋಚನೆಯನ್ನು ಕೇಳಿದೆನು. ಪುನರ್ವಿವಾಹವು ಶಾಸ್ತ್ರಸಮ್ಮತವೋ, ಅಲ್ಲವೋ ಎಂಬುದನ್ನು ಪರಿಶೋಧಿಸುತ್ತಿರುವಳೆಂದು ನನಗೆ ಹೇಳಿದಳು.

**ಫಲ್ಗುನ**— ಹಾಗಾದರೆ, ನಮ್ಮ ರೊಟ್ಟಿಯು ತುಪ್ಪದಲ್ಲಿ ಬಿದ್ದಂತಾಯಿತು. ಇಂತಹ ಸಂಗತಿಗಳನ್ನು ನೀನು ಹೇಮಪ್ರಭಾ ದೇವಿಯವರ ಬಳಿ ಮಾತನಾಡದಿರುವುದೇ ಲೇಸು. ನೀನು ಅಪಾಯಕಳು. ನಿನ್ನನ್ನು ನಾನೆಂದಿಗೂ ಮೋಸಗೊಳಿಸಲಾರೆನು. ನೀಲಾ! ನಿಮ್ಮ ದೇವಿಯವರಲ್ಲಿ ಒಬ್ಬ ಹೊಸ ಸಖಿ ಬಂದಿರುವಳಷ್ಟೇ. ಆವಳ ಸಂಗತಿ ನಿನಗೇನಾದರೂ ಗೊತ್ತೇ?

ಈ ಮಾತನ್ನು ಕೇಳಿದ ಒಡನೆಯೇ ಇಂದಿರೆಯು ಚಕಿತಳಾದಳು. ಪಕ್ಕದಲ್ಲಿರುವ ಶಿಲೆಯ ಮೇಲೆ ಹಾಗೆಯೇ ಒರಗಿಕೊಂಡಳು.

**ನೀಲ**–ಆ ಹುಡುಗಿಯು ರತ್ನದ್ವೀಪದವಳಂತೆ. ಬಹಳ ವಿದ್ಯಾವತಿ. ಕಪ್ಪಾಗಿದ್ದರೂ ಸುಂದರಿಯು. ಸದ್ಗುಣಸಂಪನ್ನಳು. ಒಬ್ಬರ ಗೋಜಿಗೂ ಹೋಗುವುದಿಲ್ಲ. ಹೇಮಪ್ರಭಾ ದೇವಿಯು ಕರೆದರೆ ಮಾತ್ರ ಹೋಗುವಳೇ ಹೊರತು ಅನಾವಶ್ಯಕವಾಗಿ ಅವರಲ್ಲಿಗೆ ಹೋಗುವುದಿಲ್ಲ. ಅವಳ ತಂದೆಯು ಬಂದು ಅವಳನ್ನು ಕರೆದುಕೊಂಡು ಹೋಗುವವರೆಗೂ ಇಲ್ಲಿರುವಳಂತೆ. ಏನು ಕಾರಣವೋ ಲೀಲೆಗೆ ಮಾತ್ರ ಅವಳ ಮೇಲೆ ಅಸೂಯೆ. ಲೀಲೆ ಬಹಳ ಗಯ್ಯಾಳಿಯೆಂಬುದು ತಿಳಿದ ವಿಷಯವೇ. ಯಾರನ್ನು ನೋಡಿದರೂ ಅವಳು ಸಂದೇಹಪಡುವಳು.

**ಫಲ್ಗುನ**— ಇಂದಿರೆಯು ರಾಜಮಾತೆಯ ಬಳಿಗೆ ಹೋಗುವುದು ನಿಶ್ಚಯವೇ?

**ನೀಲ**— ಆ ಸಂಗತಿ ನನಗೆ ತಿಳಿಯದು.

**ಫಲ್ಗುನ**— "ನೀಲಾ! ನೀನು ಈ ಪ್ರಪಂಚಕ್ಕೆ ತಕ್ಕವಳಲ್ಲ. ಹೀಗಿರುವುದು ಕೂಡ ಕ್ಷೇಮವೇ? ಈ ಫಲ್ಗುನನು ಸರ್ವಜ್ಞನೆಂದು ತಿಳಿ. ಇವನಿಗೆ ತಿಳಿಯದೆ ಒಂದು ಹಕ್ಕಿಯಾದರೂ ಉದಯಪುರಿಯಲ್ಲಿ ಚಲಿಸಲಾರದು. ಇಂದಿರೆಯು ಮಾತ್ರ ಹೇಗೆ ತಪ್ಪಿಸಿಕೊಂಡಾಳು? ನೋಡೋಣ. ಕತ್ತಲೆಯಾಗುತ್ತಿದೆ, ನಡೆ." ಎಂದು ಹೇಳುತ್ತ ಇಬ್ಬರೂ ನಿರ್ಗಮಿಸಿದರು. ಅವರು ಮಾತನಾಡುತ್ತ ಬಹುದೂರ ಹೋಗುವವರೆಗೂ ಇಂದಿರೆಯು ಅಲ್ಲಿಯೇ ಇದ್ದು, ಧೈರ್ಯದಿಂದೆದ್ದು ಬೇಗನೆ ಅರಮನೆಯನ್ನು ಸೇರಿದಳು. ತನ್ನ ಹಾಸಿಗೆಯ

ಮೇಲೆ ಮಲಗಿಕೊಂಡಳೇ ಹೊರತು ನಿದ್ರೆ ಬರಲಿಲ್ಲ. "ಆಹಾ! ಏನು ವಿಚಿತ್ರ! ನನ್ನ ಕಾರ್ಯಪರಿಶೋಧನೆಗೆ ಈ ದಿನವೇ ಸಂದು ದೊರಕಿತು. ಫಲ್ಗುನನೇ ಮಹಾರಾಜನನ್ನು ಕೊಂದವನೆಂದು ತೋರುತ್ತಿದೆ. ನೀಲವೇಣಿಗೂ ಇವನಿಗೂ ಈ ದಿನ ನಡೆದ ಸಂಭಾಷಣೆಯಿಂದ ಅವಳು ಇವನನ್ನು ಮದುವೆಯಾಗಲು ಒಪ್ಪಿದಂತೆ ಕಾಣುವುದಿಲ್ಲ. ಆದರೆ, ನಿಶ್ಚಯವೇನೋ ತಿಳಿಯದು. ಫಲ್ಗುನನು ಸಾಮಾನ್ಯನಲ್ಲವೆಂದು ಅವನ ಮಾತುಗಳಿಂದಲೇ ಸ್ಪಷ್ಟಪಟ್ಟಿರುವುದು. ಅವನ ಮಾತುಗಳು ತುಂಬ ಭಾವಗರ್ಭಿತಗಳಾಗಿರುವುವ" ಎಂದು ಮನಸ್ಸಿನಲ್ಲಿಯೇ ವಿತರ್ಕಿಸಿಕೊಂಡು ಹಾಗೆಯೇ ನಿದ್ರೆ ಹೋದಳು.

ಮರುದಿನ ಬೆಳಿಗ್ಗೆ ಅಂಚೆಯವನು ಪತ್ರಗಳನ್ನು ತಂದು ವಿಲೋಚನೆಗೆ ಕೊಟ್ಟನು. ಅವಳು ಇಂದಿರೆಗೆ ಅರ್ಪಿಸಿದಳು. ಇಂದಿರೆಯು ವಿಶ್ರಾಂತಿ ಮಂದಿರದಲ್ಲಿದ್ದ ರಾಣಿಗೆ ತೋರಿಸಿ ತನ್ನ ತಂದೆಯಿಂದ ಬಂದ ಕಾಗದವನ್ನು ತೆಗೆದುಕೊಳ್ಳಬಹುದೇ? ಎಂದು ಕೇಳಿದಳು. ನಿನ್ನ ಜನಕನ ಕಾಗದವನ್ನು ನೀನು ತೆಗೆದು ಕೊಳ್ಳಲು ನನ್ನ ಅಭ್ಯಂತರವಿಲ್ಲವೆಂದು ರಾಣಿಯು ಅಪ್ಪಣೆಕೊಡಿಸಿದ ಮೇಲೆ ಅದನ್ನು ಬಿಚ್ಚಿ ಓದಿಕೊಂಡು ನನ್ನ ತಂದೆಯು ಕಾಳೀಘಟ್ಟಕ್ಕೆ ಬಂದಿರುವುದಾಗಿಯೂ, ಕ್ಷಿಪ್ರದಲ್ಲಿಯೇ ಇಲ್ಲಿಗೆ ಬರುವುದಾಗಿಯೂ ಬರೆದಿದ್ದಾರೆಂದು ಹೇಮಪ್ರಭಾದೇವಿಗೆ ಹೇಳಿದಳು.

**ಹೇಮಪ್ರಭಾದೇವಿ**— ಇಂದಿರೆ! ನಿನ್ನ ತಂದೆಯು ಇಲ್ಲಿಗೆ ಬರುವುದು ತುಂಬ ಸಂತೋಷ. ನಾನು ಕೂಡ ನೋಡುತ್ತೇನೆ. ಈ ದಿವಸ ಮದನಪಾಲನು ನನ್ನ ಅಳಿಯನೊಂದಿಗೆ ಇಲ್ಲಿಗೆ ಬರುವನು. ಅವರ ಭೋಜನಕ್ಕೆ ತಕ್ಕ ವಿಪರ್ಯಾಟುಗಳನ್ನು ಮಾಡಿ ನೀನೇ ಶ್ರದ್ಧೆಯಿಂದ ನೋಡಿಕೊಳ್ಳಬೇಕು.

**ಇಂದಿರೆ**— ಅಮ್ಮಾ! ನಿಮ್ಮ ಅಳಿಯಂದಿರಾರು?

**ಹೇಮಪ್ರಭಾ ದೇವಿ**— ನೀನು ನನ್ನ ಮಗಳಾದರೆ ಲಲಿತಕುಮಾರನು ನನ್ನ ಅಳಿಯನಲ್ಲವೇ?

**ಇಂದಿರೆ**— ರಾಜ್ಞೀ! ನೀವು ರಹಸ್ಯವನ್ನು ರಕ್ಷಿಸಬೇಕು. ಯಾರಾದರೂ ಕೇಳಿದರೆ ಏನು ಗತಿ?

**ಹೇಮಪ್ರಭಾದೇವಿ**— ಇಂದಿರೇ! ನಾನು ಮರತೆನು. ಅಲ್ಪ ಸಂತೋಷಿಣಿಯಾದುದರಿಂದ ಯಾವ ಸಂತೋಷ ವಾರ್ತೆಯನ್ನು ಕೇಳಿದರೂ ಮೈಮರೆಯುವೆನು. ನನಗೆ ವಿಪತ್ಪರಂಪರೆಗಳು ಬಂದ ಮೇಲೆ ಈ ಸ್ಥಿತಿಯುಂಟಾಗಿರುವುದು. ಹಾಗೆಯೇ ದುಃಖ ಬಂದರೂ ಮೈಮರೆಯುವೆನು.

**ಇಂದಿರೆ**— ಜನನೀ! ವೀರಕ್ಷತ್ರಿಯ ವಂಶದಲ್ಲಿ ಹುಟ್ಟಿ, ವೀರ ಪತ್ನಿ

ಯಾಗಿರುವ ನಿಮಗೆ ಇಂತಹ ಹೃದಯ ದೌರ್ಬಲ್ಯವು ಇರಕೂಡದು. ದೃಢ ಸಂಕಲ್ಪದಿಂದ ಇದನ್ನು ನೀವು ಕಳೆದುಕೊಳ್ಳಬೇಕು.

**ಹೇಮಪ್ರಭಾದೇವಿ—** ಇಂದಿರೆ! ಧೈರ್ಯವಿದ್ದುದರಿಂದಲೇ ಇಲ್ಲಿಯ ವರೆಗೂ ದುಃಖಗಳನ್ನು ಸಹಿಸಿಕೊಂಡು ಬಂದೆನು. ಈ ಹದಿನಾರು ವರ್ಷಗಳಿಂದ ನನಗೆ ಧೈರ್ಯವನ್ನು ಹೇಳುವವರೇ ಇರಲಿಲ್ಲ. ನನ್ನ ಮನೋವಲ್ಲಭನು ಜೀವಿಸಿರುವನೆಂದು ನನ್ನ ಅತ್ತೆಯವರು ಆಗಾಗ್ಗೆ ಸ್ವಪ್ನದಲ್ಲಿ ಹೇಳುತ್ತಿದ್ದರು. ನನಗೆ ಗಗನಾಂತಃಪುರ ಕಲ್ಪನೆಯಾಗಿದ್ದಿತು. ಈಗ ನಿನ್ನ ಮುಖದಿಂದ ಅವರು ಜೀವಿಸಿರುವರೆಂದು ಕೇಳಿ ಧೈರ್ಯವುಂಟಾಗಿದೆ. ವೀರ ಕ್ಷತ್ರಿಯರಾಗಿದ್ದರೂ ಕಷ್ಟಗಳಲ್ಲಿ ಕುಂದುವುದು ಸಹಜವು. ಅಲ್ಲದೆ, ಕಷ್ಟಕಾಲಗಳಲ್ಲಿ ಏನು ಮಾಡುವುದಕ್ಕೂ ಶಕ್ತರಾಗಲಾರರು. ಪಾಂಡವರೂ ವೀರ ಕ್ಷತ್ರಿಯರೇ. ಆದರೆ, ಅವರು ಕೂಡ ಹನ್ನೆರಡು ವರ್ಷ ಅರಣ್ಯವಾಸವನ್ನೂ, ಒಂದು ವರ್ಷ ಅಜ್ಞಾತ ವಾಸವನ್ನೂ ಮಾಡಬೇಕಾಗಿ ಬಂದಿತು. ಅಯ್ಯೋ! ನನ್ನ ಮನೋನಾಯಕನಾದರೋ ಹದಿನಾರು ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಅಜ್ಞಾತವಾಸವನ್ನು ಮಾಡುತ್ತ ಹೊರಗೆ ತಲೆದೋರಿದರೆ ಏನು ವಿಪತ್ತು ಬರುವುದೋ ಎಂದು ಮರೆಯಲ್ಲಿಯೇ ಇರಬೇಕಾಗಿದೆ. ಈ ರಾಜ್ಯದಿಂದ ಆತನನ್ನು ಹೊರಡಿಸಿದರೂ ಚಿಂತೆಯಿಲ್ಲ. ಸ್ವೇಚ್ಛೆಯಾಗಿರಲು ಅವಕಾಶವಿದ್ದಿದ್ದರೆ ನಾನು ಕೂಡ ಆತನ ಹಿಂದೆಯೇ ಇದ್ದು ಆತನ ಸುಖದುಃಖಗಳಿಗೆ ಭಾಗಿನಿಯಾಗುತ್ತಿದ್ದೆನು. ಆ ಅದೃಷ್ಟವು ನನಗೆ ಇಲ್ಲದಂತಾಗಿರುವುದು. ಈ ಚಿಂತೆಯಿಂದಲೇ ನಾನು ಮುಗ್ಧಳಾಗಿ ಈ ಸ್ಥಿತಿಗೆ ಬಂದಿರುವೆನು. ಮುಂದೆ ಏನು ನಡೆಯುವುದೋ!

ರಾತ್ರಿ ಭೋಜನಕ್ಕೆ ಎಲ್ಲವೂ ಸಿದ್ಧವಾಯಿತು. ಮದನಪಾಲನೂ ಲಲಿತಕುಮಾರನೂ ಇನ್ನೂ ಆಹೂತರಾಗಿದ್ದ ಇತರ ಬಂಧುಗಳೂ ಬಂದು ಸೇರಿದರು. ಲಲಿತಕುಮಾರನು ಹೇಮಪ್ರಭಾದೇವಿಗೆ ನಮಸ್ಕರಿಸಿ ಪುಷ್ಪಗಳನ್ನು ಅರ್ಪಿಸಿದನು. ಆ ರಾಣಿಯು ಕೆಲವು ಪುಷ್ಪಗಳನ್ನು ತಾನು ಧರಿಸಿ ಮಿಕ್ಕವುಗಳನ್ನು ಇಂದಿರೆಗೆ ಕೊಟ್ಟಳು. ಆಗ ಆ ಭವನದಲ್ಲಿ ಎಲ್ಲರೂ ಹೇಮಪ್ರಭಾದೇವಿಯ ಸುತ್ತಲೂ ಕುಳಿತುಕೊಂಡು ನಾನಾ ವಿಧ ಗೋಷ್ಠಿಗಳಲ್ಲಿ ಮಗ್ನರಾದರು.

**ಹೇಮಪ್ರಭಾದೇವಿ—**ರಾಜೇಂದ್ರಾ! ನಿಮ್ಮ ಜನನಿಯವರಿಗೆ ಹೇಗಿದೆ? ಜ್ವರದ ಬಾಧೆಯು ಉಪಶಮಿಸಿರುವುದೇ?

**ಮದನಪಾಲ—** ದೇವಿ! ಜ್ವರವು ಇನ್ನೂ ತಗ್ಗಲಿಲ್ಲ. ಹೆಚ್ಚುತ್ತಲೇ

ಇದೆ. ಹುಣ್ಣುಗಳ ಬಾಧೆ ಅಧಿಕವಾಗಿದೆ. ನೀನು ಇಂದಿರೆಯನ್ನು ಇನ್ನೂ ಕಳುಹಿಸಲಿಲ್ಲ. ನಾಳೆಯ ದಿನವಾದರೂ ತಪ್ಪದೆ ಕಳುಹಿಸಬೇಕೆಂಬುದು ಆಕೆಯ ಮನೋಗತವು.

**ಹೇಮಪ್ರಭಾದೇವಿ—** ಹಾಗೆಯೇ ಕಳುಹಿಸುವೆನು. ನಾನು ಅಲ್ಲಿಂದ ಬಂದಾರಭ್ಯ ಅಸ್ವಸ್ಥಳಾಗಿಯೇ ಇದ್ದೇನೆ. ಈ ದಿನ ನೀವೆಲ್ಲರೂ ಬರುವಿರೆಂಬ ಉತ್ಸಾಹದಿಂದ ಇಲ್ಲಿಗೆ ಎದ್ದು ಬಂದಿದ್ದೇನೆ.

ಹೀಗೆ ಒಂದು ಪ್ರಸ್ತಾವದಿಂದ ಮತ್ತೊಂದಕ್ಕೆ ಅವರು ಹೋಗುತ್ತಿರಲು ವನಸಂಚಾರ ಪ್ರಿಯಳಾದ ಇಂದಿರೆಯು ಅಂತಃಪುರಕ್ಕೆ ಸೇರಿದ ಉಪವನಕ್ಕೆ ಹೋದಳು. ಅಲ್ಲಿ ವೃಕ್ಷಗಳ ಸಂದಿನಲ್ಲಿ ಹೋಗುತ್ತಿರುವಾಗ ತನ್ನ ಎಡ ಭಾಗ ದಲ್ಲಿ ವಕುಲ ವೃಕ್ಷದ ಮಧ್ಯದಲ್ಲಿ ಮನುಷ್ಯನ ನೆರಳನ್ನು ಕಂಡಳು. ಅಷ್ಟ ರಲ್ಲಿಯೇ 'ಇಂದಿರೆ! ಇಲ್ಲಿ ಬಾ' ಎಂಬ ಧ್ವನಿಯು ವೃಕ್ಷಗಳ ನಡುವೆ ಇರುವ ಲತಾಗೃಹದಿಂದ ಕೇಳಿಸಿತು. ಅವಳು ಸ್ವಲ್ಪ ಹೊತ್ತು ಹಾಗೆಯೇ ನಿಂತು ಆಲೈಸಿ ತನ್ನ ತಂದೆಯ ಕಂಠಧ್ವನಿಯೆಂದು ಗುರುತಿಸಿ ತತ್‌ಕ್ಷಣವೇ ಚಿಗುರೆಯ ಮರಿಯಂತೆ ಹಾರಿ ಹೋಗಿ "ಅಪ್ಪಾಜೀಯವರೆ!" ಎಂದಳು.

**ಮಿತ್ರದೇವ—** "ಅಮ್ಮಾ! ಇಂದಿರೆ! ನಾನೇ. ನೀನು ಭಯಪಡ ಬೇಡ" ಎಂದು ಹೇಳುತ್ತ ಕೈ ಹಿಡಿದುಕೊಂಡನು. ತಂದೆಯ ಮುಖವನ್ನು ಆಮೂಲಾಗ್ರವಾಗಿ ನೋಡಿದ್ದಳು. ಪಾದಗಳಿಗೆ ನಮಸ್ಕರಿಸಿ ಭೋರೆಂದು ಅಳಲಾರಂಭಿಸಿದಳು. ಮಿತ್ರದೇವನು ತನ್ನ ಮಗಳನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು 'ಅಮ್ಮಾ! ನಿನಗೇನಾದರೂ ದುಃಖಸಂಭವಿಸಿರುವುದೇ? ಯಾರಾದರೂ ನಿನ್ನನ್ನು ಗುರುತಿಸಿದರೇ?' ಎಂದು ಕೇಳಿದನು.

ಇಂದಿರೆಯು ತನ್ನ ದುಃಖವನ್ನೆಲ್ಲ ಸಂವರಣಮಾಡಿಕೊಂಡು "ಜನಕಾ! ಪ್ರಮಾದವೇನೂ ಸಂಭವಿಸಲಿಲ್ಲ. ದೊಡ್ಡ ಅಂತಃಪುರದಲ್ಲಿ ನಿಮ್ಮ ಶಯನ ಮಂದಿರದಲ್ಲಿ ನಿಮ್ಮ ಚಿತ್ರಪಟವನ್ನು ನೋಡಿದ್ದೆನು. ಆ ರೂಪವು ಈಗ ಎಷ್ಟು ವ್ಯತ್ಯಾಸವಾಗಿರುವುದೆಂದು ನನಗೆ ದುಃಖವುಂಟಾಯಿತು. ಜನಕಾ! ನೀವು ಇಲ್ಲಿಗೆ ಯಾವಾಗ ಬರೋಣವಾಯಿತು? ಗುಪ್ತವಾಗಿ ನೀವು ವಾಸಿಸಲು ನಿಶ್ಚಯಿಸಿಕೊಂಡಿರುವ ಸ್ಥಳವು ಯಾವುದು? ನಮ್ಮ ಕಾರ್ಯಸಿದ್ಧಿಯಾಗುವ ವರೆಗೂ ರಹಸ್ಯವಾಗಿಯೇ ಇರಬೇಕಾಗುವುದಷ್ಟೇ! ಏನಾಲೋಚಿಸಿರುವಿರಿ?" ಎಂದು ಕೇಳಿದಳು.

**ಮಿತ್ರದೇವ—** ಮಗೂ! ಭಯಪಡಬೇಡ. ದೈವವನ್ನು ನಂಬಿದವರಿಗೆ ಎಂದಿಗೂ ಭಯವಿಲ್ಲ. ನಾನು ಒಬ್ಬನೇ ಇರಬೇಕಾದ ಪಕ್ಷದಲ್ಲಿ ಬೇರೆ

ದೇಶಕ್ಕೆ ಹೋಗಿ ರಹಸ್ಯವಾಗಿ ಇರಬೇಕಾದುದಿಲ್ಲ. ನಮ್ಮ ಪೂರ್ವಜರ ದುರ್ಗ ದಲ್ಲಿ ಒಂದು ನೆಲಮಾಳಿಗೆಯುಂಟು. ಅದಕ್ಕೆ ಹೋಗಲು ಅನೇಕ ಮಾರ್ಗಗಳಿವೆ. ಅವೆಲ್ಲವನ್ನೂ ನಾನರಿವೆನು. ರಾಜ್ಯವಿಲ್ಲದಿದ್ದರೂ ಅಪರಿಮಿತ ಧನಿಕನಾಗಿರುವು ದಕ್ಕೆ ತಕ್ಕ ದ್ರವ್ಯವು ಆ ನೆಲಮಾಳಿಗೆಯಲ್ಲಿ ಇಟ್ಟಿರುವ ಸಂಗತಿಯನ್ನು ನನ್ನ ಪ್ರಿಯ ಜನಕನು ನನಗೆ ಹೇಳಿ ಆ ಸ್ಥಳವನ್ನು ತೋರಿಸಿರುವನು. ಪ್ರಜೆಗಳಲ್ಲಿ ಅಪರಾ ಧಿಯೆಂದು ನಿಂದಿತನಾಗಿರುವ ನಾನು ಚೋರನಂತೆ ಜೀವಿಸಿರುವುದರಿಂದ ಪ್ರಯೋ ಜನವೇನು? ಅದಲ್ಲದೆ, ಆಗ ನೀನು ಚಿಕ್ಕ ಮಗುವಾದುದರಿಂದ ಅಲ್ಲಿರಲು ಸಾಧ್ಯ ವಾಗದೆ ವಿದೇಶಕ್ಕೆ ಹೋಗಬೇಕಾಯಿತು. ಈಗ ಕಾಲವು ಸಮೀಪಿಸಿರು ವಂತೆ ಕಾಣುತ್ತದೆ. ಜಯವೋ, ಅಪಜಯವೋ ಎರಡರಲ್ಲಿ ಒಂದಾಗಬೇಕು. ನನ್ನ ವಿಷಯದಲ್ಲಿ ಸ್ವಲ್ಪವೂ ಚಿಂತಿಸ ಬೇಡ. ಕಾರ್ಯಸಾಧನೆಗೆ ಏನಾದರೂ ಮಾರ್ಗವುಂಟಾಗಿದೆಯೇ?

ಇಂದಿರೆಯು ಫಲ್ಗುನ, ನೀಲವೇಣಿಯರ ಸಂವಾದವನ್ನೂ, ತಾನು ರಾಜಮಾತೆಯಬಳಿಗೆ ಹೋಗಬೇಕಾಗಿ ಬಂದಿರುವ ಸಂಭವವನ್ನೂ, ತನ್ನ ಜನ ನಿಯ ವೃತ್ತಾಂತವನ್ನೂ, ಮದನಪಾಲನು ಮಾಡುತ್ತಿರುವ ತಂತ್ರವನ್ನೂ ವಿಶದವಾಗಿ ತಂದೆಗೆ ತಿಳಿಯ ಪಡಿಸಿದಳು. ಬಹಳ ಅಕ್ಕರೆಯಿಂದ ಕೇಳುತ್ತಿದ್ದ ಮಿತ್ರದೇವನು ತಲೆಯನ್ನು ತೂಗಿ "ಅಮ್ಮಾ! ನೀನು ಈಗ ಕಂಡಿರುವ ಸಂಗತಿ ಯು ಬಹಳ ಮುಖ್ಯವಾದುದು. ಗಾಢಾಂಧಕಾರದಲ್ಲಿ ಹೋಗುತ್ತಿರುವವನಿಗೆ ಸ್ವಲ್ಪ ಬೆಳಕು ತೋರಿಸಿದಂತಾಗಿರುವುದು. ನೀನು ರಾಜಾಂತಃಪುರಕ್ಕೆ ಹೋ ದಾಗ ತಪ್ಪದೆ ಕಾರ್ಯಸಾಧನೆಯಾಗುವುದೆಂದು ನನ್ನ ಅಂತರಾತ್ಮವು ಹೇಳುತ್ತಿ ರುವುದು. ಈಗ ಬಹಳ ಕಾಲಾತೀತವಾಯಿತು. ನೀನು ಹೊರಡು" ಎಂದು ಹೇಳುತ್ತ ತನಗೆ ಕಾಗದಗಳನ್ನು ಕಳುಹಿಸುವ ವಿಧಾನವನ್ನು ತಿಳುಹಿಸಿ ಅದೃ ಶ್ಯನಾದನು.

# ೧೪ನೆಯ ಅಧ್ಯಾಯ

ಹೈಂದವ ಪ್ರಪಂಚದಲ್ಲಿ ಬೈರಾಗಿಗಳು ನಾನಾ ತಂಡವಾಗಿರುವರು. ಸಾಮಾನ್ಯವಾಗಿ ಅವರೆಲ್ಲರೂ ಪ್ರಪಂಚ ಸುಖಗಳನ್ನು ಪರಿತ್ಯಜಿಸಿ ಶೀತವಾತಾ ತಪಗಳನ್ನು ಸಹಿಸುತ್ತ ದೇಶಾಟನೆಯನ್ನು ಮಾಡುತ್ತಿರುವರು. ಅವರಲ್ಲಿ ಕೆಲ

ವರು ಸ್ತ್ರೀಯರೂ ಇರುವುದುಂಟು. ಈ ಬೈರಾಗಿಗಳಲ್ಲಿ ಕೆಲವರು ಧನಿಕರೂ, ಮಠಾಧಿಕಾರಿಗಳೂ ಇರುವರು. ಇವರಿಗೆ ಶುಶ್ರೂಷೆಮಾಡುವ ಪರಿವಾರ ಜನರಿರುವರು. ಈ ಪರಿವಾರ ಜನರಲ್ಲಿ ಕೆಲವರು ಅವರಿಂದ ಅನೇಕ ವಿದ್ಯೆಗಳನ್ನು ಅಭ್ಯಸಿಸುವುದುಂಟು. ಕೆಲವರು ಬೈರಾಗಿಗಳು ಅರಣ್ಯವಾಸಿಗಳಾಗಿ ಯೋಗಸಾಧನೆ ಮಾಡುತ್ತ ಜೀವಿತವನ್ನು ಕಳೆಯುವರು. ಮೂಲಿಕೆಗಳ ಪ್ರಯೋಗದಿಂದ ಸುವರ್ಣವನ್ನು ಮಾಡುತ್ತ ಅದರ ವಿಕ್ರಯದಿಂದ ಸಂಪಾದಿಸಿದ ಧನವನ್ನು ಇತರ ಬೈರಾಗಿಗಳಿಗೆ ಭೋಜನಭಾಜನಾದಿಗಳನ್ನುಮಾಡಿಸುವುದರ ಮೂಲಕ ವಿನಿಯೋಗಿಸುತ್ತ ಕಾಲಯಾಪನೆಮಾಡುವ ಬೈರಾಗಿಗಳು ಕೆಲವರಿರುವರು. "ಸ್ವಾದ್ವನ್ನ ಭಕ್ಷ್ಯಕಾಮೇನ ವೇಷೋಯಂ ಯೋಗಿನಾಂ ಧೃತಃ" ಎಂಬಂತೆ ಕೆಲವರು ಸ್ವಾದ್ವನ್ನದ ಮೇಲೆ ಆಸೆಯಿಂದ ಯೋಗಿಗಳ ವೇಷವನ್ನು ಹಾಕಿ ಕಂಡ ಕಂಡ ಸ್ಥಳಗಳಲ್ಲಿ ಭಿಕ್ಷವನ್ನೆತ್ತಿ ಉದರಂಭರಣ ಮಾಡಿಕೊಳ್ಳುವ ಬೈರಾಗಿಗಳೂ ಇರುವರು. ಬಂಗಿ ಸೇದುವುದು ಇವರಿಗೆ ತುಂಬ ಅಭ್ಯಾಸ. ಈಶ್ವರನು ಪರವೇನಾಚಿಯ ಗೃಹದಲ್ಲಿ ಜಲಾಹರಣ ಮಾಡುತ್ತಿರುವಾಗ ಬಂಗಿಯನ್ನು ಕುಡಿಯುತ್ತಿದ್ದನೆಂದು ಒಂದು ಕಥೆಯನ್ನು ಕಲ್ಪಿಸಿರುವರು. ಅದು ಹೇಗಿದ್ದರೂ ಮಾನವರು ಈಶ್ವರನಿಗೆ ಬಂಗಿಯನ್ನೂ, ಶಕ್ತಿಗೆ ಸಾರಾಯಿಯನ್ನೂ ಪ್ರಿಯತಮ ವಸ್ತುಗಳೆಂದು ಆರೋಪಿಸಿರುವರು. ಕೃಷ್ಣನಿಗೆ ಜಾರತ್ವಚೋರತ್ವವನ್ನೂ, ಇಂದ್ರನಿಗೆ ಜಾರತ್ವವನ್ನೂ ಪರಿಕಲ್ಪಿಸಿರುವರು. ತಮ್ಮಲ್ಲಿರುವ ದುರ್ಗುಣ, ದುರಭ್ಯಾಸಗಳನ್ನು ದೊಡ್ಡವರಿಗೆ ಆರೋಪಿಸುವುದರಿಂದ ಮನ್ನಣೆಯುಂಟಾಗುವುದೆಂದು ಭ್ರಮಿಸಿ ಮಾನವರು ಹೀಗೆ ಕಲ್ಪಿಸುವುದು ಸಹಜ. ಅದರಂತೆ ಬೈರಾಗಿಗಳು ಬಂಗಿಯ ವಿಷಯವಾಗಿ ಒಂದು ಪುರಾಣ ಗಾದೆಯನ್ನು ಕಲ್ಪಿಸಿ ಅದಕ್ಕೆ "ಸಿದ್ಧಪತ್ರಿ" ಎಂಬ ಹೆಸರಿಟ್ಟು ಸೇವಿಸುತ್ತಿರುವರು.

ಉದಯಪುರಿಯಲ್ಲಿ ಬೈರಾಗಿಗಳಿಗಾಗಿ ಅನೇಕ ವಸತಿಗಳನ್ನು ಏರ್ಪಡಿಸಿದ್ದರು. ಕೋಟೆಯ ಗೋಡೆಗೆ ಆತುಕೊಂಡು ಒಂದು ದೊಡ್ಡ ಸತ್ರವು ಕಟ್ಟಲ್ಪಟ್ಟಿದ್ದಿತು. ಅದರಲ್ಲಿ ಬೈರಾಗಿಗಳು ಬಂದು ಯಥೇಷ್ಟವಾಗಿ ತಂಗುತ್ತಿದ್ದರು. ಕೆಲವು ದಿನಗಳ ಹಿಂದೆ ಒಂದು ಬೈರಾಗಿಗಳ ಗುಂಪು ಎಲ್ಲಿಂದಲೋ ಬಂದು ಆ ಸತ್ರದಲ್ಲಿ ಇಳಿದಿದ್ದಿತು. ಆ ಗುಂಪಿನ ನಾಯಕನು ಒಬ್ಬ ದೊಡ್ಡ ಮಹಾತ್ಮನೆಂದು ವದಂತಿಯಿದ್ದಿತು. ಅವನಿಗೆ ಗೀರ್ವಾಣದಲ್ಲಿ ಅಖಂಡ ಪಾಂಡಿತ್ಯವಿದ್ದಿತಂತೆ. ಹಿಂದೂಸ್ಥಾನಿಯಲ್ಲಿಯೂ ಪಾರಂಗತನಾಗಿದ್ದನು. ಅವನು ವಿಷ್ಣುವಿನ ಅಂಶಸಂಭೂತನೆಂತಲೂ, ಅಣಿಮಾದ್ಯಷ್ಟಸಿದ್ಧಿಗಳನ್ನು ಪಡೆದಿರುವನೆಂತಲೂ ಶಿಷ್ಯರು ಹೇಳಿಕೊಳ್ಳುತ್ತಿದ್ದರು. ಅದು ಹೇಗಿದ್ದರೂ, ಅವನು ಪರಧನವನ್ನು

ಪರಿಗ್ರಹಿಸುತ್ತಿರಲಿಲ್ಲ. ಪ್ರತಿನಿತ್ಯವೂ ಹೋಮಕಾಲದಲ್ಲಿ ಚಿನ್ನವನ್ನು ಕಲ್ಪಿಸಿ ಅದರ ಮಾರಾಟದಿಂದ ಬರುವ ದ್ರವ್ಯದಿಂದ ಭೋಜನಸಾಮಗ್ರಿಗಳನ್ನು ತರಿಸಿ ಶಿಷ್ಯಕೂಟವನ್ನೂ ತನ್ನನ್ನೂ ರಕ್ಷಿಸಿಕೊಳ್ಳುತ್ತಿದ್ದನು. ರಾತ್ರಿಯ ಕಾಲದಲ್ಲಿ ಯೋಗಸಾಧನೆಯನ್ನು ಮಾಡುತ್ತಿದ್ದನು. ಇಂತಹ ಮಹಿಮೆಯುಳ್ಳ ಬೈರಾಗಿಯು ದುರ್ಗಕ್ಕೆ ಸೇರಿದ ಸತ್ರದಲ್ಲಿರುವನೆಂಬ ವದಂತಿಯು ರಾಜಾಂತಃಪುರದಲ್ಲೆಲ್ಲಾ ಹರಡಿಕೊಂಡಿತು. ಆ ಮಹನೀಯನನ್ನು ತಾನು ಮೊದಲು ದರ್ಶಿಸಬೇಕೆಂದು ಫಲ್ಗುನನು ಹಣ್ಣುಕಾಯಿಗಳನ್ನು ತೆಗಿಯಿಸಿಕೊಂಡು ಅನೇಕ ಸೇವಕರೊಡನೆ ಹೊರಟನು. ಆಗ ಪೂಜಾಸಮಯವಾಗಿದ್ದುದರಿಂದ ಫಲ್ಗುನನು ದೂರದಲ್ಲಿಯೇ ಕುಳಿತುಕೊಂಡನು. ಅಲ್ಲಿ ಸುವರ್ಣ ಪೀಠದ ಮೇಲೆ ದ್ವಾರಕಾನಾಥನ ವಿಗ್ರಹವು ಇಡಲ್ಪಟ್ಟಿದ್ದಿತು. ಅದು ಐದು ವರ್ಷದ ಬಾಲಕನಂತಿದ್ದಿತು. ಆ ಮೂರ್ತಿಗೆ ನವರತ್ನಖಚಿತವಾದ ಆಭರಣಗಳು ತೊಡಿಸಲ್ಪಟ್ಟಿದ್ದುವು. ವನಮಾಲೆಯನ್ನು ಧರಿಸಿದ್ದ ಆ ಮೂರ್ತಿಯು ಪಂಢರಪುರದಲ್ಲಿರುವ ವಿಠೋಬನು ಈ ಬೈರಾಗಿಗೆ ಪ್ರತ್ಯಕ್ಷಗೊಳಿಸುವಂತಿದ್ದಿತು. ದರ್ಶನಮಾತ್ರದಿಂದ ಪ್ರೇಕ್ಷಕರಿಗೆ ಭಕ್ತಿಯನ್ನುಂಟುಮಾಡುತ್ತಿದ್ದಿತು. ಧೂಪದೀಪಾದ್ಯರ್ಚನಾದ್ರವ್ಯಗಳಿಂದ ಆ ಮೂರ್ತಿಯು ಬಹು ವೈಭವಯುಕ್ತವಾಗಿದ್ದಿತು. ಅಲ್ಲಿನ ಪರಿಮಳದ್ರವ್ಯಗಳ ವಾಸನೆಯು ಮಂದಿರದಲ್ಲಿನ ವಾಸನೆಗಿಂತಲೂ ಕೋಟಿಪಾಲು ಅಧಿಕವಾಗಿದ್ದಿತು. ಭಕ್ತಿರಸ ಪ್ರಭಾವದಿಂದ ತುಂಬಿಕೊಂಡಿದ್ದ ಆ ಸ್ಥಳದ ಮಹಿಮೆಯಿಂದ ಕ್ರೂರಾತ್ಮನಾದ ಫಲ್ಗುನನ ಹೃದಯದಲ್ಲಿಯೂ ಭಕ್ತಿಭಾವವು ಅಂಕುರಿಸಿತು. ಪೂಜೆಯು ಪರಿಸಮಾಪ್ತವಾದ ಬಳಿಕ ಎಲ್ಲರೂ ಆ ಮಹನೀಯನಿಗೆ ನಮಸ್ಕರಿಸಿ ತೀರ್ಥಪ್ರಸಾದಗಳನ್ನು ತೆಗೆದುಕೊಂಡರು. ಫಲ್ಗುನನು ಕೂಡ ಆತನನ್ನು ಸಮೀಪಿಸಿ ದೀರ್ಘದಂಡಪ್ರಣಾಮವನ್ನು ಮಾಡಿ ತೀರ್ಥಪ್ರಸಾದವನ್ನು ವಿನಯದಿಂದ ಪರಿಗ್ರಹಿಸಿದನು. ಬೈರಾಗಿಯು ಅವನನ್ನು ಆಶೀರ್ವದಿಸಿದನು. ಅವನು ಯಾರೆಂಬುದನ್ನು ಗುರುತಿಸಿದನು.

**ಫಲ್ಗುನ—** ಸ್ವಾಮಿ ! ಈ ಸತ್ರದಲ್ಲಿ ಇದುವರೆಗೆ ಅನೇಕ ಬೈರಾಗಿಗಳು ಇಳಿದಿದ್ದರು. ಆದರೆ, ತಮ್ಮಂತಹ ಮಹಾತ್ಮರನ್ನು ಮಾತ್ರ ನಾವು ನೋಡಿರಲಿಲ್ಲ. ನಮ್ಮ ಅರಸರವರು ತಮ್ಮ ದರ್ಶನಕ್ಕಾಗಿ ಬರಬೇಕೆಂದಿದ್ದಾರೆ. ತಮ್ಮ ಆಗಮನದಿಂದ ನಮ್ಮ ದೇಶವು ಪವಿತ್ರವಾಯಿತು. ನಮ್ಮಂತಹ ಪಾಮರ ಜನರ ಇಷ್ಟಾರ್ಥಗಳನ್ನು ತಾವು ನೆರವೇರಿಸುವಿರೆಂದು ಕೇಳಿದೆನು. ಇದು ನಮಗೊಂದು ಭಾಗ್ಯವೇ ಸರಿ.

**ಬೈರಾಗಿ—** ಪುತ್ರಾ! ದೊಡ್ಡವರು, ಚಿಕ್ಕವರು ಎಂಬ ಭೇದವು ನಮ

ಗಿಲ್ಲ. ಅರಸನಾಗಲಿ, ದೀನನಾಗಲಿ ನಮಗೆ ಸಮಾನವೇ. ನಾವು ಒಬ್ಬರ ದಯೆ ಗೆ ಪಾತ್ರರಾಗುವವರಲ್ಲ. ನಮ್ಮನ್ನು ನೋಡಲು ಯಾರು ಬರಬೇಕೆಂದಿದ್ದರೂ ಸಂಧ್ಯಾಕಾಲದಲ್ಲಿ ಬರಬಹುದು" ಎಂದು ಹೇಳಿ ಹೊರಟು ಹೋದನು.

ಮರುದಿನ ರಾಜನು ಹೋಗಿ ದರುಶನ ಮಾಡಿಕೊಂಡು ಬಂದನು. ಅವನಿಗೆ ಆತನಲ್ಲಿ ತುಂಬಾ ಭಕ್ತಿಗೌರವಗಳುಂಟಾದುವು. ಒಂದುದಿನ ಫಲ್ಗುನನು ಒಂಟಿಯಾಗಿ ಬಂದು ಮುಂದೆ ತನಗುಂಟಾಗುವ ಅದೃಷ್ಟವನ್ನು ಹೇಳಬೇಕೆಂದು ಪ್ರಾರ್ಥಿಸಿದನು. ಬೈರಾಗಿಯು ಸ್ವಲ್ಪ ಹೊತ್ತು ಕಣ್ಣು ಮುಚ್ಚಿಕೊಂಡಿದ್ದು ಪುನಃ ತೆರೆದು "ಎಲೈ! ನಿನ್ನ ವೃತ್ತಾಂತವು ಬಹಳ ಗೂಢವಾಗಿರುವುದು" ಎಂದು ಹೇಳುವಷ್ಟರಲ್ಲಿ ಫಲ್ಗುನನು ಭಯಕಂಪಿತನಾದನು. ಮನೋವಿಕಾರವನ್ನು ಸಂವರಣಮಾಡಿಕೊಂಡು "ತಮ್ಮ ಶಿಷ್ಯರನ್ನು ಸ್ವಲ್ಪ ದೂರದಲ್ಲಿರುವಂತೆ ಆಜ್ಞಾಪಿಸಬೇಕೆಂದು ಪ್ರಾರ್ಥಿಸಿದನು.

**ಬೈರಾಗಿ—** "ನನ್ನ ಶಿಷ್ಯರು ಅಂತಹವರಲ್ಲ. ಅವರು ಏನು ಕಾರ್ಯ ಮಾಡುತ್ತಿದ್ದರೂ ಅವರ ಮನಸ್ಸು ಈಶ್ವರ ಧ್ಯಾನದಲ್ಲಿರುವುದು. ಈಶ್ವರನು ವಿಲಾಸಾರ್ಥವಾಗಿ ಸೃಜಿಸಿರುವ ಈ ಪ್ರಪಂಚದಲ್ಲಿ ಪರರಿಗೆ ಹಾನಿಮಾಡದೆ ಯಥಾಲಾಭ ಸಂತುಷ್ಟನಾಗಿ ಜೀವಿಸಲು ತಿಳಿಯದಿರುವ ಹುಚ್ಚನು ಪರರಿಗೆ ಭಯಪಡುವನು. ನಿನ್ನ ಕೋರಿಕೆಯನ್ನೇಕೆ ವ್ಯರ್ಥಮಾಡಬೇಕು?" ಎಂದು ಹೇಳುತ್ತಾ ತನ್ನ ಶಿಷ್ಯರನ್ನು ಬೇರೆ ಕಾರ್ಯಗಳಿಗೆ ಕಳುಹಿಸಿಕೊಟ್ಟನು. ಫಲ್ಗುನನು ಹೃಷ್ಟಚಿತ್ತನಾಗಿ ತನ್ನ ಹಸ್ತವನ್ನು ಬೈರಾಗಿಗೆ ಅತಿ ವಿನಯದಿಂದ ತೋರಿಸಿದನು. ಮುಂದೆ ತನಗೆ ಎಂತಹ ಸ್ಥಿತಿ ಬರುವುದೋ ತಿಳಿದುಕೊಳ್ಳಬೇಕೆಂಬ ಕುತೂಹಲವು ಒಂದುಕಡೆ, ತನ್ನ ರಹಸ್ಯವೆಲ್ಲವೂ ಎಲ್ಲಿ ಬಹಿರಂಗವಾಗುವುದೋ ಎಂಬ ಭಯವು ಮತ್ತೊಂದು ಕಡೆ. ಇವೆರಡರ ಮಧ್ಯೆ ಫಲ್ಗುನನು ಡೋಲಾಯಮಾನನಾಗಿದ್ದನು. ಬೈರಾಗಿಯು ಸ್ವಲ್ಪ ಹೊತ್ತು ಧ್ಯಾನಾರೂಢನಾಗಿದ್ದು ಬಹಿರ್ಮುಖನಾಗಿ "ನಿನ್ನ ಹೆಸರು ಫಲ್ಗುನನಲ್ಲವೇ?" ಎಂದು ಕೇಳಿದನು. ಅಹುದೆಂದು ಅವನು ಉತ್ತರಕೊಟ್ಟನು.

**ಬೈರಾಗಿ—** "ಫಲ್ಗುನ! ನಿನ್ನ ಜೀವಿತವು ಬಹಳ ವಕ್ರಗತಿಯುಳ್ಳದುದಾಗಿರುವುದು. ಅದನ್ನು ಸಂಪೂರ್ಣವಾಗಿ ಪರೀಕ್ಷಿಸಲು ನನಗೆ ಇಷ್ಟವಿಲ್ಲ. ಮನುಷ್ಯರು ಅನೇಕ ರಹಸ್ಯಗಳನ್ನೂ ಅನೇಕ ಗುಪ್ತಾಲೋಚನೆಗಳನ್ನೂ ಮಾಡುವರು. ಅವುಗಳನ್ನು ಹೊರಪಡಿಸುವುದು ದಿವ್ಯ ಜ್ಞಾನಿಗಳಿಗೆ ನ್ಯಾಯವಲ್ಲ. ಆದಕಾರಣ, ನಿನಗೆ ಬೇಕಾದ ಒಂದೆರಡು ಸಂಗತಿಗಳನ್ನು ಮಾತ್ರ ತಿಳಿಸುತ್ತೇನೆ. ದ್ರವ್ಯದ ವಿಷಯದಲ್ಲಿ ರಾಜನಿಗಿರುವಷ್ಟು ದ್ರವ್ಯವು ನಿನಗಿರುವುದು.

ಆದರೆ, ಅದನ್ನು ನಿನ್ನದಾಗಿ ಮಾಡಿಕೊಳ್ಳಲು ತುಂಬ ಪ್ರಯಾಸ ಪಡಬೇಕು. ಇನ್ನು ನಿನ್ನ ವಿವಾಹವಿಷಯ– ನೀನು ಒಬ್ಬ ಸ್ತ್ರೀಯನ್ನು ವರಿಸಿರುವೆ. ಅವಳಿಗೆ ನಿನ್ನ ಮೇಲೆ ತುಂಬ ಅನುಮಾನವಿದೆ. ಅವಳೇನೋ ನಿರ್ಮಲಚಿತ್ತಳು. ಅವಳ ಮನಸ್ಸಿಗೆ ತೃಪ್ತಿಯಾಗುವಂತೆ ನೀನು ನಡೆದುಕೊಂಡರೆ ನಿನ್ನನ್ನು ಮದುವೆಯಾಗುವಳು. ಇಷ್ಟೇ ನಿನ್ನ ಸಂಗತಿ.''— ಎಂದು ಹೇಳಿ ಗ್ರಂಥಾವಲೋಕನೆಯನ್ನು ಮಾಡಲಾರಂಭಿಸಿದನು. ಫಲ್ಗುನನು ಕಂಪಿತಗಾತ್ರನಾಗಿದ್ದರೂ ಮನಸ್ಸನ್ನು ಸ್ಥಿರಪಡಿಸಿಕೊಂಡು ಭಯಭಕ್ತಿಗಳಿಂದ ಮಹನೀಯನಿಗೆ ಅಭಿವಂದಿಸಿ ಮನೆಗೆ ಹೋದನು. ಆ ಬೈರಾಗಿಯು ಸಾಕ್ಷಾತ್ ದೈವವೆಂದೇ ಅವನು ಭಾವಿಸಿದನು. ಇನ್ನು ಮೇಲೆ ತನ್ನ ಸಂಗತಿಯನ್ನು ಸ್ವಪ್ನದಲ್ಲಾದರೂ ಕೇಳಬಾರದೆಂದು ನಿಶ್ಚಯಿಸಿಕೊಂಡನು. ರಾಜಮಾತೆಯು ಪ್ರತಿನಿತ್ಯವೂ ಆ ಮಹನೀಯನಿಗೆ ಪೂಜಾದ್ರವ್ಯಗಳನ್ನು ತಪ್ಪದೆ ಕಳುಹಿಸುತ್ತಿದ್ದಳು.

ರಾಜಮಾತೆಯ ಅಂತಃಪುರಕ್ಕೆ ಇಂದಿರೆಯು ಬಂದು ಒಂದು ತಿಂಗಳಾಯಿತು. ಅವಳು ಮಾಡುತ್ತಿದ್ದ ಶುಶ್ರೂಷೆಯಿಂದ ರಾಜಮಾತೆಗೆ ದೇಹಾರೋಗ್ಯವು ದಿನದಿನಕ್ಕೂ ವೃದ್ಧಿಯಾಗುತ್ತಿದ್ದಿತು. ಕಾಲು ಮಾತ್ರ ಮೊದಲಿನ ಸ್ಥಿತಿಯಲ್ಲಿಯೇ ಇದ್ದಿತು. ಬೆತ್ತವನ್ನು ಊರಿ ಒಂದೆರಡಡಿಗಳು ನಡೆಯುವಷ್ಟು ಶಕ್ತಿ ಮಾತ್ರ ಬಂದಿದ್ದಿತು. ಆ ಸ್ಥಿತಿಯಲ್ಲಿರುವಾಗ ಇಂದಿರೆಯನ್ನು ಪರೀಕ್ಷಿಸಲಾರಂಭಿಸಿದಳು. ಏತನ್ಮಧ್ಯೆ, ಇಂದಿರೆಗೆ ರಾಜಭವನದಲ್ಲಿನ ಸ್ಥಳಗಳೆಲ್ಲವೂ ಪರಿಚಿತವಾಗಿದ್ದುವು. ಹೊರಗಿದ್ದ ಉದ್ಯಾನವನಗಳಲ್ಲಿ ಮಾತ್ರ ಸಂಚರಿಸಿರಲಿಲ್ಲ. ರಾಜನ ನಿವಾಸಕ್ಕಾಗಿ ಕಟ್ಟಿದ್ದ ದೊಡ್ಡ ಭವನವನ್ನು ಕೂಡ ನೋಡಿರಲಿಲ್ಲ. ಸುಪ್ರಸಿದ್ಧವಾದ ಉದಯಪುರಿಯ ದುರ್ಗದಲ್ಲಿನ ಪ್ರಾಸಾದ ಪಙ್ಕ್ತಿಗಳು ಖ್ಯಾತಿಗೊಂಡಿದ್ದ ಪೂರ್ವದ ಶಿಲ್ಪಿಗಳಿಂದ ಕಟ್ಟಲ್ಪಟ್ಟಿದ್ದುವು. ಅವು ಅತಿ ಮನೋಹರವಾಗಿದ್ದುವು. ಅಲ್ಲಿನ ಉದ್ಯಾನವನಗಳೂ, ಅವುಗಳಲ್ಲಿ ರಾರಾಜಿಸುತ್ತಿದ್ದ ತರುಲತಾಗುಲ್ಮಾದಿಗಳೂ, ಸ್ಫಟಿಕಶಿಲಾನಿರ್ಮಿತ ಮಂಟಪಗಳೂ, ಕಾರಂಜಿಗಳಲ್ಲಿ ಹರಿಯುತ್ತ ಒಂದೊಂದೆಡೆಯಲ್ಲಿ ಮೇಲಕ್ಕೆ ಹಾರಿ ಬೀಳುತ್ತಿದ್ದ ಜಲಪ್ರವಾಹವೂ, ಅದರಲ್ಲಿ ವಿಹರಿಸುತ್ತಿದ್ದ ರಾಜಹಂಸಗಳೂ ನೋಡುವವರ ಕಣ್ಣಿಗೆ ಹಬ್ಬವಾಗಿದ್ದುವು. ಇಂತಹ ರಮಣೀಯವಾದ ಉದ್ಯಾನವನದಿಂದ ಆವೃತವಾದ ಸೌಧಗಳಲ್ಲಿ ರಾಜಮಾತೆಯೂ, ದಾಸ ದಾಸೀ ಜನಗಳೂ, ರಾಜಬಂಧುಗಳೂ ವಾಸವಾಗಿದ್ದರು. ಮದನಪಾಲನು ಮಾತ್ರ ಅಲ್ಲಿ ವಾಸಿಸುತ್ತಿರಲಿಲ್ಲ. ರಾಜನ ಪೂರ್ವ ಕಾರ್ಯಾಲಯವನ್ನು ಅಲಂಕರಿಸಿಟ್ಟಿದ್ದರೇ ಹೊರತು ಮದನಪಾಲನು ಅಲ್ಲಿಗೆ ಪ್ರವೇಶಿಸುತ್ತಿರಲಿಲ್ಲ. ಪ್ರತಾಪಸಿಂಹ ಮಹಾರಾಜನ ಸಿಂಹಾಸನವನ್ನು

ಮುಚ್ಚಿಟ್ಟಿದ್ದರು. ಆ ರಾಜನು ಬದುಕಿದ್ದಾಗ ಪಂಡಿತ ಬೃಂದವು ಸಮಾವೇಶವಾಗುವುದಕ್ಕಾಗಿ ವನಮಧ್ಯದಲ್ಲಿ ಒಂದು ದಿವ್ಯಮಂಟಪವನ್ನು ನಿರ್ಮಿಸಿದ್ದನು. ಆ ಮಂಟಪಕ್ಕೆ ನಾಲ್ಕು ಕಡೆಯಲ್ಲಿಯೂ ಚಂದ್ರಕಾಂತಶಿಲೆಯ ಸೋಪಾನಗಳಿದ್ದುವು. ಮಂಟಪಸ್ತಂಭಗಳಲ್ಲೆಲ್ಲ ದಶಾವತಾರ ಮುಂತಾದ ಚಿತ್ರಗಳು ಬರೆಯಲ್ಪಟ್ಟಿದ್ದುವು. ಆ ಮಂಟಪದ ಮಧ್ಯದಲ್ಲಿ ಶಿಲಾನಿರ್ಮಿತವಾದ ಒಂದು ಸಿಂಹಾಸನವಿದ್ದಿತು. ಅದರ ಬಹು ಭಾಗವು ಭೂಗತವಾಗಿದ್ದುದರಿಂದ ಹೊರಗೆ ಚಿಕ್ಕದಾಗಿ ಕಾಣಿಸುತ್ತಿದ್ದಿತು. ಪ್ರತಾಪಸಿಂಹ ಮಹಾರಾಜನು ಆ ಸಿಂಹಾಸನದಲ್ಲಿ ಕುಳಿತು ದೇಶ ವಿದೇಶಗಳಿಂದ ಬಂದ ಪಂಡಿತರ ವಾಕ್ಯಾರ್ಥಗಳನ್ನೂ, ಕಾವ್ಯಾಲಂಕಾರವಿಷಯಗಳನ್ನೂ ಕೇಳುತ್ತ ಸಂತುಷ್ಟನಾಗುತ್ತಿದ್ದನು. ಇದಾದ ಮೇಲೆ ಉತ್ತರ ದಿಕ್ಕಿನಲ್ಲಿನ ದ್ವಾರದಿಂದ ತನ್ನ ರಾಣಿಯಾದ ರತ್ನಾದೇವಿಯ ಸಮೇತ ಹೊರಟು ಆರಾವಳೀ ಪರ್ವತದ ಸಮೀಪದಲ್ಲಿ ವಿಹರಿಸುತ್ತಿದ್ದನು. ಆ ಪ್ರಾಂತ್ಯವು ರಾಣಿವಾಸದವರಿಗೆ ಮಾತ್ರವೇ ಸಂಚರಿಸಲು ಯೋಗ್ಯವಾಗಿ ಮಾಡಲ್ಪಟ್ಟಿದ್ದಿತು. ರತ್ನಾದೇವಿಯು ಮಹಾ ಪತಿವ್ರತೆ. ಅವರಿಬ್ಬರ ದಾಂಪತ್ಯವು ಎಲ್ಲಾ ವಿಧದಲ್ಲಿಯೂ ಆದರ್ಶವಾಗಿದ್ದಿತು. ಅಂತಹ ಪವಿತ್ರವಾದ ದಾಂಪತ್ಯದಲ್ಲಿ ಹುಟ್ಟಿದ ವಿಕ್ರಮಸಿಂಹನಿಗೆ ಎಂತಹ ಕಷ್ಟ ಪ್ರಾಪ್ತವಾಯಿತೋ ವಾಚಕರೇ ಊಹಿಸಬೇಕು. **ಲಕ್ಷ್ಮೀವಿಲಾಸಭವನ**ವೆಂದು ಪ್ರಸಿದ್ಧಿಹೊಂದಿದ್ದ ಆ ಅರಮನೆಯು ಈಗ ಕಳಾರಹಿತವಾಗಿದ್ದಿತು. ಆ ವನಪ್ರದೇಶಗಳಲ್ಲಿ ಮಧ್ಯಾಹ್ನದ ಹೊತ್ತಿನಲ್ಲಿ ಮಾತ್ರ ವನಪಾಲಕರು ಸಂಚರಿಸುತ್ತಿದ್ದರೇ ಹೊರತು ಮತ್ತಾರೂ ತಿರುಗಿ ನೋಡುತ್ತಿರಲಿಲ್ಲ. ಪಹರೆಯವರು ಮದನಪಾಲನ ಕೆಳಭವನದಲ್ಲಿ ರಾತ್ರಿಯ ವೇಳೆ ಪಹರೆಕೊಡುತ್ತಿದ್ದರೇ ಹೊರತು ಈ ವನವೀಥಿಗಳ ಗೋಜಿಗೆ ಹೋಗುತ್ತಿರಲಿಲ್ಲ. ಪಂಡಿತರ ಸಭಾ ಮಂಟಪಕ್ಕೆ ಪಶ್ಚಿಮಭಾಗದಲ್ಲಿ ಗತಿಸಿದ ಮಹಾರಾಜನ ಶಯನಾಗಾರವಿದ್ದಿತು. ಅಲ್ಲಿಯೇ ರಾಜನು ಹತ್ಯೆ ಮಾಡಲ್ಪಟ್ಟುದು. ಮೃತನು ತನ್ನ ಜ್ಯೇಷ್ಠ ರಾಣಿಯ ಸಮೇತ ಪಿಶಾಚ ರೂಪದಿಂದ ಅಲ್ಲಿ ಸಂಚರಿಸುತ್ತಿರುವನೆಂದು ಜನಜನಿತವಾಗಿ ಹೇಳಿಕೊಳ್ಳುತ್ತಿದ್ದರು. ಕೆಲವರು ತಾವು ಪ್ರತ್ಯಕ್ಷವಾಗಿ ನೋಡಿರುವೆವೆಂತಲೂ, ಮತ್ತೆ ಕೆಲವರು ಅಲ್ಲಿ ಮಲಗಿಕೊಂಡರೆ ಹೊರಟುಹೋಗೆಂಬ ಶಬ್ದವು ಕೇಳಿಸುವುದರಿಂದ ಜ್ವರಪೀಡಿತರಾದೆವೆಂತಲೂ ಬಗೆಬಗೆಯ ಕಥೆಗಳನ್ನು ಹೇಳುತ್ತಿದ್ದರು. ಮುರಳಾದೇವಿಯು ಹಗಲಿನಲ್ಲಿಯೂ ಆ ಕಡೆ ತಿರುಗಿ ನೋಡುತ್ತಿರಲಿಲ್ಲ. ತಾನು ಅಂದು ಸೋಪಾನಗಳಿಂದ ಬಿದ್ದು ಕಾಲು ಮುರಿದು ವ್ಯಾಧಿಗ್ರಸ್ತಳಾದುದು ತನ್ನ ಸವತಿಯ ಕಾಟದಿಂದಲೇ ಎಂದು ನಿಶ್ಚಯಿಸಿದ್ದಳು. ಸತ್ರದಲ್ಲಿ ತಂಗಿರುವ

ಬೈರಾಗಿಯು ಮಹಾತ್ಮನೆಂದು ಕೇಳಿದ ಒಡನೆಯೇ ಆತನನ್ನು ಅಂತಃಪುರಕ್ಕೆ ಕರೆಯಿಸಿ ಆ ಭೂತಗಳನ್ನು ಅಲ್ಲಿಂದ ಹೊರಡಿಸಬೇಕೆಂದು ಯೋಚಿಸಿದಳು. **ಪಿಚೋಲಿ** ಕೆರೆಯ ಮಧ್ಯದ ಗುಡ್ಡದ ಮೇಲಿನ ಕ್ರೀಡಾಮಂದಿರಗಳನ್ನು ಹದಿನಾರು ವರ್ಷಗಳಿಂದಲೂ ತಿರುಗಿ ನೋಡುವವರಿಲ್ಲದೆ ಅಲ್ಲಿದ್ದ ಅಮೌಲ್ಯ ವಸ್ತುಗಳು ಧೂಳಿಧೂಸರಗಳಾಗಿದ್ದುವು. ಆ ದುರ್ಗದಲ್ಲಿ ಒಂದು ದೊಡ್ಡ ನೆಲಮಾಳಿಗೆ ಇರುವುದೆಂತಲೂ ಅದರಲ್ಲಿ ಬೇಕಾದಷ್ಟು ಹಣವನ್ನು ಹೂತಿಟ್ಟಿರುವರೆಂತಲೂ, ಅದಕ್ಕೆ ಹೋಗಲು ನಾನಾ ಮಾರ್ಗಗಳಿರುವುವೆಂತಲೂ ಒಂದು ಪ್ರವಾದವಿದ್ದಿತು. ಆ ರಹಸ್ಯ ಮಾರ್ಗಗಳನ್ನು ಕಂಡು ಹಿಡಿಯಲು ಮಾಯಾವಿಯಾದ ಫಲ್ಗುನನು ಬಹು ಪ್ರಯತ್ನಮಾಡಿದನು. ಆದರೆ, ಅದು ಸಫಲವಾಗಲಿಲ್ಲ. ಆ ರಹಸ್ಯವು ಮೃತನ ಹಿಂದೆಯೇ ಹೋಯಿತು. ಅಂತಹ ಗುಪ್ತ ಮಂದಿರವೇ ಇಲ್ಲ. ಬರೀ ಒಣಮಾತೆಂದು ಭಾವಿಸಿ ಫಲ್ಗುನನು ಆ ಪ್ರಯತ್ನವನ್ನು ನಿಲ್ಲಿಸಿದನು.

ರಾಜಮಾತೆಗೆ ಆರೋಗ್ಯವಾಯಿತೆಂದು ಲಲಿತಕುಮಾರನಿಗೆ ತಿಳಿದು ಬಂದಿತು. ಇಂದಿರೆಯು ಅಲ್ಲಿ ಸೇವಕಳಂತಿರುವುದು ಅವನ ಮನಸ್ಸಿಗೆ ತುಂಬಾ ಕಷ್ಟವಾಗಿ ತೋರಿತು. "ಅವಳು ಹಾಗೆ ದಾಸಿಯಾಗಿರಲು ಕಾರಣವೇನಿರ ಬಹುದು? ಅಷ್ಟು ಪ್ರೇಮೈಕ ಪಾತ್ರಳಾದವಳನ್ನು ಅವಳ ತಂದೆಯು ಒಂಟಿಯಾಗಿ ಬಿಟ್ಟಿರಲು ಕಾರಣವೇನು? ಇದೆಲ್ಲವೂ ರಹಸ್ಯವಾಗಿರುವುದು. ಆ ರಹಸ್ಯವಾವುದೋ ಅವಳು ಕೂಡಾ ನನಗೆ ವಿಶದವಾಗಿ ಹೇಳಲಿಲ್ಲ. ಸಾಂಗವಾಗಿ ತಿಳಿದುಕೊಳ್ಳುವುದಕ್ಕೂ ನನಗೆ ಸಮಯ ದೊರೆಯಲಿಲ್ಲ. ತನ್ನ ಕಾರ್ಯವು ಇಂತಹುದೆಂದು ಸ್ಪಷ್ಟವಾಗಿ ಹೇಳಲಿಲ್ಲ. ನಾನು ಅವಳೇ ಮನಸಾರ ಪ್ರೀತಿಸಿದ ಪತಿಯಲ್ಲವೇ? ನನ್ನಲ್ಲಿ ಮುಚ್ಚುಮರೆ ಏಕೆ? ಒಂದು ವೇಳೆ ನನ್ನನ್ನು ಪ್ರೇಮಿಸುವಂತೆ ನಟಿಸುವಳೋ? ಛೀ! ಹಾಗಿರಲಾರದು. ನನ್ನ ಪ್ರಾಣಪದಕವಾದ ಇಂದಿರೆಯು ಅತಿ ನಿರ್ಮಲ ಹೃದಯಳು. ನಿಜವಾಗಿಯೂ ನನ್ನನ್ನು ಪ್ರೇಮಿಸುತ್ತಿರುವಳು. ಅವಳ ವಿಷಯದಲ್ಲಿ ಸಂದೇಹಪಡುವುದು ತುಂಬಾ ಪಾಪವು. ಅವಳು ನನಗಾಗಿ ಇಷ್ಟು ಕಷ್ಟಕ್ಕೆ ಗುರಿಯಾಗಿ ನಮ್ಮ ವಿವಾಹಕ್ಕೆ ಅಡ್ಡವಾಗಿರುವ ರಹಸ್ಯವನ್ನು ಭೇದಿಸುವುದಕ್ಕಾಗಿಯಲ್ಲವೇ ಸೇವಕಳಂತೆ ಚರಿಸುತ್ತಿರುವಳು? ಆ ರಹಸ್ಯವು ಈ ಅಂತಃಪುರಕ್ಕೆ ಸಂಬಂಧಿಸಿರಲು ಕಾರಣವೇನು? ಮಹಾರಾಜನನ್ನು ಕೊಂದವನು ವಿಕ್ರಮಸಿಂಹನೆಂದು ಅಪರಾಧವನ್ನು ಹೊರಿಸಿರುವರು. ಇಂದಿರೆಯ ತಂದೆಯಾದ ಮಿತ್ರದೇವನೇ ಆ ವಿಕ್ರಮಸಿಂಹನಾಗಿರ ಬಹುದೇ? ಈ ಇಂದಿರೆಯೇ ಚಂಪಕಮಾಲಿನಿಯಾಗಿರ ಬಹುದೇ? ತಂದೆಗೆ ಬಂದ ಅಪವಾದವನ್ನು ಹೋಗಲಾ

ಡಿಸುವುದೇ ಅವಳ ರಹಸ್ಯಕಾರ್ಯವಾಗಿರ ಬಹುದೇ? ಇಂದಿರೆಯು ಸಾಮಾನ್ಯ ಸ್ತ್ರೀಯುಳಲ್ಲ. ಕೊಲೆಪಾತಕಕ್ಕೆ ಅಂಜದ ತಸ್ಕರಾಧಿಪನಾದ ಚಂಡಸೇನನನ್ನೂ ಬೆರಗುಮಾಡಿ ನನ್ನನ್ನು ಬಿಡಿಸಿ ನಿಮಿಷಮಾತ್ರದಲ್ಲಿ ಅಂತರ್ಧಾನವಾಗಬೇಕಾದರೆ ಎಷ್ಟು ಸಾಹಸವತಿಯಾಗಿರಬೇಕು! ಅಂತಹ ಸಾಹಸವು ವೀರ ರಮಣಿಯರಿಗಲ್ಲದೆ ಮತ್ತಾರಿಗೆ ಬರಬಹುದು! ಸಾಮಾನ್ಯ ಸ್ತ್ರೀಯೆಂದು ಭಾವಿಸಿ ನಾನು ಸಹಾಯ ಮಾಡುವುದಾಗಿ ಒಪ್ಪಿಕೊಂಡಿರುವೆನು. ಸಿಂಹದ ಮರಿಯೋಪಾದಿಯುಲ್ಲಿರುವ ಅವಳಿಗೆ ನನ್ನ ಸಹಾಯವು ಅಪೇಕ್ಷಿತವಾಗುವುದೇ? ಈ ವಿಷಯದಲ್ಲಿ ನಾನು ಹೇಗೆ ಸಹಾಯ ಮಾಡಬಲ್ಲೆನು? ಹದಿನಾರು ವರ್ಷಗಳಿಂದಲೂ ಗೋಪ್ಯವಾಗಿರುವ ರಹಸ್ಯವನ್ನು ಈಗ ಹೊರಪಡಿಸ ಬೇಕಾಗಿದೆ. ಅದರಿಂದಲೇ ತಂದೆಯೂ, ಮಗಳೂ ತಮ್ಮ ರೂಪವನ್ನು ಬದಲಾಯಿಸಿ ಕೊಂಡಿರುವರು. ಒಂದು ವೇಳೆ, ಅವಳು ಚಂಪಕಮಾಲಿನಿಯಲ್ಲದಿದ್ದರೂ ನನಗೇನು? ಅವಳನ್ನು ನಾನು ಮನಃಪೂರ್ವಕವಾಗಿ ಪ್ರೀತಿಸಿರುವೆನು. ಅವಳೇ ನನ್ನ ಮನೋನಾಯಿಕೆ. ಏನೇನು ನಡೆಯುವುದೋ ತಾಳ್ಮೆಯಿಂದ ನೋಡುವೆನು. ಈಗ ಇಂದಿರೆಯು ರಾಜಮಾತೆಯ ಅಂತಃಪುರಕ್ಕೆ ಹೋಗಿರುವಳಂತೆ. ಕಾರ್ಯಸಾಧನೆಯಾಗುವ ವರೆಗೂ ಅವಳಿಗೆ ಸಮೀಪದಲ್ಲಿಯೇ ಇದ್ದು ಆವಶ್ಯಕವಾದ ಸಹಾಯವನ್ನು ಮಾಡಲು ಪ್ರಯತ್ನಿಸುವೆನು— ಎಂದು ತೀರ್ಮಾನಿಸಿಕೊಂಡು ಲಲಿತಕುಮಾರನು ಪ್ರಯಾಣೋನ್ಮುಖನಾದನು.

ರಾಜಮಾತೆಗೆ ಇಂದಿರೆಯಲ್ಲಿ ಪ್ರೀತಿ ಹುಟ್ಟಿದರೂ ಅವಳಿಂದ ಏನು ಪ್ರಮಾದ ಸಂಭವಿಸುವುದೋ ಎಂದು ಭಯಪಟ್ಟಿದ್ದಳು. ಫಲ್ಗುನನು ಇಂದಿರೆಯ ವಿಷಯವಾಗಿ ಅಪ್ರಮತ್ತನಾಗಿರುವನೆಂದು ಆಕೆಗೆ ವಿದಿತವಾಗಿದ್ದಿತು. ಮನಸ್ಸಿನಲ್ಲಿ ಯಾವ ಕಳಂಕವೂ ಇಲ್ಲದವಳಂತೆ ಇಂದಿರೆಯಲ್ಲಿ ಅತಿ ಪ್ರೇಮವನ್ನು ಪ್ರದರ್ಶಿಸುತ್ತಿದ್ದಳು. ರಾಜಮಾತೆಯ ಮುಖವನ್ನು ನೋಡುವುದರಿಂದಲೇ ಇಂದಿರೆಯು ಆಕೆಯ ಮನೋಭಾವಗಳನ್ನು ಗುರುತಿಸುತ್ತಿದ್ದಳು. ಒಂದು ದಿನ ಮಧ್ಯಾಹ್ನ ಇಂದಿರೆಯು ರಾಜಮಾತೆಗೆ ಸುಗಂಧತೈಲವನ್ನು ಹಚ್ಚಿ ಮೃದುವಾಗಿ ತಲೆಯ ಕೂದಲನ್ನು ಬಾಚಿ, ಗಂಟು ಹಾಕಿ, ಮುಖಪ್ರಕ್ಷಾಳನಕ್ಕೆ ಜಲವನ್ನು ಕೊಟ್ಟು, ವಸ್ತ್ರವನ್ನು ತೆಗೆದಿಟ್ಟು, ಉಪಾಹಾರವನ್ನು ಸಿದ್ಧಪಡಿಸಿ ತಾನು ಹೊರಗೆ ನಿಂತಿದ್ದಳು. ಆ ಸಮಯದಲ್ಲಿ ರಾಜನು ಬಂದನು. ಅಲ್ಲಿ ಅಧೋವದನಳಾಗಿ ನಿಂತಿದ್ದ ಇಂದಿರೆಯ ಸೊಬಗನ್ನು ನೋಡಿ ಆಶ್ಚರ್ಯಗೊಂಡನು. ಇಂದಿರೆಯು ಅರಸನನ್ನು ನೋಡಿ ಮರೆಯಾಗಲು "ಇಂದಿರೆ! ನನ್ನನ್ನು ನೋಡಿ ಏಕೆ ಭಯಪಡುವೆ? ಅಥವಾ ನಾಚಿಕೆಯಿಂದ ಹಾಗೆ ಮರೆ

ಯಾಗುವೆಯೋ? ನನಗೂ ಉಪಾಹಾರವು ಬೇಕು. ಇಲ್ಲಿ ತಂದಿಡು"–ಎಂದು ನುಡಿಯುತ್ತ ಮದನಪಾಲನು ತಾಯಿಯ ಬಳಿ ಕುಳಿತುಕೊಂಡನು. ಇಂದಿರೆ ಯು ಉಪಾಹಾರವನ್ನು ತರಲು ಹೊರಟುಹೋದಳು.

**ಮದನಪಾಲ—** ಅಮ್ಮಾ! ಇಂದಿರೆಯು ಶ್ಯಾಮಲವರ್ಣದವಳಾದರೂ ಪರಮ ಸಂದರಿಯಲ್ಲವೇ?

**ಮುರಳಾದೇವಿ—** ಹುಚ್ಚು ಮಗನೇ! ನಾನು ಕುರುಡಳಲ್ಲ. ನನಗೆ ಎಲ್ಲವೂ ತಿಳಿಯುವುದು. ನನ್ನ ಅಭಿಪ್ರಾಯವು ಸ್ಥಿರವಾಗುವ ಪರ್ಯಂತವೂ ನಾನು ಏನೂ ಹೇಳುವುದಿಲ್ಲ. ಪುನಃ ಕೇಳಬೇಡ"ವೆಂದು ಗರ್ಜಿಸಿ ನುಡಿದಳು. ಮದನಪಾಲನು ಭೀತನಾಗಿ ಮೌನವನ್ನು ವಹಿಸಿ ಬೇರೆ ಸಂಭಾಷಣೆಯನ್ನು ಆರಂಭಿಸಿದನು.

**ಮುರಳಾದೇವಿ—** ಕುಮಾರ! ಹೇಮಪ್ರಭಾ ದೇವಿಯ ವಿಚಾರವೇನಾ ಯಿತು? ಅವಳ ಮನೋಗತವು ವಿದಿತವಾಯಿತೇ? ಯಾವಾಗ ನಿನ್ನನ್ನು ವಿವಾಹ ಮಾಡಿಕೊಳ್ಳುವಳಂತೆ? ನೀನು ಅಲ್ಲಿಗೆ ಹೋಗಿ ಬರುತ್ತಿರುವೆಯಾ? ಅಥವಾ ವಿರಾಮಮಗ್ನನಾಗಿರುವೆಯಾ?

**ಮದನಪಾಲ—** ಇಲ್ಲವಮ್ಮಾ! ಹೇಮಪ್ರಭಾದೇವಿಯು ವಿವಾಹಮಾಡಿ ಕೊಳ್ಳಲು ಅಭ್ಯಂತರವಿಲ್ಲ. ಈಚಿಗೆ ಆಕೆಗೆ ದೇಹಸ್ಥಿತಿಯೇ ಚೆನ್ನಾಗಿಲ್ಲ. ಕೆಲವು ದಿನಗಳಿಂದ ಆಕೆಗೆ ಒಂದು ವಿಧವಾದ ಕೆಮ್ಮು ಪ್ರಾಪ್ತವಾಗಿದೆಯೆಂದು ನೀಲ ವೇಣಿಯು ಹೇಳಿದಳು. ತುಂಬ ಕೃಶಳಾಗಿದ್ದಾಳೆ. ಶೀತಕಾಲದಲ್ಲಿ ಆ ವ್ಯಾಧಿ ಯು ಅಧಿಕವಾಗುವುದಂತೆ.

**ಮುರಳಾದೇವಿ—** ಹಾಗೆಯೇ? ಅದು ಬಹಳ ಕೆಟ್ಟ ವ್ಯಾಧಿ. ಬಹು ಜಾಗರೂಕಳಾಗಿರಬೇಕು. ಬೈರಾಗಿಯನ್ನು ಪ್ರಾರ್ಥಿಸಿ ಸರಿಯಾದ ಔಷಧ ಸೇವನೆಯನ್ನು ಮಾಡಿಸಬೇಕು. ಅವರಲ್ಲಿ ದಿವ್ಯ ಮೂಲಿಕೆಗಳಿರುವುದುಂಟು. ಆ ವ್ಯಾಧಿಯೇ ವಿವಾಹವು ಆಲಸ್ಯವಾಗುವುದಕ್ಕೆ ಕಾರಣವೆಂದು ತೋರುತ್ತಿದೆ. ಅಷ್ಟರಲ್ಲಿಯೇ ಲಲಿತಕುಮಾರನು ಬಂದಿರುವನೆಂಬ ಸಂಗತಿಯನ್ನು ದಾಸಿಯು ಬಂದು ರಾಜಮಾತೆಗೆ ತಿಳುಹಿಸಿದಳು. ಒಳಕ್ಕೆ ಬರಬಹುದೆಂದು ಅಪ್ಪಣೆ ಮಾಡಿದಳು.

**ಮದನಪಾಲ—** ಲಲಿತಕುಮಾರನು ನಿಮ್ಮನ್ನು ನೋಡುವುದಕ್ಕಾ ಗಿಯೇ ಬಂದಿರುವಂತೆ ಕಾಣುತ್ತಿದೆ.

**ಮುರಳಾದೇವಿ—** ಅಹುದು. ಅವನಿಗೆ ನನ್ನಲ್ಲಿ ತುಂಬ ಪ್ರೀತಿ. ನನಗೂ ಅವನಲ್ಲಿ ಪ್ರೀತಿಯಿರುವುದು.

ಲಲಿತಕುಮಾರನು ಆ ಭವನದಲ್ಲಿ ಪ್ರವೇಶಿಸಿ ಪಾರ್ಶ್ವಗಳಲ್ಲಿ ತನ್ನ ಅಪಾಂಗ ದೃಷ್ಟಿಯನ್ನು ಪ್ರಸರಿಸುತ್ತ ಹೋಗುತ್ತಿರುವಾಗ ಅಲ್ಲಿ ಒಂದು ಕೊಟ್ಟಡಿಯಲ್ಲಿ ಇಂದಿರೆಯು ಗೋಚರಿಸಿದಳು. ಅವನ ದೃಷ್ಟಿಗೆ ಅವಳು ಅಪ್ಸರ ಕನ್ಯೆಯಂತೆ ಕಾಣಿಸಿದಳು. ಪ್ರೇಯಸೀ! ಎಂದು ಕರೆದನು. ಇಂದಿರೆಯು ಚಕಿತಳಾಗಿ ತಿರುಗಿ ನೋಡಿ "ಇದೇನು ಹುಚ್ಚುತನ! ಯಾರಾದರೂ ಕೇಳಿ ದರೆ ಎಷ್ಟು ಪ್ರಮಾದ! ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಳ್ಳಲಾರಿರಾ?" ಎಂದಳು. ಲಲಿತಕುಮಾರನು ತನ್ನ ತಪ್ಪನ್ನು ಗ್ರಹಿಸಿ "ಇಂದಿರೆ! ಕ್ಷಮಿಸು" ಎಂದು ಹೇಳಿ ರಾಜಮಾತೆಯ ಅಂತಃಪುರಕ್ಕೆ ಹೋದನು. ಅಲ್ಲಿ ರಾಜಕೀಯ ವ್ಯವಹಾರಗಳನ್ನು ಮಾತನಾಡುತ್ತಿರುವಾಗ ಒಬ್ಬ ದಾಸಿಯು ಒಂದು ಪತ್ರ ವನ್ನು ಲಲಿತಕುಮಾರನಿಗೆ ತಂದುಕೊಟ್ಟಳು. ಅವನು ಆ ಪತ್ರವನ್ನು ಓದಿ ಕೊಂಡು ಅರಸನ ಕೈಗೆ ಕೊಟ್ಟನು. ಅರಸನು ತಾಯಿಗೆ ಕೊಟ್ಟನು. "ಕುಮಾರಾ! ಹೋಗಿಬಾ! ಅವಳ ದೇಹಸ್ಥಿತಿಯನ್ನು ಜಾಗ್ರತೆ ಕಾಪಾಡಿ ಕೊಳ್ಳಬೇಕೆಂದು ನನ್ನ ವಾಕ್ಯವಾಗಿ ತಿಳಿಸು. ಮರೆಯ ಬೇಡ." ಕೆಮ್ಮು ವ್ಯಾಧಿ ಇರುವುದರಿಂದಲೇ ಆಗಾಗ್ಗೆ ನನ್ನ ಸೊಸೆಯು ರೋಗಪೀಡಿತಳಾಗಿರು ವಳು. ಇಷ್ಟು ದಿನದಿಂದಲೂ ಈ ಕುಮಾರನು ನನಗೆ ಈ ಸಂಗತಿಯನ್ನೇ ತಿಳಿಸ ಲಿಲ್ಲ. ನಮ್ಮ ಪುರಿಗೆ ಬಂದಿರುವ ಬೈರಾಗಿಯ ದರ್ಶನವನ್ನು ಮಾಡಿದರೆ ಆತನ ಮಂತ್ರೋಪದೇಶದ ಬಲದಿಂದ ಜಾಡ್ಯವು ಪರಿಹಾರವಾಗುವುದು. ಆತನ ಅನುಗ್ರಹದಿಂದಲ್ಲವೇ ನನಗೆ ಇಷ್ಟು ತ್ವರೆಯಾಗಿ ಗುಣವಾದುದು?

ಆ ದಿನ ಸಾಯಂಕಾಲ ನಾಲ್ಕು ಗಂಟೆಗೆ ಎಲ್ಲರೂ ವನವಿಹಾರಕ್ಕಾಗಿ ಹೊರಟರು. ಅವರನ್ನು ಮುಂದೆ ಕಳುಹಿಸಿ ತನ್ನ ಉತ್ತರೀಯವನ್ನು ತೆಗೆದು ಕೊಂಡು ಬರಬೇಕೆಂಬ ವ್ಯಾಜದಿಂದ ಹಿಂತಿರುಗಿ ಬಂದ ಲಲಿತಕುಮಾರನು ಪುನಃ ಇಂದಿರೆಯನ್ನು ದರ್ಶಿಸಿ "ಇಂದಿರೇ! ನನ್ನ ಮೇಲೆ ಆಗ್ರಹವೇ?" ಎಂದು ಕೇಳಿದನು.

**ಇಂದಿರೆ**— ನನ್ನ ಮನೋನಾಥ! ನಿಮ್ಮ ಮೇಲೆ ಆಗ್ರಹವೇತಕ್ಕೆ? ಆದರೆ, ನಿಮ್ಮ ಚಿತ್ತ ಚಾಂಚಲ್ಯಕ್ಕಾಗಿ ವ್ಯಸನಪಟ್ಟೆನು.

**ಲಲಿತಕುಮಾರ**— "ಪ್ರಿಯೆ! ನಿನ್ನ ಮಾತು ನಿಜ! ನಾನು ಇನ್ನು ಬಹಳ ಜಾಗರೂಕನಾಗಿರುವೆನು." ಎಂದು ಹೇಳುತ್ತ ಅವಳಿಂದ ಉತ್ತರೀಯ ವನ್ನು ತರಿಸಿಕೊಂಡು ಆನಂದಭರಿತನಾಗಿ ಉದ್ಯಾನವನಾಭಿಮುಖನಾಗಿ ಹೊರ ಟು ಬೇಗನೆ ಅವರನ್ನು ಸೇರಿದನು. ಎಲ್ಲರೂ ತೋಟದಲ್ಲಿ ಗಿಡಗಳ ನೆರಳಿನಲ್ಲಿದ್ದ ಶಿಲಾವೇದಿಕೆಗಳಲ್ಲಿ ಕುಳಿತುಕೊಂಡು ಲೋಕಾಭಿರಾಮವಾಗಿ ಮಾತನಾಡುತ್ತ

ಸ್ವಲ್ಪ ಹೊತ್ತು ಕಾಲಯಾಪನೆ ಮಾಡಿ ಬಳಿಕ ಹಾಡತೊಡಗಿದರು. ಆಗ ಇಂದಿರೆಯು ರಾಜನ ಸ್ಮೃತಿಗೆ ಬಂದಳು. ಒಂದು ಚೀಟಿಯನ್ನು ಬರೆದು ಕಳುಹಿಸಿದನು. ಒಂದು ಘಂಟೆಯ ಒಳಗಾಗಿ ರಾಜಮಾತೆಯು ಇಂದಿರೆಯೊಡನೆ ಬಂದಳು. ಅರಸನೂ, ಲಲಿತಕುಮಾರನೂ ಬಹು ಸಂಭ್ರಮದಿಂದ ರಾಜಮಾತೆಯನ್ನು ಮೇನೆಯಿಂದ ಇಳಿಸಿ ಒಂದು ಶಿಲಾವೇದಿಕೆಯ ಮೇಲೆ ಮೃದುವಾದ ಹಾಸಿಗೆಯನ್ನು ಹಾಸಿ ಕೂಡಿಸಿದರು.

**ಮುರಳಾದೇವಿ—** ಯುಪಕರೇ ! ನೀವು ಈ ಉದ್ಯಾನವನದಲ್ಲಿದ್ದು ಒಬ್ಬಗೃಹಸ್ಥನ ಮಗಳನ್ನು ಹಾಡುವುದಕ್ಕಾಗಿ ಕರೆಯಿಸುವುದು ಉಚಿತವೇ ? ಆದುದರಿಂದ ನಾನೇ ಅವಳನ್ನು ಕರೆದುಕೊಂಡು ಬರಬೇಕಾಯಿತು. ಇಂದಿರೆ ! ಇವರು ನಿನ್ನ ಸೋದರರೆಂದು ಭಾವಿಸಿ ನಿನ್ನ ಗಾನಾಮೃತದಿಂದ ನಮ್ಮೆಲ್ಲರನ್ನು ಸಂತೋಷಗೊಳಿಸು.

ಇಂದಿರೆಯು ಅಲ್ಲಿದ್ದ ವೀಣೆಯನ್ನು ತೆಗೆದುಕೊಂಡು ರಾಜಮಾತೆಯ ಹಿಂಭಾಗದಲ್ಲಿ ಕುಳಿತು ಗಾನವನ್ನು ಮಾಡಲಾರಂಭಿಸಿದಳು. ಮದನಪಾಲನು ತಲೆದೂಗಿದನು. ಲಲಿತಕುಮಾರನು ಅಧೋವದನನಾಗಿದ್ದನೇ ಹೊರತು ಗಾನವು ಅವನ ಕಿವಿಯಲ್ಲಿ ಬಿದ್ದಿತೋ ಇಲ್ಲವೋ ತಿಳಿಯದು. ಗಾನವು ಮುಗಿದ ಬಳಿಕ ಇಂದಿರೆಯು ಅರಮನೆಗೆ ಹೋಗುವ ದಾರಿಯಲ್ಲಿ ಫಲ್ಗುನನನ್ನು ಇದಿರುಗೊಂಡಳು. ಅವನು ಇಂದಿರೆಯನ್ನು ನೋಡಿ ಸ್ತಂಭೀಭೂತನಾದನು. ಅವಳು ಹೊರಟುಹೋದ ಮೇಲೆ ಫಲ್ಗುನನು "ಇವಳಾರಿರಬಹುದು? ಕಣ್ಣುಗಳೂ, ಮುಂಗುರುಳುಗಳೂ ವಿಕ್ರಮಸಿಂಹನಂತಿರುವುವು. ಸ್ಪಷ್ಟವಾಗಿ ತಿಳಿಯಲು ಸಮಯ ಬರಲಿಲ್ಲ. ಬಹಳ ಎಚ್ಚರಿಕೆಯಿಂದ ಇವಳ ಚರ್ಯೆಗಳನ್ನು ಕಂಡು ಹಿಡಿಯಬೇಕು. ಇವಳು ಸ್ವಸಾಮರ್ಥ್ಯದಿಂದ ಮುರಳಾದೇವಿಯನ್ನು ವಶಪಡಿಸಿಕೊಂಡಿರುವಳು. ಆಗಲಿ ! ನಾನು ಆ ವೃದ್ಧಳನ್ನು ಎಚ್ಚರಿಸುವೆನು. ಕಾಲಾತೀತವಾದರೆ ಪ್ರಾಣಕ್ಕೆ ಅಪಾಯವೇ ಉಂಟಾಗುವುದು" ಎಂದು ಹೇಳಿಕೊಳ್ಳುತ್ತ ರಾಜಸನ್ನಿಧಿಯನ್ನು ಸೇರಿದನು.

ಲಲಿತಕುಮಾರನೂ, ಮದನಪಾಲನೂ ಪ್ರತಿನಿತ್ಯವೂ ಬೈರಾಗಿಯನ್ನು ದರ್ಶಿಸುತ್ತ ಆತನ ಅಸಾಧಾರಣ ಶಾಸ್ತ್ರಜ್ಞಾನಕ್ಕೆ ಆಶ್ಚರ್ಯ ಪಡುತ್ತ ನಡೆದ ಸಂಗತಿಗಳನ್ನೆಲ್ಲಾ ರಾಜಮಾತೆಗೆ ಶ್ರುತಪಡಿಸುತ್ತಿದ್ದರು. ರಾಜಕಾರ್ಯನಿರ್ವಾಹಕ್ಕಾಗಿ ಕೆಲವು ದಿವಸ ಅಲ್ಲಿಯೇ ಇರಬೇಕೆಂದು ಮದನಪಾಲನು ಲಲಿತಕುಮಾರನಿಗೆ ಹೇಳಿದನು. ಅದು ತನ್ನ ಭಾವಿಕಾರ್ಯಕ್ಕೆ ಶುಭ ಸೂಚಕವೆಂದು ಸಂತಸಗೊಂಡು ಲಲಿತಕುಮಾರನು ಒಪ್ಪಿಕೊಂಡನು. ಮುಖ್ಯವಾಗಿ ಇಂದಿರೆಗೆ

ಸಹಾಯ ಮಾಡಬೇಕೆಂದು ದೈವವು ಮದನಪಾಲನಿಂದ ಆ ರೀತಿ ಮಾತನಾಡಿಸಿ ತೆಂದು ಪೂರ್ಣವಾಗಿ ನಂಬಿದನು.

# ೧೫ನೆಯ ಅಧ್ಯಾಯ

ರಾಜಮಾತೆಯ ಅಂತಃಪುರದಲ್ಲಿ ತಾರೆಯೆಂಬ ಒಬ್ಬ ಚೇಟಿಯಿದ್ದಳು. ಅವಳು ಬಹಳ ಸದ್ಗುಣವತಿ. ಅವಳ ತಾಯಿಯು ಆ ರಾಜಮಂದಿರದಲ್ಲಿಯೇ ಹುಟ್ಟಿ ಬೆಳೆದು, ಭಕ್ತಿಯಿಂದ ರಾಜರನ್ನು ಸೇವಿಸುತ್ತಿದ್ದು ಅಲ್ಲಿಯೇ ಕಾಲಾಧೀನವಾಗಿದ್ದಳು. ಅಂತಹವಳ ಮಗಳಾದ ತಾರೆಯು ಅವಳಂತೆಯೇ ಮೇವಾರ ರಾಜರಲ್ಲಿ ಪರಮ ಭಕ್ತಿಯಿಂದ ವರ್ತಿಸುತ್ತಿದ್ದಳು. ಇವಳ ತಾಯಿಯು ದಾಸೀ ಸಮೂಹಕ್ಕೆ ಅಧಿಕಾರಿಣಿಯಾಗಿದ್ದಳು. ಇವಳಿಗೂ ಆ ಅಧಿಕಾರವನ್ನು ಕೊಡಬೇಕೆಂದು ಮುರಳಾದೇವಿಯು ನಿಶ್ಚಯಿಸಿದ್ದಳು. ಈ ತಾರೆಯು ತನ್ನ ತಾಯಿಯ ಮುಖದಿಂದ ಅಂತಃಪುರದಲ್ಲಿ ನಡೆದ ಸಂಗತಿಗಳನ್ನೆಲ್ಲಾ ಕೇಳಿದ್ದಳು. ಅದೇನು ಕಾರಣವೋ, ಇಂದಿರೆಯಲ್ಲಿ ಅವಳಿಗೆ ತುಂಬ ಪ್ರೇಮವುಂಟಾಯಿತು. ಸರ್ವದಾ ಆಕೆಯನ್ನು ಎಡೆಬಿಡದೆ ಸಕಲೋಪಚಾರಗಳನ್ನೂ ಮಾಡುತ್ತಿದ್ದಳು. ಛಾಯೆಯಂತೆ ಇಂದಿರೆಯ ಹಿಂದೆಯೇ ತಿರುಗುತ್ತಿದ್ದಳು. ಆಗಾಗ್ಗೆ ಅವರಿಬ್ಬರೂ ನಾನಾ ಪ್ರಸ್ತಾವಗಳನ್ನು ಮಾತನಾಡುತ್ತಿದ್ದರು.

ಒಂದು ದಿನ ಸಂಧ್ಯಾಸಮಯದಲ್ಲಿ ತಾರೆಯೂ, ಇಂದಿರೆಯೂ ಒಂದೆಡೆಯಲ್ಲಿ ಸೇರಿ ನಾನಾ ರಹಸ್ಯಗಳನ್ನು ಮಾತನಾಡಿ ಕೊಳ್ಳುತ್ತಿದ್ದರು. ತಾರೆಯಲ್ಲಿ ಇಂದಿರೆಗೆ ಪೂರ್ಣ ನಂಬುಗೆಯುಂಟಾಗಿದ್ದರೂ ಅವಳಿಂದ ಸಂಗತಿಗಳನ್ನು ತಿಳಿದುಕೊಳ್ಳುತ್ತಿದ್ದಳೇ ಹೊರತು ತನ್ನ ಗುಟ್ಟನ್ನು ಇಂದಿರೆಯು ಹೇಳುತ್ತಿರಲಿಲ್ಲ.

**ತಾರೆ**— ತಾಯೇ ! ಇಂದಿರೆ ! ನಿನ್ನನ್ನು ನೋಡಿದಂದಿನಿಂದ ನನಗೆ ನಿನ್ನನ್ನು ಸೇವಿಸಬೇಕೆಂಬ ಕುತೂಹಲವುಂಟಾಗಿರುವುದು. ನೀನು ಸದ್ವಂಶದಲ್ಲಿ ಹುಟ್ಟಿದ ಪುಣ್ಯಶಾಲಿನಿಯೆಂದು ನನಗೆ ದೃಢಪಟ್ಟಿರುವುದು. ನಮ್ಮ ರಾಜಮಾತೆಯಲ್ಲಿ ಇಲ್ಲದ ಸದ್ಗುಣಗಳು ನಿನ್ನಲ್ಲಿ ಕಾಣುತ್ತಿರುವುವು.

**ಇಂದಿರೆ**— ತಾರೆ ! ರಾಜಮಾತೆಯು ನನ್ನನ್ನು ಸಂರಕ್ಷಣೆ ಮಾಡುತ್ತಿರುವುದರಿಂದ ಆಕೆಯ ಅವಗುಣಗಳನ್ನು ನೀನು ಎಣಿಸಬಾರದು.

**ತಾರೆ**— ನೀನು ಹೇಳಿದ ಮಾತು ನಿಶ್ಚಯ. ನಾನು ಆಕೆಗೆ ಎಂದೂ ದ್ರೋಹವನ್ನು ಎಣಿಸುವುದಿಲ್ಲ. ಆಕೆಯನ್ನು ಶತ್ರುಗಳಿಗೆ ಒಪ್ಪಿಸಲಾರೆನು.

ಈ ಅಂತಃಪುರದಲ್ಲಿಲ್ಲಾ ಸೀನು ವಿಚಾರಿಸಿದರೆ ನಾನು ಅಂತಹವಳಲ್ಲವೆಂಬ ಸಂಗತಿ ವಿದಿತವಾಗುವುದು. ನಾನು ಯಾರಲ್ಲಿಯೂ ಮನಸ್ಸು ಬಿಚ್ಚಿ ಮಾತನಾಡುವವಳಲ್ಲ. ಆದರೆ, ಈಗ ನಿನ್ನಲ್ಲಿ ಮಾತನಾಡಬೇಕಾಗಿ ಬಂದಿದೆ. ಏಕೆಂದರೆ, ರಾಜಮಾತೆಯು ಚಂದ್ರಿಕೆಯನ್ನು ಉಷ್ಣಕಿರಣಗಳೆಂದು ಭ್ರಾಂತಿಗೊಂಡಿದ್ದಳು. ತನ್ನ ಕಲುಷಹೃದಯದಂತೆಯೇ ಇತರರಿಗೂ ಇರುವುದೆಂದು ಭಾವಿಸಿದ್ದಾಳೆ. ಇಬ್ಬರು ಒಂದು ಸ್ಥಳದಲ್ಲಿ ನಿಂತು ಮಾತನಾಡುತ್ತಿದ್ದರೆ ತನ್ನ ವಿಷಯವನ್ನೇ ಆಡಿಕೊಳ್ಳುತ್ತಿರುವರೆಂದು ಭಾವಿಸುವಳು. ತಾಯೇ! ಇಂದಿರೆ! ದುರ್ಜನರಿಗೆ ಜಯವು ಹೇಗೆ ಉಂಟಾಗುವುದು ? ನಾನು ಈಗ ರಾಜಮಾತೆಯಿಂದ ಪೋಷಿತಳಾಗುತ್ತಿದ್ದರೂ ಪರಂಪರೆಯಾಗಿ ಪ್ರತಾಪಸಿಂಹ ಮಹಾರಾಜನ ವಂಶದವರಿಂದ ಊರ್ಜಿತವಾಗುತ್ತಾ ಬಂದಿದ್ದೇನೆ. ದಯಾಶಾಲಿನಿಯೂ, ಪತಿವ್ರತಾಶಿರೋಮಣಿಯೂ ಆದ ಮಹಾರಾಣಿ ರತ್ನಾಬಾಯಿಯವರ ಅಪಾರ ಕರುಣಾಕಟಾಕ್ಷದಿಂದ ನನ್ನ ತಾಯಿ ಪೋಷಿತಳಾದಳು. ಈಗ ಹದಿನಾರು ವರ್ಷಗಳಿಂದ ರಾಜಮಾತೆಯ ನಿರಂಕುಶಾಧಿಕಾರವು ನಡೆಯುತ್ತಿರುವುದು. ಆದಕ್ಕೆ ಮುಂಚೆ ಬಾಲಕಿಯರು ಕೆಲವರು ದಶರಥನ ಸಮಾನನಾದ ಪ್ರತಾಪಸಿಂಹ ಮಹಾರಾಜನಿಂದಲೂ, ಶ್ರೀ ರಾಮನಂತೆ ಮೋಹನ ಮೂರ್ತಿಯಾಗಿದ್ದ ವಿಕ್ರಮಸಿಂಹ ಮಹಾರಾಜನಿಂದಲೂ ಪೋಷಿಸಲ್ಪಟ್ಟಿರುವರು. ದಾಸೀಜನರನ್ನು ನಿಕೃಷ್ಟವಾಗಿ ನೋಡದೆ ವಿದ್ಯಾವತಿಗಳನ್ನಾಗಿ ಮಾಡುತ್ತಿದ್ದರು. ರಾಣಿವಾಸದಲ್ಲಿ ಯಾವಾಗಲೂ ಶಾಂತಿ ಸಂತೋಷಗಳೂ, ಭಕ್ತಿ ಪ್ರೇಮಗಳೂ, ಪರಿಶುದ್ಧವಾದ ನಡತೆಯೂ ಆಚರಣೆಯಲ್ಲಿರ ಬೇಕೆಂಬುದು ಯುವರಾಜರ ಅಭಿಪ್ರಾಯ. ಆ ಮಹಾನುಭಾವನು ನಮ್ಮನ್ನು ಸೋದರಿಗಳಂತೆ ಪ್ರೇಮಿಸುತ್ತಿದ್ದನು. ಆತನೊಡನೆ ನಾವು ಮೃಗಯಾವಿನೋದಕ್ಕಾಗಿ ಹೋದಾಗ ಅಲ್ಲಿ ನಮ್ಮ ಧನುರ್ವಿದ್ಯೆಯ ಚಾತುರ್ಯವನ್ನು ತೋರಿಸಿದರೂ ಬಹಳ ಸಂತೋಷಪಡುತ್ತಿದ್ದನು. ಅಮ್ಮಾ! ನಾನು ಏನು ಹೇಳಲಿ ! ನಮ್ಮ ಮಹಾರಾಜರು ಅಕಾಲ ಮೃತ್ಯುವಿನ ಮುಖದಲ್ಲಿ ಬಿದ್ದರು. ಯುವರಾಜರಾದರೋ ಘೋರಾರಣ್ಯದ ಪಾಲಾದರು. ಈ ದುಃಖದಿಂದಲೇ ನನ್ನ ತಾಯಿಯೂ ಸ್ಥೂಲ ಕಳೇಬರವನ್ನು ಬಿಟ್ಟು ಸ್ವರ್ಗದಲ್ಲಿ ರಾಜದಂಪತಿಗಳನ್ನು ಸೇವಿಸುತ್ತಿರುವಳೆಂದು ಹೇಳಿದರೆ ದೋಷವಿಲ್ಲ. ನಾನು ಮಾತ್ರ ಈಗ ಜೀವಿಸಿರುವೆನು. ರಾಜಮಾತೆಯನ್ನು ತಪ್ಪದೆ ಸೇವಿಸುವೆನು. ಆಕೆಯು ಎಷ್ಟು ದುರ್ಗುಣವತಿಯಾದರೂ ಪ್ರತಾಪಸಿಂಹ ಮಹಾರಾಜನ ರಾಣಿಯಲ್ಲವೇ ? ಆದುದರಿಂದ ನಮ್ಮ ಪಾಲಿಗೆ ಪೂಜ್ಯಳೇ. ಆದರೆ, ಸೇವೆ ಮಾತ್ರದಿಂದಲೇ ಆಕೆಯು ತೃಪ್ತಿ ಹೊಂದುವವಳಲ್ಲ. ಅನ್ಯರು ಮಾಡಿದ

ಅಪರಾಧವನ್ನು ತನ್ನ ಸವತಿಯ ಮಗನಾದ ಯುವರಾಜನ ಮೇಲೆ ಆರೋಪಿಸಿ ಆ ಅಪವಾದದಿಂದ ಆ ಮಹಾನುಭಾವನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿದು ದಲ್ಲದೆ ಅರಣ್ಯದ ಪಾಲುಮಾಡಿದ ಕೈಕೆಯಿಯು ಈಕೆಯಲ್ಲವೇ? ಇವರು ಸೂರ್ಯವಂಶದ ರಾಜರುಗಳಾದುದರಿಂದ ಮತ್ತೊಬ್ಬ ಕೈಕೆಯಿಯು ಹುಟ್ಟಿ ದುದು ಆಶ್ಚರ್ಯವಲ್ಲ. ಹೇಗಾದರೂ ಯುವರಾಜನನ್ನು ಪ್ರಾಣಶಿಕ್ಷೆಗೆ ಗುರಿಪಡಿ ಸಬೇಕೆಂದು ಸಂಕಲ್ಪಿಸಿರುವಳು. ಕೆಲವು ದಿನಗಳಿಂದ ಆತನು ಸತ್ತು ಹೋದ ನೆಂಬ ಪ್ರವಾದವನ್ನು ಹೊರಡಿಸಿರುವಳು. ನಮ್ಮ ಯುವರಾಜನು ಬದುಕಿರು ವನೆಂದು ನಾನು ಒಬ್ಬ ಮಹಾತ್ಮನ ಮೂಲಕ ತಿಳಿದುಕೊಂಡಿದ್ದೇನೆ. ಈಗ ನಿನ್ನ ವಿಷಯವಾಗಿ ಈಕೆಗೆ ಸಂದೇಹವುಂಟಾಗಿರುವುದು. ನೀನು ಆತನ ಮಗ ಳಾಗಿರಬಹುದೆಂದು ಹೋಲಿಕೆಯಿಂದ ಸಂಶಯ ಪಡುತ್ತಿರುವಳು. ಅದನ್ನು ಚೆನ್ನಾಗಿ ಪರೀಕ್ಷಿಸಿ ನಿರ್ಧರಿಸಿಕೊಳ್ಳುವುದಕ್ಕಾಗಿ ನಿನ್ನನ್ನು ಇಲ್ಲಿಗೆ ಕರೆಯಿಸಿ ರುವಳು. ನಿನ್ನ ಚರ್ಯೆಗಳನ್ನು ಗಮನಿಸುವಂತೆ ನನಗೆ ಆಜ್ಞಾಪಿಸಿರುವಳು. ಫಲ್ಗುಣನು ಈಕೆಗೆ ಆಪ್ತನಾದ ದುರ್ಮಂತ್ರಿ. ಕ್ರೂರವಾದ ರಾಜವಧೆ ಯನ್ನು ಇವನೇ ಮಾಡಿ ಆ ದ್ರೋಹಕ್ಕೆ ಯುವರಾಜನನ್ನು ಗುರಿಪಡಿಸಿದ್ದರೂ ಇರಬಹುದು. ತನ್ನ ಗಂಡನು ಸತ್ತು ಹೋದರೂ ತನ್ನ ಸವತಿಯ ಮಗನನ್ನು ನಾಶಗೊಳಿಸಲು ಅವಕಾಶವುಂಟಾಯಿತೆಂದು ರಾಜಮಾತೆಯು ತೃಪ್ತಳಾಗಿರು ವಳು. ಇಷ್ಟು ಸಾಲದೆ ಹೇಮಪ್ರಭಾದೇವಿಯನ್ನು ತನ್ನ ದತ್ತ ಪುತ್ರನಿಗೆ ಪುನರ್ವಿವಾಹ ಮಾಡಿಸಬೇಕೆಂದು ಸಂಕಲ್ಪಿಸಿರುವಳು. ಈಗ ಅದಕ್ಕಾಗಿ ಬಹಳ ಪ್ರಯತ್ನಗಳೂ ನಡೆಯುತ್ತಿರುವುವು. ಇದು ಕೈಗೂಡುವ ಕೆಲಸವಲ್ಲ. ಆ ಪತಿವ್ರತೆಗೆ ಹೀಗೆ ಇಕ್ಕಟ್ಟುಗಳನ್ನುಂಟುಮಾಡಿದ ವಿಧಿಯನ್ನು ದೂರಬೇಕಾ ಗಿದೆ. ಒಂದು ವೇಳೆ ಯುವರಾಜನು ಕಷ್ಟಗಳನ್ನೆಲ್ಲಾ ಅನುಭವಿಸಿ ಪುನಃ ಇಲ್ಲಿಗೆ ಒಂದು ರಾಜ್ಯಾಭಿಷಿಕ್ತನಾದರೂ, ಮುರಳಾದೇವಿಯನ್ನು ಕ್ಷಮಿಸಿ ನಿಜ ಜನನಿಯಂತೆಯೇ ಸತ್ಕರಿಸುವುದು ನಿಶ್ಚಯ. ಅವನು ಶತ್ರುಗಳಿಗೂ ಅಪ ಕಾರವನ್ನೆಣಿಸನು. ಅಮ್ಮಣ್ಣೀ! ನಮ್ಮ ಯುವರಾಜನ ಕಷ್ಟಗಳನ್ನು ಪರಿಹ ರಿಸಲು ನೀನು ಬಂದಿರುವೆಯಾದರೆ ವಂಚನೆಯಿಲ್ಲದೆ ನಿನಗೆ ಯಥಾಶಕ್ತಿ ಸಹಾ ಯಮಾಡಲು ಸಿದ್ಧಳಾಗಿದ್ದೇನೆ. ಅದರಿಂದ ನನ್ನ ಪ್ರಾಣ ಹೋದರೂ ಭಯ ಪಡುವವಳಲ್ಲ. ನಮ್ಮ ಪ್ರಭುವಿಗೆ ಸುಖವಾಗ ಬೇಕು.

ಈ ಸಂಗತಿಗಳನ್ನೆಲ್ಲಾ ಜಾಗರೂಕತೆಯಿಂದ ಕೇಳುತ್ತಿದ್ದ ಇಂದಿರೆಯು ಚಿತ್ರಪ್ರತಿಮೆಯಂತೆ ನಿಶ್ಚೇಷ್ಟಿತಳಾದಳು. "ಇದೊಂದು ಮಾಯಾಜಾಲ ವಾಗಿರಬಹುದೇ ಅಥವಾ ಇವಳಿಂದ ನನಗೆ ಉಪಕಾರವಾದೀತೆ?" ಎಂದಾಲೋ

ಚಿಸುತ್ತಿದ್ದು ಪ್ರಕಾಶವಾಗಿ "ತಾರೆ! ಚಿಂತಿಸಬೇಡ. ನೀನು ರಾಜಭಕ್ತಳು. ದುರ್ಜನರಿಗೆ ಎಂದಿಗೂ ಜಯವಾಗುವುದಿಲ್ಲ. ಯಾರೋ ನಮಗಾಗಿ ಬರುವಂತಿದೆ. ನೀನು ಹೊರಡು. ನಾನು ಹಿಂದೆಯೇ ಬರುತ್ತೇನೆ" ಎಂದಳು.

**ತಾರೆ**—ಅಮ್ಮಣ್ಣಿ! ನಾನು ಹೊರಡಲು ಅಭ್ಯಂತರವಿಲ್ಲ. ಈಗ ಸಂಧ್ಯಾ ಸಮಯವಾದುದರಿಂದ ನೀನು ಇಲ್ಲಿ ಒಂಟಿಯಾಗಿ ನಿಲ್ಲುವುದು ಕ್ಷೇಮಕರವಲ್ಲ. ಎಚ್ಚರವಾಗಿರು— ಎಂದು ಹೇಳಿ ಹೊರಟು ಹೋದಳು.

ಇಂದಿರೆಯು ಇದೇ ಸಮಯವೆಂದೆಣಿಸಿ ಸಿಂಹಾಸನದ ಬಳಿಗೆ ಹೋಗಿ ಅದರ ಶಿಲ್ಪವಿದ್ಯಾ ಚಾತುರ್ಯವನ್ನು ನೋಡುತ್ತಿರಲು ಅಲ್ಲಿ ಒಂದು ಕೀಲು ತುಕ್ಕು ಹಿಡಿದಿರುವುದನ್ನು ಕಂಡಳು. ಅದನ್ನು ಬಲವಾಗಿ ಹಿಡಿದು ತಿರುಗಿಸಲು ಅದು ಎದ್ದು ನಿಂತಿತು. ಪುನಃ ಅದನ್ನು ತಗ್ಗಿಸಿದಳು. ಅವಳು ಅದರಲ್ಲಿಳಿದು ಇತರರಿಗೆ ಕಾಣಿಸದಂತೆ ದಿಕ್ಕುಗಳನ್ನು ಪರೀಕ್ಷಿಸುತ್ತಿರಲು ಯಾರೋ ಇಬ್ಬರು ಮನುಷ್ಯರು ಬರುವುದನ್ನು ಕಂಡಳು. ಅವರು ತಾನಿದ್ದ ಸ್ಥಳಕ್ಕೆ ಬಂದರು. ಅವರಲ್ಲೊಬ್ಬನು ಫಲ್ಗುನನು. ಮತ್ತೊಬ್ಬನು ಇಂದಿರೆಗೆ ಪರಿಚಿತನಲ್ಲ. ಇಂದಿರೆಯು ನಿಶ್ಚೇಷ್ಟಿತಳಾಗಿ ನಿಂತಳು. ಅವರು ದಿಕ್ಕುಗಳನ್ನು ಪರೀಕ್ಷಿಸಿ ನೋಡಲು, ಯಾರೂ ಕಾಣಲಿಲ್ಲ. "ಮಧುಕರಾ! ಕುಳಿತುಕೊ. ಈ ಸ್ಥಳದಲ್ಲಿ ಪಿಶಾಚಗಳ ಸಂಚಾರವೇ ಹೊರತು ನರಸಂಚಾರವಿಲ್ಲದಕಾರಣ ನೀನು ಭಯಪಡ ಬೇಕಾದುದಿಲ್ಲ. ನೀನು ಕಾಳೀಘಟ್ಟಕ್ಕೆ ಹೋಗಿದ್ದ ಸಂಗತಿಯೇನಾಯಿತು? ಈ ಇಂದಿರೆ ಯಾರು? ಇವಳ ತಂದೆಯನ್ನು ನೋಡಿದೆಯಾ?"—ಎಂದು ಫಲ್ಗುನನು ಕೇಳಿದನು.

**ಮಧುಕರ**— ನಿನ್ನ ಆಜ್ಞೆಯಂತೆ ಬೇಗನೆ ಕಾಳೀಘಟ್ಟಕ್ಕೆ ಹೋಗಿ ನೀನು ಹೇಳಿದ್ದಮನೆಯಲ್ಲಿ ವಿಚಾರಿಸಿದೆನು. ಅಲ್ಲಿ ಇಂದಿರೆಯು ಹೇಳಿದಪ್ರಕಾರವಿರುವುದೇ ಹೊರತು ಬೇರೆಯಾಗಿಲ್ಲ. ನೆರೆಹೊರೆಯನ್ನೆಲ್ಲಾ ವಿಚಾರಿಸಿದೆನು. ಸಂಶಯವೇನೂ ತೋರಲಿಲ್ಲ. ಇದು ಸತ್ಯವಾದ ಮಾತು. ಮತ್ತೇನು ಆಜ್ಞಾಪಿಸುವೆಯೋ ಮಾಡುವೆನು.

**ಫಲ್ಗುನ**— ನೀನು ಮಾಡಬೇಕಾದ ಕಾರ್ಯವು ಮತ್ತೊಂದಿದೆ. ನಮ್ಮ ರಾಜಧಾನಿಗೆ ಒಬ್ಬ ಬೈರಾಗಿ ಬಂದಿದ್ದಾನೆ. ಆತನು ಮಹನೀಯನು. ಆತನ ಸನ್ನಿಧಿಗೆ ಅನೇಕರು ಬರುತ್ತಿರುವರು. ಈ ಹುಡುಗಿಯ ತಂದೆ ಅಲ್ಲಿಗೆ ಬರುವನೇನೋ ಕಂಡು ಹಿಡಿಯಬೇಕು. ನಾನು ರಾಜನಿಗೆ ಹೇಳಿ ನಿನ್ನಳ ಕಾರ್ಯವನ್ನು ಮಾಡಿಸುವೆನು. ನಾನೂ ಸಹಾಯ ಮಾಡುತ್ತಿರುವೆನು. ಎಚ್ಚರಿಕೆಯಿಂದಿರು. ನಾನು ಜಾಗರೂಕನಾಗಿದ್ದು ಆ ಹುಡುಗಿಯನ್ನು ಕಂಡುಹಿಡಿಯುವೆನು.

ಹೀಗೆ ಮಾತನಾಡಿಕೊಂಡು ಅವರಿಬ್ಬರೂ ಎದ್ದು ಹೋದರು. ಇಂದಿರೆಯು ಮೇಲಕ್ಕೆದ್ದು ವೃಕ್ಷಗಳ ನೆರಳಿನಲ್ಲಿ ನಡೆದು ಅಂತಃಪುರವನ್ನು ಸೇರಿದಳು.

ರಾಜಮಾತೆಯ ಶಯನಾಗಾರಕ್ಕೆ ಇದಿರಾಗಿ ಇಂದಿರೆಯು ಮಲಗುವ ಮನೆ. ಅದೊಂದು ದೊಡ್ಡ ಭವನ. ಅದರಲ್ಲೆಲ್ಲಾ ದಾಸೀಜನರು ನಿದ್ರಿಸುವುದು. ಆ ಭವನದಲ್ಲಿ ಒಂದು ಪ್ರತ್ಯೇಕ ಕೊಟ್ಟಡಿ. ಆ ಕೊಟ್ಟಡಿಯಲ್ಲಿ ಇಂದಿರೆಯು ಮಲಗುವಳು. ಅದರಲ್ಲಿ ದೊಡ್ಡ ದೊಡ್ಡ ಕನ್ನಡಿಗಳೂ, ಮೃಗಚರ್ಮದ ಆಸನಗಳೂ, ವಿಧವಿಧವಾದ ಪಟಗಳೂ, ಸೋಫಾಗಳೂ ಇದ್ದುವು. ಇಂದಿರೆಯನ್ನು ಎಲ್ಲರಿಗಿಂತಲೂ ಅತಿಶಯವಾಗಿ ರಾಜಮಾತೆಯು ನೋಡಿಕೊಳ್ಳುತ್ತಿರುವಳೆಂದು ದಾಸೀಜನರು ಹೇಳಿಕೊಳ್ಳುತ್ತಿದ್ದರು. ಆದರೆ ಅದು ಬೂಟಾಟಿಕೆಯೇ ಹೊರತು ವಾಸ್ತವವಾದುದಲ್ಲ. ಅವಳ ರಹಸ್ಯವನ್ನು ಕಂಡುಹಿಡಿಯುವುದಕ್ಕಾಗಿ ಏರ್ಪಡಿಸಿದ ತಂತ್ರವಾಗಿದ್ದಿತು. ಇಂದಿರೆಗೆ ಸದಾ ಸಹಾಯಕಳಾಗಿ ತಾರೆಯು ಮಲಗುವಳು. ಆ ರಾತ್ರಿ ಇಂದಿರೆಗೆ ಬಹಳ ಹೊತ್ತು ನಿದ್ರೆಯೇ ಬರಲಿಲ್ಲ. "ನಾನು ನೋಡಿದುದು ಸ್ವಪ್ನವಲ್ಲ. ದೈವವು ಈಗಾಗಲೇ ಒಂದೊಂದು ನಿದರ್ಶನವನ್ನು ತೋರುತ್ತಿರುವುದು. ಫಲ್ಗುನನು ಕ್ರೂರಾತ್ಮನೇ ಸರಿ. ತಾರೆಯು ಹೇಳಿದಂತೆ ರಾಜವಧೆಯು ಅವನಿಂದಲೋ ಅಥವಾ ಅವನಿಂದ ಪ್ರೇರಿತನಾದ ಮತ್ತೊಬ್ಬನಿಂದಲೋ ನಡೆದಿರಬೇಕು. ನನ್ನನ್ನು ನೋಡಿದ ಮಾತ್ರದಿಂದಲೇ ನನ್ನ ತಂದೆಯ ಹೋಲಿಕೆಗಳು ನನ್ನಲ್ಲಿವೆಯೆಂದು ಗ್ರಹಿಸಿ ತನ್ನ ರಹಸ್ಯವನ್ನು ಕಂಡು ಹಿಡಿಯಲು ನಾನು ಬಂದಿದ್ದೇನೆಂದು ಊಹಿಸಿರುವನು. ಇವನು ಪರಮ ಮೇಧಾವಿ. ಎಲ್ಲಿ ನೋಡಿದರೂ ದುರ್ಜನರು ಕುಶಾಗ್ರಬುದ್ಧಿಯುಳ್ಳವರಾಗಿರುವರು. ಬಲಶಾಲಿಗಳೂ ಆಹುದು. ಆದರೆ, ಅವರಿಗೆ ಸಹಾಯವಾಗಿ ದೈವಬಲವಿರುವುದಿಲ್ಲ. ಆದುದರಿಂದಲೇ ಅವರು ಅಧಃಪತನವನ್ನು ಹೊಂದುವರು. ಇದೇ ದೈವ ನಿಯಮವು. ಇವನೂ, ಇವನ ರಾಣಿಯೂ ಏನು ಮಾಡುವರೋ ನೋಡುವೆನು. ನಾನೆಣಿಸಿರುವ ಕಾರ್ಯಕ್ಕೆ ಇದೇ ಸರಿಯಾದ ಸ್ಥಳವಲ್ಲದೆ ನನ್ನ ತಾಯಿಯ ಮನೆಯಲ್ಲ." ಎಂದು ಆಲೋಚಿಸುತ್ತ ನಿದ್ರೆಗೈದಳು.

ಹೇಮಪ್ರಭಾ ದೇವಿಯು ಲಲಿತಕುಮಾರನನ್ನು ಕರೆಯಿಸಿದ ಕಾರಣವೇನೋ ತಿಳಿದುಕೊಂಡು ಬರಲು ಮದನಪಾಲನು ಲಲಿತಕುಮಾರನನ್ನೇ ನಿಯಮಿಸಿದನು.

**ಲಲಿತಕುಮಾರ—** ರಾಜೇಂದ್ರಾ! ತನ್ನ ಜಮೀನು ಸಂಬಂಧವಾದ ವ್ಯವಹಾರಕ್ಕಾಗಿ ನನ್ನನ್ನು ಹೇಮಪ್ರಭಾ ದೇವಿಯು ಕರೆಯಿಸಿರಬಹುದು.

ಮೊದಲನೆಯ ದರ್ಬಾರಿನಲ್ಲಿ ರಾಜಕಾರ್ಯಗಳನ್ನು ತೀರಿಸಿಕೊಂಡು ಅಲ್ಲಿಗೆ ಹೋಗುವೆನು— ಎಂದನು.

ಇಂದಿರೆಯು ಹೊರಟುಹೋದಂದಿನಿಂದಲೂ ಹೇಮಪ್ರಭಾದೇವಿಗೆ ಮನಸ್ಸುಸ್ತಿಮಿತವಿಲ್ಲದೆ ವ್ಯಸನಾಕ್ರಾಂತಳಾಗಿದ್ದಳು. ಪತಿಪುತ್ರೀ ವಿಯೋಗವು ಆಕೆಗೆ ಹೊಸದಾಗಿ ಪ್ರಾಪ್ತಿಸಿದ ಹಾಗಾಯಿತು. ದಿಕ್ಕುಗಳು ಶೂನ್ಯವಾದುವು. ಭೋಜನಪದಾರ್ಥಗಳಲ್ಲಿ ರುಚಿಯೇ ತೋರಲಿಲ್ಲ. ತನಗೆ ಏನು ಬೇಕಾಗಿದ್ದರೂ ಮೊದಲು ಇಂದಿರೆಯ ಹೆಸರನ್ನು ಉಚ್ಚರಿಸದೆ ಮತ್ತೊಬ್ಬರನ್ನು ಕರೆಯುತ್ತಿರಲಿಲ್ಲ. ಈಗ ನಾಲ್ಕೈದು ತಿಂಗಳಿಂದಲೂ ಅವಳ ಹೆಸರೇ ಅಪರೂಪವಾಯಿತು. ಅವಳ ವಿಯೋಗದಿಂದುಂಟಾದ ದುಃಖವು ತುಂಬ ಬಾಧಿಸುತ್ತಿದ್ದಿತು. ಲಲಿತಕುಮಾರನು ಹೇಮಪ್ರಭಾದೇವಿಯ ರಹಸ್ಯಕೂಟಕ್ಕೆ ಸೇರಿದವನು. ಇದು ಪರಮ ರಹಸ್ಯವು. ಮದನಪಾಲಾದಿಗಳಿಗೆ ಈ ಸಂಗತಿಯೇ ಗೊತ್ತಿಲ್ಲ. ಆ ದಿನ ಹೇಮಪ್ರಭಾ ದೇವಿಯು ಭೋಜನವನ್ನು ಮಾಡದೆ ಲಲಿತಕುಮಾರನನ್ನು ನಿರೀಕ್ಷಿಸುತ್ತಿದ್ದಳು. ಬಗ್ಗಿಯ ಶಬ್ದವು ಕೇಳುತ್ತಲೇ ಹರ್ಷಚಿತ್ತಳಾಗಿ ದ್ವಾರದೇಶಕ್ಕೆ ಬಂದಳು. ಲಲಿತಕುಮಾರನು ಒಂಟಿಯಾಗಿ ಬಂದಿರುವುದನ್ನು ನೋಡಿ ಮತ್ತಷ್ಟು ಹರ್ಷಿಸಿದಳು. ಲಲಿತಕುಮಾರನು ಬಗ್ಗಿಯಿಂದಿಳಿದು ಹೇಮಪ್ರಭಾ ದೇವಿಗೆ ನಮಸ್ಕರಿಸಿದನು. "ಕುಮಾರಾ! ಚಿರಂಜೀವಿಯಾಗಿದ್ದು ನಿನ್ನ ಮನೋನಾಯಕಿಯನ್ನು ಪಡೆದು ಸುಖವಾಗಿರು"– ಎಂದು ಆಶೀರ್ವದಿಸಿದಳು. "ಈ ದಿನ ನೀನು ಏಕಾಕಿನಿಯಾಗಿ ಬರಬೇಕೆಂಬುದೇ ನನ್ನ ಮನೋಗತವು." ಎನ್ನುತ್ತ ಇಬ್ಬರೂ ಭೋಜನಶಾಲೆಗೆ ಹೋಗಿ ಮಾತನಾಡುತ್ತ ಸಾವಕಾಶವಾಗಿ ಊಟವನ್ನು ಮಾಡಿದರು. ವಿಶ್ರಾಂತಿಮಂದಿರಕ್ಕೆ ಹೋಗಿ ಅನೇಕ ವಿಷಯಗಳನ್ನು ಮಾತನಾಡಿ ಕೊಂಡರು. ಹೇಮಪ್ರಭಾ ದೇವಿಯು ಯಾವ ಕಾರಣದಿಂದಲೋ ಸ್ವಲ್ಪ ಹೊತ್ತು ಮೌನವಾಗಿದ್ದು ಬಳಿಕ "ಕುಮಾರಾ! ಮದನಪಾಲನು ಉನ್ಮತ್ತನಂತೆ ಪುನರ್ವಿವಾಹದ ವಿಷಯವನ್ನು ಮಾತನಾಡುತ್ತಿರುವನಲ್ಲವೇ? ನಾನು ಅದಕ್ಕೆ ಸಮ್ಮತಿಸಿರುವೆನೆಂದು ನಂಬಿರುವೆಯಾ?" ಎಂದಳು.

**ಲಲಿತಕುಮಾರ**— ಜನನೀ! ನಾನು ಹಾಗೆ ಎಂದಿಗೂ ನಂಬಲಾರೆನು. ನಿಮಗೆ ಬಂದಿರುವ ಕಷ್ಟಗಳಿಗಾಗಿ ಒಳಗೊಳಗೇ ಕುದಿಯುತ್ತಿದ್ದೇನೆ. ನೀವು ರೋಗವೆಂಬ ನೆಪವನ್ನು ಕಲ್ಪಿಸಿರುವುದು ನಾನರಿಯೆನೇ? ನಾನು ರತ್ನದ್ವೀಪಕ್ಕೆ ಹೋಗಿ ಬಂದಾರಭ್ಯ ಈ ವಿಷಯಗಳನ್ನು ಆಲೋಚಿಸ ತೊಡಗಿದೆನು. ಇಂದಿರೆಯನ್ನು ಇಲ್ಲಿ ನೋಡಿದ ತರುವಾಯ ಮತ್ತಷ್ಟು ಯೋಚನೆಯುಂಟಾಯಿತು. ಏಕೆಂದರೆ, ತಾಯೇ! ನಿಮ್ಮಲ್ಲಿ ನನಗೇನು ರಹಸ್ಯ?

ಇಂದಿರೆಯು ನನ್ನ ಭಾವಿ ಸಹಧರ್ಮಚಾರಿಣಿ. ಅವಳನ್ನು ಮದುವೆಯಾಗುವ ವಿಷಯದಲ್ಲಿ ಅವಳ ತಂದೆಯವರಲ್ಲಿ ಪ್ರಸ್ತಾವಿಸಿದೆನು. ಒಂದು ದೊಡ್ಡ ಕಳಂಕವು ಇಂದಿರೆಯ ವಿವಾಹಕ್ಕೆ ಆತಂಕವಾಗಿರುವುದೆಂತಲೂ, ಅದು ಪರಿಹಾರವಾಗದ ಹೊರತು ಮದುವೆಯಾಗಲಾರದೆಂತಲೂ ಅವರು ಅಪ್ಪಣೆ ಕೊಡಿಸಿದರು. ಆ ಸಮಯದಲ್ಲಿ ನಾನು ಅತಿ ದುಃಖಿತನಾಗಿ ದಿಕ್ಕಿಲ್ಲದವನಂತೆ ದೀನನಾದೆನು. ಅಷ್ಟರಲ್ಲಿ ಇಲ್ಲಿ ಇಂದಿರೆಯ ದರ್ಶನವಾಯಿತು. ಅವಳೊಡನೆ ಮಾತನಾಡಿದೆನು. "ಕಳಂಕಿನಿಯಾಗಿ ಎಷ್ಟು ದಿನ ಹೀಗೆ ಒಂಟಿಯಾಗಿರಬೇಕೆನ್ನುವಿರಿ?" ಎಂದು ಕೇಳಿದಳು. ಆ ಕಳಂಕವನ್ನು ಹೋಗಲಾಡಿಸುವ ಕಾರ್ಯವು ಈ ರಾಜಗೃಹದಲ್ಲಿಯೇ ಆಗಬೇಕಾಗಿದೆಯೆಂದು ನಾನು ಊಹಿಸುವೆನು. ಇವಳ ತಂದೆಯವರು ಸಾಮಾನ್ಯ ಪುರುಷನಂತೆ ತೋರಲಿಲ್ಲ. ಅತಿ ಗಂಭೀರವಾದ ಆಕೃತಿಯುಳ್ಳ ರಾಜಪುರುಷನಂತಿರುವರು. ನಾನು ಮೊದಲು ನೋಡಿದಾಗ ಚಕಿತನಾದೆನು. ಇಂದಿರೆಯು ಆ ಅಂತಃಪುರದಲ್ಲಿ ತನ್ನ ಕಾರ್ಯಕ್ಕೆ ಆರಂಭಿಸಿರುವಳು. ಅವಳ ಸಮೀಪದಲ್ಲಿಯೇ ಇದ್ದು ಸಹಾಯ ಮಾಡಬೇಕೆಂದು ನಿಶ್ಚಯಿಸಿ ನಾನು ನನ್ನ ರಾಜ್ಯಕಾರ್ಯವನ್ನು ಮಂತ್ರಿಗೆ ಒಪ್ಪಿಸಿ ಇಲ್ಲಿಗೆ ಬಂದಿರುವೆನು.

ಹೇಮಪ್ರಭಾ ದೇವಿಯ ನೇತ್ರಗಳಿಂದ ಅಶ್ರುಧಾರೆಗಳು ಸುರಿಯಲಾರಂಭಿಸಿದುವು. ಗದ್ಗದ ಕಂಠದಿಂದ "ಕುಮಾರಾ! ನಾನು ಈಗ ಹರ್ಷದುಃಖಗಳ ಮಧ್ಯದಲ್ಲಿ ತೇಲಾಡುತ್ತಿರುವೆನು. 'ಎಲೈ ದೀನರಕ್ಷಕಾ! ನಿನ್ನ ವಿಲಾಸವೇ ವಿಚಿತ್ರವು.' ಲಲಿತಾ! ನಾನು ಈಗ ಏನು ಮಾಡಬೇಕೋ ತಿಳಿಸು–ಎಂದಳು. ಹೇಮಪ್ರಭಾದೇವಿಯ ದೀನಾಲಾಪವನ್ನು ಕೇಳಿ ಲಲಿತಕುಮಾರನಿಗೆ ಮತ್ತಷ್ಟು ದುಃಖವುಂಟಾಯಿತು. "ತಾಯೇ! ಈ ಸಮಯದಲ್ಲಿ ನಾವು ಇಂದಿರೆಯ ವಿಷಯವಾಗಿ ಎಳ್ಳಷ್ಟಾದರೂ ದಯೆಯನ್ನು ತೋರಿಸಿದರೆ ನಾವು ನಾಲ್ವರೂ ನಾಶವಾಗುವುದು ನಿಶ್ಚಯ. ಆದುದರಿಂದ ನೀವು ಈಗ ಬಹಳ ಸಹನೆಯಿಂದಿರಬೇಕು. ಇಂದಿರೆಯು ಇಲ್ಲಿಗೆ ಬಂದರೆ ನೀವು ಬಹಳ ಎಚ್ಚರಿಕೆಯಿಂದಲೂ ಚಾತುರ್ಯದಿಂದಲೂ ನಡೆದುಕೊಳ್ಳಬೇಕು.

**ಹೇಮಪ್ರಭಾ ದೇವಿ**–ಕುಮಾರಾ! ಆ ಮಹಾನುಭಾವನು ಕಷ್ಟಗಳನ್ನು ನೀಗಿ ಸುಖಿಯಾಗಿ ಗೃಹವನ್ನು ಸೇರಬೇಕೆಂದಲ್ಲವೇ ಇಷ್ಟು ದಿನಗಳಿಂದ ನಾನು ತಪಸ್ಸುಮಾಡುತ್ತಿದ್ದೆನು? ಈಗ ಅದು ಕೈಗೂಡುವ ಕಾಲದಲ್ಲಿ ನಾನು ಮತಿಹೀನಳಾಗಿ ವರ್ತಿಸುವುದು ಹುಚ್ಚುತನವಲ್ಲವೇ? ಭಯಪಡಬೇಡ. ಜಯಿಸಿದರೆ ಸುಖವನ್ನನುಭವಿಸುವೆವು. ಇಲ್ಲದಿದ್ದರೆ ಎಲ್ಲರೂ ಸ್ವರ್ಗದಲ್ಲಿ ಸೇರುವೆವುಎಂದಳು.

ಇತ್ತ ದೊಡ್ಡ ಅಂತಃಪುರದಲ್ಲಿ ಆಂದಿನ ದಿನ ರಾಜಮಾತೆಗೆ ಅಭ್ಯಂಗಸ್ನಾನವಾಯಿತು. ಇಂದಿರೆಯು ಬಹಳ ಅಕ್ಕರೆಯಿಂದ ಆಕೆಯನ್ನು ಉಪಚರಿಸಿ ಭೋಜನಶಾಲೆಯಲ್ಲಿ ಮಣೆಗಳನ್ನು ಸಿದ್ಧಪಡಿಸಿದಳು. ರಾಜಮಾತೆಯು ಭೋಜನಕ್ಕೆ ಬರಲು ಸ್ವಲ್ಪ ಸಾವಕಾಶವಾಗುವುದೆಂದು ತಿಳಿದುದರಿಂದ ತನ್ನ ಕೊಟ್ಟಡಿಯೊಳಗೆ ಹೋಗಿ ಓದಲು ಪುಸ್ತಕವನ್ನು ತೆಗೆದುಕೊಳ್ಳಲು ಪೆಟ್ಟಿಗೆಯನ್ನು ತೆರೆದಳು. ಆದರಲ್ಲಿನ ವಸ್ತುಗಳೆಲ್ಲವೂ ತಾರುಮಾರಾಗಿದ್ದವು. ಗಾಬರಿಯಿಂದ ಚೆನ್ನಾಗಿ ಪೆಟ್ಟಿಗೆಯನ್ನು ಶೋಧಿಸಿ ನೋಡಿದಳು. ಒಂದು ವಸ್ತ್ರದ ಅಡಿಯಲ್ಲಿ ಯಾರೋ ಒಂದು ಮುತ್ತಿನ ಹಾರವನ್ನು ತಂದಿಟ್ಟಿದ್ದರು. ಅದನ್ನು ತೆಗೆದುಕೊಂಡು ಪೆಟ್ಟಿಗೆಯನ್ನು ಮುಚ್ಚಿ ರಾಜಮಾತೆಯ ಸನ್ನಿಧಿಗೆ ಹೋದಳು.

**ಮುರಳಾದೇವಿ—** ಏನು? ನೀನು ವಿಷಾದಚಿತ್ತದಲ್ಲಿರುವಂತೆ ಕಾಣುತ್ತಿದೆ? ಸ್ವಲ್ಪ ಹೊತ್ತಿನ ಹಿಂದೆ ಎಷ್ಟೋ ಉತ್ಸಾಹದಿಂದಿದ್ದವಳಿಗೆ ಈಗ ಏನು ಪ್ರಮಾದ ನಡೆಯಿತು ?

**ಇಂದಿರೆ—** ಜನನೀ ! ಇಲ್ಲಿ ನನಗೆ ಒಬ್ಬರೂ ಪರಿಚಿತರಿಲ್ಲ. ಕೇವಲ ದೈವ ಸಹಾಯದಿಂದಲೇ ಇಲ್ಲಿಗೆ ಬಂದಿರುವೆನು. ನಾನು ಎಲ್ಲರನ್ನೂ ವಿಶ್ವಾಸಿಸುತ್ತಾ ತಮ್ಮ ಸೇವೆಯನ್ನು ಮಾಡುತ್ತಿರುವೆನು. ಇಂತಿರಲು ನನಗೆ ದ್ವೇಷಿಗಳು ಯಾರಿರುವರೋ ನಾನರಿಯೆ. ಯಾರೋ ತಂದು ನನ್ನ ಪೆಟ್ಟಿಗೆಯಲ್ಲಿ ಈ ಮುತ್ತಿನ ಹಾರವನ್ನು ಹಾಕಿರುವರು. ಓದುವುದಕ್ಕೆ ಒಂದು ಪುಸ್ತಕವನ್ನು ತೆಗೆದುಕೊಳ್ಳಬೇಕೆಂದು ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ ಸಾಮಾನುಗಳೆಲ್ಲಾ ತಲೆಕೆಳಗಾಗಿದ್ದುವು. ಅದನ್ನು ತೆಗೆದು ಹೀಗಾಗಿರಲು ಕಾರಣವೇನೆಂಬುದಾಗಿ ಆಲೋಚಿಸಿ ಚೆನ್ನಾಗಿ ಪರಿಶೋಧಿಸಿದಲ್ಲಿ ಈ ಮುತ್ತಿನ ಹಾರವು ಒಂದು ವಸ್ತ್ರದ ಕೆಳಗೆ ಸಿಕ್ಕಿತು. ಇದು ಯಾರ ಕೆಲಸವೋ ದಯೆಮಾಡಿ ವಿಚಾರಿಸಿ ಶಿಕ್ಷಿಸಬೇಕು.

**ರಾಜಮಾತೆ—** ಇಂದಿರೆ ! ಇದು ಯಾರ ಕೆಲಸವಾಗಿರಬಹುದು ? ನೀನು ಇದುವರೆಗೆ ಇಲ್ಲಿಯೇ ಇದ್ದೆಯಷ್ಟೆ? ಈಗಲೇ ತೆಗೆದು ನೋಡಿಕೊಂಡುದು ಉತ್ತಮ. ವಿಚಾರಿಸಿ ಅಪರಾಧಿಯನ್ನು ಶಿಕ್ಷಿಸುವೆನು. ಚಿಂತಿಸಬೇಡ ಎಂದಳು.

ಬಳಿಕ ಈ ವಿಷಯದಲ್ಲಿ ರಾಜಮಂದಿರದಲ್ಲಿ ವಿಚಾರಣೆಯೇನೂ ನಡೆಯಲಿಲ್ಲ. ರಾಜಮಾತೆಯು ಗೋಮುಖವ್ಯಾಘ್ರಿಯೆಂದು ಇಂದಿರೆಗೆ ಈಗ ಚೆನ್ನಾಗಿ ಅರ್ಥವಾಯಿತು. ಮರುದಿನ ಈ ಸಂಗತಿಯನ್ನು ಫಲ್ಗುನನಿಗೆ ಹೇಳಿದಳೆಂದು ಇಂದಿರೆಗೆ ತಿಳಿಯಬಂದಿತು. ಆ ದಿನದಿಂದ ಇಂದಿರೆಯು ಬಹಳ ಎಚ್ಚರದಿಂದಿದ್ದಳು. ವ್ಯಾಕುಲಪೀಡಿತವಾದ ಮನಸ್ಸನ್ನು ನೆಮ್ಮದಿಗೊಳಿಸಲು ಹಳೆಯ ಭವನಗಳಿರುವ ವನವೀಥಿಗಳಿಗೆ ಹೋಗಿ ಗಿಡಗಳ ನೆರಳಿನಲ್ಲಿ ಕುಳಿತು ಪುಸ್ತಕವನ್ನು ತೆರೆದಿಟ್ಟು

ಕೊಂಡು ಏನೇನೋ ಆಲೋಚನೆ ಮಾಡುತ್ತಿದ್ದಳು. ಅದೇ ಸಮಯದಲ್ಲಿ ಫಲ್ಗುನನು ಆ ಮಾರ್ಗವಾಗಿ ಹೋಗುತ್ತಿದ್ದನು. "ಅಮ್ಮಣ್ಣೀ! ಇಲ್ಲಿ ಏಕೆ ಏಕಾಕಿನಿಯಾಗಿ ಕುಳಿತಿರುವಿರಿ?" ಎಂದು ಕೇಳಿದನು. ಇಂದಿರೆಯು ಕಳವಳದಿಂದ ತಲೆಯನ್ನೆತ್ತಿ ಆವನನ್ನು ನೋಡಿ ಕಣ್ಣೀರೊರಸಿಕೊಂಡು "ನೀನು ಕೇಳಿದುದೇನು?" ಎಂದಳು.

**ಫಲ್ಗುನ—** ಇಂತಹ ಭಯಂಕರವಾದ ಸ್ಥಳದಲ್ಲಿ ನೀವು ಹೀಗೆ ಒಂಟಿಯಾಗಿ ಕುಳಿತಿರಲು ಕಾರಣವೇನು?

. **ಇಂದಿರೆ—** "ನನ್ನ ಕಷ್ಟಸುಖಗಳನ್ನು ನಿನಗೆ ಹೇಳಿ ಏನು ಪ್ರಯೋಜನ? ನಿನ್ನ ಕೆಲಸಕ್ಕೆ ನೀನು ಹೋಗ ಬಹುದು" ಎಂದು ಹೇಳುತ್ತಾ ಹೊರಟುಹೋದಳು.

ಫಲ್ಗುನನು ಇಂದಿರೆಯು ಹೋಗುವುದನ್ನು ನೋಡುತ್ತಾ "ಆಹಾ! ಇವಳಿಗೆ ಎಷ್ಟು ಸೊಕ್ಕು? ಇದುವರೆಗೂ ಈ ಉದಯಪುರಿಯ ಸಂಸ್ಥಾನದಲ್ಲಿ ನಾನು ಯಾರಿಂದಲೂ ಇಷ್ಟು ಅವಮಾನ ಪಡಲಿಲ್ಲ. ಇವಳು ಯಾರೋ ದಿಕ್ಕಿಲ್ಲಗವಳೆಂದು ಸುಮ್ಮನಿದ್ದೆನು. ಇವಳು ಅತಿ ಸಾಹಸಗಾತಿಯೆಂದು ತೋರುತ್ತದೆ. ನಾನೇ ರಾಜವಧೆಯನ್ನು ಮಾಡಿರುವೆನೆಂದು ಕಂಡುಹಿಡಿಯುವುದಕ್ಕಾಗಿ ಇಲ್ಲಿಗೆ ಬಂದಿರಬಹುದೇ? ಹಾಗಿದ್ದರೆ ಏಕೆ ಅಳುತ್ತಿದ್ದಳು? ನನ್ನ ಮೇಲೆ ಕೋಪವನ್ನು ತೋರಿಸಲು ಕಾರಣವೇನು? ಚೆನ್ನಾಗಿ ವಿಚಾರಿಸದೆ ಯಾವುದೂ ತಿಳಿಯಲಾರದು. ಇವಳು ಈ ಅಂತಃಪುರವನ್ನು ಬಿಟ್ಟು ಎಲ್ಲಿಗೆ ಹೋಗುವಳು? ವಿಕ್ರಮಸಿಂಹನು ಸತ್ತುಹೋದನೆಂದು ಕೇಳಿದ್ದೆನು. ಇವಳು ಒಂದು ವೇಳೆ ಆತನ ಮಗಳಾಗಿದ್ದರೆ ಯುಕ್ತಿಯಿಂದ ಇವಳನ್ನು ನಾನೇಕೆ ಮದುವೆ ಮಾಡಿಕೊಳ್ಳಬಾರದು? ನನಗೆ ಬೇಕಾದಷ್ಟು ದ್ರವ್ಯವಿದೆ. ಈ ಹುಡುಗಿ ನನಗೆ ದೊರೆತರೆ ನಾನೇಕಿಲ್ಲಿರುವೆನು? ಅದನ್ನು ಕೂಡಾ ಪ್ರಯತ್ನಿಸಿ ನೋಡುವೆನು. ಆಹಾ! ಇವಳು ರಕ್ಕಸಿಯಾಗಿರುವಳು. ನನ್ನನ್ನು ಗರ್ಜಿಸಿ ನೋಡಿದಾಗ ನನ್ನ ಗುಂಡಿಗೆಯೇ ಚೆದರಿಹೋಯಿತು. ಉಪಾಯದಿಂದ ಎಲ್ಲಾ ಕಾರ್ಯಗಳೂ ಸಾಧ್ಯವಾಗುವುವು." ಎಂದು ಏನೇನೋ ಬಯಕೆಗಳನ್ನು ತನ್ನ ಮನೋರಾಜ್ಯದಲ್ಲಿ ಪ್ರತಿಷ್ಠಿಸಿಕೊಳ್ಳುತ್ತಾ ಹೊರಟುಹೋದನು.

ಲಲಿತಕುಮಾರನು ಹೇಮಪ್ರಭಾ ದೇವಿಯೊಂದಿಗೆ ಮಾತನಾಡಿ ಹೋದ ಮೇಲೆ ತಮ್ಮ ರಾಣಿಯು ನಿದ್ರಿಸುತ್ತಿರುವಳೆಂದು ಸಖಿಯರು ದೂರದಲ್ಲಿ ಕಾದುಕೊಂಡಿದ್ದರು. ಸ್ವಲ್ಪ ಹೊತ್ತಿನ ಮೇಲೆ ರಾಣಿಯು ಎಚ್ಚತ್ತು ಚದರಿಹೋದ ತನ್ನ ಮನಸ್ಸನ್ನು ಸ್ಥಿರಪಡಿಸಿ ಕೊಂಡಳು. ಇಷ್ಟು ಕಾಲ ಇಂದಿರೆಯನ್ನು

ಬಿಟ್ಟಿರುವುದು ಆಕೆಗೆ ತುಂಬ ಮನಃಕ್ಲೇಶಕರವಾಗಿದ್ದಿತು. "ನನ್ನ ಪ್ರಿಯಳಾದ ಇಂದಿರೆಯನ್ನು ಮಾತನಾಡಿಸುವುದಕ್ಕೆ ಸಹಾ ಅವಕಾಶವಿಲ್ಲದಂತಾಯಿತು. ನಾನೇನು ಮಾಡಲಿ! ನನ್ನ ಪ್ರಾಣಕ್ಕೆ ಹೇಗೂ ಕಷ್ಟವೇ. ಜಯವಾದರೂ ಅಪ ಜಯವಾದರೂ ಇನ್ನು ಸ್ವಲ್ಪದಿನಗಳಲ್ಲಿಯೇ ಕಾಣಬೇಕು" ಎಂದು ಹಂಬಲಿ ಸುತ್ತಿರುವಲ್ಲಿ ಒಬ್ಬ ದಾಸಿಯು ಒಂದು ಪತ್ರವನ್ನು ತಂದುಕೊಟ್ಟಳು. ಅದ ರಲ್ಲಿ ಇಂದಿರೆಯು ಕೂಡಾ ನಿನ್ನನ್ನು ನೋಡಲು ಬರುವಳು— ಎಂಬವಾಕ್ಯ ವನ್ನು ಮಾತ್ರ ಓದಿದಳು. ಹೇಮಪ್ರಭಾದೇವಿಯ ಮುಖವು ವಿಕಸಿತವಾ ಯಿತು. ದಾಸಿಯರನ್ನು ಆಯಾ ಕೆಲಸಗಳಿಗೆ ನಿಯಮಿಸಿ ತಾನು ಸ್ನಾನ ಮಾಡಿ ಶುದ್ಧಾಂಬರವನ್ನುಟ್ಟು ಏಕಾವಳಿಯನ್ನು ಧರಿಸಿದಳು. ತಲೆಕೂದಲನ್ನೆತ್ತಿ ಮುಡಿಹಾಕಿ ಅದರಮಧ್ಯೆ ಒಂದು ಪುಷ್ಪವನ್ನಿಟ್ಟುಕೊಂಡಳು. ಇಷ್ಟುಮಾ ತ್ರಕ್ಕೇ ಆ ದೇವಿಯ ಮುಖವು ಚಂದ್ರನನ್ನು ಧಿಕ್ಕರಿಸುವಂತಿದ್ದಿತು. ವಿಶ್ರಾಂತಿ ಮಂದಿರದಲ್ಲಿ ಹೇಮಪ್ರಭಾದೇವಿಯು ಸಂಚಾರಮಾಡುತ್ತಿದ್ದಾಗ ಬಗ್ಗಿಗಳ ಶಬ್ದವು ಕೇಳಿಸಿತು. ಮದನಪಾಲನು ಇಳಿದು ಬಂದನು. ಅವನ ಹಿಂದೆ ಕೆಲವರು ಬಂಧುಗಳೂ ಬಂದರು. ಹೇಮಪ್ರಭಾದೇವಿಯು ಎಲ್ಲರಿಗೂ ಸ್ವಾಗತವನ್ನಿತ್ತಳು. "ರಾಜೇಂದ್ರಾ! ನಿನ್ನ ಹಿಂದೆ ಇಂದಿರೆಯನ್ನು ಕರೆದುಕೊಂಡು ಬರುವುದಾಗಿ ನನಗೆ ಪತ್ರದ ಮೂಲಕ ತಿಳಿಸಿದ್ದೆಯಲ್ಲವೇ? ನಾನು ಅವಳನ್ನು ನೋಡಿ ನಾಲ್ಕು ತಿಂಗಳು ಕಳೆದುಹೋಯಿತು. ನಿಮ್ಮ ತಾಯಿಗೆ ಇಷ್ಟವಿದ್ದರೆ ಅವಳನ್ನು ಅಲ್ಲಿಯೇ ಇಟ್ಟುಕೊಳ್ಳಬಹುದು. ಆದರೆ, ಆಗಾಗ್ಗೆ ಬಂದು ಹೋಗುತ್ತಿರಲಿ. ಈಗ ಏಕೆ ನಿನ್ನ ಹಿಂದೆ ಬರಲಿಲ್ಲ?" ಎಂದಳು. ರಾಣಿಯು ತನ್ನ ಇದಿರಿಗೆ ನಿಂತು ಮಾತನಾಡಿದ ಸೊಬಗನ್ನು ನೋಡಿ ಮದನಪಾಲನು ಮುಗ್ಧನಾದನು. ಅವಳು ತನ್ನ ವಶವರ್ತಿನಿಯಾದರೆ ಪ್ರಪಂಚದಲ್ಲಿ ತನ್ನಂತಹ ಪುಣ್ಯಶಾಲಿಗಳೇ ಇರಲಾರರೆಂದು ಭಾವಿಸಿದನು. ಅವಳ ಮನೆಯಲ್ಲಿ ಸೇವೆಮಾಡಲು ತನಗೆ ಅವಕಾಶ ದೊರೆತರೆ ಸ್ವರ್ಗತುಲ್ಯವೆಂದೆಣಿಸಿದನು. "ದೇವಿ! ನಿನ್ನ ಇಷ್ಟಾನು ಸಾರ ನಡೆಯಿಸಲು ನಾನು ಸದಾ ಸಿದ್ಧನಾಗಿರುವೆನು. ಇಂದಿರೆಯು ಈಗಲೇ ಬರುವಳು. ನಾನು ಅಮ್ಮನಿಗೆ ಹೇಳಿ ಬಂದೆನು. ಇನ್ನೂ ಕೆಲವು ಕಾಲ ಇಂದಿರೆಯು ನಮ್ಮ ತಾಯಿಯ ಬಳಿಯಲ್ಲಿ ಇರಬೇಕಂತೆ. ಅವಳು ನನ್ನ ತಾಯಿಗೆ ತುಂಬ ಸಹಾಯಕಳಾಗಿರುವಳು"— ಎಂದನು.

**ಹೇಮಪ್ರಭಾದೇವಿ—** ಅಹುದು. ರೋಗಿಗಳಿಗೆ ಆ ಹುಡುಗಿಯು ಬಹಳ ಉಪಚಾರ ಮಾಡುವಳು. ಅದರಿಂದಲೇ ನನಗೆ ಅವಳಲ್ಲಿ ಅಷ್ಟು ಪ್ರೀತಿ. ಅವಳ ಸದ್ಗುಣಗಳನ್ನು ನೋಡಿ ಎಲ್ಲರೂ ಪ್ರೇಮಿಸುವರು. ಅವಳು ಹೊಸ

ದಾಗಿ ನನ್ನ ಅಂತಃಪುರಕ್ಕೆ ಬಂದಾಗ "ಈ ಹುಡುಗಿಯನ್ನು ಬಿಟ್ಟು ಹೋಗು ವುದಕ್ಕೆ ಮನಸ್ಸೇ ಬಾರದು" ಎಂದು ವರ್ತಕರೂ ಹೇಳುತ್ತಿದ್ದರು.

ಇಷ್ಟರಲ್ಲಿಯೇ ಇಂದಿರೆಯು ಬಂದಳು. ಹೇಮಪ್ರಭಾದೇವಿಗೆ ನಮಸ್ಕ ರಿಸಿ ಇತರ ಸಖಿಯರೊಂದಿಗೆ ಹೊರಟುಹೋದಳು. ಫಲ್ಗುನನು ದೂರದಿಂದ ಇಲ್ಲಿ ನಡೆದುದನ್ನೆಲ್ಲಾ ಗಮನಿಸಿ ನೋಡುತ್ತಿದ್ದನು. ಲೀಲೆಯನ್ನು ಕರೆದು ಇಂದಿರೆಯ ಮೇಲೆ ಒಂದು ಕಣ್ಣಿಟ್ಟಿರಬೇಕೆಂದು ಹೇಳಿದನು. ಸಾಯಂಕಾಲ ಸಮಯ. ಹೇಮಪ್ರಭಾದೇವಿಯ ಅಂತಃಪುರದಲ್ಲಿ ಎಲ್ಲಿ ನೋಡಿದರೂ ದೀಪಗಳ ಕಾಂತಿ. ಸುಗಂಧದ ಬತ್ತಿಗಳ ವಾಸನೆಯು ಅಂತಃಪುರದಲ್ಲೆಲ್ಲ ತುಂಬಿಕೊಂಡಿ ದ್ದಿತು. ತಂಗಾಳಿಯನ್ನಪೇಕ್ಷಿಸಿ ಎಲ್ಲರೂ ಉದ್ಯಾನವನದ ಸಮೀಪದಲ್ಲಿರುವ ಮಂದಿರದಲ್ಲಿ ಕುಳಿತುಕೊಂಡರು. ವಿವಿಧ ಪುಷ್ಪ ಫಲಗಳ ವಾಸನೆಯನ್ನು ವಹಿಸಿದ್ದ ತಂಗಾಳಿಯು ಸರ್ವರ ಮನಸ್ಸುಗಳಿಗೆ ಉಲ್ಲಾಸವನ್ನುಂಟುಮಾ ಡುತ್ತ ಬೀಸುತ್ತಿದ್ದಿತು. ಅನೇಕ ವಿಷಯಗಳ ಪ್ರಸ್ತಾವವು ಅಲ್ಲಿ ನಡೆಯು ತ್ತಿದ್ದಿತು. ದಾಸ ದಾಸಿಯರು ತಮ್ಮ ತಮ್ಮ ಕಾರ್ಯಗಳಲ್ಲಿ ಮಗ್ನರಾ ದರು. ಇಂದಿರೆಗೆ ತಂದೆಯ ಜ್ಞಾಪಕ ಬಂದಿತು. ಉದ್ಯಾನವನದ ಕಡೆಗೆ ದೃಷ್ಟಿಯನ್ನು ಹಾಕಿದಳು. ಏನು ಗೋಚರವಾಯಿತೋ, ಚಿಗುರೆಯ ಮರಿ ಯಂತೆ ವೃಕ್ಷಗಳ ಮಧ್ಯೆ ಹಾರಿಹೋದಳು. ಆ ಸಮಯದಲ್ಲಿ ಫಲ್ಗುನನು ಅಲ್ಲಿರಲಿಲ್ಲ. ಅವನಿದ್ದಿದ್ದರೆ ಇಂದಿರೆಗೆ ತಪ್ಪದೆ ಅನರ್ಥವುಂಟಾಗುತ್ತಿದ್ದಿತು. ಇಂದಿರೆಗೆ ದೈವಾನುಕೂಲ ಸಮಯವಾದುದರಿಂದ ಅವನು ತನ್ನ ಮದುವೆಯ ವಿಷಯವನ್ನು ನಿಶ್ಚಯ ಮಾಡಲು ನೀಲವೇಣಿಯ ಹಿಂದೆ ಹೋಗಿದ್ದನು.

**ಮಿತ್ರದೇವ—** ಮಗೂ! ನಿನಗೆ ಭಯವೆ?

**ಇಂದಿರೆ—** "ಅಪ್ಪಾಜೀ! ತಾವು ಇರಲು ನನಗೇನು ಭಯ"ವೆಂದು ಹೇಳುತ್ತ ತಂದೆಗೆ ಶಿರಸ್ಸಾಷ್ಟಾಂಗ ನಮಸ್ಕಾರವನ್ನು ಮಾಡಿದಳು. ಆಗ ಒಂದೆರಡು ಅಶ್ರುಬಿಂದುಗಳು ಆತನ ಪಾದಗಳ ಮೇಲೆ ಬಿದ್ದುವು. ಮಿತ್ರ ದೇವನು ಭಯಪಟ್ಟು ಮಗಳನ್ನೆಬ್ಬಿಸಿ ಕುಳ್ಳಿರಿಸಿ "ತಾಯೇ! ಏತಕ್ಕೆ ಅಳುತ್ತಿ ರುವೆ? ಏನು ನಡೆಯಿತು?" ಎಂದು ಕೇಳಿದನು.

**ಇಂದಿರೆ—** ಜನಕಾ! ಪ್ರಮಾದ ಸಂಭವವೇನೂ ನಡೆಯಲಿಲ್ಲ. ದೈವವು ಸ್ವಲ್ಪ ಕಣ್ಣು ತೆರೆದಂತೆ ಕಾಣುತ್ತಿದೆ. ಆದರೆ, ದೊಡ್ಡ ದೊಡ್ಡ ವಿಪತ್ತು ಗಳನ್ನು ಕೂಡ ನಿರೀಕ್ಷಿಸಬೇಕಾಗಿದೆ– ಎಂದು ಅದುವರೆಗೂ ನಡೆದ ಸಂಗತಿ ಗಳನ್ನೆಲ್ಲ ತಿಳಿಸಿದಳು.

**ಮಿತ್ರದೇವ**— ಮಗೂ ! ಫಲ್ಗುನನು ನಿನ್ನನ್ನು ಪರೀಕ್ಷಿಸುತ್ತಿರುವನು. ನೀನು ನಿನ್ನ ತಾಯಿಯ ಸಮೀಪದಲ್ಲಿರಬಾರದೇ ?

**ಇಂದಿರೆ**— ಅಪ್ಪಾಜೀ ! ಫಲ್ಗುನನ ಸಂಗತಿ ದೊಡ್ಡ ಅರಮನೆಯಲ್ಲಿದ್ದರಲ್ಲವೇ ಕಂಡುಕೊಳ್ಳಲು ಸಾಧ್ಯವಾದೀತು? ತಾರೆಯು ನನಗೆ ಸಹಾಯಕಳಾಗಿರುವಳು. ನನ್ನ ತಾತನವರ ಶಯನಗೃಹವನ್ನು ಪರೀಕ್ಷಿಸಲು ಕಾಲವನ್ನು ನಿಯಮಿಸಿಕೊಂಡಿರುವೆನು ? ಜನಕಾ ! ನೀವೇತಕ್ಕೆ ಭಯಪಡುವಿರಿ? ವೀರ ಶಿಖಾಮಣಿಯಾದ ನಿಮಗೆ ಇದೊಂದು ಗಣ್ಯಾವಿಷಯವೇ ?

**ಮಿತ್ರದೇವ**—ಅಮ್ಮಾ ! ನಾನು ಈಗ ಅಪರಾಧಿಯೆಂದು ಗಣಿಸಲ್ಪಟ್ಟಿರುವೆನಲ್ಲವೇ? ಹಾಗಿಲ್ಲದಿದ್ದರೆ, ಏಕೆ ಭಯಪಡುವೆನು ? ಆ ಅಪವಾದವನ್ನು ಹೋಗಲಾಡಿಸಿ ಕೊಳ್ಳುವುದಕ್ಕಾಗಿಯಲ್ಲವೇ ನನ್ನ ಮುದ್ದು ಮಗುವನ್ನು ದಾಸಿಯನ್ನಾಗಿ ಬಿಟ್ಟು ಕಳ್ಳನಂತೆ ತಲೆ ತಪ್ಪಿಸಿಕೊಂಡಿರುವೆನು ? ಮಗೂ ! ರಾಜ್ಯಭೋಗವನ್ನು ಅನುಭವಿಸಬೇಕೆಂಬ ಆಸೆಯು ಈಷದಪಿ ನನ್ನ ಮನಸ್ಸಿನಲ್ಲಿಲ್ಲ. ನಿನ್ನ ಜನನಿಯು ಈಗ ಹದಿನಾರು ವರ್ಷಗಳಿಂದಲೂ ಅನುಭವಿಸುತ್ತಿರುವ ಕಷ್ಟಗಳಿಗೆ ಮೇರೆಯಿಲ್ಲದಂತಿರುವುದು. ನೀನು ಇನ್ನೂ ಹಸುಗೂಸು. ಪ್ರಪಂಚ ಸುಖವೆಂಬುದೇ ನಿನಗೆ ಅನುಭವವಿಲ್ಲ. ನಾನು ಜೀವಿಸಿದ್ದೂ ನಿಮ್ಮಿಬ್ಬರನ್ನೂ ಕಷ್ಟಗಳಿಗೆ ಗುರಿಮಾಡಿ ನಾನು ಮಾತ್ರ ತಪಸ್ಸಿಗೆ ಹೋದರೆ ಯಾವ ದೈವಕ್ಕೆ ಪ್ರೀತಿಯಾಗುವುದು ? ಮನುಷ್ಯನು ತಾನು ಮಾಡಬೇಕಾದ ಧರ್ಮಗಳನ್ನು ಸರಿಯಾಗಿ ಮಾಡದೆ ಋಣವಿಮುಕ್ತನಾಗಲಾರನು. ಕುಮಾರಿ ! ನನ್ನ ಧರ್ಮವನ್ನು ನೆರವೇರಿಸದೆ ಮೃತನಾಗುವೆನೇನೋ ಎಂದು ಪರಿತಪಿಸುತ್ತಿದ್ದೆನು. ಲಲಿತಕುಮಾರನು ರತ್ನದ್ವೀಪದಲ್ಲಿ ನಮ್ಮ ಮನೆಯಲ್ಲಿ ಹೇಳಿದ ವೃತ್ತಾಂತವನ್ನು ಕೇಳುತ್ತಲೇ ನನ್ನ ಹೃದಯವು ಒಡೆದು ಹೋಗಿ ಒಂದೆರಡು ನಿಮಿಷಗಳು ನಿನ್ನ ತಾಯಿಯ ವಿಷಯದಲ್ಲಿ ಸಂಶಯವುಂಟಾಯಿತು. ಪುನಃ ಅದನ್ನು ಆ ಕ್ಷಣವೇ ಹೋಗಲಾಡಿಸಿಕೊಂಡೆನು. ಆ ಒಂದೆರಡು ನಿಮಿಷಗಳಾದರೂ ಆ ದೇವಿಯ ವಿಷಯದಲ್ಲಿ ನೆನೆದ ಪಾಪವನ್ನು ಕ್ಷಮಿಸಬೇಕೆಂದು ಭಗವಂತನನ್ನು ಪ್ರಾರ್ಥಿಸುವೆನು. ಆ ದೇವಿಗೆ ಬಂದಿರುವ ಅಪವಾದವನ್ನು ಕಳೆಯುವುದಕ್ಕಾದರೂ ಜೀವಿಸಲಿಚ್ಛೈಸುವೆನು. ಅಮ್ಮಾ ! ಈ ಕಾರ್ಯವನ್ನು ಹೇಗೆ ಸಾಧಿಸಬೇಕೆಂದು ಆಲೋಚಿಸುತ್ತಿದ್ದ ನನಗೆ ಸಮುದ್ರದಲ್ಲಿ ಈಜುವವನಿಗೆ ದಾರಿ ಕಾಣದಂತೆ ಮುಂದಿನ ಮಾರ್ಗವೇ ತೋರಲಿಲ್ಲ. ನನ್ನಿಂದ ಸ್ವಧರ್ಮವನ್ನು ನೆರವೇರಿಸುವಂತೆ ಮಾಡಿ ತನ್ಮೂಲಕ ನನ್ನನ್ನು ಕೃತಕೃತ್ಯನನ್ನಾಗಿ ಮಾಡುವುದಕ್ಕಾಗಿಯೇ ಭಗವಂತನು ನನ್ನ ಗರ್ಭದಲ್ಲಿ ನಿನ್ನನ್ನು ಹುಟ್ಟಿ

ಸಿದನೆಂದು ಭಾವಿಸುತ್ತೇನೆ. ನಿನ್ನನ್ನು ಒಂದು ನೌಕೆಯನ್ನಾಗಿ ಏರ್ಪಡಿಸಿ ಕೊಂಡು ನಾವು ಸಂಸಾರಸಾಗರವನ್ನು ದಾಟಬೇಕೆಂದು ಭಗವತ್ಸಂಕಲ್ಪವಿರು ವಂತೆ ತೋರುತ್ತಿದೆ. ಅಮ್ಮಾ! ಈ ದಿನ ನಿನ್ನ ತಾಯಿಯನ್ನು ನೋಡಿದೆನು. ಬಹಳ ಕೃಶಳಾಗಿರುವಳು. ಆಭರಣಗಳನ್ನು ಇಟ್ಟುಕೊಳ್ಳದಿದ್ದರೂ ತನ್ನ ಸದ್ಗುಣಗಳಿಂದ ಭೂಷಿತಳಾಗಿ ಅಲ್ಲಿರುವ ಜನಗಳ ಮನಸ್ಸನ್ನು ಆಕರ್ಷಿಸುತ್ತಿ ರುವಳು. ಅವಳ ಹೃದಯದ ವೇದನೆಯು ಮುಖದಲ್ಲಿ ಚೆನ್ನಾಗಿ ಕಾಣುತ್ತಿ ದ್ದಿತು. ಮೂಢನಾದ ಮದನಪಾಲನು ಅದನ್ನು ಗುರುತಿಸದೆ ಭ್ರಮೆಯಿಂದ ಮನಸ್ಸು ಹೋದಂತೆ ಹೋಗುತ್ತಿರುವನು. ಅವನು ಒಂದು ದೊಡ್ಡ ಆಪತ್ತಿ ನಿಂದ ತಪ್ಪಿಸಿಕೊಂಡನು.

**ಇಂದಿರೆ**— ಜನಕಾ! ಆ ಆಪತ್ತು ಯಾವುದು?

**ಮಿತ್ರದೇವ**— ಮೊನ್ನೆಯ ದಿವಸ ಸುಮಾರು ಬೆಳಿಗ್ಗೆ ಒಂಭತ್ತು ಗಂಟೆ ಇರಬಹುದು. ನಾನು ಭೂಗೃಹಮಾರ್ಗವಾಗಿ ಈ ಉದ್ಯಾನವನಕ್ಕೆ ಬಂದೆನು. ನಿನ್ನ ತಾಯಿಯು ಒಂದು ವೇದಿಕೆಯಲ್ಲಿ ಕುಳಿತಿದ್ದಳು. ಮದನಪಾಲನು ಬಂದು ತಲೆ ಬಾಗಿಸಿಕೊಂಡು ಮಾತನಾಡುತ್ತಿದ್ದನು. ಅವನ ಮಾತಿನಲ್ಲಿ ನನ್ನನ್ನು ತಿರಸ್ಕರಿಸಿ ಮಾತನಾಡಿದ ಹಾಗೆ ಕೇಳಿಸಿತು. ಅದನ್ನು ಸಹಿಸಲಾರದೆ ನಿನ್ನ ಜನನಿಯು ತನ್ನ ಮಡಲಿನಲ್ಲಿದ್ದ ಗುಪ್ತ ಖಡ್ಗವನ್ನು ಒರೆಯಿಂದೆಳೆದಳು. ಅವಳ ರೌದ್ರಾಕಾರವನ್ನು ನೋಡಿ ನಾನು "ಸಹನೆ! ಸಹನೆ!" ಎಂದು ಕೂಗಿದೆನು. ಅವಳು ಬೆರಗಾಗಿ ನಾಲ್ಕು ದಿಕ್ಕುಗಳನ್ನೂ ನೋಡುತ್ತ ಸ್ವಲ್ಪ ಹೊತ್ತು ಸುಮ್ಮನಿದ್ದು ಮದನಪಾಲನನ್ನು ಕಳುಹಿಸಿಬಿಟ್ಟಳು. ಮದನ ಪಾಲನು ತುಂಬ ಯೋಗ್ಯನು. ಸಹನೆಯುಳ್ಳವನು. ಆದರೆ, ಅಕ್ಕನ ದುರ್ಬೋ ಧನೆಗಳಿಗೆ ಒಳಪಟ್ಟು ಈ ದುರಾಲೋಚನೆಯನ್ನು ಮಾಡಿರುವನು.

**ಇಂದಿರೆ**— ತಮ್ಮ ಉದಾರಗುಣವನ್ನು ಏನೆಂದು ವರ್ಣಿಸಲಿ! ನನ್ನ ತಾಯಿಯನ್ನು ಪುನರ್ವಿವಾಹ ಮಾಡಿಕೊಳ್ಳಬೇಕೆಂದು ಆಲೋಚಿಸಿರುವ ಆ ನೀಚನು ಹೇಗೆ ಗುಣವಂತನಾದಾನು? ಅವನಿಗೆ ಅಮ್ಮನನ್ನು ನೋಡಿದರೆ ಭಯ. ಆದರೂ ಹಿಡಿದ ಪಂತವನ್ನು ಬಿಡದೆ ನರಿಯ ಯುಕ್ತಿಗಳನ್ನು ಮಾಡು ತ್ತಿರುವನು. ಅವನನ್ನು ಸಂಹರಿಸಬೇಕೆಂದು ನಾನು ಕೂಡ ಯತ್ನಿಸಿದ್ದೆನು.

**ಮಿತ್ರದೇವ**— ಮಗೂ! ಅದು ಉಚಿತವಲ್ಲ. ನಿನ್ನ ತಾಯಿಯನ್ನು ನೋಡಿ ಭಯ ಪಡುವುದೇ ಸತ್ಪುರುಷರ ಒಂದು ಲಕ್ಷಣ. ದುರ್ಜನನಿಗೆ ಭಯವಿರುವುದಿಲ್ಲ. ನಿನ್ನ ತಾಯಿಯು ಹೇಳುವುದನ್ನೆಲ್ಲ ಕೇಳಿಕೊಂಡಿರು ವುದರಿಂದಲೇ ಅವನು ಸತ್ಪುರುಷನು. ಅವನು ದುಷ್ಟನಾಗಿದ್ದರೆ ನಿನ್ನ ತಾಯಿ

ಯು ಯಾವಾಗಲೋ ಸ್ವರ್ಗಸ್ಥಳಾಗಿರುತ್ತಿದ್ದಳು. ನಿನಗೆ ಮದುವೆಮಾಡಿ ನಾನು ಕೂಡ ಅರಣ್ಯದ ಪಾಲಾಗುತ್ತಿದ್ದೆನು. ಅವಳಿಲ್ಲದ ಸ್ವರ್ಗವು ನನಗೆ ಹೇಗೆ ರುಚಿಸುವುದು ? ಮುರಳಾದೇವಿಯೂ, ಫಲ್ಗುನನೂ ದುರಾಲೋಚನಾ ತತ್ಪರರಾಗಿದ್ದರೂ, ನಿನ್ನ ತಾಯಿಯು ಇಷ್ಟವನ್ನು ನಿರೀಕ್ಷಿಸುತ್ತ ಅವಳನ್ನು ನೋಯಿಸಬಾರದೆಂಬ ಚಿತ್ತವೃತ್ತಿಯಿಂದ ಮದನಪಾಲನಿರುವುದು ಸದ್ಗುಣವಲ್ಲವೇ ? ಲೋಕದಲ್ಲಿ ನಿನ್ನ ತಾಯಿಯಂತಹ ಅನಾಥ ಸ್ತ್ರೀಯರು ಇದ್ದಾರೆಯೋ! ಅವರನ್ನು ಭ್ರಾಂತಿಗೊಳಿಸಿ ತನ್ನ ವಶಮಾಡಿಕೊಳ್ಳಲು ಯತ್ನಿಸುವುದು ತುಚ್ಛ ಮನುಷ್ಯರ ಸ್ವಭಾವ. ಯುಕ್ತಿಯಿಂದಲೂ, ಸಾಹಸದಿಂದಲೂ ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವುದು ನಿನ್ನ ತಾಯಿಯಂತಹ ಮಾನವತಿಗೆ ಸ್ವಭಾವ. ಆದುದರಿಂದ, ಮದನಪಾಲನನ್ನು ನಾವು ದೂಷಿಸಬಾರದು. ನಾನು ಕೂಡ ಕಾರ್ಯಸಿದ್ಧಿಗಾಗಿ ಪ್ರಯತ್ನಿಸಿದ್ದೇನೆ. ಪುತ್ರೀ! ಬಹಳ ಹೊತ್ತಾಯಿತು. ನಿನ್ನನ್ನು ಹುಡುಕುವರು. ಅಲ್ಲಿಯ ವರೆಗೂ ಬಂದು ನಿನ್ನನ್ನು ಬಿಡುವೆನು. ನಡೆ, ನನಗಾಗಿ ನೀನು ವ್ಯಸನಪಡ ಬೇಡ. ನಾನು ಬಹು ಸೌಖ್ಯದಲ್ಲಿರುವೆನು'' ಎಂದು ಆಕೆಯ ಕಿವಿಯಲ್ಲಿ ಏನೋ ಉಸುರಿ ಪ್ರಾಸಾದದ ಸಮೀಪದಲ್ಲಿ ಬಿಟ್ಟು ಹಿಂದಿರುಗಿದನು. ಇಂದಿರೆಯು ಒಳಕ್ಕೆ ಪ್ರವೇಶಿಸಿದಳು. ಮಿತ್ರದೇವನು ಸ್ವಲ್ಪ ದೂರ ಹೋಗುವುದರೊಳಗಾಗಿ ಫಲ್ಗುನನು ಇದಿರಾಗಿ ಆತನನ್ನು ಬಗ್ಗಿ ನೋಡಿ ಗಟ್ಟಿಯಾಗಿ ಕೈಹಿಡಿದುಕೊಂಡನು. ಮಿತ್ರದೇವನು ಆ ಕೈಯನ್ನು ಕೊಡವಿ ಚೆನ್ನಾಗಿ ನುಲಿದು ಎಡಗಾಲಿಂದ ಬಲವಾಗಿ ಅವನನ್ನು ಒದೆಯಲು ಅವನು ಹೊರಳಿಕೊಂಡು ಹೋಗಿ ಪ್ರಾಸಾದ ದ್ವಾರದಲ್ಲಿ ಬಿದ್ದು ತತ್ತರಿಸುತ್ತ ಮೆಲ್ಲನೆ ಎದ್ದು ದೇಹವು ಕಂಪಿಸುತ್ತಿರಲು ಒಳಗೆ ಪ್ರವೇಶಿಸಿ ಅರಸನ ಬಳಿಯಲ್ಲಿ ಕುಳಿತುಕೊಂಡನು. ಮದನಪಾಲನು ತಿರುಗಿ ನೋಡಿ ಭೀತನಾಗಿ "ಫಲ್ಗುನ! ಏಕೆ ನೀನು ಹೀಗಿರುವೆ? ಏನು ನಡೆಯಿತು ? ಶೀಘ್ರವಾಗಿ ಹೇಳು'' ಎಂದನು.

ಫಲ್ಗುನನು ದಾಹವೆಂದು ಸಂಜ್ಞೆಮಾಡಲು ಆಕ್ಷಣವೇ ನೀರನ್ನು ತಂದು ಕೊಟ್ಟರು. ಅದನ್ನು ಕುಡಿದು ದಾಸಿಯರು ಬೀಸುತ್ತಿರಲು ಸ್ವಲ್ಪ ಆಯಾಸ ತೀರಿಸಿಕೊಂಡು ಶರೀರ ಕಂಪವೂ, ಗುಂಡಿಗೆ ಹೊಡಕೊಳ್ಳುವುದೂ ಇನ್ನೂ ನಿಲ್ಲದೆ ಇದ್ದರೂ ಎದ್ದು ಬದ್ಧಾಂಜಲಿಯಾಗಿ ನಿಂತು "ಮಹಾಪ್ರಭೋ! ನಾನು ಏನು ಹೇಳಲಿ! ಇದಿರಲ್ಲಿರುವ ತರುಗಳ ಮಧ್ಯದಲ್ಲಿ ಈ ಇಂದಿರಮ್ಮನು ಒಬ್ಬ ಮನುಷ್ಯನೊಂದಿಗೆ ಸಂಭಾಷಿಸುತ್ತಿದ್ದಳು. ಅಲ್ಲಿಂದ ಈಕೆಯು ಪ್ರಾಸಾದಕ್ಕೆ ಬಂದಳು. ನಾನು ಅವನಿಗೆ ಅಭಿಮುಖವಾಗಿ ಹೋಗಿ ಕೈ ಹಿಡಿದು ಕೊಂಡೆನು.

ಅವನು ನನ್ನ ಕೈಯನ್ನು ನುಲಿದು ಹಾಕಿದುದಲ್ಲದೆ ಎಡಗಾಲಿಂದ ಒದ್ದು ನನ್ನನ್ನು ಕೆಡಹಿದನು. ನಾನು ಅಲ್ಲಿಂದ ಹೊರಳುತ್ತ ಬಂದು ದ್ವಾರದ ಬಳಿಯಲ್ಲಿ ಬಿದ್ದೆನು. ನನ್ನ ಕೈ ಇನ್ನೂ ಸ್ವಾಧೀನಕ್ಕೆ ಬಂದಿಲ್ಲ. ನನ್ನ ಪುಣ್ಯಫಲದಿಂದ ಸಾಯದೆ ತಮ್ಮ ದರ್ಶನಕ್ಕೆ ಬಂದೆನು. ನನಗೆ ಏನು ಅನರ್ಥಗಳು ಬರುವುವೋ ನಾನರಿಯೆ" ಎಂದನು.

**ಮದನಪಾಲ**— ದೇವಿ! ಇದೇನು ವಿಪರೀತ? ಇಂದಿರೆಯು ಇಷ್ಟು ಕಪಟಿಯೆಂದು ನಾನು ಸ್ವಪ್ನೇಪಿ ಎಣಿಸಿರಲಿಲ್ಲ. ಆಕೆಯನ್ನು ವಿಚಾರಿಸು. ಇದು ಬಹಳ ಅಪಾಯಕರವಲ್ಲವೇ?

ಮುರಳಾದೇವಿಯು ತತ್‌ಕ್ಷಣವೇ ಇಂದಿರೆಯನ್ನು ಕರೆದಳು. ತತ್‌ಕ್ಷಣವೇ ಇಂದಿರೆಯು ಬಂದು ನಿಂತಳು. "ಇಂದಿರೆ! ಆ ವೃಕ್ಷಗಳ ಮಧ್ಯದಲ್ಲಿ ನಿನ್ನೊಡನೆ ಮಾತನಾಡಿ ಹೋದ ಮನುಷ್ಯನಾರು? ಇದುವರೆಗೆ ಯಾವಾಗಲಾದರೂ ಇಲ್ಲಿಗೆ ಬಂದು ನಿನ್ನೊಡನೆ ಮಾತನಾಡುತ್ತಿದ್ದನೆ? ನೀನು ಇದುವರೆಗ್ಗೆ ಎಲ್ಲಿಗೆ ಹೋಗಿದ್ದೆ?" ಎಂದು ಕೇಳುತ್ತಿರುವಷ್ಟರಲ್ಲಿಯೇ ತಾರೆಯು ಮುರಳಾದೇವಿಯ ಸನ್ನಿಧಿಯಲ್ಲಿ ಬಂದು ನಿಂತಳು.

**ಮುರಳಾದೇವಿ**— ತಾರೇ! ನೀನೇಕೆ ಬಂದಿರುವೆ?

**ತಾರೆ**—ಅಮ್ಮಣ್ಣಿಯವರೇ! ಒಂದು ಗಂಟೆಗೆ ಮುಂಚೆ ಭೋಜನಪಾತ್ರೆ ಮೊದಲಾದುವುಗಳನ್ನು ಸಿಷ್ಟಪಡಿಸಿ ಇಂದಿರೆಯೂ ನಾನೂ ನದೀತೀರಕ್ಕೆ ಹೋಗಿ ವಿಹರಿಸುತ್ತಿದ್ದೆವು. ಕತ್ತಲೆಯಾಗುತ್ತಿದೆಯೆಂದು ಅಲ್ಲಿಂದ ಹಿಂದಿರುಗಿ ಬರುತ್ತಿರುವಾಗ ಯಾರೋ ಒಬ್ಬ ಮನುಷ್ಯನು ಇದಿರಾಗಿ "ಅಮ್ಮಾ! ಇಂದಿರೆ! ನಿನಗಾಗಿ ಎರಡು ದಿನಗಳಿಂದ ಇಲ್ಲಿ ಕಾದಿದ್ದೆನು. ನಾನು ಹೊಸಬನು. ಇಲ್ಲಿ ನನಗೆ ಪರಿಚಿತರಾರೂ ಇಲ್ಲ. ಹಿಡಿ." ಎಂದು ಕೈ ಚಾಚಿದನು. ನಾನು ಅಲ್ಲಿ ನಿಲ್ಲದೆ ಬಂದುಬಿಟ್ಟೆನು. ಆಮೇಲೆ ಏನು ನಡೆದುದೋ ನಾನರಿಯೆ.

**ಹೇಮಪ್ರಭಾದೇವಿ**— ಇಂದಿರೇ! ತಾರೆ ಹೇಳುವುದು ನಿಜವೇ?

**ಇಂದಿರೆ**—ದೇವೀ! ಸತ್ಯ. "ವರ್ತಕನು ಬಂದು ನಿನ್ನೊಡನೆ ಮಾತನಾಡುವನು" ಎಂದು ನನ್ನ ತಂದೆ ಇದು ವರೆಗೂ ಬರೆದಿದ್ದರು. ಈ ದಿನ ನಾನು ಬರುವ ಹಾದಿಯಲ್ಲಿ ಆತನನ್ನು ನೋಡಿ ಸಂಭಾಷಿಸಿದೆನು. ಆತನು ನನಗೆ ಕೆಲವು ಮೊಹರೀಗಳನ್ನು ಕೊಟ್ಟನು. ಅವು ನನ್ನ ತಂದೆ ನನಗೆ ಕಳುಹಿಸಿದುವು. ಅವು ಈಗ ನನ್ನ ಮಡಿಲಲ್ಲಿಯೇ ಇವೆ. ತಾವು ಪರೀಕ್ಷಿಸ ಬಹುದು— ಎಂದು ನಾಲ್ಕೈದು ಬಂಗಾರದ ಮೊಹರೀಗಳನ್ನು ತೆಗೆದು ದೇವಿಯ ಬಳಿ ಇಟ್ಟಳು. ದೈವಾಧೀನದಿಂದ ಮಿತ್ರದೇವನು ತನ್ನ ಮಗಳ ವೆಚ್ಚಕ್ಕಾಗಿ ಆ ಮೊಹರಿಗಳನ್ನು

ಕೊಟ್ಟಿದ್ದನು. ತಾನು ಈ ಅಂತಃಪುರಕ್ಕೆ ಬರುವಾಗ ಅವುಗಳನ್ನು ತೆಗೆದು ಕೊಂಡು ಬಂದಿದ್ದಳು. ಅದು ಈಗ ಇಂದಿರೆಯ ಗೌರವಸಂರಕ್ಷಣೆಗೆ ಸಹಾಯ ವಾಯಿತು. "ದೇವಿ! ನಾನು ಒಳಗೆ ಬಂದಮೇಲೆ ಹೊರಗೆ ಏನು ನಡೆಯಿತೋ ನಾನರಿಯೆನು" ಎಂದಳು.

ದೇವಿಯು ಆ ಮೊಹರೀಗಳನ್ನು ರಾಜನ ಕೈಗೆ ಕೊಟ್ಟಳು. ಅವು ರತ್ನದ್ವೀಪ ದ ನಾಣ್ಯಗಳಾಗಿದ್ದುವು. ಅವುಗಳನ್ನು ನೋಡಿ ಅರಸನು ಸ್ವಸ್ಥಚಿತ್ತನಾದನು. "ಫಲ್ಗುನಾ! ತಪ್ಪಿಲ್ಲದವನನ್ನು ವಿಚಾರಿಸದೆ ನೀನು ಏಕೆ ಹಿಡಿದುಕೊಂಡೆ?"

**ಫಲ್ಗುನ—** ಕಳ್ಳನೆಂದು ಹಿಡಿದುಕೊಂಡೆನು. ಅವನು ಒಂದೂ ಹೇಳದೆ ನಿಷ್ಕಾರಣವಾಗಿ ನನ್ನನ್ನು ಒದೆಯಬಹುದೆ? ಅವನನ್ನು ಹಿಡಿದು ತರಿಸಿ ಶಿಕ್ಷಿಸದೆ ನನ್ನ ಮೇಲೆ ಕೋಪಗೊಳ್ಳುವುದು ಯಾವ ನ್ಯಾಯ?

**ಅರಸ—** ಆಗಲಿ. ನಿನ್ನ ಇಷ್ಟ ಪ್ರಕಾರ ಅವನನ್ನು ಹಿಡಿದು ತರಿಸುವೆನು. ಬಹಳ ಹೊತ್ತಾಯಿತು—ಎಂದು ಹೇಳಿ ಎಲ್ಲರೂ ಭೋಜನ ಮಾಡತೊಡಗಿದರು. ಎಲ್ಲವೂ ಮುಗಿದ ಬಳಿಕ ಮದನಪಾಲನು ತನ್ನ ಅರಮನೆಗೆ ಹೊರಟನು. ಇಂದಿರೆಯು ರಾಜನೊಡನೆ ಹೋದಳು.

ಫಲ್ಗುನನನ್ನು ಒದ್ದು ಕೆಡವಿದವನು ತನ್ನ ನಾಥನೇ ಆಗಿರಬೇಕೆಂದು ಹೇಮಪ್ರಭಾದೇವಿಯು ಅಂತರಂಗದಲ್ಲಿ ಸಂತಸಗೊಂಡಳು.

**ಮುರಳಾ ದೇವಿ—** ಕುಮಾರಾ! ಫಲ್ಗುನನು ವಿಕ್ರಮಸಿಂಹನನ್ನು ನೋಡಿದೆನೆಂದು ಹೇಳುತ್ತಾನೆ. ಇದೇನು ವಿಪತ್ತು?

**ಮದನಪಾಲ—** ಅಮ್ಮಾ! ಸಾಯುವವರ ಕಣ್ಣಿಗೆ ಕಂಡವರೆಲ್ಲರೂ ಯಮದೂತರೆಂಬ ಗಾದೆಗೆ ಅನುಗುಣವಾಗಿ ಫಲ್ಗುನನ ಕಣ್ಣಿಗೆ ಎಲ್ಲರೂ ವಿಕ್ರಮಸಿಂಹನಾಗಿ ಕಾಣುವರು. ಇಂದಿರೆಯು ಚಂಪಕಮಾಲಿನಿಯಾಗಿ ತೋರುವಳು. ಏನವನ ಕುಶಾಗ್ರ ಬುದ್ಧಿ? ಅವನು ಹೇಳುವುದೆಲ್ಲಾ ನಿಮಗೆ ವೇದವಾಕ್ಯವು. ನೀವು ಅವನಿಗೆ ತುಂಬ ಸಲಿಗೆಯನ್ನು ಕೊಟ್ಟಿರುವುದರಿಂದ ನಿಮ್ಮ ದಯೆಯನ್ನು ಸಂಪಾದಿಸುವುದಕ್ಕಾಗಿ ಇದ್ದುದೂ ಇಲ್ಲದುದೂ ಕಲ್ಪಿಸಿ ಹೇಳುವನು. ಈ ದಿನ ಬಹಳ ಜಾಗರೂಕನಾಗಿ ಕಾದಿದ್ದೆನು. ಆ ಅರಮನೆ ಯಲ್ಲಿ ಹೇಮಪ್ರಭಾದೇವಿಯು ಇಂದಿರೆಯೊಡನೆ ಏನಾದರೂ ಮಾತನಾಡಿದಳೇ ವಿಚಾರ ಮಾಡಿರಿ. ಇದೆಲ್ಲವೂ ಬರಿ ಭ್ರಾಂತಿ. ಇಲ್ಲದ ವಿಕಲ್ಪಗಳನ್ನು ಹುಟ್ಟಿ ಸಿಕೊಂಡು ಮನಸ್ಸನ್ನು ವೃಥಾ ಏತಕ್ಕೆ ವ್ಯಸನಕ್ಕೆ ಪಾಲುಮಾಡಬೇಕು?

ಫಲ್ಗುನನು ಸುಮ್ಮನಿದ್ದನು. "ಓಹೋ! ಈತನಿಗೆ ಇಂತಹ ರೋಗವು ಹುಟ್ಟಿದೆಯೇ? ಇದಕ್ಕೆ ತಕ್ಕ ಔಷಧವನ್ನು ಹುಡುಕಬೇಕು. ಈಗ ಏನೆಂದರೂ

ಮಗನ ಮಾತನ್ನು ಮುಖ್ಯವಾಗಿ ಮಾಡಿಕೊಂಡು ನನ್ನನ್ನೇ ನಿಂದಿಸುವಳು. ಈ ವೃದ್ಧ ಬಕಪಕ್ಷಿಯು ಸುಮ್ಮನಿದ್ದರೆ ನನ್ನ ಗತಿಯೇನು? ನೀಚಳಾದ ಇಂದಿರೆಯನ್ನು ನನ್ನ ಕ್ರೋಧಾನಲಕ್ಕೆ ಆಹುತಿ ಮಾಡಬೇಡವೆ? ಒಂದು ವೇಳೆ ನನ್ನನ್ನು ಒದ್ದವನು ಅವಳ ತಂದೆಯೇ ಆಗಿದ್ದರೆ ಮದನಪಾಲನ ರಾಜ್ಯಕ್ಕೆ ಭಂಗವೇ ಬರುವುದು. ಇವರು ಎಲ್ಲಿ ಸತ್ತರೆ ನನಗೇನು? ಅನಂಗಪಾಲನು ಡಿಲ್ಲೀಶ್ವರನಾಗಿದ್ದರೆ ಈ ಮುದುಕಿಯ ಮೇಲೆ ಅಭಿಮಾನದಿಂದ ಏನು ಹೇಳಿ ನಡೆಸುತ್ತಿದ್ದನು? ಈಗಿರುವ ಸಾರ್ವಭೌಮನು ಪೃಥ್ವೀರಾಜನಲ್ಲವೇ? ಆತನಿಗೆ ನನ್ನ ಮೇಲೆ ಅನುಮಾನವುಂಟಾದರೆ ನಾನು ಜೀವಿಸಿರುವುದು ಹೇಗೆ? ಭೂಮಿಯಲ್ಲಿರುವ ಜಂತುವಿಗಾದರೂ ತಿಳಿಯದಂತೆ ಇಂದಿರೆಯನ್ನು ಕೊಲ್ಲಬೇಕು. ರಾಜನನ್ನು ಕೊಂದವನು ದೊರೆತನೆಂದು ಡಿಲ್ಲೀಶ್ವರನಿಗೆ ತಿಳಿಸಿ ಅಲ್ಲಿಂದ ಸಿಪಾಯಿಗಳನ್ನು ಕರೆಯಿಸಿ ದುರುಳನಾದ ವಿಕ್ರಮಸಿಂಹನನ್ನು. ಹಿಡಿಸಬೇಕು. ಆಲಸ್ಯಮಾಡ ಕೂಡದು'' ಎಂದು ಆಲೋಚಿಸಿದನು. ಮದನಪಾಲನು ವಿಹಾರಾರ್ಥವಾಗಿ ಉದ್ಯಾನವನಕ್ಕೆ ಹೊರಟನು. ಆ ಸಮಯವನ್ನು ನಿರೀಕ್ಷಿಸಿಕೊಂಡಿದ್ದ ಫಲ್ಗುನನು ರಾಜಮಾತೆಯನ್ನು ದರ್ಶಿಸಿ ನಮಸ್ಕರಿಸಿ ಬದ್ಧಾಂಜಲಿಯಾಗಿ ನಿಂತನು.

**ಮುರಳಾದೇವಿ—** ಫಲ್ಗುನಾ! ಏತಕ್ಕೆ ಚಿಂತಾಕ್ರಾಂತನಾಗಿರುವೆ? ನಿಜವಾದ ಸಂಗತಿಯಾದರೂ ಏನು? ಮರೆಮಾಚದೆ ಹೇಳು.

**ಫಲ್ಗುನ—** ತಾಯೇ! ತಮ್ಮ ಅನುಗ್ರಹದಿಂದ ಇಲ್ಲಿಯವರೆಗೂ ಸುಖವಾಗಿರುವೆನು. ನಿಮ್ಮ ಮೇಲೆ ನಾನು ದ್ರೋಹವನ್ನು ಎಣಿಸುವೆನೇ?— ಎಂದು ಹೇಳುತ್ತ ಬಿಕ್ಕಿಬಿಕ್ಕಿ ಅಳಲಾರಂಭಿಸಿದನು. ಅದರಿಂದ ರಾಜಮಾತೆಯು ಅವನ ವಶವಾದಳು. ಬಹು ಕಾಲ ಮಾತನಾಡಿದನು. ಅದೆಲ್ಲವೂ ಇಂದಿರೆಯನ್ನು ಕುರಿತೇ ಆಗಿದ್ದಿತು.

## ೧೬ನೆಯ ಅಧ್ಯಾಯ

### ವನಭೋಜನ

ಕಾರ್ತಿಕಮಾಸದಲ್ಲಿ ವನಭೋಜನ ಮಾಡಿದರೆ ಆ ವರುಷದ ಸರ್ವಾರಿಷ್ಟಗಳೂ ಪರಿಹಾರವಾಗಿ ಸುಖ ಪ್ರಾಪ್ತಿಯಾಗುವುದೆಂಬ ನಂಬುಗೆಯು ಜನಜನಿತವಾಗಿರುವುದು. ಮೇವಾರ ಸಂಸ್ಥಾನದಲ್ಲೆಲ್ಲಾ ಈ ಸಂಪ್ರದಾಯವು ಆಚರಣೆ

ಯಲ್ಲಿದ್ದಿತು. ಒಂದು ದಿನ ಪ್ರಾತಃಕಾಲ ರಾಜಧಾನಿಯ ಜನರು ಗುಂಪು ಗುಂಪಾಗಿ ಸುತ್ತಲಿರುವ ವನಗಳಿಗೆ ಹೋಗುತ್ತಿದ್ದರು. ಕೆಲವರು ಬಂಡಿಗಳಲ್ಲಿಯೂ, ಮತ್ತೆ ಕೆಲವರು ಕಾಲುನಡೆಯಿಂದಲೂ ತಮತಮಗೆ ಬೇಕಾದ ವನಗಳಿಗೆ ಹೋಗುತ್ತಿದ್ದರು. ಅರಮನೆಯವರು ಮತ್ತೆ ಉದ್ಯೋಗಸ್ಥರು ಮಾತ್ರ ಬಾಣನದೀತೀರದಲ್ಲಿರುವ ವನದಲ್ಲಿ ಭೋಜನಮಾಡಬೇಕೆಂದು ಉದ್ದೇಶಿಸಿದ್ದರು. ಅಂತಃಪುರದ ದಾಸೀಜನರು ಬಂಡಿಗಳಲ್ಲಿ ಸಾಮಾನುಗಳನ್ನು ಹಾಕಿಕೊಂಡು ಅಲ್ಲಿಗೆ ಹೋಗುತ್ತಿದ್ದರು. ಕೆಲವರು ರಾಜ ಭಟರು ಉತ್ತಮಾಶ್ವಗಳನ್ನೇರಿ ಮುಂದಾಗಿಯೇ ಹೋಗಿ ರಾಜಸ್ತ್ರೀಯರು ಇಳಿಯುವುದಕ್ಕಾಗಿ ವಸತಿಗಳನ್ನೇರ್ಪಡಿಸುತ್ತಿದ್ದರು. ರಾಜಧಾನಿಯ ಪ್ರತಿಯೊಂದು ಮನೆಯ ಬಾಗಿಲಲ್ಲಿಯೂ ಸಾರಿಸಿ ರಂಗೋಲೆಗಳಿಂದಲೂ, ಮಾವಿನ ತೋರಣಗಳಿಂದಲೂ ಅಲಂಕಾರಮಾಡಿದ್ದರು. ಅಂತಃಪುರದ ಅಲಂಕಾರವನ್ನಂತೂ ಬಣ್ಣಿಸಲು ಸಾಧ್ಯವಿಲ್ಲ. ಮನೆಗಳಲ್ಲಿ ಒಬ್ಬ ಮುದುಕಿಯನ್ನಾಗಲಿ ಅಥವಾ ಸೇವಕನನ್ನಾಗಲಿ ಕಾವಲಿಟ್ಟು ಉಳಿದ ಮನೆಯವರೆಲ್ಲರೂ ವನಕ್ಕೆ ಹೋಗುತ್ತಿದ್ದರು. ನದಿಯ ಸಮೀಪದಲ್ಲಿರುವ ಉಪವನಗಳೆಲ್ಲವೂ ಜನಸಮೂಹದಿಂದ ತುಂಬಿ ಕೊಂಡುವು. ಚಾತುರ್ವರ್ಣ್ಯದವರು ತಮತಮಗೆ ಬೇಕಾದ ವಸತಿಗಳನ್ನು ಗಿಡಗಳ ನೆರಳಿನಲ್ಲಿ ಏರ್ಪಡಿಸಿಕೊಂಡರು. ರಾಜನು ತಂಗುವುದಕ್ಕಾಗಿ ಪಟಮಂಟಪವನ್ನು ಹಾಕಿದ್ದರು. ಅಡಿಗೆಗೆ ತಕ್ಕ ಚಪ್ಪರಗಳನ್ನು ಕಟ್ಟಿಸಿದ್ದರು. ದಾಸ ದಾಸೀಜನರು ಅಲಂಕೃತರಾಗಿ ಅತ್ತಿತ್ತ ತಿರುಗಾಡುತ್ತಿದ್ದರು. ಪಹರೆಕೊಡುವವರು ತಮ್ಮತಮ್ಮ ಹಂದರಗಳಲ್ಲಿ ಆಯುಧಗಳನ್ನು ಸವರಿಸಿ ಇಟ್ಟುಕೊಳ್ಳುತ್ತಿದ್ದರು. ಜನನಾ ಸ್ತ್ರೀಯರಿರುವ ಸ್ಥಳಗಳಿಗೆ ಮತ್ತೊಬ್ಬರು ಹೋಗದಂತೆ ನೌಕರರು ಅಶ್ವಾರೂಢರಾಗಿ ಕಾವಲು ಕೊಡುತ್ತಿದ್ದರು. ರಾಜನ ಮಂಟಪದ ಸುತ್ತಲೂ ಪದಾತಿಗಳು ಪಹರೆ ಕೊಡುತ್ತಿದ್ದರು. ಆ ಮಂಟಪವನ್ನು ಪ್ರವೇಶಿಸಿದ ಮದನಪಾಲನು ತನ್ನ ತಾಯಿಯೊಡನೆ ಮಾತನಾಡುತ್ತಿದ್ದನು.

**ಮುರಳಾದೇವಿ**— ಕುಮಾರಾ ! ನಮ್ಮ ಹೇಮ ಇಲ್ಲಿಗೆ ಏಕೆ ಬರಲಿಲ್ಲ ? ಆಕೆಗೆ ಸಮಾಚಾರವನ್ನು ತಿಳಿಸಿರುವೆಯಾ ?

**ಮದನಪಾಲ** — ಅಮ್ಮಾ ! ಹಾಗೆ ತಿಳಿಸದೆ ಎಂದಿಗಾದರೂ ಇರುವೆನೇ ? ವಿವಾಹವಾಗದೆ ಇಲ್ಲೆಲ್ಲಾ ಸ್ವೇಚ್ಛೆಯಾಗಿ ವಿಹರಿಸಲು ಆಕೆ ಇಷ್ಟಪಡುವುದಿಲ್ಲ. ಅಲ್ಲದೆ, ಈ ತಂಗಾಳಿಯಿಂದ ಆಕೆಯ ಉಬ್ಬಸ ರೋಗವು ಹೆಚ್ಚಾಗುವುದು.

**ಮುರಳಾದೇವಿ**— "ಎಲೈ ಉನ್ಮತ್ತನೇ ! ಅವಳು ನಿಜವಾಗಿಯೂ ವಿವಾಹಕ್ಕೆಸಮ್ಮತಿಸಿರುವ ಪಕ್ಷದಲ್ಲಿ ಇಲ್ಲಿಗೆ ಸ್ವೇಚ್ಛೆಯಾಗಿ ಬರಲು ಆಕ್ಷೇಪಣೆಯೇನಿ

ರುವುದು ? ಉಬ್ಬಸ ವ್ಯಾಧಿಯೆಂದು ಹೇಳುವೆಯಾದ ಕಾರಣ ನಾನು ಸುಮ್ಮನಿರ ಬೇಕಾಗಿದೆ. ಇಲ್ಲವಾದರೆ ಈಕ್ಷಣ ಇಲ್ಲಿಗೆ ಕರೆಯಿಸುತ್ತಿದ್ದೆನು. ಬೈರಾಗಿಗೆ ತೋರಿಸಿ ಏನಾದರೂ ಔಷಧ ಕೊಡಿಸುತ್ತಿರುವೆಯಾ ?" ಎಂದು ಗರ್ಜಿಸಿ ಮಾತ ನಾಡಿದಳು.

ಆಕೆಯ ಗರ್ಜನೆಗೆ ಮದನಪಾಲನು ಪ್ರತ್ಯುತ್ತರ ಕೊಡಲಿಲ್ಲ. ಲಲಿತಕು ಮಾರ ಮೊದಲಾದ ರಾಜಬಂಧುಗಳು ವಿನೋದವಾಗಿ ವಿಹರಿಸುತ್ತಲೂ, ಅಲ್ಲಿ ನಡೆಯುತ್ತಿದ್ದ ಬ್ರಾಹ್ಮಣ ಸಂತರ್ಪಣೆಗಳಿಗೆ ಸಹಾಯಮಾಡುತ್ತಲೂ, ಬಂದ ಶಾಸ್ತ್ರಿಗಳೊಂದಿಗೆ ಶಾಸ್ತ್ರವಾದಗಳನ್ನು ಮಾಡುತ್ತಲೂ, ಕಾಲಯಾಪನೆ ಮಾಡು ತ್ತಿದ್ದರು. ಒಂದು ಕುಟೀರದಲ್ಲಿ ರತ್ನ ಕಂಬಳಿಗಳನ್ನು ಹಾಸಿ ಮುಖಮಲ್ ದಿಂಡುಗಳನ್ನಿಟ್ಟಿದ್ದರು. ಪೂರ್ವಾಚಾರಪರಾಯಣರಾದ ಕೆಲವರು ವೃದ್ಧಕ್ಷತ್ರಿ ಯರು ಅಲ್ಲಿ ಮಲಗಿದ್ದರು. ಇಂತಹ ವಿನೋದ ಸಮಯದಲ್ಲಿ ವೇಶ್ಯಾ ನರ್ತನ ವಿಲ್ಲದಿದ್ದರೆ ಶೋಭಿಸದೆಂಬ ಅಭಿಪ್ರಾಯವುಳ್ಳ ಕೆಲವರು ವೃದ್ಧರು ವೇಶ್ಯಾಸ್ತ್ರೀಯ ರನ್ನು ಕರೆಯಿಸಿ ನರ್ತನ ಗಾನಗಳನ್ನು ಮಾಡಿಸುತ್ತಾ ಆನಂದಮಗ್ನರಾಗಿ ದ್ದರು. ಲಲಿತಕುಮಾರನು ನವನಾಗರಿಕನು; ಮಾನಧನನು; ವೇಶ್ಯಾವೃತ್ತಿ ಯನ್ನು ಕಳೆದು ಅವರನ್ನುದ್ಧರಿಸಲು ಬದ್ಧಕಂಕಣನಾಗಿರುವನು. ಆತನು ಹಠಾತ್ತಾಗಿ ಆ ದಾರಿಯಲ್ಲಿ ಹೋಗುತ್ತಿರಲು ಕ್ಷತ್ರಿಯರ ಗುಂಪಿನಲ್ಲಿ ವಯೋ ವೃದ್ಧನಾಗಿದ್ದ ನಾರಾಯಣ ಸಿಂಗ ಎಂಬವನು ಆತನನ್ನು ನೋಡಿ ಒಳಕ್ಕೆ ಕರೆದುಕೊಂಡು ಬಂದು ಮಧ್ಯದಲ್ಲಿ ಕುಳ್ಳಿರಿಸಿ ನರ್ತಿಸುತ್ತಿದ್ದ ಚಂದ್ರವದನೆ ಯನ್ನು ಕುರಿತು "ಎಲೌ! ಈತನು ಮಾಳವಾಧೀಶನು. ಈತನು ಸಂಗೀತದಲ್ಲಿ ಬಹಳ ಪ್ರೀತಿಯುಳ್ಳವನು. ಮನೋಹರವಾದ ಒಂದು ಹಾಡನ್ನು ಹಾಡು— ಎಂದು ಹೇಳಿದನು. ಇಷ್ಟವಿಲ್ಲದಿದ್ದರೂ, ಲಲಿತನು ಅಲ್ಲಿ ಅಧೋವದನನಾಗಿ ಕುಳಿತುಕೊಂಡು ಗಾನಾಭಿನಯಗಳನ್ನು ಕೇಳುತ್ತಿದ್ದು ಐದು ನಿಮಿಷಗಳಾದ ಒಡನೆಯೇ ಎದ್ದು "ತಾತಾ! ಮಹಾರಾಜರು ನನಗಾಗಿ ಕಾದಿರುವರು. ನಾನು ಹೋಗಬೇಕು" ಎಂದು ಹೇಳಿ ನಿರ್ಗಮಿಸಿದನು. ಹೀಗೆ ಆ ವನವೆಲ್ಲವೂ ನೃತ್ಯ' ಗೀತ, ವಾದ್ಯಗಳಿಂದ ತುಂಬಿ ಸರಸ್ವತಿಯ ನಿಲಯದಂತಿದ್ದಿತು.

ಸಂಧ್ಯಾಕಾಲವು ಸಮೀಪಿಸಿತು. ಹಕ್ಕಿಗಳೆಲ್ಲವೂ ಕಲಕಲ ಧ್ವನಿಯನ್ನು ಮಾಡುತ್ತಾ ತಮ್ಮತಮ್ಮ ಗೂಡುಗಳನ್ನು ಸೇರಿಕೊಳ್ಳುತ್ತಿದ್ದುವು. ಆ ದಿನದ ವಿನೋದಗಳನ್ನೆಲ್ಲಾ ತೀರಿಸಿಕೊಂಡು ಜನರು ತಮ್ಮ ತಮ್ಮ ಮನೆಗಳಿಗೆ ಹೋ ಗುವ ಸನ್ನಾಹದಲ್ಲಿದ್ದರು. ಕೆಲವರು ಮುಂಚೆಯೇ ಪ್ರಯಾಣ ಮಾಡಿದ್ದರು. ಕತ್ತಲೆಗೆ ಪ್ರಾರಂಭವಾಯಿತು. ಸರಸ್ಸುಗಳಲ್ಲಿದ್ದ ಪದ್ಮಗಳು ಕಾಂತಿಹೀನ

ವಾಗುತ್ತಿದ್ದುವು. ದುರ್ಜನರ ಮಧ್ಯದಲ್ಲಿದ್ದರೂ ಸಜ್ಜನರು ತಮ್ಮ ಸದ್ಗುಣಗಳನ್ನು ಪ್ರಕಾಶ ಪಡಿಸುವಂತೆ ಅಂಧಕಾರವು ಆವರಿಸಿಕೊಂಡರೂ ನಕ್ಷತ್ರಗಳು ಗಗನಮಂಡಲದಲ್ಲಿ ಥಳಥಳಿಸುತ್ತಿದ್ದುವು. ಇಂತಹ ಸಮಯದಲ್ಲಿ ವನವಿಹಾರೇಚ್ಛೆಯುಳ್ಳ ಇಂದಿರೆಯು ತಾರೆಯನ್ನು ಕರೆದುಕೊಂಡು ನದೀತೀರಕ್ಕೆ ಹೋಗಿ ಅಲ್ಲಿನ ಸೈಕತ ಶ್ರೇಣಿಯಲ್ಲಿ ವಿಹರಿಸುತ್ತಿದ್ದಳು. ಮುಂಭಾಗದಲ್ಲಿ ಚಿಕ್ಕ ಚಿಕ್ಕ ಹರಿಗೋಲುಗಳನ್ನು ಕಟ್ಟಿದ್ದರು. ಅವುಗಳನ್ನು ನೋಡಲು ಹೊರಟು ಒಂದು ಹರಿಗೋಲಿನಲ್ಲಿ ಏರಿ ಕುಳಿತುಕೊಂಡರು. "ಇಂದಿರೆ! ಕತ್ತಲೆ ಹೆಚ್ಚಾಯಿತು. ಎಲ್ಲರೂ ಹೊರಟಂತಿದೆ. ರಾಜಮಾತೆಯು ನಮ್ಮನ್ನು ಹುಡುಕಿಸುವಳೇನೋ! ಹೋಗೋಣ, ನಡೆ" ಎಂದು ತಾರೆಯು ಸೂಚಿಸಿದಳು.

"ತಾರೇ! ಈ ದಿನ ನಾನು ರತ್ನದ್ವೀಪದಲ್ಲಿದ್ದಂತೆ ಉತ್ಸಾಹದಿಂದಿರುವೆನು. ಅಲ್ಲಿ ನಮಗೆ ರಾತ್ರಿಯ ಭಯವೇ ಇಲ್ಲ. ನೀನು ಮುಂದಾಗಿಯೇ ಹೋಗಿ ನಮಗೆ ಬಂಡಿಗಳು ಸಿದ್ಧವಾಗಿವೆಯೇ ನೋಡಿಕೊಂಡು ಬಾ. ಅಲ್ಲಿಯವರೆಗೂ ನಾನು ಇಲ್ಲಿಯೇ ಇರುವೆನು." ಎಂದು ಇಂದಿರೆಯು ಹೇಳಿದಳು.

**ತಾರೆ**— "ಹಾಗೆಯೇ ಆಗಲಿ. ಇಲ್ಲಿ ನೀರು ವೇಗವಾಗಿ ಹರಿಯುವುದು. ಆಳವೂ ಹೆಚ್ಚು. ಇಲ್ಲಿ ಯಾರೂ ಇಳಿದು ಸ್ನಾನವನ್ನು ಮಾಡಕೂಡದೆಂದು ಅಮ್ಮನವರು ಆಜ್ಞೆ ಮಾಡಿರುವರು. ಜಾಗ್ರತೆ." ಎಂದು ಹೇಳಿ ಹೊರಟುಹೋದಳು.

ಇವರಿಬ್ಬರ ಸಂಭಾಷಣೆಯನ್ನು ಪೊದೆಗಳ ಮಧ್ಯದಲ್ಲಿ ಅಡಗಿಕೊಂಡು ಕೇಳುತ್ತಿದ್ದ ಫಲ್ಗುನನು "ಅಹುದು. ಇಂದಿರೆಗೆ ಇಂದಿಗೆ ಆಯುರ್ದಾಯವು ಪೂರೈಸಿರುವಂತೆ ತೋರುತ್ತದೆ. ಇಲ್ಲದಿದ್ದರೆ ಇಷ್ಟು ಕತ್ತಲೆಯಲ್ಲಿ ತಾನು ಒಬ್ಬಳೇ ನಿಂತು ತಾರೆಯನ್ನು ಕಳುಹಿಸುತ್ತಿದ್ದಳೇ? ನನಗೆ ಇದೇ ತಕ್ಕ ಸಮಯ"ವೆಂದಾಲೋಚಿಸಿ ಮೆಲ್ಲನೆ ಹಿಂದಿನಿಂದ ಬಂದು ಹರಿಗೋಲಿಗೆ ಕಟ್ಟಿದ್ದ ಹಗ್ಗವನ್ನು ಚೂರಿಯಿಂದ ಕುಯಿದು ಹೊರಟು ಹೋದನು. ತಾರೆಯು ವನವನ್ನು ಪ್ರವೇಶಿಸಿ ನೋಡುವಲ್ಲಿ ಅಂತಃಪುರದ ಸ್ತ್ರೀಯರು ಬಂಡಿಗಳನ್ನೂ, ಪಲ್ಲಕ್ಕಿಗಳನ್ನೂ ಏರುತ್ತಿದ್ದರು. ತಾರೆಯು ಈ ಸಂಗತಿಯನ್ನು ಇಂದಿರೆಗೆ ತಿಳುಹಿಸಲು ಹಿಂದಿರುಗಿ ಓಡಿ ಬರುತ್ತಿರುವಾಗ ಫಲ್ಗುನನು ಅವಳನ್ನು ಸಂಧಿಸಿ "ಇಂದಿರೆಯು ಮುಂದಿನ ಬಂಡಿಯಲ್ಲಿ ಹೋದಳು. ನೀನು ಒಂದು ಬಂಡಿಯನ್ನೇರಿ ಹೋಗು" ಎಂದು ಹೇಳಿದನು. ಅವನನ್ನು ನೋಡಿ ಮುಂದಕ್ಕೆ ಹೆಜ್ಜೆಯನ್ನಿಡಲು ಭಯಪಟ್ಟು ಸುಮ್ಮನೆ ಬಂಡಿಯನ್ನೇರಿದಳು.

ಅತ್ತ ಇಂದಿರೆಯು ಹರಿಗೋಲು ಹೇಗೋ ಚಲಿಸುತ್ತಿರುವಂತೆ ಕಂಡಳು.

ಕೊನೆಯ ಭಾಗಕ್ಕೆ ಹೋಗಿ ನಿಂತುಕೊಳ್ಳಲಾಗಿ ಆ ಹರಿಗೋಲು ತಲೆ ಕೆಳಗಾಯಿತು. ವೇಗವಾಗಿ ಹೊಡೆದುಕೊಂಡು ಹೋಗುತ್ತಿರುವಂತೆ ಗೋಚರಿಸಿತು. ಫಲ್ಗುನನು ದಡದಲ್ಲಿ ನಿಂತು "ರಾಕ್ಷಸಿ ಮುಂಡೆ! ಸತ್ತು ಹೋಗು" ಎಂದು ಕೂಗಿ ಹೇಳಿದ ಮಾತು ಅವಳ ಕಿವಿಗೆ ಬಿದ್ದಿತು. ಈಜುವುದರಲ್ಲಿ ಇಂದಿರೆಯು ಬಹಳ ಚತುರೆ. ಮೂಢಾತ್ಮನಾದ ಫಲ್ಗುನನಿಗೆ ಆ ಸಂಗತಿ ತಿಳಿಯದು. ಅವಳು ನೀರಿನಲ್ಲಿ ಮುಳುಗಿ ಅಲ್ಲಲ್ಲಿ ಸ್ವಲ್ಪ ಎದ್ದು ಈಜುತ್ತಾ ಬಿಸ್ತರು ಬಿಟ್ಟಿದ್ದ ಮರದ ತುಂಡುಗಳ ಸಹಾಯದಿಂದ ಆ ಪ್ರವಾಹವನ್ನು ದಾಟಿ ಎಲ್ಲರಿಗಿಂತಲೂ ಮುಂಚೆಯೇ ರಾಜಮಂದಿರದ ಸಮೀಪದಲ್ಲಿರುವ ದಡದಲ್ಲಿಳಿದು ನನೆದ ಸೀರೆಯನ್ನು ಹಿಂಡಿಕೊಂಡು ಅಂತಃಪುರವನ್ನು ಪ್ರವೇಶಿಸಿ ಬೇರೆ ಸೀರೆಯನ್ನು ಉಟ್ಟುಕೊಂಡು ತನ್ನ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದಳು. ಬಂಡಿಗಳೆಲ್ಲವೂ ಬಂದುವು. ಎಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು. ಆ ದಿನ ಶ್ರಮದಿಂದ ಬಳಲಿದ್ದ ಕಾರಣ ರಾಜನು ತಾಯಿಯೊಂದಿಗೆ ಭೋಜನಕ್ಕೆ ಬರಲಿಲ್ಲ. ಮರುದಿನ ಎಂದಿನಂತೆ ತಾಯಿಯ ಬಳಿಗೆ ಬಂದನು. ಹಿಂದೆಯೇ ಫಲ್ಗುನನೂ ಬಂದನು. ಅಲ್ಲಿರುವ ಇಂದಿರೆಯನ್ನು ನೋಡಿ ಚಕಿತನಾದನು. "ಏನಾಶ್ಚರ್ಯ! ಇವಳು ನಿಜವಾಗಿಯೂ ಇಂದಿರೆಯೇ? ಅಲ್ಲಿಂದ ಈಜುತ್ತಾ ಈ ರಕ್ಕಸಿ ಈ ಪ್ರಾಸಾದಕ್ಕೆ ಬಂದಿರುವಳಲ್ಲ! ಇದು ದೈವಾಧೀನವೇ ಸರಿ. ಹರಿಗೋಲಿನ ಹಗ್ಗವನ್ನು ಕುಯಿದು ಹಾಕಿದುದು ನಾನೆಂದು ಇವಳಿಗೆ ತಿಳಿಯಲು ಸಾಧ್ಯವಿಲ್ಲ. ಇನ್ನು ಮೇಲೆ ಇವಳನ್ನು ಕೊಲ್ಲುವುದಕ್ಕಾಗಿ ನಾನು ಮಾಡುವ ಪ್ರಯತ್ನವು ಬಹಳ ಎಚ್ಚರಿಕೆಯಿಂದಿರಬೇಕು." ಎಂದು ತನ್ನಲ್ಲಿಯೇ ಗೊಣಗಿಕೊಂಡು ಸಮಯವನ್ನರಿತು ರಾಜಮಾತೆಯ ಕಿವಿಗೂ ಹಾಕಿದನು. ಆ ಮಾತನ್ನು ಕೇಳಿ ಮುರಳಾದೇವಿಯು ಆಶ್ಚರ್ಯ ಪಟ್ಟಳು. ಕಾಲಿಗೆ ತೈಲವನ್ನು ಹಚ್ಚಲು ಇಂದಿರೆಯು ಬಂದಳು.

**ಮುರಳಾದೇವಿ**— ನಿನ್ನೆಯ ದಿನ ನೀನು ನಮಗೆಲ್ಲರಿಗಿಂತಲೂ ಮುಂಚೆಯೇ ಅರಮನೆಯನ್ನು ಹೇಗೆ ಬಂದು ಸೇರಿದೆ?

**ಇಂದಿರೆ**– ಅಮ್ಮಾ! ನಿನ್ನೆಯ ದಿನ ಉದ್ಯಾನವನವನ್ನು ನೋಡಿದ ಕೂಡಲೇ ನನಗೆ ರತ್ನದ್ವೀಪವು ಸ್ಮರಣೆಗೆ ಬಂದಿತು. ಸಾಯಂಕಾಲ ಶ್ರಮಪರಿಹಾರಕ್ಕಾಗಿ ಹೋಗಿ ಅಲ್ಲಿದ್ದ ಒಂದು ಹರಿಗೋಲಿನಲ್ಲಿ ಕುಳಿತುಕೊಂಡು ಬಂಡಿಗಳು ಸಿದ್ಧವಾಗಿವೆಯೇ ನೋಡಿಕೊಂಡು ಬರಲು ತಾರೆಯನ್ನು ಕಳುಹಿಸಿದೆನು. ಹತ್ತು ನಿಮಿಷದೊಳಗಾಗಿ ಹರಿಗೋಲು ನೀರಿನಲ್ಲಿ ಹೊಡೆದುಕೊಂಡು ಹೋಗುತ್ತಿದ್ದುದನ್ನು ಗುರುತಿಸಿ ಅದರ ಕೊನೆಯಲ್ಲಿ ಕಾಲಿಟ್ಟೆನು. ನನ್ನ ಭಾರಕ್ಕೆ

ಅದು ಮುಳುಗಿ ಹೋಯಿತು. ನಾನು ನೀರಿನಲ್ಲಿ ಬಿದ್ದೆನು. ಹರಿಗೋಲು ನನ್ನ ಮೇಲೆ ಬಿದ್ದಿತು. ಅದನ್ನು ಪಕ್ಕಕ್ಕೆ ತಳ್ಳಿ ಸುಲಭವಾಗಿ ಈಜುತ್ತಾ ಈ ಅರಮನೆಯ ಸಮೀಪದಲ್ಲಿ ಇಳಿದು ಇಲ್ಲಿಗೆ ಬಂದು ಸೇರಿದೆನು. ಇದರಲ್ಲೇನೂ ವಿಶೇಷವಿಲ್ಲವಲ್ಲ !—ಎಂದಳು.

**ಮುರಳಾದೇವಿ—** ಇಂದಿರೆ ! ನಿನಗೆ ಈಜುವುದಕ್ಕೂ ಬರುವುದೇ ?

**ಇಂದಿರೆ—** ಅಮ್ಮ ! ಚಿಕ್ಕಂದಿನಿಂದಲೂ ನನ್ನ ತಂದೆಯು ನನಗೆ ಈಜುವುದನ್ನೂ ಕಲಿಸಿರುವರು. ಸಮುದ್ರದಲ್ಲಿ ಸಹಿತ ಸ್ವಲ್ಪ ಈಜಾಡ ಬಲ್ಲೆನು.

**ಮುರಳಾದೇವಿ—** ಈ ಸಂಗತಿಯನ್ನು ನೀನು ನನಗೆ ಏಕೆ ತಿಳಿಸಲಿಲ್ಲ?

**ಇಂದಿರೆ—** ಮಾತೆ ! ಇದೇನು ದೊಡ್ಡ ಸುದ್ದಿಯೆಂದು ತಮ್ಮ ಕಿವಿಗೆ ಹಾಕಬೇಕು ? ನನಗೇನೂ ಕಷ್ಟವಾಗಿ ತೋರಲಿಲ್ಲ. ಹಾಗಿರುವಾಗ, ಇದೊಂದು ದೊಡ್ಡ ಪ್ರಮಾದವಾಗಿ ಹೇಳಿಕೊಂಡು ತಮಗೆ ಶ್ರಮಕೊಡುವುದು ಯಾವ ನ್ಯಾಯ ?

ಆ ದಿನ ಸಮಸ್ತ ಕಾರ್ಯಗಳೂ ಯಥಾವಿಧಿಯಾಗಿ ನಡೆದುವು. ಲಲಿತ ಕುಮಾರನೂ ಇಂದಿರೆಯೂ ಒಂದೇ ಅಂತಃಪುರದಲ್ಲಿ ವಾಸಮಾಡುತ್ತಿದ್ದರೂ ಇತರರು ಅನುಮಾನಿಸದಿರುವಂತೆ ನಡೆದುಕೊಳ್ಳುತ್ತಿದ್ದರು. ಭೋಜನವಾದ ಕೂಡಲೇ ರಾಜನಿಗೂ, ರಾಜಮಾತೆಗೂ, ಲಲಿತಕುಮಾರನಿಗೂ ವಿಧವಿಧವಾದ ತಾಂಬೂಲದ ಸುತ್ತುಗಳನ್ನು ಕಟ್ಟಿ ಕೊಡುವುದು ಇಂದಿರೆಗೆ ಮುಖ್ಯ ಕೆಲಸವಾಗಿದ್ದಿತು. ಆ ದಿನವೂ ಎಂದಿನಂತೆ ಎಲ್ಲರಿಗೂ ತಾಂಬೂಲವನ್ನು ಕೊಟ್ಟು ಹೊರಟುಹೋದಳು. ತನಗೆ ಕೊಟ್ಟ ತಾಂಬೂಲದಲ್ಲಿ ಒಂದು ಪತ್ರ ವಿರುವುದನ್ನು ಕಂಡು ಲಲಿತಕುಮಾರನು ಅದನ್ನು ಭದ್ರಪಡಿಸಿದನು. ಆ ದಿನ ಆಸ್ಥಾನಕ್ಕೆ ಹೋಗಿ ರಾಜಕಾರ್ಯಗಳನ್ನು ಮುಗಿಸಿ, ಭೋಜನವನ್ನು ತೀರಿಸಿ ಕೊಂಡು ಮಲಗುವ ಮನೆಗೆ ಹೋಗಿ ಬಾಗಿಲು ಮುಚ್ಚಿಕೊಂಡು ಆ ಪತ್ರ ವನ್ನು ಓದಲಾರಂಭಿಸಿದನು. ಅದರಲ್ಲಿ ಹಿಂದಿನ ದಿನ ಫಲ್ಗುನನು ಮಾಡಿದ ಕಾರ್ಯವನ್ನೂ, ಅದನ್ನು ತಿಳಿಯದಂತೆ ತಾನು ನಡೆಯುತ್ತಿರುವುದನ್ನೂ, ತನಗೆ ಬೇಕಾದ ಇತರ ಸಂಗತಿಗಳನ್ನೂ ಬರೆದಿದ್ದಳು. ಲಲಿತಕುಮಾರನು ನಿಶ್ಚಲ ಮನಸ್ಸಿನಿಂದ ಆ ಕಾಗದವನ್ನು ಓದಿಕೊಂಡನು. "ನಾಥಾ" ಎಂದು ಸಂಬೋಧಿಸಿರುವುದೂ ಕೊನೆಗೆ "ಇಂತು ನಿನ್ನ ಪ್ರೇಯಸಿ" ಎಂದು ಪರಿಸಮಾಪ್ತಿ ಮಾಡಿರುವುದೂ ಅವನ ಅಂತರಂಗದಲ್ಲಿರುವ ಜೀವನವರೆಗೂ ಹೊಕ್ಕು ದೈವ ಪ್ರೀತಿಯನ್ನಾಕರ್ಷಿಸಿತು. ಕಾಗದವನ್ನು ಪುನಃ ಪುನಃ ಓದುತ್ತಾ ಕಣ್ಣುಗಳಿಗೆ ಒತ್ತಿಕೊಂಡನು. "ಇವಳು ಆ ತ್ರಿಪುರ ಸುಂದರಿಯೇ ಸರಿ. ಇವಳ ತಂದೆಯೂ

ಸಿಜವಾಗಿಯೂ ಆ ಮಹಾನುಭಾವನೇ ಸರಿ! ನನ್ನ ಊಹೆ ಸರಿಹೋಯಿತು.'' ಎಂದು ತನಗೆ ತಿಳಿಯದೆಯೇ ಕೂಗಿಕೊಂಡನು. ಪುನಃ ಆ ಪತ್ರವನ್ನು ಭದ್ರ ಪಡಿಸಿದನು.

ಬೆಳಗಾಗುವುದಕ್ಕೆ ಪೂರ್ವವೇ ನೀಲವೇಣಿಯು ಒಂದು ಪತ್ರವನ್ನು ಕೈಯಲ್ಲಿಟ್ಟುಕೊಂಡು ರಾಜಭವನಕ್ಕೆ ಬಂದಳು. ರಾಜಮಾತೆಯನ್ನು ನೋಡಿ ಅಭಿನಂದಿಸಿ ಅದನ್ನು ಆಕೆಯ ಕೈಗೆ ಕೊಟ್ಟಳು. ಅದು ಹೇಮಪ್ರಭಾ ದೇವಿಯು ಇಂದಿರೆಗೆ ಬರೆದ ಕಾಗದವಾಗಿದ್ದಿತು. ಇಂದಿರೆಯನ್ನು ಕರೆಯಿಸಿದಳು.

**ಮುರಳಾದೇವಿ—** ಇಂದಿರೆ! ಈ ಕಾಗದವನ್ನು ಓದು. ನಿನ್ನ ರಾಣಿಯು ನಿನಗೆ ಏನೋ ಬರೆದಿರುವಳು.

**ಇಂದಿರೆ--** ಕಾಗದವನ್ನು ಬಿಚ್ಚಿ ಓದಿಕೊಂಡು ''ಜನನೀ! ನಾನು ನದಿಯಲ್ಲಿ ಬಿದ್ದು ಹೋದೆನೆಂದು ಆ ಅಂತಃಪುರದಲ್ಲಿ ತಿಳಿಯಿತಂತೆ. ನಾನು ಅಸ್ವಸ್ಥೆಯಾಗಿದ್ದಲ್ಲಿ ಕೆಲವು ದಿನಗಳು ಅವರ ಬಳಿಯಲ್ಲಿ ಇದ್ದು ಬರಬಹುದೆಂದು ಬರೆದಿರುತ್ತಾರೆ.'' ಎಂದು ಹೇಳಿದಳು.

**ಮುರಳಾದೇವಿ—** ಆ ಕಾಗದವನ್ನು ನಾನು ನೋಡಬಹುದೇ? ನನ್ನ ಸೊಸೆಯ ಕೈಬರಹವನ್ನು ನೋಡಿ ಎಷ್ಟೋ ಕಾಲವಾಯಿತು.

ಈ ಮಾತನ್ನು ಕೇಳಿ ಇಂದಿರೆಯು ಆ ಪತ್ರವನ್ನು ರಾಜಮಾತೆಗೆ ಕೊಟ್ಟಳು. ಆಕೆ ಅದನ್ನೆಲ್ಲಾ ಸಾಂಗವಾಗಿ ಓದಿಕೊಂಡಳು. ಹಾಗೆ ಓದುವುದು ತನಗೆ ಗೌರವಹಾನಿಯೆಂಬ ಭಾವವೇ ಆಕೆಯ ಮನಸ್ಸಿಗೆ ಸ್ಫುರಿಸಲಿಲ್ಲ. ಕುಟಿಲ ಸ್ವಭಾವದವರಿಗೆ ಅಂತಹ ಸೂಕ್ಷ್ಮಬುದ್ಧಿಯು ಹೇಗೆ ಬರುವುದು? ಹೇಗಾದರೂ ಪರರನ್ನು ಹಿಂಸಿಸಬೇಕೆಂಬುದೇ ಅವರ ಮನೋಧರ್ಮವು. ಅಂತಹ ನಿಯಮವುಳ್ಳವರು ಒಂದು ಗುಂಪಾಗಿ ಸೇರುವುದುಂಟು. ಅವರಿಂದ ಲೋಕಕ್ಕೆ ಉಂಟಾಗುವ ಕೆಡುಕು ಇಷ್ಟೆಂದು ಹೇಳಲಾಗದು. ಮುರಳಾದೇವಿಗೆ ಫಲ್ಗುನನು ಸಹೃದಯನು. ಕೌಟಿಲ್ಯದಲ್ಲಿ ಅವರ ಸಮಾನ ಯಾರೂ ಇಲ್ಲ.

''ತನಗೆ ಅಪಾಯವೇನೂ ಸಂಭವಿಸಲಿಲ್ಲವೆಂತಲೂ, ಸುಖವಾಗಿ ಈಜಿಕೊಂಡು ಅರಮನೆಯನ್ನು ಸೇರಿದೆನೆಂತಲೂ, ತನ್ನ ವಿಷಯದಲ್ಲಿ ಅಷ್ಟು ಕನಿಕರವನ್ನು ತೋರಿದುದಕ್ಕಾಗಿ ತಾನು ದೇವಿಗೆ ತುಂಬ ಬಾಧ್ಯಳಾಗಿರುವೆನೆಂತಲೂ ಪತ್ರವನ್ನು ಬರೆದು ರಾಜಮಾತೆಗೆ ತೋರಿಸಿ, ಇಂದಿರೆಯು ಅದನ್ನು ನೀಲವೇಣಿಯ ಕೈಯಲ್ಲಿ ಕೊಟ್ಟಳು.

ಇತ್ತ ಹೇಮಪ್ರಭಾ ದೇವಿಯು ವಿಶ್ರಾಂತಿನಿಲಯದಲ್ಲಿ ಕುಳಿತು ಏನೇನೋ ಆಲೋಚಿಸುತ್ತಿದ್ದಳು. ದೇವಿಯವರಿಗೆ ಏನು ವ್ಯಸನವಿರಬಹುದೆಂದು ದಾಸಿ,

ಯರು ಒಂದು ಕಡೆ ಸೇರಿ ಮಾತನಾಡಿಕೊಳ್ಳುತ್ತಿದ್ದರು. "ಪುನರ್ವಿವಾಹಕ್ಕೆ ಮುಂದೆ ಭಲ್ಲೂಕವು ಒಪ್ಪಲಿಲ್ಲವೇನೋ!" ಎಂದು ಒಬ್ಬಳು ನುಡಿದಳು. ಇಂದಿರೆಯು ಹೊಳೆಯಲ್ಲಿ ಬಿದ್ದಳೆಂಬ ಸಂಗತಿಯನ್ನು ಕೇಳಿ ವ್ಯಸನ ಪಡುತ್ತಿರಬಹುದೆಂದು ಮತ್ತೊಬ್ಬಳು ಸೂಚಿಸಿದಳು. ತನ್ನ ಪಾತಿವ್ರತ್ಯವನ್ನು ಕಳೆದುಕೊಳ್ಳಲು ಇಷ್ಟವಿಲ್ಲದೆ ಯೋಚಿಸುತ್ತಿರಬಹುದೆಂದು ಮೂರನೆಯವಳು ಉಸುರಿದಳು. ಹೀಗೆ ಆ ದಾಸಿಯರು ತಮತಮಗೆ ತೋರಿದ ಕಾರಣಗಳನ್ನು ವ್ಯಕ್ತಪಡಿಸುತ್ತಿರಲು ನೀಲವೇಣಿಯು ಬಂದಳು. ಹೇಮಪ್ರಭಾ ದೇವಿಯು ಉನ್ಮತ್ತಳಂತೆ ತಾನೇ ಎದ್ದು ಹೋಗಿ ನೀಲವೇಣಿಯ ಕೈಯಲ್ಲಿದ್ದ ಕಾಗದವನ್ನು ತೆಗೆದುಕೊಂಡು ಓದಿದಳು. ಮನಸ್ಸಿಗೆ ಸ್ವಲ್ಪ ತೃಪ್ತಿಯಾಯಿತು. ಆ ಪತ್ರದಲ್ಲಿ ಮತ್ತೊಂದು ಚೀಟಿಯಿದ್ದಿತು. ಇತರರ ಕಣ್ಣಿಗೆ ಬೀಳದಂತೆ ಆ ಚೀಟಿಯನ್ನು ಬಚ್ಚಿಟ್ಟು ಮಲಗುವ ಮನೆಗೆ ಹೋಗಿ ಅಲ್ಲಿ ಓದಿಕೊಂಡಳು. ಅದರಲ್ಲಿ ಹೀಗೆ ಬರೆದಿದ್ದಿತು:—

"ಪ್ರಿಯಜನನೀ! ಈಗೀಗ ನನ್ನ ಕಾರ್ಯಸಿದ್ಧಿಗೆ ದೈವವು ಹಾದಿ ತೋರಿಸುತ್ತಿದ್ದಾನೆ. ಇದಕ್ಕೆ ಫಲ್ಗುಣನು ವಿಘ್ನಕಾರಿ. ಈ ಸ್ಥಳದಲ್ಲಿಯೇ ಪರೀಕ್ಷಿಸ ಬೇಕಾಗಿರುವುದು. ಆ ಸಮಯದಲ್ಲಿ ಅವನು ಇಲ್ಲಿ ಇರಕೂಡದು. ಅವನನ್ನು ಬೇರೆ ಕೆಲಸದ ಮೇಲೆ ಕಳುಹಿಸಲು ಯತ್ನಿಸಿರುವೆನು. ತಾವು ದೇಹಾರೋಗ್ಯಕ್ಕಾಗಿ ಕಾಳೀಘಟ್ಟಕ್ಕೆ ಪ್ರಯಾಣವನ್ನು ಸಿದ್ಧಮಾಡಿರಿ. ನನ್ನ ಯತ್ನದಿಂದ ಅವನು ಹೊರಟು ಹೋದರೆ ನೀವು ಪ್ರಯಾಣಮಾಡ ಬೇಕಾದುದಿಲ್ಲ." ಓದಿದ ಕೂಡಲೇ ಚೀಟಿಯನ್ನು ಹೇಮಪ್ರಭಾದೇವಿಯು ಹುತಾಶನನ ಪಾಲುಮಾಡಿ ಸ್ವಸ್ಥಚಿತ್ತಳಾಗಿ ಹೊರಗೆ ಬಂದಳು. ಮದನಪಾಲನು ಒಂಟಿಯಾಗಿ ಬರುತ್ತಿರುವುದನ್ನು ಕಂಡಳು.

ರಾಜನು ಒಳಕ್ಕೆ ಬಂದು ಯೋಗಕ್ಷೇಮದ ಮಾತುಗಳನ್ನು ಪೂರೈಸಿ ಇಂದಿರೆಯನ್ನು ಕುರಿತು ಪ್ರಸ್ತಾಪಿಸುತ್ತಿದ್ದನು. ಆ ಸಂದರ್ಭದಲ್ಲಿ ಹೇಮಪ್ರಭಾ ದೇವಿಯು "ಕಾಳೀಘಟ್ಟದಲ್ಲಿ ಒಬ್ಬ ಘನವೈದ್ಯನಿರುವನಂತೆ. ವರ್ತಕನ ಮನೆಯ ಸ್ತ್ರೀಯರು ನನಗೆ ಅಲ್ಲಿಂದ ಔಷಧವನ್ನು ತರಿಸಿಕೊಟ್ಟಿರುವರು. ಅದನ್ನು ಈಗ ನಾನು ಸೇವಿಸುತ್ತಿದ್ದೇನೆ. ಆ ವೈದ್ಯನಲ್ಲಿಗೆ ಹೋಗುವುದು ಒಳ್ಳೆಯದೆಂದು ಹೇಳುತ್ತಾರೆ. ಹಾಗೆ ಹೋಗಬೇಕಾದರೆ ನೀವು ಕೂಡ ಅಲ್ಲಿಗೆ ಬಂದು ಬೇರೆ ಸೌಧದಲ್ಲಿದ್ದು ನನಗೆ ಸಹಾಯ ಮಾಡಬೇಕಾಗುವುದು. ನಿಮ್ಮ ಹಿಂದೆ ಫಲ್ಗುಣನು ಬಂದರೆ ನನಗೆ ಬಹಳ ಸಹಾಯವಾಗುವುದು. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?" ಎಂದು ಮದನಪಾಲನನ್ನು ಕೇಳಿದಳು.

ಮದನಪಾಲನಿಗೆ ಮದುವೆಯ ಹುಚ್ಚು ಹಿಡಿದುದು ಮೊದಲು ಹೇಮಪ್ರಭಾ ದೇವಿಯು ಇಷ್ಟು ಸಲಿಗೆಯಿಂದ ಮಾತನಾಡಿರಲಿಲ್ಲ. ಸ್ವಲ್ಪ ಸ್ವಲ್ಪವಾಗಿ ತನ್ನ ವಶವಾಗುತ್ತಿರುವಳೆಂದು ಭಾವಿಸಿದನು. "ಇಷ್ಟು ಕಾಲ ಬಂಧುಗಳ ಮಧ್ಯದಲ್ಲಿ ವಾಸಿಸುತ್ತ ಪತಿಯನ್ನೂ, ಪುತ್ರಿಯನ್ನೂ ಕಳೆದುಕೊಂಡ ಈ ರಾಣಿಗೆ ಈಗ ಮದುವೆ ಬೇಕಾಯಿತೇ?" ಎಂದು ಜನರು ಆಕ್ಷೇಪಿಸುವರು. ಅಂತಹವರ ಇದಿರಿನಲ್ಲಿ ಸ್ವೇಚ್ಛೆಯಾಗಿ ಮಾತನಾಡಲು ನಾಚಿಕೆಪಟ್ಟು ಕೆಲವು ಕಾಲ ಹೊರಗೆ ಮರೆಯಾಗಿದ್ದು ಜನರನ್ನು ಮರೆಯಿಸಿ ಆ ಮೇಲೆ ಮದುವೆಯಾಗಲು ನಿಶ್ಚಯಿಸಿ ಈ ಪ್ರಯಾಣವನ್ನು ಆಲೋಚಿಸಿರಬಹುದು. ಹಾಗಾದರೆ, ನನ್ನನ್ನು ಕಾಳೀಘಟ್ಟದಲ್ಲಿ ಬೇರೆ ಸೌಧದಲ್ಲಿರಬೇಕೆಂದು ನಿರ್ದಾಕ್ಷಿಣ್ಯವಾಗಿ ಹೇಳಿದುದೇತಕ್ಕೆ? ಹೇಗಾದರೂ ಆಕೆಯ ಇಷ್ಟವನ್ನನುಸರಿಸುವುದು ಉಚಿತವು" ಎಂದು ಕೊಂಚ ಕಾಲ ಗಗನಾಂತಃಪುರದಲ್ಲಿ ಚರಿಸುತ್ತಿದ್ದು "ದೇವಿ! ನಿನ್ನ ಯೋಚನೆಗೆ ಮಾರುಂಟೆ? ರಾಜ್ಯಕಾರ್ಯಗಳ ಅವಸರವನ್ನು ನೋಡಿ ಅಮ್ಮನವರೊಂದಿಗೆ ಆಲೋಚಿಸಿ ಪ್ರಯಾಣವನ್ನು ನಿಶ್ಚಯಿಸುವೆನು" ಎಂದನು.

ರಾಜನು ಹೊರಟುಹೋದ ಮೇಲೆ ಹೇಮಪ್ರಭಾದೇವಿಯು ಇಂದಿರೆಯು ಒರೆದಂತೆ ಪ್ರಯಾಣಕ್ಕೆ ತಕ್ಕ ವಸ್ತುಗಳನ್ನು ಸಿದ್ಧಪಡಿಸುವಂತೆ ಆಜ್ಞಾಪಿಸಿ, ತಾನು ಇಲ್ಲದ ವೇಳೆಯಲ್ಲಿ ತನ್ನ ಅಂತಃಪುರದ ಗೃಹಕೃತ್ಯಗಳನ್ನು ಸರಿಯಾಗಿ ನಡೆಯಿಸಲು ತಕ್ಕ ಏರ್ಪಾಟು ಮಾಡಿದಳು. ಪ್ರಯಾಣವೇಕೆ? ಎಂಬ ಸಂಗತಿಯನ್ನು ವಿಚಾರಿಸಲು ಯಾರಿಗೂ ಧೈರ್ಯವಿಲ್ಲ. ಪರಂತು, ಹೇಮಪ್ರಭಾ ದೇವಿಯು ಸಮಯ ಬಂದರೆ ಯುದ್ಧಕ್ಕೆ ಕೂಡ ಹಿಂಜರಿಯುವಳಲ್ಲವೆಂದು ಆಕೆಯ ದುರ್ಗದಲ್ಲಿ ವಾಸಿಸುತ್ತಿದ್ದ ಕೆಲವರು ರಾಜಕುಟುಂಬದವರಿಗೆ ಗೊತ್ತಿದ್ದಿತು. ಆದುದರಿಂದ ಆಕೆಯ ಪ್ರಯಾಣಕ್ಕೆ ಯಾವ ಆತಂಕವೂ ಇರಲಿಲ್ಲ. ಆ ದುರ್ಗನಿವಾಸಿಗಳು ಯಾವ ಕಾರಣದಿಂದಲೋ ಮದನಪಾಲನನ್ನು ತಮ್ಮ ದೊರೆಯನ್ನಾಗಿ ಅಂಗೀಕರಿಸಿರಲಿಲ್ಲ. ಈ ವಿಧವಾದ ಚಿತ್ತವೃತ್ತಿಯಿಂದಿದ್ದ 'ವೃದ್ಧ ರಾಜಸಿಂಹಗಳು' ಹೇಮಪ್ರಭಾ ದೇವಿಯ ವಶದಲ್ಲಿರುವರೆಂದು ಮುರಳಾದೇವಿಗೆ ತಿಳಿದಿದ್ದಿತು. ಆ ಕಾರಣದಿಂದಲೇ, ಆಕೆಯು ಯಾವ ದುಷ್ಕಾರ್ಯವನ್ನು ನಡೆಯಿಸಬೇಕಾಗಿದ್ದರೂ ಗೋಪ್ಯವಾಗಿಯೂ, ಎಚ್ಚರಿಕೆಯಿಂದಲೂ ನಡೆಯಿಸುತ್ತಿದ್ದಳು. ಹೇಮಪ್ರಭಾ ದೇವಿಯಾದರೋ ಯಾವ ಚಿಕ್ಕ ಕೆಲಸವನ್ನು ಮಾಡಬೇಕಾಗಿದ್ದರೂ ಇವರಿಗೆ ತಿಳಿಸದೆ ಮಾಡುತ್ತಿರಲಿಲ್ಲ. ಅಂದಿನ ದಿನ ದುರ್ಗದಲ್ಲಿರುವ ಬಂಧುಗಳೊಂದಿಗೆ ಭೋಜನ ಮಾಡಿ, ರಹಸ್ಯಾಲೋಚನೆಯನ್ನು ತೀರಿಸಿಕೊಂಡು ಹೇಮಪ್ರಭಾ ದೇವಿಯು ತನ್ನ ಶಯ್ಯಾಗೃಹದಲ್ಲಿ

ಪ್ರಾರ್ಥನಾದಿಗಳನ್ನು ಮುಗಿಸಿಕೊಂಡು ಮಲಗಿದಳು. ನಿದ್ರೆಯೇ ಬರಲಿಲ್ಲ. ಗಂಟೆಗಳು ಹನ್ನೆರಡಾದುವು. ದೇವಿಯು ಎದ್ದು ದಾಸಿಯನ್ನು ಕರೆದಳು. ನೀಲವೇಣಿಯು ಓಡಿಬಂದಳು. "ನೀಲಾ! ಆ ಬಾಗಿಲು ತೆಗೆದು ನನ್ನ ಹಿಂದೆ ಬಾ" ಎಂದಳು. ಅಲ್ಲಿನ ಬಾಗಿಲುಗಳು ಕಬ್ಬಿಣದ ಸಲಾಕೆಗಳಿಂದ ಮಾಡಲ್ಪಟ್ಟವುಗಳು. ನೀಲವೇಣಿಯು ಬಾಗಿಲನ್ನು ತೆರೆದಳು. ಮುಂದಕ್ಕೆ ಸ್ವಲ್ಪ ನಡೆಯುವುದರೊಳಗಾಗಿ ಮತ್ತೊಂದು ದ್ವಾರವು ಬಂದಿತು. ಅದನ್ನೂ ತೆರೆದು ಹೊರಗೆ ಹೋದರು. ಅಲ್ಲಿ ಹೊಳೆಯಲ್ಲಿ ಇಳಿಯುವುದಕ್ಕೆ ಸ್ಫಟಿಕಶಿಲಾ ಸೋಪಾನಗಳಿದ್ದುವು. ಉಭಯ ಪಾರ್ಶ್ವಗಳಲ್ಲಿಯೂ ಅಗಲವಾದ ಬಂಡೆಗಳು ಆ ಮಾರ್ಗವಾಗಿ ಹೋಗಲು ಕೋಟೆಯ ಗೋಡೆಗಳಿದ್ದುವು. ಅಲ್ಲಿ ಮರಗಳು ಗೋಡೆಗಳ ಮೇಲಿನವರೆಗೂ ಬೆಳೆದಿದ್ದುವು. ದೇವಿಯು ಅಲ್ಲಿಗೆ ಹೋಗಿ ವಿಶಾಲವಾದ ಒಂದು ಪ್ರದೇಶದಲ್ಲಿ ಕುಳಿತುಕೊಂಡು "ನೀಲಾ! ಚಂದ್ರಕಿರಣಗಳಿಂದ ಥಳಥಳಿಸುತ್ತಿರುವ ಈ ಸ್ಥಳವು ಎಷ್ಟು ಮನೋಹರವಾಗಿರುವುದು ನೋಡು! ನಿದ್ರೆ ಬರುವ ವರೆಗೂ ಇಲ್ಲಿಯೇ ವಿಶ್ರಮಿಸುವೆನು. ನೀನು ಕೂಡಾ ಒಂದುಕಡೆ ಮಲಗಿಕೋ" ಎಂದಳು. ದೇವಿಯುವರಿಗೆ ಕಾವಲಾಗಿರ ಬೇಕೆಂದು ನೆನಸಿ ಮಲಗಿದ ನೀಲವೇಣಿಯು ಸ್ಮೃತಿಯಿಲ್ಲದೆ ನಿದ್ರೆ ಹೋದಳು. ದೇವಿಯು ಪ್ರಕೃತಿ ಸೌಂದರ್ಯವನ್ನು ನೋಡುತ್ತಾ ಏನೋ ಆಲೋಚಿಸುತ್ತಿರುವಲ್ಲಿ ಯಾರೋ ತನ್ನ ಕಡೆಗೆ ಬರುತ್ತಿರುವುದನ್ನು ಕಂಡಳು. ಆ ವ್ಯಕ್ತಿಯು ತನಗೆ ಒಂದು ಗಜ ದೂರದಲ್ಲಿರುವಾಗ "ಅಲ್ಲಿಯೇ ನಿಲ್ಲು. ನೀನು ಯಾರು?" ಎಂದು ಗರ್ಜಿಸಿ ಕೇಳಿದಳು.

**ವ್ಯಕ್ತಿ—** ಮಹಾರಾಜ್ಞೀ! ನಾನೊಬ್ಬ ಸನ್ಯಾಸಿ. ಈ ನದೀ ತೀರದಲ್ಲಿ ಜಪವನ್ನಾಚರಿಸುತ್ತಿದ್ದು ದಾರಿ ತಪ್ಪಿ ಇಲ್ಲಿಗೆ ಬಂದೆನು.

ಆ ಸನ್ಯಾಸಿಯ ಕಂಠಧ್ವನಿಯು ತನಗೆ ಬಹಳ ಪರಿಚಯವಿದ್ದಂತೆ ದೇವಿಗೆ ತೋರಿತು. ಸಮೀಪಕ್ಕೆ ಹೋಗಿ ಮುಖವನ್ನು ದೃಷ್ಟಿಸಿ ನೋಡಿ "ಹಾ! ನಾಥಾ" ಎಂದು ಕೂಗಿಕೊಳ್ಳುತ್ತಾ ಬಂಡೆಯ ಮೇಲೆ ಮೂರ್ಛಿತಳಾಗಿ ಬಿದ್ದಳು. ಅಷ್ಟರಲ್ಲಿ ಆ ಸನ್ಯಾಸಿಯು ಹಿಡಿದುಕೊಂಡು ಮೆಲ್ಲನೆ ಬಂಡೆಯ ಮೇಲೆ ಮಲಗಿಸಿ ದೇಹವನ್ನೆಲ್ಲಾ ತಡವಿ, ಆಕೆಯ ಅಂಗಾಲಿನಲ್ಲಿದ್ದ ಧೂಳಿಯನ್ನೆಲ್ಲಾ ತನ್ನ ಕರವಸ್ತ್ರದಿಂದ ಒರೆಸಿ ಆಕೆಯ ಕಿವಿಯಲ್ಲಿ "ಪ್ರೇಯಸೀ! ವೀರ ರಮಣಿಯಾದ ನೀನು ಹೀಗೆ ಮೂರ್ಛೆಯನ್ನು ಹೊಂದ ಬಹುದೇ? ಈ ಜನದ ಸುಖವು ನಿನ್ನ ಮೇಲೆ ಆಧಾರಪಟ್ಟಿರುವುದಲ್ಲವೇ? ಶೀಘ್ರದಲ್ಲಿಯೇ ನಿನ್ನ ಕಷ್ಟಗಳು ಪರಿಹಾರವಾಗುವುವು. ನಿನ್ನ ಮಧುರ ವಚನಾಮೃತ ಪಾನಕ್ಕಾಗಿ ಇಲ್ಲಿಗೆ ಬಂದೆನು. ನನ್ನ ದುರದೃಷ್ಟಕ್ಕೆ ತಕ್ಕ ಹಾಗೆ ನೀನೂ ಮೂರ್ಛಿತಳಾದೆಯಾ?"

ಎಂದು ಹೇಳಿ ತನ್ನ ನಾಮಾಂಕಿತವುಳ್ಳ ಒಂದು ವಸ್ತ್ರವನ್ನು ಹೇಮಪ್ರಭಾ ದೇವಿಯ ಮೇಲಿಟ್ಟು ತನ್ನನ್ನು ಮತ್ತಾರೂ ನೋಡಕೂಡದೆಂಬ ಕಾರಣದಿಂದ ದೂರದಲ್ಲಿದ್ದು ಒಂದು ಪೊದೆಯಲ್ಲಿ ಅವಿತುಕೊಂಡು ನೋಡುತ್ತಿದ್ದನು. ಆತನು ಹೊರಟುಹೋದ ಕೆಲವು ನಿಮಿಷಗಳಿಗೆ ಹೇಮಪ್ರಭಾ ದೇವಿಯು ಮೂರ್ಛೆಯಿಂದೆದ್ದು ನಾಲ್ಕು ಕಡೆಗೂ ನೋಡಿದಳು. "ಆಹಾ! ಈ ದಿನ ನನ್ನ ನಾಥನನ್ನು ನೋಡುವ ಭಾಗ್ಯವು ನನಗೆ ಉಂಟಾಗಿದ್ದರೂ ಆತನೊಂದಿಗೆ ಸಂಭಾಷಿಸಲು ಪುಣ್ಯವಿಲ್ಲದೆ ಹೋಯಿತಲ್ಲಾ! ಏನುಹೇಳಲು ಬಂದಿದ್ದರೋ? ಪಾಪಿಯಾದ ನಾನು ಕ್ಷತ್ರಿಯೋಚಿತ ಧೈರ್ಯವನ್ನು ಕೂಡಾ ಬಿಟ್ಟು ಮೂರ್ಛಿತಳಾದೆನು" ಎಂದು ಬಹು ವಿಧವಾಗಿ ಪರಿತಪಿಸುತ್ತಾ ನೀಲವೇಣಿಯನ್ನು ಕೂಗಿದಳು. ಅವಳು ತತ್‌ಕ್ಷಣವೇ ಎದ್ದು ಬರಲು ಅಂತಃಪುರಕ್ಕೆ ತೆರಳಿದಳು. ಅಲ್ಲಿ ತನ್ನ ಹಾಸಿಗೆಯ ಮೇಲೆ ಕುಳಿತು ಕೊಂಡು "ನನ್ನ ಪತಿಯು ಘೋರಾರಣ್ಯಗಳಲ್ಲಿ ಬಹು ಕಷ್ಟಗಳನ್ನನುಭವಿಸುತ್ತಿರಲು ನಾನು ಸುಖವಾಗಿ ಅಂತಃಪುರವಾಸವನ್ನು ಮಾಡುತ್ತಿರುವುದು ಸಮರ್ಪಕವಾಗಿಲ್ಲ. ಅರಣ್ಯವಾಸದಿಂದ ಬಂದು ನನ್ನನ್ನು ಮಾತನಾಡಿಸಲು ಸಮೀಪಿಸಿದಾಗ ಮೂರ್ಛಿತಳಾಗಿ ಬಿದ್ದೆನು. ಆ ಅವಸ್ಥೆಯಲ್ಲಿರುವಾಗಲೂ ನನ್ನ ಅಂಗಾಲುಗಳನ್ನು ಒರಸಿ ಉಪಚರಿಸಿ ಕಿವಿಯಲ್ಲಿ ಕೆಲವು ಮಾತುಗಳನ್ನು ಹೇಳಿ ವಸ್ತ್ರವನ್ನು ಸಹಾ ಬಿಟ್ಟು ಹೋಗಿರುವರು. ಅವರ ನಿರ್ವ್ಯಾಜಾಂತಃಕರಣವನ್ನು ಏನೆಂದು ವರ್ಣಿಸಲಿ? ದಯಾಮಯಾ! ನೀನು ಎಷ್ಟು ಶಾಂತಸ್ವರೂಪಿಯಾಗಿರುವೆ! ನೀನು ಕಿವಿಯಲ್ಲಿ ಹೇಳಿದ ಮಾತುಗಳಿಗೆ ಪ್ರತ್ಯುತ್ತರವನ್ನು ಸಹ ಕೊಡಲಾರದೆ ಹೋದೆನು. ಇದು ನನ್ನ ಪಾಪಫಲವಲ್ಲವೇ?" ಎಂದು ವಿಲಪಿಸುತ್ತಾ ರಾತ್ರಿಯನ್ನು ಕಳೆದಳು.

ಮರುದಿನ ಹೇಮಪ್ರಭಾ ದೇವಿಯು ತನ್ನ ಗುಪ್ತಾವಲೋಚನೆಯ ಸಭೆಗೆ ಸೇರಿದ ಬಂಧುವರ್ಗದ ಯೋಧರನ್ನು ಕರೆಯಿಸಿ ರಾತ್ರಿ ನಡೆದ ವೃತ್ತಾಂತವನ್ನು ಸಮಗ್ರವಾಗಿ ಹೇಳಿದಳು. ಅವರೆಲ್ಲರೂ ಸಂತೋಷಾಂಬುಧಿಮಗ್ನರಾಗಿ ನಿಮಿಷಮಾತ್ರ ಮೌನವನ್ನು ವಹಿಸಿದ್ದರು. ಅನಂತರ ಮುಂದೆ ನಡೆಯಬೇಕಾದ ಕಾರ್ಯಕಲಾಪವನ್ನು ಚರ್ಚಿಸಿದರು.

ಮುರಳಾದೇವಿಯು ಮೊದಲಿಗಿಂತಲೂ ಹೆಚ್ಚು ಆರೋಗ್ಯವಾಗಿದ್ದರೂ ಇನ್ನೂ ಕೋಲಿನ ಆಧಾರವಿಲ್ಲದೆ ನಡೆಯುತ್ತಿರಲಿಲ್ಲ. ಆ ದಿನ ನೃಸಿಂಹ ಜಯಂತಿ. ಬಹಳ ಪುಣ್ಯದಿನ. ರಾಜಮಂದಿರದಲ್ಲಿ ಪೂಜೆಯು ಬಹಳ ಅತಿಶಯವಾಗಿ ನಡೆಯುತ್ತಿದ್ದಿತು. ಬೈರಾಗಿಯು ಇರುವ ಸತ್ರದಲ್ಲಿ ಜನಗಳು ಸಂದಿಲ್ಲದೆ ನೆರೆದಿದ್ದರು. ಅವರಿಗೆ ತೀರ್ಥಪ್ರಸಾದಗಳನ್ನು ಕೊಡುವುದರಲ್ಲಿಯೇ ಆತ

ನಿಗೂ ಆತನ ಶಿಷ್ಯರಿಗೂ ಸರಿಹೋಗುತ್ತಿದ್ದಿತು. ಲಲಿತಕುಮಾರನೂ, ಮದನ ಪಾಲನೂ ವಿಧವಿಧ ದಾನಗಳನ್ನು ಕೊಟ್ಟರು. ರಾತ್ರಿ ಭೋಜನಕ್ಕೆ ಹೇಮ ಪ್ರಭಾ ದೇವಿಯನ್ನು ಬರಹೇಳಿ ಕಳುಹಿಸಿರುವೆನೆಂದು ರಾಜನಾದ ಮದನಪಾಲ ನು ತಾಯಿಗೆ ತಿಳಿಸಿದನು. ''ಇಂದಿರೆ! ರಾತ್ರಿ ಭೋಜನಕ್ಕೆ ನಿಮ್ಮ ರಾಣಿಯು ಬರುವಳು. ಆಕೆಗೆ ಇಷ್ಟವಾದ ಅಡಿಗೆಗಳನ್ನು ಸಿದ್ಧಪಡಿಸಲು ಪರಿಚಾರಕರಿಗೆ ತಿಳಿಸೆಂದು ರಾಜಮಾತೆಯು ಆಜ್ಞಾಪಿಸಿದಳು. ಇಂದಿರೆಯು ತನ್ನ ಕಾರ್ಯ ಗಳನ್ನು ಶೀಘ್ರವಾಗಿ ಮುಗಿಸಿಕೊಂಡು ದುರ್ಗದಲ್ಲಿರುವ ಪ್ರಾಸಾದಗಳನ್ನು ನೋಡಲು ರಾಜಮಾತೆಯ ಅನುಮತಿಯನ್ನು ನಿರೀಕ್ಷಿಸುತ್ತ ಆಕೆಯ ಇದಿರಿಗೆ ನಿಂತಳು.

**ಮುರಳಾ ದೇವಿ—** ಬಾಲೆ! ನೀನು ಏನೋ ಕೋರಿಕೆಯನ್ನಿಟ್ಟು ಕೊಂಡು ನನ್ನ ಸಮ್ಮುಖದಲ್ಲಿ ನಿಂತಿರುವ ಹಾಗೆ ತೋರುತ್ತಿದೆ. ಅದೇನು?

**ಇಂದಿರೆ—** ಜನನೀ! ಇಂದಿನ ದಿನ ನಮ್ಮ ರಾಜಭವನವನ್ನೆಲ್ಲ ಅಲಂಕ ರಿಸಿರುವರು. ಆ ಅಲಂಕಾರವನ್ನು ನೋಡುವುದಕ್ಕಾಗಿ ಸಖಿಯರೆಲ್ಲರೂ ಹೋಗುತ್ತಿರುವರು. ನನಗೂ ಅವರೊಡನೆ ಹೋಗಬೇಕೆಂದು ಕುತೂ ಹಲವಿರುವುದು.

**ಮುರಳಾದೇವಿ—** ಆಗಲಿ! ಅವರ ಹಿಂದೆ ಹೋಗಿ ಬರಬಹುದು. ಆದರೆ, ಹಳೆಯ ಪ್ರಾಸಾದಗಳಿರುವ ಕಡೆಗೆ ಮಾತ್ರ ಹೋಗಬೇಡ. ಅಲ್ಲಿ ಹಗಲಿನಲ್ಲಿಯೂ ಜನರು ಸಂಚರಿಸುವುದಿಲ್ಲ. ಆ ಪ್ರದೇಶಗಳು ಭಯಂಕರವಾದುವುಗಳು. ನಿನ್ನ ಹಿಂದೆ ತಾರೆಯನ್ನು ಕರೆದುಕೊಂಡು ಹೋಗು.

ತಾರೆಯು ಇಂದಿರೆಗೆ ಬಹಳ ವಿಶ್ವಾಸಿನಿಯಾದ ಸಖಿ. ಅವಳು ಇಂದಿರೆಯ ವಿಷಯವಾಗಿ ಬಹಳ ಜಾಗರೂಕಳಾಗಿರುವಳೆಂದು ರಾಜಮಾತೆಯ ಅಭಿಪ್ರಾಯ. ನಿರ್ಮಲಹೃದಯರಿಗೆ ಪರರ ನಂಬುಗೆಯಿಂದೇನು? ಅವರಿಗೆ ಒಂದು ವೇಳೆ ಕಷ್ಟವು ಪ್ರಾಪ್ತವಾದರೂ ದೈವವು ಪರಿಹಾರಮಾಡುವುದು. ಅಂತಹ ನಿಮ್ಮಳ ಚಿತ್ತವು ರಾಜಮಾತೆಗೆ ಹೇಗೆ ಬಂದೀತು? "ನೀಚನಿಗೆ ಐಶ್ವರ್ಯ ಬಂದರೆ ಸದ್ಗುಣಗಳು ಅವನನ್ನು ಹೇಗೆ ಸೇರುವುವು?" ಎಂಬ ಗಾದೆಯು ರಾಜಮಾ ತೆಯ ವಿಷಯದಲ್ಲಿ ಸಾರ್ಥಕವಾಗಿದ್ದಿತು. ಇಂದಿರೆಯು ಮಹಾ ಸಂಭ್ರಮ ದಿಂದ ತಾರೆಯೊಡನೆ ಹೊರಟು ವನಗಳನ್ನು ಸುತ್ತುತ್ತ ಕೊನೆಗೆ ಸ್ವರ್ಗಸ್ಥನಾದ ತನ್ನ ತಾತನ ಶಯ್ಯಾಗೃಹವಿರುವ ಸ್ಥಳಕ್ಕೆ ಬಂದಳು. ಅಲ್ಲಿ ವಿಧವಿಧವಾದ ವೃಕ್ಷಗಳು ಸೊಂಪಾಗಿ ಬೆಳೆದಿದ್ದುವು. ಯಾವ ಅಲಂಕಾರವೂ ಇಲ್ಲದೆ ಹಾಳು ಬಿದ್ದಿದ್ದ ಆ ಸ್ಥಳವು ಪ್ರೇಕ್ಷಕರಿಗೆ ಬಹಳ ಆಶ್ಚರ್ಯ ದುಃಖಗಳನ್ನುಂಟು

ಮಾಡುತ್ತಿದ್ದಿತು. ಭಕ್ತರು ಎಷ್ಟು ಕಷ್ಟಗಳನ್ನು ಅನುಭವಿಸುತ್ತಿದ್ದರೂ ಕಾಲಕಾಲದಲ್ಲಿ ಭಗವಂತನನ್ನು ಸ್ಮರಿಸಿ ಆತ್ಮಾರ್ಪಣೆ ಮಾಡಿಕೊಳ್ಳುವಂತೆ, ಬರಿಯ ಪ್ರಕೃತಿಯ ಸಹಾಯದಿಂದಲೇ ಅಲ್ಲಿ ಬೆಳೆದಿದ್ದ ತರುಲತಾಗುಲ್ಮಾದಿ ಗಳು ತಮ್ಮ ಹೃದಯಗಳನ್ನು ಪರಮಾತ್ಮನಿಗೆ ಅರ್ಪಿಸುತ್ತಿದ್ದುವು. ಆ ಪ್ರದೇಶ ದಲ್ಲಿದ್ದ ಮಾರ್ಗಗಳು ಜನಸಂಚಾರವಿಲ್ಲದೆ ಮುಳ್ಳುಗಳಿಂದ ತುಂಬಿದ್ದುವು. ಅಲ್ಲಿಗೆ ಬಂದ ಕೂಡಲೇ ತಾರೆಗೆ ಸ್ವಲ್ಪ ಭಯವುಂಟಾಯಿತು. ಈ ಭಯಕ್ಕೆ ತಕ್ಕ ಹಾಗೆ ಸೂರ್ಯನೂ ಅಸ್ತಮಿಸಿದನು. "ಆ ಸೌಧದೊಳಗಿನ ಕಿಟಿಕಿಗಳನ್ನು ನೋಡಿ ಸತ್ತ ರಾಜನು ಅಲ್ಲಿ ನಿಂದಿರುವನೇನೋ! ಇಲ್ಲದಿದ್ದರೆ ಮುಚ್ಚಿದ್ದ ಕಿಟಿಕಿಗಳು ತೆರೆದುಕೊಂಡಿರಲು ಕಾರಣವೇನು?" ಎಂದು ಜನಗಳು ಹೇಳಿಕೊ ಳ್ಳುತ್ತಿದ್ದರು. ಗಾಳಿಯ ಹೊಡೆತದಿಂದ ಅವು ತೆಗೆದುಕೊಂಡಿರಬಹುದೆಂದು ಯಾರಿಗೂ ಸ್ಫುರಿಸಲಿಲ್ಲ. "ಇಂದಿರೆ! ಇಷ್ಟು ಕತ್ತಲೆಯಲ್ಲಿ ಆ ಪ್ರಾಸಾದದಲ್ಲಿ ಹೋಗಲು ಸಾಧ್ಯವೇ?" ಎಂದು ತಾರೆಯು ಕೇಳಿದಳು.

**ಇಂದಿರೆ—** ತಾರಾ! ಇದೇ ಸರಿಯಾದ ಸಮಯ. ನನ್ನ ಮೇಲೆ ನಿನಗೆ ದಯೆಯಿರುವುದು ನಿಜವಾದರೆ ಆ ಬೀಗದ ಕೈಯನ್ನು ಇತ್ತ ಕೊಡು. ಕಾಲ ಹರಣ ಮಾಡಬೇಡ. ನಾನು ಅಲ್ಲಿಗೆ ಹೋಗಿ ಬರುವೆನೆಂಬ ಧೈರ್ಯವಿದೆ. ನಾನು ಹಿಂತಿರುಗಿ ಬರುವವರೆಗೂ ನೀನು ಇಲ್ಲಿಯೇ ಇರು.

**ತಾರೆ—** "ಅಮ್ಮಾ! ಹಾಗನ್ನಬೇಡ. ಈ ಸಂಗತಿಯು ಫಲ್ಗುನನಿಗೆ ತಿಳಿ ದರೆ ತಲೆ ಹಾರಿ ಹೋಗುವುದು. ಈ ಕಾರ್ಯದಿಂದ ನಿನಗೆ ಏನಾದರೂ ಉಪ ಯೋಗವಾದರೆ, ನಾನು ಸತ್ತರೂ ವ್ಯಸನಪಡಲಾರೆನು. ಯಾರಾದರೂ ಈ ಮಾರ್ಗದಲ್ಲಿ ಬಂದರೆ ಸಿಳ್ಳುಹಾಕುವೆನು. ನೀನು ಬಾಗಿಲು ಮುಚ್ಚಿಕೊಂಡಿರು. ನಾನು ಒಂದು ಕಡೆ ಹೊರಗೆ ಅವಿತುಕೊಂಡಿದ್ದು ಬಳಿಕ ಇಬ್ಬರೂ ಸೇರಿ ಪೊದೆ ಗಳಲ್ಲಿ ತೂರಿ ಹೋಗೋಣ. ಅಲ್ಲಿ ನಿನಗೆ ಒಂದೂ ದೊರೆಯಲಾರದೆಂದು ನಂಬು ತ್ತೇನೆ. ಅಲ್ಲಿ ಅನೇಕ ಪರಿಶೋಧಕರು ಬಂದು ಪರೀಕ್ಷಿಸಿರುವರು. ಆದರೂ ನಿನ್ನ ಆಸೆಯನ್ನು ವ್ಯರ್ಥಮಾಡಲು ನನಗೆ ಇಷ್ಟವಿಲ್ಲ. ಹೋಗು" ಎಂದು ಹೇಳಿ ಬೀಗದ ಕೈಯನ್ನು ಕೊಟ್ಟಳು.

ಇಂದಿರೆಯು ತತ್‌ಕ್ಷಣವೇ ಬಾಗಿಲು ತೆಗೆದು ಮಂದಿರವನ್ನೆಲ್ಲ ಪರಿಶೋ ಧಿಸಿದಳು. ಅಲ್ಲೇನೂ ಕಾಣಲಿಲ್ಲ. ಭೂಮಿಯನ್ನು ಪರೀಕ್ಷಿಸುತ್ತ ನಿಂತಳು. ಇಟ್ಟಿಗೆಗಳಂತೆ ಚಂದ್ರಕಾಂತ ಶಿಲೆಗಳು ಹಾಸಲ್ಪಟ್ಟಿದ್ದುವು. ಮತ್ತೇನೂ ತೋರದೆ ಹಾದಿಕೊಡೆಂದು ಭೂದೇವಿಯನ್ನು ಪ್ರಾರ್ಥಿಸಿದ ಸೀತೆಯಂತೆ, ಇಂದಿರೆಯು ತದೇಕ ಧ್ಯಾನಪರಳಾಗಿ ತೀವ್ರದೃಷ್ಟಿಯಿಂದ ಭೂಮಿಯನ್ನು

ನೋಡುತ್ತಿರಲು, ಒಂದು ಕಡೆ ಹಾಸಿದ್ದ ಕಲ್ಲುಗಳಿಗಿಂತ ಒಂದು ಕಲ್ಲು ಎತ್ತರವಾಗಿದ್ದಿತು. ಅದನ್ನು ತನ್ನ ಗುಪ್ತ ಖಡ್ಗದಿಂದ ಎತ್ತಿದಳು. ಅದು ಸುಲಭವಾಗಿ ಬಂದಿತು. ಅದರ ಕೆಳಗೆ ಒಂದು ಹಿತ್ತಾಳೆಯ ಡಬ್ಬಿಯು ಗೋಚರವಾಯಿತು. ಅದನ್ನು ಎತ್ತಿ ಇಂದಿರೆಯು ತನ್ನಲ್ಲಿ ಭದ್ರ ಪಡಿಸಿಕೊಂಡು ಎಂದಿನಂತೆ ಬೀಗವನ್ನು ಹಾಕಿ ಹೊರಗೆ ಬಂದಳು. ಅವಳಿಗೆ ಅಲ್ಲಿ ಏನೂ ದೊರೆಯಲಿಲ್ಲವೆಂದು ತಾರೆಯು ನಿಶ್ಚಯಿಸಿದಳು. ಇಬ್ಬರೂ ಅಂತಃಪುರವನ್ನು ಬೇಗನೆ ಸೇರಿದರು. ಇಂದಿರೆಯು ತನ್ನ ಕೊಟ್ಟಡಿಯೊಳಕ್ಕೆ ಹೋಗಿ ಬಾಗಿಲು ಮುಚ್ಚಿಕೊಂಡು ಡಬ್ಬಿಯನ್ನು ತೆರೆದಳು. ಅದರಲ್ಲಿ ಒಂದು ಚೀಟಿಯು ದೊರೆಯಿತು. ದೇಹವೆಲ್ಲವೂ ಬೆವರಿತು. ಕೊಟ್ಟಡಿಯೆಲ್ಲವೂ ಕತ್ತಲೆ ಕವಿದಂತೆ ಕಂಡಿತು. ಮನಸ್ಸನ್ನು ಸ್ಥಿರಪಡಿಸಿಕೊಂಡಳು. ಧೈರ್ಯವನ್ನು ತಾಳಿ ಆ ಚೀಟಿಯನ್ನು ಓದಲಾರಂಭಿಸಿದಳು.

"ಕುಮಾರಾ! ಯಾರೋ ನನ್ನನ್ನು ಕೊಲ್ಲುವಂತೆ ಸ್ವಪ್ನ ಕಂಡೆನು. ಏತಕ್ಕಾಗಿಯೋ ಭಯವಾಗುತ್ತಿದೆ. ನನ್ನ ಎದೆಯಲ್ಲಿ ಶೂಲೆಯು ಆರಂಭವಾಗಿದೆ. ಸಹಿಸಲಶಕ್ಯವಾಗಿರುವುದು. ನೀನು ತತ್‌ಕ್ಷಣ ಹೊರಟು ಬಾ."

ಇಂತು ನಿನ್ನ ತಂದೆ ಪ್ರತಾಪ.

"ಇಷ್ಟು ಕಾಲಕ್ಕೆ ಪರಮೇಶ್ವರನ ದಯೆಯು ಉಂಟಾಯಿತು. ನನ್ನ ತಾತನು ತನ್ನ ಆಪತ್ಕಾಲದಲ್ಲಿ ಮಗನಿಗೆ ಬರೆದ ಕಾಗದವು ಇದೆಂದು ತೋರುವುದು. ಇದನ್ನು ಜಾಗ್ರತೆ ಪಡಿಸುವೆನು" ಎಂದು ಹೇಳುತ್ತಾ ಅದನ್ನು ಭದ್ರ ಪಡಿಸಿದಳು. ತರುವಾಯ ತನ್ನ ಕಾರ್ಯಗಳಲ್ಲಿ ಮಗ್ನಳಾದಳು. ಅಷ್ಟರಲ್ಲಿಯೇ ಬಗ್ಗಿಗಳು ಬಂದು ದ್ವಾರದಲ್ಲಿ ನಿಂತುವು. ಮೊತ್ತಮೊದಲು ರಾಜನೂ, ಲಲಿತಕುಮಾರನೂ ಇಳಿದರು. ತರುವಾಯ ಹೇಮಪ್ರಭಾ ದೇವಿಯ ಬಗ್ಗಿಯು ಮುಂದಕ್ಕೆ ಬಂದಿತು. ಲಲಿತಕುಮಾರನು ಕೈಯನ್ನು ಕೊಡಲು ಅದನ್ನು ಹಿಡಿದುಕೊಂಡು ಹೇಮಪ್ರಭಾ ದೇವಿಯು ಇಳಿದಳು. ಅಂತಃಪುರವನ್ನು ಹೊಕ್ಕು ರಾಜಮಾತೆಯನ್ನು ಕಂಡು ಬಂಧುಗಳೊಡನೆ ಸಂಭಾಷಿಸುವಂತೆ ಹೋಗಿ ಇಂದಿರೆಯನ್ನು ನೋಡಿದಳು. ಇಂದಿರೆಯು ನಾಲ್ಕು ದಿಕ್ಕುಗಳನ್ನೂ ನೋಡಿ ತಾಯಿಗೆ ನಮಸ್ಕರಿಸಿದಳು. ಅವಳನ್ನೆತ್ತಿ ಗಾಢಾಲಿಂಗನೆ ಮಾಡಿಕೊಂಡು, ಶಿರಶ್ಚುಂಬನವನ್ನು ಮಾಡಿ, "ಮಗೂ! ನಿನ್ನ [illegible]ಯಂತೆ ಪ್ರಯಾಣ ಸನ್ನಹ ಮಾಡಿರುವೆನು" ಎಂದು ಹೇಳಿದಳು.

**ಇಂದಿರೆ**— ಜನನೀ! ಪ್ರಯಾಣವು ಆವಶ್ಯಕವಿಲ್ಲ. ಮುಂದೆ ನಿಮಗೆ ಎಲ್ಲವೂ ವಿಶದವಾಗಿ ತಿಳಿಯುವುದು. ನೀವು ಸಂತೋಷವಾಗಿರಬಹುದು.

ಈ ಮಾತನ್ನು ಹೇಳುತ್ತಿರುವಾಗ ತಾರೆಯು ಬಂದುದರಿಂದ ಇಂದಿರೆಯು ಹೊರಟುಹೋದಳು. ಭೋಜನಕ್ಕೆಲ್ಲಾ ಸಿದ್ಧವಾಯಿತು. ಭೋಜನಾನಂತರ ಹರಿಕಥೆಯೂ ನಡೆಯಿತು. ಅದಾದ ಮೇಲೆ ಹೇಮಪ್ರಭಾ ದೇವಿಯು ತನ್ನ ಅರಮನೆಗೆ ಹೋದಳು.

ಮರುದಿನ ಭೋಜನಾನಂತರ ಎಂದಿನಂತೆ ತಾಂಬೂಲವನ್ನು ಕೊಡಲು ಲಲಿತಕುಮಾರನಲ್ಲಿಗೆ ಇಂದಿರೆಯು ಹೋದಳು. ಅದರ ಜತೆಯಲ್ಲಿ ಡಬ್ಬಿಯನ್ನು ಕೊಟ್ಟಳು. ಲಲಿತಕುಮಾರನು ಅದನ್ನು ತಿರುಗಿಸಿ ತಿರುಗಿಸಿ ನೋಡಿ "ಇದು ಭೂಮಿಯಲ್ಲಿ ಹೂಳಲ್ಪಟ್ಟಿದ್ದಂತೆ ತೋರುತ್ತಿದೆ. ನನ್ನ ಪ್ರಿಯಳು ಇದನ್ನು ಹೇಗೆಯೋ ಭೇದಿಸಿ ತಂದಿರುವಳು. ಅಂದಿನ ದಿನ ಬೈರಾಗಿ ಮಹಾತ್ಮನನ್ನು ದರ್ಶಿಸಿದಾಗ ಸಾಕ್ಷಿಗೆ ಉಪಯೋಗಕರವಾದ ವಸ್ತುವು ದೊರೆತ ಮೇಲೆ ಡಿಲ್ಲೀಶ್ವರನನ್ನು ನೋಡೆಂದು ಅಪ್ಪಣೆ ಕೊಡಿಸಿದನು. ಈಗ ಇದು ದೊರೆತಿರುವುದರಿಂದ ಡಿಲ್ಲಿಯ ಪ್ರಯಾಣವನ್ನು ನಿಶ್ಚೈಸಿ ಕೊಳ್ಳುವೆನು"ಎಂದೆಂದು ಕೊಂಡನು.

ಆಲೋಚನಾಮಂದಿರದಲ್ಲಿ ಮದನಪಾಲನೂ, ಮುರಳಾದೇವಿಯೂ, ಲಲಿತಕುಮಾರನೂ ಕುಳಿತಿದ್ದರು. ಫಲ್ಗುನನು ಗಾಳಿಹಾಕುತ್ತಿದ್ದನು.

**ಮುರಳಾದೇವಿ—** ಕುಮಾರ ! ಆ ನಿರ್ಭಾಗ್ಯನಾದ ವಿಕ್ರಮನು ತಂದೆಯನ್ನು ಕೊಂದು ಮರಣ ದಂಡನೆಗೆ ಗುರಿಯಾಗಿದ್ದರೂ ಪುನಃ ಇಲ್ಲಿಗೆ ಹೇಗೆ ಬಂದನು?

**ಮದನಪಾಲ—** ಅಮ್ಮಾ ! ಅವನೋ ಅಲ್ಲವೋ ಯಾವುದನ್ನೂ ನಿರ್ಧರಿಸಿಕೊಳ್ಳದೆ ಡಿಲ್ಲೀಶ್ವರನಿಗೆ ಹೋಗಿ ಹೇಳವುದೆಂತು ? ಅದೊಂದು ವೇಳೆ ಸುಳ್ಳಾದರೆ ಜನರು ನಮ್ಮನ್ನುಪರಿಹಾಸ ಮಾಡುವರು. ಇಷ್ಟಕ್ಕೂ ಆತನು ಸತ್ತು ಹೋದನೆಂಬುದು ನಮಗೆ ತಿಳಿದು ಬಂದಿದೆ. ಒಂದು ವೇಳೆ ಜೀವಿಸಿದ್ದರೂ ನಮ್ಮನ್ನೇನು ಮಾಡಬಲ್ಲನು ? ಇಷ್ಟು ನಿರ್ದಯ ಪ್ರಯತ್ನವು ನನಗೆ ಇಷ್ಟವಿಲ್ಲ. ಇದರ ಮೇಲೆ ನಿಮ್ಮ ಚಿತ್ತ.

**ಮುರಳಾದೇವಿ—** ಕುಮಾರಾ ! ನಿನಗೆ ಪ್ರಪಂಚದ ಜ್ಞಾನವೇ ಇಲ್ಲ. ಅವನು ಇದ್ದರೇನು ? ಹೋದರೇನು ? ನಮಗೆ ಆಪತ್ತು ಬಾರದಂತೆ ಆತ್ಮರಕ್ಷಣೆಯನ್ನು ಮಾಡಿಕೊಳ್ಳ ಬೇಡವೇ ? ಅವನ ಹೆಂಡತಿಯನ್ನುನೀನು ಪುನರ್ವಿವಾಹ ಮಾಡಿಕೊಳ್ಳ ಬೇಕೆಂದಿರುವೆಯಲ್ಲವೇ ? ಅದು ಅವನಿಗೆ ತಿಳಿದರೆ ನಿನ್ನನ್ನು ಸುಮ್ಮನೆ ಬಿಡುವನೆ ? ತರುವಾಯ ನಿನ್ನ ಗತಿಯೇನು ? ತಂದೆಯನ್ನು ಕೊಂದವನಿಗೆ ನಿನ್ನನ್ನು ಕೊಲ್ಲುವುದು ಒಂದು ಕಷ್ಟವೇ ? ಅಂತಹ ನೀಚನನ್ನು ನಾವು ಸುಮ್ಮನೆ ಬಿಡಬಹುದೇ? ನಿನಗೆ ಎಷ್ಟು ಪ್ರಜ್ಞೆ ? ಡಿಲ್ಲೀಶ್ವರನ ಗುಪ್ತಚಾರರು

ಇಲ್ಲಿಗೆ ಬಂದಿದ್ದರೆ ಅವನನ್ನು ಹಿಡಿಯಬಹುದು. ಈ ದೇಶದ ಭಟರು ಅವನಿಗೆ ವಶವರ್ತಿಗಳಾಗುವರು. ಅವನು ದೊರೆತರೆ ಮೃತನಾದ ಡಿಲ್ಲೀಶ್ವರನು ವಿಧಿಸಿದ ಶಿಕ್ಷೆಗೆ ಅವನನ್ನು ಗುರಿಪಡಿಸುವಂತೆ ಈಗಿನ ಸಾರ್ವಭೌಮನಲ್ಲಿ ನಾವು ಯತ್ನ ಮಾಡಬೇಕು. ಆಗ ಇಂದಿರೆಯು ಯಾರೆಂಬುದು ಹೊರಗೆ ಬರುವುದು. ಅವಳು ಇದುವರೆಗೆ ಏನೂ ಅಪರಾಧವನ್ನು ಮಾಡಲಿಲ್ಲ. ಹಿಂದೆ ಒಂದು ರಾತ್ರಿ ಯಾರೋ ಒಬ್ಬನೊಂದಿಗೆ ಮಾತನಾಡಿದಳೆಂಬ ಸಂಶಯ ಮಾತ್ರ ಬಂದಿದೆ. ಅವನೇ ವಿಕ್ರಮನಾಗಿರಕೂಡದೇ? ಹೇಗಿದ್ದರೂ ಸರಿಯೇ, ಡಿಲ್ಲೀಶ್ವರನಿಗೆ ಈ ಸಂಗತಿಯನ್ನು ತಿಳಿಸಿ ಪಡಿಸುವುದು ಆವಶ್ಯಕವು.

**ಮದನಪಾಲ**— ಲಲಿತ! ನಿನ್ನ ಅಭಿಪ್ರಾಯವೇನು?

**ಲಲಿತಕುಮಾರ**— ರಾಜೇಂದ್ರ! ನಾನು ಆ ಕಾಲದಲ್ಲಿ ಕೇವಲ ಚಿಕ್ಕವನಾಗಿದ್ದೆನು. ಈ ಸಂಗತಿಯನ್ನು ಜನರು ಹೇಳಿಕೊಳ್ಳುತ್ತಿದ್ದುದನ್ನು ಕೇಳಿದ್ದೆನು. ಘೋರವಾದ ಸಂಗತಿಯಾದುದರಿಂದ ವಿಶದವಾಗಿ ತಿಳಿಯಲು ನನಗೆ ಇಷ್ಟವಿಲ್ಲದೆ ಹೋಯಿತು. ಈ ವಿಷಯದಲ್ಲಿ ನಾನು ನಿಮ್ಮಿಬ್ಬರ ತೀರ್ಮಾನದಂತೆ ನಡೆಯತಕ್ಕವನೇ ಹೊರತು ನ್ಯಾಯಾನ್ಯಾಯ ವಿಮರ್ಶನೆಯನ್ನು ಮಾಡಲಾರೆನು. ಅಜ್ಜಿಯವರು ಅಪ್ಪಣೆಕೊಡಿಸಿದಂತೆ ಡಿಲ್ಲೀಶ್ವರನ ಚಾರರನ್ನು ಇಲ್ಲಿಗೆ ಕರೆಯಿಸುವುದು ಸೂಕ್ತವೆಂದು ತೋರುತ್ತಿದೆ. ಈ ಕಾರ್ಯಕ್ಕಾಗಿ ನನ್ನನ್ನು ಹೋಗೆಂದರೆ ನಾಳೆಯೇ ಪ್ರಯಾಣವನ್ನು ಬೆಳೆಸುವೆನು. ಬೈರಾಗಿಯ ಸನ್ನಿಧಿಗೆ ಹೋಗಿದ್ದೆನು. ದುಷ್ಟರ ಹಾವಳಿಯನ್ನು ತಗ್ಗಿಸುವುದಕ್ಕೆ ಹಾಗೆ ಮಾಡುವುದೇ ಒಳ್ಳೆಯದೆಂದು ಅವರೂ ಅಪ್ಪಣೆ ಕೊಡಿಸಿದರು. ನಾನು ಡಿಲ್ಲಿಗೆ ಹೊರಟರೆ ಫಲ್ಗುನನೂ ಕೂಡ ನನ್ನ ಹಿಂದೆ ಬರಬೇಕು. ಇಷ್ಟೇ ನನಗೆ ತೋರುವ ಅಭಿಪ್ರಾಯ.

ಈ ಮಾತಿಗೆ ಎಲ್ಲರೂ ಅನುಮೋದಿಸಿದರು. ಲಲಿತಕುಮಾರನು ತನ್ನನ್ನು ಇಷ್ಟು ಪ್ರೇಮಿಸುವನೆಂದು ಫಲ್ಗುನನಿಗೆ ತಿಳಿದಿರಲಿಲ್ಲ. ಈಗ ಸಂತೋಷಭರಿತನಾದನು.

**ಲಲಿತಕುಮಾರ**— ರಾಜೇಂದ್ರ! ಕಾಶೀಘಟ್ಟಕ್ಕೆ ನಿಮ್ಮ ಪ್ರಯಾಣವು ಯಾವಾಗ?

**ಮದನಪಾಲ**—ವೈದ್ಯನು ಒಂದು ತಿಂಗಳಿಗೆ ಆಗುವಷ್ಟು ಔಷಧವನ್ನು ತಾನಾಗಿಯೇ ಕಳುಹಿಸಿರುವನಂತೆ. ಆದರಿಂದ ಗುಣವಾಗದಿದ್ದರೆ ಅಲ್ಲಿಗೆ ಹೋಗಬೇಕಾಗುತ್ತದೆಂದು ಹೇಮಪ್ರಭಾ ದೇವಿಯು ಹೇಳಿ ಕಳುಹಿಸಿರುವಳು.

**ಲಲಿತಕುಮಾರ—** ಸಂತೋಷ. ಏಕೆಂದರೆ, ನಾನು ಇಲ್ಲದಿದ್ದಾಗ ನೀವು ಕೂಡ ಹೊರಡುವುದು ಸರಿಯಲ್ಲ. ನಮ್ಮಿಬ್ಬರಲ್ಲೊಬ್ಬರು ಇಲ್ಲಿರ ಬೇಕು. ಅದು ಕ್ಷೇಮವೆಂದು ನನ್ನ ಅಭಿಪ್ರಾಯ.

# ೧೭ನೆಯ ಅಧ್ಯಾಯ

ಈಗಿನಂತೆ ಆ ಕಾಲದಲ್ಲಿ ಮಾರ್ಗಗಳು ಸರಿಯಾಗಿರಲಿಲ್ಲ. ಕಾಡುಹಾದಿ ಗಳು ಬಹು ಕಠಿಣವಾಗಿದ್ದುವು. ದುಷ್ಟ ಮೃಗಗಳ ಬಾಧೆ ಹೆಚ್ಚು, ಮುಳ್ಳುಗ ಳಂತೂ ಹೇಳಲಶಕ್ಯವಾಗಿದ್ದುವು. ಅಂತಹ ಒಂದು ಮಾರ್ಗದಲ್ಲಿ ಅಶ್ವಾರೂಢರಾದ ಕೆಲವರು ಯೋದ್ಧರು ಪ್ರಯಾಣಮಾಡುತ್ತಿದ್ದರು. ಅವರ ಹಿಂದೆ ಗಾಡಿಗಳಲ್ಲಿ ಸಾಮಾನುಗಳು ಹೋಗುತ್ತಿದ್ದುವು. ರಾವುತರಲ್ಲಿ ಕೆಲವರು ಅಂಗ ರಕ್ಷಕರು. ಮತ್ತೆ ಕೆಲವರು ಯುದ್ಧ ವೀರರೂ ಇದ್ದರು. ಆ ಯುದ್ಧ ವೀರರು ರಾಜ ಕು ಮಾರರಾಗಿದ್ದರು. ಅವರು ಸ್ವಲ್ಪ ಹೆಚ್ಚು ಕಡಮೆ ಸಮ ವಯಸ್ಕರಾಗಿದ್ದರು. ಅವರಲ್ಲಿ ನಕ್ಷತ್ರಗಳ ನಡುವೆ ಚಂದ್ರನಂತೆ ಒಬ್ಬ ರಾಜಪುತ್ರನಿದ್ದನು. ಅವನು ಬಹು ಸುಂದರನು. ಗಂಭೀರಭಾವವುಳ್ಳವನು. ಮುಖವನ್ನು ನೋಡು ತ್ತಲೇ ಅವನು ಅವರಿಗೆಲ್ಲಾ ಅಧಿಕಾರಿಯೆಂಬ ಭಾವವು ಸ್ಫುರಿಸುತ್ತಿದ್ದಿತು. ಅವ ನು ತನ್ನ ಸಾಮಂತರಾಜರೊಂದಿಗೆ ಭಾರತ, ಭಾಗವತಾದಿ ಕಥಾ ಸಂಗ್ರಹಗ ಳನ್ನು ನಡೆಯಿಸುತ್ತಲೂ, ಬೈರಾಗಿ ಮಹಾತ್ಮನ ಮಹಿಮೆಗಳನ್ನು ವರ್ಣಿಸು ತ್ತಲೂ ಪ್ರಯಾಣ ಮಾಡುತ್ತಿದ್ದನು. ಈ ರಾಜಕುಮಾರನು ಆರೆಂಬುದು ವಾಚಕರೇ ಊಹಿಸಲಿ. ಆ ಯೋದ್ಧರು ಕ್ರಮವಾಗಿ ದಿಲ್ಲೀನಗರವನ್ನು ಸೇರಿ ದರು. ಅವರ ಬರುವಿಕೆಯು ಮುಂದಾಗಿಯೇ ತಿಳಿದಿದ್ದುದರಿಂದ ಸಾರ್ವಭೌಮನು ಅವರಿಗೆ ಉಚಿತವಾದ ಸ್ವಾಗತವನ್ನು ಕೊಟ್ಟನು. ಅವರಿಗೆ ತಕ್ಕ ಬಿಡದಿಗ ಳನ್ನು ಏರ್ಪಡಿಸಿದ್ದನು. ಲಲಿತಕುಮಾರನಿಗೆ ಮಾತ್ರ ಸಾರ್ವಭೌಮನ ಅರಮನೆಯಲ್ಲಿಯೇ ವಸತಿಯು ಏರ್ಪಡಿಸಲ್ಪಟ್ಟಿದ್ದಿತು. ಅರಮನೆಯನ್ನು ಸೇರು ತ್ತಲೇ ಲಲಿತಕುಮಾರನು ತನ್ನ ಅಕ್ಕನಾದ ರಾಣೀ ಸಂಯುಕ್ತಾದೇವಿಯನ್ನು ದರ್ಶಿಸಿ, ವಂದಿಸಿ ಉಪಚರಿಸಿದನು. ಉದಯಪುರಿಯ ರಾಜವಂಶದಲ್ಲಿ ಅಂದಿನವರೆ ಗೂ ನಡೆದ ಯಾವದ್ವೃತ್ತಾಂತವನ್ನೂ ಸಾಂಗವಾಗಿ ಹೇಳುವವರೆಗೂ ಆ ರಾಣಿ ಯು ಲಲಿತಕುಮಾರನನ್ನು ಬಿಡಲಿಲ್ಲ. ಈ ಸಂಭಾಷಣೆಯು ಬಹಳ ರಹಸ್ಯ ವಾಗಿ ನಡೆಯಿತು. ಸಾರ್ವಭೌಮನು ಅಂತಃಪುರವನ್ನು ಪ್ರವೇಶಿಸಿ ಲಲಿತ

ಕುಮಾರನನ್ನು ಹುಡುಕಿದನು. ಎಲ್ಲಿಯೂ ಕಾಣಿಸಲಿಲ್ಲ. ಸಂಯುಕ್ತಾ ದೇವಿಯೂ ಲಲಿತಕುಮಾರನೂ ವಿಶ್ರಾಂತಿಮಂದಿರದಲ್ಲಿ ರಹಸ್ಯವಾಗಿ ಮಾತನಾಡುತ್ತಿದ್ದುದನ್ನು ನೋಡಿ ಅಲ್ಲಿಗೆ ಹೋದನು. ಮಹಾರಾಣಿಯ ಕಣ್ಣುಗಳಲ್ಲಿ ಅಶ್ರುಬಿಂದುಗಳು ಬೀಳುತ್ತಿದ್ದುವು. ಸಾರ್ವಭೌಮನು ಭೀತಚಿತ್ತನಾದನು. "ಲಲಿತ! ಏನು ನಡೆದಿದೆ? ಮಹಾರಾಣಿಯು ದುಃಖಿಸಲು ಕಾರಣವೇನು?" ಎಂದು ಕೇಳಿದನು. ಅವರ ಸಂಭಾಷಣೆಯಲ್ಲಿ ತಾನೂ ಸೇರಿದನು. ಮಹಾರಾಣಿಯು ಹೇಮಪ್ರಭಾದೇವಿಗೆ ಉಂಟಾಗಿರುವ ದುಃಖವನ್ನು ವರ್ಣಿಸುತ್ತಾ "ನಾಥಾ! ನಾವು ಜೀವಿಸಿದ್ದೂ ಸುಖದಿಂದಿದ್ದೂ ನನ್ನ ನಾದಿನಿಗೆ ಇಷ್ಟು ಕಷ್ಟಗಳು ಪ್ರಾಪ್ತವಾಗಿರಲು ಸುಮ್ಮನೆ ಇರುವುದು ಹೇಗೆ? ಅವಳ ಕಷ್ಟಗಳನ್ನು ಕೇಳಿದ ಮಾತ್ರದಿಂದ ನನ್ನ ಹೃದಯವು ಒಡೆದುಹೋಗುತ್ತಿರುವುದು. ಆ ಸಾಧ್ವೀಮಣಿಯು ಇಷ್ಟುಕಾಲ ಹೇಗೆ ಜೀವಿಸಿರುವಳೋ ನಾನರಿಯೆ. ನೀವು ಹೇಳಿದ ಸಂಗತಿಗೂ ಈಗ ನನ್ನ ತಮ್ಮನು ವಿಸ್ತರಿಸಿದುದಕ್ಕೂ ಬಹಳ ವ್ಯತ್ಯಾಸವಿದೆ" ಎಂದಳು.

**ಪೃಥ್ವೀರಾಜ**—ಲಲಿತ! ಹಾಗಾದರೆ, ನಾವು ಈಗಲೇ ಆಲೋಚನಾ ಸಭೆಗೆ ಹೋಗೋಣವೇ?

**ಲಲಿತ**—ಭಾವನವರೇ! ನಾವು ಅಷ್ಟು ಅವಸರಪಡ ಬೇಕಾದುದಿಲ್ಲ. ತಮ್ಮ ಆಶ್ರಯದಲ್ಲಿ ಜೀವಿಸುತ್ತಿರುವವರು ತಮ್ಮನ್ನು ಬಿಟ್ಟು ಎಲ್ಲಿಗೆ ಹೋದಾರು? ನಾನು ಆ ಕೆಲಸಕ್ಕಾಗಿಯೇ ಬಂದಿರುವೆನು. ಅದು ಕೇವಲ ರಹಸ್ಯವಾದ ಕೆಲಸ. ಅಕ್ಕನವರು ತಮಗೆ ಎಲ್ಲವನ್ನೂ ಅರಿಕೆಮಾಡುವರು.

ಲಲಿತಕುಮಾರನ ನುಡಿಗಳನ್ನು ಕೇಳಿ ಪೃಥ್ವೀರಾಜನ ಹೃದಯವು ಬೆಣ್ಣೆಯಂತೆ ಕರಗಿತು. "ಲಲಿತ! ಪ್ರಾಣವನ್ನಾದರೂ ಅರ್ಪಿಸಿ, ನನ್ನ ಸೋದರಿಯನ್ನು ರಕ್ಷಿಸುವೆನು; ಯೋಚಿಸಬೇಡ. ನೀನು ನನ್ನಲ್ಲಿ ಸಲಿಗೆಯಿಂದಿರಬೇಕಲ್ಲದೆ ಅನ್ಯಥಾ ಇರಕೂಡದು. ಭೋಜನಕ್ಕೆ ಈಗ ಕಾಲವಾಯಿತು; ನಡೆ, ಊಟಮಾಡೋಣ. ಜೀವಿತೇಶ್ವರೀ! ನೀನು ವ್ಯಸನಪಡದಿರು. ನಾನು ಜೀವಿಸಿರುವ ವರೆಗೂ ನಿನಗೂ ನಿನ್ನವರಿಗೂ ಯಾವ ಕೊರತೆಯೂ ಉಂಟಾಗಲಾರದು. "ಪ್ರಮಾದೋ ಧೀಮತಾಮಪಿ" ಎಂಬಂತೆ ಸರಿಯಾದ ಸಂಗತಿಗಳು ತಿಳಿಯದೆ ಮುಗ್ಧನಾಗಿದ್ದೆನು. ಇನ್ನು ಮೇಲೆ ಎಂದಿಗೂ ಹಾಗಿರಲಾರೆನು" ಎಂದು ಸಮಾಧಾನಗೊಳಿಸಿದನು.

ಭೋಜನ ಕಾಲದಲ್ಲಿ ಲೋಕಾಭಿರಾಮವಾಗಿ ಮಾತನಾಡುತ್ತ ಮೇವಾರ ಸಂಸ್ಥಾನದ ವಿಷಯವು ಪ್ರಸ್ತಾವಕ್ಕೆ ಬಂದಿತು.

**ಪೃಥ್ವೀರಾಜ**—ಲಲಿತ! ನನ್ನ ಅತ್ತೆಯಾದ ಮಂಜುಳಾದೇವಿಯು ಅತಿ ಚಾತುರ್ಯವತಿ. ಸ್ತ್ರೀಯಾದರೂ ರಾಜ್ಯವನ್ನು ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಂಡಿರುವಳೆಂದು ಕೇಳುತ್ತೇನೆ. ರಾಜ್ಯಕ್ಕೆ ಅನರ್ಹನಾಗಿದ್ದರೂ ಹೇಗೋ ಮದನಪಾಲನನ್ನು ರಾಜ್ಯಾಧಿಕಾರಿಯನ್ನಾಗಿ ಮಾಡಿರುವಳು. ನಿಜವಾದ ರಾಜ್ಯಾಧಿಕಾರಿಯು ಹುಟ್ಟಿಲ್ಲದೆ ಹೋದನು. ಆ ಸಂಸ್ಥಾನಕ್ಕೆ ಭಾಗ್ಯಲಕ್ಷ್ಮಿಯಂತಿರುವ ನನ್ನ ಸೋದರೀ ಹೇಮಪ್ರಭೆಯನ್ನು ನೆನೆಸಿಕೊಂಡರೆ ಬಹಳ ಖೇದವಾಗುವುದು. ಈಗ ಬೇರೆ ಹಾದಿಯಲ್ಲಿ ಪ್ರವೇಶಿಸಿರುವಂತೆ ತಿಳಿದು ಬಂದಿದೆ. ದೈವಸಂಕಲ್ಪವು ಹೇಗಿರುವುದೋ ಹಾಗೆ ನಡೆಯುವುದು.” ಎಂದು ಮಾತನಾಡುತ್ತ ಭೋಜನವನ್ನು ಮುಗಿಸಿದರು. ಫಲ್ಗುಣನು ಒಂದು ಮೂಲೆಯಲ್ಲಿ ಕುಳಿತುಕೊಂಡಿದ್ದು ಈ ಸಂಭಾಷಣೆಯನ್ನು ಕೇಳುತ್ತಿದ್ದನು. ಇದು ಮೊದಲನೆಯ ಸಂಭಾಷಣೆಯೆಂದೆಂದುಕೊಂಡನು.

ಸಾರ್ವಭೌಮನು ತನ್ನನ್ನು ಅಭಿಮಾನಿಸಿರುವುದಕ್ಕೆ ಲಲಿತಕುಮಾರನು ತುಂಬಾ ಹರ್ಷಿಸಿದನು. ಮರುದಿನ ಮಂತ್ರಾಲೋಚನಾಸಭೆಗೆ ಹೋಗಿ ಲಲಿತಕುಮಾರನನ್ನು ಕರೆಯಿಸಿದನು. ಆ ಸಭೆಯ ಮಂದಿರವು ಭೂಲೋಕದ ಸ್ವರ್ಗದಂತಿದ್ದಿತು. ಅಮೌಲ್ಯವಾದ ರತ್ನಕಂಬಳಿಗಳು ಅದರಲ್ಲಿ ಹಾಸಲ್ಪಟ್ಟಿದ್ದುವು. ವಿಧವಿಧವಾದ ಆಸನಗಳು ಚೀನಚೀನಾಂಬರಗಳಿಂದೊಡಗೂಡಿದ ದಿಂಡುಗಳೂ ಹೇರಳವಾಗಿದ್ದುವು. ಇದುವರೆಗೆ ಇಂದ್ರಪ್ರಸ್ಥವನ್ನು ಆಳಿದ ಚಕ್ರವರ್ತಿಗಳ ಚಿತ್ರಪಟಗಳು ಮುತ್ತಿನ ತೋರಣಗಳಿಂದ ಅಲಂಕರಿಸಲ್ಪಟ್ಟು ಆ ಮಂದಿರದ ಗೋಡೆಗಳಲ್ಲಿ ನೇತಾಡುತ್ತಿದ್ದುವು. ಈ ಪಟಗಳ ಮಧ್ಯದಲ್ಲಿ ಪೃಥ್ವೀರಾಜನ ಪಿತಾಮಹನಾದ ಆನಂದಪಾಲನ ಪಟವು ಪ್ರಕಾಶಿಸುತ್ತಿದ್ದಿತು. ಅದರ ಪಾರ್ಶ್ವದಲ್ಲಿ ಹದಿನಾರು ವರುಷ ವಯಸ್ಸಿನ ಒಬ್ಬ ಅರಸನ ಪಟವಿದ್ದಿತು. ಆ ಮಂದಿರದ ವೈಭವಾಲಂಕಾರಗಳಿಂದ ಬೆರಗಾಗಿ ಲಲಿತನು ಒಂದು ಚಿತ್ರದ ಬೊಂಬೆಯಂತೆ ನಿಂತು ನೋಡುತ್ತಿದ್ದನು.

**ಸಾರ್ವಭೌಮ**—“ಲಲಿತ! ನೀನು ಇಲ್ಲಿಗೆ ಬಂದ ಮುಖ್ಯ ವಿಷಯವನ್ನು ಮರೆತು ಮುಗ್ಧನಂತಿರುವೆ. ಇಲ್ಲಿ ಬಂದು ನನ್ನ ಪಾರ್ಶ್ವದಲ್ಲಿ ಕುಳಿತುಕೊಳ್ಳುವನಾಗು” ಎಂದು ಕೈಹಿಡಿದುಕೊಂಡು ಪಕ್ಕದಲ್ಲಿ ಕೂಡಿಸಿಕೊಂಡನು. ಅವರಿಬ್ಬರೂ ಘಂಟೆಗಳ ವರೆಗೂ ಮಾತನಾಡಿಕೊಂಡರು. ವಿಶಿಷ್ಟ ಸಂಗತಿಯನ್ನೂ ಸಾರ್ವಭೌಮನು ಸಾವಧಾನದಿಂದ ಕೇಳಿದನು. ಪರಮಾಶ್ಚರ್ಯಭರಿತನಾಗಿ “ಕುಮಾರಾ! ಗತಿಸಿದುದಕ್ಕಾಗಿ ಚಿಂತಿಸಿ ಪ್ರಯೋಜನವಿಲ್ಲ. ಮುಂದಿನ ಕಾರ್ಯಗಳನ್ನು ನ್ಯಾಯಾನುಸಾರ ನಡೆಯಿಸಿ ಪ್ರಜೆಗಳಿಗೆ ಸಂತೋಷವನ್ನುಂಟು

ಮಾಡಿ ಬಂಧುಗಳಿಗೆ ಸೌಖ್ಯವನ್ನೀವುದು ಈಗಿನ ಮುಖ್ಯ ಕರ್ತವ್ಯವಾಗಿರುವುದು ಅಕೋ! ಅಲ್ಲಿ ನನ್ನ ತಾತನ ಚಿತ್ರಪಟದ ಮಗ್ಗುಲಲ್ಲಿರುವ ಎರಡು ತಸ್ವೀರು ಗಳನ್ನು ನೋಡು. ಅವು ಯಾರವೆಂಬುದು ಗುರುತಿಸಿದೆಯಾ?"

**ಲಲಿತ**—ಭಾವನವರೇ! ಈ ಪೂಜ್ಯರನ್ನು ನಾನು ಬಾಲ್ಯದಲ್ಲಿ ನೋಡಿರಬಹು ದೇನೋ! ಗಂಧರ್ವಾಕಾರನಾದ ಈ ಯುವಕನು ಇನ್ನೂ ನನ್ನ ಸ್ಮರಣೆಗೆ ಬರಲಿಲ್ಲ.

**ಸಾರ್ವಭೌಮ**—ಕುಮಾರ! ರಾಕ್ಷಸಿಯನ್ನು ಮದುವೆಯಾಗಿ ಅಪ ಮೃತ್ಯುವಿನ ಪಾಲಾದ ಮೇವಾರು ದೇಶಾಧೀಶನಾದ ಪ್ರತಾಪಸಿಂಹನ ಚಿತ್ರವು ಮೊದಲನೆಯದು. ಅವನ ಔರಸಪುತ್ರನಾದ ವಿಕ್ರಮಸಿಂಹನ ತಸ್ವೀರು ಎರಡನೆಯದು. ಇವನಿಗಾಗಿ ನನ್ನ ಪ್ರಾಣವನ್ನಾದರೂ ಬಲಿಯಿಕ್ಕಿ ಸಿಂಹಾ ಸನಾರೂಢನನ್ನಾಗಿ ಮಾಡಿಸಿ, ನನ್ನ ಸಹೋದರಿಯಾದ ಹೇಮಪ್ರಭೆಯ ಮುಖ ದರ್ಶನವನ್ನು ಮಾಡುವೆನು. ಅದುವರೆಗೂ ಆಕೆಯ ಮುಖಸಂದರ್ಶನಮಾಡಲು ನನಗೆ ಇಷ್ಟವಿಲ್ಲ. ಈ ನನ್ನ ಶಪಥವನ್ನು ಆಕೆಗೆ ತಿಳಿಯಪಡಿಸು. ಈಯೆರಡು ಚಿತ್ರಪಟಗಳನ್ನೂ ಸಾರ್ವಭೌಮರ ಮಧ್ಯದಲ್ಲಿ ಹಾಕಿರಲು ಕಾರಣವೇನು ಗೊತ್ತಾಯಿತೇ? ಉದಯಪುರಿಯ ರಾಜರು ಡಿಲ್ಲೀ ಚಕ್ರವರ್ತಿಗಳಿಗೆ ಹೃದಯ ಪ್ರಾಯರು. ಅವರ ವಿಷಯದಲ್ಲಿ ಭೇದವಿಲ್ಲದೇ ನಡೆದುಕೊಳ್ಳಬೇಕೆಂದು ನನ್ನ ಮಾತಾಮಹನ ಆಜ್ಞೆ. ಮೋಸದಿಂದುಂಟಾದ ಅಪವಾದವನ್ನು ಪರಿಹರಿಸಿ ಆ ರಾಜವಂಶದವರಿಗೆ ಪುನಃ ರಾಜ್ಯಬರುವಂತೆ ಮಾಡುವುದು ನನ್ನ ಕರ್ತವ್ಯವಾ ಗಿದೆ. ನೀನು ಬೇಗನೆ ಹೊರಡು ನನಗೆ ಗೂಢಚಾರನನ್ನು ಕಳುಹಿದ ತತ್‌ಕ್ಷಣ ಬರುವೆನು."

ಉದಯಪುರಿಯಲ್ಲಿ ಮದನಪಾಲನ ಶಯ್ಯಾಗೃಹಕ್ಕೆ ಪಕ್ಕದಲ್ಲಿಯೇ ಫಲ್ಗುಣನ ಮಲಗುವ ಮನೆಯಿದ್ದಿತು. ರಾಜನ ಶಯ್ಯಾಗೃಹದಂತೆಯೇ ಅದೂ ಅಲಂಕರಿಸಲ್ಪಟ್ಟಿದ್ದಿತು. ಅದರಲ್ಲಿ ಬೀರುಗಳೂ, ಪೆಟ್ಟಿಗೆಗಳೂ, ಸುಗಂಧ ದ್ರವ್ಯ ಗಳೂ ತುಂಬಿದ್ದುವು. ರಾಜನು ವಿಹಾರಕ್ಕಾಗಿ ಹೊರ ಹೊರಡುತ್ತಲೇ ತಾರೆ ಯನ್ನು ಕರೆದುಕೊಂಡು ಇಂದಿರೆಯು ಫಲ್ಗುಣನ ಮಲಗುವ ಮನೆಗೆ ಹೋ ದಳು. "ಅಮ್ಮಣ್ಣಿ! ನೀವು ಈಗ ಕೈಕೊಂಡಿರುವ ಕಾರ್ಯವು ಪ್ರಾಣಕ್ಕೆ ತುಂಬಾ ಅಪಾಯಕರವಾದುದು. ಜಾಗರೂಕತೆಯಿಂದ ವರ್ತಿಸಬೇಕು. ಶೀಘ್ರವಾಗಿ ಹೊರಕ್ಕೆ ಬನ್ನಿ" ಎಂದು ತಾರೆಯು ಎಚ್ಚರಿಸಿದಳು. ಇಂದಿರೆಯು ನಿಮಿಷ ಮಾತ್ರದಲ್ಲಿ ಒಳಹೊಕ್ಕು ಅವನ ಬೀರುಗಳನ್ನು ಹುಡುಕಿದಳು. ಚೀಟಿ ಯಿಟ್ಟಿದ್ದ ಭರಣಿಯಂತಹ ಭರಣಿಗಳು ಅಲ್ಲಿ ಕೆಲವು ಇದ್ದುವು. ಅವುಗಳನ್ನು

ಮತ್ತು ಅಲ್ಲಿದ್ದ ಇತರ ವಸ್ತ್ರಾಭರಣಗಳನ್ನು ಲೆಕ್ಕಮಾಡಿಕೊಂಡು ಕೂಡಲೆ ಹೊರಗೆ ಬಂದಳು.

ರಾತ್ರಿ ಒಂಭತ್ತು ಗಂಟೆಯ ಸಮಯ. ಇಬ್ಬರು ರಾವುತರು ರಾಜ ಮಂದಿರವನ್ನು ಪ್ರವೇಶಿಸಿ ಒಂದು ಪತ್ರವನ್ನು ರಾಜನಿಗೆ ಕೊಟ್ಟು ಕಳುಹಿಸಿದರು. ಅವರು ಡಿಲ್ಲೀ ಚಕ್ರವರ್ತಿಯ ಸೈನಿಕರು. 'ಲಲಿತ ಕುಮಾರನು ಇನ್ನೂ ಬರಲಿಲ್ಲ. ಏನು ವಿಪತ್ತು ಬಂದಿದೆಯೋ' ಎಂದು ರಾಜಮಾತೆಯು ಕಳವಳಗೊಂಡಿದ್ದಳು. ದ್ವಾರದಲ್ಲಿ ಬಂದು ನಿಂತ ಕುದುರೆಯ ಸವಾರರನ್ನು ನೋಡಿದ ಕೂಡಲೇ ಏನಾಗಿರಬಹುದೋ! ಎಂದು ತನ್ನ ಪ್ರಾಣಗಳನ್ನೆಲ್ಲಾ ಅಂಗೈಯಲ್ಲಿಟ್ಟುಕೊಂಡು ಬಂದು ಆತುರದಿಂದ ಅವರ ಕೈಯ್ಯಲ್ಲಿದ್ದ ಲೇಖನವನ್ನು ತೆಗೆದುಕೊಂಡು ರಾಜನಿಗೆ ತಂದುಕೊಟ್ಟರು. ರಾಜನು ಆ ಕಾಗದವನ್ನು ತನ್ನ ತಾಯಿಗೆ ಓದಿ ಹೇಳಿದನು. ಇಬ್ಬರ ಮನಸ್ಸಿಗೂ ನೆಮ್ಮದಿಯುಂಟಾಯಿತು. ಡಿಲ್ಲಿಯಿಂದ ಬಂದ ಕುದುರೆಯ ಸೈನಿಕರಿಗೆ ಭೋಜನಭಾಜನಾದ್ಯುಪಚಾರಗಳಿಗೆ ಆಗಲೇ ತಕ್ಕ ಏರ್ಪಾಡನ್ನು ಮಾಡಿದರು. "ಅವರು ಡಿಲ್ಲೀ ಚಕ್ರವರ್ತಿಯ ಆಜ್ಞಾನುಸಾರ ನಮ್ಮ ಸೌಧ ರಕ್ಷಣೆಗಾಗಿ ಬಂದಿರುವರು. ಅವರನ್ನು ಜಾಗರೂಕತೆಯಿಂದ ನೋಡಿಕೊಳ್ಳಬೇಕು" ಎಂದು ಅರಮನೆಯ ಸೇವಕರಿಗೆ ಆಜ್ಞಾಪಿಸಿದರು.

ಒಂದು ವಾರ ಕಳೆದು ಹೋದನಂತರ ಒಂದು ದಿನ ದೂರದಿಂದ ಒಂದು ತುತೂರಿಯ ಶಬ್ದವು ಕೇಳಿಸಿತು. ಇಂದಿರೆಯು ತನ್ನ ಕಾರ್ಯವು ಶುಭವಾಗಿ ನಡೆಯುವುದೆಂದು ಸಂತೋಷಭರಿತಳಾದಳು. ರಾಜಮಂದಿರದಲ್ಲಿ ಎಲ್ಲರೂ ಬಂದು ನೆರೆದರು. ಲಲಿತಕುಮಾರನು ಸಿಂಹದ್ವಾರವನ್ನು ದಾಟಿ ಬಂದು ಕುದುರೆಯನ್ನಿಳಿದು ಅಂತಃಪುರದಲ್ಲಿ ರಾಜಮಾತೆಯನ್ನೂ ರಾಜನನ್ನೂ ದರ್ಶಿಸಿ ವಿಷಯಗಳನ್ನೆಲ್ಲಾ ಹೇಳಿ ವಿಶ್ರಾಂತಿಗೆ ಹೊರಟನು. ತನ್ನ ಪ್ರಿಯಳಿಗೆ ಅಲ್ಲಿ ನಡೆದ ಸಂಗತಿಗಳನ್ನೆಲ್ಲಾ ಬರೆದಿಟ್ಟನು. ಲಲಿತಕುಮಾರನ ಸಂದೇಶವು ಉಭಯ ಪಕ್ಷದವರಿಗೂ ಮನಸ್ಸ್ವಾಮಿತಕ್ಕೆ ಕಾರಣವಾಯಿತು.

ಡಿಲ್ಲೀ ನಗರದಿಂದ ಕಳುಹಿಸಲ್ಪಟ್ಟಿದ್ದ ಇಬ್ಬರು ನೌಕರರಲ್ಲಿ ಒಬ್ಬನು ಹೊರಗೆ ಕಾವಲು ಕೊಡುತ್ತಿದ್ದನು. ಮತ್ತೊಬ್ಬನು ಅಂತಃಪುರದಲ್ಲಿಯೇ ತಿರುಗುತ್ತಿದ್ದನು. ಇವನಿಗೆ ಅಂತಃಪುರದಲ್ಲಿ ನಿರಂಕುಶಾಧಿಕಾರವಿದ್ದಿತು. ಸೈನಿಕನ ಉಡುಪುಗಳನ್ನು ಧರಿಸಿದ್ದನು. ಅವನು ಗಂಭೀರಾಕಾರವುಳ್ಳವನಾಗಿದ್ದುದರಿಂದ ಅವನನ್ನು ನೋಡುತ್ತಲೇ ಎಲ್ಲರೂ ಭಯಪಡುತ್ತಿದ್ದರು. ಕೆಲಸವಿಲ್ಲದೆ ಅವನು ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ಅರಸನು ಹೇಳಿದ ಕಾರ್ಯಗಳನ್ನು ಮಾತ್ರ ಬಹು ಅಕ್ಕರೆಯಿಂದ ಮಾಡುತ್ತಿದ್ದನು. ಅವನು ಸ್ವಲ್ಪ

ಮಂಡಮತಿಯೆಂದು ಫಲ್ಗುಣನು ಕೆಲವು ದಿವಸಗಳಲ್ಲಿಯೇ ಗ್ರಹಿಸಿ ರಾಜನಂತೆ ತಾನೂ ಅವನಿಗೆ ಕೆಲಸಗಳನ್ನು ಹೇಳಲಾರಂಭಿಸಿದನು. ಅವನು ಆ ಕೆಲಸಗಳನ್ನು ಕೂಡ ಮಾಡುತ್ತಿದ್ದನು. ಹೊರಗಿನ ರಾವುತನು ಸದಾ ಅಶ್ವಾರೂಢನಾಗಿಯೇ ಇದ್ದು ಕೋಟೆಯಲ್ಲಿನ ವಿಶೇಷಗಳನ್ನು ತಿಳಿದುಕೊಳ್ಳುತ್ತಿದ್ದನು. ರಾತ್ರಿಯ ವೇಳೆಗಳಲ್ಲಿ ಮಾತ್ರ ಇವರಿಬ್ಬರೂ ಪಹರೆಯನ್ನು ಬದಲಾಯಿಸಿಕೊಳ್ಳುತ್ತಿದ್ದರು.

ಒಂದು ದಿನ ಸಾಯಂಕಾಲ ಇಂದಿರೆಯು ಪುರಾತನ ಮಂದಿರಗಳ ಬಳಿಯಲ್ಲಿರುವ ಉಪವನಗಳಲ್ಲಿ ಸಂಚರಿಸುತ್ತಾ ಕತ್ತಲೆ ಕವಿದನಂತರ ಹಿಂತಿರುಗಿ ಹೋಗದೆ ದಕ್ಷಿಣ ದಿಕ್ಕಿನಲ್ಲಿರುವ ಪ್ರಾಸಾದದ ಮಹಾದ್ವಾರದಿಂದ ಹೊರಟು ಬಹುದೂರ ನಡೆದಳು. ಹಿಂದೆ ಒಂದು ದಿನ ಫಲ್ಗುಣನು ಆ ಮಾರ್ಗವಾಗಿ ಎಲ್ಲಿಗೋ ಹೋಗುತ್ತಿದ್ದುದನ್ನು ಇಂದಿರೆಯು ನೋಡಿದ್ದಳು. ಈ ದಿನದಲ್ಲಿಯೂ ಅವನು ಕೈಯಲ್ಲಿ ಒಂದು ಲಾಂದ್ರವನ್ನು ಹಿಡಿದುಕೊಂಡು ಹೋಗುತ್ತಿರುವುದನ್ನು ನೋಡಿ ಎಲ್ಲಿಗೆ ಹೋಗುವನೋ ಪರೀಕ್ಷಿಸಬೇಕೆಂದು ಯತ್ನಿಸಿ ಹಾಗೆ ನಡೆದಳು. ಅಲ್ಲಿನ ಪ್ರಾಕಾರದ ಹಿಂದೆ ಸಾಲುಗಿಡಗಳಿದ್ದುವು. ಅವುಗಳ ನಡುವೆ ದೊಡ್ಡದೊಡ್ಡ ಗುಡ್ಡಗಳಿದ್ದುವು. ಫಲ್ಗುಣನು ಅಲ್ಲಿಗೆ ಹೋಗುತ್ತಿದ್ದನು. ಏನು ಕಾರಣವೋ ತಿಳಿಯದು. ಇಂದಿರೆಯು ಆ ಸಾಲು ವೃಕ್ಷಗಳಲ್ಲಿ ಕಾಣಿಸದಂತೆ ಹೊಂಚಿ ನಡೆಯುತ್ತಾ ಕೊನೆಗೆ ಒಂದು ದೊಡ್ಡ ವೃಕ್ಷವನ್ನೇರಿದಳು. ಸ್ವಲ್ಪ ಹೊತ್ತು ಏನೂ ಕಾಣಿಸಲಿಲ್ಲ. "ಏನಿದು? ಈ ದ್ವಾರದಲ್ಲಿ ಹೋದನು, ಎಲ್ಲಿ ಮರೆಯಾದನು?" ಎಂದು ಆಲೋಚಿಸುತ್ತಿರುವಷ್ಟರಲ್ಲಿಯೇ ಅವನ ಲಾಂದ್ರದ ಬೆಳಕು ಕಾಣಿಸಿತು. ಅವನು ಗುಡ್ಡಗಳ ಸಂದಿಗೆ ಹೋದನು. ಅಲ್ಲಿ ಒಂದು ಬಂಡೆಯನ್ನೆತ್ತಿ ಒಳಗಿನಿಂದ ರತ್ನಾಭರಣಗಳನ್ನೂ ವಜ್ರಗಳನ್ನೂ ಇನ್ನೂ ಅನೇಕ ಚಿನ್ನದ ವಸ್ತುಗಳನ್ನೂ ತೆಗೆದು ದೀಪದ ಬೆಳಕಿನಲ್ಲಿ ಪುನಃ ಪುನಃ ನೋಡಿದನು. ಇಂದಿರೆಯು ಕಂಡು ಆಶ್ಚರ್ಯಗೊಂಡಳು. "ಈ ನಿಧಿಯನ್ನು ಅಪಹರಿಸುವುದಕ್ಕಾಗಿ ಇಂದಿರೆಯು ಪ್ರಯತ್ನಿಸುತ್ತಿರುವಂತೆ ಕಾಣುತ್ತಿದೆ. ಅವಳನ್ನು ಪ್ರಾಣದೊಡನೆ ಬಿಡುವೆನೇ? ಅರ್ಜುನನ ದ್ವಾದಶನಾಮಗಳಲ್ಲಿ ನನ್ನದೊಂದಾಗಿರುವುದು. ಅವನ ಸಾಹಸದಲ್ಲಿ ದ್ವಾದಶಾಂಶವನ್ನಾದರೂ ನಾನು ಪ್ರದರ್ಶಿಸಬೇಡವೇ? ಅಂತಹ ಸಾಹಸವು ನನ್ನಲ್ಲಿರುವುದರಿಂದಲೇ ಈ ಉದಯಪುರೀ ಸಂಸ್ಥಾನವನ್ನು ನನ್ನ ಅಂಗೈಯಲ್ಲಿಟ್ಟುಕೊಂಡಿರುವೆನು. ಇಂದಿರೆಯನ್ನೂ ಅವಳ ತಂದೆಯನ್ನೂ ಸಂಹರಿಸಿ ಬಿಟ್ಟರೆ ಮೀವಾರ ರಾಜ್ಯಲಕ್ಷ್ಮಿಯು ನನ್ನ ವಶಳಾಗುವಳು" ಎಂದು ಉನ್ಮತ್ತನಂತೆ ಗಗನಾಂತಃಪುರಗಳನ್ನು ಕಟ್ಟುತ್ತಾ ಪುನಃ

ಆ ಆಭರಣಗಳನ್ನು ಎಂದಿನಂತೆ ಭದ್ರಪಡಿಸುತ್ತಿರುವಷ್ಟರಲ್ಲಿಯೇ ಇಂದಿರೆಯು ವೃಕ್ಷದಿಂದಿಳಿದು ಅರಮನೆಯನ್ನು ಸೇರಿ ತಾರೆಯನ್ನು ಹುಡುಕುತ್ತಿದ್ದಳು. "ಅಮ್ಮಣ್ಣಿ ! ಶಿಕಾರಿ ಹೋಗಿದ್ದೆಯಾ ?-ಭಯಪಡಬೇಡ. ಅಮ್ಮನವರು ಇನ್ನೂ ಭೋಜನಕ್ಕೆ ಬರಲಿಲ್ಲ" ಎಂದು ತಾರೆಯು ಹೇಳಿದಳು. ಭೋಜನ ಕಾಲಕ್ಕೆ ಸರಿಯಾಗಿ ಫಲ್ಗುಣನು ಸಹ ಬಂದು ಸೇರಿದನು.

ಈಗಿನಂತೆ ಹಿಂದಿನ ಕಾಲದಲ್ಲಿ ವಿದ್ಯುಚ್ಛಕ್ತಿಯಿಂದ ನಡೆಯುವ ಪಂಖಾಗಳು ಇರಲಿಲ್ಲವಾದುದರಿಂದ ಕ್ರಮವಾದ ಪಂಖಾಗಳನ್ನು ತಮಗೆ ಬೇಕಾದ ಸ್ಥಳಗಳಲ್ಲಿ ಕಟ್ಟಿ ಯಂತ್ರದ ಸಹಾಯದಿಂದಲೋ ಮನುಷ್ಯ ರಿಂದಲೋ ಎಳೆಯಿಸುತ್ತಿದ್ದರು. ರಾತ್ರಿಯ ವೇಳೆಗಳಲ್ಲಿ ಆಳುಗಳು ಸರತಿಯ ಪ್ರಕಾರ ಎಳೆಯುತ್ತಿದ್ದರು. ಮೃತ ಮಹಾರಾಜನ ಪಂಖಾದವನನ್ನು ಇಂದಿರೆಯು ಚಾತುರ್ಯದಿಂದ ವಿಚಾರಿಸಿ ತಿಳಿದುಕೊಂಡಳು. ಅವನ ಹೆಸರು ಪದ್ಮನಾಭನು. ಅವನ ಹೆಂಡತಿಯ ಹೆಸರು ವಿಮಲೆ. ಇಂದಿರೆಯು ಈ ವಿಮಲೆಯನ್ನು ವಶಪಡಿಸಿಕೊಂಡಳು. ಇವಳು ಅಂತಃಪುರದ ದಾಸಿಯರಲ್ಲಿ ಒಬ್ಬಳಾಗಿದ್ದಳು. ಪದ್ಮನಾಭನು ಸಹ ಮುಖ್ಯ ಸೇವಕರಲ್ಲೊಬ್ಬನಾಗಿದ್ದನು. ಅವನು ಪೂರ್ವಕ್ಕಿಂತಲೂ ಬಡವನಾಗಿರಲಿಲ್ಲ. ಅವನೊಂದಿಗೆ ಆಗಾಗ್ಗೆ ವಿಶ್ವಾಸದಿಂದ ಮಾತನಾಡುತ್ತಾ ಬಂದುದರಿಂದ ಇಂದಿರೆಯ ವಿಷಯದಲ್ಲಿ ಅವನು ಬಹು ನಯವಿನಯಗಳಿಂದ ನಡೆದುಕೊಳ್ಳುತ್ತಿದ್ದನು. ವಿಮಲೆಯಂತೂ ಇಂದಿರೆಗೆ ಹೇಳದಿರುವ ರಹಸ್ಯವನ್ನೇ ಕಾಣಳು. ಈ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಬಹಳ ವ್ರತಗಳನ್ನಾಚರಿಸಿ ಒಂದು ಗಂಡು ಮಗುವನ್ನು ಪಡೆದಿದ್ದರು. ಆ ಹುಡುಗನ ಹೆಸರು ವಿಶ್ವನಾಥ. ಅವನ ಹುಟ್ಟಿದ ಹಬ್ಬಕ್ಕೆ ಇಂದಿರೆಯು ಮೂರು ಚಿನ್ನದ ಮೊಹರುಗಳನ್ನು ಬಹುಮತಿಯಾಗಿ ಕೊಟ್ಟಳು. ಎಂದೂ ಕಾಣದ ಈ ಅಮೌಲ್ಯ ಬಹುಮಾನದಿಂದ ಉಬ್ಬಿ ವಿಮಲೆಯು ತನ್ನನ್ನೇ ತಾನು ಮರೆತಳು. ಇವಳಿಂದ ತನಗೆ ಆವುದೋ ಒಂದು ಸಹಾಯವಾಗುವುದೆಂದು ಇಂದಿರೆಯ ಮನಸ್ಸಿಗೆ ಹೊಳೆಯಿತು. ಆದರೆ, ಆ ವಿಷಯವನ್ನು ಅವಳಲ್ಲಿ ಪ್ರಸ್ತಾವಿಸುವುದು ಹೇಗೆ ? ಅವಳ ಹಿರಿಯ ಮಗಳು ಸರಳೆಯೆಂಬುವಳು ಓದಬಲ್ಲಳೆಂಬ ಸಂಗತಿಯು ಇಂದಿರೆಗೆ ತಿಳಿಯ ಬಂದಿತು. ಒಂದು ದಿನ ಇಂದಿರೆಯು ವಿಮಲೆಯನ್ನು ಕುರಿತು "ನಿನ್ನಲ್ಲಿ ಹೂವು ಬಳ್ಳಿಗಳು ಹಾಕಿದ ಬಟ್ಟೆಗಳಿರುವುವೇ ? ನಾನು ಒಂದು ಮೇಜಾ ವಸ್ತ್ರವನ್ನು ಹೊಲಿಯುತ್ತಿದ್ದೇನೆ. ಅದಕ್ಕೆ ಬೇಕಾಗಿರುವುದು. ಹೊಸ ಮಾದರಿ ಇದ್ದರೆ ನೋಡಬೇಕು. ಒಂದು ದಿನ ನಿನ್ನ ಮಗಳು ಅರಮನೆಗೆ ಬಂದಾಗ ಹೂವು ಹಾಕಿದ್ದ ಬಟ್ಟೆಯನ್ನು ಕೈಯ್ಯಲ್ಲಿಟ್ಟುಕೊಂಡಿದ್ದಳು" ಎಂದಳು.

**ವಿಮಲೆ**—ತಾಯೇ! ಅದೇನು ಭಾಗ್ಯ! ನನ್ನ ಮಗಳಿಗೆ ಹೊಲಿಗೆಯ ಮೇಲೆ ತುಂಬಾ ಇಷ್ಟ. ನಾವು ಪೂರ್ವದಲ್ಲಿ ಬಹಳ ಬಡವರಾಗಿದ್ದೆವು. ದೊಡ್ಡ ಮಗಳು ಹುಟ್ಟಿದ ತರುವಾಯ ದೈವ ಕೃಪೆಯಿಂದ ನಮಗೆ ಸ್ವಲ್ಪ ದ್ರವ್ಯ ಸೇರಿತು. ಮಗುವಿಗೆ ಓದು ಕಲಿಸಿದೆನು. ಅವಳು ತುಂಬಾ ಬುದ್ಧಿಶಾಲಿನಿ, ವಿನಯಪರಳು. ಅವಳಿಗೆ ಈಗ ಹದಿನಾರು ವರುಷ ವಯಸ್ಸು ಬಂದಿದೆ."

**ಇಂದಿರೆ**—ವಿಮಲೇ! ನೀನು ಓದಿದವಳಲ್ಲದಿದ್ದರೂ ನಿನ್ನ ಮಗಳನ್ನಾದರೂ ವಿದ್ಯಾವತಿಯನ್ನಾಗಿ ಮಾಡಿರುವುದು ತುಂಬಾ ಸಂತೋಷ. ಅಂತಃಪುರದಲ್ಲಿ ರಾಜ ಸ್ತ್ರೀಯರು ಸಕಲ ವಿದ್ಯಾವತಿಯರೂ, ವೀರಪತ್ನಿಯರೂ, ವೀರಮಾತೆಯರೂ ಆಗಿರುವರು. ಅವರನ್ನು ಸೇವಿಸುತ್ತಿರುವ ದಾಸಿಯರು ಸಹ ವಿದ್ಯಾವತಿಯರೂ ಧರ್ಮಬುದ್ಧಿಯುಳ್ಳವರೂ ಆಗಿದ್ದರೆ ಬಹಳ ಒಳ್ಳೆಯದು. ಇಂತಹವರು ಇರುವ ಅಂತಃಪುರಕ್ಕೆ ಶುದ್ಧಾಂತಃಪುರವೆಂದು ಹೆಸರು. ಶುದ್ಧಾಂತಃಪುರಗಳಲ್ಲಿ ಕುತ್ಸಿತದನಾತುಗಳೂ, ದುಷ್ಕಾರ್ಯಗಳೂ ಸರ್ವಥಾ ನಡೆಯಲಾರವು. ವಿಮಲೇ! ನೀನು ಇಬ್ಬರು ಮಕ್ಕಳಿಗೂ ವಿದ್ಯೆಯನ್ನು ಕಲಿಸಬೇಕು. ಕೆಲವು ದಿನಗಳಿಂದಲೂ ನಿನ್ನ ಹಿರೆಯ ಮಗಳು ಇಲ್ಲಿಗೆ ಬರುವುದಿಲ್ಲವೇತಕ್ಕೆ?

**ವಿಮಲೆ**—ಅಮ್ಮಣ್ಣಿ! ಇದು ಬಹಳ ರಹಸ್ಯ. ಹೊರಗೆ ಬಿದ್ದರೆ ತಲೆಹೋಗುವುದು. ನಮಗೆ ಈಗ ಒಂದು ಕಷ್ಟವು ಬಂದಿದೆ. ನನ್ನ ಹಿರಿಯ ಮಗಳನ್ನು ತನಗೆ ಕೊಡಬೇಕೆಂದು ಫಲ್ಗುಣನು ಕೇಳುತ್ತಿದ್ದಾನೆ. ಈ ಕಷ್ಟವನ್ನು ಯಾರು ಪರಿಹರಿಸುವರೋ ತಿಳಿಯದು.

**ಇಂದಿರೆ**—ಹಾಗೆ ಅವಳನ್ನು ಫಲ್ಗುಣನಿಗೆ ಕೊಡುವುದು ನಮಗೆ ಕ್ಷೇಮವಲ್ಲವೇ? ರಾಜಾಶ್ರಯದಲ್ಲಿ ಅವನು ತುಂಬಾ ಧನವಂತನಾಗಿರುವಂತೆ ತೋರುತ್ತಿದೆ. ಯೌವನವಂತನೂ ಅಹುದು. ಕುರೂಪಿಯಲ್ಲ. ಏತಕ್ಕೆ ನಿಮ್ಮ ಮಗಳನ್ನು ಅವನಿಗೆ ಮದುವೆಮಾಡಿಕೊಡ ಬಾರದು?

**ವಿಮಲೆ**—ಅಮ್ಮಾ! ಅದು ನನ್ನ ಇಷ್ಟವೇ? ಆ ಹುಡುಗಿಗೆ ಅವನನ್ನು ನೋಡಿದರೇ ಅಸಹ್ಯ. ಅವನು ತುಂಬಾ ದುಷ್ಟನು. ಅವನಲ್ಲಿ ಹಣವಿದ್ದರೂ ಗುಣವಿರ ಬೇಡವೇ? ನಮ್ಮ ಹುಡುಗಿಗೆ ವಿರೋಧವಾಗಿ ಮದುವೆ ಮಾಡಿ ಕೊಡಲು ನನ್ನ ಗಂಡನಿಗೆ ಇಷ್ಟವಿಲ್ಲ. ಅಮ್ಮಾ! ನನ್ನ ಮೇಲೆ ದಯವಿಟ್ಟು ಒಪ್ಪತ್ತು ನನ್ನ ಮನೆಗೆ ಬರಕೂಡದೇ? ಹೂವು ಹಾಕಿದ ವಸ್ತ್ರಗಳನ್ನು ಬೇಕಾದಷ್ಟು ನೀವು ನೋಡಿ ತರಬಹುದು. ನನ್ನ ಮಗಳ ಸಂಗತಿಯನ್ನೂ ನೀವು ಕೇಳಬಹುದು.

**ಇಂದಿರೆ**—ವಿಮಲೇ! ನಾನು ಎಲ್ಲಿಗಾದರೂ ಹೋಗುವುದು ಫಲ್ಗುಣ

ಆ ಆಭರಣಗಳನ್ನು ಎಂದಿನಂತೆ ಭದ್ರಪಡಿಸುತ್ತಿರುವಷ್ಟರಲ್ಲಿಯೇ ಇಂದಿರೆಯು ವೃಕ್ಷದಿಂದಿಳಿದು ಅರಮನೆಯನ್ನು ಸೇರಿ ತಾರೆಯನ್ನು ಹುಡುಕುತ್ತಿದ್ದಳು. "ಅಮ್ಮಣ್ಣಿ! ಶಿಕಾರಿ ಹೋಗಿದ್ದೆಯಾ? ಭಯಪಡಬೇಡ. ಅಮ್ಮನವರು ಇನ್ನೂ ಭೋಜನಕ್ಕೆ ಬರಲಿಲ್ಲ" ಎಂದು ತಾರೆಯು ಹೇಳಿದಳು. ಭೋಜನ ಕಾಲಕ್ಕೆ ಸರಿಯಾಗಿ ಫಲ್ಗುಣನು ಸಹ ಬಂದು ಸೇರಿದನು.

ಈಗಿನಂತೆ ಹಿಂದಿನ ಕಾಲದಲ್ಲಿ ವಿದ್ಯುಚ್ಛಕ್ತಿಯಿಂದ ನಡೆಯುವ ಪಂಖಾಗಳು ಇರಲಿಲ್ಲವಾದುದರಿಂದ ಕ್ರಮವಾದ ಪಂಖಾಗಳನ್ನು ತಮಗೆ ಬೇಕಾದ ಸ್ಥಳಗಳಲ್ಲಿ ಕಟ್ಟಿ ಯಂತ್ರದ ಸಹಾಯದಿಂದಲೋ ಮನುಷ್ಯರಿಂದಲೋ ಎಳೆಯಿಸುತ್ತಿದ್ದರು. ರಾತ್ರಿಯ ವೇಳೆಗಳಲ್ಲಿ ಆಳುಗಳು ಸರತಿಯ ಪ್ರಕಾರ ಎಳೆಯುತ್ತಿದ್ದರು. ಮೃತ ಮಹಾರಾಜನ ಪಂಖಾದವನನ್ನು ಇಂದಿರೆಯು ಚಾತುರ್ಯದಿಂದ ವಿಚಾರಿಸಿ ತಿಳಿದುಕೊಂಡಳು. ಅವನ ಹೆಸರು ಪದ್ಮನಾಭನು. ಅವನ ಹೆಂಡತಿಯ ಹೆಸರು ವಿಮಲೆ. ಇಂದಿರೆಯು ಈ ವಿಮಲೆಯನ್ನು ವಶಪಡಿಸಿಕೊಂಡಳು. ಇವಳು ಅಂತಃಪುರದ ದಾಸಿಯರಲ್ಲಿ ಒಬ್ಬಳಾಗಿದ್ದಳು. ಪದ್ಮನಾಭನು ಸಹ ಮುಖ್ಯ ಸೇವಕರಲ್ಲೊಬ್ಬನಾಗಿದ್ದನು. ಅವನು ಪೂರ್ವಕ್ಕಿಂತಲೂ ಬಡವನಾಗಿರಲಿಲ್ಲ. ಅವನೊಂದಿಗೆ ಆಗಾಗ್ಗೆ ವಿಶ್ವಾಸದಿಂದ ಮಾತನಾಡುತ್ತಾ ಬಂದುದರಿಂದ ಇಂದಿರೆಯ ವಿಷಯದಲ್ಲಿ ಅವನು ಬಹು ನಯವಿನಯಗಳಿಂದ ನಡೆದುಕೊಳ್ಳುತ್ತಿದ್ದನು. ವಿಮಲೆಯಂತೂ ಇಂದಿರೆಗೆ ಹೇಳದಿರುವ ರಹಸ್ಯವನ್ನೇ ಕಾಣಳು. ಈ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಬಹಳ ವ್ರತಗಳನ್ನಾಚರಿಸಿ ಒಂದು ಗಂಡು ಮಗುವನ್ನು ಪಡೆದಿದ್ದರು. ಆ ಹುಡುಗನ ಹೆಸರು ವಿಶ್ವನಾಥ. ಅವನ ಹುಟ್ಟಿದ ಹಬ್ಬಕ್ಕೆ ಇಂದಿರೆಯು ಮೂರು ಚಿನ್ನದ ಮೊಹರುಗಳನ್ನು ಬಹುಮತಿಯಾಗಿ ಕೊಟ್ಟಳು. ಎಂದೂ ಕಾಣದ ಈ ಅಮೌಲ್ಯ ಬಹುಮಾನದಿಂದ ಉಬ್ಬಿ ವಿಮಲೆಯು ತನ್ನನ್ನೇ ತಾನು ಮರೆತಳು. ಇವಳಿಂದ ತನಗೆ ಆವುದೋ ಒಂದು ಸಹಾಯವಾಗುವುದೆಂದು ಇಂದಿರೆಯ ಮನಸ್ಸಿಗೆ ಹೊಳೆಯಿತು. ಆದರೆ, ಆ ವಿಷಯವನ್ನು ಅವಳಲ್ಲಿ ಪ್ರಸ್ತಾಪಿಸುವುದು ಹೇಗೆ? ಅವಳ ಹಿರಿಯ ಮಗಳು ಸರಳೆಯೆಂಬುವಳು ಓದಬಲ್ಲಳೆಂಬ ಸಂಗತಿಯು ಇಂದಿರೆಗೆ ತಿಳಿಯ ಬಂದಿತು. ಒಂದು ದಿನ ಇಂದಿರೆಯು ವಿಮಲೆಯನ್ನು ಕುರಿತು "ನಿನ್ನಲ್ಲಿ ಹೂವು ಬಳ್ಳಿಗಳು ಹಾಕಿದ ಬಟ್ಟೆಗಳಿರುವುವೇ? ನಾನು ಒಂದು ಮೇಜಾ ವಸ್ತ್ರವನ್ನು ಹೊಲಿಯುತ್ತಿದ್ದೇನೆ. ಅದಕ್ಕೆ ಬೇಕಾಗಿರುವುದು. ಹೊಸ ಮಾದರಿ ಇದ್ದರೆ ನೋಡಬೇಕು. ಒಂದು ದಿನ ನಿನ್ನ ಮಗಳು ಅರಮನೆಗೆ ಬಂದಾಗ ಹೂವು ಹಾಕಿದ್ದ ಬಟ್ಟೆಯನ್ನು ಕೈಯ್ಯಲ್ಲಿಟ್ಟುಕೊಂಡಿದ್ದಳು" ಎಂದಳು.

**ವಿಮಲೆ**—ತಾಯೇ! ಅದೇನು ಭಾಗ್ಯ! ನನ್ನ ಮಗಳಿಗೆ ಹೊಲಿಗೆಯ ಮೇಲೆ ತುಂಬಾ ಇಷ್ಟ. ನಾವು ಪೂರ್ವದಲ್ಲಿ ಬಹಳ ಬಡವರಾಗಿದ್ದೆವು. ದೊಡ್ಡ ಮಗಳು ಹುಟ್ಟಿದ ತರುವಾಯ ದೈವ ಕೃಪೆಯಿಂದ ನಮಗೆ ಸ್ವಲ್ಪ ದ್ರವ್ಯ ಸೇರಿತು. ಮಗುವಿಗೆ ಓದು ಕಲಿಸಿದೆನು. ಅವಳು ತುಂಬಾ ಬುದ್ಧಿಶಾಲಿನಿ, ವಿನಯಪರಳು. ಅವಳಿಗೆ ಈಗ ಹದಿನಾರು ವರುಷ ವಯಸ್ಸು ಬಂದಿದೆ."

**ಇಂದಿರೆ**—ವಿಮಲೇ! ನೀನು ಓದಿದವಳಲ್ಲದಿದ್ದರೂ ನಿನ್ನ ಮಗಳನ್ನಾದರೂ ವಿದ್ಯಾವತಿಯನ್ನಾಗಿ ಮಾಡಿರುವುದು ತುಂಬಾ ಸಂತೋಷ. ಅಂತಃಪುರದಲ್ಲಿ ರಾಜ ಸ್ತ್ರೀಯರು ಸಕಲ ವಿದ್ಯಾವತಿಯರೂ, ವೀರಪತ್ನಿಯರೂ, ವೀರಮಾತೆಯರೂ ಆಗಿರುವರು. ಅವರನ್ನು ಸೇವಿಸುತ್ತಿರುವ ದಾಸಿಯರು ಸಹ ವಿದ್ಯಾವತಿಯರೂ ಧರ್ಮಬುದ್ಧಿಯುಳ್ಳವರೂ ಆಗಿದ್ದರೆ ಬಹಳ ಒಳ್ಳೆಯದು. ಇಂತಹವರು ಇರುವ ಅಂತಃಪುರಕ್ಕೆ ಶುದ್ಧಾಂತಃಪುರವೆಂದು ಹೆಸರು. ಶುದ್ಧಾಂತಃಪುರಗಳಲ್ಲಿ ಕುತ್ಸಿತದಮಾತುಗಳೂ, ದುಷ್ಕಾರ್ಯಗಳೂ ಸರ್ವಥಾ ನಡೆಯಲಾರವು. ವಿಮಲೇ! ನೀನು ಇಬ್ಬರು ಮಕ್ಕಳಿಗೂ ವಿದ್ಯೆಯನ್ನು ಕಲಿಸಬೇಕು. ಕೆಲವು ದಿನಗಳಿಂದಲೂ ನಿನ್ನ ಹಿರಿಯ ಮಗಳು ಇಲ್ಲಿಗೆ ಬರುವುದಿಲ್ಲವೇತಕ್ಕೆ?

**ವಿಮಲೆ**—ಅಮ್ಮಣ್ಣಿ! ಇದು ಬಹಳ ರಹಸ್ಯ. ಹೊರಗೆ ಬಿದ್ದರೆ ತಲೆಹೋಗುವುದು. ನಮಗೆ ಈಗ ಒಂದು ಕಷ್ಟವು ಬಂದಿದೆ. ನನ್ನ ಹಿರಿಯ ಮಗಳನ್ನು ತನಗೆ ಕೊಡಬೇಕೆಂದು ಫಲ್ಗುಣನು ಕೇಳುತ್ತಿದ್ದಾನೆ. ಈ ಕಷ್ಟವನ್ನು ಯಾರು ಪರಿಹರಿಸುವರೋ ತಿಳಿಯದು.

**ಇಂದಿರೆ**—ಹಾಗೆ ಅವಳನ್ನು ಫಲ್ಗುಣನಿಗೆ ಕೊಡುವುದು ನಮಗೆ ಕ್ಷೇಮವಲ್ಲವೇ? ರಾಜಾಶ್ರಯದಲ್ಲಿ ಅವನು ತುಂಬಾ ಧನವಂತನಾಗಿರುವಂತೆ ತೋರುತ್ತಿದೆ. ಯೌವನವಂತನೂ ಅಹುದು. ಕುರೂಪಿಯಲ್ಲ. ಏತಕ್ಕೆ ನಿಮ್ಮ ಮಗಳನ್ನು ಅವನಿಗೆ ಮದುವೆಮಾಡಿಕೊಡ ಬಾರದು?

**ವಿಮಲೆ**—ಅಮ್ಮಾ! ಅದು ನನ್ನ ಇಷ್ಟವೇ? ಆ ಹುಡುಗಿಗೆ ಅವನನ್ನು ನೋಡಿದರೇ ಅಸಹ್ಯ. ಅವನು ತುಂಬಾ ದುಷ್ಟನು. ಅವನಲ್ಲಿ ಹಣವಿದ್ದರೂ ಗುಣವಿರ ಬೇಡವೇ? ನಮ್ಮ ಹುಡುಗಿಗೆ ವಿರೋಧವಾಗಿ ಮದುವೆ ಮಾಡಿ ಕೊಡಲು ನನ್ನ ಗಂಡನಿಗೆ ಇಷ್ಟವಿಲ್ಲ. ಅಮ್ಮಾ! ನನ್ನ ಮೇಲೆ ದಯವಿಟ್ಟು ಒಪ್ಪತ್ತು ನನ್ನ ಮನೆಗೆ ಬರಕೂಡದೇ? ಹೂವು ಹಾಕಿದ ವಸ್ತ್ರಗಳನ್ನು ಬೇಕಾದಷ್ಟು ನೀವು ನೋಡಿ ತರಬಹುದು. ನನ್ನ ಮಗಳ ಸಂಗತಿಯನ್ನೂ ನೀವು ಕೇಳಬಹುದು.

**ಇಂದಿರೆ**—ವಿಮಲೇ! ನಾನು ಎಲ್ಲಿಗಾದರೂ ಹೋಗುವುದು ಫಲ್ಗುಣ

ನಿಗೆ ತಿಳಿದರೆ ರಾಜಮಾತೆಯೊಡನೆ ಅವನು ಉಸುರುವನೆಂದು ಭೀತಳಾಗಿದ್ದೇನೆ. ಇಲ್ಲದಿದ್ದರೆ ಅಷ್ಟು ಸುಗುಣಶಾಲಿನಿಯಾಗಿರುವ ನಿನ್ನ ಮಗಳನ್ನು ನೋಡಲು ನನಗೂ ತುಂಬಾ ಇಷ್ಟವೇ!

**ವಿಮಲೆ**—ಅಮ್ಮಾ! ನನ್ನ ಮನೆ ದೂರವಲ್ಲ. ಪ್ರಾಕಾರದ ಹೊರಗಿರುವ ಸತ್ರದಲ್ಲಿ ಒಂದು ಭಾಗದಲ್ಲಿದೆ. ಮಹಾರಾಜನು ಬೇಟೆಗೆ ಹೋಗುತ್ತಾನೆಂದು ಹೇಳುತ್ತಿದ್ದಾರೆ. ಅವರು ಹೊರಟನಂತರ ನೀವು ಬರಬಹುದು. ದೊಡ್ಡಮ್ಮನವರು ನಿಮ್ಮನ್ನು ಹುಡುಕದಂತೆ ತಾರೆಯನ್ನು ನೋಡಿಕೊಳ್ಳೆಂದು ಹೇಳುತ್ತೇನೆ.

ಇಂದಿರೆಗೆ ಅವಳ ಮನೆಗೆ ಹೋಗಿಬರುವುದು ಆವಶ್ಯಕವಾಗಿದ್ದಿತು. ಆದುದರಿಂದ ಬರುವೆನೆಂದು ಒಪ್ಪಿಕೊಂಡಳು. "ಫಲ್ಗುಣನು ನನ್ನ ತಾತನ ಭಂಡಾರದಲ್ಲಿನ ಸ್ವಲ್ಪ ಸ್ವಲ್ಪ ನಗಗಳನ್ನು ಅಪಹರಿಸುತ್ತಿರುವುದನ್ನೂ, ಅವುಗಳನ್ನು ಗುಡ್ಡಗಳ ಸಂದಿನಲ್ಲಿ ಸೇರಿಸುತ್ತಿರುವುದನ್ನೂ ಕಂಡುಕೊಂಡೆನು. ವಿಮಲೆಯ ಮನೆಯಲ್ಲಿ ಮತ್ತಾವುದಾದರೂ ದೊರೆಯಬಹುದೆಂದು ನನ್ನ ಅಂತರಾತ್ಮವು ಹೇಳುತ್ತಿರುವುದು. ಸರ್ವವ್ಯಾಪಕನಾದ ಓ ಸ್ವಾಮಿಯೇ! ಇದೆಲ್ಲವೂ ನಿನ್ನ ವಿಲಾಸ!" ಎಂದುಕೊಳ್ಳುತ್ತ ವಿಮಲೆಯ ಮನೆಗೆ ಹೋಗಲು ಅವಕಾಶವನ್ನು ನಿರೀಕ್ಷಿಸುತ್ತಿದ್ದಳು.

ಮರುದಿನ ಬೇಟೆಗೆ ಹೊರಡತಕ್ಕ ತುತೂರಿಯ ಶಬ್ದವು ಕೇಳಿಸಿತು. ಪಾತ್ರೆಗಳು, ಅಡುಗೆ ಸಾಮಾನುಗಳು ಗಾಡಿಗಳ ಮೇಲೆ ಹೊರಟುವು. ಈಟಿಗಳನ್ನೂ ಭಾಲೆಗಳನ್ನೂ ತೆಗೆದುಕೊಂಡು ಬೇಟೆಗಾರರು ಹೊರಟರು. ನಾಯಿಗಳು ಅವರನ್ನು ಹಿಂಬಾಲಿಸಿ ಹೋದುವು. ಬೇಟೆಗೆ ಅನುಕೂಲವಾದ ಉಡುಗೆತೊಡುಗೆಗಳನ್ನು ಧರಿಸಿ, ಮದನಪಾಲನೂ ಲಲಿತಕುಮಾರನೂ ಉತ್ತಮಾಶ್ವಗಳನ್ನೇರಿ ಹೊರಟರು. ಆ ದಿನ ರಾಜಮಾತೆಯು ಬೇಗನೆ ಮಲಗುವ ಮನೆಗೆ ಹೋದಳು. ಆ ಅವಕಾಶವನ್ನು ತೆಗೆದುಕೊಂಡು ಇಂದಿರೆಯು ವಿಮಲೆಯೊಡನೆ ಛತ್ರಕ್ಕೆ ಹೋದಳು. ಅದರಲ್ಲಿದ್ದ ಬೈರಾಗಿಯು ಹೊರಟುಹೋಗಿದ್ದನು. ಆ ಬೈರಾಗಿಯ ಮಾಹಾತ್ಮ್ಯವನ್ನು ವರ್ಣಿಸುತ್ತಾ ವಿಮಲೆಯು ನಡೆಯುತ್ತಿದ್ದಳು. ಜಾಗ್ರತೆಯಾಗಿ ಛತ್ರದ ಹಿಂಭಾಗದಲ್ಲಿದ್ದ ವಿಮಲೆಯ ಮನೆಯನ್ನು ಇಬ್ಬರೂ ಸೇರಿದರು. ಆ ಮನೆಯು ಚೆನ್ನಾಗಿ ಅಲಂಕರಿಸಲ್ಪಟ್ಟಿದ್ದಿತು. ಗೋಡೆಗಳಲ್ಲಿ ವಿಧವಿಧವಾದ ಚಿತ್ರಪಟಗಳಿದ್ದವು. ಅಡಿಗೆಯ ಮನೆ ಶುಭ್ರವಾಗಿದ್ದಿತು. ವಿಮಲೆಯ ಹಿರೇ ಮಗಳಿಗಾಗಿ ಒಂದು ಕೊಟ್ಟಡಿಯಿದ್ದಿತು. ಅದರಲ್ಲಿ ಚಿಕ್ಕದೊಂದು ಮಂಚ, ಎರಡು ಕುರ್ಚಿಗಳು, ಒಂದೆರಡು ಪೆಟ್ಟಿಗೆಗಳು ಇದ್ದುವು. ಒಂದರ ಮೇಲೆ ಚಿಕ್ಕಚಿಕ್ಕ

ಪುಸ್ತಕಗಳಿದ್ದುವು. ಒಬ್ಬ ಸಾಮಾನ್ಯ ದಾಸಿಯ ಮನೆಯು ಅಷ್ಟು ಶುಭ್ರವಾಗಿರುವುದನ್ನು ನೋಡಿ ಇಂದಿರೆಯು ಸಂತೋಷಪಟ್ಟಳು. ಸರಳೆಯು ಕೇವಲ ರೂಪವತಿಯಲ್ಲದಿದ್ದರೂ ಕುರೂಪಿಯಲ್ಲ. ವಿದ್ಯಾವಿನಯಗಳಿಂದ ಮತ್ತಷ್ಟು ಶೋಭಿಸುತ್ತಿದ್ದಳು. ಇಂದಿರೆಯನ್ನು ನೋಡುತ್ತಲೇ ಅವಳು ಸಾಷ್ಟಾಂಗ ನಮಸ್ಕಾರವನ್ನು ಮಾಡಿದಳು. "ಅಮ್ಮಣ್ಣಿ! ಇನ್ನುಮೇಲೆ ನೀವು ಇವಳ ಸುಸಾರ ಮಾತನಾಡಿಕೊಳ್ಳಬಹುದು" ಎಂದು ಹೇಳಿ ವಿಮಲೆಯು ತನ್ನ ಕೆಲಸಗಳಿಗೆ ಹೊರಟುಹೋದಳು. ಸರಳೆಯು ಇಂದಿರೆಯನ್ನು ಒಂದು ಕುರ್ಚಿಯ ಮೇಲೆ ಕೂಡ್ರಿಸಿ ತಾನು ಹಾಕಿದ್ದ ವಸ್ತ್ರಗಳನ್ನೆಲ್ಲಾ ತಂದು ತೋರಿಸಿದಳು. ಇಂದಿರೆಯು ಅವುಗಳನ್ನೆಲ್ಲಾ ನೋಡಿ ಸಂತೋಷಪಟ್ಟಳು. ತದನಂತರ ಮಾತುಗಳಿಗೆ ಆರಂಭಿಸಿದರು. ಎಷ್ಟೋ ವಿಷಯಗಳನ್ನು ಮಾತನಾಡಿದರು. ಕಡೆಗೆ ಸರಳೆಯ ಮದುವೆಯ ಪ್ರಸ್ತಾವವು ಬಂದಿತು. ಫಲ್ಗುಣನಿಂದ ತಮಗೆ ಉಂಟಾದ ಸಂಕಟಗಳನ್ನೂ, ಅವನ ವಿಷಯವಾಗಿ ತನ್ನ ತಂದೆಯಿಂದ ತಾನು ಕೇಳಿದ್ದ ವಿಶಿಷ್ಟ ಸಂಗತಿಗಳನ್ನೂ ಸರಳೆಯು ಇಂದಿರೆಗೆ ತಿಳಿಸಿದಳು. "ಅಮ್ಮಾ! ನನ್ನ ತಂದೆ ಒಂದು ಮಹಾಪರಾಧವನ್ನು ಮಾಡಿದನು. ಆದರೆ, ಆತನಿಗೆ ಓದು ಬಾರದ ದೋಷದಿಂದ ಅದು ನಡೆಯಿತು. ಹಿಂದಿನ ಮಹಾರಾಜನಿಂದ ಒಂದು ಚೀಟಿಯನ್ನು ಯುವರಾಜನಿಗೆ ಕೊಡಲು ತೆಗೆದುಕೊಂಡು ಹೋಗುತ್ತಿದ್ದಾಗ ಫಲ್ಗುಣನು ನನ್ನ ತಂದೆಯನ್ನು ಇದಿರುಗೊಂಡು ಬೆದರಿಸಿ ಆ ಚೀಟಿಯನ್ನು ತೆಗೆದುಕೊಂಡನಂತೆ! ದೊಡ್ಡ ಅರಸನು ಸತ್ತನಂತರ ಫಲ್ಗುಣನು ಒಂದು ಕಾಗದವನ್ನು ನನ್ನ ತಂದೆಗೆ ಬರೆದು ಕಳುಹಿಸಿದನು. ಅದರಲ್ಲಿ ಫಲ್ಗುಣನ ಸ್ವಂತ ಬರವಣಿಗೆ ಇದೆ. ನನ್ನ ತಂದೆಗೆ ಓದುಬಾರದಿದ್ದರೂ ಬುದ್ಧಿಯುಳ್ಳವನಾದುದರಿಂದ ಆ ಕಾಗದವನ್ನು ಭದ್ರಪಡಿಸಿಟ್ಟಿದ್ದಾನೆ. ಈಗ ಅದರಿಂದ ಯಾವ ಪ್ರಯೋಜನವನ್ನೂ ಕಾಣಲಿಲ್ಲ" ಎಂದಳು.

**ಇಂದಿರೆ**—ಸರಳೇ! ಆ ಲೇಖನವನ್ನು ನಾನು ನೋಡಬಹುದೇ?

**ಸರಳೆ**—"ಅಮ್ಮಣ್ಣಿ! ನಿಮ್ಮ ಸಂದರ್ಶನವಾದ ಕ್ಷಣದಿಂದ ನಿಮ್ಮಲ್ಲಿ ನನಗೆ ಪೂರ್ಣ ವಿಶ್ವಾಸವುಂಟಾಗಿರುವುದರಿಂದ ನಿಮಗಾಗಿ ನನ್ನ ಪ್ರಾಣವನ್ನಾದರೂ ಕೊಡಲು ಸಿದ್ಧಳಾಗಿದ್ದೇನೆ" ಎಂದು ಹೇಳಿ ಅಲ್ಲಿದ್ದ ಒಂದು ಪೆಟ್ಟಿಗೆಯನ್ನು ತೆರೆದು ಚೀಟಿಯನ್ನು ತೆಗೆದು ಕೊಟ್ಟಳು.

ಇಂದಿರೆಯು ಆ ಚೀಟಿಯನ್ನು ಆಮೂಲಾಗ್ರವಾಗಿ ಓದಿ ಆನಂದವುಳ್ಳವಳಾಗಿ ಕಣ್ಣೀರು ಸುರಿಸುತ್ತಾ "ಸರಳೆ! ಈ ಚೀಟಿಯನ್ನು ನನಗೆ ಕೊಟ್ಟರೆ ನಿನಗೆ ಸಕಲ ಸೌಖ್ಯಗಳೂ ಉಂಟಾಗುವುವು" ಎಂದಳು.

**ಸರಳೆ**—ತಾಯಿ! ಫಲ್ಗುಣನಿಂದ ನಮ್ಮ ಕುಟುಂಬಕ್ಕೆ ಕಷ್ಟಬಾರ ದಿದ್ದರೆ ನೀವು ಏನು ಹೇಳಿದರೂ ಮಾಡಲು ಸಿದ್ಧಳಾಗಿದ್ದೇನೆ.

ಇಂದಿರೆಯು ಅವಳ ಕಿವಿಯಲ್ಲಿ ಏನೋ ಹೇಳಿದಳು. ಸರಳೆಯು ಆ ಚೀಟಿ ಯನ್ನು ಮಡಿಸಿ ಇಂದಿರೆಯ ಕೈಗೆ ಕೊಟ್ಟಳು. ಅದನ್ನು ಭದ್ರಪಡಿಸಿಕೊಂಡು ಇಂದಿರೆಯು ಅಂತಃಪುರವನ್ನು ಸೇರಿದಳು.

# ೧೮ನೆಯ ಅಧ್ಯಾಯ

ರಾಜಾಂತಃಪುರದಲ್ಲಿ ಕಾವಲಿದ್ದ ಡಿಲ್ಲೀ ಭಟನು ಬೇಟೆಗಾಗಿ ಫಲ್ಗುಣನು ಹೊರಟು ಹೋದೊಡನೆಯೇ ಅವನ ಕೊಟ್ಟಡಿಯಲ್ಲಿದ್ದ ಪೆಟ್ಟಿಗೆಗಳನ್ನೆಲ್ಲಾ ತೆಗೆದು ಶೋಧಿಸಿ ಅವುಗಳಲ್ಲಿರುವ ವಸ್ತುಗಳ ಪಟ್ಟಿಯನ್ನು ಬರೆದಿಟ್ಟುಕೊಂಡನು. ಇಂದಿರೆಯು ಈ ಸಂತೋಷವಾರ್ತೆಯನ್ನು ತನ್ನ ತಂದೆಗೆ ತಿಳಿಸಲು ಕುತೂಹಲ ಪಡುತ್ತಿದ್ದಳು. ಅವಳು ಆ ಮಾರ್ಗವಾಗಿ ಹೋಗುತ್ತಿದ್ದಾಗ ಆ ಭಟನು ಅವಳಿಗೆ ಏನೋ ಹೇಳಿದನು. ಅವಳು ಅದನ್ನು ಕೇಳಿದರೂ ಕೇಳದಂತೆ ನಟಿಸುತ್ತಾ ಸುಮ್ಮನಿದ್ದಳು. ಆ ಭಟನು ಸ್ವಲ್ಪ ಮಂದಬುದ್ಧಿಯುಳ್ಳವನಾದುದರಿಂದ ಫಲ್ಗುಣನು ಅವನನ್ನು ದಾಮೋದರನೆಂದು ಕರೆಯುತ್ತಿದ್ದನು. ಕೊನೆಗೆ ಆ ಅಂತಃಪುರದಲ್ಲಿ ಅವನಿಗೆ ಆ ಹೆಸರೇ ರೂಢಿಯಾಯಿತು. ಫಲ್ಗುಣನು ಅವನನ್ನು ಸದಾ ಪರಿಹಾಸ ಮಾಡುತ್ತಿದ್ದನು. ಏನೆಂದರೂ ಆ ಭಟನು ಪ್ರತ್ಯುತ್ತರ ಕೊಡು ತ್ತಿರಲಿಲ್ಲ.

ಪಿಬೋಲೆ ಕೆರೆಯ ಮಧ್ಯದಲ್ಲಿದ್ದ ಬೆಟ್ಟದ ಮೇಲಿನ ಎರಡು ದಿವ್ಯ ಭವನ ಗಳು ಪ್ರತಾಪಸಿಂಹ ಮಹಾರಾಜನು ಗತಿಸಿದಂದಿನಿಂದ ಹಾಳುಬಿದ್ದಿವೆಯೆಂದು ಈ ಮೊದಲೇ ಸೂಚಿಸಿದ್ದಾಯಿತಷ್ಟೆ. ಆ ಭವನಗಳಿಗೆ ಹೋಗುವುದಕ್ಕೆ ರಾಜಾಂತಃಪುರದಿಂದ ಸೇತುವೆ ಇದ್ದಿತು. ಹದಿನಾರು ವರುಷಗಳಿಂದಲೂ ಅಲ್ಲಿ ಮನುಷ್ಯಸಂಚಾರವಿಲ್ಲದೆ ಅದು ಶಿಥಿಲವಾಗಿದ್ದಿತು. ಹಗಲಿನಲ್ಲಿಯೇ ಭೂತಪ್ರೇತಗಳು ಅಲ್ಲಿ ಸಂಚರಿಸುವುವೆಂದು ಒಂದು ಪ್ರವಾದವು ಹೊರ ಟಿದ್ದಿತು. ಅಂತಹ ನಿರ್ಜನ ಪ್ರದೇಶದಲ್ಲಿ ತನ್ನ ತಂದೆಯ ಆಗಮನವನ್ನು ನಿರೀಕ್ಷಿ ಸುತ್ತಾ ಅಂಧಕಾರದಲ್ಲಿ ನಿರ್ಭಯವಾಗಿ ಇಂದಿರೆಯು ಒಂಟಿಯಾಗಿ ಸಂಚರಿಸು ತ್ತಿದ್ದಳು. ಸ್ವಲ್ಪ ಹೊತ್ತಿನ ಮೇಲೆ ಅವಳ ತಂದೆ ಬಂದು ಸೇರಿದನು.

## ಹದಿನೆಂಟನೆಯ ಅಧ್ಯಾಯ

**ಇಂದಿರೆ**—ಅಪ್ಪಾ! ನೀವಿಲ್ಲಿಗೆ ಬರುವಿರೆಂದು ನನಗೆ ತಿಳಿಯುವುದು.

ಮಿತ್ರದೇವನು ಮಗಳನ್ನು ಒಂದು ಸ್ಥಳಕ್ಕೆ ಕರೆದುಕೊಂಡು ಹೋದನು. ಬಹುಕಾಲ ಇಬ್ಬರೂ ಸಂಭಾಷಿಸಿದರು. ಇಂದಿರೆಯು ಸರಳೆಯ ಸಂಗತಿಯನ್ನು ಹೇಳಿ "ಜನಕಾ! ನಾವು ಏತಕ್ಕಾಗಿ ಆಲಸ್ಯ ಮಾಡಬೇಕು? ಬೇಕಾದುದಕ್ಕಿಂತಲೂ ಹೆಚ್ಚಾಗಿಯೇ ಆಧಾರವು ದೊರೆತಿರುವುದಲ್ಲವೇ? ಡಿಲ್ಲೀಶ್ವರನಿಗೆ ಏಕೆ ಹೇಳಿಕಳುಹಿಸ ಕೂಡದು?" ಎಂದಳು.

**ಮಿತ್ರದೇವ**—ನನ್ನ ಜೀವನಾಧಾರವೇ! ನಿನ್ನಿಂದಲ್ಲವೇ ನನಗೆ ವಿಮೋಚನೆಯಾಗುವುದು! ನನ್ನ ಪ್ರಿಯ ಜನನಿಯು ತನ್ನ ಪುತ್ರನನ್ನು ಸಲಹುವುದಕ್ಕಾಗಿ ಸ್ವರ್ಗದಿಂದ ನಿನ್ನನ್ನು ನನ್ನ ಪುತ್ರಿಯಾಗಿ ಕಳುಹಿಸಿರುವಳೆಂದು ಭಾವಿಸುತ್ತೇನೆ. ಮುಂದಿನ ಕಾರ್ಯಗಳನ್ನೆಲ್ಲಾ ನಡೆಯಿಸಲು ಲಲಿತಕುಮಾರನು ಸಿದ್ಧನಾಗಿ ಇದ್ದಾನಲ್ಲವೇ? ಅವನ ಮೂಲಕ ಸರ್ವವೂ ಜಾಗ್ರತೆಯಾಗಿ ನಡೆಯುವುದು. ನನಗೆ ಮತ್ತೇನೂ ಭಯವಿಲ್ಲ. ನೀನು ಜಾಗರೂಕಳಾಗಿರು.

**ಇಂದಿರೆ**—ಪ್ರಿಯ ಜನಕಾ! ಜನನೀ ಜನಕರ ಸೇವೆ ಮಾಡುವ ಭಾಗ್ಯವು ಸ್ವಲ್ಪವಾದರೂ ನನಗೆ ಲಭ್ಯವಾದುದಕ್ಕಾಗಿ ಪರಮಾತ್ಮನನ್ನೇ ಧ್ಯಾನಿಸುವೆನು. ಧರ್ಮವ್ಯಾಧನು ತನ್ನ ತಂದೆತಾಯಿಗಳ ಸೇವೆಯಿಂದಲ್ಲವೇ ಕೃತಕೃತ್ಯನಾದನು? ನನ್ನ ತಾಯಿ ನೀವು ಹೇಳಿದಂತೆ ಪರಾದೇವತೆಯೇ ಹೊರತು ಸಾಮಾನ್ಯ ಸ್ತ್ರೀಯಲ್ಲ. ಆಕೆಯ ದುಃಖವನ್ನು ನೋಡಿದರೆ ಪರ್ವತಗಳು ಕೂಡಾ ಕರಗುವುವು. ಅಂತಹುದರಲ್ಲಿ ನಾನು ಯಾವ ಮಾತನ್ನೂ ಬಾಯಿ ಬಿಡದೆ ಪಾಷಾಣ ಹೃದಯಳಂತಿರುವೆನು. ಹದಿನಾರು ವರುಷಗಳಿಂದ ಆಕೆ ನೆಲದ ಮೇಲೆ ಮಲಗುತ್ತಿರುವಳೇ ವಿನಾ ಹಾಸಿಗೆಯ ಸುಖವನ್ನರಿಯಳು. ನೀವು ಕೂಡಾ ಹಾಗೆಯೇ ಕಳೆದ ಹದಿನಾರು ವರ್ಷಗಳಿಂದಲೂ ಕಷ್ಟಪಡುತ್ತಿರುವಿರಿ. ಇಂತಹ ದೈವಸ್ವರೂಪರಾದ ತಂದೆತಾಯಿಗಳನ್ನು ಪುನಃ ಸೇರಿಸಿ ಸುಖವಾಗಿರುವಂತೆ ಮಾಡುವ ಭಾಗ್ಯದಿಂದ ಧನ್ಯಳಾಗುವೆನು.

**ಮಿತ್ರದೇವ**—"ಕುಮಾರೀ! ನಿನ್ನ ಮಾತು ಯಥಾರ್ಥವೇ ಸರಿ. ನಿನ್ನ ತಾಯಿಯ ದುಃಖವು ಬಹಳ ಅತಿಶಯವಾದುದು. ಅವಳ ಸಂಕಟ ಪರಿಹಾರವಾಗುವ ಕಾಲವು ಬಂದಿದೆ. ನಾವು ಇನ್ನು ಮೇಲೆ ಇಲ್ಲಿ ನಿಲ್ಲಕೂಡದು"—ಎಂದು ಹೇಳಿ ಮಾತನಾಡುತ್ತ ಇಂದಿರೆಯನ್ನು ಸ್ವಲ್ಪ ದೂರ ಕರೆದುಕೊಂಡು ಬಂದು ಬಿಟ್ಟು ತಾನು ಅದೃಶ್ಯನಾದನು.

ಬೇಟೆಗೆ ಹೋದವರು ಹಿಂದಿರುಗಿ ಬರುವುದಕ್ಕೆ ಒಂದು ವಾರವಾಯಿತು.

ತದನಂತರ ಒಂದು ದಿನ ಸೇವಕರೆಲ್ಲರೂ ಗುಂಪಾಗಿ ಸೇರಿ ಏನೇನೋ ಮಾತನಾಡಿ ಕೊಳ್ಳುತ್ತಿದ್ದರು. ಫಲ್ಗುಣನು ದೂರದಿಂದ ನೋಡಿದನು. ಅವರ ಸಮೀಪಕ್ಕೆ ಬಂದು ನಿಂತುಕೊಳ್ಳಲು ಅವರೆಲ್ಲರೂ ಅವನನ್ನು ಸತ್ಕರಿಸಿ, ಕುಳಿತುಕೊಳ್ಳುವು ದಕ್ಕೆ ಒಂದು ಆಸನವನ್ನು ಸಿದ್ಧಪಡಿಸಿದರು.

**ಫಲ್ಗುಣ**—ನೀವೆಲ್ಲರೂ ಸೇರಿ ಮಾತನಾಡಿಕೊಳ್ಳುತ್ತಿರುವುದೇನೆಂದು ನಾನು ಕೇಳಬಹುದೇ?

**ಸೇವಕರು**—ಏನಯ್ಯಾ ಹಾಗೆನ್ನುವೆ? ನಿನಗೆ ತಿಳಿಸದ ರಹಸ್ಯಗಳು ನಮಗುಂಟೇ? ಈ ಮಧ್ಯೆ ನೀವು ಬೇಟೆಗೆ ಹೋಗಿದ್ದ ಕಾಲದಲ್ಲಿ ಭೂತ ಪ್ರೇತಗಳ ಸಂಚಾರವು ಹೆಚ್ಚಾಗಿದೆ. ಕೆರೆಯ ಮಧ್ಯದಲ್ಲಿನ ಅರಮನೆಗಳಿಗೆ ಸೇತುವೆಯ ಮೇಲಿನಿಂದ ಒಂದು ದೊಡ್ಡ ಭೂತವು ಹೋಗಿ ಸಂಚರಿಸುತ್ತಿದ್ದು ಸ್ವಲ್ಪ ಹೊತ್ತಿನ ಮೇಲೆ ನೀರಿನಲ್ಲಿ ಬಿದ್ದುಹೋಯಿತು. ಒಂದು ದಿನ ಕೆರೆಯ ಸಮೀಪ ದಲ್ಲಿ ತಿರುಗುತ್ತಿದ್ದಿತು. ನೋಡಿ ದಾಮೋದರನಿಗೆ ಹೇಳಿದೆವು. ಅವನು ನೂತನ ಪ್ರಾಸಾದಗಳಲ್ಲಿ ಪಹರೆ ತಿರುಗುತ್ತಿದ್ದ ವಲ್ಲಭನನ್ನು ಕರೆದುಕೊಂಡು ಬಂದನು. ಧೈರ್ಯವಾಗಿ ಅದರ ಇದಿರಿನಲ್ಲಿ ನಿಂತನು. ಆ ಭೂತಕ್ಕೂ ಅವನಿಗೂ ಒಂದು ಗಜ ದೂರವಿರಲಿಲ್ಲ. ನೋಡುನೋಡುತ್ತಾ ಅದು ಅಲ್ಲಿಯೇ ಮಾಯವಾಯಿತು. ಆ ರಾತ್ರಿಯೆಲ್ಲವೂ ನಾವು ಅಲ್ಲಿಯೇ ಕಾದಿದ್ದೆವು. ಪುನಃ ಕಾಣಿಸಲಿಲ್ಲ. ನೀನು ಭೂತ ಪ್ರೇತಗಳನ್ನು ನಂಬುವುದಿಲ್ಲ. ಆದರೆ ನಾವು ಮಾತ್ರ ಬಹು ದಿನಗಳಿಂದ ನೋಡುತ್ತಿದ್ದೇವೆ. ಅವು ನೀರಿನಲ್ಲಿಯೇ ವಾಸಿಸುವುವು.

ಫಲ್ಗುಣನು ಈ ಮಾತುಗಳನ್ನೆಲ್ಲಾ ಅಕ್ಕರೆಯಿಂದ ಕೇಳಿದನು. ಮನಸ್ಸಿಗೆ ಒಂದು ವಿಧವಾದ ಭೀತಿಯುಂಟಾಯಿತು. ಬಾಯಿಂದ ಮಾತೇ ಹೊರಡ ಲಿಲ್ಲ. ಧೈರ್ಯಶಾಲಿಯಾದುದರಿಂದ ತನ್ನ ಮನಸ್ಸ್ಥಿತಿಯನ್ನು ಹೊರಪಡಿಸದೆ, "ಹದಿನಾರು ವರ್ಷಗಳಿಂದಲೂ ಇಲ್ಲದೇ ಇದ್ದ ಭೂತವು ಈಗ ಎಲ್ಲಿಂದ ಬಂದಿ ತೆಂದು ನಾನು ಆಲೋಚಿಸುತ್ತಿರುವೆನು" ಎಂದು ಉಸುರಿದನು.

**ಸೇವಕರು**—ನಾವು ಕಂಡ ಸಂಗತಿ ತಿಳಿಸಿದ್ದೇವೆ. ನೀವು ನಂಬಿದರೆ ನಂಬಬಹುದು. ಇಲ್ಲವಾದರೆ ನಿಮ್ಮ ಇಷ್ಟ—

ಫಲ್ಗುಣನಿಗೆ ಮತ್ತೊಂದು ಭಾವೋದಯವಾಯಿತು. "ವಿಕ್ರಮಸಿಂಹನು ಸತ್ತನೆಂಬ ಮಾತು ಸುಳ್ಳಾಗಿರಬಹುದೇ? ಇಂದಿರೆಯು ಅವನ ಮುಗಳಿಂತಲೇ ನನಗೆ ತೋರುವುದು. ಹಾಗಿದ್ದರೆ, ಅವಳು ತನ್ನ ತಾಯಿಗೆ ತಿಳಿಸದಿರುವಳೇ? ಹಾಗಿಲ್ಲದಿದ್ದರೆ, ಆ ಹುಡುಗಿ ಅಷ್ಟು ತಂತ್ರಗಳನ್ನು ನಡೆಯಿಸುವುದೇತಕ್ಕೆ? ಛೀ! ಅವಳೇನು ಮಾಡಿದಳು? ನನ್ನ ಗುಟ್ಟು ಹೊರಪಡುವುದೆಂದು ನಾನಲ್ಲವೇ

ಸಂದೇಹ ಪಡುತ್ತಿರುವೆನು? ವಿಕ್ರಮಸಿಂಹನು ಅಪರಾಧಿಯೆಂದು ಈಗ ನಿಶ್ಚಯವಾಗಿರುವುದು. ನಾನೇಕೆ ಭಯಪಡಬೇಕು? ಒಂದು ವೇಳೆ ಅವನು ಬದುಕಿದ್ದರೂ ಇಲ್ಲಿಗೆ ಬಂದು ಏನು ಮಾಡಬಲ್ಲನು? ಬಹುಶಃ ರಾತ್ರಿಗಳಲ್ಲಿ ತಿರುಗುತ್ತಿದ್ದು ಸಮಯವರಿತು ರಾಜನನ್ನು ಕೊಲ್ಲಬಹುದು. ಅರಸನನ್ನು ಕೊಂದವನು ನನ್ನನ್ನು ಮಾತ್ರ ಕೊಲ್ಲದೆ ಬಿಡುವನೇ? ನಮ್ಮನ್ನು ಕೊಂದ ಮೇಲೆ ತಾನು ನಿರ್ದೋಷಿಯೆಂದು ಸ್ಥಾಪಿಸಿಕೊಳ್ಳಬಹುದು. ನಿಜವಾಗಿಯೂ ಅವನು ದೋಷಿಯಲ್ಲ. ಆತನನ್ನು ದೋಷಿಯನ್ನಾಗಿ ಮಾಡಿದುದು ನಾನು. ಹಿಡಿದ ಕಾರ್ಯವನ್ನು ನಾನು ಕೊನೆಯ ವರೆಗೆ ಸಾಧಿಸಬೇಡವೇ? ಆ ವಿಕ್ರಮ ಸಿಂಹನು ಧರ್ಮಿಷ್ಠನಾಗಿದ್ದರೆ ನನಗೇನು? ನನ್ನನ್ನು ರಕ್ಷಿಸಿಕೊಳ್ಳಬೇಕಾದುದು ನನ್ನ ಧರ್ಮ. ಹೇಮಪ್ರಭಾ ದೇವಿಯು ಈಗಿನ ಡಿಲ್ಲೀಶ್ವರನಿಗೆ ತಂಗಿಯ ಮಗಳು. ಆಕೆಯ ಮೇಲೆ ವಿಶ್ವಾಸವಿದೆಯೆಂದು ಆ ದಿನವೇ ನನಗೆ ಗೊತ್ತಾಯಿತು. ಆಕೆ ನನಗೆ ವಿರೋಧವಾಗಿ ಹೇಳಿದರೆ ಸಾರ್ವಭೌಮನು ನನ್ನ ತಲೆ ತೆಗೆಯುವನೇ? ಹೇಗಾದರೂ ನಾನು ಉದಾಸೀನನಾಗಿರ ಬಾರದು. ವಿಕ್ರಮಸಿಂಹನನ್ನು ಬಂದಿ ಯಾಗಿ ಹಿಡಿಸುವುದು ನನಗೆ ಕ್ಷೇಮಕರ. ಅದಕ್ಕಿಂತಲೂ ಮುಂಚೆ ಇಂದಿರೆ ಯನ್ನು ಕೊಲ್ಲಲೇ ಬೇಕು" ಎಂದು ಫಲ್ಗುಣನು ಸಂಕಲ್ಪಿಸಿದನು.

ಬರುವ ತಿಂಗಳು ಡಿಲ್ಲೀ ಸಾರ್ವಭೌಮನು ಉದಯಪುರಿಗೆ ಬರುವನೆಂಬ ಸುದ್ದಿ ರಾಜಧಾನಿಯಲ್ಲೆಲ್ಲಾ ಹರಡಿಕೊಂಡಿತು. ಏನು ಕಾರಣ ಬರುವನೋ ಯಾರಿಗೂ ತಿಳಿಯಲಿಲ್ಲ. ರಾಜಮಾತೆಯನ್ನು ನೋಡಲು ಬರಬಹುದೆಂದು ಕೆಲವರೂ, ಮಹಾರಾಜನ ಕೊಲೆಯ ವಿಚಾರದಲ್ಲಿ ರಹಸ್ಯ ವಿಚಾರಣೆ ನಡೆಯು ವುದೆಂದು ಕೆಲವರೂ, ಹದಿನಾರು ವರುಷಗಳ ಹಿಂದೆ ತಪ್ಪಿಸಿಕೊಂಡು ಹೋದ ವಿಕ್ರಮಸಿಂಹನು ಇಲ್ಲಿಗೆ ಬಂದಿರುವನೆಂಬ ವಾರ್ತೆಯನ್ನು ಕೇಳಿ ಆತನನ್ನು ಹಿಡಿದು ಶಿಕ್ಷಿಸಲು ಬರುವನೆಂದು ಕೆಲವರೂ, ಹೀಗೆ ಅವರವರಿಗೆ ತೋರಿದಂತೆ ಜನಗಳು ಊಹಿಸುತ್ತಿದ್ದರು. "ಅಯ್ಯೋ! ಪಾಪ! ವಿಕ್ರಮಸಿಂಹನು ಮಹಾನು ಭಾವನು. ಆತನಿಗೆ ಇಷ್ಟು ಕಷ್ಟಗಳು ಉಂಟಾಗಬೇಕೇ? ಧರ್ಮವು ಅಡವಿಯ ಪಾಲಾಯಿತಲ್ಲ! ಮದನಪಾಲನು ಈ ವಂಶದಲ್ಲಿ ಹುಟ್ಟಿದವನಲ್ಲದಿದ್ದರೂ ರಾಜ್ಯ ವನ್ನಪಹರಿಸಿ ಯುವರಾಜನು ರಾಜ್ಯಕ್ಕೆ ಬರುವನೆಂಬ ಭೀತಿಯಿಂದ ಈಗ ಮತ್ತೊಂದು ವಿಧವಾಗಿ ಮತ್ಸರ ಸಾಧಿಸುವಂತಿದೆ. ಫಲ್ಗುಣನಂತೂ ದುಷ್ಟ ಕಾರ್ಯಗಳನ್ನಾಚರಿಸಿ ತಪ್ಪಿಸಿಕೊಂಡು ದೊರೆಯ ಸಮಾನವಾಗಿ ಸುಖಪಡುತ್ತಿರು ವನು. ಇವನಿಗೆ ವಿಕ್ರಮಸಿಂಹನಮೇಲೆ ಮಾತ್ಸರ್ಯವೇತಕ್ಕೆ? ಆಹಾ! ಈ ರಾಜ್ಯ ದಲ್ಲಿ ಇನ್ನೂ ಏನೇನು ಅನ್ಯಾಯಗಳು ನಡೆಯುವುವೊ! ವಿಧಾತನು ಏನೇನು

ವಿಪತ್ತುಗಳನ್ನು ವಿಧಿಸುವನೋ!" ಎಂಬದಾಗಿ ಜನಗಳು ರಹಸ್ಯವಾಗಿ ಮಾತನಾಡಿಕೊಳ್ಳುತ್ತಿದ್ದರು.

ಪಿಚೋಲಿ ಕೆರೆಯಲ್ಲಿನ ಪ್ರಾಸಾದಗಳನ್ನು ಅನೇಕ ಮಂದಿ ಕೆಲಸದವರು ಶುಭ್ರ ಪಡಿಸುತ್ತಿದ್ದರು. ಅದಾದ ಮೇಲೆ ಆ ಆ ಸ್ಥಳಗಳಲ್ಲಿರಬೇಕಾದ ಬಣ್ಣಗಳನ್ನು ಪುನಃ ಬಳಿದರು. ಕೊಟ್ಟಡಿಗಳಿಗೆ ನವಸುಧಾಲೇಪನಮಂ ಮಾಡಿಸಿ ಅಲ್ಲಿದ್ದ ಶಿಥಿಲವಾದ ವಸ್ತುಗಳನ್ನು ತೆಗೆದು ಅನರ್ಘ್ಯವಾದ ಮಂಚಗಳನ್ನೂ, ನಿಲುವುಗನ್ನಡಿಗಳನ್ನೂ, ಹೊಸದಾಗಿ ತಂದು ಸೇರಿಸಿದರು. ಆ ಪ್ರಾಸಾದಗಳು ಪುನಃ ರಾಜಭವನಗಳಂತೆ ಪ್ರಕಾಶಿಸಿದುವು. ಈ ಕಥೆ ನಡೆದ ಅನೇಕ ವರುಷಗಳ ಬಳಿಕ ಸಾರ್ವಭೌಮನಾದ ಷಾಜಹಾನ್, ಮುಂತಾಜ್‌ಬೇಗಂ ಯವರು ಈ ಮನೋಹರವಾದ ಸೌಧಗಳಲ್ಲಿದ್ದು ಡಿಲ್ಲಿಗೆ ಪ್ರಯಾಣ ಮಾಡಿದರೆಂದು ಚರಿತ್ರಕಾರರು ಬರೆದಿದ್ದಾರೆ.

ಈ ಪ್ರಾಕಾರಗಳ ಅಲಂಕಾರದ ಕೆಲಸವು ಫಲ್ಗುಣನಿಗೆ ಕೊಡಲ್ಪಟ್ಟಿದ್ದಿತು. ಸಾರ್ವಭೌಮನ ಅಂತಸ್ತಿಗೆ ತಕ್ಕಂತೆ ಆ ಭವನಗಳನ್ನು ವಾಸಯೋಗ್ಯಗಳನ್ನಾಗಿ ಮಾಡುವ ಶಕ್ತಿಯು ಫಲ್ಗುಣನಿಗೆ ಇರುವುದೆಂದು ಮದನಪಾಲರಾಜನ ನಂಬಿಕೆ. ಒಂದು ದಿನ ರಾತ್ರಿ ಭೋಜನಾನಂತರ ಫಲ್ಗುಣನು ತನ್ನ ಕೊಟ್ಟಡಿಯಲ್ಲಿ ಮಲಗದೆ ಇತರರು ನೋಡದಂತೆ ಹೊರಗೆ ಹೋದನು. ದಾಮೋದರನು ಮಾತ್ರ ಹೇಗೋ ನೋಡಿದನು. ಆ ರಾತ್ರಿ ಇಂದಿರೆಗೆ ನಿದ್ರೆಬರಲಿಲ್ಲ. ಬೆಟ್ಟದ ಮೇಲಿನ ಸೌಧಗಳಿಗೆ ಬರಬೇಕೆಂದು ತಂದೆಯು ಹೇಳಿದ್ದನು, ಅದರಂತೆ ಹೋಗಲೇ ಬೇಕು. ಮೆಲ್ಲನೆ ಹಾಸಿಗೆಯಿಂದೆದ್ದು ಸುತ್ತಲೂ ನೋಡಿ ಹೊರಗೆ ಬರುತ್ತಿದ್ದಳು. ದಾಮೋದರನು ಬಾಗಿಲನ್ನು ತೆರೆದಿಟ್ಟನು. ಎಲ್ಲಿ ನೋಡಿದರೂ ಗಾಢಾಂಧಕಾರವೇ ಆವರಿಸಿದ್ದಿತು. ವೃಕ್ಷಗಳಲ್ಲಿ ಹುಳುಗಳ ಕಿಚುಕಿಚು ಶಬ್ದದ ಹೊರತು ಪ್ರಕೃತಿಯೆಲ್ಲವೂ ನಿಶ್ಶಬ್ದವಾಗಿದ್ದಿತು. ಇಂದಿರೆಯು ವೃಕ್ಷಪಙ್ಕ್ತಿಗಳ ನಡುವೆ ಮೆಲ್ಲನೆ ನಡೆಯುತ್ತಾ ಕಾನನಮಧ್ಯದಲ್ಲಿನ ಸೌಧಗಳನ್ನು ಸೇರಿದಳು. ಅವುಗಳಿಗೆ ಮಾಡಿದ್ದ ಅಲಂಕಾರಗಳನ್ನು ನೋಡಿ ಇಂದಿರೆಯು ಆನಂದಭರಿತಳಾದಳು. ಆ ಸೌಧಗಳಿಗೆ ಹೋಗುವ ಸೇತುವೆಯ ಉಭಯ ಪಾರ್ಶ್ವಗಳಲ್ಲಿಯೂ ಹೊಸ ತೊಟ್ಟಿಗಳಲ್ಲಿ ಹುವ್ವಿನ ಗಿಡಗಳನ್ನಿಟ್ಟಿದ್ದರು. ಕಾಡುಮರಗಳೋಪಾದಿಯಲ್ಲಿ ಹುಚ್ಚುಹುಚ್ಚಾಗಿ ಬೆಳೆದಿದ್ದ ವೃಕ್ಷಗಳ ಕೊಂಬೆಗಳನ್ನು ಕತ್ತರಿಸಿ, ತೊಟ್ಟಿಗಳಲ್ಲಿ ಬೆಳೆದಿದ್ದ ಬಳ್ಳಿಗಳನ್ನು ಮರಗಳಿಗೆ ಹಬ್ಬಿಸಿ ಅಲ್ಲಲ್ಲಿ ಲತಾಗೃಹಗಳನ್ನೇರ್ಪಡಿಸಿದ್ದರು. ಇವುಗಳನ್ನೆಲ್ಲಾ ನೋಡುತ್ತ ಸೋಪಾನಗಳನ್ನು ಹತ್ತಿ ಇಂದಿರೆಯು ಸೌಧದ ಬಳಿಯಲ್ಲಿ ನಿಂತಳು. "ಏನಿದು? ನನ್ನ ತಂದೆ

ಇನ್ನೂ ಬರಲಿಲ್ಲ. ನಾನು ಏಕಾಕಿನಿಯಾಗಿ ಸಿಕ್ಕಿದ್ದೇನೆ. ಒಂದು ದಿನವಾದರೂ ಭಯವೆಂಬುದನ್ನೇ ಅರಿಯದಿರುವ ನನಗೆ ಈ ದಿನ ಏಕೋ ಭಯವುಂಟಾಗುತ್ತಿರುವುದು. ಏನಾದರೂ ಆಪತ್ತು ಸಂಭವಿಸುವುದೇ ? ಏನು ಬಂದರೂ ಪರಮಾತ್ಮನಿಗೆ ಅರ್ಪಿಸುವೆನು. ಈ ಸೌಧದ ಹಿಂಭಾಗದಲ್ಲಿರಬೇಕೆಂದು ನನ್ನ ತಂದೆ ನಿಯಮಿಸಿರುವುದು. ಅಲ್ಲಿಗೆ ಹೋಗುವೆನು" ಎಂದಾಲೋಚಿಸಿ ಹೊರಟಳು. ಅಲ್ಲಿ ಪ್ರಾಕಾರದ ಗೋಡೆಯ ಮೇಲೆ ಆತುಕೊಂಡು ಕೆರೆಯಲ್ಲಿನ ತೆರೆಗಳನ್ನು ನೋಡುತ್ತ ನಿಂತಿದ್ದಳು. ವಿಕ್ರಮಸಿಂಹನನ್ನು ಕಂಡು ಹಿಡಿಯುವುದಕ್ಕಾಗಿ ಬಂದಿದ್ದ ಫಲ್ಗುಣನು ಆಗ ಗ್ರಹಚಾರವಶಾತ್ ಆ ಸೌಧದಲ್ಲಿದ್ದನು. ಇಂದಿರೆಗೆ ಈ ಸಂಗತಿ ಗೊತ್ತಿರಲಿಲ್ಲ. ಅವನು ಕಿಟಿಕಿಯ ಮೂಲಕ ಇಂದಿರೆಯನ್ನು ನೋಡಿದನು. ಅವಳನ್ನು ಕೊನೆಗಾಣಿಸುವುದಕ್ಕೆ ಇದೇ ಒಳ್ಳೆಯ ಸಮಯವೆಂದು ಭಾವಿಸಿ, ಫಲ್ಗುಣನು ಬಾಗಿಲು ತೆರೆದುಕೊಂಡು ಹೊರಗೆ ಬಂದು ಅವಳನ್ನು ಕಡಿದು ಹಾಕುವುದಕ್ಕಾಗಿ ತನ್ನ ಕತ್ತಿಯನ್ನು ಎತ್ತಿದನು. ಯಾವ ಕಾರಣದಿಂದಲೋ ಆ ಕತ್ತಿಯು ಮೇಲೆ ಹಾಗೆಯೇ ನಿಂತಿತಲ್ಲದೆ ಅದನ್ನು ಪುನಃ ಕೆಳಕ್ಕೆ ತೆಗೆದುಕೊಳ್ಳಲು ಸಹ ಸಾಧ್ಯವಾಗಲಿಲ್ಲ. ಫಲ್ಗುಣನು ಧೈರ್ಯಶಾಲಿಯೆಂದು ಹೇಳಬೇಕಾದುದೇ ಇಲ್ಲ. ತನ್ನ ಕತ್ತಿ ಮುಳ್ಳುಗಳಲ್ಲಿ ಸಿಕ್ಕಿಕೊಂಡಿರಬಹುದೆಂದು ತಿಳಿದನು. ಗೋಡೆಯ ಬಳಿ ಒಂದು ಜಾಲೀಮುಳ್ಳುಗಳ ಗಿಡವಿದ್ದಿತು. ಅಷ್ಟು ಮಾತ್ರದಿಂದ ಸುಮ್ಮನಿರದೆ ಫಲ್ಗುಣನು ಇಂದಿರೆಯನ್ನು ಎರಡೂ ಕೈಗಳಿಂದ ಎತ್ತಿ "ಹಾಳಾಗು, ಮುಂಡೆ!" ಎಂದು ಶಪಿಸುತ್ತಾ ಆ ಮುಳ್ಳಿನ ಗಿಡದ ಪಕ್ಕದಲ್ಲಿ ಬಿಸಾಡಿದನು. ಆಗ ಅಲ್ಲಿ "ಅಯ್ಯೋ!" ಎಂಬ ಶಬ್ದವು ಮಾತ್ರ ಕೇಳಿಸಿತು. ಸ್ವಲ್ಪ ಹೊತ್ತು ಅವನು ಅಲ್ಲಿಯೇ ನಿಂತುಕೊಂಡಿದ್ದನು. ಮತ್ತಾವ ಶಬ್ದವೂ ಕೇಳಿಸಲಿಲ್ಲ. "ಇನ್ನು ವಿಕ್ರಮಸಿಂಹನೊಬ್ಬನಿದ್ದಾನೆ. ಅವನನ್ನು ಕೂಡಾ ಒಂದು ವಾರದೊಳಗಾಗಿ ನಿಪಾತ ಮಾಡುವೆನು" ಎಂದುಕೊಳ್ಳುತ್ತಾ ಫಲ್ಗುಣನು ಆ ಸ್ಥಳವನ್ನು ಬಿಟ್ಟು ಹೊರಟು ಹೋದನು.

ಸ್ವಲ್ಪ ಹೊತ್ತಿನ ಮೇಲೆ ಇಂದಿರೆಯು ಕಣ್ಣು ತೆರೆದು ನೋಡಿದಳು. ತಾನೊಂದು ಮೃದುಶಯ್ಯೆಯಲ್ಲಿದ್ದಂತೆ ತೋರಿತು. ಪಕ್ಕದಲ್ಲಿ ಯಾರೋ ಗಾಳಿ ಬೀಸುತ್ತಿದ್ದರು. ಮಿಣುಕುಮಿಣುಕೆಂದು ಒಂದು ದೀಪವು ಸಹ ಬೆಳಗುತ್ತಿದ್ದಿತು. ಪುನಃ ಕಣ್ಣುಗಳನ್ನು ಮುಚ್ಚಿದಳು. ದೇಹಾದ್ಯಂತವೂ ನೋವಾಗಿದ್ದಿತು. ~~ಮುಲುಕು~~ವುದಕ್ಕಾರಂಭಿಸಿದಳು. ಪಕ್ಕದಲ್ಲಿದ್ದ ಮನುಷ್ಯನು ಅವಳ ಬಾಯಲ್ಲಿ ಸ್ವಲ್ಪ ಸ್ವಲ್ಪ ಬಿಸಿ ಹಾಲನ್ನು ಹಾಕುತ್ತ ಬಂದನು. ಅದು ಕುಕ್ಷಿಯನ್ನು ಸೇರಿದ ಸ್ವಲ್ಪ ಹೊತ್ತಿನಮೇಲೆ ಇಂದಿರೆಗೆ ಶಕ್ತಿ ಬಂದಿತು. ತನಗೆ

ಹಾಲನ್ನು ಹಾಕುತ್ತಿರುವವರಾರೋ ಎಂದು ಆತನ ಹಸ್ತವನ್ನು ತಡವಿ ನೋಡಿದಳು. ತನ್ನ ತಂದೆಯ ಹಸ್ತವಾಗಿದ್ದಿತು. ಅದನ್ನು ಕಣ್ಣುಗಳಿಗೆ ಒತ್ತಿಕೊಂಡಳು.

**ಮಿತ್ರದೇವ**—ತಾಯೇ! ನಾನು ನಿರ್ಭಾಗ್ಯನಾದ ನಿನ್ನ ತಂದೆ! ಭಯಪಡಬೇಡ. ಇಲ್ಲಿ ಮನುಷ್ಯರಾರೂ ಬರುವುದಿಲ್ಲ.

ಇಂದಿರೆಗೆ ಚೆನ್ನಾಗಿ ಸ್ಮೃತಿ ಬಂದಿತು. "ಜನಕಾ! ಭಗವಂತನ ಮಹಿಮೆಯು ಎಷ್ಟು ಅದ್ಭುತವಾದುದು! ಸ್ವಲ್ಪ ವಿಶ್ರಮಿಸಿ, ತರುವಾಯ ಎಲ್ಲವನ್ನೂ ಹೇಳುವೆನು. ನೀವು ಕೂಡಾ ಇಲ್ಲಿ ಮಲಗಬಾರದೇ?"

**ಮಿತ್ರದೇವ**—ತನಯೇ! ಒಂದು ಕ್ಷಣಕ್ಕೆ ಮುಂಚೆ ನಿನಗುಂಟಾದ ವಿಪತ್ತು ಧೀರನಾದ ನನ್ನ ಹೃದಯವನ್ನು ಸಹ ಭೇದಿಸಿರುವುದು. ನನಗೆ ನಿದ್ರೆ ಹೇಗೆ ತಾನೇ ಬರುವುದು? ನೀನು ವಿಶ್ರಮಿಸು. ನಿನ್ನ ಸಮೀಪದಲ್ಲಿಯೇ ನಾನು ಕುಳಿತಿರುವೆನೆಂದು ಹೇಳಿ ಮತ್ತೊಂದು ಔಷಧವನ್ನು ತಂದು ಅವಳ ಬಾಯಲ್ಲಿ ಬಿಟ್ಟನು. ದೀಪದ ಬೆಳಕಿನಲ್ಲಿ, ಅವಳ ದೇಹಕ್ಕೆ ತಗುಲಿಕೊಂಡಿದ್ದ ಮುಳ್ಳುಗಳನ್ನೆಲ್ಲಾ ನೋಡಿ ಕಿತ್ತುಹಾಕಿದನು. ಕಾಲಿನಲ್ಲಿ, ಭುಜಗಳಲ್ಲಿ, ತಲೆಯಲ್ಲಿ ಉಂಟಾಗಿದ್ದ ಗಾಯಗಳಿಗೆಲ್ಲಾ ಔಷಧವನ್ನು ಲೇಪನಮಾಡಿದನು. ಒಂದು ಸೀರೆಯನ್ನು ತಂದು ಮಗಳಿಗೆ ಉಡಿಸಲು ಯತ್ನಿಸಿದನು. ಇಂದಿರೆಯು ಮೆಲ್ಲನೆ ಎದ್ದು ಆ ಸೀರೆಯನ್ನು ಉಟ್ಟುಕೊಂಡು ತನ್ನ ಸೀರೆಯನ್ನು ಪಾರ್ಶ್ವಕ್ಕೆ ತಳ್ಳಿದಳು. ತತ್‌ಕ್ಷಣವೇ ತಂದೆಯು ಆ ಸೀರೆಯನ್ನು ಒಗೆದು ಒಣಗುವುದಕ್ಕೆ ಹಾಕಿದನು. ಅದೆಲ್ಲವನ್ನೂ ನೋಡುತ್ತಿದ್ದ ಇಂದಿರೆಯು "ಅಯ್ಯೋ! ಪ್ರಿಯ ಜನಕಾ! ನೀವು ಇಂತಹ ಕಾರ್ಯಗಳನ್ನು ಕೂಡಾ ಮಾಡಬಹುದೇ? ನಾನು ಎಂತಹ ಪಾಪಿನಿ! ನಿಮ್ಮಿಂದ ಸೀರೆಯನ್ನು ಒಗೆಯಿಸಿಕೊಂಡೆನಲ್ಲಾ!" ಎಂದು ಮರುಗಿದಳು.

**ಮಿತ್ರದೇವ**—ಅಮ್ಮಾ! ನೀನೇಕೆ ಚಿಂತಿಸುವೆ? ನೀನು ಎಳೆಯ ಮಗುವಾಗಿರುವಾಗ ನಾನೆತ್ತಿಕೊಂಡು ಹೋದೆನು. ಆಗ ನನಗೆ ಸೇವಕರಾರಿದ್ದರು? ನಿನ್ನ ಮಲಮೂತ್ರಗಳನ್ನೆತ್ತಿ ತಾಯಿಯಂತೆ ಸಮಸ್ತ ಕೆಲಸಗಳನ್ನು ನಾನು ಮಾಡಬೇಕಾಗಿ ಬಂದಿತು. ಆ ಕಾಲವು ನನಗೆ ಸುಖವಾಗಿದ್ದಿತು. ಆ ಮೇಲೆ ರತ್ನದ್ವೀಪಕ್ಕೆ ಹೋದ ಬಳಿಕ ನಿನ್ನನ್ನು ಅನ್ಯರು ಸೇವಿಸುತ್ತಿದ್ದರು.

ಈ ಮಾತನ್ನು ಕೇಳಿ ಇಂದಿರೆಯು ಅಳಲಾರಂಭಿಸಿದಳು.

**ಮಿತ್ರದೇವ**—ಮಗು! ವಿಲಪಿಸಬೇಡ. "ದುಃಖೇಷ್ವನುದ್ವಿಗ್ನಮನಾಃ

ಸುಖೇಷು ವಿಗತಸ್ಪೃಹಃ" ॥ ಎಂಬ ಭಗವಂತನ ವಚನವನ್ನು ಜ್ಞಾಪಕಕ್ಕೆ ತಂದುಕೋ.

**ಇಂದಿರೆ**—ಅಪ್ಪಾ! ನಿನ್ನೆಯ ರಾತ್ರಿ ನಿಮ್ಮ ಸಂದರ್ಶನಕ್ಕಾಗಿ ಬಂದೆನು. ನೀವು ಇನ್ನೂ ಬಂದಿರಲಿಲ್ಲವಾಗಿ ಸೌಧದ ಹಿಂಭಾಗದಲ್ಲಿರುವ ಗೋಡೆಯ ಬಳಿ ನಿಂತುಕೊಂಡು ಕೆರೆಯಲ್ಲಿನ ತರಂಗಗಳನ್ನು ನೋಡುತ್ತಿದ್ದಾಗ ಆ ಚಂಡಾಲನು-ಫಲ್ಗುಣನು ಹೇಗೋ ಬಂದು ನನ್ನನ್ನು ಎತ್ತಿ ಬಿಸುಟನು. ಅವನ ಸ್ಪರ್ಶವಾದ ಕೂಡಲೇ ನನಗೆ ಎಚ್ಚರ ತಪ್ಪಿತು. "ಅಯ್ಯೋ!" ಎಂದು ಕೂಗಿದುದು ಮಾತ್ರ ಜ್ಞಾಪಕವಿದೆ. ಎಂತಹ ಆಪತ್ತಿನಿಂದ ಭಗವಂತನು ರಕ್ಷಿಸಿದನೋ, ನಾನು ಇಲ್ಲಿಗೆ ಹೇಗೆ ಬಂದೆನೋ ತಿಳಿಯದು.

**ಮಿತ್ರದೇವ**—ಕುಮಾರಿ! ನಿನಗೆ ಹೇಳಿದ ಪ್ರಕಾರ ನಾನು ಸಕಾಲದಲ್ಲಿಯೇ ಅಲ್ಲಿಗೆ ಬಂದೆನು. ಸೌಧದ ಕಿಟಕಿಯಲ್ಲಿ ಯಾರೋ ಒಬ್ಬ ಮನುಷ್ಯನು ನಿಂತಿರುವಂತೆ ಕಾಣಿಸಿತು. ಸ್ವಲ್ಪ ಹೊತ್ತು ನೋಡಿ ಹೋಗೋಣವೆಂದೆಣಿಸಿರುವಲ್ಲಿ ಆ ಮನುಷ್ಯನು ಬಾಗಿಲು ತೆರೆದುಕೊಂಡು ಹೊರಗೆ ಬಂದನು. ಕತ್ತಲೆಯಲ್ಲಿ ಅವನು ಫಲ್ಗುಣನೆಂಬುದು ನನಗೆ ಗೊತ್ತಾಗಲಿಲ್ಲ. ಒಂದೆರಡು ನಿಮಿಷಗಳೊಳಗಾಗಿ "ಅಯ್ಯೋ!" ಎಂಬ ಧ್ವನಿಯು ಕೇಳಿಸಿತು. ಅದು ನಿನ್ನ ಕಂಠಧ್ವನಿಯೆಂದು ಗುರುತಿಸಿದೆನು. ನನ್ನ ಮನಸ್ಸು ಕಳವಳಗೊಂಡಿತು. ಸುಗ್ಗಿ ಬರಬೇಕೆಂದು ಯೋಚಿಸುತ್ತಿರುವಷ್ಟರಲ್ಲಿಯೇ ಫಲ್ಗುಣನು ನಾನಿದ್ದ ಸ್ಥಳದಿಂದಲೇ ಹೊರಟುಹೋದನು. ಆಗ ನಿನಗೆ ಏನೋ ಅನರ್ಥವುಂಟಾಗಿರಬೇಕೆಂದೆಣಿಸಿದೆನು. ದೀಪವನ್ನು ಹಚ್ಚಿಕೊಂಡು ಬಂದು ನೋಡಿದೆನು. ಅಲ್ಲಿ ಒಂದು ಪೊದೆ ಮುರಿದು ಕೆಳಗೆ ಬಿದ್ದಿದ್ದಿತು. ಅದರ ಮೇಲೆ ಸ್ಮೃತಿಯಿಲ್ಲದೆ ನೀನು ಬಿದ್ದಿದ್ದೆ. ಒಂದು ಗಿಡದ ಕೊಂಬೆಯು ನಿನ್ನ ಭುಜಕ್ಕೆ ತಗುಲಿ ರಕ್ತವು ಸುರಿಯುತ್ತಿದ್ದಿತು. ಕಾಲಿನಲ್ಲಿ ಒಂದು ಗಿಡದ ಮುಳ್ಳು ತಗುಲಿ ಅಲ್ಲಿಂದಲೂ ರಕ್ತವು ಸುರಿಯುತ್ತಿದ್ದಿತು. ಸ್ವಲ್ಪ ಆಚೆಯ ಭಾಗದಲ್ಲಿ ನೀನು ಬಿದ್ದಿದ್ದರೆ ನಿನ್ನ ದೇಹವೆಲ್ಲವೂ ಚೂರು ಚೂರಾಗಿ ಕೆರೆಯಲ್ಲಿ ಬಿದ್ದಿರುತ್ತಿದ್ದಿತು. ಭಗವಂತನೇ ಕಾಪಾಡಿದನು. ನಿನ್ನ ಶರೀರವು ದೊರೆಯಿತೆಂದು ನಾನು ಆಸೆಗೊಂಡೆನೇ ಹೊರತು ನೀನು ಬದುಕುವೆಯೆಂದು ನಾನೆಣಿಸಲಿಲ್ಲ. ದೀಪವನ್ನು ಆರಿಸಿ ನಿನ್ನನ್ನು ಭುಜದ ಮೇಲೆ ಹಾಕಿಕೊಂಡು ಪ್ರಕೃತಿಯ ಬೆಳಕನ್ನೇ ಆಧಾರಮಾಡಿಕೊಂಡು ಅಲ್ಲಿಂದ ಮೇಲಕ್ಕೇರಿ ಬಂದೆನು. ನಿನ್ನ ನಾಡಿಗಳು ಹೊಡೆದುಕೊಳ್ಳುತ್ತಿದ್ದುವು. ನಿನ್ನ ಜೀವಿತಾಸೆಯೇ ನನಗೆ ಧೈರ್ಯವನ್ನುಂಟುಮಾಡಿತು. ಇಲ್ಲಿಗೆ ಬಂದನಂತರ ಚಿಕಿತ್ಸೆ ಮಾಡಲಾರಂಭಿಸಿದೆನು. ಕ್ರಮವಾಗಿ ನಿನಗೆ ಚೈತನ್ಯವು ಬಂದಿತು. ನಿನ್ನನ್ನು ಭಗವಂತನು ನನಗೆ

ಪುನಃ ಕೊಟ್ಟಂತಾಯಿತು. ಮಗೂ! ನೀರೆಯನ್ನುಟ್ಟುಕೊಂಡು ಹೊರಡು, ನಿನ್ನನ್ನು ಹೊರಗೆ ಬಿಟ್ಟು ಬರುವೆನು.

**ಇಂದಿರೆ**—ಜನಕಾ! ಈ ಭೂಗೃಹವು ಎಷ್ಟು ಮನೋಹರವಾಗಿರುವುದು! ಇದೆಲ್ಲವನ್ನು ನಾನು ನೋಡಬೇಡವೇ?

**ಮಿತ್ರದೇವ**—"ಮಗು! ಹದಿನಾರು ವರುಷಗಳಿಂದ ಮಾನವಸಂಚಾರ ವಿಲ್ಲದೆ ಇದ್ದ ಈ ಗೃಹವು ಈಗೀಗ ವಾಸಯೋಗ್ಯವಾಗಿರುವುದು. ನೀನು ನಿನ್ನ ತಾಯಿಯ ಮನೆಯನ್ನು ಸೇರಿದಂದಿನಿಂದ ನಾನು ಇದನ್ನು ದಿನವೂ ಶುಭ್ರ ಪಡಿಸುತ್ತಾ ಈ ಸ್ಥಿತಿಗೆ ತಂದಿರುವೆನು. ಈ ಭೂಗೃಹವು ಎರಡು ಮೈಲುಗಳ ವರೆಗೂ ಇರುವುದು. ಆರಾವಳೀ ಪರ್ವತಗಳ ಗುಹೆಗಳಲ್ಲಿ ಒಂದು ಮಾರ್ಗವಿರು ವುದು. ಈ ನಗರದ ಸತ್ರದ ಹಿಂದೆ ಒಂದು, ಕೆರೆಯ ಸೇತುವೆಯ ಕೆಳಗೆ ಒಂದು ಮಾರ್ಗವಿದೆ. ನನ್ನ ಪೂರ್ವಜರು ಇಲ್ಲಿ ಸಕಲೈಶ್ವರ್ಯಗಳನ್ನು ಸೇರಿಸಿಟ್ಟಿ ರುವರು. ಇದೆಲ್ಲವನ್ನೂ ನೀನು ನೋಡುವುದಕ್ಕೆ ಇದು ಸಮಯವಲ್ಲ" ಎಂದು ಹೇಳುತ್ತಾ ಕರೆದುಕೊಂಡು ಬಂದು ಇಂದಿರೆಯನ್ನು ಸತ್ರದ ಬಳಿ ಬಿಟ್ಟು ಹೊರಟು ಹೋದನು.

ಇಂದಿರೆಯು ಪುನಃ ಅಂತಃಪುರವನ್ನು ಸೇರಿದಳು. ಇವಳು ಬಂದೊಡನೆ ಯೆ ದ್ವಾರವು ತೆರೆಯಲ್ಪಟ್ಟಿತು. ಗಾಬರಿಯಿಂದ ನೋಡಲು ದಾಮೋದರನು ನಗುಮೊಗದಿಂದ ಇಂದಿರೆಗೆ ನಮಸ್ಕರಿಸಿದನು. ಒಳಗೆ ಪ್ರವೇಶಿಸಿ ತಾರೆಯ ಸಮೀ ಪದಲ್ಲಿ ಕುಳಿತುಕೊಂಡಳು. ನಾಲ್ಕು ಗಂಟೆ ಹೊಡೆಯಿತು. ಇಂದಿರೆಯು ಸ್ವಲ್ಪ ನಿದ್ರಿಸಿದಳು. ಪುನಃ ಎದ್ದು ಯಥಾವಿಧಿಯಾಗಿ ಕಾರ್ಯಗಳೆಲ್ಲವನ್ನು ತೀರಿಸಿ ಕೊಂಡು ರಾಜಮಾತೆಗೆ ಬೇಕಾದ ಶುಶ್ರೂಷೆಗಳನ್ನು ಮಾಡಿ: "ಜನನೀ! ಈ ದಿನ ನನಗೇತಕ್ಕೋ ಶರೀರವೆಲ್ಲವೂ ನೋಯುತ್ತಿರುವುದು. ಶೀತವಾದಂತಿದೆ. ಮಲಗಲು ಅಪ್ಪಣೆಕೊಡಬೇಕು" ಎಂದು ಕೇಳಿದಳು.

**ರಾಜಮಾತೆ**—ಇಂದಿರೆ! ನಿನ್ನನ್ನು ನೋಡಿದರೆ ಏನೋ ಅಸ್ವಸ್ಥತೆ ಯಿದ್ದಂತೆ ಕಾಣುತ್ತಿದೆ. ದೇಹವೆಲ್ಲವೂ ನೋಯಲು ಕಾರಣವೇನು?

**ಇಂದಿರೆ**—ಅಮ್ಮಾ! ಕತ್ತಲೆಯಲ್ಲಿ ಕೆಳಗೆ ಬಿದ್ದೆನು. ತಲೆಗೆ, ಭುಜಗಳಿಗೆ ಪೆಟ್ಟು ತಗುಲಿತು.

**ರಾಜಮಾತೆ**—ಇಂದಿರೆ! ಭೋಜನ ಮಾಡಿ ನಿದ್ರಿಸು. ಆ ಗಾಯಗ ಳಿಗೆ ಔಷಧವನ್ನು ಹಚ್ಚಿಸು.

ಇದೇನಾಗಿರಬಹುದೆಂದು ರಾಜಮಾತೆಗೆ ಸಂಶಯತೋರಿತು. ತತ್ಕ್ಷ ಣವೇ ಫಲ್ಗುಣನನ್ನು ಕರೆಯಿಸಿ ವಿಚಾರಿಸಿದಳು. ಈ ಸಾರಿ ರಾಜಮಾತೆಯಲ್ಲಿ

ಅನ್ಯತವಾಡಲು ಸಿಕ್ಕಯಿಸಿಕೊಂಡು ಅವನು ತನಗೊಂದೂ ತಿಳಿಯದೆಂದು ಹೇಳಿದನು. ಡಿಲ್ಲೀಶ್ವರನು ಬಂದಾಗ ತನ್ನ ಕೆಲಸವೆಲ್ಲ ತೀರಿದ ಬಳಿಕ ರಾಜಮಾತೆಯು ತನ್ನನ್ನು ಘಾತಕನೆಂದು ಸಾರ್ವಭೌಮನೊಡನೆ ಹೇಳುವಳೇನೋ ಎಂಬ ಭಯದಿಂದ ಈಗ ಅನ್ಯತವಾಡಿದನು.

# ೧೯ನೆಯ ಅಧ್ಯಾಯ

ಡಿಲ್ಲಿಯ ಸಾರ್ವಭೌಮನು ಬರುವ ಹಾದಿಯಲ್ಲಿ ಆತನ ಅಂತಸ್ತಿಗೆ ತಕ್ಕ ಏರ್ಪಾಡುಗಳನ್ನೆಲ್ಲಾ ಮದನಪಾಲನು ಬಹುಶ್ರದ್ಧೆಯಿಂದ ಮಾಡುತ್ತಿದ್ದನು. ಆ ಕಾರ್ಯಗಳೆಲ್ಲವೂ ಲಲಿತಕುಮಾರನ ಆಜ್ಞಾನುಸಾರ ನಡೆಯುತ್ತಿದ್ದವು. ರಾಜಬೀದಿಗಳಲ್ಲೆಲ್ಲಿ ನೋಡಿದರೂ ಧ್ವಜಗಳೂ, ತೋರಣಗಳೂ ಅಲಂಕೃತವಾಗಿದ್ದುವು. ಸಾರ್ವಭೌಮನು ಇಳಿದುಕೊಳ್ಳುವ ರಾಜಭವನದ ಶೃಂಗಾರವೆಲ್ಲವೂ ಪೂರ್ತಿಯಾಯಿತು. ಆ ಮಹಾರಾಜಾಧಿರಾಜನನ್ನು ಇದಿರುಗೊಂಡು ಸ್ವಾಗತವನ್ನು ಕೊಡುವುದಕ್ಕೆ ತಕ್ಕ ಏರ್ಪಾಡುಗಳೂ ನಡೆದುವು.

ಪೃಥಿವೀರಾಜನು ಸ್ವಲ್ಪ ಸೈನ್ಯದೊಡನೆ ಬರುತ್ತಿದ್ದನು. ಮಾರ್ಗದಲ್ಲಿ ವಿಧವಿಧವಾದ ಪೈರುಪಚ್ಚೆಗಳೂ, ಪಾವನಗಳಾದ ಸುಕ್ಷೇತ್ರಗಳೂ, ಬೈಲುಗಳಲ್ಲಿ ಹಚ್ಚನೆಯ ಹುಲ್ಲು ಮೇಯುತ್ತ ಕಾಮಧೇನುಗಳಂತಿರುವ ಗೋಬೃಂದಗಳೂ, ಅವುಗಳನ್ನನುಸರಿಸಿ ಗುಟುರುಹಾಕುತ್ತಾ ಗೋಪುರಗಳಂತಿರುವ ಹಿಣಿಲುಗಳುಳ್ಳ ವೃಷಭಗಳೂ, ಆ ಮಹಾರಾಜನಿಗೆ ಆನಂದವನ್ನುಂಟುಮಾಡುತ್ತಿದ್ದುವು. ಕ್ರೂರಮೃಗಗಳಿಗೆ ಆವಾಸವಾಗಿರುವ ಗೊಂಡಾರಣ್ಯಗಳನ್ನು ದಾಟಿದನು. ಸಾರ್ವಭೌಮನ ಬರುವಿಕೆಯನ್ನು ಕೇಳಿದ ಹಳ್ಳಿಯ ಜನಗಳು ಅಲ್ಲಲ್ಲಿ ಹಚ್ಚಡಗಳನ್ನೂ, ಕಂಬಳಿಗಳನ್ನೂ ಹೊದ್ದುಕೊಂಡು ನಿಂತು ನೋಡುತ್ತಿದ್ದರು. ಗೋಪಾಲಬೃಂದಕ್ಕೆ ಸೇರಿದ ಸ್ತ್ರೀಯರು ಸಾರ್ವಭೌಮನಿಗಾಗಿ ಬಹು ಪ್ರೀತಿಯಿಂದ ಹಾಲು, ಮೊಸರು, ಬೆಣ್ಣೆಯನ್ನು ಗಡಿಗೆಗಳಲ್ಲಿಟ್ಟುಕೊಂಡು ಬಂದು ನಿವೇದಿಸಿದರು. ಅವರ ಅವ್ಯಾಜಪ್ರೀತಿಯನ್ನು ಕಂಡು ಸಾರ್ವಭೌಮನು ತೃಪ್ತನಾಗಿ ಅವರಿಗೆ ಯಥೋಚಿತ ಮರ್ಯಾದೆಗಳನ್ನು ಮಾಡಿದನು. ಮಾರ್ಗದಲ್ಲಿ ಅಲ್ಲಲ್ಲಿ ಅಗ್ರಹಾರ ನಿವಾಸಿಗಳಾದ ಬ್ರಾಹ್ಮಣರು ಬಂದು ವೇದಮಂತ್ರಗಳಿಂದ ಆ ಮಹಾರಾಜನನ್ನು ಆಶೀರ್ವದಿಸಿದರು. ಹೀಗೆ ಬಹಳ ವಿಜೃಂಭಣೆಯಿಂದ

ಪ್ರಯಾಣ ಬೆಳೆಯಿಸಿ ಸಾರ್ವಭೌಮನು ಉದಯಪುರಿಗೆ ಬಂದನು. ಮದನಪಾಲನು ತನ್ನ ಬಂಧುಗಳೊಡನೆ ಆತನನ್ನು ಇದಿರುಗೊಂಡು ಸುಸ್ವಾಗತವನ್ನು ಕೊಡಲು ಹೊರಟನು. ಲಲಿತಕುಮಾರನು ಮಹಾರಾಜನ ಬಿಡದಿಯಲ್ಲಿ ಬೇಕಾದ ಪರಿಕರಗಳನ್ನು ಸಿದ್ಧಪಡಿಸಿ, ತುತೂರಿಯ ಶಬ್ದವಾದ ಒಡನೆಯೇ ಗಜಾಶ್ವ ಪದಾತಿಗಳ ಸಮೇತ ಹೊರಟನು. ಹೇಮಪ್ರಭಾದೇವಿಯ ಭವನದಿಂದ ಕುಮಾರಸಿಂಹ ಮೊದಲಾದ ವೀರರು ಲಲಿತಕುಮಾರನೊಡನೆಯೇ ಹೊರಟರು. ಸಾರ್ವಭೌಮನು ಪುರದ ಬಹಿರ್ದ್ವಾರವನ್ನು ಪ್ರವೇಶಿಸಿದ ಕೂಡಲೇ ತೋಪುಗಳು ಹಾರಿದುವು. ಜಯಧ್ವನಿಗಳಿಂದಲೂ, ವೇದಘೋಷಗಳಿಂದಲೂ, ಸೈನಿಕರ ಪರಾಕು ಮುಂತಾದ ಮರ್ಯಾದೆಗಳಿಂದಲೂ ಸ್ವಾಗತವನ್ನು ಕೊಟ್ಟರು. ತನ್ನನ್ನು ದರ್ಶಿಸಲು ಬಂದಿದ್ದ ರಾಜಬಂಧುಗಳಲ್ಲಿ ಒಬ್ಬೊಬ್ಬರನ್ನೂ ಕರಸ್ಪರ್ಶದಿಂದ ಸತ್ಕರಿಸಿದನು. ಹೇಮಪ್ರಭಾದೇವಿಯಿಂದ ಬಂದಿದ್ದ ಕುಮಾರಸಿಂಹನನ್ನು ತನ್ನ ರಥದಲ್ಲಿ ಕೂಡಿಸಿಕೊಂಡು ಆಕೆಗೆ ತನ್ನ ಸಹೋದರಪ್ರೀತಿಪೂರ್ವಕವಾದ ಸಂದೇಶವನ್ನು ಸಾರ್ವಭೌಮನು ಕೊಟ್ಟು ಕಳುಹಿಸಿದನು. ವಿಚಾರಣೆಯು ನಡೆಯುವ ಸಂಗತಿ ಹೇಮಪ್ರಭೆಗೆ ತಿಳಿಯಕೂಡದೆಂದು ಸಾರ್ವಭೌಮನು ಇಷ್ಟು ರಹಸ್ಯದಿಂದ ಕಾರ್ಯಗಳನ್ನು ನಡೆಯಿಸುತ್ತಿರಬಹುದೆಂದು ಊಹಿಸಿ ಮದನಪಾಲನು ಸಂತಸಗೊಂಡನು. ದೈವಸಂಕಲ್ಪವು ಅನ್ಯಥಾ ನಡೆಯುವುದೆಂದು ಅವನಿಗೆ ತಿಳಿಯದು. ಪುರದ ರಾಜಬೀದಿಯಿಂದ ಹೊರಟ ಸಾರ್ವಭೌಮನ ಉತ್ಸವವು ದಾರಿಯಲ್ಲಿ ಅಲ್ಲಲ್ಲಿ ಪುರಜನರ ಮನ್ನಣೆಯಿಂದ ಬಿಡದಿಯನ್ನು ಸೇರಿತು. ಅಲ್ಲಿ ನೆರೆದಿದ್ದ ಅಧಿಕಾರಿಗಳೊಡನೆ ಸಂಭಾಷಣೆಯನ್ನು ಮಾಡಿ ಸಾರ್ವಭೌಮನು ಎಲ್ಲರಿಗೂ ಅಪ್ಪಣೆಯನ್ನು ಕೊಟ್ಟು ಕಳುಹಿಸಿದನು. ನಿತ್ಯಕೃತ್ಯಗಳನ್ನು ನೆರವೇರಿಸಲು ಆತನು ಒಳಕ್ಕೆ ಹೊರಟು ಹೋದನು. ಮದನಪಾಲನು ತನ್ನ ಅಂತಃಪುರಕ್ಕೆ ತೆರಳಿದನು. ಸಾರ್ವಭೌಮನ ಬಿಡದಿಯಲ್ಲಿ ಸಮಸ್ತ ಏರ್ಪಾಡುಗಳೂ ಲಲಿತಕುಮಾರನ ಅಧೀನದಲ್ಲಿದ್ದವು. ಆತನು ಆ ಸಾರ್ವಭೌಮನ ಬಿಡದಿಯಲ್ಲಿಯೇ ಇದ್ದನು.

ಆದಿನ ಮಧ್ಯಾಹ್ನ ಫಲ್ಗುಣನು ರಾಜಮಾತೆಯನ್ನು ದರ್ಶಿಸಲು ಬಂದನು. ಅಲ್ಲಿ ಇಂದಿರೆಯನ್ನು ನೋಡಿ ಆಶ್ಚರ್ಯಪಟ್ಟು, "ಇವಳು ಭೂತವಲ್ಲವಲ್ಲ! ಹೇಗೆ ಜೀವಿಸಿ ಬಂದಳು? ರಾಜಮಾತೆಯು ಹೇಳಿದುದು ನಿಜವೇ? ಆಲೋಚನೆಯಿಂದ ಆವಾಗ ತೋರಲಿಲ್ಲ. ನನ್ನ ಕ್ಷೇಮಕ್ಕಾಗಿಯೇ ನನಗೆ ತಿಳಿಯದೆಂದು ನಾನು ರಾಜಮಾತೆಯಲ್ಲಿ ನುಡಿದೆನು. ಇವಳು ಮೂರ್ಛೆಯಿಂದ ತೇರಿ ಬಂದಿರಬಹುದು. ಇವಳು ಅಷ್ಟು ಹೊತ್ತಿನಲ್ಲಿ ಆ ಸ್ಥಳಕ್ಕೆ ಏಕೆ ಬಂದಿದ್ದಳು?

ಇವಳ ತಂದೆ ಅಲ್ಲಿಗೆ ಬರಲಿಲ್ಲ. ನಾನು ಬಹಳ ಹೊತ್ತು ಅಲ್ಲಿಯೇ ಇದ್ದೆನು. ಸರಳುತ್ತಲೂ ಇರಲಿಲ್ಲ. ಇವಳು ಕಾಡಿನಲ್ಲಿ ಬೆಳೆದ ಪಿಶಾಚವೆಂದು ತೋರುತ್ತದೆ. ಮುದುಕಿಯನ್ನು ಕೇಳಿದರೆ ಹೋಗಬೇಡವೆನ್ನುವಳೆಂದು ಭಯ ಪಟ್ಟು ಅಷ್ಟು ನಿಶಿಯಲ್ಲಿ ಆ ಭವನದ ಅಲಂಕಾರವನ್ನು ನೋಡಲು ಬಂದಿರ ಬಹುದು. ನಾನು ಅಪಸರಪಟ್ಟೆನು. ಆ ಸಮಯದಲ್ಲಿ ಅವಳೊಡನೆ ಮಾತ ನಾಡಬೇಕಾಗಿದ್ದಿತು. "ಆತುರಗಾರನಿಗೆ ಬುದ್ಧಿಕಡಿಮೆ" ಎಂಬ ಗಾದೆಯು ನಿಜ ವಾಗಿದೆ. ಇವಳು ನನ್ನನ್ನು ಗುರುತಿಸಿರಲಾರಳೆಂದು ಊಹಿಸುತ್ತೇನೆ" ಎಂದು ಆಲೋಚಿಸುತ್ತ ಫಲ್ಗುಣನು ಓರೆಗಣ್ಣಿನಿಂದ ಇಂದಿರೆಯನ್ನು ನೋಡುತ್ತಿದ್ದನು. ಇಂದಿರೆಯು ಅವನನ್ನು ನೋಡಿ ಎಂದಿನಂತಿದ್ದಳೇ ಹೊರತು ಭಿನ್ನಭಾವ ವನ್ನು ತೋರಿಸಲಿಲ್ಲ. ತನ್ನ ಊಹೆಯು ನಿಶ್ಚಯವೆಂದು ಫಲ್ಗುಣನು ಭಾವಿಸಿ ತೃಪ್ತನಾದನು. ಇಷ್ಟರಲ್ಲಿಯೇ ಹೇಮಪ್ರಭಾದೇವಿಯ ಮಂದಿರದಿಂದ ಆಳುಗಳು ಬಂದು ಇಂದಿರೆಯನ್ನು ಕಳುಹಿಸಿಕೊಡಬೇಕೆಂತಲೂ, ಅವಳ ಗಾಯಗಳು ಗುಣ ವಾಗುವ ವರೆಗೂ ತನ್ನಲ್ಲಿಟ್ಟುಕೊಂಡು ಆ ಮೇಲೆ ಕಳುಹಿಸುವಳೆಂತಲೂ ದೇವಿಯ ಸಂದೇಶವನ್ನು ರಾಜಮಾತೆಗೆ ನಿವೇದಿಸಿದರು. ಡಿಲ್ಲೀಶ್ವರನ ಆಗಮನ ಸಂಭ್ರಮದಲ್ಲಿ ದಿಕ್ಕುತೋರದೆ ರಾಜಮಾತೆಯು ಸಮ್ಮತಿಸಿ ಇಂದಿರೆಯನ್ನು ದೇವಿಯ ಅಂತಃಪುರಕ್ಕೆ ಕಳುಹಿಸಿದಳು.

ಮರುದಿನ ಬೆಳಿಗ್ಗೆ ಉದಯಪುರದ ಸೇವಕರು ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಿದ್ದ ಸಮಯದಲ್ಲಿ ಸಾರ್ವಭೌಮನ ಬಿಡದಿಯ ಪಕ್ಕದಲ್ಲಿದ್ದ ಮತ್ತೊಂದು ಸೌಧದಲ್ಲಿ ಮನುಷ್ಯ ಸಂಚಾರವಿದ್ದಂತೆ ತಿಳಿದು ಬಂದಿತು. ಆದರೆ ಆ ಸೌಧದ ಬಾಗಿಲು ಮುಚ್ಚಲ್ಪಟ್ಟಿದ್ದಿತು. ಏನು ಕಾರಣವೋ ಒಬ್ಬರಿಗೂ ತಿಳಿಯದು. ಶಿಪಾಯಿಗಳು ಪಹರೆ ಕೊಡುತ್ತಿದ್ದರು. ಪುರದಲ್ಲಿ ಸೇವಕರು ಗುಸಗುಸ ಮಾತನಾಡಿಕೊಳ್ಳುತ್ತಿದ್ದರು. ಇಬ್ಬರು ಒಂದು ಕಡೆ ನಿಂತು ಮಾತನಾಡದಂತೆ ಫಲ್ಗುಣನು ಕಟ್ಟುಮಾಡಿದ್ದನು. ನಾಲ್ಕೈದು ದಿನಗಳವರೆಗೂ ಸಾರ್ವಭೌಮನು ಯಾವ ಕೆಲಸವನ್ನೂ ಮಾಡದೆ ವಿಶ್ರಾಂತಿಯನ್ನು ತೆಗೆದುಕೊಂಡನು. ತರು ವಾಯ ಒಂದು ದಿನ ಬೆಳಿಗ್ಗೆ ೧೦ ಘಂಟೆಗೆ ಸರಿಯಾಗಿ ಆತನು ಸಭೆಯನ್ನಲಂಕರಿ ಸುವನೆಂದು ಪ್ರಕಟಿಸಿದರು. ರಾಜ್ಯದೊಳಗಿನ ಪ್ರಜೆಗಳು ದ್ವಾರದಲ್ಲಿ ಕಿಕ್ಕಿರಿಸಿ ನಿಂತಿದ್ದರು. ಕೆಲವು ನಿಮಿಷಗಳೊಳಗಾಗಿ ಒಂದು ಹಲಗೆಯನ್ನು ತಂದು ಸಭಾದ್ವಾರದಲ್ಲಿ ಕಟ್ಟಿದರು. ಆ ಹಲಗೆಯಲ್ಲಿ "ಈ ದಿನ ಸಭೆಗೆ ಸಾಮಂತರು, ರಾಜಬಂಧುಗಳು, ಪ್ರಧಾನಿ, ಸೇನಾಪತಿಗಳು ಮಾತ್ರ ಬರಬಹುದು" ಎಂದು ಬರೆದಿದ್ದಿತು. ಶಿಪಾಯಿಗಳು ಪ್ರಜೆಗಳನ್ನು ದೂರವಾಗಿ ನಿಲ್ಲಿಸಿದರು.

ಅಷ್ಟು ಜನಸ್ತೋಮವಿದ್ದರೂ ನಿಶ್ಶಬ್ದವಾಗಿದ್ದಿತು. ಆ ದಿನ ಸಭೆಗೆ ಆಹೂತರಾಗಿದ್ದ ಕೆಲವರು ದೊಡ್ಡ ಮನುಷ್ಯರು ತಮ್ಮ ತಮ್ಮ ವಾಹನಗಳಲ್ಲಿ ಬಂದು ಸಭಾಮಂಟಪವನ್ನು ಪ್ರವೇಶಿಸಿದರು. ಹತ್ತು ಗಂಟೆಗೆ ಸರಿಯಾಗಿ ಸಾಮಂತರಾಜರು ತಮ್ಮ ತಮ್ಮ ದೇಶಚಿಹ್ನೆಗಳನ್ನು ಧರಿಸಿ, ಅಶ್ವಾರೂಢರಾಗಿ ಒಬ್ಬೊಬ್ಬರಾಗಿ ಒರಸೆಯಾಗಿ ಬರಲಾರಂಭಿಸಿದರು. ಅವರ ಹಿಂದೆ ಮಹಾರಾಜರ ರಾವುತರಿದ್ದರು. ಆ ಸೈನಿಕರ ಹಿಂದೆ ಸಾರ್ವಭೌಮನ ಪಂಚಕಳಶದ ರಥವು ನಾಲ್ಕು ಕುದುರೆಗಳಿಂದ ಅಲಂಕೃತವಾಗಿ ಬರುತ್ತಿದ್ದಿತು. ಸಭಾಮಂಟಪದ ಹತ್ತಿರ ಪೃಥ್ವೀರಾಜನು ರಥದಿಂದಿಳಿಯುತ್ತಲೇ ಮರ್ಯಾದಾಪೂರ್ವಕವಾಗಿ ಹಸ್ತಲಾಘವವನ್ನಿತ್ತು ಮದನಪಾಲನು ಆತನನ್ನು ಸಭೆಯೊಳಕ್ಕೆ ಕರೆದುಯ್ದನು. ಆತನ ಹಿಂದೆ ಕ್ರಮವಾಗಿ ಲಲಿತಕುಮಾರನೂ, ಸಾಮಂತರಾಜರೂ, ರಾಜಬಂಧುಗಳು ಕೆಲವರೂ, ಪ್ರಧಾನಿಗಳೂ, ಸೇನಾಪತಿಗಳೂ ಪ್ರವೇಶಿಸಿದರು. ಅಲ್ಲಿನ ಕೆಲಸಗಳಿಗೆ ಮುಖ್ಯವಾಗಿ ಬೇಕಾದ ಸೇವಕರೂ ಪ್ರವೇಶಿಸಿದರು. ಸಾರ್ವಭೌಮನು ಸಿಂಹಾಸನಾರೂಢನಾದ ಒಡನೆಯೇ ಎಲ್ಲರೂ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು. ಆದರೆ ಸಾರ್ವಭೌಮನ ದಕ್ಷಿಣಪಾರ್ಶ್ವದಲ್ಲಿ ಅಲಂಕೃತವಾದ ಎರಡು ಆಸನಗಳಲ್ಲಿ ಮಾತ್ರ ಯಾರೂ ಕುಳಿತುಕೊಳ್ಳಲಿಲ್ಲ. ಅಲ್ಲಿ ಯಾರನ್ನು ಕುಳಿತುಕೊಳ್ಳಲು ನಿಯಮಿಸುವನೋ ಎಂದು ಮದನಪಾಲನು ಆಲೋಚಿಸುತ್ತಿದ್ದನು. ಆದರೆ ಅವನಿಗೆ ಏನೂ ತೋರಲಿಲ್ಲ. ಮದನಪಾಲನು ಕುಳಿತಿದ್ದ ಸ್ಥಳದ ಹಿಂಭಾಗದಲ್ಲಿ ಪ್ರಧಾನ ಸೇವಕರ ಸಾಲಿನಲ್ಲಿ ಫಲ್ಗುಣನು ನಿಂತಿದ್ದನು. ದಾಮೋದರನೂ, ಮಾಧವನೂ ಫಲ್ಗುಣನ ಹಿಂದೆಯೇ ನಿಂತಿದ್ದರು. ಆ ದಿನ ಅವರಿಬ್ಬರೂ ಧರಿಸಿದ್ದ ಉಡುಪುಗಳನ್ನೂ, ಬಿರುದಾಂಕಿತಗಳನ್ನೂ ನೋಡಿ ಫಲ್ಗುಣನು ಕಳವಳಗೊಂಡನು. ತಾನು ನೆನಸಿದ್ದ ಹಾಗೆ ದಾಮೋದರನು ಮೂಢನಲ್ಲವೆಂದು ತೋರಿತು. ತನ್ನನ್ನು ಮೋಸಗೊಳಿಸಿದನು; ತಾನು ಕೆಟ್ಟೆನೆಂದು ಭಾವಿಸಿದನು. ಆ ಸಮಯದಲ್ಲಿ ವಿಮಲಸಿಂಹನು ಪ್ರವೇಶಿಸಿ ಚಕ್ರವರ್ತಿಯವರಿಗೆ ಅಭಿವಂದಿಸಿ "ಮಹಾರಾಜಾ! ನಾನು ಉದಯಪುರೀಸಂಸ್ಥಾನದ ಸಚಿವನಾಗಿದ್ದೆನು. ಹದಿನಾರು ವರ್ಷಗಳ ಕೆಳಗೆ ನನ್ನನ್ನು ತಪ್ಪಿಸಿದರು. ಈ ದಿನ ಮಹಾಸ್ವಾಮಿಯವರ ದರ್ಶನಕ್ಕಾಗಿ ಈ ಸಭಾಸ್ಥಾನಕ್ಕೆ ಬಂದಿರುವೆನು. ಅರ್ಹನೆಂದು ಸ್ವಾಮಿಯವರಿಗೆ ತೋರಿದರೆ ಇಲ್ಲಿರುವೆನು. ಇಲ್ಲವಾದರೆ ಹೊರಟುಹೋಗುವೆನು"—ಎಂದು ವಿಜ್ಞಾಪಿಸಿದನು.

ಸಾರ್ವಭೌಮ—ವಿಮಲಸಿಂಹ! ನೀನು ಸಚ್ಚರಿತನೆಂದು ನಾನರಿವೆನು. ನೀನು ಅವಶ್ಯವಾಗಿಯೂ ಈ ಸಭಾಸ್ಥಾನದಲ್ಲಿದ್ದು ನ್ಯಾಯವಿಮರ್ಶನಾಕಾರ್ಯಕ್ಕೆ ಸಹಾಯ ಮಾಡಬೇಕು. ಸುಖಾಸೀನನಾಗು.

ಸಭಾಮಂಟಪವೆಲ್ಲವೂ ಸ್ವಲ್ಪ ಹೊತ್ತು ನಿಶ್ಶಬ್ದವಾಗಿದ್ದಿತು. ಸಾರ್ವಭೌಮನು ಸಭೆಯನ್ನೆಲ್ಲಾ ಒಂದು ಬಾರಿ ಪರಿಕಿಸಿ ನೋಡಿ ಹೀಗೆ ಮಾತನಾಡತೊಡಗಿದನು:—"ಸಾಮಂತರಾಜರೇ, ರಾಜಬಂಧುಗಳೇ, ಸೇನಾಪತಿಗಳೇ ! ಈ ದಿನ ನಾವು ಈ ಸಭಾಸ್ಥಾನದಲ್ಲಿ ನೆರೆದಿರುವ ಕಾರ್ಯಭಾಗವು ಇಂತಹುದೆಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದ್ದರೂ, ಕೆಲವು ವಿವರಗಳು ಅನೇಕರಿಗೆ ತಿಳಿದಿರಲಾರವೆಂದು ಭಾವಿಸುತ್ತೇನೆ. ಅವುಗಳನ್ನೆಲ್ಲಾ ನಾನು ಈಗ ವಿಶದಪಡಿಸುವೆನು. ಹದಿನಾರು ವರುಷಗಳ ಕೆಳಗೆ ತಂದೆಯಾದ ಪ್ರತಾಪಸಿಂಹ ಮಹಾರಾಜನನ್ನು ಕೊಂದು ನಮ್ಮ ತಾತನಾದ ಅನಂಗಪಾಲ ಚಕ್ರವರ್ತಿಯಿಂದ ಮರಣ ಶಿಕ್ಷೆ ವಿಧಿಸಲ್ಪಟ್ಟು ಕಾರಾಗೃಹದಿಂದ ತಪ್ಪಿಸಿಕೊಂಡು ಹೋದ ವಿಕ್ರಮಸಿಂಹ ಮಹಾರಾಜನು ಈಗ ಪುನಃ ಉದಯಪುರಿಗೆ ಬಂದಿರುವನೆಂತಲೂ, ರಾತ್ರಿಗಳಲ್ಲಿ ಸಂಚರಿಸುತ್ತ ಪ್ರಕೃತ ರಾಜನಾಗಿರುವ ತನ್ನನ್ನು ಕೊಲ್ಲಲು ಆತನು ಯತ್ನಿಸುತ್ತಿರುವನೆಂತೆಯೂ ಆತನನ್ನು ಹಿಡಿಸಿ ಇದುವರೆಗೆ ವಿಧಿಸಿದ ಶಿಕ್ಷೆಗೆ ಗುರಿಪಡಿಸಬೇಕೆಂತಲೂ ಮದನಪಾಲ ಮಹಾರಾಜನು ಮಾಲವಾಧೀಶನಾದ ಲಲಿತಕುಮಾರನ ಮೂಲಕ ನಮ್ಮನ್ನು ಪ್ರಾರ್ಥಿಸಿದನು. ಅದರ ಮೇಲೆ ನಾವು ಗೂಢ ಚಾರರನ್ನು ಕಳುಹಿಸಿ ಈ ವ್ಯವಹಾರದ ರಹಸ್ಯವನ್ನು ಕೂಲಂಕಷವಾಗಿ ತಿಳಿದುಕೊಂಡು ಪತ್ತೆ ನಡೆಯಿಸಲು ಏರ್ಪಾಡು ಮಾಡಿದೆವು. ಹಿಂದಿನ ಕಾಗದಪತ್ರಗಳನ್ನು ಸಾಂಗವಾಗಿ ಓದಿ ತಿಳಿದುಕೊಂಡೆವು. ಹಿಂದೆ ನನ್ನ ತಾತನವರು ಮಾಡಿದ ತೀರ್ಪಿನಲ್ಲಿ ಫಿರ್ಯಾದಿಯಾದ ಮದನಪಾಲನ ವಿಚಾರಣೆಯು ಮಾತ್ರವೇ ನಡೆದಿರುವುದಲ್ಲದೆ ಅಪರಾಧಿಯೆಂದು ಪ್ರತಿಪಾದಿತನಾದ ವಿಕ್ರಮಸಿಂಹ ಮಹಾರಾಜನ ವಿಚಾರಣೆಯಾದಂತೆ ಎಲ್ಲಿಯೂ ಕಾಗದ ಪತ್ರಗಳಿಲ್ಲ. ವಿಕ್ರಮಸಿಂಹನು ನಿರ್ದೋಷಿಯೆಂತಲೂ, ಮುರಳಾದೇವಿಯನ್ನು ಪ್ರತಾಪಸಿಂಹನಿಗೆ ಮದುವೆಯಾಗುವಂತೆ ಮಾಡಿದ ಅಭಿಮಾನದಿಂದ ಮುರಳಾದೇವಿಯ ಪರವಾಗಿ, ನ್ಯಾಯವಿಮರ್ಶೆ ಮಾಡದೆ ನನ್ನ ತಾತನು ಹಿಂದೆ ತೀರ್ಪುಕೊಟ್ಟಿರುವನೆಂತಲೂ, ಇವುಗಳನ್ನೆಲ್ಲ ಪುನಃ ವಿಚಾರಣೆ ಮಾಡಿದರೆ ರುಜುವಾತು ಮಾಡುವುದಾಗಿಯೂ ಒಬ್ಬ ಸ್ತ್ರೀಯು ಬರೆದುಕೊಂಡಿರುವಳು. ವಿಕ್ರಮಸಿಂಹನು ಇಲ್ಲಿಯೇ ಇರುವ ಸಂಗತಿಯನ್ನು ನನ್ನ ಗೂಢಚಾರರು ಪತ್ತೆ ಮಾಡಿರುವರು. ಆತನನ್ನು ಈಗಲೇ ಕರೆಯಿಸಿ ಅಪರಾಧಿಯ ವಿಚಾರಣೆಯಂತೆ, ವಿಚಾರಣೆ ಮಾಡಬೇಕಾಗಿರುವುದು," ಎಂದು ಪಾರ್ಶ್ವಕ್ಕೆ ದೃಷ್ಟಿ ತಿರುಗಿಸಲು ಸೇನಾನಿಯು ಓಡಿಬಂದು ಬದ್ಧಾಂಜಲಿಯಾಗಿ ಸಾರ್ವಭೌಮರ ಇದಿರಿಗೆ ನಿಂತನು.

**ಸಾರ್ವಭೌಮ**—ಮಾಧವಸಿಂಗ್! ನೀನು ಹೋಗಿ ವಿಕ್ರಮಸಿಂಹ ಮಹಾರಾಜನನ್ನು ಮರ್ಯಾದೆಯಿಂದ ಕರೆದುಕೊಂಡು ಬಾ.

**ಮಾಧವ**—ಅಪ್ಪಣೆ.

ಐದಾರು ನಿಮಿಷಗಳಲ್ಲಿ ವಿಕ್ರಮಸಿಂಹನ ರಥವು ಸಭಾಮುಖವಾಗಿ ಬರುತ್ತಿದ್ದಿತು. ದಾರಿಯಲ್ಲಿ ನೆರೆದಿದ್ದ ಪ್ರಜೆಗಳು "ಜಯ ಜಯ! ವಿಕ್ರಮ ಸಿಂಹ! ತಂದೆಯೇ! ನಿಮಗೆ ಇಷ್ಟು ದ್ರೋಹಮಾಡುವರೆಂದು ನಮಗೆ ತಿಳಿ ಯಲಿಲ್ಲ. ಇನ್ನು ಮೇಲೆ ನಾವು ನಿಮ್ಮನ್ನು ಭದ್ರವಾಗಿ ಕಾಪಾಡುವೆವು" ಎಂದು ಪ್ರಜೆಗಳು ಗಟ್ಟಿಯಾಗಿ ಕೂಗಿ ಹೇಳಿದರು. ಆ ಕೋಲಾಹಲವು ಆಕಾ ಶದ ವರೆಗೂ ವ್ಯಾಪಿಸಿತು. ವಿಕ್ರಮಸಿಂಹನು ರಥದಲ್ಲಿಯೇ ಎಲ್ಲರಿಗೂ ಅಭಿ ವಂದಿಸುತ್ತ ಹೋದನು. ಸೇನಾನಿಯು ಕೈಸನ್ನೆ ಮಾಡಿದಮೇಲೆ. ಪುನಃ ಎಲ್ಲವೂ ನಿಶ್ಶಬ್ದವಾಯಿತು. ಪ್ರಜೆಗಳು ಶಾಂತಿಯನ್ನು ಹೊಂದಿದರು. ವಿಕ್ರಮ ಸಿಂಹನು ಸಂಶುಭ್ರ ವಸ್ತ್ರಗಳನ್ನು ಧರಿಸಿ ಧರ್ಮರಾಜನಂತೆ ಸಭೆಯನ್ನು ಪ್ರವೇ ಶಿಸಿದನು. ಸಭಿಕರೆಲ್ಲರೂ ಎದ್ದು ನಿಂತು ಆತನಿಗೆ ಅಭಿವಂದಿಸಿದರು. ಹಾಹಾ ಕಾರಗಳು ಹೊರಟುವು. ಸಾರ್ವಭೌಮನ ಕೈಸನ್ನೆಯಿಂದ ಪುನಃ ಸಭೆಯು ನಿಶ್ಶಬ್ದವಾಯಿತು. ವಿಕ್ರಮಸಿಂಹನು ಚಕ್ರವರ್ತಿಯವರಿಗೆ ನಮಸ್ಕರಿಸಿ ತಲೆ ಬಾಗಿಸಿಕೊಂಡು ನಮ್ರನಾಗಿ ನಿಂತನು. ಸಾರ್ವಭೌಮನು ಆತನನ್ನು ನೋಡಿ ಸಂತಪ್ತಮನಸ್ಕನಾಗಿ "ಮಹಾನುಭಾವ! ಈ ಆಸನವನ್ನು ಅಲಂಕರಿಸಿ" ಎಂದು ತನ್ನ ದಕ್ಷಿಣಪಾರ್ಶ್ವದಲ್ಲಿದ್ದ ಆಸನವನ್ನು ತೋರಿಸಿದನು.

**ವಿಕ್ರಮಸಿಂಹ**—ಮಹಾಪ್ರಭೊ! ನಾನು ಅಪರಾಧಿಸ್ಥಾನದಲ್ಲಿರುವೆ ನೆಂಬ ಸಂಗತಿಯನ್ನು ತಮಗೆ ಜ್ಞಾಪಿಸುವೆನು.

**ಪೃಥ್ವೀರಾಜ**—ಅದು ಹಾಗಿರಲಿ ; ತಾವು ಇಲ್ಲಿ ಕುಳಿತುಕೊಳ್ಳಿರಿ.

ಸಾರ್ವಭೌಮನ ಅಪ್ಪಣೆಯಂತೆ ವಿಕ್ರಮಸಿಂಹನು, ನಿಯಮಿಸಿದ ಆಸನ ದಲ್ಲಿ ಕುಳಿತುಕೊಂಡನು. ಇದೆಲ್ಲವನ್ನೂ ನೋಡುತ್ತಿದ್ದ ಮದನಪಾಲನಿಗೆ ಮೂರ್ಛೆಬರುವಂತಿದ್ದಿತು. ಅವನ ಮುಖದ ಕಳೆಯು ಕಪ್ಪೇರುತ್ತಿ ದ್ದಿತು. "ಈತನು ಪಿತೃಹಂತಕನೇ?" ಎಂಬ ಸಂಶಯವು ತಲೆದೋರಿತು. ಇನ್ನು ಫಲ್ಗುಣನ ಪಾಡು ಹೇಳಬೇಕೇ!

**ಸಾರ್ವಭೌಮ**—ಸಭಿಕರೇ! ವಿಕ್ರಮಸಿಂಹ ಮಹಾರಾಜನ ಪರವಾಗಿ ಸಾಕ್ಷ್ಯಕೊಡುವ ಸ್ತ್ರೀಯನ್ನು ಕರೆಯಿಸಬೇಕಾಗಿದೆ. ಕುಮಾರಸಿಂಹ! ಇದಕ್ಕೆ ನಿಮ್ಮ ಅಭಿಪ್ರಾಯವೇನು?

**ಕುಮಾರ**—ದೇವಾ! ಕನ್ಯೆಯರು ನಿರ್ದೋಷಿಗಳು. ಇಂತಹ ಸಮಯ ದಲ್ಲಿ ಆಕೆಯು ಬರಬೇಕಾದುದು ಅತ್ಯಾವಶ್ಯಕವು.

ಈಮಾತನ್ನು ಕೇಳಿ ಫಲ್ಗುಣನು ತತ್ತರಿಸಿದನು. ಆ ಕನ್ಯೆಯು ಯಾರಾಗಿರ

ಬಹುದೆಂದು ಕಳವಳಗೊಂಡನು. ಮುಂದೇನು ಪ್ರಮಾದ ಬರುವುದೋ! ಎಂದು ಮದನಪಾಲನು ಪ್ರಾಣಗಳ ಮೇಲೆ ಆಸೆತೊರೆದುಕೊಂಡನು. ಪೃಥ್ವೀಶನು ಸೇನಾನಿ ಕೇಶವಸಿಂಗ್‌ಯೆಂದು ಕರೆಯುತ್ತಲೇ ಅವನು ಇದಿರಿನಲ್ಲಿ ನಿಂತು "ಮಹಾಪ್ರಭೂ! ನನ್ನ ಹೆಸರು ದಾಮೋದರ"ನೆಂದನು.

**ಸಾರ್ವಭೌಮ**—ಇದೇನು! ನಿನ್ನ ಹೆಸರು "ಕೇಶವಸಿಂಗ್" ಅಲ್ಲವೇ? ಅಷ್ಟರಲ್ಲಿ ದಾಮೋದರನಾದುದು ಹೇಗೆ?

**ಕೇಶವಸಿಂಗ್**—ದೇವಾ! ದಾಮೋದರ ಶಬ್ದವು ವಿಷ್ಣುವಿನ ನಾಮ ವಾಗಿದ್ದರೂ ಲೋಕದೊಳಗಿನ ಅಜ್ಞಾನಿಗಳು ತಿಂಡಿ ತಿಂದು ಸೋಮಾರಿಗಳಾಗಿ ರುವವರನ್ನು "ದಾಮೋದರ"ನೆಂದು ಕರೆಯುವರು. ಈ ಫಲ್ಗುಣನು ನನಗೆ ಈ ಹೆಸರನ್ನು ಕೊಟ್ಟಿರುವನು.

**ಸಾರ್ವಭೌಮ**—(ನಕ್ಕು) ಒಳ್ಳೆಯದು! ಆಸ್ತ್ರೀಯನ್ನು ಕರೆದುಕೊಂಡು ಬಾ.

ಸ್ವಲ್ಪ ಹೊತ್ತಿನ ಮೇಲೆ ಒಂದು ರಥವು ಸಭಾದ್ವಾರದಲ್ಲಿ ಬಂದು ನಿಂತಿತು. ಅದಕ್ಕೆ ನಾಲ್ಕು ಕುದುರೆಗಳು ಕಟ್ಟಲ್ಪಟ್ಟಿದ್ದುವು. ಅದು ಹೇಮಪ್ರಭಾದೇವಿಯ ರಥವಾಗಿದ್ದಿತು. ಸಭಾಸದರೆಲ್ಲರೂ ಅದರ ಮೇಲೆ ದೃಷ್ಟಿಯನ್ನು ಹಾಯಿಸಿ ದರು. ಆ ರಥದಿಂದೊಬ್ಬ ಎಳೆಯ ಪ್ರಾಯದ ಕನ್ಯೆ ಇಳಿದಳು. ಅಪ್ಸರ ಕನ್ಯೆ ಯೆಂದು ಎಲ್ಲರೂ ಭ್ರಾಂತಿಗೊಂಡರು. ಲಲಿತ ಕುಮಾರನಿಗೆ ಸ್ಮೃತಿಯು ತಪ್ಪಿತು. ಸಾರ್ವಭೌಮನು ಅವಳನ್ನು ನೋಡಿ ಮೈಮರೆತನು. ಸ್ವಲ್ಪ ಹೊತ್ತಿನ ಮೇಲೆ ಎಚ್ಚೆತ್ತು "ಅಮ್ಮಾ! ನಿನ್ನನ್ನು ಈ ತುಂಬಿದ ಸಭೆಗೆ ಕರೆಯಿಸಿದುದಕ್ಕಾಗಿ ಕ್ಷಮಿಸು. ಈ ಆಸನವನ್ನು ಅಲಂಕರಿಸು" ಎಂದು ಅವಳ ತಂದೆಯ ಪಾರ್ಶ್ವ ದಲ್ಲಿದ್ದ ಮತ್ತೊಂದು ಆಸನವನ್ನು ತೋರಿಸಿದನು. ಇಂದಿರೆಯು ಅಲ್ಲಿ ಕುಳಿತುಕೊಂಡಳು.

**ಸಾರ್ವಭೌಮ**—ವಿಕ್ರಮಸಿಂಹ ಮಹಾರಾಜಾ! ನಿಮ್ಮ ಪ್ರತಾಪ ಸೌಂದರ್ಯ ವಿದ್ಯಾ ವಿನಯ ಸಂಪತ್ತುಗಳನ್ನು ನಾನು ಕೇಳಿದ್ದೆನು. ಈಗ ಪ್ರತ್ಯಕ್ಷವಾಗಿ ನಿಮ್ಮನ್ನು ದರ್ಶಿಸುವ ಭಾಗ್ಯವು ಲಭಿಸಿತು. ನಿಮಗೆ ಇಂತಹ ಅಪಖ್ಯಾತಿಯು ಹೇಗೆ ಬಂದಿತು?

**ವಿಕ್ರಮಸಿಂಹ**—ದೇವಾ! ಈಗ್ಗೆ ಹದಿನಾರು ವರ್ಷಗಳ ಕೆಳಗೆ ನನ್ನ ಜನಕನಾದ ಪ್ರತಾಪಸಿಂಹದೇವನು ನನ್ನನ್ನು ಈ ಮೇವಾರು ಸಂಸ್ಥಾನಕ್ಕೆ ಯುವರಾಜನನ್ನಾಗಿ ಪಟ್ಟಾಭಿಷೇಕ ಮಾಡಿದನು. ಗ್ವಾಲಿಯರ್ ಪ್ರಭುವಾದ ಅಮರಸಿಂಹನ ಪುತ್ರಿಯಾದ ಹೇಮಪ್ರಭೆಯು ನನ್ನ ಸಹಧರ್ಮಚಾರಿಣಿಯಾಗಿ ದ್ದಳು. ಆಗ್ಗೆ ನನಗೆ ಎರಡು ವರುಷದ ಕುಮಾರಿಯೊಬ್ಬಳಿದ್ದಳು. ಹೀಗಿರುವಾಗ

ಒಂದು ದಿನ ನನ್ನ ತಂದೆಯು ತಮಗೆ ತುಂಬಾ ತಲೆನೋವು, ಗುಂಡಿಗೆ ನೋವು ಎಂದು ಹೇಳಿದರು. ಆ ನಿಮಿಷದಲ್ಲಿಯೇ ಅವರನ್ನು ಶಯನ ಗೃಹಕ್ಕೆ ಕರೆದುಕೊಂಡು ಹೋದೆನು. ಅಲ್ಲಿ ಚಿಕಿತ್ಸೋಪಚಾರಗಳನ್ನು ಮಾಡುತ್ತಿದ್ದೆವು. ನಾನು ಸಮೀಪದಲ್ಲಿಯೇ ಇದ್ದು ನನ್ನ ಪ್ರಿಯ ಜನಕನಿಗೆ ಪಥ್ಯವನ್ನು ತಿನ್ನಿಸಿ ಅವರು ಮಲಗಿದ ಮೇಲೆ ಪಾದಗಳನ್ನೊತ್ತುತ್ತಾ ಕುಳಿತಿದ್ದೆನು. ಸುಖವಾಗಿ ನಿದ್ರಿಸಿದರು. ನಾನು ಅಲ್ಲಿಯೇ ಇದ್ದೆನು. ಹನ್ನೊಂದು ಗಂಟೆಯಾಯಿತು. ಆಗ ಅವರು ಎಚ್ಚರಗೊಂಡು ನನ್ನನ್ನು ನೋಡಿ "ಕುಮಾರಾ! ಭೋಜನವಾಯಿತೇ?" ಎಂದು ಕೇಳಿದರು. ನಾನು ಉತ್ತರ ಕೊಡದೆ ಮೌನವಾಗಿದ್ದೆನು. ನೀನು ಈ ವಿಧವಾಗಿ ಭೋಜನವಿಲ್ಲದೆ ಇದ್ದರೆ ನನ್ನ ಮನಸ್ಸು ಒಪ್ಪುವುದಿಲ್ಲ. ನನಗೀಗ ಸ್ವಲ್ಪ ಸ್ವಸ್ಥವಾಗಿದೆ. ಭೋಜನಮಾಡಿ ಸುಖವಾಗಿ ನಿದ್ರಿಸು. ನನಗೆ ಬೇಕಾದಾಗ ನಿನ್ನನ್ನು ಕರೆಯಿಸುವೆನು." ಎಂದು ಹೇಳಿ ಎಂದಿನಂತೆ ನನ್ನನ್ನು ಆಲಿಂಗಿಸಿಕೊಂಡು ಮುದ್ದಿಟ್ಟು ಕಳುಹಿಸಿದರು. ನಾನು ಯುವಕನಾಗಿದ್ದರೂ ದಿನಕ್ಕೆ ನಾಲ್ಕೈದು ಸಾರಿಯಾದರೂ ನನ್ನನ್ನಾಲಿಂಗಿಸಿಕೊಳ್ಳುವುದು ನನ್ನ ತಂದೆಗೆ ಒಂದು ಅಭ್ಯಾಸವಾಗಿದ್ದಿತು. ಸಾರ್ವಭೌಮರೇ! ನನ್ನ ಅಸಂಬದ್ಧ ಪ್ರಲಾಪವನ್ನು ಮನ್ನಿಸ ಬೇಕು. ನನ್ನ ತಂದೆಯ ಆಜ್ಞೆಯಂತೆ ಹೋಗಿ ಭೋಜನಕ್ಕೆ ಕುಳಿತುಕೊಂಡೆನು. ಅದು ರುಚಿಸಲಿಲ್ಲ. ಸೋಪಾನದಲ್ಲಿ ಕುಳಿತು ಅವರ ಅಪ್ಪಣೆಯನ್ನು ಇದಿರುನೋಡುತ್ತಿದ್ದೆನು. ಸೇವಕರಾರೂ ಬರಲಿಲ್ಲ. ಘಂಟೆ ಎರಡಾಯಿತು. ನನ್ನ ಮನಸ್ಸು ನಿಲ್ಲಲಿಲ್ಲ. ನಾನೇ ಹೋದೆನು. ನನ್ನ ತಂದೆಯ ಬಳಿಯಲ್ಲಿ ನನ್ನ ತಾಯಿ ಮುರಳಾದೇವಿಯು ಕುಳಿತಿದ್ದಳು. "ಅವರು ನಿದ್ರಿಸುತ್ತಿದ್ದಾರೆ. ನೀನೂ ಹೋಗಿ ನಿದ್ರಿಸು" ಎಂದು ಹೇಳಿದಳು. ರಾಜೇಂದ್ರ! ಅದೇ ನನಗೆ ನನ್ನ ಪ್ರಿಯ ಜನಕನ ಅಂತ್ಯ ದರ್ಶನ. ತಿರುಗಿ ನನ್ನ ತಂದೆಯನ್ನು ನೋಡಲಿಲ್ಲ. ನಾನು ಶಯನಾಗಾರಕ್ಕೆ ಹೋಗಿ ಮಲಗಿದೆನು. ದುಸ್ಸ್ವಪ್ನಗಳಿಂದಲೂ, ದುಃಖದಿಂದಲೂ ನನಗೆ ನಿದ್ರೆ ಹತ್ತಲಿಲ್ಲ. ಪ್ರಾತಃಕಾಲ ಆರು ಘಂಟೆಗೆ ಮುಂಚೆಯೇ ನನ್ನ ತಂದೆಯವರು ಮೃತರಾದರೆಂಬ ವಾರ್ತೆಯು ತಿಳಿದು ಬಂದಿತು. ದುಃಖಿಸುತ್ತಿರುವಷ್ಟರಲ್ಲಿ ಹತ್ತುಜನ ರಾಜಭಟರು ಬಂದು "ನೀನು ತಂದೆಯನ್ನು ವಧಿಸಿದ ಅಪರಾಧಕ್ಕಾಗಿ ಚಕ್ರವರ್ತಿಯವರ ಆಜ್ಞೆಯ ಪ್ರಕಾರ ನಿನ್ನನ್ನು ಬಂಧಿಸುವೆವು" ಎಂದು ಹೇಳಿ ನನ್ನನ್ನು ಶೃಂಖಲಾಬದ್ಧನನ್ನಾಗಿಮಾಡಿ ಕಾರಾಗೃಹವನ್ನು ಸೇರಿಸಿದರು. ಆ ವಿಷಮ ಸಮಯದಲ್ಲಿ ನನ್ನ ತಂದೆಯ ಮರಣಕ್ಕಾಗಿ ದುಃಖಿಸಬೇಕೇ? ನನ್ನ ದುಃಸ್ಥಿತಿಗಾಗಿ ಅಳಬೇಕೇ? ಅಥವಾ ನನ್ನ ಪತ್ನೀ ಪುತ್ರಿಯರಿಗಾಗಿ ಹಂಬಲಿಸಬೇಕೇ? ಈ ಮೂರೂ ಸೇರಿ ನನಗೆ

ವಿಸ್ಮೃತಿಯುಂಟಾಯಿತು. ಪುನಃ ಸ್ಮೃತಿಯುಂಟಾದ ಮೇಲೆ ಬಂದುದು ಬರಲೆಂದು ಧೈರ್ಯಗೊಂಡು ಮುಂದಿನ ಘಟನಾವಳಿಗಳನ್ನು ನಿರೀಕ್ಷಿಸುತ್ತಿದ್ದೆನು. ತದನಂತರ ವಿಚಾರಣೆ ನಡೆಯಿತು. ನನ್ನ ತಂದೆಯನ್ನು ನಾನೇ ಕತ್ತಿಯಿಂದ ಕೊಂದ ಹಾಗೆ ಸಾಕ್ಷಿಗಳು ನುಡಿದರು. "ನೀನು ಹೇಳಿಕೊಳ್ಳುವುದು ಏನಾದರೂ ಇದೆಯೇ ?" ಎಂದು ನನ್ನನ್ನು ಕೇಳಿದರು. ಏನೂ ಇಲ್ಲವೆಂದು ಹೇಳಿದೆನು. ಈ ವಿಚಾರಣೆಯ ಸಂಗತಿಯೆಲ್ಲಾ ಡಿಲ್ಲಿಗೆ ಹೋಯಿತು. ನಿಮ್ಮ ತಾತನವರು ನನಗೆ ಕೊಲೆ ಶಿಕ್ಷೆಯನ್ನು ವಿಧಿಸಿದಂತೆ ತೀರ್ಮಾನವು ಬಂದಿತು. ಅದುವರೆಗೆ ನನ್ನನ್ನು ಕಾರಾಗೃಹದಲ್ಲಿಯೇ ಇಟ್ಟಿದ್ದರು. ರಾಜಭೋಜನವನ್ನೇ ಕೊಡುತ್ತಿದ್ದರು. ನನ್ನನ್ನು ಏಕೆ ಕೊಲ್ಲಲಿಲ್ಲವೆಂದು ಸೇವಕರನ್ನು ಕೇಳಲಾಗಿ ಆ ಕಾರ್ಯವನ್ನು ಡಿಲ್ಲಿಯಲ್ಲಿ ನಡೆಯಿಸುವಂತೆ ಅಪ್ಪಣೆಯಾಗಿದೆಯೆಂದು ಹೇಳಿದರು. ಆ ಸ್ಥಿತಿಯಲ್ಲಿ ಭಗವದ್ಧ್ಯಾನವೂ, ಮರಣನಿರೀಕ್ಷಣವೂ ಎರಡೇ ನನ್ನ ಮನಸ್ಸಿನ ವೃತ್ತಿಗಳಾಗಿದ್ದವು. ಮತ್ತೊಂದನ್ನಾಲೋಚಿಸಲು ಅವಕಾಶವೇ ಇರಲಿಲ್ಲ. ಒಂದು ರಾತ್ರಿ ಮೈಮರೆತು ಬಿದ್ದಿದ್ದೆನು. ಆ ಸಮಯದಲ್ಲಿ "ಕುಮಾರಾ! ಏಳು, ಜಾಗ್ರತೆ ಏಳು. ಆ ದ್ವಾರವನ್ನು ತೆಗೆದು ಭೂಗೃಹಕ್ಕೆ ಹೋಗು. ಆಲಸ್ಯಮಾಡ ಬೇಡ. ಜೀವಿಸಿ ಸುಖವನ್ನನುಭವಿಸು" ಎಂದು ಒಂದು ಧ್ವನಿಯು ಕಿವಿಯಲ್ಲಿ ಕೇಳಿಸಿತು. ಯಾರೋ ತಟ್ಟಿ ಎಬ್ಬಿಸಿದರು. ಘಂಟಾನಾದದಂತೆ ಆ ಶಬ್ದವು ನನ್ನ ಕಿವಿಯಲ್ಲಿ ಬಿದ್ದೊಡನೆಯೇ ನನಗೆ ಉತ್ಸಾಹವುಂಟಾಯಿತು. ಅದು ನನಗೆ ಪರಿಚಯವಾಗಿದ್ದ ಕಂಠಧ್ವನಿಯಾಗಿದ್ದಿತು. ನಾನು ಆಲೋಚನಾ ಶೂನ್ಯನಾಗಿದ್ದುದರಿಂದ ಆ ಕೊರಳು ಆರದೆಂಬುದು ನಿಶ್ಚಯಿಸಿಕೊಳ್ಳಲಿಲ್ಲ. ಆಮೇಲೆ ಎಲ್ಲವೂ ನಿಶ್ಶಬ್ದವಾಯಿತು. ಯಾವ ದ್ವಾರವೆಂದು ಆಲೋಚಿಸಿದೆನು. ಎದ್ದು ಗೃಹವೆಲ್ಲಾ ತಡವಿ ನೋಡಿದೆನು. ದ್ವಾರವು ಸಿಕ್ಕಿತು. ಅದರ ಮೂಲಕ ಹೊರಗೆ ಹೋದೆನು. ಪುನಃ ಬಾಗಿಲನ್ನು ಯಥಾಪ್ರಕಾರ ಮುಚ್ಚಿದೆನು. ಭೂಗೃಹವನ್ನು ಸೇರಿದೆನು. ಆರುತಿಂಗಳು ಅಲ್ಲಿಯೇ ವಾಸಮಾಡುತ್ತಿದ್ದೆನು. ನನ್ನ ತಾಯಿ ಮುರಳಾದೇವಿಯು ಮದನಪಾಲನನ್ನು ದತ್ತು ಸ್ವೀಕಾರ ಮಾಡಿಕೊಂಡು ನನ್ನ ತಂದೆಗೆ ಪೈತೃಕ ಕರ್ಮಗಳನ್ನು ನಡೆಯಿಸಿದಳು. ತರುವಾಯ ಅವನಿಗೆ ರಾಜ್ಯಾಭಿಷೇಕವನ್ನು ಮಾಡಿಸಿದಳೆಂದು ನನಗೆ ತಿಳಿಯ ಬಂದಿತು. ಕೆಲವು ದಿನಗಳೊಳಗಾಗಿ ಮದನಪಾಲನು ಹೇಮಪ್ರಭೆಯ ಅಂತಃಪುರಕ್ಕೆ ವಿಶೇಷವಾಗಿ ಹೋಗಿ ಬರುತ್ತಿರುವುದಾಗಿಯೂ, ಶಾಸ್ತ್ರಗಳು ಪುನರ್ವಿವಾಹವನ್ನಂಗೀಕರಿಸುವುದರಿಂದ ತನ್ನ ದತ್ತು ಪುತ್ರನಿಗೆ ನನ್ನ ಹೆಂಡತಿಯನ್ನು ಪುನರ್ವಿವಾಹ ಮಾಡಿಸಲು ನನ್ನ ತಾಯಿ ಮುರಳಾದೇವಿಯೇ ಬದ್ಧಕಂಕಣಳಾಗಿರುವಳೆಂತಲೂ ಇದೇ ಫಲ್ಗು

ಣನೇ ಹೇಳಿದಂತೆ ಸಂಗತಿಯೂ ತಿಳಿಯ ಬಂದಿತು. ನಾನು ಆ ಸುದ್ದಿಯನ್ನು ಕೇಳಿ ನನ್ನ ಮಗುವನ್ನು ತೆಗೆದುಕೊಂಡು ರತ್ನದ್ವೀಪಕ್ಕೆ ಹೋದೆನು. ಅಲ್ಲಿ ಒಂದು ವಿಧವಾಗಿ ಸುಖವಾಗಿಯೇ ಕಾಲ ಕಳೆದೆವೆಂದು ಹೇಳಬಹುದು. ನನ್ನ ಪ್ರೇಮೈಕ ಪಾತ್ರಳಾದ ಪುತ್ರಿಯು ನನ್ನಲ್ಲಿದ್ದುದರಿಂದ ನನಗೆ ಸ್ವಲ್ಪ ಪ್ರಾಣಗಳು ಶಾಂತವಾಗಿದ್ದರೂ ಮುಂದೆ ನನ್ನ ಮಗಳ ಗತಿಯೇನು? ಎಂಬ ವಿಚಾರವು ಮಾತ್ರ ನನ್ನನ್ನು ತುಂಬಾ ಬಾಧಿಸುತ್ತಿದ್ದಿತು. ಲಲಿತಕುಮಾರನು ರತ್ನ ದ್ವೀಪದಲ್ಲಿ ಸೆರೆಯಿಂದ ಬಿಡುಗಡೆಯಾಗಿ ರುಗ್ಣತೆಯಿಂದ ನನ್ನ ಮನೆಗೆ ಬಂದಾಗ ನನ್ನ ವೇದನೆಯು ಮತ್ತಷ್ಟು ಅಧಿಕವಾಯಿತು. ಈ ರಾಜ್ಯಾಭಿಲಾಷೆಯೂ ಉಂಟಾಯಿತು. ನನ್ನ ಮಗುವಿಗೆ ಈಗ ಹದಿನಾರು ವರ್ಷಗಳ ವಯಸ್ಸು. ಆಕೆ ನನ್ನ ಹೃದಯ ದುಃಖವನ್ನು ಪಾಲ್ಗೊಂಡು ನನ್ನನ್ನು ನಿರಪರಾಧಿಯೆಂದು ನಿರೂಪಿಸಲು ಬದ್ಧಕಂಕಣಳಾಗಿ, ನಾನು ಬೇಡವೆಂದು ಹೇಳಿದರೂ ಕೇಳದೆ, ಬರುವ ಕಷ್ಟಗಳನ್ನು ಲಕ್ಷಿಸದೆ ಇಲ್ಲಿಗೆ ಬಂದಳು. ನಾನು ನನ್ನ ಭೂಗೃಹದಲ್ಲಿ ವಾಸ ಮಾಡುತ್ತಿದ್ದೇನೆ. ಆ ದಿನ ನಾನು ಪುನಃ ನನ್ನ ತಂದೆಯ ದರ್ಶನಕ್ಕೆ ಹೋದ ಸಮಯದಲ್ಲಿ ಶಯನಾಗಾರ ದ್ವಾರದಲ್ಲಿ ಈ ಫಲ್ಗುಣನು ನಿಂತಿದ್ದನು. ನಾನು ಪುನಃ ಆ ಗೃಹದಲ್ಲಿ ಪ್ರವೇಶಿಸಿದುದುಂಟೇ? ಅಥವಾ ಪುನಃ ಅಲ್ಲಿಗೆ ಬಂದುದುಂಟೆ? ವಿಚಾರಿಸಿದರೆ ಅವನು ಸತ್ಯವನ್ನು ನುಡಿಯುವನೆಂದು ನಂಬುತ್ತೇನೆ.”

ಸಾರ್ವಭೌಮನು ಫಲ್ಗುಣನ ಕಡೆ ತಿರುಗಿ ನೋಡಿದನು. ದಾಮೋದರನು ಅವನ ಬೆನ್ನನ್ನು ತಟ್ಟಿ, ಪ್ರಭುವಿಗೆ ಸರಿಯಾದ ಉತ್ತರವನ್ನು ಕೊಡು, ಎಂದು ಪ್ರೋತ್ಸಾಹಿಸಿದನು.

ಫಲ್ಗುಣನು ತನ್ನ ಪಾಪವು ಫಲಿಸುವ ಕಾಲವು ಬಂದಿದೆಯೆಂತಲೂ, ಮರಣವು ಆಸನ್ನವಾಯಿತೆಂತಲೂ ಭಾವಿಸಿದನು. ಉತ್ತರಹೇಳದಿದ್ದರೆ ದಾಮೋದರನು ತನ್ನನ್ನು ಪಾತಾಳಕ್ಕೆ ತುಳಿಯುವನೆಂದು ಭಯಪಟ್ಟನು. “ಧರ್ಮದ ಮಹಿಮೆ ಇಷ್ಟಿದೆ” ಎಂಬುದು ಆಗಲೇ ಅವನ ಮನಸ್ಸಿಗೆ ಹೊಳೆಯಿತು. ಎದ್ದು ನಿಂತು ಭಯಕಂಪಿತ ಗಾತ್ರನಾಗಿ “ಮಹಾಪ್ರಭೋ! ಅಂದಿನ ದಿನ ಯುವರಾಜರು ಒಳಗೆ ಪ್ರವೇಶಿಸಲೇ ಇಲ್ಲ. ಇದು ಯಥಾರ್ಥವು” ಎಂದು ನುಡಿದನು.

**ಸಾರ್ವಭೌಮ**—ಕುಮಾರಿ! ನಿನ್ನ ವೃತ್ತಾಂತವನ್ನು ವಿಸ್ತರಿಸು.

**ಇಂದಿರೆ**—ಸಾರ್ವಭೌಮ! ನಾನು ಈ ಮಹನೀಯನ ತನುಜಳು. ನನಗೆ ಹುಟ್ಟಿದಾಗ ತಂದೆ ತಾಯಿಗಳಿಟ್ಟ ಹೆಸರು **ಚಂಪಕಮಾಲಿನಿ** ಆದರೆ ಈಗ ನನ್ನ ಹೆಸರು ಇಂದಿರೆ. ನನ್ನ ತಂದೆಯವರು ನಿರಪರಾಧಿಯೆಂಬುದಾಗಿ ನಿರೂಪಿಸಲು ನನ್ನ ತಾಯಿಯ ಅರಮನೆಯಲ್ಲಿ ಒಬ್ಬ ದಾಸಿಯಾಗಿ ಬಂದು ಸೇರಿದೆನು.

ಮೂರು ತಿಂಗಳಿಂದ ದೊಡ್ಡ ಅರಮನೆಯಲ್ಲಿ ರಾಜಮಾತೆಯನ್ನು ಸೇವಿಸುತ್ತಿರುವೆನು. ಈ ವ್ಯವಹಾರಕ್ಕೆ ಬೇಕಾದ ನಿದರ್ಶನಗಳು ನನ್ನ ತಾಯಿಯು ಅರಮನೆಯಲ್ಲಿ ದೊರೆಯಲಿಲ್ಲ. ನಾನು ದೊಡ್ಡ ಅರಮನೆಯಲ್ಲಿರುವಾಗ ಅವುಗಳಿಗಾಗಿ ನಾನು ಪ್ರಯತ್ನಪಟ್ಟೆನು. ಫಲ್ಗುಣನಿಗೆ ಈ ವಿಷಯದಲ್ಲಿ ಸಂಶಯ ತೋರಿ ರಾಜಮಾತೆಗೂ ತಿಳಿಸಿದನು. ಆಕೆಗೆ ಕೂಡಾ ನನ್ನಲ್ಲಿ ಸಂಶಯವೇ ಇರುವುದು. ಪ್ರಥಮದಲ್ಲಿ ನನ್ನ ಮೇಲೆ ಕಳ್ಳತನವನ್ನು ಹಾಕಬೇಕೆಂದು ಫಲ್ಗುಣನು ನನಗೆ ತಿಳಿಯದೆಯೇ ನನ್ನ ಪೆಟ್ಟಿಗೆಯಲ್ಲಿ ಒಂದು ಏಕಾವಳಿಯನ್ನು ಇಟ್ಟನು. ನಾನು ಅದನ್ನು ನೋಡಿದ ಕೂಡಲೇ ರಾಜಮಾತೆಗೆ ತಿಳಿಸಿ ಆ ಅಪವಾದವನ್ನು ಹೋಗಲಾಡಿಸಿಕೊಂಡೆನು. ಎರಡನೆಯ ಸಲ, ಎಲ್ಲರೂ ವನಭೋಜನಕ್ಕೆ ಹೋಗಿದ್ದಾಗ ನಾನು ಬಾಣನದೀ ತೀರದಲ್ಲಿದ್ದ ಒಂದು ಹಡಗಿನಲ್ಲಿ ಕುಳಿತಿರಲು ಫಲ್ಗುಣನು ಬಂದು ಅದರ ಹಗ್ಗವನ್ನು ಕತ್ತರಿಸಿದನು. ಆಗ ನಾನು ಹಡಗು ನಡೆಯುತ್ತಿರುವುದನ್ನು ಕಂಡು ಮುಂದಕ್ಕೆ ಹೋಗಲು ಅದು ತಲೆಕೆಳಗಾಯಿತು. ನಾನು ನದಿಯಲ್ಲಿ ಈಜುತ್ತ ಅರಮನೆಗೆ ಬಂದೆನು. ಮೂರನೆಯ ಸಲ ನನ್ನನ್ನು ಎತ್ತಿ ಕೆರೆಯಲ್ಲಿ ಬಿಸುಟನು. ಆದರೆ, ಅದೃಷ್ಟವಶಾತ್, ನಾನು ಒಂದು ಗಿಡದ ಸಮೀಪದಲ್ಲಿ ಬಿದ್ದು ಗಾಯಪಟ್ಟೆನಲ್ಲದೆ ಪ್ರಾಣಾಪಾಯವೇನೂ ನನಗೆ ಸಂಭವಿಸಲಿಲ್ಲ. ನನ್ನ ಮೇಲೆ ಇವನಿಗೆ ಇಷ್ಟು ವೈರವಿರಲು ಕಾರಣವೇನೋ ಪ್ರಭುಗಳೇ ಆಲೋಚಿಸಬೇಕು. ಇವನೊಬ್ಬ ಸೇವಕನು. ಆದರೆ, ಅರಮನೆಯಲ್ಲಿ ರಾಜನಿಗೆ ಸಮನಾಗಿ ಸುಖವನ್ನನುಭವಿಸುತ್ತಿದ್ದಾನೆ. ಇವನಲ್ಲಿ ಏನು ಮಹಿಮೆಯಿರುವುದೆಂದು ಇಷ್ಟು ಮರ್ಯಾದೆಯನ್ನು ಮಾಡುತ್ತಿರುವರೋ ವಿಚಾರಿಸಬೇಕು. ಅಲ್ಲದೆ, ಇವನು ನನ್ನ ತಾತನವರ ಬೊಕ್ಕಸದಲ್ಲಿದ್ದ ರತ್ನಾಭರಣಗಳನ್ನೆಲ್ಲಾ ಅಪಹರಿಸಿ ಪ್ರಾಕಾರದ ಹಿಂಭಾಗದೊಳಗಿನ ಗುಡ್ಡಗಳ ನಡುವೆ ಬಚ್ಚಿಟ್ಟಿರುವನು. ಖಜಾನೆಯಲ್ಲಿ ಎಷ್ಟು ದ್ರವ್ಯವು ಹೋಗಿರುವುದೆಂಬುದನ್ನು ಅರಸನಾಗಲಿ, ರಾಜಮಾತೆಯಾಗಲಿ ವಿಚಾರಿಸಿಕೊಂಡಿರುವರೇ ? ನಾನು ಅದನ್ನು ಕಂಡುಹಿಡಿದಿರುವೆನು. ಪ್ರಭುಗಳಿಗೆ ತೋರಿಸಲು ಸಿದ್ಧಳಾಗಿರುವೆನು. ಮೃತರಾದ ನನ್ನ ತಾತನವರು ನನ್ನ ತಂದೆಗೆ ಬರೆದ ಚೀಟಿಯನ್ನು ಇವನು ಒಂದು ಡಬ್ಬಿಯಲ್ಲಿಟ್ಟು ಆತನ ಶಯನಾಗಾರದಲ್ಲಿಯೇ ಹೂತಿಟ್ಟಿದ್ದನು. ನಾನು ಅದನ್ನು ಕಂಡುಹಿಡಿದು ತಮ್ಮ ಸನ್ನಿಧಾನಕ್ಕೆ ಈ ಮೊದಲೇ ಕಳುಹಿಸಿದ್ದೇನೆ. ಇವನು ಮಲಗುವ ಮನೆ ರಾಜನ ಶಯನಾಗಾರಕ್ಕೆ ಪಕ್ಕದಲ್ಲಿಯೇ ಇದೆ. ಅದೊಂದು ರಾಜನ ಶಯನಗೃಹದಂತೆ ಇರುವುದು. ಇವನ ಪೆಟ್ಟಿಗೆಗಳಲ್ಲಿ ಆ ಚೀಟಿಯಿಟ್ಟಿದ್ದ ಡಬ್ಬಿಯಂತಹ ಡಬ್ಬಿಗಳು ಇನ್ನೂ ಇರುವುವು. ರತ್ನಾಭರಣಗಳಿರುವುವು. ಅದೇ

ನಾದರೂ ಇವರಿಗೆ ತಿಳಿದಿರುವುದೇ? ಇಲ್ಲಿ ಕುರುಡರಂತೆ ಒಬ್ಬ ಸೇವಕನ ಕೈಗೊಂಬೆಗಳಾಗಿರುವುದು ಶೋಚನೀಯವಲ್ಲವೇ? ತಾವು ಇವೆಲ್ಲವನ್ನು ಪರೀಕ್ಷಿಸಬಹುದು. ಫಲ್ಗುಣನ ಮನೆಯಲ್ಲಿರುವ ವಸ್ತುಗಳ ಪಟ್ಟಿಯು ಇಲ್ಲಿರುವುದು ಎಂದು ಸಾರ್ವಭೌಮನಿಗೆ ಒಂದು ಕಾಗದವನ್ನು ಕೊಟ್ಟಳು. ಇದೆಲ್ಲವನ್ನೂ ಕೇಳುತ್ತಿದ್ದ ಫಲ್ಗುಣನು ಹಾಗೆಯೇ ಮೂರ್ಛೆ ಹೋದನು. ಪಕ್ಕದಲ್ಲಿದ್ದವರ ಶೈತ್ಯೋಪಚಾರಗಳಿಂದ ಪುನಃ ಪ್ರಬುದ್ಧನಾಗಿ ಉನ್ಮತ್ತನಂತೆ ದಿಕ್ಕುವಿದಿಕ್ಕುಗಳನ್ನು ನೋಡತೊಡಗಿದನು. ಸಭಾಸದರಿಗೆ ಇದು ಅವನ ಮೇಲೆ ಸಂಶಯವನ್ನುಂಟುಮಾಡಿತು.

**ಇಂದಿರೆ**—ಮಹಾಪ್ರಭೋ! ನನ್ನ ತಾತನು ಬರೆದ ಚೀಟಿಯು ನನ್ನ ತಂದೆಗೆ ಸೇರದೆ ಹೋದ ಪ್ರಯುಕ್ತ ಆತನ ಅವಸಾನ ಕಾಲದಲ್ಲಿ ನನ್ನ ತಂದೆಯು, ಮಹಾರಾಜನ ಬಳಿ ಇರಲು ಅವಕಾಶವಾಗಲಿಲ್ಲವೆಂದು ಸ್ಪಷ್ಟಪಟ್ಟಿರುವುದು. ಹಾಗಿರಲು ಆತನು ಮಹಾರಾಜನನ್ನು ಕೊಂದನೆಂದು ಹೊರಿಸಿದ ಅಪವಾದವು ಮಿಥ್ಯಾಪವಾದವೇ ವಿನಾ ನಿಜವಾಗಲಾರದು. ಅಲ್ಲದೆ ನಮ್ಮ ತಂದೆಗೆ ಇರುವ ಮಾತಾಪಿತೃಭಕ್ತಿಯು ಅಸದಳವೆಂಬುದು ಪ್ರಭುಗಳಿಗೆ ತಿಳಿದೇ ಇರಬಹುದು. ಆತನು ಸರ್ವಹಿತ ಪ್ರಾಣಿಯೇ ವಿನಾ ಒಬ್ಬರಿಗೂ ಕನಸಿನಲ್ಲಾದರೂ ಕೆಡುಕನ್ನೆಣಿಸುವವನಲ್ಲ. ನಮ್ಮ ತಾತನಲ್ಲಿ ಗಾಳಿ ಹಾಕುತ್ತಿದ್ದ ಪದ್ಮನಾಭನೆಂಬ ಸೇವಕನು ಅರಮನೆಯಲ್ಲಿ ಈಗಲೂ ಇರುವನು. ಅವನನ್ನು ಪ್ರಭುಗಳು ವಿಚಾರಿಸಿದರೆ ಮತ್ತೊಂದು ನಿದರ್ಶನವು ದೊರೆಯುವುದು.

**ಕೇಶವಸಿಂಗ್**—ಮಹಾಪ್ರಭೋ! ರಾಜಕುಮಾರಿ ಹೇಳಿದುದು ಬಹಳ ಸ್ವಲ್ಪ. ಇನ್ನೂ ವಿಶೇಷವಿರುವುದು. ಆಜ್ಞೆಯಾದರೆ ನಾನು ಹೇಳುತ್ತೇನೆ.

**ಸಾರ್ವಭೌಮ**—ಕೇಶವಸಿಂಗ್! ರಾಜಪುತ್ರಿಯು ಫಲ್ಗುಣನನ್ನು ಇನ್ನೂ ನಿರಪರಾಧಿಯೆಂದು ಸಂಶಯ ಪಡುತ್ತಿರುವಂತೆ ತೋರುತ್ತದೆ. ಆಕೆಯು ಹೇಳಿದ ಒಂದೊಂದಂಶವೂ ಅವನ ಶಿಕ್ಷೆಗೆ ಸಾಕಾಗಿರುವುದು. ಅವನ ದೌರ್ಜನ್ಯವು ಇನ್ನೂ ಎಷ್ಟು ದೂರದ ವರೆಗೆ ಹೋಗಿರುವುದೋ ಪರೀಕ್ಷಿಸಬೇಕೆಂದು ವಿಚಾರಿಸುತ್ತಿದ್ದೇನೆ. ನಿನಗೆ ತಿಳಿದಿರುವ ಸಂಗತಿಗಳನ್ನು ವಿಜ್ಞಾಪಿಸು.

**ಕೇಶವಸಿಂಗ್**—"ಮಹಾಪ್ರಭೋ! ಫಲ್ಗುಣನು ಒಂದು ದಿನ ರಾತ್ರಿ ಹತ್ತು ಗಂಟೆಗಳ ಮೇಲೆ ಹೊರಹೊರಟನು. ನಾನು ಅವನ ಮುಖಭಾವವನ್ನು ನೋಡಿ ಈದಿನ ಏನೋ ಅನರ್ಥ ಕಾರ್ಯವು ನಡೆಯುವುದೆಂದಾಲೋಚಿಸಿ ಅವನಿಗೆ ತಿಳಿಯದಂತೆಯೇ ಅವನನ್ನು ಹಿಂಬಾಲಿಸಿದೆನು. ಅವನು ಈಗ ಪ್ರಭುಗಳು ಇಳಿದಿರುವ ಈ ಭವನವನ್ನು ಹೊಕ್ಕನು. ದೈವಪ್ರೇರಿತನಾದವನಂತೆ ನಾನು

ಹಿಂಭಾಗದಲ್ಲಿ ಒಂದು ಪೊದೆಯಲ್ಲಿ ಅವಿತುಕೊಂಡೆನು. ಹೀಗೆ ಸುಮಾರು ಅರ್ಧ ಗಂಟೆ ಕಳೆಯಿತು. ಆಗ ಈ ರಾಜಕುಮಾರಿಯೂ ಅಲ್ಲಿಗೆ ಬಂದರು. ಆಕೆಯು ಗೋಡೆಯನ್ನಾತುಕೊಂಡು ಆ ಕಡೆ ತಿರುಗಿ ನೋಡುತ್ತಾ ನಿಂತಿದ್ದಾಗ ಫಲ್ಗುಣನು ಹಿಂದಿನಿಂದ ಮೆಲ್ಲನೆ ಹೋಗಿ ಆ ದೇವಿಯನ್ನು ಕೊಲ್ಲಲು ಕತ್ತಿಯನ್ನು ಎತ್ತಿದನು. ಆಗ ನಾನು, ಹಿಂದಿನಿಂದ ಅವನೆತ್ತಿದ್ದ ಕತ್ತಿಯನ್ನು ಹಾಗೆಯೇ ಹಿಡಿದುಕೊಂಡೆನು. ದಾಮೋದರನೆಂತಲೂ ಮೂಢನೆಂತಲೂ ಪರಿಹಾಸಮಾಡುತ್ತಿದ್ದ ಈ ದುರ್ಜನನು ತನ್ನ ಕತ್ತಿಯು ಪೊದೆಯಲ್ಲಿ ಸಿಕ್ಕಿಕೊಂಡಿರಬಹುದೆಂದು ಎಣಿಸಿದನು. ನನ್ನನ್ನು ಗುರುತಿಸುವನೆಂದು ಸ್ವಲ್ಪ ಹಿಂದೆ ತಿರುಗುವಷ್ಟರಲ್ಲಿ ಈ ಧೂರ್ತನು ಕುಮಾರಿಯನ್ನು ಮೇಲಕ್ಕೆತ್ತಿ ಬಿಸುಟನು. "ಸತ್ತುಹೋಗು, ಮುಂಡೆ!" ಎಂದು ಹೇಳುತ್ತಾ ಹೊರಟುಹೋದನು. ಆ ಸಮಯದಲ್ಲಿ ಏನು ಮಾಡಲೂ ತೋರದೆ ನಾನು ಸುಮ್ಮನಿದ್ದೆನು. ಇದೇ ಇವನ ಕತ್ತಿ. ಅಮ್ಮಣ್ಣಿಯವರು ತಯಾರಿಸಿದಂತೆ ನಾನು ಕೂಡಾ ಫಲ್ಗುಣನ ಮನೆಯಲ್ಲಿರುವ ವಸ್ತುಗಳ ಪಟ್ಟಿಯನ್ನು ಬರೆದಿಟ್ಟಿರುತ್ತೇನೆ" ಎಂದು ಹೇಳಿ ಸಾರ್ವಭೌಮನ ವಶಕ್ಕೆ ಅದನ್ನು ಕೊಟ್ಟನು. ಫಲ್ಗುಣನ ಕತ್ತಿಯು ಚಿನ್ನದ ಹಿಡಿಯುಳ್ಳುದಾಗಿದ್ದಿತು. ಮೇಲಿನ ಅಕ್ಷರಗಳನ್ನು ಮಾತ್ರ ಕಾಣಿಸದಂತೆ ಉಜ್ಜಿದ್ದನು.

ಸಾರ್ವಭೌಮನು ಪದ್ಮನಾಭನನ್ನು ಕರೆಯಿಸಿದನು. ಅವನು ಭಯಕಂಪಿತಗಾತ್ರನಾಗಿ ಆತನ ಇದಿರಿಗೆ ನಿಂತನು.

ಪದ್ಮನಾಭಾ! ಭಯಪಡಬೇಡ. ಹಿಂದಿನ ಮಹಾರಾಜರಲ್ಲಿ ಗಾಳಿ ಹಾಕುತ್ತಿದ್ದವನು ನೀನಲ್ಲವೇ? ಮಹಾರಾಜರು ಅಸ್ವಸ್ಥರಾಗಿದ್ದಾಗ ನಡೆದ ವೃತ್ತಾಂತವನ್ನು ಪ್ರಭುಗಳಲ್ಲಿ ವಿಜ್ಞಾಪಿಸು.

**ಪದ್ಮನಾಭ**—ಮಹಾಪ್ರಭೊ! ಪ್ರತಾಪಸಿಂಹ ಮಹಾರಾಜರಿಗೆ ಗಾಳಿ ಹಾಕುತ್ತಿದ್ದವನು ನಾನೇ. ಆದಿನ ನಡೆದ ಸಂಗತಿ ನನಗೆ ಚೆನ್ನಾಗಿ ಜ್ಞಾಪಕ ಇದೆ. ಪ್ರಜೆಗಳಿಗೂ ಸಹ ಜ್ಞಾಪಕವಿದೆಯೆಂದು ನಂಬುತ್ತೇನೆ.

**ಮಾಧವ**—ಹಾಗಿದ್ದರೆ ಆ ಸಮಯದಲ್ಲಿ ಮಹಾರಾಜರು ನಿನ್ನ ಕೈಗೆ ಒಂದು ಚೀಟಿಯನ್ನು ಕೊಟ್ಟು ಯುವರಾಜನಿಗೆ ತಲುಪಿಸಬೇಕೆಂದು ಹೇಳಿದುದು ನಿಜವೇ? ಹಾಗೆ ಅವರು ಕೊಟ್ಟ ಚೀಟಿಯನ್ನು ನೀನು ಏನು ಮಾಡಿದೆ? ಚೆನ್ನಾಗಿ ಜ್ಞಾಪಕ ತಂದುಕೊಂಡು ಹೇಳು.

**ಪದ್ಮನಾಭ**–ಸ್ವಾಮಿ! ಇದರಿಂದ ಸಾಯುವೆನೆಂಬ ಭಯವು ನನಗಿಲ್ಲವೇ ಇಲ್ಲ. ನನ್ನ ಹೆಂಡತಿ ಮಕ್ಕಳು ಕಷ್ಟಗಳ ಪಾಲಾಗದಂತೆ ಕಾಪಾಡಬೇಕು.

ಯುವರಾಜರು, ಮೃತಿ ಹೊಂದಿದರೆಂಬ ವಾರ್ತೆ ಸುಳ್ಳಾಗಲಿ. ಅವರ ಧರ್ಮ ಪತ್ನಿಯವರು ಜೀವಿಸಿರುವರು. ನಾನು ಈಗ ಹೇಳುವ ಮಾತಿನಿಂದ ಆ ಮಹಾರಾಣಿಯವರಿಗೆ ಏನಾದರೂ ಒಳ್ಳೆಯದಾದರೆ ನನ್ನ ಜನ್ಮವು ಸಾರ್ಥಕವಾಗುವುದು. ನಾನು ರಾಜಸೇವಾ ಧರ್ಮವನ್ನು ಸರಿಯಾಗಿ ನೆರವೇರಿಸಿದಂತಾಗುವುದು. ಪ್ರಭೋ! ಆ ದಿನ ನಾನು ಗಾಳಿ ಹಾಕುತ್ತಿರುವಾಗ ದೊಡ್ಡ ಮಹಾರಾಜರು ನನ್ನನ್ನು ಕರೆದರು. ನಾನು ಓಡಿಹೋದೆನು. "ಪದ್ಮನಾಭಾ! ಜಾಗ್ರತೆಯಾಗಿ ಹೋಗಿ ಕುಮಾರನನ್ನು ಕರೆದುಕೊಂಡು ಬಾ. ಈ ಚೀಟಿಯನ್ನು ಆತನಿಗೆ ಕೊಡು—ಎಂದು ಆಜ್ಞಾಪಿಸಿದರು. ನಾನು ಅದನ್ನು ತೆಗೆದುಕೊಂಡು ಹೋಗುತ್ತಿರಲು ಈ ಫಲ್ಗುಣನು ನನ್ನನ್ನು ಇದಿರ್ಗೊಂಡು ಆ ಚೀಟಿಯನ್ನು ತಾನೇ ಕೊಡುವುದಾಗಿ ತೆಗೆದುಕೊಂಡನು. ಐದಾರು ದಿನಗಳು ಕಳೆದ ಬಳಿಕ ಫಲ್ಗುಣನು ನನಗೊಂದು ಕಾಗದವನ್ನು ಬರೆದನು. ನಾನು ಓದು ಬರಹ ಕಲಿತವನಲ್ಲ. ಅದನ್ನು ಭದ್ರಪಡಿಸಬೇಕೆಂದು ತೋರಿತು. ಯುವರಾಜರ ವಿಚಾರಣೆಯು ನಡೆದ ಕಾಲದಲ್ಲಿ ಫಲ್ಗುಣನು ನನ್ನನ್ನು ಅಲ್ಲಿ ಇರಿಸಲಿಲ್ಲ. ನನ್ನ ಪ್ರಭುವಿಗೆ ಕೊಲೆ ಶಿಕ್ಷೆಯನ್ನು ವಿಧಿಸಿದರಂತೆ. ಅದು ನಾನು ಇಲ್ಲಿಗೆ ಬಂದ ಮೇಲೆ ತಿಳಿಯಿತು. ಈ ಸಂಗತಿ ನಾನು ಯಾರೊಡನೆ ಹೇಳಲಿ? ನನ್ನನ್ನು ವಿಚಾರಿಸುವವರಾರು? ನನ್ನ ಗತಿಯು "ನರಿಯೆಲ್ಲಿ? ನಾಗಲೋಕವೆಲ್ಲಿ"? ಎಂಬಂತಾಯಿತ್ತು. ಅಷ್ಟರಲ್ಲಿ ಯುವರಾಜರು ತಪ್ಪಿಸಿಕೊಂಡು ಹೋದರೆಂಬ ವಾರ್ತೆ ಹುಟ್ಟಿತು. ನನ್ನೊಡೆಯನು ಎಲ್ಲಾದರೂ ಕ್ಷೇಮವಾಗಿರಲೆಂದು ನಾನು ಕೋಟಿ ದೇವರುಗಳಿಗೆ ಪ್ರಾರ್ಥಿಸಿಕೊಂಡೆನು. ಕೆಲವು ದಿನಗಳಾದ ಮೇಲೆ ಯುವರಾಜರು ಸತ್ತರೆಂಬ ಸುದ್ದಿ ಹುಟ್ಟಿತು. ಇದು ನಿಜವೋ ಸುಳ್ಳೋ ನಾನರಿಯೆ. ಫಲ್ಗುಣನು ನನಗೆ ಬರೆದ ಚೀಟಿಯನ್ನು ನನ್ನ ಮಗಳು ಇಂದಿರಮ್ಮನವರಿಗೆ ಕೊಟ್ಟಿದ್ದಾಳೆ. ಇಷ್ಟೇ ನನ್ನ ಸಂಗತಿ.

**ಸಾರ್ವಭೌಮ**—ಪದ್ಮನಾಭಾ! ನಿನ್ನ ರಾಜಭಕ್ತಿಗೆ ಬಹಳ ಸಂತೋಷವಾಯಿತು. ಇದೋ ನಿನ್ನ ಒಡೆಯನು ಇಲ್ಲಿರುವನು. ಗುರುತಿಸಿದೆಯಾ? ನಿನಗೆ ಭಯವಿಲ್ಲ. ಹೋದ ಸಂಗತಿಗಾಗಿ ದುಃಖಿಸಬೇಡ. ಇಂದಿನಿಂದ ನಿನ್ನ ಕಷ್ಟ ತೀರಿತು.

**ಇಂದಿರೆ**—ಪ್ರಭೋ! ಇವನ ಮಗಳು ಸರಳೆ ನನಗೆ ಕೊಟ್ಟ ಚೀಟಿ ಇದೆಂದು ಹೇಳಿ ಅದನ್ನು ಸಾರ್ವಭೌಮನಿಗೆ ಕೊಟ್ಟಳು.

ಆತನು ಆ ಚೀಟಿಯನ್ನು ಸಭಾಸದರಿಗೆ ಓದುವಂತೆ ನಿಯಮಿಸಿದನು. ಅದರಲ್ಲಿ ಹೀಗೆ ಬರೆಯಲ್ಪಟ್ಟಿದ್ದಿತು :—

"ಪದ್ಮನಾಭಾ! ದೊಡ್ಡ ಅರಸರು ಬರೆದ ಚೀಟಿ ನನ್ನ ಕೈಗೆ ಕೊಟ್ಟ

ಹಾಗೆ ನೀನು ಪರರೊಡನೆ ಹೇಳಿದೆಯಾದರೆ ನಿನ್ನ ತಲೆ ಹಾರಿ ಹೋಗುವುದೆಂದು ತಿಳಿ. ಜಾಗ್ರತೆ! ಹಾಗಿಲ್ಲದೆ, ರಹಸ್ಯವನ್ನು ರಕ್ಷಿಸಿದರೆ ನಿನ್ನ ದಾರಿದ್ರ್ಯವು ತೀರುವುದು. ಇಂತು ನಿನ್ನ ಕ್ಷೇಮವನ್ನು ಕೋರುತ್ತಿರುವ—ಫಲ್ಗುಣ.''

ಅದನ್ನು ಕೇಳಿದಕೂಡಲೇ ಸಾರ್ವಭೌಮನ ಕಣ್ಣುಗಳು ಕೆಂಪೇರಿದುವು. ''ಎಲಾ! ಫಲ್ಗುಣಾ! ನಿನಗೆಷ್ಟು ಅಹಂಕಾರವು! ಇಂತಹ ದ್ರೋಹವು ಮಾಜಿ ಹೋಗುವುದೆಂದೆಣಿಸಿದೆಯಾ? ನೀನು ಮಹಾಪರಾಧಿಯೆಂದು ನಿರೂಪಿಸುವ ನಿದರ್ಶನಗಳು ಎಷ್ಟೋ ಹೊರಪಟ್ಟಿರುವುವು. ನೀನು ಶಿಕ್ಷಾರ್ಹನಾಗಿರುವೆ. ಇದುವರೆಗೆ ನಿನ್ನ ಮೇಲೆ ಆಪಾದಿಸಿರುವ ಅಂಶಗಳಿಗೆಲ್ಲಾ ಏನು ಉತ್ತರ ಕೊಡುವೆ? ಪ್ರತಾಪಸಿಂಹ ಮಹಾರಾಜರ ಮರಣಕ್ಕೆ ಕಾರಣರಾರು? ಕೇಶವ ಸಿಂಗ್! ಅವನನ್ನು ತಂದು ಇಲ್ಲಿ ನಿಲ್ಲಿಸು''—ಎಂದು ಆಜ್ಞೆಯಾಗುತ್ತಲೇ ಕೈಕೋಳಗಳನ್ನು ಹಾಕಿ ಫಲ್ಗುಣನನ್ನು ಸಾರ್ವಭೌಮನ ಇದಿರಿಗೆ ನಿಲ್ಲಿಸಿದರು.

ಫಲ್ಗುಣನು ಬೇಡಿಗಳನ್ನು ತೊಟ್ಟುಕೊಂಡು ಮುಂದಕ್ಕೆ ಬಂದು ನಿಂತು: ''ಮಹಾಪ್ರಭೋ! ಇವರೆಲ್ಲರೂ ಹೇಳಿದ ಸಂಗತಿಗಳು ವಾಸ್ತವವಾದವುಗಳು. ಆ ಕಾರ್ಯಗಳನ್ನೆಲ್ಲಾ ನಾನೇ ಮಾಡಿದೆನು. ನನಗೆ ಮರಣಕಾಲವು ಪ್ರಾಪ್ತವಾಗಿದೆಯೆಂದು ಭಾವಿಸುವೆನು. ನಾನು ಇನ್ನು ಬಚ್ಚಿಡುವುದೇನಿದೆ? ದೇವ! ಸೇವಕನನ್ನು ಯಾವ ಸ್ಥಾನದಲ್ಲಿಡಬೇಕೋ ಆ ಸ್ಥಾನದಲ್ಲಿಡದೆ ಅವನಿಗೆ ಅತ್ಯುನ್ನತ ಸ್ಥಾನವನ್ನು ಕೊಟ್ಟರೆ ಅವನ ನೀಚ ಸ್ವಭಾವವು ತಲೆದೂಗಿ ಮುಂದೆ ಒದುವುದನ್ನು ಸುದಾ ಆಲೋಚಿಸದೆ ಅನರ್ಥ ಪರಂಪರೆಗಳನ್ನುಂಟುಮಾಡುವುದರಲ್ಲಿ ಆಶ್ಚರ್ಯವೇನು? ದುರಾಶೆಗಳಿಗೆ ಒಳಗಾಗುವುದು ನೀಚನ ಸ್ವಭಾವವು. ಅದಕ್ಕೆ ಅವಕಾಶ ಕೊಡುವುದು ಪ್ರಭುವಿನ ತಪ್ಪು. ಹೇಗಾದರೂ ತಮ್ಮ ಸವತಿಯ ಮಗನನ್ನು ತುದಿ ಮುಟ್ಟಿಸಬೇಕೆಂಬ ಮಾತ್ಸರ್ಯದಿಂದ ರಾಜಮಾತೆಯವರು ನನ್ನನ್ನು ಆಪ್ತ ಸೇವಕನನ್ನಾಗಿ ಮಾಡಿಕೊಂಡು ಕಾರ್ಯಗಳನ್ನು ನಡೆಯಿಸುತ್ತಿದ್ದರು. ನಾನು ದ್ರವ್ಯದ ಆಶೆಗೆ ಒಳಪಟ್ಟು ಆಕೆಗೂ ತಿಳಿಯದಂತೆ ಕೆಲವು ಕಾರ್ಯಗಳನ್ನು ಮಾಡುತ್ತಾ ಬಂದೆನು. ಸ್ವಾಮಿ! ನಾನು ಸತ್ಯವನ್ನಾಡುವೆನು. ಮಹಾರಾಜನನ್ನು ನಾನು ಕೊಲ್ಲಲಿಲ್ಲ. ಯುವರಾಜನ ಮೇಲಿನ ಮಾತ್ಸರ್ಯವನ್ನು ಸಾಧಿಸುವುದಕ್ಕಾಗಿ ಅವರ ಮರಣವನ್ನು ಕೊಲೆಯಂತೆ ನಿರೂಪಿಸಿ ಅದಕ್ಕೆ ಈ ಮಹನೀಯನನ್ನು ಗುರಿಮಾಡಿದರು. ಅಮ್ಮನವರು ಮಹಾರಾಜರಲ್ಲಿದ್ದಾಗ ಆ ಪ್ರಭುವು ನಿದ್ರಿಸುತ್ತಿದ್ದರು. ಆಗ ಹೊರಗೆ ಹೋಗಲು ಹೊರಟ ಅಮ್ಮನವರು ನನ್ನೊಡನೆ: ''ಫಲ್ಗುಣಾ! ವಿಕ್ರಮನನ್ನು ಒಳಕ್ಕೆ ಬಿಡಬೇಡ. ಇಂತಹ ಸಮಯದಲ್ಲಿ ನನ್ನ ಮೇಲಿನ ಕ್ರೋಧದಿಂದ ಮಹಾರಾಜರಿಗೆ ಏನಾದರೂ ಹಾನಿ

ಉಂಟುಮಾಡುವನೇನೋ! ಜಾಗ್ರತೆ!" ಎಂದು ಹೇಳಿಹೋದರು. ಮುಂದೆ ರಾಜ್ಯಾಧಿಕಾರವನ್ನು ವಹಿಸುವ ಯುವರಾಜನಲ್ಲಿಯೇ ನಂಬಿಕೆಯಿಲ್ಲದೆ ಯಃಕಶ್ಚಿತ್ ಸೇವಕನಾದ ನನ್ನಲ್ಲಿ ಹೀಗೆ ಹೇಳಿ ಹೋಗುವುದು ಯಾರ ತಪ್ಪು? ಖಾವಂದರವರು ಆಲೋಚಿಸಬೇಕು. ಆ ಮಾತನ್ನು ಆಧಾರವಾಗಿಟ್ಟುಕೊಂಡು ಏನು ಮಾಡಬೇಕೆಂದು ಆಲೋಚಿಸುತ್ತಿದ್ದೆನು. ದೈವಾಧೀನದಿಂದ ಅರ್ಧಘಂಟೆಯೊಳಗಾಗಿ ಮಹಾರಾಜರಿಗೆ ಗುಂಡಿಗೆಗೆ ನೋವು ಆರಂಭವಾಯಿತು. ಆ ನೋವು ತಾಳಲಾರದೆ ಚೀಟಿಯನ್ನು ಬರೆದು ಪದ್ಮನಾಭನನ್ನು ಕರೆದರು. ನಾನು ಹೊರಗೆ ಕುಳಿತಿರುವುದು ಮಹಾರಾಜರಿಗೆ ಗೊತ್ತಿಲ್ಲ. ಪದ್ಮನಾಭನು ಚೀಟಿ ತೆಗೆದುಕೊಂಡು ಹೊರಗೆ ಬಂದನು. ಸಂಗತಿಯೇನೆಂದು ವಿಚಾರಿಸಿದೆನು. ಅವನು ಪೂರ್ತಿಯಾಗಿ ಹೇಳುವಷ್ಟರಲ್ಲಿ "ರಾಮ, ರಾಮ" ಎಂಬ ಶಬ್ದವು ಕೇಳಿಸಿತು. ನಾನು ಅವನನ್ನು ಅಲ್ಲಿಯೇ ನಿಲ್ಲಿಸಿ ಒಳಗೆ ಹೋಗಿ ನೋಡಿದೆನು. ಮಹಾರಾಜರು ಸ್ವರ್ಗಸ್ಥರಾಗಿದ್ದರು. ದುಃಖ ಪಡುವುದಕ್ಕೆ ಬದಲಾಗಿ ಮನಸ್ಸಿನಲ್ಲಿ ಸಂತಸಗೊಂಡು ಪದ್ಮನಾಭನಲ್ಲಿದ್ದ ಚೀಟಿಯನ್ನು ತೆಗೆದುಕೊಂಡು ಅವನನ್ನು ಬೇರೆ ಕೆಲಸಕ್ಕೆ ಕಳುಹಿಸಿ ಅದನ್ನು ಭದ್ರಪಡಿಸಿ ಕೊಲೆಯ ಅಪವಾದವನ್ನು ಯುವರಾಜನ ಮೇಲೆ ಹಾಕಬೇಕೆಂದು ತೋರಿತು. ರಾಜಮಾತೆ ಬರುವುದರೊಳಗಾಗಿ ಮಹಾರಾಜರ ಶವದ ಮೇಲೆ ಕತ್ತಿಯ ಗಾಯಗಳನ್ನುಂಟು ಮಾಡಿದೆನು. ಆ ಚೀಟಿಯನ್ನು ನಾನು ಆಗಲೇ ನಾಶ ಮಾಡಬಹುದಾಗಿದ್ದಿತು. ಯಾದವರ ವಂಶ ನಾಶಕ್ಕೆ ಮುಸಲವನ್ನರೆದಂತೆ ಆ ಚೀಟಿಯನ್ನು ಭೂಮಿಯಲ್ಲಿ ಹೂತಿಟ್ಟೆನು. ಎಷ್ಟು ದಿನಗಳು ಕಳೆದರೂ ನಾನು ಮಾಡಿದ ಕಾರ್ಯಗಳು ನನಗೆ ಮುಪ್ಪಾದುವು. ದುರಾಲೋಚನೆಗಳುಳ್ಳವರನ್ನು ಸೇವಿಸಿ ಅವರನ್ನು ಮೆಚ್ಚಿಸುವುದಕ್ಕಾಗಿ ಕೆಟ್ಟ ಕಾರ್ಯಗಳನ್ನು ಮಾಡಿದೆನು. ಸಜ್ಜನರನ್ನು ನಂಬಿದ ಪದ್ಮನಾಭನು ಸುಖ ಹೊಂದುವನು. ದುರ್ಮಾರ್ಗರೆಷ್ಟು ದೊಡ್ಡವರಾದರೂ ಅವರನ್ನಾಶ್ರಯಿಸಿದವರಿಗೆ ಸುಖವೆಂದಿಗೂ ದೊರೆಯಲಾರದೆಂದು ಈಗ ನನಗೆ ಅರ್ಥವಾಯಿತು. ಪ್ರಭುಗಳು ನನಗೆ ಯಾವ ಶಿಕ್ಷೆ ವಿಧಿಸಿದರೂ ಸಿದ್ಧನಾಗಿದ್ದೇನೆ.

**ವಿಕ್ರಮಸಿಂಹ**—ಸಾರ್ವಭೌಮಾ! ಈ ರಹಸ್ಯವು ಹೊರಪಟ್ಟುದರಿಂದ ಮಹಾ ವೀರನಾದ ನನ್ನ ಪ್ರಿಯ ಜನಕನು ದುರ್ಮರಣಕ್ಕೆ ಒಳಪಡಲಿಲ್ಲವೆಂದು ತಿಳಿಯಲು ನನಗೆ ತುಂಬಾ ಸಂತೋಷವಾಯಿತು. ಈಗ ಫಲ್ಗುಣನಾಡಿದ ಮಾತು ಅಶನಿತಾಡನದಂತೆ ನನ್ನ ಮನಸ್ಸನ್ನು ಭೇದಿಸುತ್ತಿದೆ. ಅಜ್ಞಾನವಶದಿಂದ ನನ್ನ ತಾಯಿ ಮಾಡಿದ ಅಪರಾಧವನ್ನು ಮನ್ನಿಸಬೇಕೆಂದು ಪ್ರಾರ್ಥಿಸುತ್ತೇನೆ.

"ದುರ್ಮಾರ್ಗರನ್ನು ಸೇವಿಸಿ ಕೆಟ್ಟೆ"ನೆಂದು ಸೇವಕನ ಬಾಯಿಂದ ಬಂದ ಮಾತು ಈ ಮೇವಾರು ರಾಜ್ಯದ ಪ್ರಭುಗಳಿಗೆ ಅಪವಾದಕರವಾಗಿರುವುದರಿಂದ ನಾನು ಸಹಿಸಲಾರದಿರುವೆನು. ಅದಕ್ಕಾಗಿ ತಾವು ಅವನನ್ನು ಗಲ್ಲದ ಶಿಕ್ಷೆಗೆ ಗುರಿಪಡಿಸಿದರೆ ಸಾಯುವನು. ಆದರೆ ನಮ್ಮ ವಂಶವನ್ನೇ ಶಪಿಸುವನು. ಅದಲ್ಲದೆ, ಅವನು ನನ್ನ ತಂದೆಯನ್ನು ಕೊಲ್ಲಲಿಲ್ಲ. ನನ್ನ ಮಗಳಿಗೆ ಅವನು ಮೂರು ನಾಲ್ಕು ಸಲ ಕೆಡುಕನ್ನು ಮಾಡಿದರೂ ಅವನಿಂದ ಆಕೆ ಮೃತಳಾಗಲಿಲ್ಲ. ಆದಕಾರಣ, ರಾಜೇಂದ್ರ! ಇವನಿಗೆ ಪ್ರಾಣಹಾನಿ ಮಾಡಕೂಡದೆಂದು ಪ್ರಾರ್ಥಿಸುವೆನು.

**ಸಾರ್ವಭೌಮ**—ರಾಜೇಂದ್ರ! ನಿಮ್ಮ ಉದಾರ ಚರಿತವು ಲೋಕವಿದಿತವು. ಇಲ್ಲಿ ಇಷ್ಟು ತಂತ್ರಗಳು ನಡೆದಿದ್ದರೂ ಒಂದನ್ನೂ ವಿಚಾರಿಸದೆ ಮುರಳಾದೇವಿಯು ತನ್ನ ಬಂಧುವರ್ಗಕ್ಕೆ ಸೇರಿದವಳೆಂಬ ಅಭಿಮಾನದಿಂದಲೂ, ತನ್ನ ಕ್ರೋಧವನ್ನು ಸಾಧಿಸುವುದಕ್ಕೆ ಇದೇ ಸಮಯವೆಂದೆಣಿಸಿ ನಿಮ್ಮ ಮೇಲೆ ದೋಷಾರೋಪಣೆಮಾಡಿ ಸಾರ್ವಭೌಮನಿಗೆ ಮುರಳಾದೇವಿ ಬರೆಯಲು, ತನ್ನ ಪ್ರಾಣ ಸ್ನೇಹಿತನನ್ನು ಕೊಂದವರ ಪ್ರಾಣವನ್ನು ತೆಗೆದುತೀರಬೇಕೆಂಬ ಆಕ್ರೋಶದಿಂದ ನಿಮಗೆ ಮರಣ ದಂಡನೆ ವಿಧಿಸಿರುವಂತೆ ವ್ಯಕ್ತವಾಗುವುದು. ಒಂದು ವೇಳೆ ಆ ದಂಡನೆ ಸಲುವಳಿಯಲ್ಲಿ ಬಂದಿದ್ದರೆ ನಮ್ಮ ವಂಶಕ್ಕೆ ಅಪಯಶಸ್ಸು ಬರುತ್ತಿದ್ದಿತು. ಭಗವಂತನ ಕೃಪೆಯಿಂದ ಎಲ್ಲವೂ ಈಗ ಸರಿಯಾಯಿತು. ಫಲ್ಗುಣನ ವಿಷಯದಲ್ಲಿ ನಿಮ್ಮ ಇಷ್ಟದಂತೆ ನಡೆಯಿಸುವೆನು. ಫಲ್ಗುಣನ ಕಡೆ ತಿರುಗಿ: "ಫಲ್ಗುಣ! ದುಷ್ಟಾಲೋಚನೆಗಳಿಗೆ ದುರ್ಜನರು ಒಳಗಾಗುವುರಲ್ಲದೆ ಸತ್ಪುರುಷರು ಒಳಗಾಗಲಾರರು. ಈ ವಿಷಯದಲ್ಲಿ ನಿನಗೆ ಪದ್ಮನಾಭನೇ ನಿದರ್ಶನವಾಗಿರುವನು. ನೀನು ಮಾಡಿದುದೆಲ್ಲಾ ರಾಜದ್ರೋಹವು. ರಾಜಪುತ್ರಿಯನ್ನು ಕೊಲ್ಲಲು ಯತ್ನಿಸಿದೆ. ದೈವಾಧೀನದಿಂದ ಅದು ತಪ್ಪಿಹೋಯಿತು. ನೀನು ಮರಣದಂಡನೆಗೆ ಅರ್ಹನಾಗಿದ್ದರೂ ವಿಕ್ರಮಸಿಂಹ ಮಹಾರಾಜನಿಗೆ ಪಟ್ಟಾಭಿಷೇಕವಾಗುವ ಕಾಲದಲ್ಲಿ ಕೆಲವರು ಬಂದಿಗಳಿಗೆ ಬಿಡುಗಡೆ ಮಾಡುವುದು ಒಂದು ಸಂಪ್ರದಾಯವಾದುದರಿಂದ ನಿನಗೆ ಮರಣದಂಡನೆಯಿಲ್ಲದಂತೆ ಮನ್ನಿಸಿರುವೆನು. ಆದರೆ ರಾಜದ್ರೋಹಿಗಳಿಗಾಗಿ ಡಿಲ್ಲೀ ನಗರದಲ್ಲಿ ಜಲಮಧ್ಯದಲ್ಲಿ ಕಟ್ಟಿರುವ ಕಾರಾಗೃಹದಲ್ಲಿ ನೀನು ಯಾವಜ್ಜೀವವೂ ಇರಬೇಕು."—ಎಂದು ನುಡಿಯುತ್ತಲೇ ಶಿಪಾಯಿಗಳು ಬಿಚ್ಚುಕತ್ತಿಗಳ ಪಹರೆಯಲ್ಲಿ ಫಲ್ಗುಣನನ್ನು ಕರೆದುಕೊಂಡು ಹೋದರು. ಆಗ ಸಭಿಕರೆಲ್ಲರೂ ಚಕ್ರವರ್ತಿಯವರ ನಿಷ್ಪಕ್ಷಪಾತವಾದ ತೀರ್ಮಾನಕ್ಕೆ ಬಹಳವಾಗಿ ಸಂತೈಸಿದರು. ಮದನಪಾಲನು ತನ್ನ ರಾಜಾಂಗುಳೀಯವನ್ನು ತೆಗೆದು ಸಾರ್ವಭೌಮನಿಗೆ ಅರ್ಪಿಸಿದನು.

**ಸಾರ್ವಭೌಮ**—ಮದನಪಾಲ! ದೊಡ್ಡ ಕ್ಷತ್ರಿಯ ವಂಶದಲ್ಲಿ ಹುಟ್ಟಿ ವಿದ್ಯಾ ವಿನಯ ಸೌಶೀಲ್ಯಾದಿ ಗುಣಗಳನ್ನು ಅಭ್ಯಾಸಮಾಡಿದ ನಿನ್ನಂತಹ ಪುರುಷನು ಸ್ತ್ರೀಯರ ದುರಾಲೋಚನೆಗಳಿಗೆ ಒಳಗಾಗಿ ಮಹಾ ಪತಿವ್ರತೆಯನ್ನು ಪುನರ್ವಿವಾಹ ಮಾಡಿಕೊಳ್ಳುವೆನೆಂದು ಮುಷ್ಕರ ಹಿಡಿದುದು ಧರ್ಮವೇ? ಆ ಸಾಧ್ವೀಮಣಿಯು ಲವಲೇಶವಾದರೂ ಇಂತಹ ವಿವಾಹಕ್ಕೆ ಮನಸ್ಸುಕೊಟ್ಟಳೇ? ಏನು ಕಾರಣ ನೀನು ಇಂತಹ ದುರಾಲೋಚನೆಗೆ ಒಳಗಾದೆ? ಒಂದು ವರುಷದ ಅವಧಿಯನ್ನು ಕೊಟ್ಟೆಯಷ್ಟೆ! ಆಗಲಾದರೂ ರಾವಣಾಸುರನ ದೃಷ್ಟಾಂತವು ನಿನ್ನ ಮನಸ್ಸಿಗೆ ಹೊಳೆಯಲಿಲ್ಲವೇ? ಮುರಳಾದೇವಿಯು ಮಾಡಿದ ಕಾರ್ಯಗಳೆಲ್ಲವೂ ಅವಮಾನಕರಗಳಾಗಿ ತೋರಲಿಲ್ಲವೇ? ಯಾವ ಧರ್ಮಶಾಸ್ತ್ರವನ್ನು ಅನುಸರಿಸಿ ಆಕೆಯು ತಮ್ಮನಾದ ನಿನ್ನನ್ನು ದತ್ತ ಸ್ವೀಕಾರ ಮಾಡಿದಳು? ವಿಕ್ರಮಸಿಂಹ ಮಹಾರಾಜನು ನಿನ್ನನ್ನು ಮೊದಲಿನಿಂದಲೂ ಎಷ್ಟೋ ಪ್ರೀತಿಸುತ್ತಿದ್ದನೆಂದು ನಾನು ಕೇಳಿದ್ದೆನು. ಅಂತಹ ಮಹನೀಯನ ವಿಷಯದಲ್ಲಿ ನೀನು ಈ ವಿಧವಾದ ದ್ರೋಹವನ್ನು ಎಣಿಸಬಹುದೇ? ಒಂದು ವೇಳೆ, ಹೇಮಪ್ರಭಾದೇವಿಯು ನಿನ್ನ ಮುಷ್ಕರದಿಂದ ಬೇಸರಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರೆ ನೀನು ಎಂತಹ ಪಾಪಕ್ಕೆ ಗುರಿಯಾಗುತ್ತಿದ್ದೆ! ಅದರಿಂದ ಈ ಮಹನೀಯನಿಗೆ ಎಷ್ಟು ಖೇದವುಂಟಾಗುತ್ತಿದ್ದಿತು! ಇದಕ್ಕೆಲ್ಲಾ ನೀನು ಏನು ಸಮಾಧಾನ ಹೇಳುವೆ?

ಮದನಪಾಲನು ಸಾರ್ವಭೌಮನ ಈ ಪ್ರಶ್ನೆಗಳಿಂದ ತನ್ನ ಅಪರಾಧಗಳನ್ನು ಒಂದೊಂದನ್ನಾಗಿ ನೆನೆನೆನೆದು ಪಶ್ಚಾತ್ತಾಪಗೊಂಡನು. ಅದನ್ನು ಸಾರ್ವಭೌಮನಿಗೆ ವಿಜ್ಞಾಪಿಸಲು ಉದ್ಯುಕ್ತನಾಗುತ್ತಿರುವಲ್ಲಿ ಕುಮಾರಸಿಂಗನು ಎದ್ದು: "ಮಹಾಪ್ರಭೋ! ನಾನು ವಿಜ್ಞಾಪಿಸಬೇಕಾದ ಸಂಗತಿಗಳು ಕೆಲವು ಇರುವುವು. ಅವುಗಳನ್ನು ಕೇಳಿದ ತರುವಾಯ ಮದನಪಾಲನ ಬಿನ್ನಹವನ್ನು ಚಿತ್ತೈಸಬಹುದು"—ಎಂದನು.

**ಸಾರ್ವಭೌಮ**—ಕುಮಾರಸಿಂಗ್! ಹಾಗೆಯೇ ಆಗಲಿ.

**ಕುಮಾರಸಿಂಗ್**—ಮಹಾಪ್ರಭೋ! ಮದನಪಾಲನು ರಾವಣನಾಗಿದ್ದಿದ್ದರೆ ಇದುವರೆಗೆ ರಾಮಾಯಣವೇ ಸಾಂಗವಾಗಿ ನಡೆಯುತ್ತಿದ್ದಿತು. ಆದರೆ ಆತನು ಅಂತಹವನಲ್ಲ. ತನ್ನ ಅಕ್ಕನವರ ಮಾತನ್ನು ಪರಿಪಾಲಿಸಬೇಕೆಂಬುದೊಂದು ವಿನಾ ಮತ್ತಾವ ಆಸೆಯೂ ಆತನಿಗಿಲ್ಲ. ಆತನಿಗೆ ಸ್ವತಃ ಆಲೋಚಿಸಿ ನಡೆಯುವಷ್ಟು ಬುದ್ಧಿಯಾಗಲಿ, ತ್ರಾಣವಾಗಲಿ ಇಲ್ಲ. ಸ್ವಭಾವದಲ್ಲಿ ಬಹಳ ಉತ್ತಮನು. ಸಹನೆಯುಳ್ಳವನು. ಒಂದು ವರುಷದ ಅವಧಿಯನ್ನು ಏರ್ಪಡಿಸಿದುದು ಕೂಡಾ ಫಲ್ಗುಣನ ಕುತಂತ್ರವು. ಮಹಾರಾಣಿಯವರಿಗೆ ಉಪಚಾರ

ಹೇಳುವ ನೆಪದಿಂದ ನಮ್ಮ ದುರ್ಗವನ್ನು ನೋಡಲು ಪ್ರವೇಶಿಸಿದನು. ಆತನ ವಿನಯ ವಿಧೇಯತೆಗಳನ್ನು ನೋಡಿ ನಾವು ಸುಮ್ಮನಿದ್ದೆವು. ಕೆಲವು ದಿನಗಳ ತರುವಾಯ ರಾಣಿಯವರ ಜಹಗೀರುಗಳನ್ನು ವಿಚಾರಿಸಿಕೊಳ್ಳುವೆನೆಂದು ಹೇಳಿ ಆಗಾಗ್ಗೆ ಬರಲಾರಂಭಿಸಿದನು. ಕಷ್ಟಕಾಲದಲ್ಲಿ ಸಹಾಯ ಮಾಡುತ್ತಾನೆಂದು ಆಲೋಚಿಸಿ ನಾವು ಅದಕ್ಕೂ ಆಕ್ಷೇಪಿಸಲಿಲ್ಲ. ಆದರೆ ಯಾವಾಗ ವಿಮಲಸಿಂಹನನ್ನು ಮಂತ್ರಿ ಪದವಿಯಿಂದ ತಪ್ಪಿಸಿದರೋ ಆಗ ನಾವು ಜಾಗರೂಕರಾದೆವು. ತತ್‌ಕ್ಷಣವೇ ಒಂದು ಮಂತ್ರಾಲೋಚನಾ ಸಭೆಯನ್ನು ನಮ್ಮ ದುರ್ಗದಲ್ಲಿ ರಹಸ್ಯವಾಗಿ ಏರ್ಪಡಿಸಿಕೊಂಡೆವು. ಅದಕ್ಕೆ ಹೇಮಪ್ರಭಾದೇವಿಯವರನ್ನು ರಾಜ್ಞಿಯಾಗಿ ನಿಯಮಿಸಿದೆವು. ವಿಮಲಸಿಂಹರನ್ನು ಮಂತ್ರಿಸ್ಥಾನದಲ್ಲಿ ಪ್ರತಿಷ್ಠಿಸಿದೆವು. ಆ ಸಭೆಯ ಉದ್ದೇಶಗಳು ಯಾವುವೆಂದರೆ :—

೧. ಮದನಪಾಲನನ್ನು ರಾಜನನ್ನಾಗಿ ಅಂಗೀಕರಿಸಕೂಡದು.

೨. ಯುವರಾಜನನ್ನು ಹುಡುಕಿಸಿ ಪುನಃ ಕರೆತರಬೇಕು.

೩. ಸಾರ್ವಭೌಮನಿಗೆ ಸಮಯವರಿತು ಯಥಾರ್ಥ ಸಂಗತಿಗಳನ್ನು ತಿಳಿಯಪಡಿಸಬೇಕು.

೪. ಮದನಪಾಲನು ದೌರ್ಜನ್ಯಸ್ಥಿತಿಗೆ ಹೋಗುವ ವರೆಗೂ ಸಹನೆಯಿಂದಿರಬೇಕು.

೫. ಸರಿಯಾದ ನಿದರ್ಶನಗಳನ್ನು ಸಂಪಾದಿಸಿದ ಒಡನೆಯೇ ಸಾರ್ವಭೌಮನು ಯುವರಾಜನಿಗೆ ವಿಧಿಸಿರುವ ಮರಣದಂಡನೆಯನ್ನು ರದ್ದುಪಡಿಸುವಂತೆ ಮಾಡಬೇಕು.

೬. ನಮ್ಮ ಪ್ರಯತ್ನಗಳೊಂದೂ ಸಾಗದೆ ಮದನಪಾಲನು ನಮ್ಮನ್ನು ಅತಿಕ್ರಮಿಸಿ ನಡೆಯಲೆತ್ನಿಸಿದರೆ ಯುದ್ಧಮಾಡಬೇಕು. ಇದಕ್ಕೆ ಗ್ವಾಲಿಯರ್ ರಾಣಿಯವರು ಸಹಾಯವನ್ನು ಮಾಡಲು ಸೈನ್ಯವನ್ನು ಸಿದ್ಧಮಾಡಿರುವರು.

೭. ಇವೆಲ್ಲವೂ ತಪ್ಪಿಹೋದರೆ ದುರ್ಗದೊಳಗಣ ರಾಜಸ್ತ್ರೀಯರು ಜೊಹರು ನಡೆಯಿಸಲು ಸಿದ್ಧರಾಗಿರಬೇಕು.

ಇಷ್ಟು ಏರ್ಪಾಡುಗಳನ್ನು ಮಾಡಿಕೊಂಡು ನಾವು ನಮ್ಮ ದುರ್ಗಕ್ಕೆ ಮದನಪಾಲನು ಬಂದು ಹೋಗುವದಕ್ಕೆ ಆಕ್ಷೇಪಿಸಲಿಲ್ಲ. ವಿಮಲಾದೇವಿಯನ್ನು ಮದನಪಾಲನಿಗೆ ಮದುವೆಮಾಡಿ ಕೊಟ್ಟರೆ ಎಲ್ಲವೂ ಸುಪಥವಾಗುವುದೆಂದು ನಾವು ನಮ್ಮ ಮಂತ್ರಾಲೋಚನಾ ಸಭೆಯಲ್ಲಿ ಆಲೋಚಿಸಿದೆವು. ಆಗ್ಗೆ ಪುನರ್ವಿವಾಹ ಪ್ರಸ್ತಾಪವೇನೂ ಇರಲಿಲ್ಲ. ಆ ಪ್ರಸ್ತಾಪವು ಫಲ್ಗುಣನ ತಂತ್ರ

ದಿಂದ ಹೊರಟಿತು. ಮದನಪಾಲನು ಹೇಮಪ್ರಭಾ ದೇವಿಯವರಲ್ಲಿ ಬಹಳ ಭಯಭಕ್ತಿಗಳಿಂದಿರುತ್ತಿದ್ದನು. ಆತನು ಸತ್ಪುರುಷರಲ್ಲಿ ಗಣಿಸಲು ತಕ್ಕವನೇ ಹೊರತು ದುಷ್ಟನಲ್ಲ. ಹುಡುಕಿ ನೋಡಿದರೂ ಆತನಲ್ಲಿ ದುರ್ಗುಣವಿಲ್ಲ. ದುಷ್ಟರ ಸಹವಾಸದಿಂದ ಆತನಿಗೆ ಇಂತಹ ಆಲೋಚನೆಯುಂಟಾಯಿತು. ಯುವರಾಜನು ಸ್ವರ್ಗಸ್ಥನಾದನೆಂದು ಒಂದು ಪ್ರವಾದವು ಹೊರಟಿತು. ಅದು ಕೂಡಾ ದುರ್ಮಾರ್ಗನಾದ ಫಲ್ಗುಣನ ಕಾರ್ಯವೇ ಆಗಿರಬಹುದು. ಇದಕ್ಕೆ ರಾಜಮಾತೆಯವರು ಒತ್ತಾಸೆ ಕೊಟ್ಟರೆಂದು ತೋರುತ್ತಿದೆ. ಈ ವಾರ್ತೆಯನ್ನು ಕೇಳಿದ ಕೂಡಲೇ ನಮ್ಮಲ್ಲಿ ಕೆಲವರು ಪ್ರಾಣತ್ಯಾಗ ಮಾಡಬೇಕೆಂದು ನಿಶ್ಚೈಸಿಕೊಂಡರು. ಆದರೆ, ಯುವರಾಜರು ಕಾಳೀಘಟ್ಟದಲ್ಲಿ ಈಶ್ವರದಾಸನ ಗೃಹದಲ್ಲಿರುವಂತೆಯೂ ರಾಜಕುಮಾರಿಯು ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಂತೆಯೂ ವಿಮಲಸಿಂಹನು ಸಮಾಚಾರ ತರಿಸಿಕೊಂಡು ಹೇಳಿದುದರಿಂದ ನಮ್ಮ ಮನಸ್ಸಿಗೆ ಪುನಃ ಸಮಾಧಾನವಾಯಿತು. ದೇವಿಯವರಿಗೆ ಮಾತ್ರ ನಾವು ಈ ಸಂಗತಿಯನ್ನು ತಿಳಿಸಲಿಲ್ಲ. ಅವರನ್ನು ಸಮಾಧಾನ ಪಡಿಸುವುದು ವಿಮಲಸಿಂಹರ ಕೆಲಸವಾಗಿದ್ದಿತು. ಲಲಿತ ಕುಮಾರನು ರತ್ನದ್ವೀಪದಿಂದ ಬಂದ ಮೇಲೆ ಯುವರಾಜರ ಕ್ಷೇಮಸಮಾಚಾರಗಳನ್ನು ಶಂಕರನು ಬಂದು ನಮ್ಮ ಸಭೆಯವರಿಗೆ ರಹಸ್ಯವಾಗಿ ತಿಳಿಸಿದನು. ಆ ಶಂಕರನು ವಿಮಲಸಿಂಹರ ಆಪ್ತ ಸೇವಕ ವರ್ಗಕ್ಕೆ ಸೇರಿದವನು. ಇದು ಹೀಗಿರುವಲ್ಲಿ, ಮದಲಪಾಲನು ದುರ್ಬೋಧನೆಗಳಿಗೆ ಒಳಗಾಗಿ ತನ್ನ ಮನೋಗತವನ್ನು ಒಂದು ದಿನ ದೇವಿಯವರಿಗೆ ತಿಳಿಯಪಡಿಸಿದನು. ದೇವಿಯವರು ಈ ಸಂಗತಿಯನ್ನು ಮಂತ್ರಾಲೋಚನಾ ಸಭೆಯಲ್ಲಿ ಪ್ರಸ್ತಾಪಿಸಿ ಮುಂದೆ ಮಾಡಬೇಕಾದ ಕರ್ತವ್ಯವನ್ನು ಆಲೋಚಿಸುತ್ತಿರುವಲ್ಲಿ ಸಿಂಹದ ಮರಿಯಂತೆ ರಾಜಕುಮಾರಿಯು ತನ್ನ ಸ್ಥಿತಿಯನ್ನು ನಿಜ ಜನನಿಗೆ ಕೂಡಾ ತಿಳಿಸದೆಯೇ ದಾಸೀ ರೂಪದಿಂದ ಬಂದು ಇಷ್ಟು ಕಾರ್ಯಸಾಧನೆ ಮಾಡಿದಳು. ಕುಮಾರಿಯು ಬಂದಾಗಲೇ ವಿಮಲಸಿಂಗನು ಗುರ್ತಿಸಿ ನಮಗೆ ಹೇಳಿದ್ದನು. ಮಹಾಪ್ರಭೋ! ಮದನಪಾಲನು ಪರಮ ಸಾಧುವು. ಬಂಧುವರ್ಗಕ್ಕೆ ಸೇರಿದವನು. ಗ್ವಾಲಿಯರ್ ರಾಣಿಯವರಿಗೆ ಅಳಿಯನಾಗತಕ್ಕವನಾದ ಕಾರಣ ಪ್ರಭುಗಳ ಮನ್ನಣೆಗೆ ಪಾತ್ರನೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

**ಮದನಪಾಲ**—"ಮಹಾಪ್ರಭೋ! ತಾತಂದಿರಾದ ಕುಮಾರಸಿಂಗ, ವಿಮಲಸಿಂಗ ಮೊದಲಾದ ಪೂಜ್ಯರು ನೀಚನಾದ ನನ್ನನ್ನು ದಂಡಿಸದೆ ಇದ್ದುದು ನನ್ನ ದುಷ್ಕೃತ ಫಲವೆಂತಲೇ ಭಾವಿಸುತ್ತೇನೆ. ಪಿತೃ ಸಮಾನನಾದ ವಿಕ್ರಮಸಿಂಹದೇವನೇ! ರಾಜಭಕ್ತಿಯುಳ್ಳ ಸಾಮಂತರೇ! ದುರುಪದೇಶದಿಂದ

ದುಷ್ಟ ಸಂಕಲ್ಪಕ್ಕೆ ಒಳಗಾದ ಈ ಪಾಪಾತ್ಮನನ್ನು ಯಾವ ವಿಧವಾದ ಶಿಕ್ಷೆಗೆ ಗುರಿಪಡಿಸಿದರೂ ಮನಃಪೂರ್ವಕವಾಗಿ ಅನುಭವಿಸಲು ಸಿದ್ಧನಾಗಿದ್ದೇನೆ." ಎಂದು ಹೇಳಿ ಎಲ್ಲರಿಗೂ ನಮಸ್ಕರಿಸಿ ಸಾರ್ವಭೌಮನ ಇದಿರಿಗೆ ಬದ್ಧಾಂಜಲಿಯಾಗಿ ನಿಂತುಕೊಂಡನು.

**ವಿಕ್ರಮಸಿಂಹ**—ಸಾರ್ವಭೌಮಾ! ಮದನಪಾಲನು ಹೃದಯಪೂರ್ವಕವಾಗಿ ಪಶ್ಚಾತ್ತಾಪ ಹೊಂದಿರುವನು. "ಪಶ್ಚಾತ್ತಾಪೇನ ಶುಧ್ಯತಿ" ಎಂಬ ವಾಕ್ಯಾನುಸಾರ ಈಗ ಪರಿಶುದ್ಧಾತ್ಮನಾಗಿರುವನೆಂದು ಹೇಳಿದರೆ ದೋಷವಿಲ್ಲ. ಗತಿಸಿಹೋದುದು ಹೋಯಿತು. ಮುಂದೆ ಜಾಗರೂಕನಾಗಿ ನಡೆದುಕೊಂಡರೆ ಸಾಕು. ಮಾನವರಿಗೆ ಪ್ರಮಾದ ಸಂಭವಿಸುವುದು ಸ್ವಾಭಾವಿಕವೇ ಸರಿ. ಮಹಾಪ್ರಭೊ! ದೀನನಾದ ನನ್ನ ಈ ಸೋದರನನ್ನು ಮನ್ನಿಸಬೇಕೆಂದು ಆರ್ದ್ರಹೃದಯನಾಗಿ ಬೇಡಿಕೊಳ್ಳುವೆನು.

**ಪೃಥ್ವೀರಾಜ**—ಸಾಧು ಶಿಖಾಮಣಿ! ನಿಮ್ಮಂತಹ ಅಜಾತ ಶತ್ರುವಿಗೂ ಶತ್ರುಗಳೇರ್ಪಟ್ಟು ಇಷ್ಟು ಕಷ್ಟಗಳನ್ನು ಕೊಟ್ಟಿರುವುದು ನನಗೆ ಸಹಿಸದಂತಿರುವುದು. ಆದರೆ, ನಿಮ್ಮ ಔದಾರ್ಯದಿಂದ ಆನಂದಭರಿತನಾಗಿ ಮದನಪಾಲನನ್ನು ಕ್ಷಮಿಸಿರುವೆನು. ಸಭಾಸದರೇ! ಈ ದಿನವೇ ಸುದಿನವು. ನನ್ನ ಸೋದರೀಪತಿಯಾದ ವಿಕ್ರಮಸಿಂಹದೇವನು ಈ ಮೇವಾರ ಸಂಸ್ಥಾನಕ್ಕೆ ಮಹಾರಾಜನಾದನು. ಈ ನನ್ನ ಶಾಸನವು ದೇಶದಲ್ಲೆಲ್ಲಾ ಪ್ರಚುರವಾಗಲಿ." ಎಂದು ಹೇಳಿ ಮುದ್ರಾಂಗುಳೀಯಕವನ್ನು ವಿಕ್ರಮಸಿಂಹದೇವನ ಬೆರಳಿನಲ್ಲಿಟ್ಟು ಸಿಂಹಾಸನವನ್ನು ಏರಲು ನಿಯಮಿಸಿದನು.

**ವಿಕ್ರಮಸಿಂಹ**—ಮಹಾಪ್ರಭೋ! ತಮ್ಮ ನಿರ್ವ್ಯಾಜಾಂತಃಕರಣಕ್ಕೆ ತುಂಬ ಋಣಿಯಾಗಿರುವೆನು. ಅನೇಕ ಸಿಂಹಾಸನಗಳಿಗೆ ರಾಜಾಧಿರಾಜರಾಗಿರುವ ತಮ್ಮ ಸನ್ನಿಧಿಯಲ್ಲಿ ನಾನು ಸಿಂಹಾಸನಾರೂಢನಾಗುವುದು ನ್ಯಾಯವಲ್ಲ. ತಾವು ಹತ್ತಿ ಮುಖ್ಯಸ್ಥಾನದಲ್ಲಿ ಕುಳಿತುಕೊಳ್ಳಬೇಕು. ತಮ್ಮ ವಾಮಭಾಗದಲ್ಲಿ ನಾನು ಕುಳಿತುಕೊಳ್ಳುತ್ತೇನೆ. ಮತ್ತೊಂದರಿಕೆ. ಪಿತೃತುಲ್ಯನಾದ ವಿಮಲಸಿಂಹನು ನನ್ನ ರಾಜ್ಯಕ್ಕೆ ಪುನಃ ಪ್ರಧಾನಾಮಾತ್ಯನಾಗಿರುವಂತೆ ಅಪ್ಪಣೆಯಾಗಬೇಕು.

**ಪೃಥ್ವೀರಾಜ**—ಮಹೀಪಾಲ! ನಾನು ಸಾರ್ವಭೌಮನೆಂತಲೂ, ನೀವು ಸಾಮಂತರೆಂತಲೂ ಹೇಳುವುದು ಈ ಸ್ಥೂಲ ಪ್ರಪಂಚದಲ್ಲಿಯೇ ವಿನಾ ನಿಮ್ಮಂತಹ ರಾಜರ್ಷಿಗಳಿಗೆ ಸರ್ವಲೋಕಮಾನ್ಯತೆಯಿರುವುದು. ಆದರೂ ನಿಮ್ಮಿಷ್ಟಾನುಸಾರ ನಡೆಯುವೆನೆಂದು ಹೇಳಿ ಸಾರ್ವಭೌಮನು ಸಿಂಹಾಸನವನ್ನು

ಏರಿದನು. ಪಕ್ಕದಲ್ಲಿ ವಿಕ್ರಮಸಿಂಹದೇವನು ಕುಳಿತುಕೊಂಡನು. ಆಗ ಜಯ ಜಯ ಶಬ್ದಗಳು ಹೊರಟುವು. ಪ್ರಕೃತಿಯೆಲ್ಲವೂ ಸಂತಸಗೊಂಡಂತೆ ಪುಷ್ಪವೃಷ್ಟಿಯಾಯಿತು. ತೋಪುಗಳು ಉಡಾಯಿಸಲ್ಪಟ್ಟವು. ಸೈನ್ಯಗಳು ತಮ್ಮ ಪ್ರಮೋದವನ್ನು ಘೋಷಿಸಿದುವು. ಅಂದಿನ ಸಭೆಯು ಮುಗಿಯಿತು.

# ೨೦ನೆಯ ಅಧ್ಯಾಯ

ಅರಮನೆಯ ಅಂತಃಪುರದೊಳಗಿನ ಒಂದು ಕೊಟ್ಟಡಿಯಲ್ಲಿ ಮುರಳಾದೇವಿಯು ಸಂತತ ಧಾರೆಯಾಗಿ ಕಣ್ಣೀರು ಸುರಿಸುತ್ತ ಕುಳಿತುಕೊಂಡಿದ್ದಳು. ಸಂತೋಷದಿಂದುಬ್ಬುವುದೂ ದುಃಖದಿಂದ ಕುಂದುವುದೂ ಪಾಮರರ ಲಕ್ಷಣವಲ್ಲವೆ? ತನ್ನ ಪಾಲಿಗೆ ಹುಲಿಯೆಂದು ತೋರಿದ್ದ ಸವತಿಯ ಮಗನಿಗೆ ರಾಜ್ಯಾಭಿಷೇಕವಾಯಿತೆಂಬ ಸುದ್ದಿಯನ್ನು ಕೇಳಿದ ಕೂಡಲೇ ಆಕೆಗೆ ಮೂರ್ಛೆಯೇ ಬಂದಿತು. ಸಖಿಯರ ಉಪಚಾರಗಳಿಂದ ಚೇತರಿಸಿಕೊಂಡಳು. ತನ್ನ ಪ್ರಾಣಗಳ ಮೇಲೆ ಆಸೆಯನ್ನು ತೊರೆದಳು. ಆತನು ಅಂತಃಪುರವನ್ನು ಪ್ರವೇಶಿಸಿದರೆ ತನ್ನ ಗತಿ ಏನಾಗುವುದೋ ಎಂದು ಭಯಪಟ್ಟಳು. ತಾನು ಅಷ್ಟುಕಾಲ ಸಾಕಿ, ಸಂರಕ್ಷಿಸಿ ಮಹಾರಾಜ ಪದವಿಯನ್ನು ಸಾಧಿಸಿ ಕೊಟ್ಟಿದ್ದ ಮದನಪಾಲನ ಸ್ಥಿತಿಯನ್ನು ನೆನೆನೆನೆದು ಹಂಬಲಿಸುತ್ತಿದ್ದಳು. ಇಂತಹ ಸಮಯದಲ್ಲಿ ವಿಕ್ರಮಸಿಂಹನು ಮದನಪಾಲನ ಕೈಯನ್ನು ಹಿಡಿದುಕೊಂಡು ದುರ್ಗವನ್ನು ಪ್ರವೇಶಿಸಿದನು. ಜಯಘೋಷಗಳು ಮೊರೆದುವು. ದಾಸದಾಸೀ ಜನರು ಬಂದು ಮಹಾರಾಜನಿಗೆ ನಮಸ್ಕರಿಸಿ ಆತನ ಆಶೀರ್ವಾದವನ್ನು ಪಡೆದು ಸಂತಸಗೊಂಡರು. ಅರಮನೆಯನ್ನು ಪ್ರವೇಶಿಸಿದ ಕೂಡಲೆ ವಿಕ್ರಮಸಿಂಹನು ತಾಯಿಯ ಬಳಿಗೆ ಹೋದನು. ದೀರ್ಘದಂಡ ನಮಸ್ಕಾರಮಾಡಿ "ಅಮ್ಮಾ! ನೀವು ಏಕೆ ಇಷ್ಟು ದುಃಖ ಪಡುವಿರಿ? ವಿಧಿಕೃತವನ್ನು ಯಾರೂ ತಪ್ಪಿಸಿಕೊಳ್ಳಲಾರರು. ನಿಜ ಜನನೀಜನಕರನ್ನು ಹೋಗಲಾಡಿಸಿಕೊಂಡು ಇರುವ ಈ ದೀನನಿಗೆ "ಅಮ್ಮಾ" ಎಂದು ಕರೆಯಲು ಭಗವಂತನು ನಿಮ್ಮೊಬ್ಬರನ್ನಾದರೂ ನನಗೆ ದಯಪಾಲಿಸಿರುವನೆಂದು ನಾನು ಸಂತೋಷಪಡುತ್ತಿರುವೆನು. ಹಿಂದೆ ನಡೆದು ಹೋದುದನ್ನು ಸ್ಮರಿಸಬೇಡಿರಿ. ಜನನೀ! ನಮಗೆ ಅದು ಕಷ್ಟಕಾಲವಾಗಿದ್ದಿತು. ನಮ್ಮನ್ನು ಪರೀಕ್ಷಿಸಲು ದೃಷ್ಟಿಗೆ ಅಗೋಚರಗಳಾದ ಕೆಲವು ದುಷ್ಟಶಕ್ತಿಗಳು ಆವರಿಸಿ

ಕೊಂಡಿದ್ದುವು. ಚಿತ್ತಸ್ಥೈರ್ಯವಿಲ್ಲದವರು ಅಂತಹ ಶಕ್ತಿಗಳಿಗೆ ಒಳಗಾಗುವುದು ಸಹಜವೇ. ಈಗ ಆ ಸ್ಥಿತಿ ಹೊರಟುಹೋಯಿತು. ಪುನಃ ನಮಗೆ ಸಂತೋಷವನ್ನು ಒದವಿಸಿ ಸಲಹಿದ ಪರಮಾತ್ಮನನ್ನು ಸೇವಿಸುತ್ತ ನಾವೆಲ್ಲರೂ ಸೇರಿ ಪ್ರೀತಿ ಸ್ನೇಹಗಳಿಂದ ವರ್ತಿಸೋಣ. ಸ್ವರ್ಗಸ್ಥರಾದ ನಮ್ಮ ಪಿತೃಗಳು ನಮ್ಮನ್ನು ಆಶೀರ್ವದಿಸುವರು. ನಮ್ಮ ಮೇವಾರು ರಾಜವಂಶವು ಪೂರ್ವದ ಖ್ಯಾತಿಯನ್ನು ಪಡೆಯುವುದು.''—ಎಂದು ಹೇಳಿದನು.

ಮುರಳಾದೇವಿಯ ಅಂತಃಕರಣವೇ ಬೇರೆಯಾಯಿತು. ಮೃದುಮಧುರವಾದ ಮಗನ ಮಾತುಗಳನ್ನು ಕೇಳಿ ಭ್ರಮರಕೀಟ ನ್ಯಾಯದಂತೆ ಆಕೆಯು ಅಜ್ಞಾನಾವರಣದಿಂದ ಹೊರಕ್ಕೆ ಬಂದಳು. ಮನೆಯ ಬಾಗಿಲನ್ನು ತೆರೆದ ಕೂಡಲೇ ಸೂರ್ಯಕಿರಣಗಳು ಪ್ರವೇಶಿಸುವಂತೆ ಆಕೆಯ ಹೃದಯಮಂದಿರದಲ್ಲಿ ಸದ್ಗುಣ ಕಿರಣಗಳು ಪ್ರವೇಶಿಸಿದುವು. ಅನ್ಯಾದೃಶವಾದ ಏನೋ ಒಂದು ಧೈರ್ಯವುಂಟಾಯಿತು. ವಿಲಾಪವನ್ನು ನಿಲ್ಲಿಸಿ ಎದ್ದು ಕುಳಿತು: ''ಬಾಲಕಾ! ನೀನು ಸತ್ಪುರುಷನು. ನಿನ್ನನ್ನು ನೋಡಿದ ಮಾತ್ರದಿಂದ ನನ್ನಂತಹ ಪಾಪಾತ್ಮರಿಗೂ ಸದ್ಗುಣಗಳುಂಟಾಗುವುವು. ನನ್ನಿಂದ ಈ ರಾಜವಂಶಕ್ಕೆ ಬಹಳ ಅನರ್ಥಗಳುಂಟಾದುವು. ಕೈಕೆಯಿಯು ಶ್ರೀರಾಮನನ್ನು ಪತ್ನೀಸಮೇತ ಅರಣ್ಯಕ್ಕೆ ಕಳುಹಿಸಿದಳು. ನಾನಾದರೋ, ನಿನ್ನನ್ನು ಅಜ್ಞಾತವಾಸಕ್ಕೆ ಕಳುಹಿಸಿದುದಲ್ಲದೆ ನಿನ್ನ ಧರ್ಮಪತ್ನಿಯ ಪಾತಿವ್ರತ್ಯವನ್ನು ಕೂಡಾ ಭಂಗಪಡಿಸಲು ಯತ್ನಿಸಿದೆನು. ಲೋಕದಲ್ಲಿ ನನ್ನಂತಹ ಪಾಪಿಷ್ಠರು ಎಷ್ಟು ಜನರಿರುವರೋ ನಾನರಿಯೆನು. ಅವರಿಂದ ಎಷ್ಟು ಕುಟುಂಬಗಳಿಗೆ ಹಾನಿಯುಂಟಾಗುತ್ತಿರುವುದೋ ತಿಳಿಯದು. ಹಿರಿಯರ ಆಶೀರ್ವಾದದಿಂದಲೂ, ಮುಖ್ಯವಾಗಿ ನಿಮ್ಮಂತಹ ಸಜ್ಜನರ ಪುಣ್ಯದಿಂದಲೂ, ನನ್ನ ದುರಾಲೋಚನೆಗಳೂ, ದುಷ್ಕೃತ್ಯಗಳೂ ಪರ್ಯವಸಾನದಲ್ಲಿ ಮಂಗಳವನ್ನುಂಟುಮಾಡಿದುವು. ತಾಯಿಯಿಲ್ಲದ ಮಕ್ಕಳಿಗೆ ತಾಯಿಯಾಗಿ ಬಂದಿರುವವಳು ಮಕ್ಕಳನ್ನು ರಕ್ಷಿಸಬೇಡವೇ? ನಾನು ಹಾಗೆ ಮಾಡದೆ ನಿನಗೆ ಕೆಡುಕನ್ನೆಣಿಸಿ ಕಷ್ಟಗಳಿಗೆ ಈಡುಮಾಡಿದೆನು. ನೀನು ಅವುಗಳನ್ನೆಲ್ಲಾ ಸಹಿಸಿ ಕೊನೆಗೆ ನನ್ನಲ್ಲಿನ ದುರ್ಗುಣಗಳನ್ನು ಸಹ ಭಸ್ಮೀಭೂತ ಮಾಡಿದೆ. ನನ್ನ ದುಷ್ಕೃತ್ಯಗಳಿಗೆ ಪ್ರಾಯಶ್ಚಿತ್ತ ಬೇಡವೇ?

**ವಿಕ್ರಮಸಿಂಹ**—ಜನನೀ! ನಿನಗೆ ಪ್ರಾಯಶ್ಚಿತ್ತದ ಗೊಡವೆಯೇಕೆ? ಪ್ರಾಯಶ್ಚಿತ್ತವೆಂದರೇನು? ''ಪ್ರಾಯಃ'' ಪಾಪವನ್ನು, ''ಚಿತ್ತಂ'' ಶೋಧಿಸುವುದು, ಎಂದರೆ, ಸರಿಯಾದ ಸ್ಥಿತಿಯಲ್ಲಿರುವಂತೆ ಮಾಡುವುದೆಂದು ಅರ್ಥವು. ಪಶ್ಚಾತ್ತಾಪಕ್ಕಿಂತ ಹೆಚ್ಚಿನ ಪ್ರಾಯಶ್ಚಿತ್ತವಿಲ್ಲ. ಪಾಮರರು ಈ ಅರ್ಥ

ವನ್ನು ಸ್ಥೂಲದೇಹಕ್ಕೆ ಅನ್ವಯಿಸಿಕೊಳ್ಳುವರು. ನಿಜವಾದ ಪಶ್ಚಾತ್ತಾಪ ವನ್ನು ಹೊಂದಿ ದುರ್ಮಾರ್ಗದಲ್ಲಿದ್ದ ಚಿತ್ತವೃತ್ತಿಯನ್ನು ಸನ್ಮಾರ್ಗಕ್ಕೆ ತಿರು ಗಿಸಿಕೊಳ್ಳುವುದರಿಂದ ಪ್ರಾಯಶ್ಚಿತ್ತವುಂಟಾಗುವುದು. ದುಷ್ಟರು ತಮ್ಮ ದುರ್ಗುಣಗಳನ್ನು ಬಿಡಲು ಹಿಂಜರಿಯುವರು. ಸಜ್ಜನರು ಒಂದು ವೇಳೆ ಪ್ರಮಾದವಶದಿಂದ ದುರ್ಗುಣಗಳನ್ನು ಹೊಂದಿದರೂ ಅವು ಅವರಲ್ಲಿ ಸ್ಥಿರವಾಗಿ ನಿಲ್ಲುವುದಿಲ್ಲ. ಕಾಲ ಬಂದ ಒಡನೆಯೇ ಪುನಃ ಸದ್ಗುಣಗಳು ತಲೆದೋರುವುವು. ಕೈಕೆಯೀದೇವಿಯನ್ನು ದುಷ್ಟಳೆಂದು ನಾವು ಹೇಳಬಾರದು. ಏಕೆಂದರೆ, ರಾಮನನ್ನು ಅಡವಿಗೆ ಕಳುಹಿಸುವುದರಿಂದ ರಾವಣಾದಿ ರಾಕ್ಷಸರ ವಧೆಯಾ ಯಿತು. ತಾನು ಪ್ರಿಯತಮಳಾದ ರಾಣಿಯೆಂಬ ಅಭಿಮಾನವು ಆಕೆಯಲ್ಲಿದ್ದರೂ ರಾಮನ ಕರ್ಮವೂ, ಜಗತ್ತಿನ ಹಿತವೂ ಆಕೆಯ ಮೂಲಕ ಶ್ರೀರಾಮನಿಗೆ ಅರಣ್ಯ ವಾಸವನ್ನುಂಟು ಮಾಡಿದುವು. ಸತ್ಯದಿಂದ ಅಸತ್ಯವನ್ನೂ ಧರ್ಮದಿಂದ ಅಧರ್ಮ ವನ್ನೂ ಜಯಿಸಬೇಕೆಂದು ಈಶ್ವರ ನಿಯಮವು. ಅಧರ್ಮಶಕ್ತಿಗಳನ್ನು ತನ್ನಲ್ಲಿ ಸೇರಿಸಿ ಕೊಂಡಿದ್ದ ರಾವಣಾಸುರನಿಗೆ ಧರ್ಮಸ್ವರೂಪನಾದ ಶ್ರೀರಾಮನು ಶತ್ರುವಾಗಿ ಪರಿಣಮಿಸಲು, ಬೇಕಾದ ಸಂದರ್ಭಗಳಿಗೆ ಕೈಕೆಯಿಯು ತನ್ನ ದುರ್ಬುದ್ಧಿಯನ್ನು ಈಡು ಮಾಡಿದಳೇ ಹೊರತು ತರುವಾಯ ಆಕೆ ಶ್ರೀರಾಮನ ವಿಷಯದಲ್ಲಿ ಭಕ್ತಿ ಯಾಗಿಯೇ ವರ್ತಿಸಿದಳು. ಆದರೆ, ತತ್ಕಾಲದಲ್ಲಿ ತೋರಿಸಿದ ದುರ್ಬುದ್ಧಿಗಾಗಿ ಲೋಕದಲ್ಲಿ ಅಪಕೀರ್ತಿಗೆ ಗುರಿಯಾದಳು. ಕೆಟ್ಟ ಗುಣಗಳಿಗೆ ಮನಸ್ಸಿನಲ್ಲಿ ಸ್ವಲ್ಪ ಸ್ಥಳವನ್ನು ಕೊಟ್ಟರೆ ಅವುಗಳಿಂದ ಅನರ್ಥಗಳೇ ಉಂಟಾಗುವುವು. ದೇವತೆಗಳು ಕೂಡ ನಮ್ಮನ್ನು ಪರೀಕ್ಷಿಸುವುದುಂಟು. ಅಮ್ಮಾ! ನಾನು ಇಷ್ಟು ಕರ್ಮ ವನ್ನು ಅನುಭವಿಸ ಬೇಕಾಗಿದ್ದಿತು. ಅದಕ್ಕನುಗುಣವಾಗಿ ನಿಮ್ಮ ಹೃದಯದಲ್ಲಿ ನನ್ನ ವಿಷಯವಾಗಿ ಸಂಶಯ ತೋರಿರಬಹುದು. ಆ ಸಮಯವನ್ನು ಕಂಡು ದುಷ್ಟಶಕ್ತಿಗಳು ನಿಮ್ಮ ಹೃದಯವನ್ನು ಪ್ರವೇಶಿಸಿದುದರಿಂದ ನಿಮ್ಮ ಬುದ್ಧಿ ಗೆಟ್ಟಿತು. ಗತಗೋಷ್ಠಿಯನ್ನು ಬಿಟ್ಟು ನೀವು ಇತಃಪರ ಸ್ವಸ್ಥಚಿತ್ತದಿಂದಿರ ಬೇಕೆಂದು ನಾನು ಬೇಡಿಕೊಳ್ಳುವೆನು.

**ಮುರಳಾದೇವಿ**—ಪುತ್ರಾ! ನೀನು ನನಗೆ ಜ್ಞಾನದಾಯಕನು. ನನ್ನನ್ನು ಉದ್ಧರಿಸಿದ ಕುಲದೀಪನು. ನನ್ನನ್ನು ಮನ್ನಿಸು. ನಿನ್ನ ರಾಣಿಯ ಮಂದಿರಕ್ಕೆ ಸಹ ಹೋಗದೆ ಮೊತ್ತಮೊದಲು ನನ್ನಲ್ಲಿಗೆ ಬಂದು ನನ್ನ ದುಃಖವನ್ನು ಪರಿಹರಿಸಿ ದುದು ನಿನ್ನ ಧರ್ಮಬುದ್ಧಿಯನ್ನು ಪ್ರಕಾಶಗೊಳಿಸುವುದು. ಹೇಮಪ್ರಭೆಯು ನನ್ನ ಗೃಹಲಕ್ಷ್ಮಿ. ವಯಸ್ಸಿನಲ್ಲಿ ನನಗಿಂತಲೂ ಚಿಕ್ಕವಳಾದರೂ ಪತಿವ್ರತೆಯಾದುದ ರಿಂದ ನನ್ನ ನಮಸ್ಕಾರಗಳನ್ನು ತಿಳಿಸು. ನನ್ನ ಸರ್ವಾಪರಾಧಗಳನ್ನು ಕ್ಷಮಿಸಿ,

ಈ ವೃದ್ಧಾಪ್ಯದಲ್ಲಿ ನನ್ನನ್ನು ರಕ್ಷಿಸಿ, ಪತಿವ್ರತಾ ಶಿರೋಮಣಿಯಾದ ನನ್ನ ಅಕ್ಕನು ಹೊಂದಿದ ಸದ್ಗತಿಯನ್ನು ನನಗೂ ಉಂಟಾಗುವಂತೆ ಮಾಡುವ ಶಕ್ತಿಯುಳ್ಳ ಆ ದೇವಿಯನ್ನು ಉಭಯಕುಲ ಪಾವನೆಯೆಂದು ನಾನು ಭಾವಿಸಿರುವೆನೆಂದು ತಿಳಿಸು. ಕುಮಾರಾ! ನಿನ್ನ ವಂಶಕ್ಕೆ ಸೇರದೆ ಇರುವವನಾದರೂ, ನಾನು ತಂದು ಸಂರಕ್ಷಿಸಿದ ನನ್ನ ಮದನಪಾಲನ ಅವಗುಣಗಳನ್ನು ಮನ್ನಿಸಿ ನೀವಿಬ್ಬರೂ ಅವನನ್ನು ನಿಮ್ಮ ಪುತ್ರನೆಂದು ಭಾವಿಸಿ ಕಾಪಾಡಬೇಕು"–ಎಂದು ಹೇಳುತ್ತಾ ಮಗನ ಮೈಯನ್ನು ಅತಿ ಪ್ರೇಮದಿಂದ ತಡವಿ ಸುಮ್ಮನಸ್ಕಳಾದಳು.

ವಿಕ್ರಮದೇವನು ಪುನಃ ತಾಯಿಯ ಪಾದಗಳಿಗೆ ನಮಸ್ಕರಿಸಿ: "ಜನನೀ! ಮದನನು ನನ್ನ ಪುತ್ರಸಮಾನನು. ಎಲ್ಲವೂ ಮಂಗಳಕರವಾಗಿ ನಡೆಯುವುದು. ನೀವು ಚಿಂತಿಸಬೇಡಿರಿ. ಇಂದಿನಿಂದ ನೀವು ನನ್ನ ಸಮೀಪದಲ್ಲಿಯೇ ಇರಬೇಕು. ಮದನಾ! ಅಮ್ಮನಿಗೆ ಪಲ್ಲಕ್ಕಿಯನ್ನು ಸಿದ್ಧಪಡಿಸು. ನಾವೆಲ್ಲರೂ ಸಾರ್ವಭೌಮನೊಡನೆ ನಿನ್ನ ಅತ್ತಿಗೆಯ ಅರಮನೆಗೆ ಹೋಗುವಷ್ಟರಲ್ಲಿ ಅಮ್ಮನೂ ಅಲ್ಲಿರ ಬೇಕು. ನಾವೆಲ್ಲರೂ ಈ ದಿನ ಏಕಪಙ್ಕ್ತಿಯಲ್ಲಿ ಕುಳಿತು ಭೋಜನ ಮಾಡಬೇಕು"–ಎಂದು ಹೇಳಿದನು. ಮದನಪಾಲನು ತಾಯಿಯ ಪ್ರಯಾಣಕ್ಕೆ ಸಿದ್ಧಪಡಿಸಿ ವಿಕ್ರಮಸಿಂಹನೊಡನೆ ಸಾರ್ವಭೌಮನ ಹಿಂದೆ ಹೇಮಪ್ರಭಾ ದೇವಿಯ ಅರಮನೆಗೆ ಹೊರಟನು.

ಮುರಳಾದೇವಿಯು ಹೇಮಪ್ರಭೆಯ ಅರಮನೆಯನ್ನು ಪ್ರವೇಶಿಸಿದಳು. ರಾಣಿಯು ಆಕೆಯನ್ನು ಇದಿರ್ಗೊಂಡು ಮರ್ಯಾದೆಯಿಂದ ಕರೆದುಕೊಂಡು ಹೋಗಿ ಉಚಿತಾಸನದಲ್ಲಿ ಕುಳ್ಳಿರಿಸಿ ಸತ್ಕರಿಸಿದಳು. ಇಂದಿರಾನಾಮದಿಂದಿದ್ದ ಚಂಪಕಮಾಲಿನಿಯು ಬಂದು ಅಜ್ಜಿಗೆ ನಮಸ್ಕರಿಸಿದಳು. ರಾಜಮಾತೆಯು ಅವರಿಬ್ಬರನ್ನೂ ಆಲಿಂಗಿಸಿಕೊಂಡು ಆನಂದಬಾಷ್ಪಗಳನ್ನು ಸುರಿಸುತ್ತಾ: "ಅಮ್ಮಾ! ಹೇಮಾ! ನನ್ನ ಸರ್ವಾಪರಾಧಗಳನ್ನು ಮನ್ನಿಸು. ನನ್ನ ಪ್ರಿಯ ಪೌತ್ರಿಯೇ! ಈ ಪಾಪಾತ್ಮಳು ಮಾಡಿದ ಅಪಚಾರವನ್ನು ಮರೆತು ನನ್ನನ್ನು ಉದ್ಧರಿಸು" ಎಂದಳು. "ಅತ್ತೆಯವರೇ! ಈ ಮಾಯಾಪ್ರಪಂಚದಲ್ಲಿ ಒಬ್ಬರಿಗೊಬ್ಬರು ಅಪಚಾರ ಮಾಡುವುದು ಕರ್ಮಾಯತ್ತವೇ ಹೊರತು ನಿಜವಾದುದಲ್ಲ. ನಾವೆಲ್ಲರೂ ಭಗವಂತನ ಮಕ್ಕಳು. ಹಿಂದೆ ನಡೆದುದಕ್ಕೆ ವ್ಯಸನಪಡ ಬೇಡಿರಿ. ನೀವು ನಮಗೆ ಸರ್ವವಿಧದಲ್ಲಿಯೂ ಯಜಮಾನಿಯರಾಗಿದ್ದು ನಮ್ಮನ್ನು ನಡೆಯಿಸಿರಿ."–ಎಂದು ಹೇಮಪ್ರಭಾದೇವಿಯು ನುಡಿದಳು. "ಪಿತಾಮಹಿ! ನೀವು ಹೀಗೆ ವ್ಯಸನಪಡ ಕೂಡದು. ಪ್ರಮಾದದಿಂದ ನಡೆದ ಕಾರ್ಯಗಳಿಗೆ ಪಶ್ಚಾತ್ತಾಪವೇ ಪ್ರಾಯಶ್ಚಿತ್ತವೆಂದು ನಾನು ಹಿರಿಯರಿಂದ ಕೇಳಿದ್ದೇನು. ನೀವು ನಮಗೆ ವಂದನೀಯರು."—

ಎಂದು ಚಂಪಕಮಾಲಿನಿಯು ಮುರಳಾದೇವಿಯನ್ನು ಸಮಾಧಾನಗೊಳಿಸಿದಳು. ಆ ದುರ್ಗದಲ್ಲಿನ ರಾಜಸ್ತ್ರೀಯರೆಲ್ಲರೂ ರಾಜಮಾತೆಯನ್ನು ದರ್ಶಿಸಿ ಆಕೆಯ ಆಗಮನಕ್ಕಾಗಿ ತುಂಬಾ ಹರ್ಷಿಸಿದರು. ಅವರ ಪ್ರೇಮಸತ್ಕಾರಗಳಿಂದ ಮುರಳಾದೇವಿಗೆ ಸಂತೃಪ್ತಿಯಾಯಿತು. ಸದ್ಗುರುಗಳ ಬೆಲೆಯನ್ನು ಆಗ ಬಹಳ ಚೆನ್ನಾಗಿ ಗ್ರಹಿಸಿದಳು. ಸಾರ್ವಭೌಮನು ತನ್ನನ್ನು ಬಂದು ನೋಡಲಿಲ್ಲವೆಂಬ ಒಂದು ಕೊರತೆ ಮಾತ್ರ ಮುರಳಾದೇವಿಯನ್ನು ಬಾಧಿಸುತ್ತಿದ್ದಿತು.

ಅಷ್ಟರಲ್ಲಿಯೇ ವಾದ್ಯಘೋಷಗಳು ಸಮೀಪದಲ್ಲಿ ಕೇಳಬಂದುವು. ಸಾರ್ವಭೌಮನು ವಿಕ್ರಮಸಿಂಹ, ಮದನಪಾಲರೊಡನೆ ಅರಮನೆಯ ಬಾಗಿಲಲ್ಲಿ ಬಂದು ರಥದಿಂದಿಳಿದನು. ಅವರು ಆ ಮಂದಿರವನ್ನು ಪ್ರವೇಶಿಸುತ್ತಿರುವಾಗ ಬ್ರಾಹ್ಮಣರು ವೇದಘೋಷಗಳಿಂದ ಮಂತ್ರಾಕ್ಷತೆಗಳನ್ನೆರಚಿದರು. ತಟ್ಟೆಗಳಲ್ಲಿ ಲಾಜಾ ಪುಷ್ಪಗಳನ್ನು ಇಟ್ಟುಕೊಂಡು ಸಾಲಾಗಿ ನಿಂತಿದ್ದ ಸುಮಂಗಲಿಯರು ಪುಷ್ಪಗಳನ್ನೆರಚಿದರು. ವೃದ್ಧಾಂಗನೆಯರು ಆರತಿಯನ್ನೆತ್ತಿದರು. ವಿಕ್ರಮಸಿಂಹ ಮಹಾರಾಜನು ಎಲ್ಲರನ್ನೂ ಪುರಸ್ಕರಿಸಿ ವಿಶ್ರಾಂತಿಶಾಲೆಗೆ ಹೋಗುತ್ತಿರುವಾಗ ಸಾರ್ವಭೌಮನು: "ರಾಜೇಂದ್ರಾ! ಮುರಳಾದೇವಿಯವರೂ ನನ್ನ ಸಮೀಪ ಬಂಧುವರ್ಗಕ್ಕೆ ಸೇರಿದವರು. ನನ್ನ ತಾತನಿಂದ ಬಹಳ ಸನ್ಮಾನಗಳನ್ನು ಹೊಂದಿದವರೆಂಬುದಕ್ಕೆ ನೀವೇ ನಿದರ್ಶನವಾಗಿರುವಿರಿ. ಆಕೆಯನ್ನು ನಾನು ನೋಡದಿರುವುದು ನ್ಯಾಯವಲ್ಲ. ಆಕೆಯ ಬಳಿಗೆ ಹೋಗಿ ಬರುವೆನು"—ಎಂದು ಹೇಳಿ ಆ ಅರಮನೆಯಲ್ಲಿ ಆಕೆಯಿದ್ದ ಕೊಟ್ಟಡಿಗೆ ಹೋದನು. ವಿಕ್ರಮಸಿಂಹನು ವಿಶ್ರಾಂತಿಶಾಲೆಗೆ ಹೋಗುವ ದಾರಿಯಲ್ಲಿ ಒಂದು ಕೊಟ್ಟಡಿಯಲ್ಲಿ ಹೇಮಪ್ರಭಾದೇವಿಯು ನಿಂತಿದ್ದಳು. ಆಕೆಯ ದೀನಭಾವವನ್ನು ನೋಡಿ ವಿಕ್ರಮಸಿಂಹನು ಒಳಗೆ ಪ್ರವೇಶಿಸಿದನು. ಹಿಂದೆ ಇದ್ದವರೆಲ್ಲರೂ ವಿಶ್ರಾಂತಿನಿಲಯಕ್ಕೆ ಹೋದರು. ತನ್ನ ನಾಥನು ಪ್ರವೇಶಿಸಿದ ಒಡನೆಯೇ ಹೇಮಪ್ರಭಾದೇವಿಯು: "ಹೇ ಆರ್ಯಪುತ್ರ! ಎಷ್ಟು ಕಾಲಕ್ಕೆ ದೈವವು ನಿನ್ನನ್ನು ನನಗೆ ದಯಪಾಲಿಸಿದನು"–ಎಂದು ಹೇಳುತ್ತ ಪಾದಗಳಿಗೆರಗಿದಳು. ರಾಜನು ಆಕೆಯನ್ನು ಮೇಲಕ್ಕೆತ್ತಿ ತನ್ನ ಎದೆಯ ಮೇಲೆ ಆಕೆಯ ಶಿರಸ್ಸನ್ನಿಟ್ಟುಕೊಂಡು : "ಪ್ರಿಯೇ! ಹೇಮಾ! ನಿನ್ನ ಪ್ರೇಮಾತಿಶಯದ ಮಹಿಮೆಯಿಂದ ನನ್ನ ಕಷ್ಟಗಳಿಂದ ಪಾರಾಗಿ ಬಂದೆನು. ಪ್ರೇಯಸೀ! ನಿನ್ನ ದಿವ್ಯೋಪಚಾರಕ್ಕೆ ಈಶ್ವರನು ಪುನಃ ನನ್ನನ್ನು ಪಾತ್ರನಾಗುವಂತೆ ಮಾಡಿದನು"–ಎಂದು ಉಸುರಿದನು.

**ಹೇಮ**—ನಾಥಾ! ನೀವು ಅನೇಕ ಕಷ್ಟಗಳಿಗೆ ಪಾಲಾಗಿ ನಡೆಯುತ್ತಿರುವಾಗ ನಾನು ಅಂತಃಪುರದಲ್ಲಿ ಸುಖವಾಗಿ ವಾಸ ಮಾಡಿಕೊಂಡಿದ್ದುದು ಮೊದಲ

ನೆಯ ತಪ್ಪು. ಮದನಪಾಲನು ಪುನರ್ವಿವಾಹ ಸಂಕಲ್ಪವುಳ್ಳವನೆಂದು ತಿಳಿದಿದ್ದರೂ ನಾನು ಅವನಿಗೆ ಸಲಿಗೆಕೊಟ್ಟು ಮಾತನಾಡುತ್ತಿದ್ದುದು-ಎರಡನೆಯ ತಪ್ಪು. ಈ ಅಪರಾಧಗಳನ್ನು ಹೇಗೆ ಹೋಗಲಾಡಿಸಿಕೊಳ್ಳಬೇಕೆಂದು ಚಿಂತಿಸುತ್ತಿದ್ದೇನೆ.

**ವಿಕ್ರಮ**—ಪ್ರೇಯಸೀ! ವೀರರಮಣಿಯೆಂಬ ಬಿರುದು ನಿನಗೇ ಒಪ್ಪುವುದು. ಪತಿವಿರಹದಿಂದ ದುಃಖಿತಳಾಗಿದ್ದಾಗ ಪುತ್ರೀವಿರಹವೂ ಪ್ರಾಪ್ತವಾಯಿತು. ಆಗ ಪ್ರಪಂಚದಲ್ಲಿ ವಿರಕ್ತಳಾಗಿ ಸನ್ಯಾಸಿನಿಯಂತೆ ನೀನೂ ಕಾಡಿಗೆ ಹೋಗಿದ್ದರೆ ನಾನು ಏನು ಮಾಡುತ್ತಿದ್ದೆ? ನಿನ್ನನ್ನು ರಕ್ಷಿಸಲು ನಾನು ಬರಬೇಕಾಗಿದ್ದಿತು. ಹಾಗೆ ಬಂದಿದ್ದರೆ ಅಪರಾಧಿಯೆಂಬ ವ್ಯಾಜದಿಂದ ನಾನು ಮರಣದಂಡನೆಗೆ ಗುರಿಯಾಗುತ್ತಿದ್ದೆನು. ಆದರಿಂದ ನೀನು ಕೂಡಾ ಮೃತ್ಯುವಿನ ಪಾಲಾಗುತ್ತಿದ್ದೆ. ನಮ್ಮ ಮಗಳಿಗೆ ಎಷ್ಟೋ ಕಷ್ಟಗಳು ಬರುತ್ತಿದ್ದುವು. ಪರಮ ಮೇಧಾವಿಗಳಾದ ವಿಮಲಸಿಂಹ ಮೊದಲಾದ ಹಿರಿಯರ ಬುದ್ಧಿವಾದದಂತೆ ನೀನು ವರ್ತಿಸಿದೆಯಾದುದರಿಂದ ಈಗ ನಮಗೆ ಸುಖವುಂಟಾಯಿತು. ಕೇವಲ ಸಂಕಷ್ಟ ಸ್ಥಿತಿಯಲ್ಲಿದ್ದಾಗ ನೀನು ಧೈರ್ಯಗೆಡದೆ ಪರರಿಗೆ ಬಾಧೆಯಾಗದಂತೆ ನಿನ್ನ ಧರ್ಮವನ್ನು ಕಾಪಾಡಿಕೊಳ್ಳುವುದಕ್ಕಾಗಿ ಮಾಡಿದ ಉಪಾಯಗಳು ಶ್ಲಾಘ್ಯವಾಗಿರುವುವು. ನಿನ್ನನ್ನು ಹೇಗಾದರೂ ತನ್ನ ವಶಮಾಡಿ ಕೊಳ್ಳಬೇಕೆಂದು ಬಂದವನ ಬಲವನ್ನೂ, ಕಾಲವನ್ನೂ ನೋಡಿ ಸಾಮೋಪಾಯದಿಂದ ಸಂಭಾಷಿಸಿ ಶಾಂತಪಡಿಸಿದೆ. ತರುವಾಯ ವಿಮಲೆಯನ್ನು ಮದುವೆಮಾಡಿ ಕೊಡುವೆನೆಂಬ ದಾನೋಪಾಯವನ್ನೂ ಪ್ರಯೋಗಿಸಿ ನೋಡಿದೆ. ಅಷ್ಟರಲ್ಲಿ, ನಿನ್ನ ಕುಮಾರಿಯು ಇಲ್ಲಿಗೆ ಬಂದಳು. ಒಂದು ದಿನ ಉದ್ಯಾನವನದಲ್ಲಿ ಮದನಪಾಲ ನೊಡನೆ ಭೇದೋಪಾಯದಿಂದ ಮಾತನಾಡುತ್ತಿದ್ದು ಅವನು ನನ್ನನ್ನು ದೂಷಿಸಿದುದರಿಂದ ಕುಪಿತಳಾಗಿ ಅವನನ್ನು ಕೊಲ್ಲಲು ಖಡ್ಗವನ್ನೆತ್ತುತ್ತಿರುವಾಗ ಈಶ್ವರನೇ ನನ್ನನ್ನು ಭೂಗೃಹದಿಂದ ಅಲ್ಲಿಗೆ ಕರೆದುಕೊಂಡು ಬಂದನು. ನಿನ್ನ ಆವೇಶವನ್ನು ನೋಡಿ "ಸಹನೆ, ಸಹನೆ" ಎಂದು ನಾನು ಮೃದುಸ್ವರದಿಂದ ಕೂಗಿದೆನು. ಆದರಿಂದ ಆ ದಿನ ಮದನಪಾಲನ ಪ್ರಾಣವುಳಿಯಿತು. ಕಾಂತೇ! ನೀನು ನನಗೆ ಈಷದಪಿ ಅಪರಾಧವನ್ನು ಮಾಡಿದವಳಲ್ಲ. ಪುನರ್ವಿವಾಹ ವಿಷಯವನ್ನು ಕೇಳಿದ ಎರಡು ನಿಮಿಷ ಮಾತ್ರ ಅದು ನಿಜವಾಗಿರಬಹುದೇ? ಎಂಬ ಸಂಶಯವು ನನ್ನ ಮನಸ್ಸಿಗೆ ಬಂದಿತು. ಅದು ನನ್ನ ತಪ್ಪು. ಆ ತಪ್ಪನ್ನು ನೀನು ಮನ್ನಿಸಬೇಕು. ಪ್ರಿಯೇ! ಅಮ್ಮನನ್ನು ದರ್ಶಿಸುವುದಕ್ಕಾಗಿ ಸಾರ್ವಭೌಮನು ಹೋಗಿರುವನು. ಆತನೊಡನೆ ಭೋಜನಶಾಲೆಗೆ ಬರುವುದರೊಳಗಾಗಿ ನೀನು ಸರ್ವಾಲಂಕಾರಭೂಷಿತೆಯಾಗಿ ಬರುವೆಯೆಂದು ನಿರೀಕ್ಷಿಸುತ್ತೇನೆ.

**ದೇವಿ**—ಆರ್ಯಪುತ್ರ! ತಾವು ಮಾತ್ರ ಹೀಗೆ ಸನ್ಯಾಸಿಯಂತೆ ಭೋಜನಶಾಲೆಗೆ ಬರುವುದು ನ್ಯಾಯವೇ? ನಿಮ್ಮ ಕೋರಿಕೆಯಂತೆ ನನಗೂ ಇರುವುದೆಂಬುದನ್ನು ಮರೆಯಬಹುದೇ?"—ಎಂದು ಇಬ್ಬರೂ ಮಾತನಾಡಿಕೊಳ್ಳುತ್ತಾ ಹೊರಗೆ ಬರುವಾಗ್ಗೆ ಚಂಪಕಮಾಲಿನಿಯು ದ್ವಾರದಲ್ಲಿ ನಿಂತು ಮಾತಾಪಿತೃಗಳಿಗೆ ಅಭಿವಂದಿಸಿದಳು. ಹೇಮಪ್ರಭಾದೇವಿಯು ಅವಳನ್ನು ಅಪ್ಪಿಕೊಂಡು: "ನಾಥಾ! ಈ ನಿಮ್ಮ ಮಗಳ ಕ್ರೂರತ್ವವನ್ನು ಏನೆಂದು ಹೇಳಲಿ! ನಾನು ಎಷ್ಟು ದುಃಖಿಸುತ್ತಿದ್ದರೂ ಉಪಚರಿಸುತ್ತಿದ್ದಳೇ ವಿನಾ ತನ್ನ ರಹಸ್ಯವನ್ನು ಈಷನ್ಮಾತ್ರವಾದರೂ ನನಗೆ ತಿಳಿಸುತ್ತಿರಲಿಲ್ಲ."—ಎಂದು ಅವಳನ್ನು ಮುದ್ದಿಟ್ಟುಕೊಂಡಳು.

**ವಿಕ್ರಮ**—ಪ್ರಿಯೇ! ಅವಳು ನನ್ನ ಕುಮಾರಿಯಲ್ಲವೇ? ನಿನ್ನ ಸ್ಥಿತಿಯನ್ನು ಕುರಿತು ಒಳಗೆ ತಪಿಸುತ್ತಿದ್ದರೂ ಹೊರಗೆ ಒಂದೂ ತಿಳಿಯದವಳಂತೆ ನನ್ನ ಸನ್ನಾಹಗಳನ್ನು ನಡೆಯಿಸುತ್ತಾ ಕೊನೆಗೆ ಕಾರ್ಯಸಾಧನೆ ಮಾಡಿ ನಮ್ಮನ್ನುದ್ಧರಿಸಿದಳು.

ಹೀಗೆ ದಂಪತಿಗಳು ಪ್ರೇಮದಿಂದ ತಮ್ಮ ಕುಮಾರಿಯ ವಿಷಯವನ್ನು ಮಾತನಾಡಿಕೊಳ್ಳುತ್ತಿರುವಾಗ ಲಲಿತಕುಮಾರನು ಬಂದು ಇಬ್ಬರಿಗೂ ನಮಸ್ಕರಿಸಿದನು. ವಿಕ್ರಮದೇವನು ಅವನನ್ನೆತ್ತಿ "ನನ್ನ ಪ್ರಾಣಪ್ರಿಯನಾದ ಲಲಿತ! ನನಗೆ ಪ್ರಾಪ್ತವಾದ ಕಳಂಕವು ನಿವೃತ್ತಿಯಾಯಿತು. ನನ್ನ ಕುಮಾರಿಯು ನಿನಗೆ ಅರ್ಧಾಂಗಿಯಾಗಿರಲು ನನ್ನ ಅಭ್ಯಂತರವಿಲ್ಲ. ಅವಳು ಪ್ರಥಮದಲ್ಲಿಯೇ ತನ್ನ ಹೃದಯವನ್ನು ನಿನಗೆ ಅರ್ಪಿಸಿರುವಳು. ಬಹಿಃಪ್ರಪಂಚದಲ್ಲಿ ನಡೆಯಬೇಕಾದ ಶುಭಕಾರ್ಯಗಳಿಗೆ ನಾವಿಬ್ಬರು ದಂಪತಿಗಳೂ ನಿಮಿತ್ತ ಮಾತ್ರರಾಗಿರುವೆವು. ನನ್ನ ಮತವೇ ನಿನ್ನ ಜೀವಿತೇಶ್ವರಿಯ ಮತವೆಂದು ನೀನು ಬಲ್ಲೆ"—ಎಂದನು. ಅಷ್ಟರಲ್ಲಿ, ಮದನಪಾಲನು ಅಲ್ಲಿಗೆ ಬಂದು ಆ ದಂಪತಿಗಳಿಗೆ ಸಾಷ್ಟಾಂಗವಾಗಿ ನಮಸ್ಕರಿಸಿದನು.

**ಹೇಮ**—ಬಾಲಾ! ಮದನಪಾಲಾ! ನನ್ನ ನಾಥನು ನಿನ್ನನ್ನು ಮನ್ನಿಸಿದ ಕಾರಣ ನೀನು ನನ್ನ ಮನ್ನಣೆಗೆ ಅರ್ಹನಾಗಿರುವೆ. ದುಷ್ಟ ಸಹವಾಸದಿಂದ ನೀನು ಅನಾಥಳಾಗಿದ್ದ ನನ್ನನ್ನು ಪರೀಕ್ಷಿಸಿದೆಯೇ ಹೊರತು ನೀನು ನಿಜವಾಗಿಯೂ ಸತ್ಪುರುಷನೇ. ನಿನ್ನ ತಂದೆಗೆ ಸಮಾನನಾದ ಅಣ್ಣನನ್ನು ಸೇವಿಸುತ್ತಾ ಭಕ್ತಿಪರನಾಗಿರು. ಸಕಲ ಸುಖಗಳೂ ನಿನಗೆ ಪ್ರಾಪ್ತವಾಗುವುವು.

ಬಳಿಕ ಎಲ್ಲರೂ ಭೋಜನಶಾಲೆಗೆ ಹೋದರು. ರಾಜದಂಪತಿಗಳು ಮಂಗಳಸ್ನಾನವನ್ನಾಚರಿಸಿ ವಸ್ತ್ರಾಭರಣಭೂಷಿತರಾಗಿ ಹೋಗಿ ರಾಜಮಾತೆಗೆ ನಮಸ್ಕರಿಸಿದರು. ಆಕೆಯ ಆಶೀರ್ವಾದವನ್ನು ಪಡೆದು ಪಿತೃಸದೃಶನಾದ ವಿಮಲ

ಸಿಂಹನನ್ನು ಕಂಡರು. ಆಗ ವಿಕ್ರಮಸಿಂಹನು : "ಪೂಜ್ಯರೇ ! ಕಾರಾಗೃಹದಿಂದ ಬಿಡಿಸುವಾಗ 'ಕುಮಾರಾ ! ಎಲ್ಲಿಯಾದರೂ ಜೀವಿಸಿ ಸುಖವನ್ನು ಹೊಂದು'— ಎಂದು ಆಶೀರ್ವದಿಸಿದ ತಮ್ಮ ಪ್ರೇಮಕಂಠವು ಈಗಲೂ ನನ್ನ ಸ್ಮರಣೆಗೆ ಬರುತ್ತಿರುವುದು. ನಿಮ್ಮ ಆಶೀರ್ವಾದಬಲದಿಂದಲೇ ನಮಗೆ ಕಷ್ಟಗಳು ಪರಿಹಾರವಾದುವೆಂದು ಹೇಳಿ ಕೃತಜ್ಞತಾಪೂರ್ವಕವಾಗಿ ದಂಪತಿಗಳು ಆತನಿಗೆ ನಮಸ್ಕರಿಸಿದರು. ಅಲ್ಲಿಂದ ಸಾರ್ವಭೌಮನ ಒಳಿಗೆ ಬಂದು : "ಪ್ರಿಯ ಸೋದರಾ ! ಅನಾಥೆಯಾಗಿ ಹಂಬಲಿಸುತ್ತಿದ್ದ ನನಗೆ ಪತಿಭಿಕ್ಷವನ್ನಿತ್ತು ರಾಜ್ಯಾಭಿಷಿಕ್ತರನ್ನಾಗಿ ಮಾಡಿದ ಪುಣ್ಯಶಾಲಿಯಾದ ನಿನಗೆ ಎಷ್ಟು ವಂದಿಸಿದರೂ ತೀರದು"—ಎಂದು ಹೇಮಪ್ರಭಾದೇವಿಯು ಆನಂದಬಾಷ್ಪಗಳಿಂದ ಆತನ ಪಾದಗಳನ್ನು ತೋಯಿಸುತ್ತಾ ನಮಸ್ಕಾರ ಮಾಡಿದಳು.

**ಪೃಥ್ವೀರಾಜ**—ಅಮ್ಮಾ, ಸೋದರಿ! ರಾಜರ್ಷಿ ದಂಪತಿಗಳಂತಿರುವ ನಿಮ್ಮಿಬ್ಬರ ಸಂದರ್ಶನದಿಂದ ನಾನು ಪವಿತ್ರನಾದೆನೆಂದು ತಿಳಿಯುವೆನು. ದೀರ್ಘ ಸುಮಂಗಲಿಯಾಗಿ ಸಕಲ ಸುಖಗಳನ್ನೂ ಅನುಭವಿಸು!"—ಎಂದು ಆಶೀರ್ವದಿಸಿದನು.

ಭೋಜನಕ್ಕೆಲ್ಲವೂ ಸಿದ್ಧವಾಯಿತು. ವಿವಿಧ ಗೋಷ್ಠಿಗಳಿಂದ ಆ ಪ್ರೀತಿ ಭೋಜನವು ನಡೆಯಿತು. ವಿಶ್ರಾಂತಿನಿಲಯದಲ್ಲಿ ಎಲ್ಲರೂ ಗಂಧಮಾಲ್ಯ ತಾಂಬೂಲಗಳನ್ನು ಸೇವಿಸುತ್ತಿರುವಾಗ ವಿಕ್ರಮಸಿಂಹನು : "ಸಾರ್ವಭೌಮ ! ನನ್ನ ಕುಮಾರಿಯನ್ನು ಲಲಿತಕುಮಾರನಿಗೆ ವಿವಾಹಮಾಡಿಕೊಡಲು ಸಂಕಲ್ಪಿಸಿರುವೆನು. ಮತ್ತು ನನ್ನ ಸೋದರ ಮದನಪಾಲನಿಗೆ ಗ್ವಾಲಿಯರ್ ರಾಜಪುತ್ರಿಯೂ, ನನ್ನ ಪತ್ನಿಯ ಅಣ್ಣನ ಮಗಳೂ ಆದ ವಿಮಲೆಯನ್ನು ಕೊಟ್ಟು ವಿವಾಹ ಮಾಡಲು ಸಮ್ಮತಿಸಿರುವೆನು. ಇದು ನಿಮ್ಮ ಸೋದರಿಯ ಸಂಕಲ್ಪವು. ಅವಳ ಮನೋರಥವು ವ್ಯರ್ಥವಾಗಬಾರದು"—ಎಂದು ಹೇಳಿದನು.

**ಪೃಥ್ವೀಶ**—ಮಹಾರಾಜಾ! ನಿಮ್ಮ ಸತ್ಸಂಕಲ್ಪಗಳೆಂದಿಗೂ ವ್ಯರ್ಥವಾಗಲಾರವು. ಈಯೆರಡು ಕಾರ್ಯಗಳೂ ಸರ್ವಸಮ್ಮತವೆಂತಲೇ ಭಾವಿಸುತ್ತೇನೆ. ಮದನನು ಹೇಗಾದರೂ ಪುಣ್ಯಾತ್ಮನೇ!

**ಮದನ**—ದೇವಾ! ಅಂತಹ ಪವಿತ್ರವಾದ ಕುಲದಲ್ಲಿ ಹುಟ್ಟಿ ವಿಮಲೆಯಾಗಿರುವ **ವಿಮಲೆಯು** ಯಾವಾಗ ನನ್ನನ್ನು ವರಿಸಿದಳೋ ಆಗಲೇ ನಾನು ಪುಣ್ಯಾತ್ಮನಾದೆನು.

**ರಾಜಮಾತೆ**—ಸಾರ್ವಭೌಮಾ! ನಾನು ಧನ್ಯಳಾದೆನು. ಅಂಧಕಾರವು ನಾಶವಾಗಿ ಜ್ಞಾನೋದಯಕ್ಕೆ ಮಾರ್ಗವುಂಟಾಯಿತು. ತನು, ಮನ, ಧನಗಳ

ನ್ನು ಗುರುವಿಗೆ ಅರ್ಪಿಸುವಂತೆ ವಿಕ್ರಮಸಿಂಹನನ್ನು ನಾನು ಶರಣುಹೊಂದಿದೆನು. ಆತನು ಹೇಗೆ ನಡೆಯಿಸಿದರೂ ನನಗೆ ಸಮ್ಮತವೇ. ಆದರೆ ನಮ್ಮ ರಾಜ್ಯಕ್ಕೆ ಬಂದ ಪೀಡಾಪರಿಹಾರಕ್ಕಾಗಿಯೂ, ಗತಿಸಿದ ಮಹಾರಾಜರಿಗೆ ಉತ್ತರಕ್ರಿಯೆಗಳನ್ನು ನಿಜಪುತ್ರನು ಮಾಡುವುದು ಶ್ರೇಯಸ್ಕರವಾದುದರಿಂದ ಅದಕ್ಕಾಗಿಯೂ ಶಾಸ್ತ್ರೋಕ್ತವಿಧಿಗಳನ್ನು ಮೊದಲುಮಾಡಿ ಅನಂತರ ವಿವಾಹಾದಿ ಶುಭಕಾರ್ಯ ಗಳನ್ನು ಮಾಡುವುದು ಲೇಸೆಂದು ನನಗೆ ತೋರುತ್ತಿದೆ.

**ವಿಕ್ರಮಸಿಂಹ**—ನನ್ನ ತಾಯಿ ಹೇಳಿದ ಆಲೋಚನೆಯು ಸರಿಯಾಗಿರು ವುದು. ಕಾಶೀ ಗಯಾದಿ ಕ್ಷೇತ್ರಗಳಿಗೆ ಹೋಗಿ ಎಲ್ಲವನ್ನೂ ಸಾಂಗವಾಗಿ ಮಾಡಿಕೊಂಡು ಬರುವೆನು—ಎಂದನು.

ಸಾರ್ವಭೌಮನು ಬಂಧುವರ್ಗದಿಂದಲೂ, ಪ್ರಜೆಗಳಿಂದಲೂ, ಅಧಿಕಾರಿ ಗಳಿಂದಲೂ ಮಾನಿತನಾಗಿ ಡಿಲ್ಲೀ ನಗರಕ್ಕೆ ಪ್ರಯಾಣಮಾಡಿದನು. ವಿಕ್ರಮ ಸಿಂಹನು ತನ್ನ ಸಂಸ್ಥಾನದ ಸೈನ್ಯವನ್ನು ಪರೀಕ್ಷಿಸಿ ಯೋಧರನ್ನು ಬಹುಮಾ ನಗಳಿಂದ ಸತ್ಕರಿಸಿದನು. ಒಂದು ತಿಂಗಳ ವರೆಗೂ ಅನ್ನ ವಸ್ತ್ರ ಮೊದಲಾದ ದಾನಗಳನ್ನು ರಾಜಧಾನಿಯಲ್ಲಿ ನಡೆಯಿಸಿದನು. ಅರಮನೆಯ ಆಡಳಿತಗಳ ನ್ನೆಲ್ಲಾ ಸರಿಯಾಗಿ ವ್ಯವಸ್ಥೆ ಮಾಡಿದನು. ರಾಜ್ಯವಿಷಯಗಳನ್ನೂ ಸ್ತಿಮಿತಕ್ಕೆ ತಂದನು. ಮದನನಿಗೆ ಸೇವಕರ ಮೇಲಣ ಅಧಿಕಾರವನ್ನು ವಹಿಸಿದನು. ತನಗೆ ಸಹಾಯಮಾಡಿದ ಸೇವಕರಿಗೆ ಯಾವಜ್ಜೀವವೂ ಸುಖವಾಗಿರುವಂತೆ ಚಂಪಕ ಮಾಲಿನಿಯು ಏರ್ಪಡಿಸಿದಳು. ಕಾಶೀಪ್ರಯಾಣದ ಶುಭಲೇಖನಗಳನ್ನು ಗ್ವಾಲಿ ಯರ್ ರಾಣಿಯವರಿಗೆ ಕಳುಹಿಸುವಂತೆ ಆಜ್ಞಾಪಿಸಿದನು. ತಾವು ತಿರುಗಿ ಬರು ವುದರೊಳಗಾಗಿ ವಿವಾಹ ಸಂಭಾರಗಳು ಸಿದ್ಧವಾಗಿರಬೇಕೆಂದು ನಿಯಮಿಸಿ ಬಂಧುಮಿತ್ರರೊಡನೆಯೇ ಕಾಶೀಯಾತ್ರೆಗೆ ಹೊರಟನು. ಕ್ಷೇತ್ರಗಳಲ್ಲಿ ತಾಯಿ ಯಿಂದ ಭೂರಿದಾನಗಳನ್ನು ಮಾಡಿಸಿದನು. ತೀರ್ಥಕ್ಷೇತ್ರಗಳ ಯಾತ್ರೆಯು ಮುಗಿದ ಅನಂತರ ತನ್ನ ಆಪ್ತಮಿತ್ರನಾದ ಈಶ್ವರದಾಸನೊಂದಿಗೆ ಉದಯಪುರಿಗೆ ಬಂದು ಶುಭಲಗ್ನದಲ್ಲಿ ಪುರವನ್ನು ಪ್ರವೇಶಿಸಿದನು.

ನಿಶ್ಚಿತವಾದ ಮುಹೂರ್ತದಲ್ಲಿ ಅತಿ ವೈಭವದಿಂದ ಎರಡು ವಿವಾಹಗಳೂ ನಡೆದುವು. ಆ ಸಮಯದಲ್ಲಿ ಬಹು ದಿನಗಳಿಂದ ಅಂಕುರಿಸಿದ್ದ ಪ್ರೇಮವು ಮತ್ತಷ್ಟು ವೃದ್ಧಿಯಾಯಿತು. ಮದನಪಾಲನು ವಿಮಲೆಯನ್ನು ತನ್ನ ಪ್ರಾಣ ಕ್ಕಿಂತಲೂ ಅಧಿಕವಾಗಿ ಪ್ರೇಮಿಸತೊಡಗಿದನು. ವಿಕ್ರಮಸಿಂಹ, ಹೇಮಪ್ರಭಾ ದೇವಿಯವರನ್ನು ಅವನು ತಂದೆತಾಯಿಗಳಂತೆ ಭಾವಿಸಿ ಪೂಜಿಸುತ್ತಿದ್ದನು. ಚಂಪಕಮಾಲಿನೀ ಲಲಿತಕುಮಾರರ ದಾಂಪತ್ಯವು ಪ್ರೇಮ ವಿಶ್ವಾಸಗಳಿಗೂ,

ಏಕಮನಸ್ಕತೆಗೂ ಲೋಕಕ್ಕೆಲ್ಲ ದೃಷ್ಟಾಂತವಾಗಿದ್ದಿತು. ಅವರ ದೇಹಗಳು ಮಾತ್ರ ಬೇರೆ ಆಗಿದ್ದವೇ ವಿನಾ ಪ್ರಜ್ಞೆಯಲ್ಲಿ ಒಂದೇ ಆಗಿದ್ದುವು. ಮುರಳಾದೇವಿಯು ತನ್ನ ಕೊಟ್ಟಡಿಯಲ್ಲಿ ಪ್ರತಾಪಸಿಂಹ ಮಹಾರಾಜನ ಮತ್ತು ರತ್ನಾದೇವಿಯ ಚಿತ್ರಪಟಗಳನ್ನು ಹಾಕಿಕೊಂಡು ಅಲಂಕಾರಮಾಡಿ ಪ್ರತಿದಿನವೂ ಸ್ನಾನವಾದ ಕೂಡಲೇ ಅವುಗಳನ್ನು ಪುಷ್ಪಗಳಿಂದ ಪೂಜಿಸಿ ನಮಸ್ಕರಿಸುತ್ತಿದ್ದಳು. ಸ್ವಾರ್ಥರಹಿತವಾದ ಪ್ರೀತಿಯಿಂದ ಚಂಪಕಮಾಲಿನಿಯನ್ನೂ, ತನ್ನ ಚಿಕ್ಕ ಸೊಸೆಯಾದ ವಿಮಲಾದೇವಿಯನ್ನೂ ಪ್ರೇಮಿಸುತ್ತ ಅವರು ಮಾಡುವ ಸೇವಾಸತ್ಕಾರಗಳಿಂದ ಸಂತೋಷಪಡುತ್ತಿದ್ದಳು. ಇಬ್ಬರು ಪುತ್ರರೂ, ಹೇಮಪ್ರಭಾದೇವಿಯ ಮಂತ್ರಾಲೋಚನೆಯಿಂದ ರಾಜ್ಯವನ್ನಾಳುತ್ತಾ, ಅಧ್ಯಾತ್ಮ ವಿಚಾರಮಾಡುತ್ತಾ ಪ್ರಜೆಗಳಿಗೆ ಹಿತವನ್ನಾಚರಿಸುತ್ತಿದ್ದರು. ಸವತಿಯ ಮಗನೆಂಬ ಭೇದಬುದ್ಧಿಯನ್ನುಂಟುಮಾಡಿದ್ದ ಪಿಶಾಚವು ಮುರಳಾದೇವಿಯನ್ನು ಪೂರ್ತಿಯಾಗಿ ಬಿಟ್ಟು ಹೋಯಿತು. ಸರ್ವವೂ ಮಂಗಳಕರವಾಗಿ ನಡೆಯುತ್ತಿದ್ದಿತು.

**॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**

# ಶುದ್ಧಾಶುದ್ಧಪತ್ರಿಕೆ

| ಪುಟ | ಪಙ್ಕ್ತಿ | ತಪ್ಪು | ಸರಿ |
|---|---|---|---|
| ೩ | ೧೯ | ಚಮಕಿತರಾಗಿ | ಚಕಿತರಾಗಿ |
| ೪ | ೮ | ಮಿತ್ರರಿಬ್ಬರನ್ನು | ಮಿತ್ರರಿಬ್ಬರನ್ನೂ |
| ,, | ೧೯ | ಅಪರಿಚಯು | ಅಪರಿಚಿತ |
| ,, | ೨೪ | ಸಾಮಾನು | ಸಾಮಾನೂ |
| ೫ | ೨ | ಪ್ರಾಪ್ತಿಯಾಗ | ಪ್ರಾಪ್ತವಾಗ |
| ೧೩ | ೧೫ | ವನ್ನು | ವನ್ನೂ |
| ೧೪ | ೪ | ಅವರಿಬ್ಬರು | ಅವರಿಬ್ಬರೂ |
| ೨೧ | ೪ | ದೇಹಬಾಧೆ | ದೇಹಯಾತನೆ |
| ೨೧ | ೧೨ | ಅವನಮು ನಸ್ಸಿನಲ್ಲಿ | ಅವನ ಮನಸ್ಸಿನಲ್ಲಿ |
| ೨೫ | ೧೪ | ವ್ಯಾಜ್ಯ | ವ್ಯಾಜ |
| ೨೯ | ೧೮ | ಸುದ್ದಿಯು | ಸುದ್ದಿಯೂ |
| ೪೬ | ೨೮ | ಮಗಳ | ಮಗನ |
| ೪೭ | ೧೬ | ನಿಷ್ಠುರ | ನಿಷ್ಠೂರ |
| ೪೯ | ೨೦ | ಶಿರಶ್ಛೇದನೆಗಾಗಿ | ಶಿರಚ್ಛೇದನೆಗಾಗಿ |
| ೫೮ | ೭ | ಕಿಂಚಿಜ್ಞ | ಕಿಂಚಿತ್‌ಜ್ಞ |
| ೫೯ | ೧೫ | ಹಾಗೆಯೇ ! | ಹಾಗೆಯೇ ? |
| ೬೩ | ೨೧ | ಸೌಕರ್ಯ | ಹೇಮಪ್ರಭಾದೇವಿ |
| ,, | ೨೩ | ಬೇಕಾದ | ಬಂದ [ಸೌಕರ್ಯ |
| ,, | ೨೭ | ಧೈರ್ಯಶಾಲಿಯೇ | ಧೈರ್ಯಶಾಲಿನಿಯೇ |
| ,, | ೨೯ | ಮತ್ಸರವನ್ನು | ಮಾತ್ಸರ್ಯವನ್ನು |
| ೬೬ | ೬ | ತನ್ನ | ನನ್ನ |
| ೭೭ | ೨೭-೨೮ | ಕಟ್ಟಿಟ್ಟಿದ್ದ | ಕಟ್ಟಿದ್ದ |
| ೭೯ | ೧೭-೧೮ | ನನ್ನಲ್ಲಿಯೇ | ನನ್ನ ಸಮೀಪದಲ್ಲಿಯೇ |
| ೮೦ | ೧೩ | ಸುಲೋಚನೆಯರು | ವಿಲೋಚನೆಯರು |
| ೮೬ | ೪ | ರಕ್ಷತು | ರಕ್ಷಯೇತ್ |
| ೮೯ | ೧೧ | ತಿಳಿಯದು | ತಿಳಿಯದಲ್ಲಾ ! |
| ೯೦ | ೧೯ | ಕೊಂಡರೆ | ಕೊಂಡಿರೇ |
| ೯೧ | ೩ | ಹೋಗುವುದೂ | ಹುಗುವುದೂ |

| | | | |
|---|---|---|---|
| ೧೦೧ | ೩೦ | ಚತುರೋಪಾಯ | ಚತುರುಪಾಯ |
| ೧೦೩ | ೨೧ | ನೆಪ ಮಾತ್ರ | ನೆಪಮಾತ್ರಕ್ಕೆ |
| ೧೦೫ | ೧೭ | ಅನುಭವಿಸದ | ಅನುಭವಿಸಿದ |
| ೧೧೨ | ೯ | ಒಟ್ಟಿ | ಕಟ್ಟು |
| ೧೧೮ | ೨೩ | ಇಸ್ನು | ಇನ್ನೂ |
| ೧೨೦ | ೧೩ | ಶನೀಶ್ವರನೇ | ಶನೈಶ್ಚರನೇ |
| ,, | ೨೫ | ನನ್ನಂತಹವರಿಗೆ | ನಿನ್ನಂತಹವರಿಗೆ |
| ೧೨೨ | ೨೮ | ಸ್ಥತಿ | ಸ್ಥಿತಿ |
| ೧೩೯ | ೨೮ | ನಿನ್ನ ಕಾರ್ಯವನ್ನು | ನಿನ್ನ ಆ ಕಾರ್ಯವನ್ನು |
| ೧೪೬ | ೧೫ | ಚಗುರಿಯ | ಚಿಗುರೆಯ |
| ,, | ೨೬ | ಪ್ರವಾದ ಸಂಘವವೇನೂ | ಪ್ರವಾದವೇನೂ |
| ೧೪೭ | ೧೧ | ಕಳ್ಳರಂತೆ | ಕಳ್ಳನಂತೆ |
| ೧೪೯ | ೬ | ಇದ್ದಾರೆಯೋ? | ಇದ್ದಾರೆ. |
| ,, | ೭ | ಅವಳನ್ನು | ಅವರನ್ನು |
| ೧೫೦ | ೯ | ಮುರಳಾ | ಹೇಮಪ್ರಭಾ |
| ,, | ೧೪ | ಮುರಳಾ | ಹೇಮಪ್ರಭಾ |
| ೧೫೨ | ೬ | ಹೇಳಿ | ಹೇಳಿದರೂ, |
| ೧೬೫ | ೨೭ | ಆಜ್ಞೆಯಂತೆ | ಇಷ್ಟದಂತೆ |
| ೧೬೬ | ೨೮ | ನಿನ್ನ | ನನ್ನ |
| ೧೭೦ | ೧೬ | ಚೀನ ಚೀನಾಂಬರ | ಚೀನಾಂಬರ |
| ೧೭೩ | ೨೫–೨೬ | ದ್ವಾದಶ | ದಶ |
| ,, | ೨೬ | ದ್ವಾದಶಾಂಶ | ದಶಾಂಶ |
| ೧೭೫ | ೮ | ವೇತ್ತರೂ | ವತಿಯರೂ |
| ೧೮೩ | ೨೮ | ಮುಲಕು | ನರಳು |
| ೧೮೫ | ೨೭ | ಪೃಕೃತಿ | ಪ್ರಕೃತಿ |
| ೨೦೦ | ೨೩ | ಗುರುತಿಸಿದಿಯಾ? | ಗುರುತಿಸಿದೆಯಾ? |
| ೨೦೨ | ೨೦ | ನನಗೆ | ನನಗೇ |